ಇಪ್ಪತ್ತನೆಯ ಶತಮಾನದ

# ಕನ್ನಡ ಸಾಹಿತ್ಯ ಘಟ್ಟಗಳು



ಸಂಪಾದಕರು

ಡಾ. ಬಸವರಾಜ ಸಾದರ

ಕರ್ನಾಟಕ ವಿದ್ಯಾವರ್ಧಕ ಸಂಘ, ಧಾರವಾಡ

ಇಪ್ಪತ್ತನೆಯ ಶತಮಾನದ

# ಕನ್ನಡ ಸಾಹಿತ್ಯ ಘಟ್ಟಗಳು

ಸಂಪಾದಕರು

ಡಾ. ಬಸವರಾಜ ಸಾದರ

ಕರ್ನಾಟಕ ವಿದ್ಯಾವರ್ಧಕ ಸಂಘ, ಧಾರವಾಡ

**IPPATTANEYA SHATAMANADA KANNADA SAHITYA GHATTAGALU** (Kannada Literary Stages of 20th Century) A collection of seven articles, broadcast in a live literary symposium from All India Radio, Gulbarga, During Aug.-Sept. 2000, Edited by Dr. Basavaraj Sadar, Asst. Station Director, All India Radio, Gulbarga-585 103, Published by Prof. B. V. Gunjetti, Secretary, Karnataka Vidyavardhaka Sangha, Dharwad-580 001

Pages : XIV + 302

Copies : 1000

First Impression : February, 2002

Price :
Hard Bound : Rs. 200
Ordinary Bound : Rs. 150

© All India Radio, Gulbarga and Karnataka Vidyavardhaka Sangha, Dharwad

ಪುಟಗಳು : XIV + ೩೦೨

ಪ್ರತಿಗಳು : ೧೦೦೦

ಬೆಲೆ :
ಉತ್ತಮ ಪ್ರತಿ : ರೂ. ೨೦೦
ಸಾದಾ ಪ್ರತಿ : ರೂ. ೧೫೦

ಪ್ರಥಮ ಮುದ್ರಣ : ಫೆಬ್ರುವರಿ, ೨೦೦೨

ಮುಖಪುಟ ರಚನೆ : ರವೀಂದ್ರ ವಿಶ್ವಜ್ಞ

ಈ ಲೇಖನಗಳಲ್ಲಿ ವ್ಯಕ್ತವಾಗಿರುವ ಅಭಿಪ್ರಾಯಗಳಿಗೆ
ಆಯಾ ಲೇಖಕರೇ ಹೊಣೆಗಾರರು.

ಮುದ್ರಕರು :
ಸೋಮಶೇಖರ ಆಕಳವಾಡಿ
ಮನೋಹರ ಪ್ರಿಂಟಿಂಗ್ ಪ್ರೆಸ್, ಮಾರ್ಕೆಟ್, ಧಾರವಾಡ - ೧
ದೂರವಾಣಿ – ೭೯೦೦೩೦

# ಪ್ರಕಾಶಕರ ಮಾತು

ಶತಮಾನಕ್ಕೂ ಹೆಚ್ಚಿನ ಕಾಲದಿಂದ ನಾಡಿನ ಸರ್ವತೋಮುಖ ಉನ್ನತಿಗಾಗಿ ಶ್ರಮಿಸುತ್ತ ಬಂದಿರುವ ಧಾರವಾಡದ ಕರ್ನಾಟಕ ವಿದ್ಯಾವರ್ಧಕ ಸಂಘವು ಕನ್ನಡ-ಕನ್ನಡಿಗ-ಕರ್ನಾಟಕ ಎಂಬ ಕ್ರಿಯಾಮಂತ್ರವನ್ನು ಉಸಿರಾಗಿಸಿಕೊಂಡಿರುವ ಮಹಾನ್ ಸಂಸ್ಥೆ. ಸಾಹಿತಿಕ್ಯ ಮತ್ತು ಸಾಂಸ್ಕೃತಿಕ ಚಟುವಟಿಕೆಗಳನ್ನು ನಿರಂತರ ಆಯೋಜಿಸುವ ಮೂಲಕ ಈ ಸಂಸ್ಥೆ ಕವಿ-ಸಾಹಿತಿ-ಕಲಾವಿದರನ್ನು ಬೆಳೆಸಿದೆ-ಬೆಳೆಸುತ್ತಿದೆ. ಒಡಲ ನೂಲಿನಲ್ಲಿ ನಿರ್ಮಿಸಿಕೊಂಡಿರುವ ವಿವಿಧ ಮಂಟಪಗಳ ಮೂಲಕ ಸಂಘವು ತನ್ನ ಕಾರ್ಯಚಟುವಟಿಕೆಗಳ ಎಲ್ಲೆಯನ್ನು ಹಿಗ್ಗಲಿಸಿಕೊಂಡಿದೆ. ಹೊರರಾಜ್ಯಗಳಲ್ಲೂ ಸಾಹಿತ್ಯಿಕ - ಸಾಂಸ್ಕೃತಿಕ ಸಮ್ಮೇಳನಗಳನ್ನು ಏರ್ಪಡಿಸುವ ಮೂಲಕ ತನ್ನ ವ್ಯಾಪ್ತಿಯನ್ನು ವಿಸ್ತಾರಗೊಳಿಸಿಕೊಳ್ಳುತ್ತಿರುವ ಕ್ರಿಯಾಶೀಲ ಸಂಘವು ಪ್ರಕಟಣಾ ಕ್ಷೇತ್ರದಲ್ಲೂ ಮಹತ್ಸಾಧನೆ ಮಾಡುತ್ತಿದೆ.

ತನ್ನ ನೂರಾ ಹನ್ನೊಂದು ವರ್ಷಗಳ ಇತಿಹಾಸದಲ್ಲಿ ಕರ್ನಾಟಕ ವಿದ್ಯಾವರ್ಧಕ ಸಂಘವು ಎಪ್ಪತ್ತೆಂಟು ಮೌಲಿಕ ಗ್ರಂಥಗಳನ್ನು ಪ್ರಕಟಿಸಿದೆ. ಇತಿಹಾಸ. ಪರಂಪರೆ. ಶಾಸ್ತ್ರ. ಮಾನವಶಾಸ್ತ್ರ. ಧರ್ಮಗಳು, ವ್ಯಾಕರಣ. ಕರ್ನಾಟಕದ ಜನಜೀವನ, ಜಾನಪದ. ಕೃಷಿ. ಶಿಕ್ಷಣ. ವಿಜ್ಞಾನ, ವಿಮರ್ಶೆ. ಪ್ರಬಂಧ. ಅನುವಾದ - ಮೊದಲಾದ ವಿಷಯಗಳನ್ನೊಳಗೊಂಡಿರುವ ಈ ಗ್ರಂಥಗಳನ್ನು ನಾಡಿನ ಹೆಸರಾಂತ ಸಾಹಿತಿಗಳು ಮತ್ತು ವಿದ್ವಾಂಸರು ರಚಿಸಿದ್ದು ಗಮನಾರ್ಹ. ' ವಿದ್ಯಾವರ್ಧಕ ' ಎಂಬ ಪತ್ರಿಕೆಯನ್ನು ಪ್ರಕಟಿಸುವ ಮೂಲಕವೂ ಸಂಘವು ನಾಡಿನ ಗಮನ ಸೆಳೆದಿದೆ. ಪರಂಪರೆಯ ಹಾಗೆಯೇ ವರ್ತಮಾನದ ವಿದ್ಯಮಾನಗಳಿಗೆ ಸ್ಪಂದಿಸುತ್ತಲೂ ಸಂಘವು ಹೊಸ ಪ್ರಕಟಣೆಗಳನ್ನು ತಂದಿದೆ. ಇದೀಗ ಪ್ರಕಟವಾಗಿರುವ ' ಇಪ್ಪತ್ತನೆಯ ಶತಮಾನದ ಕನ್ನಡ ಸಾಹಿತ್ಯ ಘಟ್ಟಗಳು ' ಈ ಸಾಲಿನಲ್ಲಿ ಒಂದು ಹೆಮ್ಮೆಯ ಮತ್ತು ಮೌಲಿಕ ಕೃತಿ.

' ಇಪ್ಪತ್ತನೆಯ ಶತಮಾನದ ಕನ್ನಡ ಸಾಹಿತ್ಯ ಘಟ್ಟಗಳು ' ಕೃತಿಯು ಆಕಾಶವಾಣಿ ಗುಲ್ಬರ್ಗ ಕೇಂದ್ರವು ಇದೇ ಹೆಸರಿನಡಿಯಲ್ಲಿ ಏಳು ದಿನ ಪರ್ಯಂತ ನೇರಪ್ರಸಾರ ಮಾಡಿದ ದಾಖಲೆಯ ವಿಚಾರ ಸಂಕಿರಣದ ಗ್ರಂಥರೂಪವಾಗಿದೆ. ಗುಲ್ಬರ್ಗ ಆಕಾಶವಾಣಿಯ ನಿರ್ದೇಶಕರಾದ ಶ್ರೀ ಎಸ್. ಎಸ್. ಹಿರೇಮಠ ಅವರ ಪ್ರೇರಣೆ - ಪ್ರೋತ್ಸಾಹ ಹಾಗೂ ಮಾರ್ಗದರ್ಶನ ಪಡೆದು ಇಂಥ ವಿಚಾರ ಸಂಕಿರಣವೊಂದನ್ನು

ಆಯೋಜಿಸಿ, ಪ್ರಸಾರ ಮಾಡಿದ ನನ್ನ ಯುವ ಮಿತ್ರರಾದ ಡಾ. ಬಸವರಾಜ ಸಾದರ ಅವರು ಅದನ್ನು ಇಡಿಯಾಗಿ ಗ್ರಂಥರೂಪದಲ್ಲಿ ಪ್ರಕಟಿಸುವ ಕೋರಿಕೆಯನ್ನು ಕರ್ನಾಟಕ ವಿದ್ಯಾವರ್ಧಕ ಸಂಘದ ಮುಂದಿರಿಸಿದರು. ಸಾಹಿತ್ಯಾಸಕ್ತರಿಗೂ, ಸಾಹಿತ್ಯದ ವಿದ್ಯಾರ್ಥಿಗಳಿಗೂ ಒಂದು ಮಹತ್ವದ ಸಂದರ್ಭಗ್ರಂಥವಾಗುವ ಇಂಥ ಕೃತಿಯ ಪ್ರಕಟಣೆಗೆ ಸಂಘದ ಕಾರ್ಯಕಾರೀ ಸಮಿತಿಯ ಸರ್ವಸದಸ್ಯರು ಸಂತೋಷದಿಂದ ಒಪ್ಪಿಗೆ ನೀಡಿದರು. ಇದೆಲ್ಲದರ ಫಲಶ್ರುತಿ ಈ ಗ್ರಂಥ. ನಾಡಿನ ಇನ್ನೂ ಒಂದೆರಡು ಹೆಸರಾಂತ ಸಂಸ್ಥೆಗಳು ಈ ಗ್ರಂಥ ಪ್ರಕಟಣೆಗೆ ಮುಂದೆ ಬಂದಿದ್ದರೂ, ಶ್ರೀ ಎಸ್. ಎಸ್. ಹಿರೇಮಠ ಅವರು ಇದನ್ನು ಪ್ರಕಟಿಸುವ ಸುಯೋಗವನ್ನು ನಮಗೆ ಒದಗಿಸಿಕೊಟ್ಟಿದ್ದಾರೆ. ಕೃತಿ ಪ್ರಕಟಣೆಗೆ ಅನುಮತಿ ಇತ್ತುದಲ್ಲದೆ, ಅದು ಹೊರಬರುವಲ್ಲಿ ಅವರು ಎಲ್ಲ ರೀತಿಯ ಸಹಾಯ - ಸಹಕಾರ ಒದಗಿಸಿದ್ದಾರೆ. ಈ ಪ್ರೀತಿ - ವಿಶ್ವಾಸ ಮತ್ತು ಉದಾರ ಗುಣಗಳಿಗಾಗಿ ಶ್ರೀ ಎಸ್. ಎಸ್. ಹಿರೇಮಠ ಅವರನ್ನು ಸಂಘವು ಕೃತಜ್ಞತೆಯಿಂದ ನೆನೆಯುತ್ತದೆ. ಹಾಗೆಯೇ ತಮ್ಮ ಪ್ರಬಂಧಗಳನ್ನು ಪ್ರಕಟಿಸುವುದಕ್ಕೆ ಒಪ್ಪಿಗೆ ಸೂಚಿಸಿದ ಎಲ್ಲ ಲೇಖಕರಿಗೂ ಅದು ಧನ್ಯವಾದಗಳನ್ನು ಸೂಚಿಸುತ್ತದೆ.

ಯುವ ಮಿತ್ರರಾದ ಡಾ. ಬಸವರಾಜ ಸಾದರ ಅವರು ಈ ಒಟ್ಟಾರೆ ಯೋಜನೆಯ ರೂವಾರಿಗಳು. ಗ್ರಂಥದ ಸಂಪಾದಕರಾಗಿಯೂ ಅವರು ಮನಮುಟ್ಟಿ ಕೆಲಸ ಮಾಡಿದ್ದಾರೆ. ಕಾರ್ಯಕ್ರಮದ ಪ್ರಸಾರದ ಹಾಗೆಯೇ ಪುಸ್ತಕ ಪ್ರಕಟಣೆಯ ಎಲ್ಲ ಹಂತದ ಕೆಲಸಗಳನ್ನೂ ಅವರು ಸ್ವತಃ ನಿಂತು, ವಿಶೇಷ ಕಾಳಜಿಯಿಂದ ನಿರ್ವಹಿಸಿದ್ದಾರೆ. ಅವರ ಶ್ರಮ ಹಾಗೂ ಕರ್ನಾಟಕ ವಿದ್ಯಾವರ್ಧಕ ಸಂಘದ ಮೇಲೆ ಅವರಿಗಿರುವ ಅಭಿಮಾನಕ್ಕೆ ಧನ್ಯವಾದಗಳು.

ಕರ್ನಾಟಕ ವಿದ್ಯಾವರ್ಧಕ ಸಂಘದ ಸರ್ವತೋಮುಖ ಅಭಿವೃದ್ಧಿಗೆ ಕಾರಣರಾಗಿರುವ ನಾಡೋಜ ಡಾ. ಪಾಟೀಲ ಪುಟ್ಟಪ್ಪ ಅವರು ಕಳೆದ ೩೪ ವರ್ಷಗಳಿಂದಲೂ ಸಂಘದ ಅಧ್ಯಕ್ಷರಾಗಿ ನಮ್ಮೆಲ್ಲಾ ಕೆಲಸ ಕಾರ್ಯಗಳಿಗೆ ಶ್ರೀರಕ್ಷೆಯಾಗಿ ನಿಂತಿದ್ದಾರೆ. ಅವರು ಈ ಗ್ರಂಥದ ಪ್ರಕಟಣೆಯಲ್ಲೂ ತೋರಿದ ಉತ್ಸಾಹ ಹಾಗೂ ನೀಡಿದ ಪ್ರೇರಣೆ ಅನನ್ಯ. ಅವರಿಗೆ ಅನಂತ ಕೃತಜ್ಞತೆಗಳು. ಇಂಥ ಮೌಲಿಕ ಗ್ರಂಥ ಪ್ರಕಟಣೆಗೆ ಸಂಘದ ಕಾರ್ಯಕಾರಿ ಸಮಿತಿಯ ಸದಸ್ಯರೆಲ್ಲ ಏಕಕಂಠದ ಒಪ್ಪಿಗೆ ನೀಡಿದ್ದಾರೆ. ಅವರಿಗೂ ಧನ್ಯವಾದಗಳು. ಗ್ರಂಥ ಪ್ರಕಾಶನದ ವಿವಿಧ ಹಂತಗಳಲ್ಲಿ ಶ್ರದ್ಧೆಯಿಂದ ದುಡಿದ ಸಂಘದ ಎಲ್ಲ ಸಿಬ್ಬಂದಿವರ್ಗದವರ ನೆರವನ್ನು ವಂದನೆಗಳೊಂದಿಗೆ ಸ್ಮರಿಸುವೆ.

ಗ್ರಂಥವನ್ನು ಅತ್ಯಂತ ಆಕರ್ಷಕವಾಗಿ ಮುದ್ರಿಸಿದ ಶ್ರೀ ರವಿ-ಚಂದ್ರು ಆಕಳವಾಡಿ ಅವರಿಗೂ, ಸುಂದರವಾದ ಮುಖಪುಟ ಸಿದ್ಧಪಡಿಸಿಕೊಟ್ಟ ಶ್ರೀ ರವೀಂದ್ರ ವಿಶ್ವಜ್ಞ ಅವರಿಗೂ ವಂದನೆಗಳು.

ಧಾರವಾಡ
೧೧-೨-೨೦೦೨

**ಬಿ. ವ್ಹಿ. ಗುಂಜೆಟ್ಟಿ**
ಪ್ರಧಾನ ಕಾರ್ಯದರ್ಶಿಗಳು
ಕರ್ನಾಟಕ ವಿದ್ಯಾವರ್ಧಕ ಸಂಘ

# ಆಕಾಶವಾಣಿ ನಿರ್ದೇಶಕರ ನುಡಿ

ಪ್ರಾಚೀನ ಭಾರತದ ಸಾಮಾಜಿಕ ವ್ಯವಸ್ಥೆಯಲ್ಲಿ ವಿದ್ಯಾಭ್ಯಾಸದ ಸೌಲಭ್ಯ ಕೇವಲ ಕೆಲವೇ ಮಂದಿಗೆ ಸೀಮಿತವಾಗಿತ್ತು. ಆದರೂ ಸಾಹಿತ್ಯಾಸಕ್ತಿ ಜನಮನದಲ್ಲಿ ಪ್ರವಹಿಸುತ್ತಿತ್ತು. ಅದು ಸಾಧ್ಯವಾದದ್ದು ನಮ್ಮಲ್ಲಿ ಪ್ರಚಲಿತವಿದ್ದ ಶ್ರವ್ಯ ಪರಂಪರೆಯಿಂದ. ಆದ್ದರಿಂದಲೆ " ಕುರಿತೋದದೆಯುಂ ಕಾವ್ಯ ಪ್ರಯೋಗ ಪರಿಣತ ಮತಿಗಳ್ " ಎಂದು ಕವಿರಾಜಮಾರ್ಗಕಾರ ಕನ್ನಡ ಜನತೆಯನ್ನು ಹಾಡಿ ಹೊಗಳಿದ್ದು. ಶ್ರವ್ಯ ಪರಂಪರೆಯ ಬೇರಿನಿಂದ ಅರಳಿದ ಆಧುನಿಕ ಸಮೂಹ ಮಾಧ್ಯಮ ಬಾನುಲಿ. ಈ ಕಾರಣಕ್ಕಾಗಿಯೇ ಭಾರತೀಯರಿಗೆ ಬಾನುಲಿ ಅನ್ಯವೆಂದು ಅನ್ನಿಸಲೇ ಇಲ್ಲ.

ಸಾಹಿತ್ಯಕ್ಕೂ ಬಾನುಲಿಗೂ ಇರುವ ಸಂಬಂಧವನ್ನು ಹೀಗೆ ಪುರಾತನ ಕಾಲದಿಂದ ಗುರುತಿಸಬಹುದು. ಪ್ರಸಕ್ತ ಬಹುಮಾಧ್ಯಮದ ಯುಗದಲ್ಲೂ ಇವೆರಡು ಪರಸ್ಪರ ಪೂರಕವಾಗಿ ತೊಡಗಿಸಿಕೊಳ್ಳುವ ಸಾಧ್ಯತೆ ಇದೆ. ಕಾರಣ : ಒಂದು ದೃಶ್ಯ. ಮತ್ತೊಂದು ಶ್ರವ್ಯ. ಜತೆಗೆ ಇಂದು ಸ್ಪರ್ಧೆಯಲ್ಲಿರುವ ಬಹುತೇಕ ಮಾಧ್ಯಮಗಳು ಸಾಹಿತ್ಯವನ್ನು ಸಾಮಾನ್ಯವಾಗಿ ಕಡೆಗಣಿಸಿದ್ದರಿಂದ. ಆ ಶ್ರೋತೃಗಣದ ಅಗತ್ಯಗಳಿಗೆ ಸ್ಪಂದಿಸುವ ಹೊಣೆಗಾರಿಕೆಯಿಂದ ಆಕಾಶವಾಣಿ ಯಾವಾಗಲೂ ಸಾಹಿತ್ಯಾಸಕ್ತರಿಗಾಗಿ ವಿಶೇಷ ಕಾರ್ಯಕ್ರಮಗಳನ್ನು ರೂಪಿಸಿಕೊಂಡು ಬಂದಿದೆ. ಅಂಥವುಗಳಲ್ಲಿ ಗುಲ್ಬರ್ಗ ಆಕಾಶವಾಣಿ ಕೇಂದ್ರವು ನೇರ ಪ್ರಸಾರ ಮಾಡಿದ ' ಇಪ್ಪತ್ತನೆಯ ಶತಮಾನದ ಕನ್ನಡ ಸಾಹಿತ್ಯ ಘಟ್ಟಗಳು ' ಸರಣಿ ಒಂದು.

ಚಲನಶೀಲವಾದ ಸಾಹಿತ್ಯವನ್ನು ಕಾಲದ ತೆಕ್ಕೆಯಲ್ಲಿ ಬಂಧಿಸಲು ಸಾಧ್ಯವಿಲ್ಲ; ಅದು ಸಾಧುವು ಅಲ್ಲ. ಸಾಹಿತ್ಯ, ಕಾಲಧರ್ಮದ ಸ್ಪಂದನವನ್ನು ಒಳಗೊಂಡಿದ್ದರೂ ಅದರ ಅಡಿಯಾಳಲ್ಲ. ಸಾಹಿತ್ಯದ ಬೆಳವಣಿಗೆಯನ್ನು ಕಾಲದ ಗೆರೆಯಿಂದ ಕತ್ತರಿಸುವುದು ಸರಿಯಲ್ಲ. ಆದರೂ ಒಂದೂವರೆ ಸಾವಿರ ವರ್ಷಗಳ ದೀರ್ಘ, ಶ್ರೀಮಂತ ಪರಂಪರೆಯುಳ್ಳ ಕನ್ನಡ ಸಾಹಿತ್ಯದ ಇತಿಹಾಸದಲ್ಲಿ ಇಪ್ಪತ್ತನೆಯ ಶತಮಾನ ಅತ್ಯಂತ ಪ್ರಮುಖವಾದ ಭಾಗವಾಗಿದೆ. ಹೊಸ ಹೊಸ ಅನುಭವಗಳನ್ನು ತೆರೆದು ತೋರಿಸಿದ ಈ ಶತಮಾನದ ಕನ್ನಡ ಸಾಹಿತ್ಯದ ಚಳುವಳಿಗಳ ಕಾಳಜಿ, ಒಲವುಗಳನ್ನು ಗುರುತಿಸುವುದರ ಮೂಲಕ ಇಡೀ ಶತಮಾನದ ಸಾಧನೆಯನ್ನು ಅವಲೋಕಿಸುವ

ಪ್ರಯತ್ನ ಹೊಸ ಶತಮಾನದ ಹೊಸ್ತಿಲಲ್ಲಿ ನಿಂತಾಗ ಜರೂರಾಗಿ ಆಗಬೇಕಾಗಿದ್ದರಿಂದ ಆಕಾಶವಾಣಿ ಗುಲ್ಬರ್ಗಾ ಕೇಂದ್ರ ಅದಕ್ಕೆ ಮುಂದಾಯಿತು. ಕಳೆದ ವರ್ಷದ ಆರಂಭದಲ್ಲಿ ವಿವಿಧ ವಿಶ್ವವಿದ್ಯಾಲಯಗಳು, ಕರ್ನಾಟಕ ಸಾಹಿತ್ಯ ಅಕಾಡೆಮಿ ಈ ಕೆಲಸವನ್ನು ಆರಂಭಿಸಿದವು. ಅಲ್ಲಲ್ಲಿ ಶತಮಾನದ ಸಾಹಿತ್ಯವನ್ನು ಭಿನ್ನ ಸಾಹಿತ್ಯ ಪ್ರಕಾರಗಳ ಮೂಲಕ ಅವಲೋಕಿಸಲಾಗಿದೆ. ಆದರೆ ವಿವಿಧ ಸಾಹಿತ್ಯ ಘಟ್ಟಗಳ ಸಂವೇದನೆಗಳನ್ನು ಸಮಗ್ರವಾಗಿ ಗುರುತಿಸುವ ಪ್ರಯತ್ನ ನಡೆಯಲಿಲ್ಲ. ಆದ್ದರಿಂದ ನಾವು ಕಳೆದ ವರ್ಷದ ಅಗಸ್ಟ್ ೨೮ ರಿಂದ ಏಳು ದಿನಗಳ ವರೆಗೆ 'ಇಪ್ಪತ್ತನೆಯ ಶತಮಾನದ ಕನ್ನಡ ಸಾಹಿತ್ಯ ಘಟ್ಟಗಳು' ಎಂಬ ವಿಚಾರ ಸಂಕಿರಣವನ್ನು ನೇರ ಪ್ರಸಾರ ಮಾಡಿದೆವು. ನಾಡಿನ ಹೆಸರಾಂತ ವಿಮರ್ಶಕರಾದ ಪ್ರೊ. ಎಲ್. ಎಸ್. ಶೇಷಗಿರಿರಾವ್, ಡಾ. ಗುರುಲಿಂಗ ಕಾಪಸೆ, ಡಾ. ಎಚ್. ಎಸ್. ರಾಘವೇಂದ್ರರಾವ್, ಡಾ. ಎಚ್. ಎಸ್. ವೆಂಕಟೇಶಮೂರ್ತಿ, ಡಾ. ಜಿ. ಆರ್. ತಿಪ್ಪೇಸ್ವಾಮಿ, ಡಾ. ಬಸವರಾಜ ಸಬರದ ಹಾಗೂ ಡಾ. ಶ್ಯಾಮಸುಂದರ ಬಿದರಕುಂದಿ ಅವರಿಂದ ಕ್ರಮವಾಗಿ ನವೋದಯ ಪೂರ್ವ, ನವೋದಯ, ಪ್ರಗತಿಶೀಲ, ನವ್ಯ, ದಲಿತ, ಬಂಡಾಯ, ಬಂಡಾಯೋತ್ತರ ಕನ್ನಡ ಸಾಹಿತ್ಯ ಘಟ್ಟಗಳ ಬಗ್ಗೆ ಭಾಷಣ –ಚರ್ಚೆಗಳು ಪ್ರಸಾರವಾದವು. ಇವೆಲ್ಲ ಧ್ವನಿತರಂಗಗಳಾಗಿ ಪ್ರಸಾರವಾಗಿದ್ದರಿಂದ ಒಂದು ಅರ್ಥದಲ್ಲಿ ಕ್ಷರ. ಇದನ್ನು ಗಮನಿಸಿ ಅದಕ್ಕೆ ಅಕ್ಷರ ರೂಪವನ್ನು ಕೊಡಬೇಕೆಂದು ಬಯಸಿದಾಗ ಧಾರವಾಡದ ಕರ್ನಾಟಕ ವಿದ್ಯಾವರ್ಧಕ ಸಂಘದವರು ಮುಂದೆ ಬಂದು ಈ ಇಡೀ ವಿಚಾರ ಸಂಕಿರಣವನ್ನು ಪುಸ್ತಕ ರೂಪದಲ್ಲಿ ಸುಂದರವಾಗಿ ಪ್ರಕಟಿಸಿದ್ದಾರೆ. ಇಂಥ ಮೌಲಿಕ ಮತ್ತು ಔಚಿತ್ಯಪೂರ್ಣ ಪ್ರಕಟಣೆಗೆ ಮುಂದಾದ ಕರ್ನಾಟಕ ವಿದ್ಯಾವರ್ಧಕ ಸಂಘದ ಅಧ್ಯಕ್ಷರಾದ ಡಾ. ಪಾಟೀಲ ಪುಟ್ಟಪ್ಪ ಅವರಿಗೂ ಪ್ರಧಾನ ಕಾರ್ಯದರ್ಶಿಗಳಾದ ಪ್ರೊ. ಬಿ. ವ್ಹಿ. ಗುಂಜೆಟ್ಟಿ ಅವರಿಗೂ ಸಂಘದ ಕಾರ್ಯಕಾರಿ ಸಮಿತಿಯ ಎಲ್ಲ ಸದಸ್ಯರಿಗೂ ವೈಯಕ್ತಿಕವಾಗಿ ಹಾಗೂ ಗುಲ್ಬರ್ಗ ಆಕಾಶವಾಣಿಯ ಪರವಾಗಿ ಧನ್ಯವಾದಗಳನ್ನು ಅರ್ಪಿಸುತ್ತೇನೆ. ಸಂಕಿರಣದಲ್ಲಿ ಭಾಗವಹಿಸಿ ನೇರ ಭಾಷಣ ಮಾಡಿ, ನಂತರ ಲಿಖಿತರೂಪದಲ್ಲಿ ಅವನ್ನು ಬರೆದುಕೊಟ್ಟ ಎಲ್ಲ ಲೇಖಕರಿಗೆ ನಾನು ಕೃತಜ್ಞತೆಗಳನ್ನು ವ್ಯಕ್ತಪಡಿಸುತ್ತೇನೆ. ಈ ಸರಣಿಯ ರೂವಾರಿಗಳಾದ ಡಾ. ಬಸವರಾಜ ಸಾದರ ಅವರು ಕಾರ್ಯಕ್ರಮದ ಆಯೋಜನೆಯ ಹಂತದಿಂದ ಹಿಡಿದು ಪುಸ್ತಕ ಪ್ರಕಟವಾಗುವವರೆಗೆ ಅತ್ಯಂತ ಜವಾಬ್ದಾರಿಯುತವಾಗಿ, ಶಿಸ್ತಿನಿಂದ ಕರ್ತವ್ಯ ನಿರ್ವಹಿಸಿದ್ದಾರೆ. ಅವರಿಗೆ ನನ್ನ ವಂದನೆಗಳು.

ಹೊಸಗನ್ನಡ ಸಾಹಿತ್ಯದ ಅಧ್ಯಯನ ಮಾಡುವವರಿಗೆ ಈ ಕೃತಿ ಒಂದು ಮುಖ್ಯ ಆಕರ ಗ್ರಂಥವಾಗಲೆಂದು ಆಶಿಸುತ್ತೇನೆ.

ಆಕಾಶವಾಣಿ, ಗುಲ್ಬರ್ಗ
೫-೨-೨೦೦೧

**ಎಸ್. ಎಸ್. ಹಿರೇಮಠ**
ಕೇಂದ್ರ ನಿರ್ದೇಶಕರು

# ಪ್ರಸ್ತಾವನೆ

ಸಾಹಿತ್ಯದ ಸಂದರ್ಭದಲ್ಲಿ ಪ್ರಸಾರ ಮಾಧ್ಯಮಗಳ ಪಾತ್ರ ಏನು ? ಎಂಬ ಪ್ರಶ್ನೆಗೆ. 'ಅವು ಸರಕು ಸಾಗಣೆಯ ವಾಹನಗಳಂತೆ ಮಾತ್ರ ಕೆಲಸ ಮಾಡಬಲ್ಲವು' ಎಂಬ ಸಂಕುಚಿತಾರ್ಥದ ತೋಂಡಿ ವಿವರಣೆಯನ್ನು ಹಲವಾರು ವಿಮರ್ಶಕರು ಹಿಂದೆ ಹೇಳಿದ್ದುಂಟು. ಇಂಥ ವಿಚಾರಗಳನ್ನು ಒಡೆದು ಚೂರು ಮಾಡುವ ಹಾಗೆ ಮಾಧ್ಯಮಗಳು ಇಂದು ತಾವೇ ಹಲವಾರು ಸಾಹಿತ್ಯ ರೂಪಗಳನ್ನು ನಿರ್ಮಿಸಿದ್ದು ನಮ್ಮ ಕಣ್ಣೆದುರಿಗಿದೆ. 'ಅಂಕಣ ಸಾಹಿತ್ಯ' ಪ್ರಕಾರವನ್ನು ನಿರ್ಮಿಸಿದ ಪತ್ರಿಕಾ ಪ್ರಪಂಚವನ್ನೂ ಒಳಗೊಂಡಂತೆ ಉಳಿದ ಮಾಧ್ಯಮಗಳ ಮಾತು ಏನೇ ಇರಲಿ. ಆಕಾಶವಾಣಿಯ ವಿಷಯಕ್ಕೆ ಬಂದರೆ ಅದು ನಿರಂತರ ಪ್ರಸಾರ ಮಾಡುವ ಚಿಂತನ. ಬಾನುಲಿ ಭಾಷಣ. ರೂಪಕ. ಗೀತರೂಪಕ. ಬಾನುಲಿ ನಾಟಕ. ಕಥಾನಾಟಕ– ಇತ್ಯಾದಿಗಳು ಕೇವಲ ಕಾರ್ಯಕ್ರಮಗಳು ಮಾತ್ರವಾಗಿರದೆ. ಅದೇ ಹೆಸರಿನ ಸಾಹಿತ್ಯ ಪ್ರಕಾರಗಳೂ ಆಗಿವೆ. ಆಕಾಶವಾಣಿಯು ಸಾಹಿತ್ಯ ಪ್ರಪಂಚಕ್ಕೆ ಕೊಟ್ಟ ವಿವಿಧ ಸಾಹಿತ್ಯ ರೂಪಗಳಿವು. ಇವುಗಳ ಜೊತೆಗೇ ಆಕಾಶವಾಣಿಯಿಂದ ಆಗಾಗ ಪ್ರಸಾರವಾಗುವ ಕವಿಗೋಷ್ಠಿಗಳು. ಹಾಸ್ಯ ಕವಿಗೋಷ್ಠಿಗಳು, ವಿಚಾರ ಸಂಕಿರಣಗಳು– ಇವು ಕೂಡ ಸಾಹಿತ್ಯ ಸಂವರ್ಧನೆಯ ಕೆಲಸದಲ್ಲಿ ಪೂರಕವಾದುವುಗಳೆ. ಪ್ರಸ್ತುತ ಕೃತಿ ಇಂಥ ವಿಚಾರ ಸಂಕಿರಣವೊಂದರ ಗ್ರಂಥಸ್ಥ ರೂಪವೆಂಬುದು ಗಮನಾರ್ಹ. ಒಂದು ಶತಮಾನದ ಕನ್ನಡ ಸಾಹಿತ್ಯದ ವಿವಿಧ ಘಟ್ಟಗಳ ಒಳಹೊರಗನ್ನು ವಿಮರ್ಶಾತ್ಮಕವಾಗಿ ತೆರೆದಿಡುವ ಈ ಕೃತಿ ಆಕಾಶವಾಣಿಯಂಥ ಪ್ರಸಾರ ಮಾಧ್ಯಮವೊಂದರ ಕೊಡುಗೆಯೆಂಬುದೇ ಮಹತ್ವದ ಸಂಗತಿಯಾಗುತ್ತದೆ. 'ಪ್ರಸಾರ ಸಾಹಿತ್ಯ' ಪ್ರಕಾರಕ್ಕೆ ಈ ಗ್ರಂಥ ಒಂದು ಮೌಲಿಕ ಸೇರ್ಪಡೆಯೆಂದರೆ ಅತಿಶಯೋಕ್ತಿಯಲ್ಲ.

ಇಪ್ಪತ್ತನೆಯ ಶತಮಾನ ಕಳೆದು ಇಪ್ಪತ್ತೊಂದನೆಯ ಶತಮಾನಕ್ಕೆ ಕಾಲಿಡುವ ಸಂದರ್ಭದಲ್ಲಿ ಕಳೆದ ಶತಮಾನದುದ್ದಕ್ಕೂ ಆದ ಕನ್ನಡ ಸಾಹಿತ್ಯದ ಬೆಳವಣಿಗೆಯನ್ನು ಪೂರ್ವಾವಲೋಕನ ಕ್ರಮದಲ್ಲಿ ವಿಮರ್ಶಿಸುವ ಉದ್ದೇಶದಿಂದ ಆಕಾಶವಾಣಿ ಗುಲ್ಬರ್ಗ ಕೇಂದ್ರವು ೨೦೦೦ದ ಆಗಸ್ಟ್ ೨೮ ರಿಂದ ಸಪ್ಟಂಬರ್ ೫ರ ವರಗೆ (ನಡುವೆ ೨ ಮತ್ತು ೩ನೇ ದಿನಾಂಕಗಳನ್ನು ಬಿಟ್ಟು) 'ಇಪ್ಪತ್ತನೆಯ ಶತಮಾನದ ಕನ್ನಡ

ಸಾಹಿತ್ಯ ಘಟ್ಟಗಳು' ಎಂಬ ಏಳು ದಿನಗಳ ವಿಚಾರ ಸಂಕಿರಣವನ್ನು ನೇರ ಪ್ರಸಾರ ಮಾಡಿತು. ಪ್ರತಿದಿನ ಸಾಯಂಕಾಲ ೪ ರಿಂದ ೫-೩೦ ರ ವರೆಗೆ ಪ್ರಸಾರವಾದ ಈ ವಿಚಾರ ಸಂಕಿರಣ ಕೇವಲ ಭಾಷಣರೂಪದಲ್ಲಿ ಮಾತ್ರವಿರದೆ. ಕೊನೆಯ ೩೦ ನಿಮಿಷ ಪ್ರಶ್ನೋತ್ತರ ರೂಪದಲ್ಲೂ ನೇರ ಪ್ರಸಾರವಾಯ್ತು. ಆ ವಿಚಾರ ಸಂಕಿರಣದಲ್ಲಿ ಪ್ರಸಾರವಾದ ಏಳೂ ಭಾಷಣಗಳೇ ಲೇಖನಗಳ ರೂಪ ಪಡೆದು ಈ ಗ್ರಂಥದಲ್ಲಿ ಸಂಪಾದಿತವಾಗಿವೆ.

ಹೊಸಗನ್ನಡ ಸಾಹಿತ್ಯವನ್ನು. ಅದು ಪಡೆದುಕೊಂಡ ಸಾಹಿತ್ಯದ ತಿರುವುಗಳ ಆಧಾರದಿಂದ ನವೋದಯ. ಪ್ರಗತಿಶೀಲ. ನವ್ಯ. ದಲಿತ ಮತ್ತು ಬಂಡಾಯ – ಎಂಬ ಐದು ಪ್ರಮುಖ ಘಟ್ಟಗಳಲ್ಲಿ ವಿಂಗಡಿಸಿ ಗುರುತಿಸಲಾಗುತ್ತದೆ. ಇದು ಕೇವಲ ಅಧ್ಯಯನದ ಅನುಕೂಲಕ್ಕಾಗಿ ಮಾತ್ರ ಮಾಡಿಕೊಂಡ ವಿಂಗಡಣೆ ಅಲ್ಲವೆಂದು ಮೊದಲೇ ಸ್ಪಷ್ಟಪಡಿಸುವುದು ಉಚಿತ. ಇಪ್ಪತ್ತನೆಯ ಶತಮಾನ. ಇಡೀ ಕನ್ನಡ ಸಾಹಿತ್ಯ ಪರಂಪರೆಯಲ್ಲೇ ಅತ್ಯಂತ ಶ್ರೀಮಂತವಷ್ಟೇ ಅಲ್ಲ: ವೈವಿಧ್ಯತೆಯನ್ನೂ ಸಾಧಿಸಿಕೊಂಡ ಕಾಲ. ಈ ಅವಧಿಯಲ್ಲಿ ಸಾಹಿತ್ಯ ಸೃಜಿತವಾಗುತ್ತಿದ್ದಂತೆ. ಅದರ ಬೆನ್ನ ಹಿಂದೆಯೇ ವಿಮರ್ಶೆ ಬರತೊಡಗಿದ ಕಾರಣವಾಗಿ ಹಾಗೂ ಹಲವಾರು ಸೃಜನಶೀಲ ಲೇಖಕರೇ ವಿಮರ್ಶಕರಾಗಿಯೂ ಹೊರಹೊಮ್ಮಿದ್ದರ ಪರಿಣಾಮವಾಗಿ ಅಂದಂದಿನ ಸಾಹಿತ್ಯ ಆಗಾಗಲೇ ಪರೀಕ್ಷೆಗೊಳಪಡುತ್ತ ನಡೆಯಿತು. ಇದರ ಫಲವಾಗಿ ನಿರ್ಮಿತ ಸಾಹಿತ್ಯದಲ್ಲಿರುವ ಕೊರತೆಗಳನ್ನು ಎತ್ತಿ ತೋರಿಸಿ. ಹೊಸದನ್ನು ಕಾಣುವ - ಕಟ್ಟುವ ಕೆಲಸವೂ ನಿರಂತರ ನಡೆಯುತ್ತ ಬಂತು. ಕಳೆದ ಶತಮಾನದಲ್ಲಿ ರಾಷ್ಟ್ರದಲ್ಲಿ ಉಂಟಾದ ರಾಜಕೀಯ ಸ್ಥಿತ್ಯಂತರಗಳು. ಪರಕೀಯರ ಆಡಳಿತ. ಸ್ವಾತಂತ್ರ್ಯಾಂದೋಲನ. ಸ್ವಾತಂತ್ರ್ಯ ಸಂಪಾದನೆ. ಹೊಸ ಶಿಕ್ಷಣದ ಪ್ರಭಾವ. ಅಧಿಕಾರಕ್ಕಾಗಿ ನಡೆದ ಪೈಪೋಟಿ. ರಾಷ್ಟ್ರದ ನೂರೆಂಟು ಸಾಮಾಜಿಕ-ಆರ್ಥಿಕ ಸಮಸ್ಯೆಗಳು– ಹೀಗೆ ಕಾಲಾನುಕ್ರಮದಲ್ಲಿ ನಡೆದ ಹಲವಾರು ವಿದ್ಯಮಾನಗಳ ಪರಿಣಾಮವಾಗಿ ಕನ್ನಡ ಸಾಹಿತ್ಯದಲ್ಲಿ ಹಂತ ಹಂತಕ್ಕೂ ನಿರಂತರ ಬದಲಾವಣೆಗಳಾಗುತ್ತ ಬಂದವು. ವಿದೇಶಿ ಸಾಹಿತ್ಯಕ್ಷೇತ್ರದಲ್ಲಾಗುತ್ತಿದ್ದ ಹೊಸ ಆವಿಷ್ಕಾರ-ಸ್ಥಿತ್ಯಂತರಗಳೂ ಕನ್ನಡ ಸಾಹಿತ್ಯದ ಮೇಲೆ ಅಲ್ಪ-ಸ್ವಲ್ಪ ಪ್ರಭಾವ ಬೀರಿದ್ದುಂಟು. ಹೀಗೆ ಹಲವಾರು ಕಾರಣಗಳಿಂದ ನಿತ್ಯ ಪರಿವರ್ತನೆ ಕಾಣುತ್ತ ಬಂದ ಹೊಸಗನ್ನಡ ಸಾಹಿತ್ಯದಲ್ಲಿ ನವೋದಯ. ಪ್ರಗತಿಶೀಲ. ನವ್ಯ. ದಲಿತ ಮತ್ತು ಬಂಡಾಯವೆಂದು ಸ್ಪಷ್ಟವಾಗಿ ಗುರುತಿಸಲಾಗುವ ಈ ಸಾಹಿತ್ಯ ಘಟ್ಟಗಳು ಒಂದಕ್ಕೆ ಮತ್ತೊಂದು ತೋರಿದ ಪ್ರಬಲ ಪ್ರತಿಕ್ರಿಯೆಯಿಂದಾಗಿಯೇ ಹುಟ್ಟಿದವೆಂದು ಹೇಳಬಹುದು. ಆದರೆ ಒಂದು ಘಟ್ಟ ಗಕ್ಕನೆ ಇಲ್ಲಿಗೇ ನಿಂತಿತು. ಮತ್ತೊಂದು ಅಲ್ಲಿಂದಲೇ ಸುರುವಾಯಿತು ಎಂದು ಮಾತ್ರ ಹೇಳಲಾಗುವುದಿಲ್ಲ. ಇದು ಇಂಥ ಘಟ್ಟ ಎಂದು ಗುರುತಿಸಬಹುದಾದ ಧೋರಣಾತ್ಮಕ ಸ್ಪಷ್ಟತೆ ಇರುವ ಕಾರಣಕ್ಕಾಗಿ ಈ ವಿಂಗಡಣೆ ಅರ್ಥಪೂರ್ಣ ಹಾಗೂ ಔಚಿತ್ಯಪೂರ್ಣವೇ ಆಗಿದೆ. ಇಷ್ಟೊಂದು ತೀವ್ರತರ ಹಾಗೂ

ಪ್ರತಿಕ್ರಿಯಾತ್ಮಕ ಚಟುವಟಿಕೆಗಳಿಂದ ಕೂಡಿದ ಇಪ್ಪತ್ತನೆಯ ಶತಮಾನದ ಕನ್ನಡ ಸಾಹಿತ್ಯವನ್ನು ಅದರ ಧೋರಣೆಗಳ ಹಿನ್ನೆಲೆಯಲ್ಲಿ ವಿಮರ್ಶಾತ್ಮಕ ಅವಲೋಕನ ಮಾಡುವ ಉದ್ದೇಶದಿಂದಲೇ ಆಕಾಶವಾಣಿ ಗುಲ್ಬರ್ಗ ಕೇಂದ್ರ ಇಂಥ ವಿಚಾರ ಸಂಕಿರಣವನ್ನು ಹಮ್ಮಿಕೊಂಡಿತು. ಈ ಐದೂ ಘಟ್ಟಗಳಿಗೆ ಹಿನ್ನೆಲೆ-ಮುನ್ನೆಲೆ ಒದಗಿಸಿದ ನವೋದಯಪೂರ್ವ ಹಾಗೂ ಬಂಡಾಯೋತ್ತರ ಘಟ್ಟಗಳನ್ನೂ ಗುರುತಿಸಿ ಇಲ್ಲಿ ವಿಮರ್ಶೆಗೆ ಎತ್ತಿಕೊಳ್ಳಲಾಗಿದ್ದು. ಇದು ಇಡೀ ಇಪ್ಪತ್ತನೆಯ ಶತಮಾನದ ನೂರು ವರ್ಷಗಳ ಕನ್ನಡ ಸಾಹಿತ್ಯಾವಲೋಕನಕ್ಕೆ ಪೂರಕ ಕ್ರಮವಾಗಿದೆ.

ಕಳೆದ ಶತಮಾನದ ಕನ್ನಡ ಸಾಹಿತ್ಯವನ್ನು ಸಾಹಿತ್ಯರೂಪಗಳ ಆಧಾರದಿಂದ ವರ್ಗೀಕರಿಸಿ, ಸಂಪಾದಿಸುವ ಹಾಗೂ ಸಾಂದರ್ಭಿಕವಾಗಿ ವಿಮರ್ಶಿಸುವ ಕೆಲಸವನ್ನು ಸಾಹಿತ್ಯ ಅಕಾಡೆಮಿಯಾದಿಯಾಗಿ ಹಲವಾರು ಸಂಘ-ಸಂಸ್ಥೆಗಳು ಮಾಡಿವೆಯಾದರೂ ಹೀಗೆ ಇಡೀ ನೂರು ವರ್ಷಗಳ ಸಾಹಿತ್ಯವನ್ನು ಅದು ಕಂಡುಕೊಂಡ ಧೋರಣೆಗಳ ಹಿನ್ನೆಲೆಯಲ್ಲಿ ಘಟ್ಟಗಳನ್ನಾಗಿ ವಿಂಗಡಿಸಿ ಬಹುಶಃ ಯಾವ ಸಂಸ್ಥೆಗಳೂ ವಿಮರ್ಶೆಗೊಳಪಡಿಸಿಲ್ಲ. ಹೀಗಾಗಿ ಆಕಾಶವಾಣಿ ಗುಲ್ಬರ್ಗ ಕೈಗೊಂಡ ಈ ಕಾರ್ಯ ಅನನ್ಯವಾದುದಷ್ಟೇ ಅಲ್ಲ: ಅರ್ಥಪೂರ್ಣವೂ ಹೌದು. ಕನ್ನಡ ಸಾಹಿತ್ಯಕ್ಷೇತ್ರದೊಂದಿಗೆ ಆಕಾಶವಾಣಿಯಂಥ ಪ್ರಮುಖ ಪ್ರಸಾರ ಮಾಧ್ಯಮವೊಂದು ಇಟ್ಟುಕೊಂಡ ಗಾಢ ಸಂಬಂಧಕ್ಕೂ ಇದು ಸಾಕ್ಷಿಯಾಗುತ್ತದೆ.

ಇಲ್ಲಿ ಸಂಪಾದಿತವಾಗಿರುವ ಏಳೂ ಲೇಖನಗಳು ಇಪ್ಪತ್ತನೆಯ ಶತಮಾನದ ಕನ್ನಡ ಸಾಹಿತ್ಯದ ಚರಿತ್ರೆಯನ್ನು, ಇತರ ' ಸಾಹಿತ್ಯದ ಇತಿಹಾಸ ' ಗ್ರಂಥಗಳ ಹಾಗೆ ಅನುಕ್ರಮವಾಗಿ ವಿಶ್ಲೇಷಿಸುವುದಿಲ್ಲವೆಂಬುದನ್ನು ಮೊದಲೇ ಹೇಳಿಬಿಡುವುದು ಸೂಕ್ತ. ಹೀಗೆಂದ ಮಾತ್ರಕ್ಕೆ ಇಲ್ಲಿ ಇತಿಹಾಸ ಇಲ್ಲವೆಂದಲ್ಲ : ಇಲ್ಲಿ ಅನುಸರಿಸಲಾದ ಐತಿಹಾಸಿಕ ಕ್ರಮವೇ ಬೇರೆ. ಕಾಲಾನುಕ್ರಮದಲ್ಲಿ ಪ್ರಕಟವಾಗುತ್ತ ಬಂದ ಅಸಂಖ್ಯ ಕನ್ನಡ ಕೃತಿಗಳೆಲ್ಲವನ್ನೂ ಒಂದೊಂದಾಗಿ ವಿಮರ್ಶೆಗೆತ್ತಿಕೊಳ್ಳುವ ಬದಲಾಗಿ, ಕನ್ನಡ ಸಾಹಿತ್ಯ ತನ್ನ ಬೆಳವಣಿಗೆಯ ಪ್ರಕ್ರಿಯೆಯಲ್ಲಿ ಐತಿಹಾಸಿಕವಾಗಿ ಕಂಡುಕೊಂಡ ವಿವಿಧ ಅವಸ್ಥಾಂತರಗಳನ್ನು ಅವುಗಳ ಧೋರಣೆಯ ಹಿನ್ನೆಲೆಯಲ್ಲಿ ಅವಲೋಕನ ಮಾಡುವುದೇ ಆ ಕ್ರಮ. ಹೀಗಾಗಿ ಆ ಶತಮಾನದ ಎಲ್ಲ ಲೇಖಕರ ಪ್ರಸ್ತಾಪ ಮಾಡುವುದಾಗಲಿ ಹಾಗೂ ಅವರ ಎಲ್ಲ ಕೃತಿಗಳನ್ನು ವಿಮರ್ಶೆಗೊಳಪಡಿಸುವುದಾಗಲಿ ಇಲ್ಲಿ ಸಾಧ್ಯವಾಗಿಲ್ಲ. ಆಯಾ ಸಾಹಿತ್ಯ ಘಟ್ಟಗಳ ಧೋರಣೆಗಳನ್ನು ವಿಶ್ಲೇಷಿಸಲು ಅಗತ್ಯವಿರುವ ಪ್ರಾತಿನಿಧಿಕ ಕೃತಿಗಳನ್ನು, ಕೃತಿಗಳ ಲೇಖಕರನ್ನು ಮಾತ್ರ ಇಲ್ಲಿ ಪ್ರಸ್ತಾಪಿಸುವುದು ಸಾಧ್ಯವಾಗಿದೆ. ಇಲ್ಲಿಯೂ ಸಾಕಷ್ಟು ಸಮಗ್ರತೆ ಸಾಧ್ಯವಾಗಿದ್ದು, ಇಪ್ಪತ್ತನೆಯ ಶತಮಾನದ ಸಾಹಿತ್ಯ ಚರಿತ್ರೆಯಲ್ಲಿ ದಾಖಲಾಗಬೇಕಿರುವ ಎಲ್ಲ ಲೇಖಕರು ಹಾಗೂ ಕೃತಿಗಳು ಹೆಚ್ಚಿನ ಸಂಖ್ಯೆಯಲ್ಲೇ ಪ್ರಸ್ತಾಪವಾಗಿವೆ. ಹೀಗಿದ್ದರೂ ಸಂಪೂರ್ಣ ದಾಖಲೆ ಸಾಧ್ಯವಾಗಿದೆಯೆಂದು ಹೇಳುವುದು ಸಾಧ್ಯವಿಲ್ಲ. ಏನೇ ಇದ್ದರೂ,

ಇಡೀ ಶತಮಾನದುದ್ದಕ್ಕೂ ಕನ್ನಡ ಸಾಹಿತ್ಯ ಕಂಡುಕೊಂಡ ಧೋರಣೆಗಳ ಹಿನ್ನೆಲೆಯಲ್ಲಿ ಘಟ್ಟ ಘಟ್ಟಗಳನ್ನಾಗಿ ವಿಂಗಡಿಸಿ ವಿಮರ್ಶೆಗೊಳಪಡಿಸಿರುವ ಈ ಕ್ರಮವು ಕನ್ನಡ ಸಾಹಿತ್ಯ ಚರಿತ್ರೆಯನ್ನು ಬೇರೊಂದು ಬಗೆಯಲ್ಲಿ ಕಟ್ಟಿಕೊಡುವ ವಿಭಿನ್ನ ರೀತಿಯದಾಗಿದೆಯೆಂದು ಮಾತ್ರ ಖಂಡಿತವಾಗಿ ಹೇಳಬಹುದು.

ಈಗಾಗಲೇ ಪ್ರಸ್ತಾಪಿಸಿರುವಂತೆ. ಇಪ್ಪತ್ತನೆಯ ಶತಮಾನದ ಐದೂ ಘಟ್ಟಗಳು ಒಂದು ಮುಗಿದು ಮತ್ತೊಂದು ಆ ಕ್ಷಣದಿಂದಲೇ ಆರಂಭವಾಗಿಲ್ಲ. ಒಂದು ಸಾಹಿತ್ಯಿಕ ಧೋರಣೆ ಪ್ರಚಲಿತವಿರುವಾಗಲೇ ಅದಕ್ಕೆ ತೋರುವ ಪ್ರತಿಕ್ರಿಯೆಯಾಗಿ ಮತ್ತು ಕಾಲದ ಸ್ಥಿತ್ಯಂತರಗಳ ಪ್ರಭಾವ – ಅಗತ್ಯಕ್ಕನುಗುಣವಾಗಿ ಮತ್ತೊಂದು ಧೋರಣೆ ಅದರ ಒಳಗಿನಿಂದಲೇ ಒಡಮೂಡಿದ್ದು ಸ್ಪಷ್ಟವಿದೆ. ಇನ್ನೂ ಒಂದು ಮಹತ್ವದ ಅಂಶವೆಂದರೆ. "ಸಾಮಾನ್ಯವಾಗಿ" ಗುರುತಿಸಲಾಗುವ ಅವಧಿಗೆ ಮಾತ್ರ ಈ ಐದೂ ಘಟ್ಟಗಳ ಸಾಹಿತ್ಯವನ್ನು ನಿರ್ಬಂಧಿಸುವುದು ಸಾಧ್ಯವಿಲ್ಲ. "ಸಾಮಾನ್ಯವಾಗಿ" ಗುರುತಿಸಲಾದ ಆ ಕಾಲದ ಮಿತಿಯನ್ನು ದಾಟಿಯೂ ಆಯಾ ಧೋರಣೆಗಳು ಕನ್ನಡ ಸಾಹಿತ್ಯ ಕ್ಷೇತ್ರದಲ್ಲಿ ಅಭಿವ್ಯಕ್ತಿ ಸಾಧಿಸಿದ್ದೂ ಉಂಟು. ಅಷ್ಟೇ ಏಕೆ : ಇಪ್ಪತ್ತನೆಯ ಶತಮಾನದ ಕೊನೆಯ ಹೊತ್ತಿಗೆ ಯಾವುದೇ ಒಂದು ಸಾಹಿತ್ಯಿಕ ಧೋರಣೆ ಮುಖ್ಯವಾಗದೆ. ನವೋದಯ ಮತ್ತೆ ತನ್ನ ಲಯ-ಗೇಯಗಳನ್ನು ಮುಂದೆ ಚಾಚಿದ್ದು. ಹಾಗೆಯೇ ಪ್ರಗತಿಶೀಲದ ಮರು ಆವಿಷ್ಕಾರಗಳಂತೆ ಕಾಣುವ ದಲಿತ-ಬಂಡಾಯ ಧೋರಣೆಗಳು ಜೊತೆ ಜೊತೆಯಾಗಿಯೇ ಮುನ್ನಡೆದದ್ದು ಸ್ಪಷ್ಟವಿದೆ. ಈ ಹಂತದಲ್ಲಿ ನವ್ಯ ಹಿಂದೆ ಸರಿದುದೊಂದನ್ನು ಬಿಟ್ಟರೆ, ಉಳಿದೆಲ್ಲ ಸಾಹಿತ್ಯಿಕ ಧೋರಣೆಗಳು ಸಮ್ಮಿಶ್ರವಾಗಿಯೇ ಸೃಜನಶೀಲತೆಯನ್ನು ನಿರ್ದೇಶಿಸುತ್ತಿವೆ. ಒಂದರ್ಥದಲ್ಲಿ ಇದು ಕನ್ನಡ ಸಾಹಿತ್ಯದ ಸಂಕೀರ್ಣ ಘಟ್ಟ.

ಕನ್ನಡ ಸಾಹಿತ್ಯದಲ್ಲಾದ ನೂರು ವರ್ಷಗಳ ಬೆಳವಣಿಗೆಯನ್ನು ಈ ವಿಚಾರ ಸಂಕಿರಣ ತನ್ನ ಮಿತಿಯಲ್ಲೇ ಆದಷ್ಟು ಸಮಗ್ರವಾಗಿ ವಿಮರ್ಶಿಸಿ ಪ್ರಸಾರ ಮಾಡಿತು. ಪ್ರತಿದಿನದ ಭಾಷಣದ ಕೊನೆಯಲ್ಲಿ ಆಮಂತ್ರಿತ ಶ್ರೋತೃಗಳು ಭಾಷಣಕಾರರೊಂದಿಗೆ ನಡೆಸಿದ ಮುಕ್ತ ಪ್ರಶ್ನೋತ್ತರ ಕೂಡ ಬಿಟ್ಟುಹೋದ ವಿಷಯಗಳನ್ನು ಚರ್ಚಿಸುವಲ್ಲಿ ಪೂರಕವಾಗಿತ್ತು. ಪುಸ್ತಕ ಪ್ರಕಟಣೆಗಾಗಿ ಭಾಷಣಕಾರರು ಪ್ರಬಂಧಗಳನ್ನು ಸಿದ್ಧಪಡಿಸುವಲ್ಲಿ ಈ ಪ್ರಶ್ನೋತ್ತರ ಪೂರಕವಾಗಿ ನೆರವಾಗಿದೆ. ಇಲ್ಲಿ ತೊಡಗಿಸಲಾದ ಏಳೂ ಜನ ವಿಮರ್ಶಕರ ಓದಿನ ವಿಸ್ತಾರ, ವಿಮರ್ಶನ ಪ್ರಜ್ಞೆ, ಬರಹದ ರೀತಿ, ಆಯಾ ಘಟ್ಟಗಳನ್ನು ಕುರಿತಂತೆ ಅವರಿಗಿರುವ ಅರಿವಿನ ಆಳ – ಇವೆಲ್ಲವೂ ಅವರವರ ಪ್ರಬಂಧಗಳಲ್ಲಿ ನಿಚ್ಚಳವಾಗಿರುವುದನ್ನು ಗಮನಿಸಬಹುದು.

ಇಂಥ ಅರ್ಥಪೂರ್ಣ ವಿಚಾರ ಸಂಕಿರಣವೊಂದನ್ನು ಆಯೋಜಿಸಿ ಪ್ರಸಾರ ಮಾಡಬೇಕೆಂಬ ಹೊಳಹು ಮೂಡಿದ ಸಂದರ್ಭದಲ್ಲೇ. ಅದರಲ್ಲಿ ಪ್ರಸ್ತುತಪಡಿಸಲಾಗುವ ಲೇಖನಗಳನ್ನು ಗ್ರಂಥರೂಪದಲ್ಲಿ ಪ್ರಕಟಿಸಬೇಕೆಂಬ ಕನಸೂ

ಇತ್ತು. ಆಕಾಶವಾಣಿ ಗುಲ್ಬರ್ಗ ಕೇಂದ್ರವು ತನ್ನ ಈ ಕನಸನ್ನು ಧಾರವಾಡದ ಕರ್ನಾಟಕ ವಿದ್ಯಾವರ್ಧಕ ಸಂಘದೊಂದಿಗೆ ಹಂಚಿಕೊಂಡಾಗ ಅದು ಅತ್ಯಂತ ಸಂತೋಷದಿಂದ ಈ ಕೃತಿಯ ಪ್ರಕಟಣೆಗೆ ಮುಂದೆ ಬಂತು. ಕರ್ನಾಟಕ ವಿದ್ಯಾವರ್ಧಕ ಸಂಘದ ಪ್ರಕಟಣಾ ಸಹಯೋಗವೇ ಈ ಗ್ರಂಥವನ್ನು ನಿಮ್ಮ ಕೈಗಿತ್ತಿದೆ. ಈ ಕೃತಿಯನ್ನು ಪ್ರಕಟಿಸಲು ಪ್ರೀತಿಯಿಂದ ಒಪ್ಪಿಗೆ ನೀಡಿದ ಕರ್ನಾಟಕ ವಿದ್ಯಾವರ್ಧಕ ಸಂಘದ ಅಧ್ಯಕ್ಷರಾದ ಡಾ. ಪಾಟೀಲ ಪುಟ್ಟಪ್ಪ ಅವರಿಗೆ ಅನಂತ ಕೃತಜ್ಞತೆಗಳು. ಸಂಘದ ಸಮಿತಿಯ ಎಲ್ಲ ಸದಸ್ಯರೂ ಇಂಥ ಮಹತ್ವದ ಪ್ರಕಟಣೆಗೆ ಒಪ್ಪಿ ಪ್ರೋತ್ಸಾಹಿಸಿದ್ದಾರೆ. ಅವರೆಲ್ಲರಿಗೂ ಧನ್ಯವಾದಗಳು. ಈ ಗ್ರಂಥ ಪ್ರಕಟಣೆಯ ಕೋರಿಕೆ ಪ್ರಸ್ತಾಪವಾದಾಗಿನಿಂದ ಹಿಡಿದು ಅದು ಬಿಡುಗಡೆಯಾಗುವವರೆಗಿನ ಪ್ರತಿಯೊಂದೂ ಹಂತದ ಕೆಲಸದಲ್ಲಿ ತುಂಬು ಹೃದಯದ ನೆರವು ನೀಡಿ ಸಹಕರಿಸಿದವರು ಸಂಘದ ಪ್ರಧಾನ ಕಾರ್ಯದರ್ಶಿಗಳಾದ ಪ್ರೊ. ಬಿ. ವ್ಹಿ. ಗುಂಜೆಟ್ಟಿ ಅವರು. ಅವರಿಗೂ ಅನಂತ ಕೃತಜ್ಞತೆಗಳು.

ಇಲ್ಲಿ ಮುಖ್ಯವಾಗಿ ನೆನೆಯಬೇಕಾದದ್ದು ನಮ್ಮ ಆಮಂತ್ರಣವನ್ನು ಸ್ವೀಕರಿಸಿ ಮೊದಲು ನೇರ ಭಾಷಣ ಮಾಡಿ ನಂತರ ಅಧ್ಯಯನಪೂರ್ಣ ಪ್ರಬಂಧಗಳನ್ನು ಸಿದ್ಧಪಡಿಸಿಕೊಟ್ಟ ಎಲ್ಲ ವಿಮರ್ಶಕರನ್ನು. ಒಂದು ಕೆಲಸವು ಸಮಯಬದ್ಧವಾಗಿ ನಡೆಯಬೇಕೆಂಬ ಅಪೇಕ್ಷೆಯಿಂದ ಆಕಾಶವಾಣಿ ಗುಲ್ಬರ್ಗ ಕೇಂದ್ರವು ಈ ಎಲ್ಲ ವಿಮರ್ಶಕರಿಗೆ ಮತ್ತೆ ಮತ್ತೆ ಪತ್ರ ಬರೆದು. ಫೋನ್ ಮಾಡಿ ಸಾಕಷ್ಟು ತೊಂದರೆ ಕೊಟ್ಟಿದೆ. ಇದರಲ್ಲಿ ಕೆಲವರು ತಕ್ಷಣ ನಮ್ಮ ಕೋರಿಕೆಯನ್ನು ಪೂರೈಸಿದ್ದಾರೆ. ಮತ್ತೆ ಕೆಲವರು ಕೊಂಚ ತಡವಾದರೂ ಅತ್ಯಂತ ಶ್ರದ್ಧೆಯಿಂದ ಪ್ರಬಂಧಗಳನ್ನು ಸಿದ್ಧಪಡಿಸಿಕೊಟ್ಟಿದ್ದಾರೆ. ಇಂಥ ಗುರುತರವಾದ ಕೆಲಸವನ್ನು ಮಾಡಿಕೊಟ್ಟು ತಮ್ಮ ಪ್ರಬಂಧಗಳನ್ನು ಪ್ರಕಟಿಸಲು ಒಪ್ಪಿಗೆಯಿತ್ತ ಪ್ರೊ. ಎಲ್. ಎಸ್. ಶೇಷಗಿರಿರಾವ್. ಡಾ. ಗುರುಲಿಂಗ ಕಾಪಸೆ. ಡಾ. ಎಚ್. ಎಸ್. ರಾಘವೇಂದ್ರರಾವ್. ಡಾ. ಎಚ್. ಎಸ್. ವೆಂಕಟೇಶಮೂರ್ತಿ. ಡಾ. ಜಿ. ಆರ್. ತಿಪ್ಪೇಸ್ವಾಮಿ. ಡಾ. ಬಸವರಾಜ ಸಬರದ ಹಾಗೂ ಡಾ. ಶ್ಯಾಮಸುಂದರ ಬಿದರಕುಂದಿ– ಇವರೆಲ್ಲರಿಗೂ ಹಾಗೂ ಪ್ರೊ. ಎಲ್. ಎಸ್. ಶೇಷಗಿರಿರಾವ್ ಅವರ ಅನುಪಸ್ಥಿತಿಯಲ್ಲಿ ಅವರ ಪ್ರಬಂಧವನ್ನು ನೇರಪ್ರಸಾರದಲ್ಲಿ ಪ್ರಸ್ತುತಪಡಿಸಿದ ಡಾ. ಮೀನಾಕ್ಷಿ ಬಾಳಿ ಅವರಿಗೂ ನಾನು ವೈಯಕ್ತಿಕವಾಗಿ. ಆಕಾಶವಾಣಿ ಗುಲ್ಬರ್ಗ ಕೇಂದ್ರ ಹಾಗೂ ಕರ್ನಾಟಕ ವಿದ್ಯಾವರ್ಧಕ ಸಂಘದ ಪರವಾಗಿ ತುಂಬು ಹೃದಯದ ಕೃತಜ್ಞತೆಗಳನ್ನು ಸಲ್ಲಿಸುವೆ.

ದಾಖಲಿರ್ಹವಾದ ಈ ವಿಚಾರ ಸಂಕಿರಣದ ಯೋಚನೆ ಯೋಜನೆಯಾಗಿ. ಪ್ರಸಾರವಾಗಿ. ಕೊನೆಗೆ ಕೃತಿರೂಪ ಪಡೆದುದರ ಹಿಂದೆ ಗುಲ್ಬರ್ಗ ಆಕಾಶವಾಣಿ ಕೇಂದ್ರದ ನಿರ್ದೇಶಕರಾಗಿರುವ ಶ್ರೀ ಎಸ್. ಎಸ್. ಹಿರೇಮಠ ಅವರ ನಿರಂತರ

ಮಾರ್ಗದರ್ಶನ ಮತ್ತು ಪ್ರೇರಣೆಗಳಿವೆ. ಅವರ ಪ್ರೀತಿ-ಪ್ರೋತ್ಸಾಹಗಳಿಗೆ ನಾನು ಹೃದಯಪೂರ್ವಕವಾದ ಧನ್ಯವಾದಗಳನ್ನು ಅರ್ಪಿಸುವೆ.

ವಿಚಾರ ಸಂಕಿರಣದ ಪ್ರಸಾರ ಮತ್ತು ಪ್ರಕಟಣೆಯ ವಿವಿಧ ಹಂತಗಳಲ್ಲಿ ಕನ್ನಡ ಭಾಷಣ ವಿಭಾಗದ ಕಾರ್ಯಕ್ರಮ ನಿರ್ವಾಹಕಿ ಶ್ರೀಮತಿ ರಮಾ ಎಸ್. ಹಿರೇಮಠ ಅವರು ನೆರವು ನೀಡಿದ್ದಾರೆ. ಅವರಿಗೆ ಕೃತಜ್ಞತೆಗಳು. ಪ್ರಸಾರ ಕಾರ್ಯದಲ್ಲಿ ಶ್ರೀ ಸದಾನಂದ ಪೆರ್ಲ ಹಾಗೂ ಶ್ರೀ ಮಧುಸೂಧನ ಟೇಂಗ್ಳೀಕರ ಅವರು ಸಹಾಯ ಮಾಡಿದ್ದಾರೆ. ಅವರಿಗೂ ಧನ್ಯವಾದಗಳು. ಶ್ರೀ ಜಿ. ಬಿ. ಮಂಗಳಗಟ್ಟಿ, ಶ್ರೀ ಸತೀಶ ಪರ್ವತಿಕರ, ಶ್ರೀ ಎಚ್. ಶ್ರೀನಿವಾಸ, ಶ್ರೀ ಎಸ್. ವಿ. ದೇಶಪಾಂಡೆ ಇವರೆಲ್ಲ ನನ್ನ ಕೆಲಸಕ್ಕೆ ಕೈಗೂಡಿಸಿದ್ದಾರೆ. ನೇರ ಪ್ರಸಾರದ ಕಾರ್ಯದಲ್ಲಿ ಗುಲ್ಬರ್ಗ ಆಕಾಶವಾಣಿ ಕೇಂದ್ರದ ತಾಂತ್ರಿಕ ವಿಭಾಗದ ಎಲ್ಲ ಸಹೋದ್ಯೋಗಿಗಳು ಮನಮುಟ್ಟಿ ದುಡಿದಿದ್ದಾರೆ. ಹಾಗೆಯೇ ಆಡಳಿತ ವಿಭಾಗದ ಎಲ್ಲ ಸಹೋದ್ಯೋಗಿಗಳು. ನಿಲಯದ ಸಂಗೀತ ಕಲಾವಿದರು ನೆರವಾಗಿದ್ದಾರೆ. ಇವರೆಲ್ಲರಿಗೂ ಅನಂತ ಕೃತಜ್ಞತೆಗಳು.

ಗ್ರಂಥ ಪ್ರಕಟಣೆಯ ಹಂತದಲ್ಲಿ ನೆರವಾದ ಕರ್ನಾಟಕ ವಿದ್ಯಾವರ್ಧಕ ಸಂಘದ ಕಛೇರಿಯ ಎಲ್ಲ ಸಿಬ್ಬಂದಿ ವರ್ಗಕ್ಕೆ, ಅಂತಿಮ ಹಂತದ ಕರಡು ತಿದ್ದುವಲ್ಲಿ ಕೈಗೂಡಿಸಿದ ಡಾ. ಬಾಳಣ್ಣ ಶೀಗೀಹಳ್ಳಿ ಅವರಿಗೆ, ಗ್ರಂಥವನ್ನು ಅಂದವಾಗಿ ಮುದ್ರಿಸಿಕೊಟ್ಟ ಮನೋಹರ ಪ್ರಿಂಟಿಂಗ್ ಪ್ರೆಸ್‌ನ ಮಾಲಕರಾದ ಶ್ರೀ ರವಿ-ಚಂದ್ರ ಸಹೋದರರರು, ಅಕ್ಷರ ಜೋಡಣೆಯ ಕಾರ್ಯವನ್ನು ನಿರ್ವಹಿಸಿದ ಶ್ರೀ ಎಸ್. ಎಚ್. ಜೈನಾಪೂರ ಹಾಗೂ ಪ್ರೆಸ್ಸಿನ ಎಲ್ಲ ಸಿಬ್ಬಂದಿ ವರ್ಗದವರಿಗೆ ಮತ್ತು ಅರ್ಥಪೂರ್ಣವಾದ ಮುಖಪುಟದ ವಿನ್ಯಾಸ ಮಾಡಿಕೊಟ್ಟ ಶ್ರೀ ರವೀಂದ್ರ ವಿಶ್ವಜ್ಞ ಅವರಿಗೆ – ಇವರೆಲ್ಲರಿಗೂ ಒಟ್ಟಾಗಿಯೇ ಧನ್ಯವಾದಗಳನ್ನು ಹೇಳುವೆ.

ಈ ಗ್ರಂಥ ಎಲ್ಲ ಸಾಹಿತ್ಯಾಭ್ಯಾಸಿಗಳಿಗೆ ಉಪಯುಕ್ತವಾದರೆ ನಮ್ಮೆಲ್ಲರ ಶ್ರಮ ಸಾರ್ಥಕ.

ಆಕಾಶವಾಣಿ, ಗುಲ್ಬರ್ಗ

**ಬಸವರಾಜ ಸಾದರ**

೭-೨-೨೦೦೨

# ಪರಿವಿಡಿ


| | |
|---|---|
| ಪ್ರಕಾಶಕರ ಮಾತು | iii |
| ಆಕಾಶವಾಣಿ ನಿರ್ದೇಶಕರ ನುಡಿ | v |
| ಪ್ರಸ್ತಾವನೆ | vii |
| **೧. ನವೋದಯಪೂರ್ವ ಕನ್ನಡ ಸಾಹಿತ್ಯ ಘಟ್ಟ**<br>ಎಲ್. ಎಸ್. ಶೇಷಗಿರಿರಾವ್ | ೩ |
| **೨. ಕನ್ನಡ ನವೋದಯ ಸಾಹಿತ್ಯ ಘಟ್ಟ**<br>ಗುರುಲಿಂಗ ಕಾಪಸೆ | ೩೯ |
| **೩. ಕನ್ನಡ ಪ್ರಗತಿಶೀಲ ಸಾಹಿತ್ಯ ಘಟ್ಟ**<br>ಎಚ್. ಎಸ್. ರಾಘವೇಂದ್ರರಾವ್ | ೭೩ |
| **೪. ಕನ್ನಡ ನವ್ಯ ಸಾಹಿತ್ಯ ಘಟ್ಟ**<br>ಎಚ್. ಎಸ್. ವೆಂಕಟೇಶಮೂರ್ತಿ | ೧೦೩ |
| **೫. ಕನ್ನಡ ದಲಿತ ಸಾಹಿತ್ಯ ಘಟ್ಟ**<br>ಜಿ. ಆರ್. ತಿಪ್ಪೇಸ್ವಾಮಿ | ೧೩೩ |
| **೬. ಕನ್ನಡ ಬಂಡಾಯ ಸಾಹಿತ್ಯ ಘಟ್ಟ**<br>ಬಸವರಾಜ ಸಬರದ | ೨೦೧ |
| **೭. ಬಂಡಾಯೋತ್ತರ ಕನ್ನಡ ಸಾಹಿತ್ಯ ಘಟ್ಟ**<br>ಶ್ಯಾಮಸುಂದರ ಬಿದರಕುಂದಿ | ೨೫೫ |
| **★ ಲೇಖಕರ ವಿಳಾಸಗಳು** | ೨೯೮ |

# ನವೋದಯಪೂರ್ವ ಕನ್ನಡ ಸಾಹಿತ್ಯ ಘಟ್ಟ

ಪ್ರೊ. ಎಲ್. ಎಸ್. ಶೇಷಗಿರಿರಾವ್

# ನವೋದಯಪೂರ್ವ ಕನ್ನಡ ಸಾಹಿತ್ಯ ಘಟ್ಟ

ಹತ್ತೊಂಬತ್ತನೆಯ ಶತಮಾನದ ಕಡೆಯ ಭಾಗದಲ್ಲಿ ಕನ್ನಡ ಸಾಹಿತ್ಯವನಕ್ಕೆ ವಸಂತ ಬಂದಿತು. ಕನ್ನಡ ಸಾಹಿತ್ಯದ ನವೋದಯವು ಇಡೀ ಭಾರತದಲ್ಲಿ ಹೊಸ ಚೈತನ್ಯವನ್ನು ಹರಡುತ್ತಿದ್ದ ಬೌದ್ಧಿಕ ಮತ್ತು ಸಾಹಿತ್ಯ-ಕಲೆಗಳ ಕ್ರಾಂತಿಯ ಭಾಗ.

ಭಾರತೀಯ ಸಾಹಿತ್ಯಗಳಲ್ಲಿ ಕಂಡ ಈ ನವೋದಯ ಒಂದು ದೃಷ್ಟಿಯಿಂದ ವಿಶಿಷ್ಟವಾದದ್ದು. ಇತರ ದೇಶಗಳಲ್ಲಿ ಸಾಹಿತ್ಯದ ನವೋದಯ ಕಂಡಿದೆ. ಆದರೆ ದಾಸ್ಯದಲ್ಲಿರುವ ದೇಶದಲ್ಲಿ ಹೀಗಾದದ್ದು ವಿರಳ. ದಾಸ್ಯದಿಂದ ಬಿಡುಗಡೆ ಬಯಸಿದ ಚೇತನವು ತನ್ನ ಸಾಮರ್ಥ್ಯವನ್ನು ಕಂಡುಕೊಳ್ಳಲು ಬಯಸಿತು. ಸಾಹಿತ್ಯವು ಈ ಚೇತನದ ಸುಪ್ತಶಕ್ತಿಯು ಪ್ರಕಟವಾದ ರಂಗಗಳಲ್ಲಿ ಒಂದು. ಯುರೋಪಿನ ಸಾಹಿತ್ಯಕ್ಕೆ ಹೊಸ ಚೈತನ್ಯ ಬಂದದ್ದು ತನ್ನದೇ ಗತಕಾಲದ ಸ್ಪರ್ಶದಿಂದ, ಹಲವು ಶತಮಾನಗಳ ಹಿಂದಿನ ಗ್ರೀಕ್ ಮತ್ತು ಲ್ಯಾಟಿನ್ ಭಾಷೆಗಳಲ್ಲಿನ ಸಾಹಿತ್ಯ, ಚಿಂತನ, ಬರಹ ಎಲ್ಲ ಕಾನ್ಸ್‌ಟಾನ್‌ಟಿನೋಪಲ್‌ನ ಪತನದ ಚಾರಿತ್ರಿಕ ಆಕಸ್ಮಿಕದಿಂದ ಮತ್ತೆ ಯುರೋಪಿನ ಉಡಿಗೆ ಬಂದು ಬೆಳಗಿದುದರಿಂದ ಭಾರತಕ್ಕೆ ತನ್ನ ಇತಿಹಾಸ. ಸಂಸ್ಕೃತಿ, ಜನಾಂಗಗಳಿಂದ ತೀರ ಭಿನ್ನವಾದ ಇತಿಹಾಸ ಸಂಸ್ಕೃತಿ ಮತ್ತು ಭಿನ್ನವಾದ ಜನಾಂಗದಿಂದ ಒಂದು ಜಾಗೃತಿ ಲಭ್ಯವಾಯಿತು. ಕೊಳಕು ಬಟ್ಟೆಯಲ್ಲಿ ಮರೆಯಾದ ವಜ್ರದಂತೆ ದಾಸ್ಯದಲ್ಲಿ ಮರೆಯಾದರೂ ಉಳಿದಿದ್ದ ಈ ನಾಡಿನ ಒಳಗಿನ ಸತ್ವ. ಶ್ರೀಮಂತಿಕೆಗಳು ಮತ್ತೆ ಪ್ರತ್ಯಕ್ಷವಾದವು.

ಇದು ಬಹಳ ಮಹತ್ವದ ಸಂಗತಿ. ಬ್ರಿಟಿಷರ ಆಗಮನದಿಂದ ಹಲವು ಶತಮಾನಗಳ ಯುರೋಪಿನ ವಿಜ್ಞಾನ ತಂತ್ರಜ್ಞಾನಗಳು ಒಮ್ಮೆಲೆ ಲಭ್ಯವಾದಂತೆ ಹಲವು ಶತಮಾನಗಳ ಯುರೋಪಿನ ಇತಿಹಾಸದ ನಡೆ ಮತ್ತು ಸಾಹಿತ್ಯಗಳು ಒಮ್ಮೆಲೆ ಲಭ್ಯವಾದವು. ಜಾಜ್ವಲ್ಯಮಾನವಾದ, ಬೃಹತ್ ಗಾತ್ರದ, ವೈವಿಧ್ಯಮಯವಾದ ಹೊರಗಿನ ಸಾಹಿತ್ಯವನ್ನು ಕಾಣುವಾಗಲೂ ನಮ್ಮ ಸಾಹಿತಿಗಳು ತಮ್ಮ ಪ್ರಾಚೀನ ಮತ್ತು ಮಧ್ಯಕಾಲದ ಸಾಹಿತ್ಯವನ್ನು ಕಣ್ಣೆದುರಿಗೇ ಇರಿಸಿಕೊಂಡಿದ್ದರು. ಜನಪದ ಸಾಹಿತ್ಯದ ಶಾಸ್ತ್ರೀಯ ಅಧ್ಯಯನ ತಡವಾದರೂ ಬಿ. ಎಂ. ಶ್ರೀ. ಅವರೇ "ಜನವಾಣಿ ಬೇರು, ಕವಿವಾಣಿ ಹೂವು" ಎನ್ನುವ ದೃಷ್ಟಿಯನ್ನು ಇರಿಸಿಕೊಂಡರು. ಮಾಸ್ತಿಯವರು ಲಾವಣಿಗಳನ್ನು, ಜನಪದ ಹಾಡುಗಳನ್ನು ಸಂಗ್ರಹಿಸುತ್ತಿದ್ದರು ಎನ್ನುವುದು ಗಮನಿಸಬೇಕಾದ ಸಂಗತಿ. ಹದಿನಾಲ್ಕನೆಯ ಶತಮಾನದಲ್ಲಿ ಇಂಗ್ಲಂಡಿನಲ್ಲಿ ಆದಂತೆ ನಮ್ಮಲ್ಲಿ ಪರಂಪರೆಯ ಛೇದವಾಗಲಿಲ್ಲ, ಹೊಸ ಹುಟ್ಟು ಸಂಪೂರ್ಣವಾಗಿ ಹೊಸ ಪ್ರಾರಂಭವೇ ಆಗಲಿಲ್ಲ ಎನ್ನುವುದೂ ಮುಖ್ಯವಾದ ಸಂಗತಿ. ಆ ತಲೆಮಾರಿನ ಸಾಹಿತಿಗಳು ಹೊರಗಿನ ಹೊಚ್ಚ ಹೊಸ ಮನೋಧರ್ಮದ ಸಾಹಿತ್ಯವನ್ನು ಸವಿದು ಅದೇ ಇಹಜೀವನ-ಕೇಂದ್ರಿತ ಮನೋಧರ್ಮವನ್ನು ಬೆಳೆಸಿಕೊಂಡೂ, ಹಿಂದಿನ ಸಾಹಿತ್ಯದೊಂದಿಗೆ ಜೀವಂತ ಸಂಬಂಧವನ್ನು ಉಳಿಸಿಕೊಂಡರೆಂಬುದು ದೊಡ್ಡ ಮಾತು. ಈ ಇಹಜೀವನ ಕೇಂದ್ರಿತ ಮನೋಧರ್ಮವು ತಾಯಿ-ಮಗಳು, ಅಣ್ಣ-ತಂಗಿ, ಗಂಡ-ಹೆಂಡತಿ ಇವರ ಪ್ರೇಮ, ಬಡತನದ ಕಷ್ಟ ಮೊದಲಾದವನ್ನು ಹೃದಯ ಮುಟ್ಟುವಂತೆ ನಿರೂಪಿಸಿದ ಜಾನಪದದಲ್ಲಿ ಹಿಂದೆಯೂ ಇದ್ದಿತೆಂಬುದು, ಹಳ್ಳಿಯ ಜೀವನದಿಂದ ಮೂಡಿ ಬಂದ ಕವಿಗಳಿಗೆ ಸ್ಥಿತ್ಯಂತರವನ್ನು ನಿರ್ವಹಿಸುವದನ್ನು ಸುಲಭಗೊಳಿಸಿರಬೇಕು.

ಯಾವುದೇ ಸಾಹಿತ್ಯದಲ್ಲಿ ಬಹುಮಹತ್ವದ ಬದಲಾವಣೆಯ ಒಂದು ಯುಗ ಮುಗಿಯಿತು ಮತ್ತೊಂದು ಪ್ರಾರಂಭವಾಗುತ್ತದೆ ಎನ್ನುವಂಥ ಬದಲಾವಣೆ ಯಾವಾಗ ಆಯಿತೆಂದು ನಿಖರವಾಗಿ ಗೆರೆ ಎಳೆದಂತೆ ಹೇಳುವದು ಸಾಧ್ಯವಿಲ್ಲ. ಕನ್ನಡ ಸಾಹಿತ್ಯದ ಮಟ್ಟಿಗೂ ಈ ಮಾತು ನಿಜ. ಆದರೆ ಕನ್ನಡ ಸಾಹಿತ್ಯದಲ್ಲಿ ಆಧುನಿಕತೆ ಯಾವಾಗ ಕಾಲಿಟ್ಟಿತು ಎಂದು ಪ್ರಶ್ನಿಸುವುದಾದರೆ ಅದಕ್ಕೆ ಮುದ್ದಣನ 'ಶ್ರೀ ರಾಮಾಶ್ವಮೇಧ'ದಲ್ಲಿ ಮುದ್ದಣನು ಮನೋರಮೆಗೆ ಸೀತೆಯು ಕಾಡಿಗೆ ಹೋದ ನಂತರ ರಾಮನು ಅವಳನ್ನು "ನೆನೆನೆನೆದಳುಂಬಂ ಪಲುಂಬಿದ" ಎಂದು ಹೇಳಿದಾಗ, ಮನೋರಮೆ "ಏಂ ತನಗೆ ಪೆರರ್ ಪೆಂಡಿರಿಲ್ಲೆಂದೆಯೆ ?" ಎಂದು ಪ್ರಶ್ನಿಸಿದ ಕ್ಷಣದಲ್ಲಿ ಆಧುನಿಕತೆ ಕನ್ನಡ ಸಾಹಿತ್ಯವನ್ನು ಪ್ರವೇಶಿಸಿತು ಎಂದು ಉತ್ತರ ಹೇಳಬಹುದು. ಇದಕ್ಕೆ ಕಾರಣವನ್ನು ಹೇಳಬೇಕು. ಅವತಾರ ಪುರುಷನಾದ, ಮಹಾನ್ ಚಕ್ರವರ್ತಿಯಾದ ರಾಮನನ್ನು ಒಬ್ಬ ಹೆಣ್ಣುಮಗಳು ತನ್ನದೇ ಆದ ರೀತಿಯಲ್ಲಿ ಕಟುವಾದ ವಿಮರ್ಶೆಗೆ ಒಳಪಡಿಸಿದಳೆಂದು ಒಬ್ಬ ಕವಿ ನಿರೂಪಿಸಿದಾಗ ಒಂದು ವಿಶಿಷ್ಟ ಸನ್ನಿವೇಶ ಸೃಷ್ಟಿಯಾಯಿತು. ಗತಕಾಲ-ವರ್ತಮಾನಕಾಲ, ಸಂಪ್ರದಾಯ–

ಸ್ವತಂತ್ರ ಚಿಂತನೆ, ಪುರಾಣಪುರುಷ ಮತ್ತು ಚಕ್ರವರ್ತಿ–ಸಾಮಾನ್ಯ ಸ್ತ್ರೀ, ಕರ್ತವ್ಯದ ಒಂದು ಅಮೂರ್ತ ಕಠಿಣ ಕಲ್ಪನೆ-ಮಾನವೀಯತೆ ಇವು ಈ ಕ್ಷಣದಲ್ಲಿ ಕನ್ನಡ ಸಾಹಿತ್ಯದಲ್ಲಿ ಮುಖಾಮುಖಿಯಾದವು. ಇನ್ನೂ ಒಂದು ಹೆಜ್ಜೆ ಮುಂದೆ ಹೋಗಿ, ಇಲ್ಲಿ ಮಹಾಕಾವ್ಯ ಮತ್ತು ಕಾದಂಬರಿಗಳು ಮುಖಾಮುಖಿಯಾದವು ಎಂದು ಹೇಳಿದರೆ ಹೆಚ್ಚು ಉತ್ಪ್ರೇಕ್ಷೆ ಇರುವುದಿಲ್ಲ. ಒಂದು ಸಮುದಾಯವು ತನ್ನ ಅಸ್ತಿತ್ವಕ್ಕೆ, ಉಳಿವಿಗೆ ಮುಖ್ಯವಾದ ಮೌಲ್ಯಗಳನ್ನು ಮೂರ್ತೀಭವಿಸಿ ನಿಲ್ಲಿಸಬಯಸಿದಾಗ ಪ್ರಾಚೀನ ಸಮುದಾಯದಲ್ಲಿ ಮಹಾಕಾವ್ಯವು ಸೃಷ್ಟಿಯಾಯಿತು. ಯಾವುದೇ ಕಾರಣಕ್ಕಾಗಿ ಒಂದು ಸಮುದಾಯವು ತನ್ನನ್ನು ತಾನೇ, ತನ್ನ ಆದರ್ಶಗಳ ಹಿನ್ನೆಲೆಯಲ್ಲಿ ವಾಸ್ತವವಾಗಿ ಗುರುತಿಸಿಕೊಳ್ಳುವ ಅಗತ್ಯವನ್ನು ಅನುಭವಿಸಿದಾಗ ಕಾದಂಬರಿ ಸೃಷ್ಟಿಯಾಗುತ್ತದೆ. ವಾಸ್ತವತೆಯ ನೆಲೆಯಲ್ಲಿ ಕಾದಂಬರಿ ಮನುಷ್ಯರ ನೈತಿಕ ಆಯ್ಕೆಗಳಿಗೆ ಬೆಲೆ ಕಟ್ಟುತ್ತದೆ. ಹೀಗೆ ಬೆಲೆ ಕಟ್ಟುವಾಗ ಮಾನವೀಯತೆ ಕಾದಂಬರಿಯ ಪ್ರಥಮ ಘಟ್ಟದಲ್ಲಿ ಮುಖ್ಯವಾಗುತ್ತದೆ. ಅನಂತರ, ಕಾದಂಬರಿ ಪ್ರಕಾರವು ಮುನ್ನಡೆದಂತೆ 'ನೈತಿಕತೆ'ಯ ಅರ್ಥ ವಿಸ್ತಾರವಾಗಿ ಮನೋವಿಶ್ಲೇಷಣಾತ್ಮಕ ಕಾದಂಬರಿ ಕಾಣಿಸಿಕೊಳ್ಳುತ್ತದೆ. ಮನೋರಮೆ, ಶ್ರೀ ರಾಮನ ನೈತಿಕ ಆಯ್ಕೆಗೆ ವಾಸ್ತವಿಕ ನೆಲೆಯಲ್ಲಿ ಮೌಲ್ಯಮಾಪನ ಮಾಡುತ್ತಿದ್ದಾಳೆ. 'ರಾಮಾಶ್ವಮೇಧ'ವು ೧೮೯೮ ರಲ್ಲಿ ಪ್ರಕಟವಾಯಿತು. ಆ ಸುಮಾರಿನಲ್ಲಿ ೧೮೯೯ ರಲ್ಲಿ ಕನ್ನಡದ ಮೊದಲನೆಯ ಮಹತ್ವದ ಕಾದಂಬರಿ, ಗುಲ್ವಾಡಿ ವೆಂಕಟರಾಯರ 'ಇಂದಿರಾಬಾಯಿ' ಪ್ರಕಟವಾಯಿತು ಎನ್ನುವದು ಕುತೂಹಲದ ಸಂಗತಿ.

ಈ ಸಂಗತಿಗೆ ಇಷ್ಟು ಒತ್ತು ಕೊಡುವದರ ಕಾರಣ, ಯಾವುದೇ ಸಾಹಿತ್ಯದಲ್ಲಿ ಮಹತ್ವದ ಬದಲಾವಣೆಯಾಗುವಾಗಲೂ ಆಂತರಿಕ ಒತ್ತಡಗಳು ಮುಖ್ಯ ಎನ್ನುವದಕ್ಕಾಗಿ. ಹತ್ತೊಂಬತ್ತನೆ ಶತಮಾನದ ಉತ್ತರಾರ್ಧದಲ್ಲಿ ಕನ್ನಡ ಸಾಹಿತ್ಯದಲ್ಲಿ ನವೋದಯದ ಮುಂಬೆಳಗು ಕಾಣಿಸಿಕೊಳ್ಳಲು ಹಲವು ಕಾರಣಗಳು, ಪ್ರೇರಣೆಗಳು ಇದ್ದವು. ಇವನ್ನು ನಾವೀಗ ಗಮನಿಸಬಹುದು.

ಹದಿನೆಂಟನೆಯ ಶತಮಾನ ಮತ್ತು ಹತ್ತೊಂಬತ್ತನೆಯ ಶತಮಾನದ ಬಹು ಭಾಗದಲ್ಲಿ, ಕನ್ನಡದಲ್ಲಿ ಸಾಹಿತ್ಯ ರಚನೆಯು ನಿಂತು ಹೋಯಿತು ಎನ್ನುವಂತಿಲ್ಲವಾದರೂ ಶ್ರೇಷ್ಠ ಸಾಹಿತ್ಯ ಕಾಣಿಸಿಕೊಳ್ಳಲಿಲ್ಲ. ಮೈಸೂರಿನ ಮಹಾರಾಜರು ಮುಮ್ಮಡಿ ಕೃಷ್ಣರಾಜ ಒಡೆಯರು ಸ್ವತಃ ಸಾಹಿತ್ಯ ರಚನೆ ಮಾಡಿದರು. ಸಾಹಿತ್ಯ ರಚನೆಗೆ ಪ್ರೋತ್ಸಾಹ ನೀಡಿದರು. ಆದರೆ ಇಂದೂ ಗಮನಿಸಬೇಕಾದಂಥ ರಚನೆ ಎನ್ನಿಸುವ ಸಾಹಿತ್ಯ ಇಲ್ಲವೆ ಇಲ್ಲ ಎನ್ನಬೇಕು.

ಹತ್ತೊಂಬತ್ತನೆ ಶತಮಾನದಲ್ಲಿ ಕನ್ನಡ ನಾಡಿನ ಬದುಕಿನ ಹೊರಾವರಣದಲ್ಲಿ ಮಹತ್ವದ ಬದಲಾವಣೆಗಳಾದವು. ನಾಡಿನಲ್ಲಿ ಶಾಂತಿ ನೆಲೆಸಿತು. ೧೮೫೭ ರ ಪ್ರಚಂಡ ಬಿರುಗಾಳಿಯ ನಂತರ ಬ್ರಿಟಿಷರ ಆಡಳಿತ ಭದ್ರವಾಯಿತು. ಶಾಂತಿಗೂ, ಸಾಹಿತ್ಯ - ಲಲಿತಕಲೆಗಳಿಗೂ ಇರುವ ಸಂಬಂಧವನ್ನು ನಿಷ್ಕೃಷ್ಟವಾಗಿ ಹೇಳುವದು ಕಷ್ಟ.

ಪೆಲೋಪನೀಷಿಯನ್ ಯುದ್ಧಗಳಾಗುತ್ತಿದ್ದಾಗಲೇ ಪ್ರಾಚೀನ ಆಥೆನ್ಸಿನಲ್ಲಿ ಸಫೋಕ್ಲೀಸ್. ಯೂರಿಪಿಡೀಸರು ಮಹತ್ವದ ನಾಟಕಗಳನ್ನು ಬರೆದರು. ಅವರ ಸಮಕಾಲೀನರು ನೂರಾರು ನಾಟಕಗಳನ್ನು ಬರೆದರು. ಆದರೆ ಶಾಂತಿ ಇರುವ ಕಾಲದಲ್ಲಿ ಬದುಕನ್ನು ಸಾಮಾನ್ಯ ಸ್ಥಿತಿಯಲ್ಲಿ, 'ನಾರ್ಮಲ್' ಸ್ಥಿತಿಯಲ್ಲಿ ಕಾಣಲು ಸಾಧ್ಯ. ಯಾವ ಗಳಿಗೆಯಾದರೂ ಯಾವನೋ ಪಾಳೆಗಾರನ ದಂಡು ಮುತ್ತೀತು ಎನ್ನುವ ಭಯ ಇರುವಾಗ, ರಾಜ್ಯ-ರಾಜ್ಯಗಳ ವೈರ ಹೊಗೆಯಾಡುತ್ತಿರುವಾಗ ಬದುಕಿನ ಸಾಮಾನ್ಯ ಸ್ಥಿತಿಯನ್ನು ಕಾಣುವಂತಿಲ್ಲ. ಹತ್ತೊಂಬತ್ತನೆಯ ಶತಮಾನದ ಮಧ್ಯಭಾಗದ ಹೊತ್ತಿಗೆ ಶಿಕ್ಷಣ ಕ್ರಮದ ದಿಕ್ಕೇ ಬದಲಾದದ್ದು ಮಹತ್ವದ ವಿಷಯ. ಗರ್ವನರ್ ಜನರಲ್‌ನ ಸಲಹಾಮಂಡಳಿಯ ಸದಸ್ಯನಾಗಿದ್ದ ಮೆಕಾಲೆ ಒಂದು ಮಹತ್ವದ ಶಿಫಾರಸನ್ನು ಮಾಡಿದ – ಭಾರತದಲ್ಲಿ ಇಂಗ್ಲಿಷ್ ಶಿಕ್ಷಣವನ್ನು ನೀಡಬೇಕು ಎಂದು. ಸಂಸ್ಕೃತ ಅಥವಾ ಪರ್ಷಿಯನ್ ಮತ್ತು ಸ್ಥಳೀಯ ಭಾಷೆಯ ಅಭ್ಯಾಸ, ಸಂಸ್ಕೃತ ಮತ್ತು ಪರ್ಷಿಯನ್ ಭಾಷೆಗಳಲ್ಲಿನ ಪ್ರಾಚೀನ ಗ್ರಂಥಗಳ ಅಧ್ಯಯನ ಇದು ಒಂದು ಕಡೆ, ಇಂಗ್ಲಿಷ್ ವಿದ್ಯಾಭ್ಯಾಸ ಇನ್ನೊಂದು ಕಡೆ - ಇವುಗಳ ನಡುವೆ ಆಯ್ಕೆ ನಡೆಯಬೇಕಾಗಿತ್ತು. ಮೆಕಾಲೆ ತನ್ನ ಆಯ್ಕೆಗೆ ನೀಡಿದ ಕೆಲವು ಕಾರಣಗಳು ಅಯೋಗ್ಯವೆಂದು ನಾವು ಭಾವಿಸಿದರೂ, ಒಟ್ಟಿನಲ್ಲಿ ಅವನ ನಿರ್ಧಾರ ಭಾರತವನ್ನು ಮಧ್ಯಯುಗದಿಂದ ಆಧುನಿಕ ಯುಗದ ದಾರಿಗೆ ತಂದಿತು ಎನ್ನುವದರಲ್ಲಿ ಸಂಶಯವಿಲ್ಲ. ಕಾಲೇಜುಗಳು ವಿರಳವಾಗಿದ್ದ ಆ ದಿನಗಳಲ್ಲಿ ಪ್ರೌಢಶಾಲೆಯಲ್ಲಿ ಓದನ್ನು ಮುಗಿಸಿದವರು ಸಾಕಷ್ಟು ವಿದ್ಯಾವಂತರು. ಹಳೆಯ ಮೈಸೂರು ಸಂಸ್ಥಾನದಲ್ಲಿ ಮೊದಲು ಪ್ರೌಢಶಾಲೆ ಪ್ರಾರಂಭವಾದದ್ದು ೧೮೫೮ ರಲ್ಲಿ. ೧೮೭೧-೭೨ ರಲ್ಲಿ ಎಂದರೆ ೧೩ ವರ್ಷಗಳ ನಂತರ ೧೧ ಪ್ರೌಢಶಾಲೆಗಳಿದ್ದವು. ೧೯೧೦-೧೧ ರಲ್ಲಿ ೧೬ ಪ್ರೌಢಶಾಲೆಗಳಿದ್ದವು. ಬೆಳಗಾವಿ ಪ್ರದೇಶದಲ್ಲಿ ೧೮೮೨ ರಲ್ಲಿ ನಾಲ್ಕು ಪ್ರೌಢಶಾಲೆಗಳಿದ್ದವು. ೧೯೨೧-೨೨ ರಲ್ಲಿ ಈ ಸಂಖ್ಯೆ ೧೯ ಕ್ಕೆ ಏರಿತು. ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ೧೮೮೧ ರಲ್ಲಿ ಎರಡು ಪ್ರೌಢಶಾಲೆಗಳಿದ್ದು, ೧೮೯೧-೯೨ ರಲ್ಲಿ ಈ ಸಂಖ್ಯೆ ನಾಲ್ಕಕ್ಕೆ ಏರಿತು. ೧೮೫೭ ರಲ್ಲಿ ಮದ್ರಾಸು ಮತ್ತು ಬೊಂಬಾಯಿ ವಿಶ್ವವಿದ್ಯಾಲಯಗಳು ಪ್ರಾರಂಭವಾದವು. ದೇಶೀಯ ಸಂಸ್ಥಾನದಲ್ಲಿ ರೂಪ ತಾಳಿದ ಮೊಟ್ಟಮೊದಲನೆಯ ವಿಶ್ವವಿದ್ಯಾಲಯ ಮೈಸೂರು ವಿಶ್ವವಿದ್ಯಾಲಯ; ಇದು ೧೯೧೬ ರಲ್ಲಿ ಸ್ಥಾಪಿತವಾಯಿತು.

ಈಸ್ಟ ಇಂಡಿಯಾ ಕಂಪನಿಯಿಂದ ಇಂಗ್ಲೆಂಡಿನ ಸರಕಾರವು ಭಾರತದ ಆಡಳಿತವನ್ನು ವಹಿಸಿಕೊಂಡ ನಂತರ ಜನಜೀವನದ ಸ್ವರೂಪವೇ ಬದಲಾಯಿತು. ಇಡೀ ದೇಶ ಒಂದೇ ಪ್ರಭುತ್ವದ ಕೆಳಗಿದ್ದುದರಿಂದ ಹೊಸ ಯೋಜನೆಗಳನ್ನು ಇಡೀ ದೇಶದಲ್ಲಿ ಕಾರ್ಯಗತ ಮಾಡುವುದು ಸುಲಭವಾಯಿತು. ಆಡಳಿತದ ಮತ್ತು ಇತರ ಯೋಜನೆಗಳ ಅಗತ್ಯಕ್ಕಾಗಿ ರಸ್ತೆಗಳು, ಅಂಚೆ, ಸಾಗಾಣಿಕೆ, ಸಂಪರ್ಕ ಎಲ್ಲದರಲ್ಲಿ ಮಾರ್ಪಾಡುಗಳಾದವು. ೧೮೫೩ ರಲ್ಲಿ ಭಾರತಕ್ಕೆ ರೈಲುಗಾಡಿ ಬಂದಿತು. ಮುಂಬಯಿ -

ಕಲ್ಯಾಣಗಳ ನಡುವೆ ಇಪ್ಪತ್ತೊಂದು ಕಿ. ಮೀ. ನ ರೈಲು ಓಡಿತು. ೧೮೯೮ ರಲ್ಲಿ ಭಾರತಕ್ಕೆ ಮೊಟ್ಟಮೊದಲ ಕಾರ್ ಆಮದಾಯಿತು. ಒಂದು ಪ್ರದೇಶಕ್ಕೆ ಹೊಸದಾಗಿ ರೈಲು ಬರುವುದೆಂದರೆ ಪ್ರಯಾಣ ಮತ್ತು ಸಾರಿಗೆ ಸುಲಭವಾಯಿತು ಎಂದಷ್ಟೇ ಅಲ್ಲ; ಅದರ ಪ್ರಭಾವ ಆರ್ಥಿಕ ಬದುಕಿನ ಮೇಲೆ ಆಗುತ್ತದೆ, ಮನುಷ್ಯನ ಭಾವುಕ ಮತ್ತು ಬೌದ್ಧಿಕ ಬದುಕುಗಳ ಮೇಲೆ ಆಳವಾದ ಪ್ರಭಾವವಾಗುತ್ತದೆ. ಕಣ್ಣಿಗೆ ಕಾಣದ ಆವಿ. ಕಾಣುವ ಲೋಹ ಇವುಗಳನ್ನು ಬಳಸಿ ನೂರಾರು ಜನರನ್ನು ಕರೆದೊಯ್ಯುವ ರೈಲು ಮನುಷ್ಯನ ಬುದ್ಧಿಶಕ್ತಿಯ ಪ್ರತೀಕ, ನಿಸರ್ಗದ ಮೇಲೆ ಅವನ ವಿಜಯದ ಒಂದು ಹಂತದ ಪ್ರತ್ಯಕ್ಷ ಸಾಕ್ಷ್ಯ. ಕೈಗಾರಿಕೆಗಳು ಬೆಳೆದವು. ೧೯೦೨ ರಲ್ಲಿ ಕೋಲಾರದ ಚಿನ್ನದ ಗಣಿಗೆ ವಿದ್ಯುಚ್ಛಕ್ತಿ ಸರಬರಾಜಾಯಿತು. ಕರ್ನಾಟಕದ ಬೇರೆ ಬೇರೆ ಭಾಗಗಗಳಲ್ಲಿ ಕೈಗಾರಿಕೆಗಳು ಬೆಳೆದವು. ೧೯೦೫ ರಲ್ಲಿ ಬೆಂಗಳೂರು ನಗರಕ್ಕೆ ವಿದ್ಯುಚ್ಛಕ್ತಿ ಬಂದಿತು.

ಈ ಬೆಳವಣಿಗೆಗಳ ಆರ್ಥಿಕ ವ್ಯಾಖ್ಯಾನವನ್ನು ಮಾಡುವ ಅಗತ್ಯವಿಲ್ಲ. ಆದರೆ ಇವೆಲ್ಲ ಆಳರಸರ ಸಾಧನೆಗೆ ಸಾಕ್ಷಿಗಳಾದವು. ಮನುಷ್ಯನ ಬುದ್ಧಿಶಕ್ತಿ ಏನನ್ನು ಸಾಧಿಸಬಲ್ಲದು ಎಂದು ಸಾರಿದವು. ಯುರೋಪಿನ ನವೋದಯದ ಕಾಲದಲ್ಲಿ ಮೂಡಿಬಂದ ಘೋಷಣೆ ಇಲ್ಲಿನ ಜನರಿಗೂ ಅರ್ಥವನ್ನು ತುಂಬಿಕೊಂಡಿತು : "Knowledge is power". ಕನ್ನಡ ಸಾಹಿತ್ಯದ ನವೋದಯದ ಪೂರ್ವ ಘಟ್ಟದಲ್ಲಿ ಸಾಹಿತ್ಯ ರಚನೆಯು ಯಾವ ಭಾವುಕ ಮತ್ತು ಬೌದ್ಧಿಕ ಆವರಣದಲ್ಲಿ ಆಯಿತು ಎನ್ನುವದನ್ನು ಗ್ರಹಿಸಲು ಈ ಅಂಶಗಳನ್ನು ಗಮನಿಸುವದು ಅಗತ್ಯ. ೧೮ ನೆಯ ಶತಮಾನದಲ್ಲಿ ೧೯ ನೆಯ ಶತಮಾನದ ಪೂರ್ವಾರ್ಧದಲ್ಲಿ ಮಾನವನು ಏನನ್ನು ಸಾಧಿಸಿದ್ದಾನೆ, ಏನನ್ನು ಸಾಧಿಸಬಲ್ಲ ಎಂಬುದಕ್ಕೆ ಕನ್ನಡಿಗರು ಬೆರಗಾಗುವಷ್ಟು ಸಾಕ್ಷ್ಯವಿತ್ತು. ಆದರೆ ಕನ್ನಡಿಗರ ಕರ್ತೃತ್ವಶಕ್ತಿಗೆ ಸಾಕ್ಷ್ಯವಿರಲಿಲ್ಲ. ೧೭೯೯ ರಲ್ಲಿ ಟೀಪು ಸೋತು ಕದನದಲ್ಲಿ ಮಡಿದ. ಮೈಸೂರು ರಾಜ್ಯ ಇಂಗ್ಲಿಷರ ವಶವಾಯಿತು. ೧೮೩೪ ರ ಹೊತ್ತಿಗೆ ಕೊಡಗೂ ಅವರ ವಶವಾಯಿತು. ಕರ್ನಾಟಕದ ಉಳಿದ ಭಾಗವು ಪ್ರಾಂತಗಳಲ್ಲಿ ಸೇರಿಕೊಂಡವು. ಉತ್ತರ ಕರ್ನಾಟಕದಲ್ಲಿ ಮರಾಠಿಯದೇ ಪ್ರಭುತ್ವವಾಯಿತು.

ಕರ್ನಾಟಕದಲ್ಲಿ ಸಾಹಿತ್ಯದ ನವೋದಯಪೂರ್ವ ಘಟ್ಟದಲ್ಲಿ ಒಂದು ಮಹತ್ವದ ಘಟನೆ ಎಂದರೆ ಮುದ್ರಣ ಸೌಕರ್ಯ ಲಭ್ಯವಾದದ್ದು. ಮುದ್ರಣವು ಒಂದು ಸಮುದಾಯದ ಬದುಕಿನ ಮೇಲೆ ಎಂಥ ಪ್ರಭಾವವನ್ನು, ಎಷ್ಟು ವ್ಯಾಪಕ ಪ್ರಭಾವವನ್ನು ಬೀರುತ್ತದೆ ಎನ್ನುವುದನ್ನು ವಿವರಿಸಿ ಮುಗಿಸುವದು ಕಷ್ಟ. ಸಾಕಷ್ಟು ವಿಸ್ತಾರವಾದ ಓದುವ ವರ್ಗ ರೂಪಗೊಳ್ಳುವುದೇ ಮುದ್ರಣದಿಂದ. ಮುದ್ರಣ ಬರುವದಕ್ಕೆ ಮುನ್ನ ಅಕ್ಷರವಿದ್ಯೆ ಕಲಿಯಲು ಇರುವ ಆಕರ್ಷಣೆ, ಅಕ್ಷರವಿದ್ಯೆಯ ಬಳಕೆಗೆ ಅವಕಾಶ ಎರಡೂ ಮಿತವಾಗಿದ್ದವು. ಬರೆದದ್ದು ಓಲೆಗರಿಯಲ್ಲಿ

ಸ್ಥಾಯಿಯಾಗುತ್ತದೆ. ಒಂದೊಂದು ಪ್ರತಿಯನ್ನು ಸಿದ್ಧಮಾಡುವದು ಕಷ್ಟ ಎನ್ನುವ ಸ್ಥಿತಿಯಲ್ಲಿ ಧಾರ್ಮಿಕ ಬರಹವಲ್ಲದೆ ಬೇರೆ ಬರಹವನ್ನು ಸಿದ್ಧಮಾಡುವ ಉತ್ಸಾಹ ಬರುವದಿಲ್ಲ. ಸೃಜನಶೀಲ ಸಾಮರ್ಥ್ಯವಿದ್ದರೂ ಅದು ಅರಳಿ ಪ್ರಕಾಶವಾಗಲು ಆವರಣ ಸಹಕಾರಿಯಾಗುವುದಿಲ್ಲ. ಧರ್ಮ ಅಥವಾ ನೀತಿಯ ಉಪದೇಶದ ಕಾವ್ಯಗಳು ರೂಪತಾಳಬಹುದು. ಇಂಥ ಆವರಣದಲ್ಲಿ ಕಾವ್ಯ, ಕಾದಂಬರಿ, ಸಣ್ಣಕಥೆಗಳನ್ನು ಸೃಷ್ಟಿಸುವ ಪ್ರತಿಭೆ ಇದ್ದರೂ ಚಿಗುರಲಾರದು. ಮುದ್ರಣವಿಲ್ಲದೆ ನವೋದಯಕ್ಕೆ ಅಗತ್ಯವಾದ ಪ್ರತಿಭೆ ಇದ್ದರೂ ನವೋದಯವಿಲ್ಲ.

೧೮೨೦ ರಲ್ಲಿ ಪ್ರಕಟವಾದ ಜಾನ್ ಹ್ಯಾಂಡ್ಸನ 'ಹೊಸ ಒಡಂಬಡಿಕೆ'ಯ ಪೂರ್ವಾರ್ಧವು ಕನ್ನಡ ಭಾಷೆ ಮತ್ತು ಲಿಪಿಯಲ್ಲಿರುವ ಮೊಟ್ಟಮೊದಲನೆಯ ಮುದ್ರಿತ ಗ್ರಂಥ ಎಂದು ವಿದ್ವಾಂಸರು ಹೇಳಿದ್ದಾರೆ. ಕನ್ನಡ ಗ್ರಂಥಗಳ ನಿಯಮಿತವಾದ ಮುದ್ರಣವು ೧೮೨೭ ರಲ್ಲಿ ಪ್ರಾರಂಭವಾಯಿತು ಎಂದೂ ಹೇಳಿದ್ದಾರೆ. ವರ್ಷಗಳು ಉರುಳಿದಂತೆ ಕನ್ನಡ ನಾಡಿನ ಬೇರೆ ಬೇರೆ ಭಾಗಗಳಲ್ಲಿ ಮುದ್ರಣದ ಉದ್ಯಮವು ಮುನ್ನಡೆಯಿತು.

ಮುದ್ರಣದ ಪರಿಣಾಮಗಳಲ್ಲಿ ಒಂದು, ಮೌಖಿಕ ಮಾಧ್ಯಮವು ಬರಹದ ಮಾಧ್ಯಮಕ್ಕೆ ಅವಕಾಶ ಮಾಡಿಕೊಟ್ಟಿದ್ದು. ಅರಮನೆ, ಗುರುಮನೆಗಳಲ್ಲಿ, ದೇವಾಲಯಗಳಲ್ಲಿ, ಶ್ರೀಮಂತರ ಮನೆಗಳಲ್ಲಿ, ಚಾವಡಿಗಳಲ್ಲಿ ಒಬ್ಬರು ಓದಿ (ಅಗತ್ಯವಾದಾಗ ವ್ಯಾಖ್ಯಾನ ಮಾಡಿ) ಬಹುಜನ ಕೇಳುವ ವ್ಯವಸ್ಥೆಯು ಅಳಿಯುತ್ತ, ಓದುಗ ಒಬ್ಬನೇ ಕುಳಿತು ಓದಿಕೊಳ್ಳುವ ಕ್ರಮ ಪ್ರಾರಂಭವಾಗಿ ಬೆಳೆಯುತ್ತದೆ. ಮೌಖಿಕ ಮಾಧ್ಯಮದ ಕಾಲದಲ್ಲಿ ಸಾಹಿತ್ಯ ರಚನೆ ಮಾಡುವವನೂ ಬಹುಜನಕ್ಕೆ ಅರ್ಥವಾಗುವ ವಸ್ತುವನ್ನು ಸುಲಭವಾಗಿ ಅರ್ಥವಾಗುವ ರೀತಿಯಲ್ಲಿ ನಿರೂಪಿಸಬೇಕಾಗುತ್ತದೆ. ಬೇಗನೆ, ಸುಲಭವಾಗಿ ಬಹು ಜನರಿಗೆ ರುಚಿಸುವುದು ಅಗತ್ಯವಾದಾಗ, ಕೇಳಿ ಸವಿದಬಳಿಕ ಮೆಲುಕು ಹಾಕಿದಾಗ ಹೊಸ ಅರ್ಥಗಳು, ಸೊಗಸುಗಳು ಹೊಳೆಯಬಹುದು. ಕುಮಾರವ್ಯಾಸ, ಚಾಮರಸ ಮೊದಲಾದವರ ಕೃತಿಗಳು ತಮ್ಮ ಸತ್ವ ಶ್ರೀಮಂತಿಕೆಗಳನ್ನು ಮೊದಲ ವಾಚನದಲ್ಲಿಯೇ ಬಿಟ್ಟುಕೊಡುವದಿಲ್ಲ. ಆದರೆ ಮೊದಲ ವಾಚನದಲ್ಲಿ ಮನಸ್ಸನ್ನು ಸೆರೆಹಿಡಿಯಬೇಕು. ಮೌಖಿಕ ಮಾಧ್ಯಮದ ಯುಗದಲ್ಲಿ ಭಾಷೆ, ಪ್ರತಿಮೆ ಮೊದಲಾದವುಗಳ ಸೂಕ್ಷ್ಮ ಹೆಣಿಗೆ ಇರುವ ಕೃತಿ ಬರಲಾರದು. ಗೋಪಾಲಕೃಷ್ಣ ಅಡಿಗರ 'ಭೂಮಿಗೀತ', ಬೇಂದ್ರೆಯವರ 'ಜೋಗಿ' ಇಂಥ ಕವನಗಳು ಓದುಗ ಕೃತಿಯನ್ನು ನಿಧಾನವಾಗಿ ಅಧ್ಯಯನ ಮಾಡುತ್ತ ಸ್ವೀಕರಿಸಬೇಕೆಂದು ಬೇಡುತ್ತವೆ. ಕಥಾ ಸಾಹಿತ್ಯದಲ್ಲಿ ಪಾತ್ರ ನಿರೂಪಣೆಯಲ್ಲಿ ಬಹು ಸೂಕ್ಷ್ಮವಾದ ಅಂಶಗಳು ಮೌಖಿಕ ಮಾಧ್ಯಮದ ಸಂವಹನದಲ್ಲಿ ಮರೆಯಾಗಬಹುದು. ಪಾತ್ರವನ್ನು ಬಹುಮುಖಿಯಾಗಿ, ಸೂಕ್ಷ್ಮ ಅಂಶಗಳನ್ನು ಬಿತ್ತಿ ನಿರೂಪಿಸುವದು ಕಷ್ಟ. ಮೂಲ ಮಹಾಭಾರತವನ್ನು ಓದಿದವರಿಗೆ,

ಜನಸಾಮಾನ್ಯರ ಗ್ರಹಿಕೆಯಲ್ಲಿ ವ್ಯಾಸರ ಪಾತ್ರಸೃಷ್ಟಿಯ ಎಷ್ಟೊಂದು ಸೂಕ್ಷ್ಮ ವಿವರಗಳು ಬಿಟ್ಟುಹೋಗಿವೆ ಎನ್ನುವುದು ಗಮನಕ್ಕೆ ಬಂದಿರುತ್ತದೆ. ಮೌಖಿಕ ಮಾಧ್ಯಮವನ್ನು ಆಶ್ರಯಿಸಿದಾಗ ಪಾತ್ರಗಳನ್ನು ಸರಳವಾಗಿ ಗ್ರಹಿಸುವ ಪ್ರವೃತ್ತಿ ಇರುತ್ತದೆ. ವಿಶಿಷ್ಟ ವ್ಯಕ್ತಿತ್ವವಿರುವ ಪಾತ್ರಗಳಿಗಿಂತ ಮಾದರಿಗಳನ್ನು, types ಅನ್ನು, ಸೃಷ್ಟಿಸುವದು ಅಗತ್ಯವಾಗುತ್ತದೆ.

ಒಬ್ಬರು ಓದಿ ಬಹುಮಂದಿ ಕೇಳುವ ಸಂದರ್ಭವು ಬದಲಾಗಿ ಒಬ್ಬರು ಒಂದು ಪ್ರತಿಯನ್ನು ಇಟ್ಟುಕೊಂಡು ತಮಗೆ ಅನುಕೂಲವಾದಾಗ, ಅನುಕೂಲವಾದಂತೆ, ತಮ್ಮದೇ ವೇಗದಲ್ಲಿ ಓದಿಕೊಳ್ಳುವದು ಸಾಧ್ಯವಾದಾಗ, ಓದುಗನ ಪ್ರತಿಕ್ರಿಯೆ ಇನ್ನೂ ಸೂಕ್ಷ್ಮವಾಗುತ್ತದೆ. ಇನ್ನೊಬ್ಬರು ಓದುವಾಗ ಕೃತಿಗೆ ಲಭ್ಯವಾದ "ಟೋನ್", "ಧಾಟಿ", ತಾನೆ ಓದಿಕೊಂಡಾಗ ಸೇರುವುದಿಲ್ಲವಾದ್ದರಿಂದ ವಿವರಗಳಿಗೆ ದೊರಕುವ ಒತ್ತಿನಲ್ಲಿ ಮಾರ್ಪಾಟಾಗುತ್ತದೆ. ಅಲ್ಲದೆ ಸಾಮೂಹಿಕವಾಗಿ ಆಲಿಸುವಾಗ ಇಡೀ ಶ್ರೋತೃವೃಂದ ಒಂದಾಗಿ, ಅದರ ಸದಸ್ಯರಲ್ಲಿ ಒಂದು ಭಾವ ಹರಿಯುತ್ತದೆ. ಪ್ರತಿಸದಸ್ಯನೂ ಕೃತಿಯನ್ನು ಅನುಭವಿಸುವ ರೀತಿಯ ಮೇಲೆ ಸೂಕ್ಷ್ಮ ಪ್ರಭಾವವಾಗುತ್ತದೆ. ಒಬ್ಬನೇ ಓದಿಕೊಂಡಾಗ ಈ ಭಾವದ ಹರಿವು ಇರುವದಿಲ್ಲ.

ಮುದ್ರಣ ಬಂದರೆ ಪೃತ್ತಪತ್ರಿಕೆಗಳು ಬಂದಂತೆಯೇ. ವೃತ್ತಪತ್ರಿಕೆಗಳು ಬಂದವೆಂದರೆ ಒಳ್ಳೆಯ ಗದ್ಯ ಬಂದಂತೆಯೇ. ಜೊತೆಗೆ ಪ್ರತಿಭೆಗೆ ಅವಕಾಶ ಲಭ್ಯವಾದಂತೆಯೇ. ೧೮೪೩ ರ ಜುಲೈ ಒಂದರಂದು ಮಂಗಳೂರಿನಿಂದ ಪ್ರಕಟಿತವಾದ 'ಮಂಗಳೂರು ಸಮಾಚಾರ' ಕನ್ನಡದ ಮೊದಲನೆಯ ಪತ್ರಿಕೆ. ಇದನ್ನು ಪ್ರಾರಂಭಿಸುವ ಯೋಜನೆ ಮಾಡಿ ಕಾರ್ಯಗತ ಮಾಡಿದವನು ಜರ್ಮನಿಯಿಂದ ಬಂದ ಕ್ರೈಸ್ತ ಮಿಷನರಿ ಹರ್ಮನ್ ಫ್ರೆಡ್ರಿಕ್ ಮೋಗ್ಲಿಂಗ್. ಈ ಸಾಹಸಕ್ಕೆ ಕೈಹಾಕಿದುದಕ್ಕೆ ಮೋಗ್ಲಿಂಗ್ ಕೊಟ್ಟ ಕಾರಣವನ್ನು ಅವನ ಮಾತುಗಳಲ್ಲೆ ಹೇಳಿದರೆ, ಕನ್ನಡದ ಮೊದಲ ಪತ್ರಿಕೆಯ ಉದ್ದೇಶವನ್ನು ಕನ್ನಡ ಪತ್ರಿಕೋದ್ಯಮದ ಅನಂತರದ ಇತಿಹಾಸದ ಮಾರ್ಗದೊಂದಿಗೆ ಹೋಲಿಸುವದು ಸಾಧ್ಯವಾಗುತ್ತದೆ. ಅಲ್ಲದೆ ಪ್ರಾರಂಭದ ಗದ್ಯದ ಪರಿಚಯವೂ ಆಗುತ್ತದೆ :

> "ಈ ದೇಶವೆಂಬ ಮನೆಯಲ್ಲಿ ವಾಸಿಸುವ ಜನರು ಇಂದಿನ ಪರಿಯಂತರ ಹೊರಗಿನ ದೇಶಸ್ಥರ ಸಮಾಚಾರ ಮಾರ್ಗ-ಮರ್ಯಾದೆಗಳನ್ನು ತಿಳಿಯದೇ ಕಿಟಕಿಯಿಲ್ಲದ ಬಿಡಾರದಲ್ಲಿ ವುಳಕೊಳ್ಳುವವರ ಹಾಗೆ ಯಿರುತ್ತಾ ಬಂದರು. ಅದು ಕಾರಣ ಹೊರಗಿನ ಕಾರ್ಯಗಳನ್ನು ಕಾಣುವ ಹಾಗೆಯೂ ವೊಳಗೆ ಸ್ವಲ್ಪ ಬೆಳಕು ಬೀಳುವ ಹಾಗೆಯೂ ನಾಲ್ಕು ದಿಕ್ಕಿಗೆ ಕಿಟಕಿಗಳನ್ನು ಮಾಡುವ ಈ ಸಮಾಚಾರ ಕಾಗದವನ್ನು ಪಕ್ಷಕ್ಕೆ ವೊಂದು ಸಾರಿ ಶಿದ್ಧ ಮಾಡಿ ಅದನ್ನು ಓದಬೇಕೆಂದಿರುವೆಲ್ಲರಿಗೆ ಕೊಟ್ಟರೆ ಕಿಟಕಿಗಳನ್ನು

ಮಾಡಿದ ಹಾಗಾಗಿರುವದು. ಈ ಕಾಗದವನ್ನು ಬರೆಯುವವರಿಗೂ,
ಓದುವವರಿಗೂ ದೇವರು ಬುದ್ಧಿಯನ್ನು ಕೊಡಲಿ.''

ಪತ್ರಿಕೆಗಳಲ್ಲಿ ಬರೆಯುವವರಿಗೆ, ಓದುವವರಿಗೆ ಮುಂದಿನ ೧೬೦ ವರ್ಷಗಳಲ್ಲಿ ದೇವರು ಬುದ್ಧಿಯನ್ನು ಕೊಟ್ಟನೋ ಇಲ್ಲವೋ ಅದನ್ನು ನಮ್ಮ ನಮ್ಮ ಗ್ರಹಿಕೆಗಳಿಗೆ ಅನುಗುಣವಾಗಿ ತೀರ್ಮಾನಿಸಬಹುದು. ಆದರೆ ಕನ್ನಡ ಪತ್ರಿಕೆಯನ್ನು ಪ್ರಾರಂಭಿಸಬೇಕೆಂಬ ವಿಚಾರವನ್ನು ಯಾರಾದರೂ ದೇವರು ಕೊಟ್ಟದ್ದರೆ, ಅಂಥ ದೇವರು ಒಳ್ಳೆಯ ಬುದ್ಧಿಯನ್ನೇ ಕೊಟ್ಟನೆನ್ನಬೇಕು. ಪತ್ರಿಕೆಯು ಹಲವು ಹತ್ತು ವಿಚಾರಗಳನ್ನು ಗದ್ಯದಲ್ಲಿ ನಿರೂಪಿಸುವ ಅಗತ್ಯವನ್ನು ಸೃಷ್ಟಿಸುತ್ತದೆ. ವರ್ಣನೆ, ವೃತ್ತಾಂತ, ವೈಚಾರಿಕತೆ, ವಾದ, ವಿವರಣೆ ಹೀಗೆ ಹಲವಾರು ಉದ್ದೇಶಗಳಿಗೆ ಗದ್ಯವನ್ನು ಬಳಸುವ ಅಗತ್ಯವನ್ನು ನಿರ್ಮಿಸುತ್ತದೆ. ಶಾಸ್ತ್ರೀಯ ವಿಷಯಗಳನ್ನು ನಿರೂಪಿಸಬೇಕಾಗುತ್ತದೆ. ಪತ್ರಿಕೆಗಳು ಬೆಳೆದಂತೆ ಸುದ್ದಿಯನ್ನು ಕೊಡುವುದಲ್ಲದೆ, ರಾಜಕೀಯ, ಆರ್ಥಿಕ ಸ್ಥಿತಿ, ವಿಜ್ಞಾನ, ತತ್ವಚಿಂತನೆ ಮುಂತಾಗಿ ಹಲವು ಕ್ಷೇತ್ರಗಳಿಗೆ ಕಾಲಿಡಬೇಕಾಗುತ್ತದೆ. ಸ್ಪಷ್ಟವಾದ, ಕುತೂಹಲವನ್ನುಳಿಸಿಕೊಳ್ಳುವ ಬರಹವು ಪತ್ರಿಕೆಯ ಜೀವಾಳವಾದದ್ದರಿಂದ ಭಾಷೆ, ಶೈಲಿ, ನಿರೂಪಣೆ ಇವುಗಳಿಗೆ ಗಮನ ನೀಡಬೇಕಾಗುತ್ತದೆ. ಆಧುನಿಕ ಕನ್ನಡ ಸಾಹಿತ್ಯದ ಬಹುಮುಖ್ಯ ಸಾಧನೆಗಳಲ್ಲಿ ಒಂದು – ಗದ್ಯವನ್ನು ರೂಪಿಸಿದ್ದು.

ಪತ್ರಿಕೆಗಳು, ಗದ್ಯ ಎಂದಾಗ ಇವಕ್ಕೆ ಬಾಂಧವ್ಯವಿರುವ ನಾಡಿನ ಸ್ವಾತಂತ್ರ್ಯದ ಹೋರಾಟದ ನೆನಪಾಗುತ್ತದೆ. ಭಾರತದ ಸ್ವಾತಂತ್ರ್ಯ ಹೋರಾಟ ನವೋದಯಪೂರ್ವ ಮತ್ತು ನವೋದಯ ಎರಡು ಘಟ್ಟಗಳಲ್ಲಿಯೂ ಸಾಹಿತ್ಯದ ಮೇಲೆ ಗಾಢವಾಗಿ ಪ್ರಭಾವವನ್ನು ಬೀರಿತು. ಹಳ್ಳಿಯ ಜನರಿಗೆ ಸ್ವಾತಂತ್ರ್ಯದ ಅರ್ಥ, ಅನಿವಾರ್ಯತೆಯನ್ನು ಮನದಟ್ಟು ಮಾಡಿಕೊಡುವದು, ರಾಜಕೀಯ, ಆರ್ಥಿಕ, ಸಾಮಾಜಿಕ ವಿಷಯಗಳನ್ನು ಸ್ವಲ್ಪ ಮಟ್ಟಿಗಾದರೂ ತಿಳಿಸಿಕೊಡುವದು ಅಗತ್ಯವಾದಾಗ, ಭಾಷಣಗಳಲ್ಲಿ ಸ್ಪಷ್ಟತೆ, ಸರಳತೆಗಳು ಅನಿವಾರ್ಯವಾದವು. ಪತ್ರಿಕೆಗಳಲ್ಲಿ ಬರೆಯುವಾಗ ಸ್ಪಷ್ಟವಾದ, ಸರಳವಾದ ನಿರೂಪಣೆ ಅಗತ್ಯವಾಯಿತು. ಇದು ಗದ್ಯದ ಬೆಳವಣಿಗೆಗೆ ಅತ್ಯಂತ ಸಹಕಾರಿಯಾದ ಸನ್ನಿವೇಶ. ಬೆಂಗಳೂರಿನ 'ಕರ್ಣಾಟಕ ವಿಜ್ಞಾನ ಪ್ರಸಾರಿಣೀ' ಸಮಿತಿಯು ೧೯೧೭ ರಲ್ಲಿಯೇ ವಿಜ್ಞಾನಕ್ಕಾಗಿ ಮೀಸಲಾದ 'ವಿಜ್ಞಾನ'ಪತ್ರಿಕೆಯನ್ನು ಪ್ರಾರಂಭಿಸಿತೆನ್ನುವದು ಗಮನಿಸಬೇಕಾದ ಸಂಗತಿ. ಎರಡನೆಯದಾಗಿ, ಪತ್ರಿಕೆಗಳು ಓದುಗರಿಗೆ ವೈವಿಧ್ಯಮಯವಾದ ಬರಹಗಳನ್ನು ನಿಯತವಾಗಿ ಒದಗಿಸಬೇಕು. ಕವನ, ಸಣ್ಣಕಥೆ, ಲಲಿತಪ್ರಬಂಧ, ಕಾದಂಬರಿ – ಇವುಗಳ ಚರಿತ್ರೆಗಳಲ್ಲಿ ಪತ್ರಿಕೆಗಳದು ದೊಡ್ಡ ಪಾತ್ರ. ಸಾಹಿತ್ಯ ಸ್ವಲ್ಪ ಮುನ್ನಡೆದ ನಂತರ ಸಾಹಿತ್ಯ ವಿಮರ್ಶೆಗೂ ಪತ್ರಿಕೆಗಳ ಕೊಡುಗೆ ಗಣನೀಯವಾಗುತ್ತದೆ. ಮತ್ತೊಂದು ಅಂಶವೂ ಗಮನಿಸಬೇಕಾದದ್ದು. ಒಂದು ವಿಸ್ತಾರವಾದ ಭಾಷಾ ಪ್ರದೇಶದಲ್ಲಿ ಒಳರೂಪಗಳು – ಮೈಸೂರು ಕನ್ನಡ,

ಧಾರವಾಡ ಕನ್ನಡ, ಗುಲ್‌ಬರ್ಗಾ ಕನ್ನಡ, ಮಂಗಳೂರು ಕನ್ನಡ ಮುಂತಾದ ಪ್ರಭೇದಗಳು ಇರುವುದು ಅನಿವಾರ್ಯ. ಇವುಗಳನ್ನು ಆಡುವವರಿಗೆ ಬೇರೆ ಪ್ರಭೇದಗಳ ಪರಿಚಯವಾಗುವುದು, ಪ್ರಯಾಣ ಮಿತವಾಗಿರುವ ಕಾಲದಲ್ಲಿ, ಪುಸ್ತಕಗಳಿಂದ, ಹಾಗೂ ಇನ್ನೂ ಹೆಚ್ಚಾಗಿ ಪತ್ರಿಕೆಗಳಿಂದ. ವ್ಯವಹಾರ ಉದ್ದೇಶಗಳಿಗಾಗಿ ಭಾಷೆಯ **standardization,** ಏಕರೂಪನಿರ್ಮಾಣದ ಪ್ರಕ್ರಿಯೆಯಲ್ಲಿಯೂ ಪುಸ್ತಕಗಳು ಮತ್ತು ಪತ್ರಿಕೆಗಳ ಪಾತ್ರ ಹಿರಿದು. ಈ ಪ್ರಕ್ರಿಯೆ ನವೋದಯಪೂರ್ವ ಘಟ್ಟದಲ್ಲಿ ಪ್ರಾರಂಭವಾಯಿತು.

ಸ್ವಾತಂತ್ರ್ಯ ಹೋರಾಟದ ಪ್ರಸ್ತಾಪ ಬಂದಿದೆ. ಗದ್ಯದ ಮೇಲೆ ಇದರ ಪ್ರಭಾವ ಗಮನಾರ್ಹ. ಪತ್ರಿಕಾಪ್ರಪಂಚದ ಮೇಲೂ ಇದರ ಪ್ರಭಾವ ವಿಸ್ತಾರವಾದದ್ದು, ಗಾಢವಾದದ್ದು, ಬಹುಮುಖಿಯಾದದ್ದು. ಅದನ್ನು ಈ ವಿಶ್ಲೇಷಣೆಯಿಂದ ಹೊರಗಿಟ್ಟು ಸಾಹಿತ್ಯದ ಮಟ್ಟಿಗೆ ಇದರ ಪ್ರಭಾವವನ್ನು ಗಮನಿಸಬಹುದು. ಭಾರತದ ದಾಸ್ಯವು ಜನತೆಯ ಮೇಲೆ ಸಾಂಸ್ಕೃತಿಕವಾಗಿ ಒಂದು ಸಂಕೀರ್ಣ ಪ್ರಭಾವವನ್ನು ಬೀರಿತು. ಒಂದು, ನಿಸರ್ಗದ ಮೇಲೆ ಪ್ರಭುತ್ವ ಸಾಧಿಸಿ ನಾಗರಿಕ ಜೀವನವನ್ನು ತನ್ನ ಇಚ್ಛೆಯಂತೆ ರೂಪಿಸುವ ವಿದೇಶಿಯನ, ಅವನ ರೀತಿಗಳ ಬಗ್ಗೆ ಮೆಚ್ಚಿಕೆ, ಇದರೊಂದಿಗೆ ವಿದ್ಯಾವಂತರ ಮಟ್ಟಿಗೆ ಆತನ ಚರಿತ್ರೆ ಮತ್ತು ಸಾಹಿತ್ಯಗಳ ಅಭ್ಯಾಸವೂ ಸೇರಿತು. ಆದರೆ ವಿದೇಶಿಯರು ಇಲ್ಲಿನ ಜನರ ಧರ್ಮ, ಸಾಹಿತ್ಯಗಳನ್ನು ಕುರಿತು ತಿರಸ್ಕಾರವನ್ನು ವ್ಯಕ್ತಪಡಿಸಿದಾಗ ವಿರೋಧ ಮೂಡಿತು. ಮೆಕಾಲೆ ತನ್ನ ಪ್ರಸಿದ್ಧ ಟಿಪ್ಪಣಿಯಲ್ಲಿ ಭಾರತೀಯ ಸಾಹಿತ್ಯವನ್ನು ಕುರಿತು ಲಘುವಾದ ಮಾತುಗಳನ್ನು ಬರೆದ. ಕೆಲವರು ವಿವೇಕಿಗಳು ಇಲ್ಲಿನ ಇತಿಹಾಸ, ಸಾಹಿತ್ಯ, ಚಿಂತನೆಗಳನ್ನು ಗೌರವದಿಂದ ಕಂಡು ಅಧ್ಯಯನ, ಅನುವಾದಗಳಲ್ಲಿ ತೊಡಗಿದರು. ಆದರೆ ಇಂಗ್ಲೆಂಡಿನಿಂದ ಬಂದ ಬಹುಮಂದಿಯಲ್ಲಿ ಇದ್ದದ್ದೇ ಸಾಮ್ರಾಜ್ಯಶಾಹಿ ಮನೋಧರ್ಮ. (ದಕ್ಷಿಣ ಆಫ್ರಿಕಾದಲ್ಲಿದ್ದ ಗಾಂಧೀಜಿ, ಭಾರತದ ಇಂಗ್ಲಿಷ್ ವೈಸರಾಯಿಯು "ಭಾರತೀಯರಿಗೆ ಸತ್ಯ ಎಂದರೇನು ಎಂದೇ ತಿಳಿಯದು, ಬ್ರಿಟಿಷರು ಭಾರತದಲ್ಲಿ ಕಾಲಿಟ್ಟನಂತರವೇ ಭಾರತೀಯರಿಗೆ ಸತ್ಯದ ಪರಿಕಲ್ಪನೆ ತಿಳಿದದ್ದು" ಎಂದು ಹೇಳಿದುದನ್ನು ಪ್ರತಿಭಟಿಸಿ ತಮ್ಮ ಪತ್ರಿಕೆಯಲ್ಲಿ ಮೂರು ಲೇಖನಗಳನ್ನು ಬರೆದರು.) ತಮ್ಮ ಧರ್ಮ, ಇತಿಹಾಸ ಮತ್ತು ಸಾಹಿತ್ಯಗಳನ್ನು ವಿದೇಶಿಯನು ಲಘುವಾಗಿ ಕಂಡಾಗ ಸಹಜವಾಗಿ ಭಾರತೀಯನಿಗೆ, ನನ್ನ ಗತಕಾಲದಲ್ಲಿ ನಾನು ಹೆಮ್ಮೆಪಟ್ಟುಕೊಳ್ಳಬಹುದಾದ್ದು ಏನೂ ಇಲ್ಲವೇ ಎಂಬ ಪ್ರಶ್ನೆ ಎದುರಾಯಿತು. ಅವನ ದೃಷ್ಟಿ ಹಿಂದಿನ ಸಾಹಿತ್ಯ ಮತ್ತು ಇತಿಹಾಸಗಳತ್ತ ತಿರುಗಿತು. ಈ ಪ್ರಕ್ರಿಯೆಯಲ್ಲಿ ಸ್ವಾಮಿ ವಿವೇಕಾನಂದ, ಸ್ವಾಮಿ ದಯಾನಂದ ಸರಸ್ವತಿ ಮೊದಲಾದವರ ಸಾಧನೆ ಬಹು ದೊಡ್ಡದು. ಧರ್ಮದ ನೆಲೆಯಲ್ಲಿ ನಿಂತು ವರ್ತಮಾನವನ್ನು ಗ್ರಹಿಸಿ ಭವಿಷ್ಯವನ್ನು ರೂಪಿಸಲೆಳಸಿದ ಅಸಾಧಾರಣ ಚೈತನ್ಯರಾಶಿ ಸ್ವಾಮಿ ವಿವೇಕಾನಂದರು. ಹಿಂದೂ ಧರ್ಮ, ಭಾರತಗಳ ಬಗ್ಗೆ ಸಕಾರಣವಾದ

ಹೆಮ್ಮೆಯನ್ನು ಅವರು ಚಿಮ್ಮಿಸಿದರು. ಜೊತೆಗೇ ವಿಮರ್ಶೆಯ ಕಣ್ಣನ್ನು ತೆರೆಸಿದರು. ಅವರಂತೆಯೇ ಗಾಂಧೀಜಿಯವರು ರಾಮನಾಮದಲ್ಲಿ ಗಾಢವಾದ ಭಕ್ತಿಯನ್ನಿರಿಸಿಕೊಂಡು, ರಾಮಾಯಣ - ಮಹಾಭಾರತಗಳನ್ನು ಮತ್ತೆ ಮತ್ತೆ ಸ್ಮರಿಸುತ್ತಾ, "ಗೀತೆ ನನ್ನ ತಾಯಿ" ಎಂದು, ಗತಕಾಲದೊಡನೆ ಒಂದು ಜೀವಂತವಾದ, ಅರ್ಥವತ್ತಾದ ಸಂಬಂಧವನ್ನು ಸ್ಥಾಪಿಸಿದರು. ಜೊತೆಗೆ ವಿವೇಕಾನಂದರಂತೆಯೇ ವಿಮರ್ಶೆಯ ಕಣ್ಣನ್ನು ತೆರೆಸಿ ಸಾಮಾಜಿಕ ಸುಧಾರಣೆಯನ್ನು ಸ್ವಾತಂತ್ರ್ಯ ಹೋರಾಟಗಾರನ ಬದುಕಿನ ಒಂದು ಅನಿವಾರ್ಯ ಭಾಗವನ್ನಾಗಿ ಮಾಡಿದರು. ಸ್ವಾತಂತ್ರ್ಯ ಹೋರಾಟವು ದೇಶಾಭಿಮಾನವನ್ನು ಜೀವಂತಗೊಳಿಸಿದ್ದಲ್ಲದೆ ಒಂದು ರಾಷ್ಟ್ರೀಯ ಮನೋಧರ್ಮವನ್ನೂ ರಾಷ್ಟ್ರೀಯ ಆದರ್ಶಗಳನ್ನೂ ರೂಪಿಸಿತು. ರಾಷ್ಟ್ರಪ್ರೇಮಕ್ಕೆ ಆನುಷಂಗಿಕವಾಗಿ ಕನ್ನಡ ನಾಡಿನ ಪ್ರೇಮ, ಕನ್ನಡದ ಪ್ರೇಮ ಮೂಡಿದವು.

ಸ್ವಾತಂತ್ರ್ಯದ ಹೋರಾಟದ ಮತ್ತೊಂದು ಪರಿಣಾಮವನ್ನು ಗಮನಿಸಬೇಕು. ಅನಕ್ಷರಸ್ಥರನ್ನೂ, ವಿದ್ಯಾವಂತರನ್ನೂ, ಗ್ರಾಮೀಣ ಜನರನ್ನೂ, ನಗರವಾಸಿಗಳನ್ನೂ ಹತ್ತಿರ ತರಲು ಇದಕ್ಕಿಂತ ಮಹತ್ತರವಾದ ಶಕ್ತಿಯನ್ನು ಕಲ್ಪಿಸಿಕೊಳ್ಳುವುದು ಸಾಧ್ಯವಿಲ್ಲ. ಈ ಮಾತು ನವೋದಯಪೂರ್ವದ ಘಟ್ಟದ ಆಚೆಯ ಕಾಲಕ್ಕೂ ಅನ್ವಯಿಸುತ್ತದೆ. ಅನೇಕ ಮಂದಿ ನಗರವಾಸಿಗಳನ್ನೂ, ವಿದ್ಯಾವಂತರನ್ನೂ ಮೀರಿಸಿ ಹಳ್ಳಿಯ ಜನ, ಅನಕ್ಷರಸ್ಥರು ಧೀರ ಹೋರಾಟವನ್ನು ನಡೆಸಿದರು. The dignity of man as man ಎನ್ನುವದರ ಅರ್ಥ ಹೊಸ ಹೊಳಪನ್ನು ಪಡೆದುಕೊಳ್ಳುವಂತಾಯಿತು.

ಈವರೆಗೆ ಬಹುಮಟ್ಟಿಗೆ ನವೋದಯಪೂರ್ವದ ಘಟ್ಟದ ಸಾಹಿತ್ಯ ರಚನೆ ಯಾವ ಸಂದರ್ಭದಲ್ಲಿ, ಹೊರ ಆವರಣದಲ್ಲಿ ನಡೆಯಿತು ಎನ್ನುವದನ್ನು ಗ್ರಹಿಸುತ್ತ ಬಂದಿದ್ದೇವೆ. ಈ ವಿಷಯದ ಅವಲೋಕನವನ್ನು ಮುಗಿಸುವ ಮೊದಲು ವಿದೇಶಿಯರ ಕೊಡುಗೆಯನ್ನು ಸ್ಮರಿಸಬೇಕು. ಮೊದಲನೆಯದು, ಗುದ್ದಲಿ ಹಾಕಿ ಅಥವಾ ಶಾಸನಗಳನ್ನು ಓದಿ ಗತಕಾಲವನ್ನು ಎತ್ತಿದ ಜ್ಞಾನದಾಹಿಗಳು. ಕನ್ನಡ ನಾಡಿನಲ್ಲೆ ಹುಟ್ಟಿದ ಲೂಯಿ ರೈಸ್ 'ಎಫಿಗ್ರಾಫಿಯಾ ಕರ್ಣಾಟಕ'ದ ಯೋಜನೆಯನ್ನು ಸಿದ್ಧಪಡಿಸಿ ಕಾರ್ಯಪ್ರವೃತ್ತನಾದ. ಸಾವಿರಾರು ಶಾಸನಗಳನ್ನು ಓದಿದ. ಅಶೋಕನ ಸಾಮ್ರಾಜ್ಯವು ದಕ್ಷಿಣದ ವರೆಗೆ ಹರಡಿತ್ತು ಎನ್ನುವದನ್ನು ಆಧಾರ ಸಹಿತವಾಗಿ ತಿಳಿಸಿಕೊಟ್ಟ, 'ಬಿಬ್ಲಿಯಾಥಿಕಾ ಕರ್ನಾಟಿಕಾ' ಮಾಲೆಯನ್ನು ಪ್ರಾರಂಭಿಸಿ 'ಕವಿರಾಜಮಾರ್ಗ'ದಂಥ ಕೃತಿಗಳನ್ನು ಬೆಳಕಿಗೆ ತಂದ. ಈ ಕಾಲದಲ್ಲಿಯೆ ಕೆಲಸ ಮಾಡಿದ ಜೆ. ಎಫ್. ಫ್ಲೀಟ್ ಶಾಸನಗಳ ಅಧ್ಯಯನ ಮಾಡಿದ, ಗತಕಾಲದ ಮೇಲೆ ಇನ್ನಷ್ಟು ಬೆಳಕು ಚೆಲ್ಲಿದ. ಈತನು ಜಾನಪದ ಹಾಡುಗಳನ್ನು ಸಂಗ್ರಹಿಸಿ ಪ್ರಕಟಿಸಿದ. ರೈಸ್, ಫ್ಲೀಟ್ ಮೊದಲಾದವರ ಕಾರ್ಯವನ್ನು ಆರ್. ನರಸಿಂಹಾಚಾರ್ಯ, ಹೊಸಕೋಟೆ ಕೃಷ್ಣಶಾಸ್ತ್ರಿ, ಕೆ. ಬಿ. ಪಾಠಕ್ ಮೊದಲಾದವರು ಸಮರ್ಥವಾಗಿ ಮುಂದುವರಿಸಿದರು.

ಹಿಂದಿನ ಚರಿತ್ರೆ ಮತ್ತು ಸಾಹಿತ್ಯಗಳನ್ನು ಮುಚ್ಚಿದ್ದ ಗಾಢ ಕಪ್ಪು ಪರದೆಯು ಸ್ವಲ್ಪ ಸ್ವಲ್ಪವಾಗಿ ಸರಿಯಲಾರಂಭಿಸಿ, ಕನ್ನಡಿಗರು ತಮ್ಮ ಅಸ್ತಿತ್ವವನ್ನು ಕಂಡುಕೊಳ್ಳುವಂತಾಯಿತು. ಆಲೂರು ವೆಂಕಟರಾಯರು ೧೯೦೭ ರಿಂದ ೧೯೧೪ ರ ವರೆಗೆ ಶ್ರಮವನ್ನು ಲೆಕ್ಕಿಸದೆ ಕನ್ನಡ ನಾಡಿನ ವಿವಿಧ ಭಾಗಗಳನ್ನು ಸಂದರ್ಶಿಸಿ, ೧೯೧೭ ರಲ್ಲಿ 'ಕನ್ನಡಿಗರ ಗತವೈಭವ'ವನ್ನು ಪ್ರಕಟಿಸಿದರು. ಇದು ಒಂದು ಮುಖ್ಯ ಮೈಲಿಗಲ್ಲು. ಉತ್ತರ ಕರ್ನಾಟಕದಲ್ಲಿ ಕನ್ನಡಿಗರು ಇಂಗ್ಲಿಷರ ಸ್ವಾಮ್ಯದ ಹೊರೆಯೊಂದಿಗೆ ಮರಾಠಿಯ ಪ್ರಾಬಲ್ಯದ ಹೊರೆಯನ್ನೂ ಹೊರಬೇಕಾಯಿತು. ಡೆಪ್ಯೂಟಿ ಚನ್ನಬಸಪ್ಪನವರು, ರೊದ್ದ ಶ್ರೀನಿವಾಸರಾಯರು, ಶಾಂತಕವಿಗಳು ಮೊದಲಾದವರು ಸಮರ್ಪಣಾಭಾವದಿಂದ ಮಾಡಿದ ಸಾಧನೆಯನ್ನು ಅತ್ಯಂತ ಕೃತಜ್ಞತೆಯಿಂದ ಸ್ಮರಿಸಬೇಕು. ಕನ್ನಡದ ಅಸ್ತಿತ್ವ, ಕನ್ನಡಿಗರ ಸ್ವಾಭಿಮಾನ ಇವುಗಳಿಗೆ ಬಂದ ಸವಾಲನ್ನು ಉತ್ತರ ಕರ್ನಾಟಕದ ಕನ್ನಡಿಗರು ಎದುರಿಸುವುದರಲ್ಲಿ ಯಶಸ್ವಿಗಳಾದದ್ದು ನವೋದಯಪೂರ್ವದ ಘಟ್ಟದ ಇತಿಹಾಸದಲ್ಲಿ ಒಂದು ಮಹತ್ವದ ಸಂಗತಿ.

ಪಾಶ್ಚಾತ್ಯ ವಿದ್ವಾಂಸರು ಕರ್ನಾಟಕದ ಚರಿತ್ರೆಯನ್ನು ಅಧ್ಯಯನ ಮಾಡಿದಂತೆಯೇ, ಕನ್ನಡದ ಪ್ರಾಚೀನ ಸಾಹಿತ್ಯವನ್ನು ಕನ್ನಡಿಗರಿಗೆ ತಂದುಕೊಟ್ಟರು ಎನ್ನಬಹುದು. ತಮ್ಮ ಭಾಷೆಯಲ್ಲಿ ಆಗಲೇ ಎಂತಹ ಸಾಧನೆಯಾಗಿದೆ ಎನ್ನುವದನ್ನು ಕನ್ನಡಿಗರು ಅರಿತುಕೊಳ್ಳಲು ವಿದೇಶೀ ವಿದ್ವಾಂಸರೂ ಅವರಿಂದ ಪ್ರಭಾವಿತರಾದ ಅಥವಾ ಶಿಕ್ಷಣ ಪಡೆದ ಕನ್ನಡಿಗರೂ ಮಾಡಿದ ಅನಾವರಣ ಕಾರ್ಯ ವಿಶಿಷ್ಟವಾದದ್ದು. ೧೮೬೮ ರಲ್ಲಿ ಜಾನ್ ಗ್ಯಾರೆಟ್‌ನು 'ಶಬ್ದಮಣಿದರ್ಪಣ'ವನ್ನು ಪ್ರಕಟಿಸಿದ; ಮೋಗ್ಲಿಂಗ್‌ನ 'ಬಿಬ್ಲಿಯಾಥಿಕಾ ಕರ್ನಾಟಕ'ದಲ್ಲಿ 'ಜೈಮಿನೀಭಾರತ', 'ತೊರವೆ ರಾಮಾಯಣ'ಗಳು ಭಾಗಶಃ ಬೆಳಕು ಕಂಡವು. ದಾಸರ ಪದಗಳು ಅಚ್ಚಾದವು. ಡಬ್ಲ್ಯು. ಜಿ. ವರ್ಥನು 'ಚನ್ನಬಸವ ಪುರಾಣ' 'ಬಸವ ಪುರಾಣಗಳ' ಕಥಾಸಾರವನ್ನು ಇಂಗ್ಲಿಷಿನಲ್ಲಿ ಪ್ರಕಟಿಸಿದ. ಫರ್ಡಿನಾಂಡ್ ಕಿಟಲ್ 'ಶಬ್ದಮಣಿದರ್ಪಣ'ವನ್ನು ಸಂಪಾದಿಸಿ ಪ್ರಕಟಿಸಿದ. 'ಛಂದೋಂಬುಧಿ'ಯನ್ನೂ ಸಂಪಾದಿಸಿ ಪ್ರಕಟಿಸಿದ. ವಿದೇಶದಿಂದ ಬಂದ ವಿದ್ವಾಂಸರು ಕನ್ನಡ ವ್ಯಾಕರಣಗಳನ್ನೂ, ಬೇರೆ ಬೇರೆ ಬಗೆಯ ನಿಘಂಟುಗಳನ್ನೂ ಸಿದ್ಧಮಾಡಿದರು. ಬಹು ಪ್ರಸಿದ್ಧವಾದದ್ದು ಫರ್ಡಿನಾಂಡ್ ಕಿಟಲ್‌ನ ಕನ್ನಡ - ಇಂಗ್ಲಿಷ್ ನಿಘಂಟು. ಇದಕ್ಕೆ ಮೊದಲೇ ವಿಲಿಯಮ್ ರೀವ್, ಜಾನ್ ಗ್ಯಾರೆಟ್ ಮೊದಲಾದವರು ಈ ಕ್ಷೇತ್ರದಲ್ಲಿ ಕೆಲಸ ಮಾಡಿದ್ದರು. ಜಾನ್ ಮೆಕ್ಕೆರೆಲ್ ೧೮೨೦ ರಲ್ಲಿ ಕನ್ನಡ ಭಾಷೆಯ ವ್ಯಾಕರಣವನ್ನು ಸಿದ್ಧಪಡಿಸಿದ. ಎಡ್ವರ್ಡ್ ಪಿ. ರೈಸ್‌ನು ಇಂಗ್ಲಿಷ್‌ನಲ್ಲಿ ಕನ್ನಡ ಸಾಹಿತ್ಯ ಚರಿತ್ರೆಯನ್ನು ಬರೆದ. ಕ್ರೈಸ್ತ ಮಿಷನರಿಗಳು ತಮ್ಮ ಮತಪ್ರಚಾರದ ಕಾರ್ಯಕ್ಕಾಗಿ ಗದ್ಯ ಪುಸ್ತಕಗಳನ್ನು ಬರೆದರು. ಪದ್ಯಗಳನ್ನು ಬರೆದರು. ಕಿಟಲ್‌ನ 'ಕಥಾಮಾಲೆ'ಯಲ್ಲಿ ಭಾರತದ ಪ್ರಾಚೀನ ಕವಿಗಳ ಮಾದರಿಯಲ್ಲಿ ರಚಿತವಾದ ಪದ್ಯಗಳ ಮಾದರಿಯನ್ನು ಡಾ. ಶ್ರೀನಿವಾಸ ಹಾವನೂರರು ತಮ್ಮ

'ಹೊಸಗನ್ನಡದ ಅರುಣೋದಯ' ಗ್ರಂಥದಲ್ಲಿ ಉದಾಹರಿಸಿದ್ದಾರೆ. ಕುತೂಹಲಕ್ಕಾಗಿ ಒಂದು ಷಟ್ಪದಿಯನ್ನು ನೋಡಬಹುದು :

ಶಾಂತಿಯಾಯಿತು. ಘಾಳಿ ನಿಂತ್ರವಿ
ಕಾಂತಿ ಪಸರಿಸಿತೆಳೆಯ ಬಿಸಿಲಿಂ
ಕ್ರಾಂತಿಕರ್ತನು ಬಳಿಕ ಶಿಷ್ಯರಿಗೊರೆದನಿಂತೆಂದೂ-
ಭ್ರಾಂತರಾದಿರಿ ಹೇಡಿಗಳೆ, ಯಾ
ಕಾಂತುಕೊಳ್ಳದೆ ನನ್ನ ಶಕ್ತಿ ?
ಕ್ಷಾಂತಿ ಮಾಡುವದೆಷ್ಟೊ ಸರ್ತ್ಯಲೆ ನಿಮಗಪನಂಬಿಕೆಯಾ

ಬಿ. ಲೂಥಿ, ಇ. ಪಿ. ಕೆರಟ್ ಮೊದಲಾದವರು ಪದ್ಯಗಳನ್ನು ಅನುವಾದಿಸಿದರು.

ಹೀಗೆ ಹತ್ತೊಂಬತ್ತನೆಯ ಶತಮಾನದ ಎರಡನೆಯ ದಶಕದಲ್ಲಿ ಪ್ರಾರಂಭವಾದ ಮಿಷನರಿಗಳ ಕಾರ್ಯಕ್ಷೇತ್ರ ವಿಸ್ತಾರವಾಗುತ್ತ ಹಲವು ಆಯಾಮಗಳನ್ನು ಪಡೆಯುತ್ತ, ನಾಡಿನ ಚರಿತ್ರೆಯ ಮೇಲೆ ಬೆಳಕು ಚೆಲ್ಲಿದುದಷ್ಟೇ ಅಲ್ಲದೆ, ಪ್ರಾಚೀನ ಚರಿತ್ರೆಯ ಅಧ್ಯಯನದಲ್ಲಿ ಇಲ್ಲಿನ ಜನಕ್ಕೆ ಆಸಕ್ತಿಯನ್ನು ಹುಟ್ಟಿಸಿ ಈ ಅಧ್ಯಯನದ ವಿಧಾನವನ್ನು ಕಲಿಸಿಕೊಟ್ಟವರು ಇವರು. ವ್ಯಾಕರಣ, ಶಬ್ದಕೋಶ, ಸಾಹಿತ್ಯಚರಿತ್ರೆ ಈ ಕ್ಷೇತ್ರಗಳಲ್ಲಿ ಕೆಲಸವನ್ನು ಪ್ರಾರಂಭಿಸಿದರು. ದೊಡ್ಡ ಸಾಧನೆಯನ್ನು ಕೈಗೂಡಿಸಿಕೊಂಡರು. ಹೊಸ ಮಾರ್ಗವನ್ನು ನಿರ್ಮಿಸಿಕೊಟ್ಟರು. ಹಿಂದಿನ ಹಲವು ಗ್ರಂಥಗಳನ್ನು ಅಚ್ಚು ಮಾಡಿದರು. ಎಲ್ಲಕ್ಕಿಂತ ಮುಖ್ಯವಾಗಿ, ಸಂಶೋಧನೆ–ಅನುವಾದ ಕ್ಷೇತ್ರಗಳಲ್ಲಿ ಶ್ರದ್ಧೆಯ ಬೀಜವನ್ನು ಬಿತ್ತಿದರು.

ಕನ್ನಡ ನಾಡಿನಲ್ಲಿ ಪರಿವರ್ತನೆಯ ಗಾಳಿ ಸುಮಾರು ೧೮೭೦ ರ ಹೊತ್ತಿಗೇ ಬೀಸಲು ಪ್ರಾರಂಭಿಸಿದರೂ ಇದು ಹೊಸ ಚೇತನದಾಯಿನಿಯಾಗಲು ಪ್ರಾರಂಭವಾದದ್ದು ಸುಮಾರು ೧೮೭೦ ರ ಹೊತ್ತಿಗೆ. ಅಲ್ಲಿಂದ ಸುಮಾರು ೫೦ ವರ್ಷಗಳ ಕಾಲ ನವೋದಯಕ್ಕೆ ಸಿದ್ಧತೆ ನಡೆಯಿತು ಎನ್ನಬಹುದು.

ಆದರೆ, ಒಂದು ಸಾಹಿತ್ಯದಲ್ಲಿ ಹೊಸಯುಗವು ಮೂಡಬೇಕಾದರೆ, ಹೊಸ ಸಂವೇದನೆಗಳು ಮೂಡಬೇಕು. ಸಾಹಿತಿಗಳು ಹೊಸ ಸಂವೇದನೆಗಳು ಸಾರ್ಥಕವಾಗಿ ಅಭಿವ್ಯಕ್ತಿ ಪಡೆಯುವ - ಭಾಷಾರಚನೆಗಳನ್ನು ರೂಪಿಸಲು ಸಮರ್ಥರಾಗಬೇಕು ಎನ್ನುವದು ಇಂದು ಸಾಹಿತ್ಯವಿಮರ್ಶೆಯ ಮೂಲಗ್ರಹಿಕೆಗಳಲ್ಲಿ ಒಂದು. ಬದುಕಿನಲ್ಲಿ ಯಾವುದಕ್ಕೆ ಸಾಹಿತಿಯ ಚೇತನ ಸ್ಪಂದಿಸುತ್ತದೆ. ಇದರಿಂದಾಗಿ ಅವನ ಮೌಲ್ಯಗಳು ಹೇಗೆ ಮಾರ್ಪಾಟಾಗುತ್ತವೆ ಎನ್ನುವುದು ನಿರ್ಣಾಯಕ. ಪುರಾಣ ಪುರುಷರು, ವೀರರು, ಸಂತರ ಜೀವನವನ್ನು ಬಿತ್ತರಿಸುವ ಕವಿಚೇತನಕ್ಕೆ ತನಗೆ ಇನ್ನೇನು ಬೇಕು, "ಒಂದು ಹೂತ ಹುಣಸೀಯ ಮರ ಸಾಕ" ಎನ್ನುವಂತಾಗುವದು ಕ್ರಾಂತಿಕಾರಕವೇ. ಬದಲಾಗುತ್ತಿದ್ದ ಹೊರ ಆವರಣದಲ್ಲಿ ಕವಿಚೇತನ ಈ ಅವಧಿಯಲ್ಲಿ ಹೊಸ ರೀತಿಯಲ್ಲಿ ಸ್ಪಂದಿಸಿದುದರಿಂದ ಸಾಹಿತ್ಯದಲ್ಲಿ ಹೊಸ ಯುಗ ಮೂಡಿ ಬಂದಿತು.

ಸಂವೇದನೆಯಲ್ಲಿ ಆದ ಕ್ರಾಂತಿಯೆಂದರೆ ಮನುಷ್ಯ ಜೀವಕ್ಕೆ ದೊರೆತ ಮನ್ನಣೆ ಎಂದು ತೋರುತ್ತದೆ. "The dignity of man as man", ಒಬ್ಬ ಮನುಷ್ಯನಿಗೆ ಅವನು ಮನುಷ್ಯನೆಂದೇ, ಸಹ ಮಾನವನೆಂದೇ ಮನ್ನಣೆ ನೀಡುವ ಮನೋಧರ್ಮ ರೂಪಿತವಾದದ್ದು, ಇಂದು ನಮಗೆ ಅದರ ರೂಢಿಯಿಂದಾಗಿ ಅದರ ಮಹತ್ವ ಮಸುಕಾಗಿದ್ದರೂ, ಬಹು ದೊಡ್ಡ ಬೆಳವಣಿಗೆ ಎಂದು ಕಾಣುತ್ತದೆ. ಮನುಷ್ಯ ಅರಸನಾಗಿರಲಿ, ರೈತನಾಗಿರಲಿ, "A man is a man for all that" ಎಂದ ಇಂಗ್ಲಿಷ್ ಕವಿ ರಾಬರ್ಟ ಬರ್ನ್ಸ್‌ನ ಮಾತು ಸತ್ಯಸ್ಯ ಸತ್ಯ ಎಂದು ಹೃದಯದಾಳದಲ್ಲಿ ಮೂಡುವದು ಒಂದು ಫ್ಯೂಡಲ್ ಸಮಾಜದಲ್ಲಿ ಮಹತ್ವದ ಕ್ರಾಂತಿ. ಮನುಷ್ಯ-ಮನುಷ್ಯರ ನಡುವಣ ಸಂಬಂಧಗಳಿಗೇ ಈ ತತ್ವ, ಈ ಸೂತ್ರ ಹೊಸರೂಪವನ್ನು ಕೊಡುತ್ತದೆ. ನವೋದಯದ ಪ್ರಾರಂಭದಲ್ಲಿಯೇ ಆಚಾರ್ಯ 'ಶ್ರೀ'ಯವರು ಇಂಗ್ಲಿಷ್‌ನಿಂದ ಅನುವಾದಿಸಿದ ಕವನಗಳಲ್ಲಿ ಒಂದು 'ದುಃಖಸೇತು' ಎನ್ನುವದು ಅರ್ಥವತ್ತಾದ ಸಂಗತಿ. ಇಲ್ಲಿ ಅನುಕಂಪವನ್ನು ಗಳಿಸುವ ಹೆಣ್ಣು, ಮದುವೆಯಾಗದೆ ಗರ್ಭಿಣಿಯಾಗಿ ನಂಬಿಸಿದವನಿಂದ ವಂಚಿತಳಾಗಿ ಸಾವಿನ ಮೊರೆ ಹೊಕ್ಕ ಅನಾಮಧೇಯ ಹೆಣ್ಣು. ಇವಳು ಕುಂತಿಯಲ್ಲ, ರಾಜಕುಮಾರಿಯಲ್ಲ, ಇವಳ ಹೆಸರೂ ತಿಳಿಯದು. ಸಂಪ್ರದಾಯದ ಸಂಕೋಲೆ ತೊಟ್ಟ ಸಮಾಜದ ಕಣ್ಣಿನಲ್ಲಿ ಇವಳು ಅಪರಾಧಿ. ಒಂದು ಸಾವಿರ ವರ್ಷಗಳ ಕನ್ನಡ ಸಾಹಿತ್ಯದಲ್ಲಿ, ಸಂಪ್ರದಾಯವು ತಿರಸ್ಕಾರದಿಂದ ಕಾಣಬಹುದಾದ ಒಂದು ಹೆಣ್ಣುಜೀವಕ್ಕಾಗಿ, ತೀರ್ಪನ್ನು ನೀಡುವ ಮನೋಧರ್ಮವನ್ನು ಬದಿಗಿಟ್ಟು, ಮೊಟ್ಟಮೊದಲ ಬಾರಿಗೆ "ಅಯ್ಯೋ ಪಾಪ" ಎನ್ನುವ ಕರುಣೆಯ ಧ್ವನಿ ಕೇಳುವದು ಇಲ್ಲಿ.

ಸಂವೇದನೆಯಲ್ಲಿ ಕ್ರಾಂತಿಯಾಗುವದಕ್ಕೆ ಹಲವು ಶಕ್ತಿಗಳು ಕಾರಣವಾದವು. ಆಗಲೇ ಸ್ವಾತಂತ್ರ್ಯದ ಹೋರಾಟವನ್ನು ಗುರುತಿಸಿದ್ದೇವೆ. ಇದರಲ್ಲಿ ಜನಸಾಮಾನ್ಯ ವಹಿಸಿದ ಪಾತ್ರ, ತೋರಿಸಿದ ಸ್ಥೈರ್ಯ, ಬಹುದೊಡ್ಡ ಅನುಭವ. ನಾಡಿನ ಅತ್ಯಂತ ಹಿರಿಯ ನಾಯಕ, ಮೈತುಂಬಾ ಬಟ್ಟೆ ಇಲ್ಲದೆ, ತನ್ನದೆನ್ನುವ ಒಂದು ಮನೆಯಿಲ್ಲದೆ ಒಂದು ಕುದುರೆಯ ವಾಹನವಿಲ್ಲದೆ, ಸೈನಿಕರು, ಪೋಲಿಸರಿಲ್ಲದೆ ಅಲೆದಾಡುವ, ನೆಲದ ಮೇಲೆ ಕುಳಿತು ನೂಲುವ ವ್ಯಕ್ತಿಯೆನ್ನುವುದೇ, ರಾಜವೈಭವ, ಸೈನ್ಯಗಳ ಶಕ್ತಿ ಇವುಗಳ ಕಣ್ಣು ಕೋರೈಸುವ ಹೊಳಪನ್ನು ಮಂಕು ಮಾಡಿತು. ಫ್ಯೂಡಲ್ ಸಮಾಜದಲ್ಲಿ ನಡೆದ ಈ ಕ್ರಾಂತಿ ಅದ್ಭುತವಾದದ್ದು, ಚಿಂತನಶೀಲರ ಚೇತನದ ಆಳದಲ್ಲಿ ಪ್ರತಿಧ್ವನಿಸುವಂಥದ್ದು. ಮನುಷ್ಯಜೀವನದ ಮೌಲ್ಯಗಳ ಶೋಧನೆಗೆ ಇದೊಂದು ದೊಡ್ಡ ಸವಾಲಾಯಿತು. ತೀರ್ಥಂಕರರಿಗೆ, ಬಾಹುಬಲಿಗೆ, ನಮಿಸಿದ ನಾಡು "ಧೀರತ್ವ" heroism ಎನ್ನುವ ಪರಿಕಲ್ಪನೆಯಲ್ಲಿ ಉದಾತ್ತ ಅರ್ಥವನ್ನೆ ಕಂಡಿತ್ತು. ಆದರೆ ಈ ಫ್ಯೂಡಲ್ ಸಮಾಜದಲ್ಲಿ ಸಾಧುಸಂತರಿಗೆ ಪ್ರತ್ಯೇಕ ಸ್ಥಳವಿತ್ತು, ಭೋಗ ತ್ಯಾಗ ಮಾಡಿದ ಸನ್ಯಾಸಿಗೆ, ಯತಿಗೆ ಮನ್ನಣೆ ಇತ್ತು. ಆದರೆ ಉಳಿದವರ ಮಟ್ಟಿಗೆ ಮೆಟ್ಟಿಲುಗಳ ವ್ಯವಸ್ಥೆಯೇ ಉಳಿದಿತ್ತು. ರಾಷ್ಟ್ರದ ನಾಯಕರಾಗಿ ಗಾಂಧೀಜಿ

ಮೂಡಿ ಬಂದದ್ದು. ಅವಿದ್ಯಾವಂತ ಹಳ್ಳಿಯ ಜನ, ಪೋಲಿಸರ ಖಾಕಿಯನ್ನು ಕಂಡರೆ ನಡಗುತ್ತಿದ್ದ ಮಹಿಳೆಯರು. ಲಾಠಿಗಳಿಗೆ, ಗುಂಡುಗಳಿಗೆ, ತೋರಿದ ಧೀರ ಪ್ರತಿಕ್ರಿಯೆ. ಇವು 'ವ್ಯಕ್ತಿ' ಎನ್ನುವ ಪರಿಕಲ್ಪನೆಯನ್ನೆ ಬದಲು ಮಾಡಿದ ಘಟನೆಗಳು.

ಇವರೊಂದಿಗೆ ಈ ಯುಗದಲ್ಲಿ ಬಂದದ್ದು ಇಂಗ್ಲೆಂಡಿನ ಚರಿತ್ರೆ, ಪಾಶ್ಚಾತ್ಯ ಸಾಹಿತ್ಯ ಇವುಗಳ ಅಭ್ಯಾಸ. ಆಗಲೇ ಹೇಳಿದಂತೆ, ಇಂಗ್ಲೆಂಡಿನ ಚರಿತ್ರೆ, ವ್ಯಕ್ತಿಸ್ವಾತಂತ್ರ್ಯಕ್ಕಾಗಿ ನಡೆದ ಹೋರಾಟದ ಮಹಾಕಾವ್ಯ. ಇದರ ಬಹುದೊಡ್ಡ ಘಟ್ಟ, ೧೭ ನೇ ಶತಮಾನದಲ್ಲಿ ಸಂಸತ್ತಿಗೂ, ಅಧಿಕಾರದಿಂದ ಸೊಕ್ಕಿದ ಅರಸನಿಗೂ ನಡೆದ ಅಂತರ್ಯುದ್ಧ. ಅರಸನನ್ನು ಸೆರೆ ಹಿಡಿದು ಗಲ್ಲಿಗೇರಿಸಿದ ಕಾಲ ಇದು. ಕಾಲ ಯಾವ ದಿಕ್ಕಿನಲ್ಲಿ ಸಾಗುತ್ತಿದೆ ಎನ್ನುವುದನ್ನು ಅರ್ಥ ಮಾಡಿಕೊಳ್ಳಲಾರದೆ ಹೋದ, ಸತ್ತ ಅರಸನ ಮಗ ಓಡಿ ಹೋಗಬೇಕಾಯಿತು. ನವೋದಯದ ಪೂರ್ವ ಘಟ್ಟದಲ್ಲಿ ಪ್ರೌಢಶಾಲೆಗೆ ಕಾಲಿಟ್ಟ ಪ್ರತಿ ವಿದ್ಯಾರ್ಥಿಯ ಮುಂದೆ ಬಲಿಷ್ಠರಾದ ಆಳರಸರ ಈ ಚರಿತ್ರೆ ಬಿಚ್ಚಿಕೊಳ್ಳುತ್ತಿತ್ತು.

ಇಂಗ್ಲೆಂಡಿನ ಚರಿತ್ರೆಯಂತೆಯೇ ಅದರ ಸಾಹಿತ್ಯವೂ ಕಡ್ಡಾಯ ಕಲಿಕೆಯಾದ ಕಾಲ ಇದು. ನಮ್ಮ ನಾಡಿನ ಮಕ್ಕಳು ಇಂಗ್ಲಿಷ್ ಕವನಗಳನ್ನು ಕಂಠಪಾಠ ಮಾಡುತ್ತಿದ್ದ ಕಾಲ. ಆ ಕಾಲದಲ್ಲಿ ಮಾಧ್ಯಮಿಕ ಮತ್ತು ಪ್ರೌಢಶಾಲೆಗಳ ಇಂಗ್ಲಿಷ್ ಪಠ್ಯಪುಸ್ತಕಗಳಲ್ಲಿ ಸಾಮಾನ್ಯವಾಗಿ ಅಡಕವಾಗುತ್ತಿದ್ದ ಕವನಗಳು ಮೂರು ವಿಷಯಗಳಲ್ಲಿ ಕುತೂಹಲಕರವಾಗಿದ್ದವು. ಮೊದಲನೆಯದು; ಇವು ಇಂಗ್ಲಿಷರ ದೇಶಭಕ್ತಿಯನ್ನು ಸಾರುತ್ತಿದ್ದಂತಹವು. " Not a drum was heard, not a funeral note " ಎಂದು ಪ್ರಾರಂಭವಾಗುವ ' ದಿ ಬರಿಯಲ್ ಆಫ್ ಸರ್ ಜಾನ್ ಮೂರ್ ' ನಂತಹ ಕವನಗಳು ಅಬ್ಬರವಿಲ್ಲದೆ, ಅತಿ ಭಾವುಕತೆ ಇಲ್ಲದೆ ದೇಶಭಕ್ತಿಯ ಮೂರ್ತ ನಿದರ್ಶನಗಳನ್ನು ಎಳೆಯ ಮನಸ್ಸುಗಳಿಗೆ ಮುಟ್ಟಿಸಿದವು. ಮತ್ತೊಂದು ಇಂಥ ಕವನ ರಾಬರ್ಟ ಬ್ರೌನಿಂಗ್‌ನ `Home thoughts, from the sea`. ಅದರ ಎರಡು ಪಂಕ್ತಿಗಳು ದೇಶಾಭಿಮಾನವನ್ನು ಹೊಡೆದೆಬ್ಬಿಸುವ ಬರಹ :

"Here and here did England help me; how
can I help England ?" -say
Who so turns as I, this evening, turns
to God to praise and pray.

ಎರಡನೆಯದಾಗಿ, ಮಗುವಿನ ಮನಸ್ಸಿನ ಕುತೂಹಲ, ಬೆರಗು ಇವುಗಳಿಗೆ ಭಾಷೆಯಲ್ಲಿ ಅಭಿವ್ಯಕ್ತಿ ನೀಡಿದ ಕವನಗಳು ವಯಸ್ಕರಿಗೆ, ಎಳೆಯರಿಗೆ ಸಮೀಪವಾದವು.

Twinkle, twinkle, little star,
How I wonder what you are;
Up above so high
Like a diamond in the sky

O look at the moon,
She is Shining up there;
O mother she looks
Like a lamp in the air–

ಇಂಥ ಮುಗ್ಧ ಬೆರಗನ್ನು ಸಾಹಿತ್ಯದಲ್ಲಿ ಆವರೆಗೆ ಕೇಳಿರಲಿಲ್ಲ. ಮೂರನೆಯದಾಗಿ ಕತೆ ಹೇಳುವ ಕವನಗಳೆಂದು ಎಳೆಯರಿಂದ ಓದಿಸಿದ ರಚನೆಗಳಲ್ಲಿ ಅಂತರ್ಗತವಾಗಿದ್ದ ಮೌಲ್ಯಗಳು ಎಳೆಯರ ಮನಸ್ಸನ್ನು ತುಂಬಿದವು. ಇಂಥ ಒಂದು ಕವನ 'ಕಿಂಗ್ ಕೊಫೆಟುಅ ಅಂಡ್ ದಿ ಬೆಗರ್ ಮೆಯ್ಡ್.' ಈ ಕವನದಲ್ಲಿ ಅರಸ ಕೊಫೆಟುಅ ಅತ್ಯಂತ ಚಲುವೆಯಾದ ಹೆಣ್ಣನ್ನು ಮದುವೆಯಾಗುವೆನೆಂದು ಘೋಷಿಸುತ್ತಾನೆ. ಶ್ರೀಮಂತ ಮನೆಗಳ ಹಲವರು ಚೆಲುವೆಯರು ಬಳಿಸಾರುತ್ತಾರೆ. ಕಡೆಗೊಬ್ಬ ಲಾವಣ್ಯವತಿ ಭಿಕ್ಷುಕಿ ಬರುತ್ತಾಳೆ.

King Cophetua swore a royal oath,
This beggar maid shall be my queen.

ಇಂಥ ಕವನಗಳನ್ನು ಓದಿದ ಎಳೆಯರು ಕೂಡಲೆ ಅವುಗಳ ಅಂತರ್ಗತ ಮೌಲ್ಯಗಳನ್ನು ಕುರಿತು ಚಿಂತನೆ ನಡೆಸಿದರು ಎಂದಲ್ಲ, ಆದರೆ ಅಂತರ್ಗತ ಮೌಲ್ಯಗಳು ಎಳೆಯ ಮನಸ್ಸಿನ ಆಳಕ್ಕೆ ಇಳಿಯುತ್ತವೆ. ಮೂರನೆಯದಾಗಿ, ಮಕ್ಕಳ ಸಾಹಿತ್ಯ ಎಂದರೆ ಮಕ್ಕಳನ್ನು ದೊಡ್ಡವರು ವರ್ಣಿಸುವ ಬರಹವಾಗದೆ, ಮಗು ಜಗತ್ತನ್ನು ಕಾಣುವ ದೃಷ್ಟಿಯ ಅಭಿವ್ಯಕ್ತಿಯಾಯಿತು. (ಇದನ್ನು ವಿರಳವಾಗಿ 'ಗುಮ್ಮನ ಕರೆಯದಿರೆ, ಅಮ್ಮಯ್ಯ' ಇಂಥ ದಾಸರ ರಚನೆಗಳಲ್ಲಿ ಕಾಣುತ್ತೇವೆ) ಸಾಹಿತ್ಯದ ದೃಷ್ಟಿಯಿಂದ ಇನ್ನೊಂದು ಮಾತನ್ನು ಹೇಳಬೇಕು. ಇಂಗ್ಲಿಷ್ ಕವನಗಳು ವಯಸ್ಕ ಓದುಗರಿಗೆ ಅಂತ್ಯಪ್ರಾಸವನ್ನು ಪರಿಚಯ ಮಾಡಿಕೊಟ್ಟಂತೆ ಮಕ್ಕಳ ಕವನಗಳು ಮಕ್ಕಳಿಗೆ ಪ್ರಾಸ-ಲಯಗಳ ಪರಿಚಯ ಮಾಡಿಕೊಟ್ಟವು.

ಸಾಹಿತ್ಯ ಸೃಷ್ಟಿ ಮಾಡುವವರಿಗೆ ಪಾಶ್ಚಾತ್ಯ ಸಾಹಿತ್ಯ ಒಂದು ಹೊಸ ಸಾಮ್ರಾಜ್ಯವನ್ನೆ ತೆರೆದಿಟ್ಟಿತು. ಮಾಸ್ತಿಯವರು 'ಸ್ಟ್ರ್ಯಾಂಡ್' ಪತ್ರಿಕೆಯ ಕಥೆಗಳು ತಮಗೆ ಹೊಸ ಸಾಧ್ಯತೆಗಳನ್ನು ತೋರಿಸಿದವೆಂದು ಹೇಳಿದ ಮಾತನ್ನೂ, ಕೆ. ಎಸ್. ನರಸಿಂಹಸ್ವಾಮಿಯವರು "ಯಾರೋ ಪುಣ್ಯಾತ್ಮರು ಬರ್ನ್ಸ್ ಕವಿಯ ಕವನ ಸಂಗ್ರಹವೊಂದನ್ನು ನನ್ನ ಕೈಯಲ್ಲಿಟ್ಟರು" ಎಂದು ಹೇಳಿದ ಮಾತನ್ನೂ, ಕುವೆಂಪು ವರ್ಡ್ಸ್‌ವರ್ತ್ ಕವಿಯನ್ನು ಮೆಚ್ಚಿ ಬರೆದದ್ದನ್ನೂ ಇಲ್ಲಿ ಸ್ಮರಿಸಬಹುದು. ಮಧುರಚೆನ್ನ, ಬೇಂದ್ರೆ, ಇಂಥವರ ಮೇಲೆ A. E. (ಜಾರ್ಜ್ ವಿಲಿಯಂ ರಸೆಲ್) ಬೀರಿದ ಪ್ರಭಾವವನ್ನು ನಿದರ್ಶನಗಳನ್ನಾಗಿ ಇಲ್ಲಿ ಸ್ಮರಿಸಬಹುದು.

ಮೊಟ್ಟ ಮೊದಲನೆಯದಾಗಿ, ಇಂಗ್ಲಿಷ್ ಸಾಹಿತ್ಯವು ಸಾಹಿತ್ಯದ ಹೊಸ ಸಾಧ್ಯತೆಗಳನ್ನು ತೋರಿಸಿಕೊಟ್ಟಿತು. ಸಾಹಿತ್ಯದಲ್ಲಿ ಒಂದು ಪ್ರಕಾರ ಮತ್ತೊಂದು

ಪ್ರಕಾರಕ್ಕೆ ಬದಲಿ ಆಗಲಾರದು. ಪ್ರತಿ ಪ್ರಕಾರದ ಸಾಧ್ಯತೆ ಮತ್ತು ಮಿತಿ ಇದ್ದೇ ಇರುತ್ತವೆ. ಇಂಗ್ಲಿಷ್ ಸಾಹಿತ್ಯವನ್ನು ಓದಲು ಪ್ರಾರಂಭಿಸಿದವರಿಗೆ ಅದರ ವೈವಿಧ್ಯ, ಶ್ರೀಮಂತಿಕೆಗಳು ಬೆರಗನ್ನು ಹುಟ್ಟಿಸುತ್ತವೆ. ಅಲ್ಲಿಯೂ ಅತ್ಯಂತ ಪ್ರಾಚೀನ ಇತಿಹಾಸವಿರುವದು ಕಾವ್ಯಕ್ಕೆ. ಭಾವಗೀತೆಯ ಶ್ರೀಮಂತಿಕೆಯೇ ಬೆರಗುಗೊಳಿಸುತ್ತದೆ. ಭಾವಗೀತೆಯ ಒಳ ಪ್ರಕಾರಗಳಾದ ಸುನೀತ, ಶೋಕಗೀತೆ, ಪ್ರಗಾಥ ಮೊದಲಾದವು, ಕನ್ನಡಕ್ಕೆ ಹೊಸತು. ಮತ್ತೊಂದು ಪ್ರಕಾರ ಕಾದಂಬರಿ. ನಾಟಕ ಭಾರತೀಯರಿಗೆ ಹೊಸತಲ್ಲ. ಆದರೆ 'ಟ್ರ್ಯಾಜಡಿ', ಜೊತೆಗೆ ಒಂದು ಜೀವನ ದರ್ಶನವನ್ನು ಒಳಗೊಂಡ ಕಾಮಿಡಿ ಇವು ಹೊಸವು. ಸಣ್ಣ ಕಥೆಯೂ ಭಾರತೀಯರಿಗೆ ಹೊಸದಲ್ಲ. ಕನ್ನಡದಲ್ಲಿ ಲಭ್ಯವಿರುವ ಮೊದಲನೆಯ ಕೃತಿ 'ವಡ್ಡಾರಾಧನೆ'ಯೇ ಕತೆಗಳ ಸಂಗ್ರಹ. ಆದರೆ ಸಾಹಿತ್ಯ ಪ್ರಕಾರವಾಗಿ, ಇಂಗ್ಲಿಷ್ ಸಾಹಿತ್ಯದಲ್ಲಿ ಕಾಣಿಸಿಕೊಂಡ ಸಣ್ಣ ಕಥೆ ಕನ್ನಡಕ್ಕೆ ಹೊಸತು. ಈ ಪ್ರಕಾರಗಳನ್ನು ಕನ್ನಡ ದತ್ತು ತೆಗೆದುಕೊಂಡ ಪ್ರಕ್ರಿಯೆಯನ್ನು ಮುಂದೆ ವಿಶ್ಲೇಷಿಸಬಹುದು. ಈ ಹಂತದಲ್ಲಿ ಪಾಶ್ಚಾತ್ಯ ಸಾಹಿತ್ಯದ ಕೇಂದ್ರದಲ್ಲಿರುವ ಮನೋಧರ್ಮವನ್ನು ಸಂಗ್ರಹವಾಗಿ ನಿರೂಪಿಸಬಹುದು.

ಹದಿಮೂರನೆಯ ಶತಮಾನದಲ್ಲಿ ಇಟಲಿಯಲ್ಲಿ ಪ್ರಾರಂಭವಾಗಿ ಕ್ರಮೇಣ ಯೂರೋಪಿಗೆಲ್ಲ ಹಬ್ಬಿದ ನವೋದಯದ ಕೇಂದ್ರದಲ್ಲಿದ್ದದ್ದು 'ಹ್ಯೂಮನಿಸಂ', ಮಾನವತಾಪಂಥ. ಈ ಪಂಥದ ಎಲ್ಲ ಚಿಂತನೆಗೆ, ತೀರ್ಮಾನಕ್ಕೆ ಮಾನವನೇ ಕೇಂದ್ರ. ಈ ಪಂಥದ ಚಿಂತನಶೀಲ ಆಸ್ತಿಕನಾಗಿರಬಹುದು, ನಾಸ್ತಿಕನಾಗಿರಬಹುದು. ಆದರೆ ಅವನಿಗೆ ಇಹದ ಬದುಕು ವಾಸ್ತವ, ಮುಖ್ಯ. ಇಹದಾಚೆ ಇರುವ ಶಕ್ತಿಯೊಂದು ಮೆಚ್ಚುವದೋ ಇಲ್ಲವೋ ಎನ್ನುವದಕ್ಕಿಂತ ಇಹದ ಬದುಕು ಚೆಲುವಾಗುವದು, ನೆಮ್ಮದಿಯಾಗುವದು ಅವನಿಗೆ ಮುಖ್ಯ. ಇದರಿಂದ ಈ ಸಾಹಿತ್ಯ 'ಸೆಕ್ಯುಲರ್'. ಸಹಜವಾಗಿ ಇದು ಪ್ರಜಾಪ್ರಭುತ್ವವಾದಿ ಸಾಹಿತ್ಯ. ಮನುಷ್ಯನ ಕಲ್ಯಾಣವನ್ನೇ ಮಾನದಂಡವಾಗಿ ಸ್ವೀಕರಿಸಿದ ಸಾಹಿತ್ಯದಲ್ಲಿ ಬೇರೆ ಮನೋಧರ್ಮ ಇರುವುದು ಸಾಧ್ಯವಿಲ್ಲ. ಆದ್ದರಿಂದಲೇ ಈ ಸಾಹಿತ್ಯ ರಾಜರು, ವೀರರು, ಸಂತರನ್ನು ಮಾತ್ರ ಕುರಿತ ಸಾಹಿತ್ಯವಲ್ಲ. ಇದು ಮನುಷ್ಯನ ಸುಖ-ದುಃಖ, ಕನಸು-ನಿರಾಶೆ, ಕಲ್ಪನೆ-ದರ್ಶನ ಇವುಗಳಿಗೆ ಅಭಿವ್ಯಕ್ತಿ ನೀಡುತ್ತದೆ. ಆದುದರಿಂದಲೇ ಒಬ್ಬ ರೈತ, ಒಂದು ಹುಡುಗಿ, ಅನಾಥ ಮುದುಕಿ, ಪ್ರಥಮ ಪ್ರಣಯದ ಖುಷಿಯಲ್ಲಿರುವ ಹೆಣ್ಣು-ಗಂಡು, ಜೈಲಿಗೆ ಹೋಗಿ ಬಂದ ಖೈದಿ, ಬಡ ಮುದುಕ ಎಲ್ಲರೂ ಈ ಸಾಹಿತ್ಯದ ಕೇಂದ್ರಗಳಾಗಬಲ್ಲರು. ಇದು ಪ್ರತ್ಯೇಕ ವ್ಯಕ್ತಿತ್ವದಲ್ಲಿ ಆಸಕ್ತಿ ಇರುವ ಸಾಹಿತ್ಯ. ಕಾದಂಬರಿ ಪ್ರಕಾರದ ಹುಟ್ಟಿಗೆ ಅಗತ್ಯವಾದ ಅಂಶಗಳಲ್ಲಿ ಇದು ಒಂದು.

ನವೋದಯ ಕನ್ನಡ ಸಾಹಿತ್ಯದ ಲಕ್ಷಣಗಳೆಲ್ಲ ಪಾಶ್ಚಾತ್ಯ ಸಾಹಿತ್ಯದಿಂದ ಬಂದವು ಎಂದು ಭಾವಿಸುವದು ತೀರ ತಪ್ಪಾಗುತ್ತದೆ. ಈ ಲಕ್ಷಣಗಳನ್ನು ಇಲ್ಲಿ ಪ್ರಸ್ತಾಪಿಸುವದರ ಉದ್ದೇಶ, ಈ ಸಾಹಿತ್ಯದ ಅಧ್ಯಯನದಲ್ಲಿ, ಈ ಅಂಶವನ್ನು ಗಮನಿಸುವದು ಅಗತ್ಯ ಎನ್ನುವ ಕಾರಣಕ್ಕಾಗಿ.

ನವೋದಯ ಸಾಹಿತ್ಯದ ಸೃಷ್ಟಿಯ ಆವರಣವನ್ನೂ, ಆ ಆವರಣದಲ್ಲಿನ ಪ್ರಭಾವಗಳನ್ನೂ, ಈ ಸಾಹಿತ್ಯದ ಸಂವೇದನೆಗಳನ್ನೂ ಸಾಕಷ್ಟು ಪ್ರಮಾಣದಲ್ಲಿ ರೂಪಿಸಿದ ಪ್ರಭಾವಗಳನ್ನೂ ಗಮನಿಸಿದ್ದೇವೆ. ಆದರೆ ಒಂದು ಮುಖ್ಯವಾದ ಸಂಗತಿಯನ್ನು ಮರೆಯುವಂತಿಲ್ಲ. ಪ್ರಭಾವಗಳಿಂದಲೇ ಯಾವ ಸಾಹಿತ್ಯದಲ್ಲಿಯೂ ಪ್ರಮುಖ ಬೆಳವಣಿಗೆಯಾಗುವದಿಲ್ಲ. ಸಮುದಾಯದಲ್ಲಿ ಜೀವನ ಪರವಾದ ಪ್ರಬಲ ಒಲವಿರಬೇಕು. ಸಾಹಿತ್ಯದಾಚೆ, ಸ್ವಾತಂತ್ರ್ಯದ ಹೋರಾಟದಲ್ಲಿ, ಸಮಾಜ ಸುಧಾರಣೆಯ ಕಾಳಜಿಯಲ್ಲಿ ಈ ಒಲವು ಪ್ರಕಟವಾಗುತ್ತದೆ. ಸಾಹಿತ್ಯದಲ್ಲಿ 'ರಾಮಾಶ್ವಮೇಧ' ದಲ್ಲಿ ಜೀವನೋತ್ಸಾಹ ಪುಟಿಯುತ್ತದೆ. ಸಮಾಜ ಸುಧಾರಣೆಯ ಕಾಳಜಿಯ ಗುಲ್ವಾಡಿ ವೆಂಕಟರಾಯರ 'ಇಂದಿರಾಬಾಯಿ'ಯಂಥ ಹಲವು ಕೃತಿಗಳಲ್ಲಿ ಕಾಣಿಸಿಕೊಳ್ಳುತ್ತದೆ. ಇಂಥ ಜೀವನೋತ್ಸಾಹವನ್ನು ಉಳಿಸಿಕೊಂಡಿದ್ದರಿಂದಲೇ, ಪ್ರಾಚೀನ ಅಥೆನ್ಸ್ ಯುದ್ಧದಲ್ಲಿ ಸೋತ ನಂತರ ಸಾಹಿತ್ಯ ಪೇಲವವಾದಂತೆ, ಈ ನಾಡಿನಲ್ಲಿ ಆಗಲಿಲ್ಲ. ಈ ಕಾಲದ ಸಾಹಿತ್ಯ ಅನುವಾದ– ಅನುಕೃತಿಗಳಲ್ಲಿಯೇ ಮುಗಿಯದೆ ಸ್ವತಂತ್ರ ಕೃತಿಗಳನ್ನು ನೀಡಲು ಸಮರ್ಥವಾಯಿತು.

ಈಗ ಸಂಗ್ರಹವಾಗಿ ನವೋದಯ ಪೂರ್ವ ಘಟ್ಟದ ಸಾಹಿತ್ಯಸೃಷ್ಟಿಯನ್ನು ಗಮನಿಸಬಹುದು. ಪ್ರಾರಂಭದಲ್ಲಿ ೧೯೧೧ ರಲ್ಲಿ ಬಿ. ಎಂ. ಶ್ರೀ. ಅವರು ಧಾರವಾಡದಲ್ಲಿ ಮಾಡಿದ 'ಕನ್ನಡ ಮಾತು ತಲೆ ಎತ್ತುವ ಬಗೆ' ಉಪನ್ಯಾಸವನ್ನು ಸ್ಮರಿಸಿಕೊಳ್ಳಬೇಕು. ಕನ್ನಡ ಭಾಷೆ ಮತ್ತು ಸಾಹಿತ್ಯಗಳ ಭವಿಷ್ಯವನ್ನು ಕುರಿತು ಗಟ್ಟಿಯಾದ ಚಿಂತನೆ ಇಲ್ಲಿದೆ. ಪಂಡಿತರಿಗಾಗಿ ಬರೆಯುವ ಕಾಲ ಆಗಿ ಹೋಯಿತು. ಎಲ್ಲರಿಗಾಗಿ ಬರೆಯಬೇಕು. ಜನಕ್ಕೆ ಸಮೀಪವಾದ ಗದ್ಯವನ್ನು ಬೆಳೆಸಬೇಕು. ಪರಂಪರೆಯ ಅಧ್ಯಯನ ಮಾಡಬೇಕು. ಆದರೆ ಸಾಹಿತಿ ತನ್ನ ಕಾಲದಲ್ಲಿ ಕಾಲೂರಿ ಬರೆಯಬೇಕು ಎಂಬ ಆರೋಗ್ಯಕರವಾದ ನಿಲುವು ಇಲ್ಲಿದೆ. ಬಿ. ಎಂ. ಶ್ರೀ. ಅವರಂತೆಯೇ ಹಲವರ ಚಿಂತನೆ ಹರಿಯುತ್ತಿದ್ದಿತ್ತೆಂಬುದನ್ನು ಸ್ಪಷ್ಟಪಡಿಸುವಂತೆ ಪ್ರೊ. ಎಸ್. ಅನಂತನಾರಾಯಣ ಅವರು 'ಹೊಸಗನ್ನಡ ಕವಿತೆಯ ಮೇಲೆ ಇಂಗ್ಲಿಷ್ ಕಾವ್ಯದ ಪ್ರಭಾವ' ಕೃತಿಯಲ್ಲಿ ಬರಹಗಳನ್ನು ಉದ್ಧರಿಸಿದ್ದಾರೆ. ಅವುಗಳಲ್ಲಿ ಎ. ಬಿ. ಶ್ರೀಕಂಠಯ್ಯ ಎನ್ನುವವರ ಕೆಲವು ವಾಕ್ಯಗಳನ್ನು ಮಾತ್ರ ಉದ್ಧರಿಸಬಹುದು. ವಿದ್ವಾಂಸರನ್ನು ಕುರಿತು ಅವರು ಆಡುವ ಎಚ್ಚರಿಕೆಯ ಮಾತು : "ನಾವು ಆಡುವ ಮಾತು, ನಾವು ಮೆಚ್ಚುವ ವಿಷಯ, ನಾವು ಏಳಿಗೆಯಾಗುವ ದಾರಿ– ಇದಕ್ಕೆ ನೀವು ಬರುವವರೆಗೂ ನಮಗೂ ನಿಮಗೂ ಗಂಟಿಲ್ಲ, ಎಚ್ಚರವಿರಲಿ !"

ನವೋದಯವು ಸ್ಪಷ್ಟವಾಗಿ ಮೂಡತೊಡಗಿದಾಗ ಮೂರು ಬೆಳಕಿನ ಬುಗ್ಗೆಗಳು ಕಾಣಿಸಿಕೊಂಡವು– ಮೈಸೂರು, ಧಾರವಾಡ, ಮಂಗಳೂರು ಈ ಕೇಂದ್ರಗಳಲ್ಲಿ. ೧೯೨೧ ರಲ್ಲಿ ಪ್ರಕಟವಾದ ಆಚಾರ್ಯ 'ಶ್ರೀ'ಅವರ 'ಇಂಗ್ಲಿಷ್ ಗೀತೆಗಳು' ಸ್ಪಷ್ಟವಾಗಿ ಹೊಸ ಯುಗದ ಉದಯವನ್ನು ಸಾರಿತು. ಧಾರವಾಡದಲ್ಲಿ 'ಗೆಳೆಯರ ಗುಂಪು', ಚಿರಸ್ಮರಣೀಯವಾದ ಕೆಲಸವನ್ನು ಮಾಡಿತು. ಮಂಗಳೂರಿನಲ್ಲಿ ಗೋವಿಂದ

ಪೈಯವರು ೧೯೦೦ ರಲ್ಲಿ ಪ್ರಾಸವನ್ನು ಬಿಡುವ ಧೀರ ನಿರ್ಧಾರವನ್ನು ಕೈಗೊಂಡು ಕಾವ್ಯದಲ್ಲಿ ಮುಖ್ಯ ಹೆಜ್ಜೆ ಇಟ್ಟರು. ಕಾವ್ಯದ ಮಟ್ಟಿಗೆ, ಮೂರು ಕಡೆಯೂ ಕಾಣುವದು ಹೊಸ ಸಂವೇದನೆ ಬೇಡುತ್ತಿದ್ದ ಅಭಿವ್ಯಕ್ತಿಯ ಹುಡುಕಾಟ. ಪ್ರಾರಂಭದಲ್ಲಿ ಅನುವಾದಗಳು ಬಂದವು. ಇಂಗ್ಲಿಷ್, ಸಂಸ್ಕೃತ ಎರಡು ಮೂಲಗಳಿಂದಲೂ ಕೃತಿಗಳನ್ನು ಅನುವಾದಕರು ಆರಿಸಿಕೊಂಡರು.

ಈ ಸಂದರ್ಭದಲ್ಲಿ ಒಂದು ಮಾತನ್ನು ಹೇಳಬೇಕು. ಮುಂದೆ ಕನ್ನಡ ಕಾವ್ಯ ಇಂಗ್ಲಿಷ್‌ನ ರೊಮ್ಯಾಂಟಿಕ್ ಅಥವಾ ರಮ್ಯಕವಿಗಳ ಪ್ರಭಾವಕ್ಕೆ ಒಳಗಾಯಿತು. ಇಂಗ್ಲಿಷ್ ರಮ್ಯ ಕಾವ್ಯವು ಮನುಷ್ಯ-ನಿಸರ್ಗಗಳ ಸಂಬಂಧ ಗ್ರಹಿಕೆಯ ಮೇಲೆ ಪ್ರಭಾವ ಬೀರಿತು. ಎಲ್ಲ ಕಾಲದ ಕವಿಗಳೂ ನಿಸರ್ಗದ ಚೆಲುವನ್ನೂ ವೈಭವವನ್ನೂ ಕುರಿತು ಹಾಡುತ್ತಾರೆ. ಆದರೆ ರೊಮ್ಯಾಂಟಿಕ್ ಕವಿಗೆ ನಿಸರ್ಗವು ಬರಿಯ ಸೌಂದರ್ಯದ ಆಗರವಲ್ಲ. ನಿಸರ್ಗಕ್ಕೆ ಜೀವವಿದೆ, ಅದರಲ್ಲಿ ಒಂದು ಚೇತನವಿದೆ. ಮನುಷ್ಯನಿಗೂ – ನಿಸರ್ಗಕ್ಕೂ ಒಂದು ವಿಶಿಷ್ಟ ಬಾಂಧವ್ಯವಿದೆ. ಇಂಥ ಬಾಂಧವ್ಯದ ಸ್ವರೂಪವನ್ನು ನಾವು ವಿಶಿಷ್ಟವಾಗಿ ವಿಲಿಯಮ್ ವರ್ಡ್ಸ್‌ವರ್ತ್‌ನ ಕಾವ್ಯದಲ್ಲಿ ಕಾಣುತ್ತೇವೆ. ಆದರೆ ಎಲ್ಲ ರೊಮ್ಯಾಂಟಿಕ್ ಕವಿಗಳು ನಿಸರ್ಗವನ್ನು ಜೀವಂತವಾಗಿ ಕಂಡರು, ಅದರಲ್ಲೂ ಒಂದು ವಿಶಿಷ್ಟ ಚೇತನವನ್ನು ಕಂಡರು. ನವೋದಯ ಕಾವ್ಯದ ಮೇಲೆ ಈ ಕಲ್ಪನೆ ಪ್ರಭಾವ ಬೀರಿದ್ದು ನಿಜ. ಆದರೆ ಈ ಕಲ್ಪನೆ ಭಾರತೀಯರಿಗೆ ಸಂಪೂರ್ಣವಾಗಿ ಹೊಸದಾಗಿದ್ದು, ಇಂಗ್ಲಿಷ್ ಕಾವ್ಯದಿಂದ ಬಂದದ್ದಲ್ಲ. ಕಾಳಿದಾಸನ 'ಶಾಕುಂತಳಾ' ನಾಟಕದಲ್ಲಿಯ ಮನುಷ್ಯ-ನಿಸರ್ಗಗಳ ಇಂಥ ಮೈತ್ರಿಯ ಸಂಬಂಧವು ಪೂರ್ಣ ಬದುಕಿನ ಭಾಗವಾಗಿ ಮೂಡಿದೆ. ಇಂಗ್ಲಿಷ್ ಕವಿಗಳ ಕವನಗಳ ಅನುವಾದವಾದಾಗ ಈ ಕಲ್ಪನೆ ಶಕ್ತಿಯುತವಾಗಿ ಮೂಡಿ ನಮ್ಮ ಕಾವ್ಯದ ಮೇಲೆ ಮುದ್ರೆಯನ್ನು ಒತ್ತಿತು.

ಪದ್ಯ ಮಾಧ್ಯಮವನ್ನು ಮಿಷನರಿಗಳು ಪ್ರಚಾರಕ್ಕಾಗಿ ಬಳಸಿಕೊಂಡರು. ಕನ್ನಡಿಗರೇ ಬರೆದ ಕವನಗಳು ಅನುವಾದಗಳು. ಇಂಗ್ಲಿಷಿನಿಂದಲೂ ಸಂಸ್ಕೃತದಿಂದಲೂ ಕವನಗಳ ಅನುವಾದಗಳಾದವು. ಈಗೊಂದು ಆಗೊಂದು ಸ್ವತಂತ್ರ ಕವನ ರಚಿತವಾಯಿತೆಂದು ಅನಂತ ನಾರಾಯಣ ಅವರು ಉದಾಹರಣೆಗಳನ್ನು ಕೊಟ್ಟಿದ್ದಾರೆ. ಎಸ್. ಜಿ. ನರಸಿಂಹಾಚಾರ್ಯರು, ಹಟ್ಟಂಗಡಿ ನಾರಾಯಣ ರಾಯರು ಮೊದಲಾದವರು ಸಮರ್ಥವಾಗಿಯೆ ಅನುವಾದಗಳನ್ನು ಮಾಡಿದರು. ವರ್ಡ್ಸ್‌ವರ್ತನ 'To the Cuckoo' ಮುಂತಾದ ಕವನಗಳ ಅನುವಾದದಲ್ಲಿ ದ್ವಿತೀಯಾಕ್ಷರ ಪ್ರಾಸವನ್ನು ಉಳಿಸಿಕೊಂಡರು. ತೀ. ನಂ. ಶ್ರೀ. ಅವರು ಹೇಳಿದಂತೆ ಇವುಗಳ ಛಂದಸ್ಸು ಸಾಂಗತ್ಯ, ಭಾಷೆ ಹೊಸಗನ್ನಡ. ದಕ್ಷಿಣ ಕನ್ನಡದಲ್ಲಿ ಪ್ರಯೋಗಗಳನ್ನು ಮಾಡಿದವರು ಪಂಜೆ ಮಂಗೇಶರಾಯರು, ಗೋವಿಂದ ಪೈ ಅವರು, ಹಟ್ಟಂಗಡಿ ನಾರಾಯಣ ರಾಯರು.

ಈ ಎಲ್ಲ ಪ್ರಯತ್ನಗಳ ಒಂದು ವಿಶಿಷ್ಟ ಅಂಶವೆಂದರೆ ಮಕ್ಕಳಿಗಾಗಿ ಪದ್ಯಗಳು ರಚಿತವಾದದ್ದು. ಕೆಲವು– 'ನಾಗರ ಹಾವೆ, ಹಾವೊಳು ಹೂವೆ' ಅಂತಹ

ರಚನೆಗಳು ಒಳ್ಳೆಯ ಪದ್ಯದ ಮಟ್ಟದಿಂದ ಮೇಲೇರಿ ಕಾವ್ಯವೂ ಆದವು. ನವೋದಯ ಪೂರ್ವ, ನವೋದಯ ಘಟ್ಟಗಳಲ್ಲಿ ಮಕ್ಕಳ ಸಾಹಿತ್ಯ ರಚಿತವಾದ ಪ್ರಮಾಣದಲ್ಲಿ ಮುಂದೆ ಆಗಲಿಲ್ಲ. ಸೋಸಲೆ ಅಯ್ಯಾ ಶಾಸ್ತ್ರಿಗಳಂತಹ ಘನ ವಿದ್ವಾಂಸರು, ಪಂಜೆ ಮಂಗೇಶರಾಯರಂತಹ ಹಿರಿಯ ಸಾಹಿತಿಗಳು ಅಲ್ಲದೆ ದೊಡ್ಡ ಸಂಖ್ಯೆಯಲ್ಲಿ ಸಾಹಿತಿಗಳು ಮಕ್ಕಳಿಗಾಗಿ ಕವನಗಳನ್ನು ರಚಿಸಿದರೆಂದರೆ ಈ ಪ್ರೇರಣೆ ಗಾಳಿಯಲ್ಲೇ ಇತ್ತು. ಎಂದರೆ ಆ ಯುಗದ ಮನೋಧರ್ಮದ ಭಾಗವಾಗಿತ್ತು. ಇದು ಆಗುವದು ಸಹ ವ್ಯಕ್ತಿತ್ವದಲ್ಲಿ ಆಸಕ್ತಿ ಮೂಡಿದಾಗ. ಒಂದು ಮಗುವಿಗೂ ವ್ಯಕ್ತಿತ್ವವಿದೆ ಎಂಬ ಭಾವನೆ ಇದ್ದಾಗ.

ಅನುವಾದಗಳಿಂದ ಆದ ಸಾಧನೆಗಳಲ್ಲಿ ಒಂದು, ಇಲ್ಲಿನ ಕಾವ್ಯದ ಮನೋಧರ್ಮದಿಂದ ಭಿನ್ನವಾದ ಮನೋಧರ್ಮ ಕನ್ನಡ ಸಾಹಿತ್ಯವನ್ನು ಪ್ರವೇಶಿಸಿದ್ದು, ಭಾಷೆ, ಪ್ರತಿಮೆಗಳು ಮತ್ತು ಛಂದಸ್ಸು ಹೊಸತನವನ್ನು ಪಡೆದುಕೊಂಡದ್ದು. ೧೯೧೭ ರಲ್ಲಿ 'ಕನ್ನಡ ಎರಡನೆಯ ಪುಸ್ತಕ'ದಲ್ಲಿ ಅಡಕಗೊಂಡ 'ತೆಂಕಣಗಾಳಿಯಾಟ'ದ ಈ ಪಂಕ್ತಿಗಳನ್ನು ನೋಡಿ :

ಬರಲಿದೆ! ಆಹಹಾ! ದೂರದಿ ಬರಲಿದೆ
ಬುಸುಗುಟ್ಟುವ ಪಾತಾಳದ ಹಾವೊ?
ಹಸಿವಿನ ಭೂತವು ಕೂಯುವ ಕೂವೊ?
ಹೊಸತಿದು ಕಾಲನ ಕೋಣನ ಓವೊ!
ಉಸುರಿನ ಸುಯ್ಯೋ! ಸೂಸೂಕರಿಸುತ
ಬರುವದು! ಬರಬರ ಭರದಲಿ ಬರುವುದು.

ನಿಸರ್ಗದಲ್ಲಿ ಪ್ರೀತಿಯ ಆಸಕ್ತಿ ಇದ್ದಾಗ ಮಾತ್ರ ಇಂಥ ಕವನವನ್ನು ಬರೆಯಬಹುದು.

ಧಾರವಾಡದ ಪ್ರದೇಶದಲ್ಲಿ ಕನ್ನಡಿಗರ ಆತ್ಮಾಭಿಮಾನವನ್ನು ಉಳಿಸಿಕೊಳ್ಳುವುದೇ ಕಷ್ಟವಾಗಿತ್ತು. ಶಾಂತಕವಿಗಳು, ಬೆಟಗೇರಿ ಕೃಷ್ಣಶರ್ಮರು ಮೊದಲಾದವರು ಈ ಕಾರ್ಯದಲ್ಲಿ ತೊಡಗಿದರು.

ಈ ಕಾಲದ ಕಾವ್ಯದಲ್ಲಿ ಹೊಸ ಮನೋಧರ್ಮ ಕಾಲಿಟ್ಟಿತು. ಆದರೆ ಹಳೆಯ ಛಂದಸ್ಸುಗಳು ಉಳಿದವು. ಭಾಷೆ ನಿಧಾನವಾಗಿ ಆಡುಭಾಷೆಗೆ ಹತ್ತಿರವಾಗತೊಡಗಿತು, ಅದರ ಲಯವನ್ನು ಪಡೆದುಕೊಂಡಿತು. 'ಶ್ರೀ' ಯವರು 'ಇಂಗ್ಲಿಷ್ ಗೀತೆ' ಗಳಲ್ಲಿ ಹೊಸ ಸಂವೇದನೆಗೆ ಹೊಸ ಅಭಿವ್ಯಕ್ತಿಯ ಹಾದಿಯನ್ನು ತೋರಿದರು. ಪಂಜರದಿಂದ ಬಿಟ್ಟ ಪಕ್ಷಿಯಂತೆ ಕಾವ್ಯ ರೆಕ್ಕೆ ಬಿಚ್ಚಿ ಸ್ವಚ್ಛಂದವಾಗಿ ಹಾರಾಡತೊಡಗಿತು. ಮಾಸ್ತಿಯವರು 'ಶ್ರೀ'ಯವರನ್ನು ಸಂಬೋಧಿಸಿ ಹೇಳಿದಂತೆ,

ಮನದರಕೆಗಳನೆಚ್ಚರಿಸಿ
ಎಳೆಯರೆದೆಯಲಿ ಹಾಡುವಾಸೆಯನು ಸುಳಿಸಿದಿರಿ.

ಕನ್ನಡ ಕಾದಂಬರಿಯ ಪ್ರಾರಂಭದ ಚರಿತ್ರೆಯ ಅಧ್ಯಯನವು ಬಹು ಕುತೂಹಲಕಾರಿಯಾದದ್ದು. ಪ್ರಾರಂಭದಲ್ಲಿ ಕೆಲವರು ಬರಹಗಾರರಾದರೂ "ಕಾದಂಬರಿ ಎಂದರೇನು ?" ಎನ್ನುವದನ್ನು ಚಿಂತಿಸಿರಬೇಕು. ೧೮೯೬ ರಲ್ಲಿ 'ಶೃಂಗಾರ ಚಾತುರ್ಯೋಲ್ಲಾಸಿನಿ' ಕೃತಿಯನ್ನು ಪ್ರಕಟಿಸಿದ ಗುಬ್ಬಿ ಮುರುಗಾರಾಧ್ಯರು ತಾವು ಇಂಗ್ಲಿಷ್‌ನ ಒಂದು ನಾವೆಲ್‌ನ್ನು ಅನುವಾದಿಸಲು ಯೋಚಿಸಿ ಅನಂತರ ನಮ್ಮ ಪುರಾಣಪ್ರಸಿದ್ಧವಾಗಿರುವ ಒಂದು ಇತಿಹಾಸವನ್ನು ಗದ್ಯರೂಪವಾಗಿ ಮಾಡಬೇಕೆಂದು ಯೋಚಿಸಿ ಎರಡು ಯೋಚನೆಗಳನ್ನೂ ಕೈ ಬಿಟ್ಟಿದ್ದಕ್ಕೆ ಕಾರಣಗಳನ್ನು ವಿವರಿಸಿ. "ಈ ವಿಷಯದಲ್ಲಿ ಹಿಂದೂ ಮರ್ಯಾದೆಯನ್ನು ಇಟ್ಟುಕೊಂಡು ಇಂಗ್ಲಿಷ್ ನಾವೆಲ್ ಪದ್ಧತಿಯನ್ನು ಅನುಸರಿಸಿ ಬರೆಯಲು ಅನುಕೂಲವಾಗುವಂತೆ ಹೊಸದಾಗಿ ಒಂದು ಕಥೆಯನ್ನು ಕಲ್ಪನೆ ಮಾಡಿಕೊಂಡೆನು" ಎಂದಿದ್ದಾರೆ. ನಾವೆಲ್ ಪ್ರಕಾರದ ಮಾದರಿ ಇಂಗ್ಲಿಷ್‌ನಲ್ಲಿ ಕಂಡದ್ದು ಎನ್ನುವದು ಸ್ಪಷ್ಟ. ಆದರೆ ಈ ಮಾದರಿಯ ಸ್ವರೂಪವನ್ನು ಅವರು ಹೇಗೆ ಗುರುತಿಸಿದರು ಎನ್ನುವದು ಸ್ಪಷ್ಟವಿಲ್ಲ. ೧೯೧೫ ರಲ್ಲಿ ಎಂ. ಎಸ್. ಪುಟ್ಟಣ್ಣನವರು 'ಮಾಡಿದ್ದುಣ್ಣೊ ಮಹಾರಾಯ' ಕಾದಂಬರಿಗೆ ಮುನ್ನುಡಿಯನ್ನು ಬರೆಯುತ್ತ, "ಪುರಾಣ ಪ್ರಸಿದ್ಧರು ವ್ಯಾಕರಣದ ಸೂತ್ರಗಳಾಗಿದ್ದಾರೆ. ಮನುಷ್ಯ ಸಾಮಾನ್ಯರಲ್ಲಿ ಸಿಕ್ಕುವ ಧೀರರು ಉದಾಹರಣೆಗಳಾಗಿದ್ದಾರೆ. ಈ ಭಾವವನ್ನು ಮನಸ್ಸಿನಲ್ಲಿಟ್ಟುಕೊಂಡು ಈ ಗ್ರಂಥವನ್ನು ಬರೆದಿದ್ದೇನೆ" ಎಂದರು. ಹೀಗೆಂದರೆ, ಕಾದಂಬರಿಯನ್ನು ಪುರಾಣಗಳ ನಂಟಿನಲ್ಲಿ ನೋಡಿದಂತಾಯಿತು. ೧೯೧೭ರಲ್ಲಿ ಮಾಸ್ತಿಯವರು 'ನಾವೆಲ್' ಮತ್ತು 'ರೋಮಾನ್ಸ್'ಗಳ ನಡುವಣ ವ್ಯತ್ಯಾಸವನ್ನು ಗುರುತಿಸುತ್ತಾರೆ. ರೋಮಾನ್ಸ್‌ನಲ್ಲಿ ಪ್ರತಿಯೊಂದು ವಿಷಯವು ನಡೆಯುವಂತಹದೇ, ಸಂಭವನೀಯವೇ ಆಗಿರಬೇಕಾಗಿಲ್ಲ. ನಾವೆಲ್‌ನಲ್ಲಿ ಸಂಭವನೀಯತೆ ಇರಬೇಕು ಎಂದು ಸೂಚಿಸುತ್ತಾರೆ. ಕನ್ನಡ ಕಾದಂಬರಿಯ ಪ್ರಾರಂಭದ ಘಟ್ಟದಲ್ಲಿ ಮತ್ತೆ ಮತ್ತೆ ಇಂಗ್ಲಿಷ್ 'ನಾವೆಲ್'ನ ಪ್ರಸ್ತಾಪ ಬರುತ್ತದೆ.

ಕಾದಂಬರಿ ಪ್ರಕಾರ ಒಂದು ಸಾಹಿತ್ಯದಲ್ಲಿ ಯಾವಾಗ ಕಾಣಿಸಿಕೊಳ್ಳುತ್ತದೆ ? ಈ ಪ್ರಶ್ನೆಯನ್ನು ಐಯಾನ್ ವಾಟ್ ತನ್ನ 'ದಿ ರೈಸ್ ಆಫ್ ದಿ ನಾವೆಲ್' ಪುಸ್ತಕದಲ್ಲಿ ದೀರ್ಘವಾಗಿ ವಿಶ್ಲೇಷಿಸಿದ್ದಾನೆ. ಈ ಸುಪ್ರಸಿದ್ಧ ಕೃತಿಯಲ್ಲಿ ಆತ, ಮಧ್ಯಮ ವರ್ಗದ ಉದಯದಲ್ಲಿ ಕಾದಂಬರಿ ಪ್ರಕಾರದ ಬೇರಿದೆ, ಮಧ್ಯಮ ವರ್ಗದ ಬದುಕು, ದೃಷ್ಟಿಕೋನ ಮತ್ತು ಮೌಲ್ಯಗಳು ಈ ಪ್ರಕಾರಕ್ಕೆ ನೀರೆರೆಯುತ್ತವೆ 'ಎನ್ನುತ್ತಾನೆ. ಎ. ಆರ್. ಹಂಫ್ರೀಸ್ ಎನ್ನುವ ವಿಮರ್ಶಕ ಇಂಗ್ಲೆಂಡಿನಲ್ಲಿ 'ಕಾದಂಬರಿ' ಎಂದು ಒಂದು ಪ್ರತ್ಯೇಕ ಪ್ರಕಾರವನ್ನು ಗುರುತಿಸುವ ಮೊದಲೇ 'ಫಿಕ್ಷನ್' ಇಂಗ್ಲಿಷ್ ಸಾಹಿತ್ಯದಲ್ಲಿ ಕಾಣಿಸಿಕೊಂಡಿತ್ತು ಎಂದು ಹೇಳಿ, ಇದು 'ಸೆಂಟ್ರಲ್ ಕರೆಂಟ್' ಅಥವಾ ಮುಖ್ಯ ಪ್ರವಾಹಕ್ಕೆ ಯಾವಾಗ ಬಂದಿತು ಎಂದು ವಿವರಿಸುತ್ತ ಹೀಗೆನ್ನುತ್ತಾನೆ: "For the central current to carry it, certain conditions were required -a reliable prose, sufficient readers ready to follow the long evolutions of an organized rendering of life, and, above all, a belief

that prose fiction was artistically and intellectually worthy of major talent". ಈಚೆಗೆ ಕನ್ನಡ ಸಾಹಿತ್ಯದ ವಿಮರ್ಶೆಯಲ್ಲಿಯೂ ಈ ಪ್ರಶ್ನೆಯನ್ನು ಚರ್ಚಿಸಲಾಗುತ್ತಿದೆ. ಡಿ. ಆರ್. ನಾಗರಾಜ ಅವರು, ಪರಕೀಯ ಯಜಮಾನ ಸಂಸ್ಕೃತಿ ಮತ್ತು ದೇಸಿ ಸಂಸ್ಕೃತಿಗಳ ನಡುವಿನ ಮುಖಾಮುಖಿಯಲ್ಲಿ ಕಾದಂಬರಿ ಹುಟ್ಟುತ್ತದೆ ಮತ್ತು ದೇಸಿ ಮಧ್ಯಮ ವರ್ಗ ರೂಪುಗೊಂಡು ತನಗೊಂದು ಆಧುನಿಕ ಸಾಂಸ್ಕೃತಿಕ ವ್ಯಕ್ತಿತ್ವ ನಿರ್ಮಾಣ ಮಾಡಿಕೊಳ್ಳುವಾಗ ಉಂಟಾಗುವ ದ್ವಂದ್ವದಲ್ಲಿ ಕಾದಂಬರಿ ಹುಟ್ಟುತ್ತದೆ ಎನ್ನುವ 'ಥೀಸಿಸ್' ಅನ್ನು ಮುಂದಿಟ್ಟರು. ಆದರೆ ಪರಕೀಯ ಯಜಮಾನ ಸಂಸ್ಕೃತಿಯ ಒತ್ತಡವಿಲ್ಲದಿದ್ದ ಸಮುದಾಯಗಳಲ್ಲಿ ಕಾದಂಬರಿ ಹೇಗೆ ಹುಟ್ಟಿತು ಎನ್ನುವ ಪ್ರಶ್ನೆ ಏಳುತ್ತದೆ. ಈ ವಾದದಲ್ಲಿ ಪ್ರವೇಶ ಮಾಡುವುದು ಅಗತ್ಯವಿಲ್ಲ. ರೇಮಂಡ್ ವಿಲಿಯಮ್ಸ್ ಎನ್ನುವ ವಿಮರ್ಶಕ ಒಮ್ಮೆ ಹೇಳಿದ ಹಾಗೆ ಈ ವಿಷಯದ ವಿಶ್ಲೇಷಣೆಯಲ್ಲಿ ಕೆಲವೇ ಕೃತಿಗಳನ್ನು ಕಾದಂಬರಿಗಳು ಎಂದು ಗುರುತಿಸಿ ಅವುಗಳ ಆಧಾರದಿಂದ ನಿರ್ಣಯಗಳನ್ನು ಮುಟ್ಟುವ ಅಪಾಯವಿದೆ.

ಈ ಪ್ರಶ್ನೆಯನ್ನು ಇನ್ನೊಂದು ತುದಿಯಿಂದ ಸಮೀಪಿಸಿದರೆ ಒಂದು ಉತ್ತರ ಲಭ್ಯವಾಗಬಹುದೇನೊ. ಗದ್ಯಕ್ಕೂ ಕಾದಂಬರಿಗೂ ಚಿರಕಾಲದ ನಂಟು. ಇದಕ್ಕೆ ಒಂದೇ ಒಂದು ಅಪವಾದ ಎಂದರೆ ರಷ್ಯನ್ ಸಾಹಿತಿ ಅಲೆಕ್ಸಾಂಡರ್ ಪುಷ್ಕಿನನ 'ಯುಜೀನ್ ಒನೆಜಿನ್'. ಈ ಬಾಂಧವ್ಯವೇಕೆ ? ರೂಪಕ್ಕೂ ಅನುಭವಕ್ಕೂ ಗಾಢವಾದ ಬಾಂಧವ್ಯವಾದುದರಿಂದ. ಈ ಗದ್ಯಮಾಧ್ಯಮದ ಅನಿವಾರ್ಯತೆಗೆ ಅರ್ಥವಿರಬೇಕು. ಗದ್ಯ-ಪದ್ಯಗಳಲ್ಲಿನ ಪ್ರಮುಖ ವ್ಯತ್ಯಾಸವೆಂದರೆ, ಪದ್ಯಕ್ಕೆ ನಿಯತವಾದ ವಿನ್ಯಾಸ ಉಂಟು; ಮುಕ್ತ ಛಂದಸ್ಸಿಗೆ ಸಹ ಸ್ವೇಚ್ಛಾ ವಿನ್ಯಾಸವಿಲ್ಲ. ಗದ್ಯಕ್ಕೆ ಈ ಬಗೆಯ pattern, ವಿನ್ಯಾಸವಿಲ್ಲ. ವಿಮರ್ಶಕರು ಸೂಚಿಸಿರುವ ಹಾಗೆ, ಇದರಿಂದಾಗಿ ಗದ್ಯವು low tension ಅನ್ನು ಒಳಕೊಳ್ಳಬಲ್ಲದು. ಇದು ನಿತ್ಯ ಜೀವನದ ಹೊರ ಮತ್ತು ಮಾನಸಿಕ ಸ್ವರೂಪಕ್ಕೆ ಹತ್ತಿರವಾದುದು. ಕಾದಂಬರಿ ಮತ್ತು ಸಣ್ಣಕಥೆ ಕಾಣಿಸಿಕೊಳ್ಳುವ ಮೊದಲು, ಸಂಕೀರ್ಣ ಮಾಧ್ಯಮವಾದ ನಾಟಕವನ್ನು ಬಿಟ್ಟು ಸಾಹಿತ್ಯದಲ್ಲಿ ಉಳಿಯುವುದೇನು ? ಮಹಾಕಾವ್ಯ, ಪದ್ಯವೃತ್ತಾಂತ ಮತ್ತು ಭಾವಗೀತೆ. ಇವು ಯಾವುದೂ ನಿತ್ಯ ಜೀವನದ ವಾಸ್ತವತೆ ಮತ್ತು ಸಾಮಾನ್ಯ ಜನರ ಸ್ವಭಾವ ವಿಶ್ಲೇಷಣೆಗೆ ಹೇಳಿದ ಮಾಧ್ಯಮವಲ್ಲ. ಮಹಾಕಾವ್ಯವು larger than life, ಪಾತ್ರಗಳನ್ನು. ಸಹಜಗಾತ್ರವನ್ನು ಕುಬ್ಜಗೊಳಿಸುವ ಪಾತ್ರಗಳನ್ನು ಸೃಷ್ಟಿಸುತ್ತದೆ. ಒಂದು ಸಮುದಾಯವು ಇಡೀ ಸಮುದಾಯದ ಮುಂದೆ ಮಾದರಿಗಳನ್ನಿಡಲು ಮಹಾಕಾವ್ಯವನ್ನು ಸೃಷ್ಟಿಸುತ್ತದೆ. ಸಮುದಾಯವು ತನ್ನ ಒಳ ಸಂಬದ್ಧತೆಯನ್ನು ಉಳಿಸಿ ಬೆಳೆಸಿಕೊಳ್ಳುವ ಘಟ್ಟದಲ್ಲಿ ಮಹಾಕಾವ್ಯ ರೂಪಿತವಾಗುತ್ತದೆ. ಇಲ್ಲಿ ಪಾತ್ರಗಳು ಮಾದರಿಗಳು. ವಿಶಿಷ್ಟವಲ್ಲ. ಇಲ್ಲಿ ಎಲ್ಲ ಮಾದರಿಗಳೇ. ಅಯೋಧ್ಯೆಯಂತೆಯೇ ಲಂಕೆ. ಲಂಕೆಯಂತೆಯೇ ಹಸ್ತಿನಾಪುರ. ಹಸ್ತಿನಾಪುರದಂತೆಯೇ ಇಂದ್ರಪ್ರಸ್ಥ. ಎಲ್ಲ ಮಹಾನಗರಗಳೂ ಉದ್ಯಾನವನಗಳಿಂದ ಕಂಗೊಳಿಸುತ್ತವೆ.

ವಿಶಾಲ ಬೀದಿಗಳು, ಗಾಳಿಯಲ್ಲಿ ಸುಗಂಧ, ಸಂಗೀತ ಬೆರೆತುಹೋಗಿರುತ್ತವೆ. ಒಬ್ಬನೇ ಕಾದಂಬರಿಕಾರನ ಎರಡು ನಗರಗಳು, ಎರಡು ಹಳ್ಳಿಗಳು ಒಂದೇ ತೆರನಾಗಿರುವದಿಲ್ಲ. ಸಮುದಾಯದ ಗಮನ 'ಮಾನವ'ನಿಂದ 'ಮನುಷ್ಯ'ರತ್ತ ತಿರುಗಿದಾಗ, ಎಂದರೆ ವಾಸ್ತವ ಜಗತ್ತಿನಲ್ಲಿ ಮನುಷ್ಯ-ಮನುಷ್ಯರಲ್ಲಿರುವ ವ್ಯತ್ಯಾಸ, ವ್ಯಕ್ತಿತ್ವದ ಅನನ್ಯತೆ ಇವುಗಳತ್ತ ತಿರುಗಿದಾಗ, ಸಮುದಾಯ ತನ್ನತ್ತಲೇ ವಿಮರ್ಶೆಯ ನೋಟವನ್ನು ತಿರುಗಿಸಿ ವಿಶ್ಲೇಷಣೆ ಮಾಡುವ ಮನಸ್ಥಿತಿಯಲ್ಲಿರುವಾಗ ಕಾದಂಬರಿ ಸೂಕ್ತ ಮಾಧ್ಯಮವಾಗುತ್ತದೆ. ಪ್ರತಿಯೊಬ್ಬ ಮಾನವನಿಗೂ ಇತರರಿಂದ ಬೇರೆಯಾದ ವ್ಯಕ್ತಿತ್ವ ಇದೆ ಎಂದು ಗುರುತಿಸಿದಾಗ ಕಾದಂಬರಿ ಹುಟ್ಟುತ್ತದೆ. ಈ ಮನಸ್ಥಿತಿಗೆ ಕಾರಣ ಏನೇ ಆಗಬಹುದು; ಹೊರಗಿನ ಸಮುದಾಯ ಒಂದರ ಸಂಪರ್ಕ ಆಗಬಹುದು, ಸಮುದಾಯದೊಳಗೇ ಆಗುವ ಬದಲಾವಣೆಗಳು, ತುಮುಲಗಳೂ ಆಗಬಹುದು. ೧೯ನೆಯ ಶತಮಾನದ ಉತ್ತರಾರ್ಧದಲ್ಲಿ ದಾಸ್ಯ, ಪಾಶ್ಚಾತ್ಯ ಸಂಸ್ಕೃತಿಯ ಮತ್ತು ಚುಚ್ಚು ವಿಮರ್ಶೆ, ಸುಧಾರಣೆಯ ಅಗತ್ಯದ ಅರಿವು ಎಲ್ಲವೂ ಕನ್ನಡ ನಾಡಿನಲ್ಲಿ ಕಾದಂಬರಿಯ ಹುಟ್ಟಿಗೆ ಕಾರಣವಾದವು. 'ರೊಮಾನ್ಸ್' ಪ್ರಕಾರವು ಮನುಷ್ಯನ ಅದ್ಭುತದ ಪ್ರಿಯತೆಯಲ್ಲಿಯೆ ಬೇರು ಬಿಟ್ಟಿದೆ. ಆದರೆ ಕಾದಂಬರಿಯು ಸಮುದಾಯದ ಒಂದು ಹಂತದ ಅಗತ್ಯದಲ್ಲಿ ಬೇರು ಬಿಟ್ಟಿದೆ.

ಅದ್ಭುತರಮ್ಯ ಕಥೆಗಳನ್ನು ಬಿಟ್ಟು ನಾವು ಸಾಗಿದರೆ, ಮೊದಲು ಕಾಣುವವು ಅನುವಾದಗಳು. ಕೆಂಪುನಾರಾಯಣನ 'ಮುದ್ರಾಮಂಜೂಷ' ಅನುವಾದವಲ್ಲದಿದ್ದರೂ ಸಂಸ್ಕೃತದ 'ಮುದ್ರಾರಾಕ್ಷಸ' ಇದಕ್ಕೆ ಆಧಾರ. ೧೮೪೭ ರಲ್ಲಿ ಜಾನ್ ಬನಿಯನ್‌ನ 'ದಿ ಪಿಲಿಗ್ರಿಮ್ಸ್ ಪ್ರೊಗ್ರೆಸ್' ಮತ್ತು ೧೮೫೭ ರಲ್ಲಿ ಡ್ಯಾನಿಯಲ್ ಡಫೋನ 'ರಾಬಿನ್‌ಸನ್ ಕ್ರೂಸೊ' ಇಂಗ್ಲಿಷ್‌ನಿಂದ ಅನುವಾದವಾದವು. ಗಂಭೀರವಾಗಿ ಪರಿಗಣಿಸಬೇಕಾದ ಮೊದಲನೆಯ ಸ್ವತಂತ್ರ ಕಾದಂಬರಿ ಗುಲ್ವಾಡಿ ವೆಂಕಟರಾಯರ 'ಇಂದಿರಾಬಾಯಿ' ೧೮೯೯ ರಲ್ಲಿ ಪ್ರಕಟವಾದದ್ದು. ಇದಕ್ಕೆ ಮೊದಲು ೧೮೮೫ ರಲ್ಲಿ ಬಿ. ವೆಂಕಟಾಚಾರ್ಯರು ಬಂಕಿಮಚಂದ್ರರ 'ದುರ್ಗೇಶ ನಂದಿನಿ'ಯನ್ನು ಕನ್ನಡಕ್ಕೆ ಅನುವಾದಿಸಿದರು. ೧೮೯೮ರಲ್ಲಿ ಗಳಗನಾಥರ 'ಪ್ರಬುದ್ಧ ಪದ್ಮನಯನೆ' ಪ್ರಕಟವಾಯಿತು. ಮುಂದೆ ಇವರಿಬ್ಬರೂ ಬಂಗಾಳಿ ಮತ್ತು ಇತರ ಭಾರತೀಯ ಭಾಷೆಗಳಿಂದ ಕಾದಂಬರಿಗಳನ್ನು ಅನುವಾದ ಮಾಡಿದರು. ೧೮೨೩ ರಲ್ಲಿ ಪ್ರಕಟವಾದ ಕೆಂಪುನಾರಾಯಣನ 'ಮುದ್ರಾಮಂಜೂಷ' ಕನ್ನಡದಲ್ಲಿ ಪ್ರಥಮ ಐತಿಹಾಸಿಕ ಕಾದಂಬರಿ. ೧೮೯೭ ರಲ್ಲಿ ಪ್ರಕಟವಾದ ಎಂ. ವೆಂಕಟಕೃಷ್ಣಯ್ಯನವರ 'ಚೋರಗ್ರಹಣತಂತ್ರ' ಮೊದಲನೆಯ ಪತ್ತೇದಾರಿ ಕಾದಂಬರಿ. ಗುಲ್ವಾಡಿ ವೆಂಕಟರಾಯರ 'ಇಂದಿರಾಬಾಯಿ' ಮೊದಲನೆಯ ಸ್ವತಂತ್ರ ಸಾಮಾಜಿಕ ಕಾದಂಬರಿ. ಗಳಗನಾಥರು ೧೯೧೩ ರಲ್ಲಿ ಪ್ರಕಟಿಸಿದ 'ಕುಮುದಿನಿ', ಕರ್ನಾಟಕದ ಇತಿಹಾಸಕ್ಕೆ ಸಂಬಂಧಿಸಿದ ಮೊದಲನೆಯ ಕಾದಂಬರಿ. ಗಳಗನಾಥರೂ ವೆಂಕಟಾಚಾರ್ಯರೂ

ಓದುಗರ ವೃತ್ತವನ್ನು ಹಿಗ್ಗಿಸಿದರು. ಒಂದಕ್ಕೊಂದು ಸುಸಂಬದ್ಧವಾಗಿ ಹೆಣೆದ ಘಟನೆಗಳ ಕಥಾವಸ್ತುವನ್ನು ಪರಿಚಯ ಮಾಡಿಕೊಟ್ಟರು. ೧೪ನೆಯ ವರ್ಷದಲ್ಲಿ ವಿಧವೆಯಾಗಿ, ಸಾಹಿತ್ಯ ರಚನೆಯನ್ನು ಕೈಗೊಂಡ ನಂಜನಗೂಡು ತಿರುಮಲಾಂಬಾ ಅವರನ್ನು ಅವರ ಸ್ಥೈರ್ಯಕ್ಕಾಗಿ ಸ್ಮರಿಸಬೇಕು. ಇವರ ಕಾದಂಬರಿಗಳಲ್ಲಿ ನೀತಿ ಮತ್ತು ಉಪದೇಶಕ್ಕೆ ದೊಡ್ಡ ಸ್ಥಾನ. ಡಾ. ಸಿ. ಎನ್. ರಾಮಚಂದ್ರನ್ ಅವರು ಗುರುತಿಸಿರುವಂತೆ ಇವರ ಕಾದಂಬರಿಗಳಲ್ಲಿ ಕನ್ನಡದಲ್ಲಿ ಮೊತ್ತ ಮೊದಲಿಗೆ ಸ್ತ್ರೀ ವಿಶಿಷ್ಟ ಚಿಂತನೆಯನ್ನು ಗುರುತಿಸುತ್ತೇವೆ. ಪರಂಪರಾಗತ ಹಿಂದೂ ಸಮಾಜದ ಬಗ್ಗೆ ದ್ವಂದ್ವ ಮನೋಭಾವವನ್ನು ಕಾಣುತ್ತೇವೆ. ಡಾ. ರಾಮಚಂದ್ರನ್ ಅವರು ತಿರುಮಲಾಂಬಾ ಅವರ ಕೆಲವು ಮಾತುಗಳನ್ನು ಉದ್ಧರಿಸುತ್ತಾರೆ. "ಸ್ತ್ರೀಯರ ಉನ್ನತಿ ಅವನತಿಗಳ ಪ್ರತಿಯೊಂದು ವಿಚಾರದಲ್ಲಿಯೂ ಪುರುಷ ಲೇಖಕರಲ್ಲಿ ಭಿನ್ನಮತ ಕಂಡು ಬರುತ್ತದೆ. ಈ ಬಗೆಯ ಭಿನ್ನಮತವು ಪುರುಷವರ್ಗದವರಲ್ಲಿ ಕಂಡು ಬರುವದಕ್ಕೆ ಸ್ತ್ರೀಯರ ಬುದ್ಧಿ, ಮನಸ್ಸು, ಅಂತಃಕರಣಗಳ ಪ್ರಾಕೃತಿಕ ರಚನೆ, ಸ್ವಭಾವಗಳ ವಿಷಯಕವಾಗಿಯೂ ಸಾವಿರಾರು ವರ್ಷಗಳಿಂದ ಆನುವಂಶಿಕವಾಗಿ ಅವರ ಮನಸ್ಸಿನ ಮೇಲೆ ಉಂಟಾಗಿರುವ ಸಂಸ್ಕಾರ ವಿಷಯಕವಾಗಿಯೂ, ಪುರುಷರಿಗಿರುವ ಅಪೂರ್ಣವಾದ ಪರಿಚಯವೇ ಕಾರಣವಾಗಿರುವುದೆಂದು ನಮ್ಮ ಮತವಾಗಿರುವದು." ಈ ಮಾತುಗಳನ್ನು ಉದ್ಧರಿಸಿ ಡಾ. ರಾಮಚಂದ್ರನ್ ಮುಂದೆ ತ್ರಿವೇಣಿ, ಅನುಪಮಾ ನಿರಂಜನ ಮೊದಲಾದವರು ಇದೇ ನಿಲುವನ್ನು ಮುಂದುವರಿಸಿದರು ಎನ್ನುತ್ತಾರೆ.

ಈ ಕಾಲದ ಕಾದಂಬರಿಯ ಮೇಲಿನ ಪ್ರಭಾವಗಳನ್ನೆಲ್ಲ ಇಲ್ಲಿ ಚರ್ಚಿಸುವುದು ಸಾಧ್ಯವಲ್ಲ. ಇಂಗ್ಲಿಷ್ ಕಾದಂಬರಿಗಳ ಅನುವಾದಗಳು ಪ್ರಾರಂಭದಲ್ಲಿಯೆ ಬಂದವು. ಮುಂದೆ 'ಮಾಡಿದ್ದುಣ್ಣೊ ಮಹಾರಾಯ'ದಂಥ ಒಳ್ಳೆಯ ಕಾದಂಬರಿಯನ್ನು ಬರೆದ ಎಂ. ಎಸ್. ಪುಟ್ಟಣ್ಣನವರೂ ೧೮೯೭ ರಲ್ಲಿ ಅಷ್ಟೇನೂ ಒಳ್ಳೆಯದಲ್ಲದ ಥಾಮಸ್ ಡೇನ 'ಸ್ಯಾಂಡ್‌ಫರ್ಡ್ ಆಂಡ್ ಮರ್ಟನ್' ಕೃತಿಯನ್ನು ಅನುವಾದಿಸಿದರು. 'ದಿ ಪಿಲಿಗ್ರಿಮ್ಸ್ ಪ್ರೊಗ್ರೆಸ್', 'ರಾಬಿನಸನ್ ಕ್ರೂಸೊ'ಗಳನ್ನು ಆಗಲೆ ಪ್ರಸ್ತಾಪಿಸಲಾಗಿದೆ. ಬಂಗಾಳಿ, ಮರಾಠಿಗಳಿಂದ ಅನುವಾದಗಳು ಬಂದವು. ರಾಮಚಂದ್ರನ್ ಅವರು ಯಕ್ಷಗಾನದ ಪ್ರಭಾವವನ್ನು ಗುರುತಿಸಿದ್ದಾರೆ. ಕಾಲೇಜುಗಳಲ್ಲಿ ಈ ಕಾಲದ ತರುಣರು ಹಲವು ಇಂಗ್ಲಿಷ್ ಕಾದಂಬರಿಗಳನ್ನು ಓದುತ್ತಿದ್ದರು. ಮಾಸ್ತಿಯವರು ತಾವು ಕಾಲೇಜಿನಲ್ಲಿ ಜಾರ್ಜ ಎಲಿಯಟ್‌ಳ 'ಆ್ಯಡಂ ಬೀಡ್' ಕಾದಂಬರಿಯನ್ನು ಪಠ್ಯವಾಗಿ ಓದಿದುದನ್ನು ಹಾಗೂ ಅದನ್ನು ಕುರಿತು 'ಲೆಸ್ಲಿ ಸ್ಟೀಫನ್' ಬರೆದ ವಿಮರ್ಶೆ ಓದಿದುದನ್ನು ಪ್ರಸ್ತಾಪಿಸುತ್ತಾರೆ.

ಐತಿಹಾಸಿಕ ಕಾದಂಬರಿಯು ಈ ಕಾಲದಲ್ಲಿ ಕನ್ನಡ ಸಾಹಿತ್ಯವನ್ನು ಪ್ರವೇಶಿಸಿದರೂ ಇದು ಹೊರರೂಪಕ್ಕೆ ಮಾತ್ರ ಐತಿಹಾಸಿಕ ಕಾದಂಬರಿ.

ವೆಂಕಟಾಚಾರ್ಯರು ಬಂಕಿಮಚಂದ್ರರ ಕಾದಂಬರಿಗಳನ್ನು ಕನ್ನಡಕ್ಕೆ ತಂದರು. ಒಂದು ಕಾಲವನ್ನು ಅದರ ಎಲ್ಲ ಶಕ್ತಿಗಳ ಪ್ರತಿಕ್ರಿಯೆಗಳು ಪ್ರಕಟವಾಗುವಂತೆ, ಅದರ ಮೌಲ್ಯಗಳು ಪ್ರಕಟವಾಗುವಂತೆ ಪುನರ್‌ಸೃಷ್ಟಿಸುವ ಕಲ್ಪನೆ, ಇತಿಹಾಸಕ್ಕೆ ವ್ಯಾಖ್ಯಾನ ನೀಡುವ ಅಗತ್ಯ, ಇವು ಈ ಕಾದಂಬರಿಕಾರರಿಗೆ ಸ್ಪಷ್ಟವಾಗಲಿಲ್ಲ. ಮನಸ್ಸನ್ನು ಸೆರೆ ಹಿಡಿಯುವ ಕಥೆ, ದೇಶಭಕ್ತಿಯ ಪ್ರಚೋದನೆ ಇವು ಈ ಕಾದಂಬರಿಕಾರರ ಗುರಿ. ಆದರೆ ಅಂದಿನ ಚಾರಿತ್ರಿಕ ಮತ್ತು ಸಾಂಸ್ಕೃತಿಕ ಸಂದರ್ಭದಲ್ಲಿ ಅವರ ಸಾಧನೆ ಮೌಲಿಕವೇ ಆಯಿತು. ಆದರೆ ನಿಜವಾಗಿ ಐತಿಹಾಸಿಕ ಕಾದಂಬರಿಯ ಉದಯವಾಗಲಿಲ್ಲ.

ಈ ಅವಧಿಯ ಕಾದಂಬರಿಯ ಮುಖ್ಯ ಸಾಧನೆ ವಾಸ್ತವ ಪರಂಪರೆಯ ಉದ್ಘಾಟನೆ. ಮುಖ್ಯವಾಗಿ, ವೆಂಕಟರಾವ ಗುಲ್ವಾಡಿಯವರ 'ಇಂದಿರಾಬಾಯಿ' ಮತ್ತು ಎಂ. ಎಸ್. ಪುಟ್ಟಣ್ಣನವರ 'ಮಾಡಿದ್ದುಣ್ಣೋ ಮಹಾರಾಯ' ಈ ಕಾದಂಬರಿಗಳು ವಾಸ್ತವತೆಯನ್ನು ಮೇಲ್ಮೈಯಲ್ಲಿ ಗ್ರಹಿಸದೆ ಆಳವಾಗಿ ಗುರುತಿಸಿದ ಕಾದಂಬರಿಗಳು ಎನ್ನುವುದು ಮಹತ್ವದ ಮಾತು. ಪುಟ್ಟಣ್ಣನವರಂತೂ ಹಳ್ಳಿಯ ಜೀವನವನ್ನು ಅದರ ಎಲ್ಲ ಭಾಗಗಳು, ಹಾಗೂ ಆಯಾಮಗಳೊಂದಿಗೆ ಪುನರ್‌ಸೃಷ್ಟಿ ಮಾಡುತ್ತಾರೆ. ಹಳ್ಳಿಯ ಶಾಲೆ, ಅಧಿಕಾರಿಯ ಮನೆ-ಕಚೇರಿಯಿಂದ ಹಿಡಿದು ದೂರದ ರಾಜನ ಆಡಳಿತದೊಂದಿಗೆ ಹಳ್ಳಿಯ ಸಂಬಂಧದವರೆಗೆ, ಕಳ್ಳನ ಬದುಕಿನವರೆಗೆ ಹಳ್ಳಿಯ ಬದುಕನ್ನು ಸಮಗ್ರವಾಗಿ ಹಿಡಿದಿಡುತ್ತಾರೆ. ಈ ವಾಸ್ತವಿಕತೆಯ ಮೌಲ್ಯ ನಿರ್ಣಯವು ಕಥೆಯ ಇತರ ಪಾತ್ರಗಳ ಬದುಕು, ಕಥಾವಸ್ತುವಿನ ಬಾಗು ಇವುಗಳಿಂದಲೇ ಆಗುತ್ತದೆ. ಇಲ್ಲಿನ ವಾಸ್ತವತೆಯ ಶಕ್ತಿ ಇರುವದು ಇದು ನಿರ್ಮಿಸುವ ಜಗತ್ತಿನ ಸ್ವರೂಪವನ್ನು ಅದರ ಸೌಮ್ಯತೆ ಸೊಗಸುಗಳೊಡನೆ ಅದರ ವಿಕಾರ, ವಕ್ರತೆಗಳನ್ನು ದಿಟ್ಟಿಸಿ ಗ್ರಹಿಸುವ ಮನೋಧರ್ಮದಲ್ಲಿ; ಬದುಕಿನ ಸಂಕೀರ್ಣ ಅನುಭವಕ್ಕೆ ತೋರುವ ನಿಷ್ಠೆಯಲ್ಲಿ. ಕುತೂಹಲದ ಸಂಗತಿ ಎಂದರೆ ಪುಟ್ಟಣ್ಣನವರಿಗೆ ನೀತಿಬೋಧಕ ಉದ್ದೇಶವಿದೆ. ಪಾತ್ರಗಳು ಪುರಾಣಗಳ ಸೂತ್ರಗಳ ನಿದರ್ಶನಗಳಾಗಬೇಕೆಂದು ಅವರ ಆಶಯ. ನಾಯಕ, ರಾಮಚಂದ್ರನಂತೆ ಸದ್ಗುಣಿ. ಅವನ ಹೆಂಡತಿ ಸೀತೆ. ರಾವಣನ ಪ್ರತಿರೂಪನಾದ ಒಂದು ಪಾತ್ರ. ರಾಮಾಯಣದ ಸೀತೆ ಅಗ್ನಿಪ್ರವೇಶ ಮಾಡಿ ಹೊರ ಬಂದಂತೆ ಈ ಸೀತೆಯೂ ಅಗ್ನಿಪ್ರವೇಶಮಾಡಿ ಹೊರಬರುತ್ತಾಳೆ. ರಾಮಾಯಣವು ಪುಟ್ಟಣ್ಣನವರ ಕಣ್ಣಮುಂದೆ ಸದಾ ಇದ್ದರೂ ಕಾದಂಬರಿ ವಾಸ್ತವವಾಗುತ್ತದೆ. ದುಷ್ಟತನವು ತನ್ನೆಲ್ಲ ಕುರೂಪದೊಂದಿಗೆ ಪ್ರದರ್ಶಿತವಾಗುತ್ತದೆ. ರಾಮಾಯಣದಲ್ಲಿ ಮಹಾಯುದ್ಧದ ನಂತರ ರಾಮ-ಸೀತೆಯರು ಅಯೋಧ್ಯೆಗೆ ಹಿಂದಿರುಗುತ್ತಾರೆ. ಸಂತೋಷ–ನೆಮ್ಮದಿಗಳ ಸಾಧ್ಯತೆಯನ್ನು ಉಳಿಸಿಕೊಂಡಿರುವ ಅಯೋಧ್ಯೆ, ಆ ನಗರ. ಕಾದಂಬರಿಯಲ್ಲಿ ಹಳ್ಳಿ ಹಾಳು ಬೀಳುತ್ತದೆ. ಡಾ. ಆಮೂರರು ಸರಿಯಾಗಿಯೇ ಈ ಕಾದಂಬರಿಯನ್ನು ರಾವಬಹದ್ದೂರರ 'ಗ್ರಾಮಾಯಣ'ದೊಂದಿಗೆ

ಹೋಲಿಸಿದ್ದಾರೆ. ಸುಲಭ ನೈತಿಕ ಸಮಾಧಾನವನ್ನು ಕೊಟ್ಟು ವಿರಮಿಸದೆ, ಕಾದಂಬರಿಯು ಒಂದು ನೈತಿಕ ನಿಯಮದ ಕಾರ್ಯವೈಖರಿಯನ್ನು ಅನುಭವಕ್ಕೆ ತರುತ್ತದೆ. ಮನುಷ್ಯ ಸ್ವಭಾವದಲ್ಲಿನ ಆಸಕ್ತಿ ಇಲ್ಲಿ ಪ್ರಥಮ ಬಾರಿಗೆ ಗರಿಗೆದರುತ್ತದೆ. ಅಮಾಸನ ಕಥೆಯು ಮನುಷ್ಯ ಸ್ವಭಾವದ ಚಿತ್ರಣವನ್ನು ಒಂದು ಹೆಜ್ಜೆ ಮುಂದಕ್ಕೊಯ್ಯುತ್ತದೆ. 'ಇಂದಿರಾಬಾಯಿ' ಸಮಕಾಲೀನ ಸಮಾಜದ ವಿಮರ್ಶೆ. ಈ ಎರಡೂ ಕಾದಂಬರಿಗಳ ಒಂದು ವೈಶಿಷ್ಟ್ಯವನ್ನು ವಿಮರ್ಶಕರು ಗಮನಿಸಿದ್ದಾರೆ. ಇವು ವಾಸ್ತವಿಕ ಕಾದಂಬರಿಗಳಾದರೂ ಆದರ್ಶ ಇವುಗಳಲ್ಲಿ ಧ್ವನಿತವಾಗುತ್ತದೆ.

ಕಾದಂಬರಿಯ ವಿಷಯದಲ್ಲಿ ಹೇಳಿದ ಹಲವು ಮಾತುಗಳು ಸಣ್ಣ ಕಥೆಗೂ ಅನ್ವಯಿಸುತ್ತವೆ. ಪತ್ರಿಕೆಗಳ ಸಂಖ್ಯೆ ಬೆಳೆದದ್ದು ಸಣ್ಣ ಕಥೆಗೆ ವರವಾಯಿತು. ೧೯೦೦ ರಲ್ಲಿ 'ಸುವಾಸಿನಿ' ಮಾಸಪತ್ರಿಕೆಯಲ್ಲಿ ಪಂಜೆ ಮಂಗೇಶರಾಯರ 'ನನ್ನ ಚಿಕ್ಕ ತಾಯಿ', 'ನನ್ನ ಚಿಕ್ಕ ತಂದೆ' ಪ್ರಕಟವಾದವು. ಕನ್ನಡದಲ್ಲಿ ಸಣ್ಣಕಥೆ ಇವುಗಳೊಂದಿಗೆ ಪ್ರಾರಂಭವಾಯಿತು ಎನ್ನಬಹುದು. ಕುತೂಹಲದ ಸಂಗತಿಯೆಂದರೆ, ಸಾಮಾನ್ಯವಾಗಿ ಸಣ್ಣಕಥೆಯ ಇತಿಹಾಸ ಪ್ರಾರಂಭವಾಗುವುದು, ಕಥೆಯ ಅಂಶವೇ ಪ್ರಧಾನವಾದ ರಚನೆಗಳಿಂದ. ಆದರೆ ಕನ್ನಡ ಸಣ್ಣಕಥೆ ಪ್ರಾರಂಭವಾಗುವುದು ಸ್ವಭಾವಚಿತ್ರಣದಿಂದ. ಎಂ. ಎನ್. ಕಾಮತ್, ಕೆರೂರು ವಾಸುದೇವಾಚಾರ್ಯರು ಮೊದಲಾದವರು ಕಥೆಯ ಮಾಧ್ಯಮವನ್ನು ಆಗಲೆ ಬಳಸಿದ್ದರು. ಆದರೆ, ೧೯೨೦ ರಲ್ಲಿ ಪ್ರಕಟವಾದ ಮಾಸ್ತಿಯವರ 'ಕೆಲವು ಸಣ್ಣಕಥೆಗಳು' ಈ ಪ್ರಕಾರವು ಬಹುಬೇಗ ಪ್ರಬುದ್ಧತೆಯನ್ನು ಸಾಧಿಸಿತೆಂಬುದನ್ನು ತೋರಿಸಿತು. ಈ ಸಂಕಲನವು ೧೯೨೦ ರಲ್ಲಿ ಪ್ರಕಟವಾದರೂ ಮಾಸ್ತಿಯವರ ಮೊದಲನೆಯ ಸಣ್ಣಕಥೆ 'ರಂಗಪ್ಪನ ಮದುವೆ' ೧೯೧೦ ರಲ್ಲಿಯೇ ಮಾಸ್ತಿಯವರಿಗೆ ೧೯ ವರ್ಷ ವಯಸ್ಸಾಗಿದ್ದಾಗ ಪ್ರಕಟವಾಯಿತು. ಈ ಕಥೆಯ ರಂಗಪ್ಪನೇ ಮುಂದಿನ ಎರಡು ಕಥೆಗಳಾದ 'ರಂಗಪ್ಪನ ದೀಪಾವಳಿ' ಮತ್ತು 'ರಂಗಪ್ಪನ ಕೋರ್ಟಷಿಪ್'ಗಳ ನಾಯಕ. ಯೌವನದ ಖುಷಿ ಇಲ್ಲಿದೆ. ಇವುಗಳಲ್ಲಿ ಕಥೆಯ ಅಂಶ ತೀರ ತೆಳು. ಆದರೆ ಇಂಥ ಹಾಸ್ಯ ಈ ಕಥೆಗಳಿಗೆ ಮೊದಲು ಹೆಚ್ಚಿರಲಿಲ್ಲ, ಅನಂತರವೂ ವಿರಳ. ನಿತ್ಯ ಜೀವನದ ಸೊಗಸು ಇಲ್ಲಿ ತುಂಬಿದೆ. 'ರಂಗಪ್ಪನ ಮದುವೆ'ಯಲ್ಲಿ ಅಂದಿನ ಭಾರತೀಯ ಬದುಕು–ಪಾಶ್ಚಾತ್ಯ ಸಂಸ್ಕೃತಿಗಳ ಮುಖಾಮುಖಿಯನ್ನು ಕೆಲವರು ಕಂಡಿದ್ದಾರೆ. ಸುಂದರ ಮುಗುಳ್ನಗೆಯಲ್ಲಿ ದಂತ ಪರೀಕ್ಷೆ ಮಾಡಿದಂತೆ ಇದು. ಆದರೆ ಇದೇ ಸಂಕಲನದ ಪ್ರಸಿದ್ಧ ಕಥೆ 'ವಸುಮತಿ'ಯಲ್ಲಿ ಇಂಥ ಮುಖಾಮುಖಿ ಇದೆ. ವಸಾಹತುಶಾಹಿಗೆ ಸಿಕ್ಕ ನಾಡಿನ ನೋವು ಇಲ್ಲಿ ವ್ಯಕ್ತವಾಗಿದೆ. ಈ ಸಂಕಲನದ ವಿವರವಾದ ವಿಮರ್ಶೆಯೇ ಬೆರಗನ್ನುಂಟುಮಾಡುತ್ತದೆ. ಬೇರೆ ಬೇರೆ ಕಥೆಗಳನ್ನು ಗಮನಿಸಿದಾಗ ಕಾಣಬಹುದಾದ ವಸ್ತುಗಳ 'ರೇಂಜ್' ಅಥವಾ 'ವ್ಯಾಪ್ತಿ' ಕಥೆಗಳ ಮನಸ್ಥಿತಿ, ತಂತ್ರ ಎಲ್ಲ ಒಬ್ಬರೇ ರಚಿಸಿದ ಒಂದು ಸಂಕಲನದಲ್ಲಿ ಕಾಣುತ್ತೇವೆ. ಮೊದಲ ಮೂರು ಕಥೆಗಳಲ್ಲಿ ಚಿಕ್ಕ

ವಯಸ್ಸಿನ ಗಂಡ-ಹೆಂಡಿರ ಬದುಕು. ಹದವಾದ ಮನಸ್ಸಿನ ಮುಪ್ಪಿನ ಆಶೀರ್ವಾದದಲ್ಲಿ ಅರಳುತ್ತದೆ. 'ಅಮ್ಮಯ್ಯ'ನಂಥ ಚಿಕ್ಕ ಹುಡುಗಿಯ ಪಾತ್ರಕ್ಕೆ ಜೀವಕಳೆ ಕೊಡಬಲ್ಲರು ಮಾಸ್ತಿ. 'ನಮ್ಮ ಮೇಷ್ಟರು' ಕನ್ನಡದ ಶ್ರೇಷ್ಠ ಕಥೆಗಳಲ್ಲಿ ಒಂದು. ಕಥೆಯ ಬಹುಭಾಗ ಹಾಸ್ಯದ ನೆರಳಿನಲ್ಲೆ ಗಂಭೀರವಾಗಿ ನಡೆದು ಬಂದು, ಇದ್ದಕ್ಕಿದ್ದಂತೆ ನಮ್ಮ ನಗುವಿಗೆ ವಸ್ತುವಾಗಿದ್ದವರ ಬದುಕಿನ ನೋವು, ಅದರಲ್ಲಿ ಮಿಂಚುವ ಪ್ರೀತಿ, ಮೇಷ್ಟರ ಹೆಂಡತಿ ನಗುವಿಗೆ ವಸ್ತುವಾಗಿದ್ದಾಕೆಯ ಸ್ವಭಾವದ ಮತ್ತೊಂದು ಆಯಾಮದ ಅನಾವರಣ, ನದಿಯ ನೀರನ್ನು ದಂಡೆ ತಡೆಯುವಂತೆ ನೋವನ್ನು ಹಾಸ್ಯ ತಡೆದು tension ಅನ್ನು ನಿಯಂತ್ರಿಸುವುದು ಎಲ್ಲ ಸೇರಿ ಇದೊಂದು ಶ್ರೇಷ್ಠ ಕಥೆಯಾಗಿದೆ. 'ಇಂದಿರೆಯೋ ಅಲ್ಲವೊ' ಅದ್ಭುತವಾದ 'ಫ್ಯಾಂಟಸಿ'. ತಂತ್ರದ ದೃಷ್ಟಿಯಿಂದಲೂ ಇದೊಂದು ಗಮನಾರ್ಹ ಸಂಕಲನ. ಕೆಲವು ಕಥೆಗಳಲ್ಲಿ ಸರ್ವಸಾಕ್ಷಿ ವೃತ್ತಾಂತಕಾರ : ಕೆಲವು ಕಥೆಗಳಲ್ಲಿ ಕ್ರಿಯೆಯ ಅಂಚಿನಲ್ಲಿ ನಿಂತ ಹಿರಿಯ; 'ನಮ್ಮ ಮೇಷ್ಟರು' ಕಥೆಯಲ್ಲಿ ಬಹು ಭಾಗದಲ್ಲಿ perspective ನೋಟದ ಹರಿವು ಇದ್ದಕ್ಕಿದ್ದಂತೆ ಬದಲಾಗಿ ಮೇಷ್ಟರು ಮತ್ತು ಅವರ ಹೆಂಡತಿ ಹೊಸ ರೂಪ ಪಡೆದು ನಮ್ಮ ಮುಂದೆ ನಿಲ್ಲುತ್ತಾರೆ. ಇಲ್ಲಿನ ಕಥೆಗಳಲ್ಲಿ ನೀತಿಯ ಉಪದೇಶದ ಹಂಬಲ, ಅತಿ ಭಾವುಕತೆ, ಚಮತ್ಕಾರ ಯಾವುದೂ ಇಲ್ಲ. ಸಣ್ಣ ಕಥೆಗಳ ಬರಹಗಾರರಾಗಿ ಮಾಸ್ತಿಯವರಿಗೆ ಸಿದ್ಧತೆಯ ಕಾಲ, ಅಂದರೆ 'ಅಪ್ರೆಂಟಿಸ್‌ಷಿಪ್' ಎನ್ನುವುದೇ ಇರಲಿಲ್ಲ. ಭಾಷೆಯನ್ನು ಹದಮಾಡಿಕೊಂಡಿದ್ದಾರೆ. ಮೊದಲ ಸಂಕಲನದಲ್ಲಿಯೇ 'ನಮ್ಮ ಮೇಷ್ಟರು', 'ಇಂದಿರೆಯೋ ಅಲ್ಲವೋ ?', 'ಒಂದು ಹಳೆಯ ಕಥೆ' ಮೊದಲಾದ ರಚನೆಗಳಲ್ಲಿ ಕಾಣುವ ಅನುಭವ-ರೂಪಗಳ ಸಮತೋಲನ ವಿಶಿಷ್ಟವಾದದ್ದು.

ನಾಟಕದ ಜಗತ್ತಿನಲ್ಲಿ ೧೮೭೦-೧೯೨೦ರ ಅವಧಿಯಲ್ಲಿ ಜನಸಾಮಾನ್ಯರ ಮಟ್ಟಿಗೆ ಕನ್ನಡಕ್ಕೆ ವೃತ್ತಿರಂಗಭೂಮಿಯೇ ಆಧಾರ. ಮೈಸೂರಿನಲ್ಲಿ ಚಾಮರಾಜ ಒಡೆಯರ ಆಶ್ರಯದಲ್ಲಿ ಅನುವಾದ-ಪ್ರದರ್ಶನಗಳು ಪ್ರಾರಂಭವಾದವು. ಈ ಕಾಲದಲ್ಲಿಯೇ ಹವ್ಯಾಸಿ ರಂಗಭೂಮಿಯು ಜನ್ಮತಾಳಿ, ಸಂಸ ಮತ್ತು ಕೈಲಾಸಂ ಇಬ್ಬರ ನಾಟಕಗಳ ರಚನೆಯೂ ಆಯಿತು. ಆದರೆ ಉದ್ದಕ್ಕೂ ಜನಪದ ರಂಗಭೂಮಿ ಜೀವಂತವಾಗಿದ್ದಿತು. ದೊಡ್ಡಾಟ, ಸಣ್ಣಾಟ, ಬಯಲಾಟ, ಯಕ್ಷಗಾನಗಳು ಹಳ್ಳಿಯ ಜನರ ಬದುಕಿನ ಭಾಗವಾಗಿದ್ದವು. ಒಂದು ಜನಾಂಗದ ಸ್ಮರಣೆಯು ಇವುಗಳಲ್ಲಿ ಉಳಿದು ಬಂದಿತು. ಮೌಲ್ಯಗಳ ಮಟ್ಟಿಗೆ ಪರಂಪರೆಯನ್ನು ಇವು ಉಳಿಸಿಕೊಂಡು ಬಂದವು. ಸುಮಾರು ೬೫ ವರ್ಷಗಳ ಹಿಂದೆ ಬೆಂಗಳೂರಿನಲ್ಲಿ ಬಯಲಾಟವನ್ನು ನೋಡಿದ ನೆನಪು ಹಲವರಿಗಿದೆ. ಆಗಿನ್ನೂ ಬೆಂಗಳೂರು ಅರ್ಧ ಹಳ್ಳಿಯೇ ಆಗಿತ್ತು. ಇಂದಿನ ಕೆಂಪೇಗೌಡ ಬಸ್‌ಸ್ಟ್ಯಾಂಡ್ ಪ್ರದೇಶದಲ್ಲಿ ಹಳ್ಳಿ-ನಗರ ಕೈಕುಲುಕುತಿದ್ದವು.

ಕನ್ನಡಕ್ಕೆ ಶಿಷ್ಟ ನಾಟಕ ರಂಗಭೂಮಿ ಬಂದದ್ದು ತಡವಾಗಿ, ಅದೂ ಅನುವಾದದಿಂದ. ೧೭ ನೆಯ ಶತಮಾನದಲ್ಲಿ ರಚಿತವಾದ ಸಿಂಗರಾರ್ಯನ 'ಮಿತ್ರವಿಂದಾ ಗೋವಿಂದಾ' ಸಂಸ್ಕೃತದ ಶ್ರೀ ಹರ್ಷನ 'ರತ್ನಾವಳಿ'ಯ ಅನುವಾದ. ಮೂಲ ನಾಟಕವು ಉತ್ತಮವಾಗಿದ್ದು ಕನ್ನಡ ಅನುವಾದವೂ ಒಳ್ಳೆಯ ನಾಟಕವೇ. ಆದರೆ ಇದು ಪರಂಪರೆಯನ್ನು ನಿರ್ಮಿಸಲಿಲ್ಲ. ವಾಸ್ತವವಾಗಿ ಕನ್ನಡ ನಾಡಿನ ಜನದ ಬಾಳಿಗೆ, ಜನಪದ ರಂಗಭೂಮಿಯನ್ನು ಬಿಟ್ಟರೆ, ನಾಟಕವನ್ನು ಗಣನೀಯವಾಗಿ ತಂದುಕೊಟ್ಟ ಸಾಧನೆ ವೃತ್ತಿರಂಗಭೂಮಿಯದು. ವೃತ್ತಿರಂಗಭೂಮಿಯ ಕಲ್ಪನೆಯೇ ಪಾಶ್ಚಾತ್ಯರಿಂದ ಬಂದದ್ದು. ಹಲವರು ನಟರು ಒಂದುಗೂಡಿ ವ್ಯಾವಹಾರಿಕ ಸಂಸ್ಥೆಯೊಂದನ್ನು ನಿರ್ಮಿಸಿಕೊಂಡು, ಸಂಚಾರ ಮಾಡುತ್ತ ಜನರ ಬಳಿಗೆ ನಾಟಕವನ್ನು ಒಯ್ದುದನ್ನು ಯುರೋಪಿನಲ್ಲಿ ಕಾಣುತ್ತೇವೆ. ಇಂಗ್ಲೆಂಡಿನಲ್ಲಿಯೂ ಹದಿನೆಂಟನೆಯ ಶತಮಾನದವರೆಗೆ ಸ್ತ್ರೀಯರು ರಂಗಭೂಮಿಯ ಮೇಲೆ ಕಾಣಿಸಿಕೊಳ್ಳಲಿಲ್ಲ. ಭಾರತದಲ್ಲಿ ಬಂಗಾಳದಲ್ಲಿ ವೃತ್ತಿ ರಂಗಭೂಮಿಯು ಹತ್ತೊಂಬತ್ತನೆಯ ಶತಮಾನದ ಮಧ್ಯಭಾಗದ ಹೊತ್ತಿಗೆ ರೂಪತಾಳಿತು. ಆ ಶತಮಾನದಲ್ಲಿಯೇ ಮಹಿಳೆಯರು ನಾಟಕಗಳಲ್ಲಿ ಅಭಿನಯಿಸಿದರು. ಷೇಕ್ಸಪಿಯರನ ನಾಟಕಗಳು ಬಂಗಾಳಿಗೆ ಅನುವಾದವಾಗಿ ಪ್ರದರ್ಶನವನ್ನು ಕಂಡವು. ಮುಂದೆ ಉತ್ಕರ್ಷವನ್ನು ಕಂಡದ್ದು ಮರಾಠಿ ರಂಗಭೂಮಿ. ಇದಕ್ಕೆ ಪ್ರೇರಣೆ ಕನ್ನಡ ರಂಗಭೂಮಿಯಿಂದ ಲಭ್ಯವಾಯಿತು ಎಂದು ವಿಮರ್ಶಕರು ಹೇಳುತ್ತಾರೆ. ಸಾಂಗ್ಲಿಯ ಮಹಾರಾಜರು ಕನ್ನಡದ ಬಯಲಾಟವೊಂದನ್ನು ನೋಡಿ ಮರಾಠಿಯಲ್ಲಿ ಅದರ ಮಾದರಿಯ ನಾಟಕ ರಚನೆಗೆ ಪ್ರೋತ್ಸಾಹ ನೀಡಿದರಂತೆ. ಮಹಾರಾಷ್ಟ್ರದಲ್ಲಿ ವೃತ್ತಿನಾಟಕ ಕಂಪನಿಗಳು ಹುಟ್ಟಿಕೊಂಡವು. ಉತ್ತರ ಕರ್ನಾಟಕಕ್ಕೆ ಮಹಾರಾಷ್ಟ್ರದ ಪ್ರಭಾವ ಬಹಳವಾಗಿದ್ದುದರಿಂದ ಮರಾಠಿ ನಾಟಕಗಳು ಉತ್ತರ ಕರ್ನಾಟಕದಲ್ಲೆಲ್ಲ ವಿಜೃಂಭಿಸಿದವು. ಕನ್ನಡದ ಮಟ್ಟಿಗೆ ಇವು ಕತ್ತಲೆಯ ದಿನಗಳು. ಶಾಂತಕವಿಗಳ ಮಾತು "ಎಲ್ಲಿ ನೋಡಲು ಮರಾಠಿಯರ ನಾಟಕಮಯಂ ತಾನಾಯ್ತು ಕರ್ನಾಟಕಂ" ಎನ್ನುವದು ಬಹಳ ಪ್ರಸಿದ್ಧವಾದ ಮಾತು. ಕನ್ನಡಿಗರ ಕಣ್ಣುಗಳಲ್ಲಿ ಮಹಾರಾಷ್ಟ್ರದ ನಟರು, ಮನೆಗಳಲ್ಲಿ ಆ ನಾಟಕದ ನೆನಪು, ನಾಲಿಗೆಯಲ್ಲಿ ಮರಾಠಿ ರಂಗಗೀತೆಗಳು. ಇದರ ಜೊತೆಗೆ ಪಾರ್ಸಿ ನಾಟಕ ಕಂಪನಿಗಳ ದಾಳಿ.

ಕನ್ನಡಿಗರಿಗೆ ಶಾಂತಕವಿಗಳು ಪ್ರಾತಃಸ್ಮರಣೀಯರು. ಇತರರನ್ನು ಬೇಡಲು ಹೊರಟ ಈ ಕನ್ನಡದ ದಾಸಯ್ಯ, ಕನ್ನಡಕ್ಕೆ ತನ್ನನ್ನೆ ತೆತ್ತುಕೊಂಡ ಶ್ರೀಮಂತರು. ಇವರ ನೆರವಿನಿಂದ ೧೮೭೭ ರಲ್ಲಿ ಗದುಗಿನ ಉಮಚಗಿ ಲಚ್ಚಪ್ಪ ನಾಯಕ ಎನ್ನುವ ಶ್ರೀಮಂತನು 'ಗದುಗಿನ ಶ್ರೀ ವೀರನಾರಾಯಣ ಪ್ರಾಸಾದಿತ ಕೃತಪುರ ನಾಟಕ ಮಂಡಲಿ'ಯನ್ನು ಪ್ರಾರಂಭಿಸಿದ. ಶಾಂತಕವಿಗಳ 'ಉಷಾಹರಣ' ಇದರ ಮೊದಲ ನಾಟಕ. ಅನಂತರ 'ಶ್ರೀಯಾಳ ಸತ್ವ ಪರೀಕ್ಷೆ', 'ವತ್ಸಲಾಹರಣ', 'ಕೀಚಕವಧ' ಮೊದಲಾದ ನಾಟಕಗಳು ಪ್ರದರ್ಶಿತವಾದವು.

ಸರಿಸುಮಾರು ಒಂದೇ ಕಾಲದಲ್ಲಿ ಉತ್ತರ ಕರ್ನಾಟಕದಲ್ಲಿಯೂ ಹಿಂದಿನ ಮೈಸೂರು ಸಂಸ್ಥಾನದಲ್ಲಿಯೂ ವೃತ್ತಿನಾಟಕ ಕಂಪನಿಗಳು ಕಾಣಿಸಿಕೊಂಡದ್ದು ಗಮನಾರ್ಹ ಸಂಗತಿ. ಉತ್ತರ ಕರ್ನಾಟಕದಲ್ಲಿ ಶಾಂತಕವಿಗಳ ಮಾರ್ಗದರ್ಶನ ಪಡೆದ 'ಕೃತಪುರ' ಮಂಡಲಿಯಲ್ಲದೆ, 'ಹಲಸಗಿ ನಾಟಕ ಮಂಡಳಿ', 'ಕೊಣ್ಣೂರಕರ ಸಂಗೀತ ನಾಟಕ ಮಂಡಳಿ', ಶಿರಹಟ್ಟಿಯ 'ಮಹಾಲಕ್ಷ್ಮೀ ನಾಟಕ ಮಂಡಳಿ', ರಾಣೆಬೆನ್ನೂರಿನ 'ವಿಶ್ವಗುಣಾದರ್ಶ ನಾಟಕ ಮಂಡಳಿ', ಹಲಗೇರಿಯ 'ಶ್ರೀ ಹಾಲಸಿದ್ಧೇಶ್ವರ ಪ್ರಾಸಾದಿತ ಸಂಗೀತ ನಾಟಕ ಸಭಾ', ಗರೂಡ ಸದಾಶಿವರಾಯರು ಗದುಗಿನಲ್ಲಿ ಸ್ಥಾಪಿಸಿದ 'ದತ್ತಾತ್ರೇಯ ನಾಟಕ ಮಂಡಳಿ', ಮೈಸೂರಿನಲ್ಲಿ 'ಶ್ರೀ ಶಾಕುಂತಲ ಕರ್ಣಾಟಕ ನಾಟಕ ಸಭಾ', 'ರಾಜಧಾನಿ ನಾಟಕ ಮಂಡಳಿ', 'ರತ್ನಾವಳಿ ನಾಟಕ ಸಭಾ', ಗುಬ್ಬಿಯ 'ಶ್ರೀ ಚನ್ನಬಸವೇಶ್ವರ ಕೃಪಾ ಪೋಷಿತ ನಾಟಕ ಮಂಡಳಿ', 'ಯಳಂದೂರು ನಾಟಕ ಮಂಡಳಿ' ಮೊದಲಾದವು ಜನಪ್ರಿಯವಾದವು. ಮೊದಲ ನಟಪ್ರಧಾನ ರಂಗಭೂಮಿ ಇದು. ಗರೂಡ ಸದಾಶಿವರಾಯರೋ ವರದಾಚಾರ್ಯರೋ ಗುಬ್ಬಿ ವೀರಣ್ಣನವರೋ ಅಭಿನಯಿಸುತ್ತಾರೆ ಎನ್ನುವುದು ಜನರನ್ನು ನಾಟಕ ಮಂದಿರಕ್ಕೆ ಕರೆತರುತಿತ್ತು. ಇನ್ನೂ ನಿರ್ದೇಶಕರು ಕಾಣಿಸಿಕೊಳ್ಳದಿದ್ದ ಕಾಲ ಇದು. ಶಾಂತಕವಿಗಳು, ಬೆಳ್ಳಾವೆ ನರಹರಿ ಶಾಸ್ತ್ರಿಗಳು ಮೊದಲಾದವರು ನಾಟಕವನ್ನು ರಚಿಸುವುದಲ್ಲದೆ ಹಾಡುಗಳನ್ನು ರಚಿಸಿ, ಅಭ್ಯಾಸಕಾಲದಲ್ಲಿದ್ದು ಮಾರ್ಗದರ್ಶನ ಮಾಡುತ್ತಿದ್ದರು. ಗರೂಡ ಸದಾಶಿವರಾಯರಂಥವರು ನಾಟಕಗಳನ್ನು ಬರೆಯುವದಲ್ಲದೆ ಅಭಿನಯಿಸುತ್ತಿದ್ದರು.

ಈ ವೃತ್ತಿನಾಟಕ ಮಂಡಲಿಗಳ ಸಾಧನೆ ಅವಿಸ್ಮರಣೀಯವಾದುದು. ಇವರು ಎದುರಿಸಬೇಕಾಗಿದ್ದ ಅಡೆತಡೆಗಳು, ಸಂಪಾದನೆಯ ಅನಿಶ್ಚಿತತೆ, ಅಧಿಕಾರಿಗಳ ಉಪಟಳ, ವಿದೇಶಿ ಸರಕಾರದ ಬಂಧನಗಳು, ರಂಗಭೂಮಿಯ ಸಜ್ಜಿಕೆಯ ಸಂಪನ್ಮೂಲಗಳ ಮಿತಿ – ಇವನ್ನೆಲ್ಲ ಗಮನಿಸಿದಾಗ ಅವರ ರಂಗಭೂಮಿಯು ನಿಷ್ಠೆ ಅಸಾಧಾರಣವಾದದ್ದು ಎಂದು ಭಾಸವಾಗುತ್ತದೆ. ಈ ನಾಟಕಗಳು ಬಹುಮಟ್ಟಿಗೆ ಪೌರಾಣಿಕ ಸಾಮಗ್ರಿಯನ್ನು ಅವಲಂಬಿಸಿದವು. ಪೌರಾಣಿಕ ಕಥೆಗಳಲ್ಲಿ ನಾಟಕಕಾರನ ಜೀವನದರ್ಶನವನ್ನು ಮಿಂಚಿಸುವ ಕಲ್ಪನೆ ಈ ನಾಟಕಕಾರರಿಗಾಗಲಿ, ನಾಟಕ ಮಂಡಳಿಗಾಗಲಿ ಇರಲಿಲ್ಲ. ಪ್ರಾಯಶಃ ಇಂಥ ಪ್ರಯತ್ನವನ್ನು ಪಟ್ಟಿದ್ದರೆ ಜನತೆಯ ಪ್ರತಿಕ್ರಿಯೆ ಅನುಕೂಲವಾಗಿರುತ್ತಿರಲಿಲ್ಲ. ಜನರ ಕಲ್ಪನೆಯಲ್ಲಿ ಮೂಡಿದ ಮೂರ್ತಿಗಳು ಮತ್ತು ಭಾವನೆಗಳನ್ನು ಬಳಸಿಕೊಂಡೇ ನಾಟಕವನ್ನು ರಚಿಸಬೇಕಾಗಿತ್ತು. ವಾಸ್ತವದ ಕಲ್ಪನೆಯ ಬಗ್ಗೆ ಅಸ್ಪಷ್ಟತೆ, ಮನರಂಜನೆಯ ಅನಿವಾರ್ಯತೆ ಇವುಗಳ ಚೌಕಟ್ಟಿನಲ್ಲಿ ನಾಟಕವನ್ನು ರಚಿಸಿ ಅಭಿನಯಿಸಬೇಕಾಗಿತ್ತು. ಇದರಿಂದ ದೃಶ್ಯ ಚಮತ್ಕಾರಗಳು ಸೇರಿದ್ದು. ಉಷೆಯನ್ನು ಅಪಹರಿಸಬೇಕಾದರೆ ಮಂಚಸಹಿತ ಎತ್ತಿಕೊಂಡು ಹೋಗುವ ನಿರ್ವಹಣೆ, ಕಡೆಗೆ ವೀರಣ್ಣನವರು ರಂಗಭೂಮಿಯ

ಮೇಲೆ ಆನೆ, ಕುದುರೆಗಳನ್ನು ತಂದದ್ದು – ಎಲ್ಲ ಈ ಚೌಕಟ್ಟಿನಲ್ಲಿ ಅರ್ಥವಾಗುತ್ತದೆ. ಬೆಳ್ಳಾವೆಯವರ ನಾಟಕ ರಚನೆ ಬಹುಮಟ್ಟಿಗೆ ೧೯೨೦ ರಾಚೆ ನಡೆದದ್ದರಿಂದ ಅದನ್ನು ಕುರಿತು ಇಲ್ಲಿ ಹೆಚ್ಚು ಪ್ರಸ್ತಾಪಿಸುತ್ತಿಲ್ಲ. ಆದರೆ ಅವರ ರಂಗಪ್ರಜ್ಞೆ ಅಸಾಧಾರಣವಾದದ್ದು. ಮೂರು-ನಾಲ್ಕು ಎಳೆಗಳನ್ನು ಸೇರಿಸಿ ಕಥಾವಸ್ತುವನ್ನು ನೇಯುವ ಕಲೆ ಅವರಿಗೆ ಕರಗತವಾಗಿತ್ತು. ರಂಗಸಂಭಾಷಣೆಗೆ ಅವರು ಒಂದು ರೂಪವನ್ನು ಕೊಟ್ಟರು ಎಂದು ಗಮನಿಸಬೇಕು.

೧೮೮೨ ರಲ್ಲಿ ಸ್ಥಾಪಿತವಾದ 'ಶ್ರೀ ಚಾಮರಾಜೇಂದ್ರ ಕರ್ನಾಟಕ ನಾಟಕ ಸಭೆ'ಯನ್ನು ಪ್ರತ್ಯೇಕವಾಗಿಯೇ ಪರಿಗಣಿಸಬೇಕು. ಈ ನಾಟಕ ಸಭೆಗೆ ರಾಜಾಶ್ರಯವಿದ್ದುದರಿಂದ ವೃತ್ತಿನಾಟಕ ಕಂಪನಿಗಳಿಗೆ ಇದ್ದ ಸಮಸ್ಯೆಗಳು ಇಲ್ಲಿ ಇರಲಿಲ್ಲ. ಆದರೆ ವೃತ್ತಿನಾಟಕ ಕಂಪನಿಗಳಿಗಿದ್ದ ಜನಸಾಮಾನ್ಯರ ಸಂಪರ್ಕವೂ ಇರಲಿಲ್ಲ. ಈ ಸಂಪರ್ಕದಿಂದ ನಾಟಕಕ್ಕಿದ್ದ ಜೀವಂತಿಕೆ ಇಲ್ಲಿ ಇರಲಿಲ್ಲ. ಇದು ಶಿಷ್ಟ ರಂಗಮಂದಿರ. ಚಾಮರಾಜ ಒಡೆಯರ ಕೃಪಾಪೋಷಿತವಾದದ್ದರಿಂದ ಪರಂಪರಾಗತ ಸಂಸ್ಕೃತ ನಾಟಕದೊಂದಿಗೆ ನಂಟು ಉಳಿಯಿತು. ಹಾಗೆಯೇ ಪಾಶ್ಚಾತ್ಯ ನಾಟಕದ, ಮುಖ್ಯವಾಗಿ ಷೇಕ್ಸಪಿಯರನ ನಾಟಕ ಸಾಹಿತ್ಯದ ನಂಟೂ ಲಭ್ಯವಾಯಿತು. ಇಲ್ಲಿ ರಚಿತವಾದ ನಾಟಕಗಳು ಅನುವಾದಗಳು ಅಥವಾ ರೂಪಾಂತರಗಳು. ಬಸವಪ್ಪಶಾಸ್ತ್ರಿಗಳು ಕಾಳಿದಾಸನ 'ಶಾಕುಂತಳಾ' ನಾಟಕವನ್ನು ಅತ್ಯಂತ ಸಮರ್ಥವಾಗಿ ಅನುವಾದಿಸಿದರು. ಸೋಸಲೆ ಅಯ್ಯಾಶಾಸ್ತ್ರಿಗಳು, ನಂಜನಗೂಡು ಸುಬ್ಬಾಶಾಸ್ತ್ರಿಗಳು ಮೊದಲಾದವರು ಸಂಸ್ಕೃತ ನಾಟಕಗಳನ್ನು ಅನುವಾದಿಸಿದರು. ಇಂಗ್ಲಿಷ್ ತಿಳಿಯದ ಬಸವಪ್ಪ ಶಾಸ್ತ್ರಿಗಳು ಷೇಕ್ಸಪಿಯರನ 'ಅಥೆಲೊ' ನಾಟಕವನ್ನು ಓದಿಸಿ ಅರ್ಥ ಹೇಳಿಸಿಕೊಂಡು 'ಶೂರಸೇನ ಚರಿತ್ರೆ' ಎಂದು ಅನುವಾದಿಸಿದರು. ಆಸ್ಥಾನದಾಚೆಯೂ ಅನುವಾದ, ರೂಪಾಂತರದ ಕಾರ್ಯ ಸಾಗಿತು. ಚುರುಮುರಿ ಶೇಷಗಿರಿರಾಯರು 'ಶಾಕುಂತಳಾ' ನಾಟಕವನ್ನು ಅನುವಾದಿಸಿದರು. ಷೇಕ್ಸಪಿಯರನ 'ಅಥೆಲೊ' ನಾಟಕವನ್ನು ಗುಂಡೋಕೃಷ್ಣ ಚುರುಮುರಿ, 'ಕಿಂಗ್ ಲಿಯರ್'ನ್ನು ಎಂ. ಎಸ್. ಪುಟ್ಟಣ್ಣ ಅನುವಾದಿಸಿದರು. ಎಂ. ಎಲ್. ಶ್ರೀಕಂಠೇಶಗೌಡರು 'ಮೆಕ್‌ಬೆತ್'ನ್ನು ರೂಪಾಂತರಿಸಿದರು. ರೂಪಾಂತರಗಳಲ್ಲಿ ಮೂಲದ ಪಾತ್ರಗಳ ಹೆಸರಿಗೆ ತಮಗೆ ಹತ್ತಿರ ಎಂದು ತೋರಿದ ಕನ್ನಡ ರೂಪವನ್ನು ಇಡುವ ಹವ್ಯಾಸವೊಂದು ಬೆಳೆಯಿತು.

ಇದೆಲ್ಲದರ ಪರಿಣಾಮವಾಗಿ ನಾಟಕ ರಚನೆ ಸಮೃದ್ಧವಾಯಿತು. ಡಾ. ಪಂಡಿತಾರಾಧ್ಯರು ೧೯೦೦ ರಿಂದ ೧೯೨೫ ರ ವರೆಗೆ ಸುಮಾರು ೨೫೦ ನಾಟಕಗಳನ್ನು ಪಟ್ಟಿ ಮಾಡಿದ್ದಾರೆ. ಇವುಗಳಲ್ಲಿ ಎಷ್ಟು ರಂಗಭೂಮಿಯ ಮೇಲೆ ಪ್ರದರ್ಶನಗಳನ್ನು ಕಂಡವು ಎಂದು ಹೇಳುವದು ಕಷ್ಟ. ವೃತ್ತಿರಂಗಭೂಮಿಯ ನಾಟಕಗಳು ಅದ್ಭುತಗಳನ್ನು ಆಧರಿಸಿ ಬಹುಮಟ್ಟಿಗೆ ಪರಂಪರಾಗತ ಮೌಲ್ಯಗಳ

ವೃತ್ತಿಪರೀಕರಣವನ್ನು ಮಾಡಿಕೊಂಡು ಬಂದವು. ಈ ಕಂಪೆನಿಗಳ ನಾಟಕಗಳ ಪ್ರೇಕ್ಷಕರಾದರೂ ಹೊಚ್ಚ ಹೊಸ ಮನೋಧರ್ಮವನ್ನು ತಾಳ್ಮೆಯಿಂದ ಬರಮಾಡಿಕೊಳ್ಳುವವರೂ ಆಗಿರಲಿಲ್ಲ. ವೃತ್ತಿರಂಗಭೂಮಿ, ಹವ್ಯಾಸಿ ರಂಗಭೂಮಿ ದೂರ ದೂರವಾಗಿಯೇ ಉಳಿದದ್ದು ಆಧುನಿಕ ಕನ್ನಡ ನಾಟಕದ ಇತಿಹಾಸದಲ್ಲಿ ವಿಷಾದಕ್ಕೆಡೆಗೊಡುವ ಅಂಶಗಳಲ್ಲಿ ಒಂದು. ಒಂದು ನೂರು ವರ್ಷಕ್ಕೂ ಮೀರಿದ ಇತಿಹಾಸವಿರುವ ಆಧುನಿಕ ಕನ್ನಡ ನಾಟಕವು ಸ್ವತಂತ್ರ ಕನ್ನಡ ರಂಗಭೂಮಿಯ ಹುಟ್ಟಿಗೆ ಏಕೆ ಕಾರಣವಾಗಲಿಲ್ಲ ಎಂಬುದು ಚರ್ಚಿಸಬೇಕಾದ ವಿಷಯ.

೧೯೦೯ ರಲ್ಲಿ ಬೆಂಗಳೂರಿನಲ್ಲಿ ಸ್ಥಾಪಿತವಾದ ಎ. ಡಿ. ಎ. ಅಂದರೆ 'ಅಮೆಚೂರ್ ಡ್ರ್ಯಾಮೆಟಿಕ್ ಅಸೋಷಿಯೇಷನ್' ಸಂಸ್ಥೆಯನ್ನು ಪ್ರತ್ಯೇಕವಾಗಿ ಹೆಸರಿಸಬೇಕು. ಬೇರೆ ಬೇರೆ ವೃತ್ತಿಗಳಲ್ಲಿದ್ದರೂ ರಂಗಭೂಮಿಯಲ್ಲಿನ ಪ್ರೀತಿಯಿಂದ ಹತ್ತಿರ ಬಂದ ವಿದ್ಯಾವಂತರು ನಿರ್ಮಿಸಿದ ಸಂಸ್ಥೆ ಇದು. ಕನ್ನಡದಲ್ಲಿ ಪ್ರಸಿದ್ಧವಾದ 'ರಂಗಭೂಮಿ' ಮಾಸಪತ್ರಿಕೆಯನ್ನೂ, ಇಂಗ್ಲಿಷ್‌ನಲ್ಲಿ 'ಥಿಯೇಟರ್' ಎನ್ನುವ ತ್ರೈಮಾಸಿಕ ಪತ್ರಿಕೆಯನ್ನೂ ಇದು ಪ್ರಾರಂಭಿಸಿತು. ಬಳ್ಳಾರಿಯ ರಾಘವಾಚಾರ್ಯರು, ಮತ್ತೊಬ್ಬ ಪ್ರಸಿದ್ಧ ನಟ ರಾಘವಾಚಾರ್ಯರು, ಸ್ವಲ್ಪ ಕಾಲದ ನಂತರ ಟಿ. ಪಿ. ಕೈಲಾಸಂ ಇವರೆಲ್ಲ ಬೆಳೆಸಿದ ಸಂಸ್ಥೆ ಎ. ಡಿ. ಎ. ಪತ್ರಿಕಾ ಪ್ರಕಟಣೆ, ನಾಟಕ ರಚನಾಸ್ಪರ್ಧೆ, ವಿಚಾರಗೋಷ್ಠಿಗಳ ಮತ್ತು ನಾಟಕ ಸಮ್ಮೇಳನಗಳ ವ್ಯವಸ್ಥೆ– ಈ ಎಲ್ಲ ಚಟುವಟಿಕೆಗಳನ್ನು ಈ ಸಂಸ್ಥೆ ಕೈಗೊಂಡಿತು. ೧೯೧೯ ರಲ್ಲಿ ಏರ್ಪಡಿಸಿದ ನಾಟಕ ಸ್ಪರ್ಧೆಯಲ್ಲಿ ಮೊದಲ ಬಹುಮಾನ ಕೈಲಾಸಂ ಅವರ 'ಟೊಳ್ಳುಗಟ್ಟಿ'ಗೆ ಎರಡನೆಯ ಬಹುಮಾನ ಸಂಸರ 'ಸುಗುಣಗಂಭೀರ'ಕ್ಕೆ ಲಭ್ಯವಾದವು ಎನ್ನುವದು ಗಮನಿಸಬೇಕಾದ ಸಂಗತಿ. ಎರಡು ಪ್ರತಿಭೆಗಳನ್ನು ಬೆಳಕಿಗೆ ತಂದ ಕೀರ್ತಿ ಈ ಸಂಸ್ಥೆಯದು. ಆವರೆಗೆ ಸ್ವತಂತ್ರ ನಾಟಕದಲ್ಲಿ ಬೆಳಗದಿದ್ದ ಹಾಸ್ಯವನ್ನು ಸಮಕಾಲೀನ ಸಮಾಜದ ಗಂಭೀರ ಕ್ಷಕಿರಣ ಪರೀಕ್ಷೆಗೆ ಜೋಡಿಸಿ 'ಟೊಳ್ಳುಗಟ್ಟಿ' ಆಧುನಿಕ ಕನ್ನಡ ನಾಟಕ ಚರಿತ್ರೆಯಲ್ಲಿ ಹೊಸ ಅಧ್ಯಾಯವನ್ನು ತೆರೆಯಿತು. ಐತಿಹಾಸಿಕ ನಾಟಕದ ಚರಿತ್ರೆಯಲ್ಲಿ 'ಸುಗುಣಗಂಭೀರ' ಇದೇ ರೀತಿ ಹೊಸ ಅಧ್ಯಾಯವನ್ನು ತೆರೆಯಿತು. ಒಂದು ನಾಟಕ ಕನ್ನಡಾಂಗ್ಲೊ, ಮತ್ತೊಂದು ನಾಟಕದ ವಿಶಿಷ್ಟ ಶಬ್ದಪ್ರಯೋಗದ ಕನ್ನಡ. ಎರಡೂ ಆಧುನಿಕ ಕನ್ನಡ ರಂಗಭೂಮಿಯ ಭಾಷೆಯ ದೃಷ್ಟಿಯಿಂದ ಮಹತ್ವವಾದವು. ಕೈಲಾಸಂ ಅವರ 'ಟೊಳ್ಳುಗಟ್ಟಿ' ರಚನೆಯಾಗುವದಕ್ಕೆ ಸುಮಾರು ಮೂವತ್ತು ವರ್ಷಗಳು ಮೊದಲೇ ಕರ್ಕಿ ವೆಂಕಟರಮಣ ಶಾಸ್ತ್ರೀಯವರ 'ಇಗ್ಗಪ್ಪ ಹೆಗ್ಗಡೆಯ ವಿವಾಹ ಪ್ರಹಸನ' ಮತ್ತು ಶಿವರಾಮ ಧಾರೇಶ್ವರರ 'ಕನ್ಯಾವಿಕ್ರಯ' ಒಂದೇ ವರ್ಷ (೧೮೮೭ ರಲ್ಲಿ) ರಚಿತವಾದವು. ಇವೆರಡರಲ್ಲಿಯೂ ಸಮಾಜದ ಹುಳುಕನ್ನು ಎತ್ತಿ ತೋರಿಸಿ ಸುಧಾರಣೆ ಸಾಧಿಸುವ ಕಳಕಳಿ ಇದ್ದರೂ ಇವು ಪರಂಪರೆಯನ್ನು ನಿರ್ಮಿಸಲು ಸಮರ್ಥವಾಗಲಿಲ್ಲ.

ಹತ್ತೊಂಬತ್ತನೆಯ ಶತಮಾನಕ್ಕೆ ಮೊದಲೇ ಕನ್ನಡದಲ್ಲಿ ಒಳ್ಳೆಯ ಗದ್ಯದ ರಚನೆ ಇತ್ತು. ಹಲವು ವಚನಗಳೇ ಸೊಗಸಾದ ಗದ್ಯ. ಸ್ಪಷ್ಟತೆ, ಅರ್ಥವನ್ನು ಪೋಷಿಸುವ ಅಥವಾ ಹರಳುಗಟ್ಟಿಸುವ ಪ್ರತಿಮೆಗಳು, ಅಡಕತ್ವ, ಲಯ– ಎಲ್ಲ ದೃಷ್ಟಿಗಳಿಂದಲೂ ಸೊಗಸೆನ್ನಿಸುವ ರಚನೆಗಳು ಇಲ್ಲುಂಟು. ಡಾ. ದೇ. ಜವರೇಗೌಡ ಅವರು ತಮ್ಮ 'ಗದ್ಯಶೈಲಿ' ಕೃತಿಯಲ್ಲಿ ಬೇರೆ ಬೇರೆ ಕಾಲಗಳ ಗದ್ಯದ ಮಾದರಿಗಳನ್ನು ಕೊಟ್ಟಿದ್ದಾರೆ. ಡಾ. ಶ್ರೀನಿವಾಸ ಹಾವನೂರರು 'ಹೊಸಗನ್ನಡದ ಅರುಣೋದಯ'ದಲ್ಲಿ ಹದಿನೆಂಟನೆಯ ಶತಮಾನ ಮತ್ತು ಹತ್ತೊಂಬತ್ತನೆಯ ಶತಮಾನದ ಪ್ರಾರಂಭದ ದಶಕಗಳ ಗದ್ಯದ ಮಾದರಿಗಳನ್ನು ಕೊಟ್ಟಿದ್ದಾರೆ. ಗದ್ಯದ ಬೆಳವಣಿಗೆಯನ್ನು ಸಂಕ್ಷಿಪ್ತವಾಗಿ ಹೇಳಲು ಸಾಧ್ಯವಿಲ್ಲ. ಇಷ್ಟನ್ನು ಹೇಳಬಹುದು : ವ್ಯಾವಹಾರಿಕ ಜೀವನದಲ್ಲಿ ಕನ್ನಡದ ಬಳಕೆ ಹೆಚ್ಚಾಯಿತು. ಜೊತೆಗೆ ಪ್ರಬಂಧ, ವಿಮರ್ಶೆ, ಜೀವನಚರಿತ್ರೆ ಮೊದಲಾದ ಪ್ರಕಾರಗಳು ಕನ್ನಡಕ್ಕೆ ಬಂದವು. ಪತ್ರಿಕೋದ್ಯಮ ಬೆಳೆದಂತೆ ಗದ್ಯ ಹತ್ತು ಹಲವು ಉದ್ದೇಶಗಳಿಗೆ ಬಳಕೆಯಾಗಿ ಶಬ್ದಭಂಡಾರವನ್ನು, ನಮ್ಯತೆಯನ್ನೂ (plasticity) ವ್ಯಾಪ್ತಿಯನ್ನೂ ಹೆಚ್ಚಿಸಿಕೊಂಡಿತು. ನವೋದಯ ಘಟ್ಟದಲ್ಲಂತೂ ಗದ್ಯ ಅದ್ಭುತವಾಗಿ ಬೆಳೆಯಿತು.

ಈ ಅವಧಿಯಲ್ಲಿ ಆಧುನಿಕ ಸಾಹಿತ್ಯ ವಿಮರ್ಶೆಯ ಅಂಕುರಾರ್ಪಣವಾಯಿತು. ಇದು ಸಹಜವೇ. ಸಾಕಷ್ಟು ಸೃಜನಾತ್ಮಕ ಸಾಹಿತ್ಯ ಮುಂದಿದ್ದಾಗ ಮಾತ್ರ ವಿಮರ್ಶಾ ಪ್ರಜ್ಞೆ ಕೆಲಸ ಮಾಡಬಲ್ಲದು. ೧೯೨೨ ರಲ್ಲಿ ಪ್ರಕಟವಾದ ಮಾಸ್ತಿಯವರ 'ಸಾಹಿತ್ಯ'ವೇ ಆಧುನಿಕ ಯುಗದಲ್ಲಿ ಪೂರ್ಣ ಪ್ರಮಾಣದ ವಿಮರ್ಶಾ ಗ್ರಂಥ. ೧೯೨೦ ರಲ್ಲಿ ಡಿ. ವಿ. ಜಿ. ಅವರು 'ಸಾಹಿತ್ಯ ಮತ್ತು ಜನಜೀವನ' ಎಂಬ ವಿಷಯವಾಗಿ ಉಪನ್ಯಾಸ ಮಾಡಿದರು. ಸಾಹಿತ್ಯವನ್ನು ಕುರಿತು ದೀರ್ಘ ವಿವರಣೆ ಮೊದಲು ಕಂಡಿದ್ದು ಆ ಉಪನ್ಯಾಸದಲ್ಲಿ. ಆದರೆ ಈ ಯುಗದ ಲೇಖಕರು ಅಲ್ಲಲ್ಲಿ ಸಾಹಿತ್ಯವನ್ನು ಕುರಿತು ಆಡಿದ ಮಾತುಗಳಲ್ಲೇ ಸಾಹಿತ್ಯ ವಿಮರ್ಶೆಯನ್ನು ಕಾಣಬಹುದು. ೧೯೧೬ ರಲ್ಲಿ 'ಪ್ರಬುದ್ಧ ಕರ್ನಾಟಕ'ವು ಜನ್ಮ ತಾಳಿದಾಗ ವಿಮರ್ಶೆಗೊಂದು ವೇದಿಕೆ ಲಭ್ಯವಾಯಿತು. ಇದರ ಪ್ರಾರಂಭದ ಸಂಚಿಕೆಗಳಲ್ಲಿಯೆ ಎಂ. ಆರ್. ಶ್ರೀನಿವಾಸಮೂರ್ತಿಯವರು ಹರಿಹರ, ಷಡಕ್ಷರಿ ಮೊದಲಾದ ಕವಿಗಳನ್ನು ಕುರಿತು ಬರೆಯುತ್ತ ಸಾಹಿತ್ಯ ಕೃತಿಯ ಮೌಲ್ಯಮಾಪನದ ಪ್ರಶ್ನೆಯನ್ನು ಎತ್ತಿದರು. ಇದಕ್ಕೆ ಮೊದಲು 'ಶ್ರೀ ಕೃಷ್ಣ ಸೂಕ್ತಿ' ಮೊದಲಾದ ಪತ್ರಿಕೆಗಳಲ್ಲಿಯೂ ಒಂದು ಪ್ರಮಾಣದಲ್ಲಿ ವಿಮರ್ಶೆಯ ಕೆಲಸ ಆಗುತಿತ್ತು. ಈ ಸರಿಸುಮಾರಿನಲ್ಲಿ 'ಕರ್ನಾಟಕ ಸಾಹಿತ್ಯ ಪರಿಷತ್ಪತ್ರಿಕೆಯು' ಪ್ರಾರಂಭವಾಗಿ, ವಿದ್ವತ್ಪೂರ್ಣ ಮತ್ತು ಸಂಶೋಧನಾ ಲೇಖನಗಳಿಗೆ ಇಂಬು ದೊರೆಯಿತು.

ಈಗ ಒಟ್ಟಾರೆಯಾಗಿ ನವೋದಯಪೂರ್ವ ಘಟ್ಟದ ಸಾಹಿತ್ಯವನ್ನು ಕುರಿತು ಕೆಲವು ಮಾತುಗಳನ್ನು ಹೇಳಬಹುದು.

ಇದು ದಾಸ್ಯಕ್ಕೆ ಗುರಿಯಾದ, ಯಜಮಾನ ಸಂಸ್ಕೃತಿಯನ್ನು ಒಂದು ಕಡೆ ಮೆಚ್ಚುತ್ತ ಇನ್ನೊಂದು ಕಡೆ ತನ್ನ ಅಸ್ತಿತ್ವನ್ನು ಕಂಡುಕೊಳ್ಳುವ ಪ್ರಯತ್ನದಲ್ಲಿರುವ ಸಮುದಾಯದ ಸಾಹಿತ್ಯ. ತನ್ನ ಪರಂಪರೆಯನ್ನುಳಿಸಿಕೊಂಡು ಹೊರಗಿನ ಪ್ರಭಾವವನ್ನು ಅರಗಿಸಿಕೊಳ್ಳುವ ಪ್ರಯತ್ನದಲ್ಲಿರುವ ಸಮುದಾಯದ ಸಾಹಿತ್ಯ. ಮಧ್ಯಯುಗದಿಂದ ಆಧುನಿಕ ಯುಗಕ್ಕೆ ಕಾಲಿಡುತ್ತಿರುವ ಸಮುದಾಯದ ಸಾಹಿತ್ಯ. ಮುದ್ರಣವನ್ನು ಹೊಸದಾಗಿ ಪಡೆದುಕೊಂಡು ಪತ್ರಿಕೆಗಳನ್ನು ಕಾಣಲು ಪ್ರಾರಂಭಿಸಿದ ಯುಗದ ಸಾಹಿತ್ಯ. ಓದುಗರು ಪ್ರತ್ಯೇಕ, ಪ್ರತ್ಯೇಕವಾಗಿ ತಮಗೆ ಒಗ್ಗುವ ವೇಗದಲ್ಲಿ, ತಮಗೆ ಬೇಕಾದ ರೀತಿಯಲ್ಲಿ ಸಾಹಿತ್ಯ ಕೃತಿಯನ್ನು ಓದಲು ಸಾಧ್ಯವಾದ ಯುಗ ಇದು. ಇದರಿಂದಲೇ ಕಾದಂಬರಿಯ ಜನನವಾದದ್ದು. ಇದರಿಂದಲೇ ನಿಧಾನವಾಗಿ ಹತ್ತು ವಿವರಗಳಿಗೆ ಗಮನಕೊಟ್ಟು ಮತ್ತೆ ಮತ್ತೆ ಓದುವ, ಮನನ ಮಾಡುವ, ವಾಚನದ ವಿಧಾನವನ್ನು ಬೇಡುವ ಸಂಕೀರ್ಣ ಕೃತಿಗಳ ರಚನೆ ಸಾಧ್ಯವಾಯಿತು. ಪತ್ರಿಕೆಗಳು ಮತ್ತು ಬದಲಾಗುತ್ತಿದ್ದ ಸಮಾಜ, ಹೊಸ ಶಿಕ್ಷಣ ಪದ್ಧತಿ ಇವೆಲ್ಲ ಹಲವು ಬಗೆಯ ಗದ್ಯಕೃತಿಗಳನ್ನು ಬೇಡಿದುದರಿಂದ ಈ ಕಾಲದಲ್ಲಿ ಗದ್ಯ ಸ್ಫುಟತ್ವ, ನಮ್ಯತೆ, ವೈವಿಧ್ಯಗಳನ್ನು ಪಡೆದುಕೊಂಡು ವಿಕಸನ ಹೊಂದಿತು. ದಾಸ್ಯದ ಅಪಮಾನದಿಂದ ಎಚ್ಚರಗೊಳ್ಳುತ್ತ ದೇಶಾಭಿಮಾನ, ನಾಡಿನ ಅಭಿಮಾನ, ಭಾಷಾಭಿಮಾನಗಳನ್ನು ಮೈಗೂಡಿಸಿಕೊಳ್ಳುತ್ತಿದ್ದ ಸಾಹಿತ್ಯ ಇದು. ತನ್ನ ಸಮಾಜದಲ್ಲಿ ಹೆಮ್ಮೆ ತಳೆಯುತ್ತಲೇ ಅದರ ಲೋಪದೋಷಗಳನ್ನು ಚಿಕಿತ್ಸಕ ಕಣ್ಣಿನಿಂದ ಪರೀಕ್ಷಿಸುತ್ತಿರುವ ಸಮುದಾಯದ ಸಾಹಿತ್ಯ. ಸ್ವಾತಂತ್ರ್ಯ ಹೋರಾಟದಿಂದ ಹಳ್ಳಿಯ ಅವಿದ್ಯಾವಂತರಲ್ಲಿಯೂ ಇರುವ ಕೆಚ್ಚು, ಹಿರಿಮೆಗಳನ್ನು ಕ್ರಮೇಣ ಅರ್ಥಮಾಡಿಕೊಳ್ಳುತ್ತಿರುವ ಸಮುದಾಯದ ಸಾಹಿತ್ಯ. ತನ್ನ ಹಿಂದಿನ ಸಂಸ್ಕೃತ ಸಾಹಿತ್ಯವನ್ನೂ, ಕನ್ನಡ ಸಾಹಿತ್ಯವನ್ನೂ ಹತ್ತಿರಕ್ಕೆ ತಂದುಕೊಂಡಂತೆಯೇ ಇಂಗ್ಲಿಷ್ ಸಾಹಿತ್ಯಕ್ಕೂ ಮನಸ್ಸನ್ನು ತೆರೆದಿಟ್ಟ ಸಮುದಾಯದ ಸಾಹಿತ್ಯ. ಆ ಸಾಹಿತ್ಯದಿಂದ ಹೊಸ ಪ್ರಕಾರಗಳನ್ನು ಪಡೆದುಕೊಂಡು ಅವನ್ನು ಈ ನೆಲದಲ್ಲಿ ನೆಟ್ಟು, ಈ ನೆಲದ ಗುಣಕ್ಕನುಗುಣವಾಗಿ ಫಲಪುಷ್ಪಗಳನ್ನು ಪಡೆಯಲು ಪ್ರಯೋಗಗಳನ್ನು ಮಾಡಿದ ಸಮುದಾಯದ ಸಾಹಿತ್ಯ.

ಈ ಸಾಹಿತ್ಯವನ್ನು ಒಳಹೊಕ್ಕು ನೋಡುವುದಾದರೆ, ಹಿಂದಿನ ಸಾಹಿತ್ಯಕ್ಕಿಂತ ಇದರಲ್ಲಿ ಹಲವು ರೀತಿಗಳಲ್ಲಿ ಭಿನ್ನತೆ ಎದ್ದು ಕಾಣುತ್ತದೆ. ಹಿಂದಿನ ಕಥೆಗಳನ್ನೆ, ಉಪದೇಶಗಳನ್ನೆ ಮತ್ತೆ ಮತ್ತೆ ಬೇರೆ ಮಾತುಗಳಲ್ಲಿ ಉಣಬಡಿಸದೆ, ಹೊಚ್ಚ ಹೊಸ ವಿಷಯಗಳನ್ನು ವಸ್ತುವನ್ನಾಗಿ ಈ ಸಾಹಿತ್ಯವು ಆರಿಸಿತು. ಶ್ರೇಣೀಕೃತ ವ್ಯವಸ್ಥೆಯ ಸಮಾಜದ ನೆಲೆಯಿಂದ ಮನುಷ್ಯನ ಹುಟ್ಟಿನ ಆಕಸ್ಮಿಕಕ್ಕೆ ಪ್ರಾಧಾನ್ಯ ಕೊಡುವದನ್ನು ಬಿಟ್ಟು, ಎಲ್ಲ ಮನುಷ್ಯರ ಘನತೆಯನ್ನು ರಕ್ತಗತಮಾಡಿಕೊಳ್ಳಲು ಪ್ರಯತ್ನಿಸಿತು. ದೃಷ್ಟಿಯನ್ನು ಸಾವಿನಾಚೆಯ ಲೋಕದಲ್ಲಿ ನಿಲ್ಲಿಸದೆ, ಈ ಇಹದ ಬದುಕಿನ ಚೆಲುವನ್ನೂ, ಸುಖದುಃಖಗಳನ್ನೂ ಗಂಭೀರವಾಗಿ ಸ್ವೀಕರಿಸಲು ಕಲಿಯಿತು.

ಇದು ಸಾಹಿತ್ಯದಲ್ಲಿ ಕ್ರಾಂತಿ ನಿರ್ಮಿಸಬಲ್ಲ ಪರಿಕಲ್ಪನೆಗಳ ಸಾಹಿತ್ಯ. ಈ ಘಟ್ಟದಿಂದ ಸಾಹಿತ್ಯವು ಬದುಕಿನಷ್ಟೇ ವಿಸ್ತಾರವಾಗಿ ಬದುಕಿನ ಎಲ್ಲ ಅನುಭವಗಳನ್ನು ತನ್ನ ತೆಕ್ಕೆಗೆ ತಂದುಕೊಳ್ಳುವ ಹಾದಿಯನ್ನು ಆರಿಸಿಕೊಂಡಿತು. ಇಂದಿನವರೆಗೂ ಅದೇ ಹಾದಿಯಲ್ಲಿ ನಡೆದಿದೆ. ವೈಯಕ್ತಿಕ ಅನುಭವಕ್ಕೆ ನಿಷ್ಠೆ. ಆ ಅನುಭವದಿಂದ ಮೂಡಿದ ದರ್ಶನಕ್ಕೆ ನಿಷ್ಠೆ – ಇದು ಈ ಯುಗದ ಸಾಹಿತ್ಯದ ಮಂತ್ರ. "ನಾನೃಷಿ ಕುರಿತೇ ಕಾವ್ಯಂ" ಸೂತ್ರದಿಂದ, ವರ್ಡ್ಸ್‌ವರ್ತನ, "ಕವಿ ತನ್ನ ಸಹಮಾನವರೊಂದಿಗೆ ಮಾತನಾಡುತ್ತಿರುವ ಮನುಷ್ಯ" ಎನ್ನುವ ಸೂತ್ರದತ್ತ ಈ ಸಾಹಿತ್ಯ ಸಾಗಲು ಪ್ರಾರಂಭಿಸಿತು. ವರ್ಣಕದಿಂದ ವ್ಯಕ್ತಿಗತ ಅನುಭವ ಮತ್ತು ಚಿಂತನೆಗಳತ್ತ ತಿರುಗಿದ ಈ ಸಾಹಿತ್ಯದಲ್ಲಿ ಭಾವಗೀತೆ ಅರಳಿದುದು ತೀರ ಸಹಜ. ಪಾಶ್ಚಾತ್ಯ ಸಾಹಿತ್ಯಕ್ಕೂ ಕನ್ನಡ ಸಾಹಿತ್ಯಕ್ಕೂ ಒಂದು ದೊಡ್ಡ ವ್ಯತ್ಯಾಸವಿದೆ. ಪಾಶ್ಚಾತ್ಯ ಸಾಹಿತ್ಯ ಬಹು ಹಿಂದೆಯೇ ಧರ್ಮದ ಸಖ್ಯವನ್ನು ಬಿಟ್ಟರೂ, ತತ್ವಶಾಸ್ತ್ರದ ಸಖ್ಯವನ್ನು ಬಿಡಲಿಲ್ಲ. ಅಸ್ತಿತ್ವವಾದದ ಈಚೆಗಿನ ಸಾಹಿತ್ಯದವರೆಗೆ ಪಾಶ್ಚಾತ್ಯ ಸಾಹಿತ್ಯವನ್ನು ಅರ್ಥಮಾಡಿಕೊಳ್ಳಲು ಪಾಶ್ಚಾತ್ಯ ತತ್ವಶಾಸ್ತ್ರದ ಪರಿಚಯ ಸಾಕಷ್ಟು ಇರುವದು ಅಗತ್ಯ. ಪಾಶ್ಚಾತ್ಯ ರಮ್ಯ ಸಾಹಿತ್ಯದ ಹಿಂದೆ ಜ್ಞಾನಗ್ರಹಿಕೆಯ ಪ್ರಕ್ರಿಯೆ, ಇಂದ್ರಿಯಾನುಭವ– ಸ್ಮರಣೆ– ವಿಭಾವನೆ ಇವುಗಳ ಪಾತ್ರ, ಇವನ್ನು ಕುರಿತು ತಾತ್ವಿಕ ಗ್ರಹಿಕೆ ಇದೆ. ನಮ್ಮ ನವೋದಯ ಸಾಹಿತ್ಯದ ಹಿಂದೆ ಈ ಬಗೆಯ ತಾತ್ವಿಕ ಗ್ರಹಿಕೆ ಇಲ್ಲ. ವಾಚಕವರ್ಗ ಏಕರೂಪವಾಗಿದ್ದು ಇನ್ನೂ ಛಿದ್ರವಾಗದ ಕಾಲದ ಸಾಹಿತ್ಯ ಇದು. ಸಾಹಿತಿಗೆ ತಾನು ಯಾವ ಓದುಗ ವರ್ಗಕ್ಕಾಗಿ ಬರೆಯುತ್ತಿದ್ದೇನೆ ಎಂಬ ಸ್ಪಷ್ಟ ಕಲ್ಪನೆ ಇರುವ ಸಾಹಿತ್ಯ ಇದು.

ಸುಮಾರು ೧೯೨೦ ರ ಹೊತ್ತಿಗೆ ಸೂಕ್ಷ್ಮಗ್ರಹಿಕೆಯ, ಸೂಕ್ಷ್ಮ ಸಂವೇದನೆಯ ಓದುಗನೊಬ್ಬ ಕನ್ನಡ ಸಾಹಿತ್ಯವನ್ನು ಓದಿಕೊಂಡು ಭವಿಷ್ಯದತ್ತ ಕಣ್ಣು ಹರಿಸಿದ್ದರೆ ಅವನ ಪ್ರತಿಕ್ರಿಯೆ ಹೇಗಿರುತ್ತಿತ್ತು ? ಒಂದು ಸಾಹಿತ್ಯದ ಭವಿಷ್ಯ ಇಂಥದೇ, ಅದು ಹೀಗೆಯೇ ವಿಕಸನವಾಗುತ್ತದೆ ಎಂದು ಹೇಳಲು ಯಾರಿಗೂ ಸಾಧ್ಯವಿಲ್ಲ. ಆದರೆ ಪ್ರಾಯಶಃ ನಮ್ಮ ಕಲ್ಪನೆಯ ಆ ಕನಸುಗಾರ ಓದುಗ ಇದೊಂದು ಪ್ರಯೋಗಧೀರವಾದ, ವೈವಿಧ್ಯಮಯವಾದ, ಶ್ರೀಮಂತ ಸಾಹಿತ್ಯವಾಗುತ್ತದೆ ಎಂದು ಭವಿಷ್ಯ ನುಡಿದಿರುತ್ತಿದ್ದ. ಅವನ ಭವಿಷ್ಯ ಸಾರ್ಥಕವಾಗುತ್ತಿತ್ತು.

• • •

# ಕನ್ನಡ ನವೋದಯ ಸಾಹಿತ್ಯ ಘಟ್ಟ

---

ಡಾ. ಗುರುಲಿಂಗ ಕಾಪಸೆ

# ಕನ್ನಡ ನವೋದಯ ಸಾಹಿತ್ಯ ಘಟ್ಟ

ಹೊಸಗನ್ನಡ ಸಾಹಿತ್ಯ ಚರಿತ್ರೆ ಬರೆಯುವವರು ೧೯೨೧ ರಲ್ಲಿ ಪ್ರಕಟವಾದ 'ಇಂಗ್ಲಿಷ್ ಗೀತಗಳು' ಎಂಬ ಸಂಗ್ರಹದಿಂದಲೇ ಅದರ ಉದಯಕಾಲವನ್ನು ಸೂಚಿಸುತ್ತಾರೆ. ಭಾವಗೀತಗಳ ವಿವಿಧ ಬಂಧಗಳಲ್ಲಿ ರೂಪುಗೊಳ್ಳುತ್ತಿದ್ದ ಈ ಕಾವ್ಯ ಮೊದಮೊದಲಿಗೆ ರೋಮ್ಯಾಂಟಿಕ್ ಕಾವ್ಯವೆಂದು ಕರೆಯಿಸಿಕೊಂಡಿತು. ಯಾಕೆಂದರೆ ಅದು ಇಂಗ್ಲಿಷಿನ ರೋಮ್ಯಾಂಟಿಕ್ ಕಾವ್ಯದಿಂದ ಪ್ರೇರಣೆಯನ್ನು ಪಡೆದಿತ್ತು. ಅಂತೆಯೇ ಪ್ರೊ. ಎಲ್. ಎಸ್. ಶೇಷಗಿರಿರಾವ್ ಅವರು "'ಶ್ರೀ' ಯವರ 'ಇಂಗ್ಲಿಷ್ ಗೀತ'ಗಳಿಂದ ಸಾಮಾನ್ಯವಾಗಿ ರೋಮ್ಯಾಂಟಿಕ್ ಎಂದು ಕರೆಯುವ ನವೋದಯ ಯುಗ ಪ್ರಾರಂಭವಾಯಿತು" ಎಂದಿದ್ದಾರೆ.

ಮೈಸೂರು, ಮಂಗಳೂರು, ಧಾರವಾಡ ಈ ಕೇಂದ್ರಗಳಲ್ಲಿ ಸಾಮಾನ್ಯವಾಗಿ ಏಕಕಾಲಕ್ಕೆ ಕಾಣಿಸಿಕೊಂಡ ನವೋದಯದ ಒಲವು ಒಂದೇ ರೀತಿಯಾಗಿದ್ದಂತೆ ಕಂಡರೂ ಅದರಲ್ಲಿ ಭಿನ್ನತೆಗಳಿಲ್ಲದಿಲ್ಲ. ಒಂದು ಮಾತನ್ನು ನಾವಿಲ್ಲಿ ಸ್ಪಷ್ಟವಾಗಿಯೇ ಗುರುತಿಸಿಕೊಳ್ಳುವುದು ಅಗತ್ಯವಾಗಿದೆಯೆಂದು ತೋರುತ್ತದೆ. ಮೈಸೂರಿನ ಕಡೆಗೆ ಇಂಗ್ಲಿಷ್ ವಿದ್ಯಾಭ್ಯಾಸದ ಹಿನ್ನೆಲೆಯಲ್ಲಿ ಹಾಗೂ ಬಿ. ಎಂ. ಶ್ರೀ ಅವರ ಪ್ರಭಾವಲಯದಲ್ಲಿ ಭಾವಗೀತಗಳ ಸೃಷ್ಟಿಕಾರ್ಯ ನಡೆಯಿತೆಂಬುದು ನಿಜ. ಆದರೆ ಹೀಗೆಯೇ ಧಾರವಾಡದ ಗೆಳೆಯರು ಕಾವ್ಯರಚನೆಗೆ ತೊಡಗಿದರೆಂದು ಹೇಳುವುದು

ಸಮಂಜಸವಾಗದು. ಯಾಕೆಂದರೆ ಈ ಕಡೆಯ ಕಾವ್ಯನಾಯಕರಾದ ದ. ರಾ. ಬೇಂದ್ರೆಯವರು ಪಡೆದ ಪ್ರೇರಣೆಗಳು ಭಿನ್ನರೀತಿಯವಾಗಿವೆ. ತಮ್ಮ ವೈಯಕ್ತಿಕವಾದ ಕಾವ್ಯದ ಮೂಲಪ್ರೇರಣೆಗಳನ್ನು ಗುರುತಿಸುತ್ತ ವರಕವಿ ದ. ರಾ. ಬೇಂದ್ರೆಯವರು ತಮ್ಮ ಆತ್ಮಕಥನವಾದ 'ಬಾಲ್ಯಕಾಂಡ'ವೆಂಬ ನೀಳ್ಗವನದಲ್ಲಿ ಶಾಂತಕವಿ, ಕಾವ್ಯಾನಂದ (ಪುಣೇಕರ). ಈ ನವೋದಯ ಪೂರ್ವದ ಕವಿಗಳ ಪ್ರಭಾವವನ್ನು, ಲಾವಣಿ, ಕೋಲುಹಾಡು, ದಾಸರಪದಗಳು, ಪಾರಿಜಾತದ ಹಾಡು ಮುಂತಾದವುಗಳು ನೀಡಿದ ಪ್ರೇರಣೆಯನ್ನು ನೆನೆದುಕೊಂಡಿದ್ದಾರೆ. ಇಂಗ್ಲಿಷಿನ ಇಮರ್ಸನ್ ಮತ್ತು ಕೀಟ್ಸರನ್ನು ಒಂದೆಡೆಯಲ್ಲಿ ಹೆಸರಿಸಿದ್ದಾರೆ. ಇಷ್ಟನ್ನು ಬಿಟ್ಟರೆ ಉಳಿದೆಡೆಯಲ್ಲಿ ದೇಶೀಯತೆಯೇ ವಿಜೃಂಭಿಸುತ್ತದೆ.

ಬೇಂದ್ರೆಯವರು ಮೊದಮೊದಲಿಗೆ ಷಟ್ಪದಿಯಲ್ಲಿಯೇ ಕವಿತೆಗಳನ್ನು ಬರೆದರು. ಅವರ ಮೊಟ್ಟಮೊದಲ ಕಾವ್ಯಕೃತಿ 'ಕಷ್ಣಾಕುಮಾರಿ' ಷಟ್ಪದಿಯಲ್ಲಿರುವುದನ್ನು ಕಾಣಬಹುದು. ಕನ್ನಡ ಪರಂಪರೆಯಲ್ಲಿಯೇ ಹೊಸತನ ತರಬಯಸಿದ ಇವರ ಪ್ರಥಮ ಭಾವಗೀತೆ 'ತುತ್ತೂರಿ'ಗೆ ಪ್ರೇರಣೆ ನೀಡಿದ್ದು ಮರಾಠಿಯ ಆಧುನಿಕ ಕಾವ್ಯದ ಜನಕರಾದ ಕೇಶವಸುತರ 'ತುತಾರಿ' ಎಂಬ ಕವಿತೆ. 'ತುತ್ತೂರಿ' ಪ್ರಕಟವಾದದ್ದು ೧೯೧೮ರಲ್ಲಿ. ಬೇಂದ್ರೆಯವರ ಪ್ರಸಿದ್ಧ ಭಾವಗೀತೆ 'ಬೆಳಗು' ೧೯೧೯ರಲ್ಲಿ ರಚಿತವಾಗಿದೆ. ಈ ಕವಿತೆ ನವೋದಯ ಕಾವ್ಯದ ಎಲ್ಲ ಲಕ್ಷಣಗಳನ್ನು ಹೊಂದಿದ್ದು, ನವೀನ ಕಲ್ಪನೆಯಿಂದ ಅನನ್ಯವಾಗಿದೆ. 'ಇಂಗ್ಲಿಷ್ ಗೀತೆಗಳು' ಬೆಳಕು ಕಾಣುವುದಕ್ಕಿಂತ ಮೊದಲೇ ಪ್ರಕಟವಾದ ಈ ಕವಿತೆಗಳು ನಿಜವಾದ ಅರ್ಥದಲ್ಲಿ ನವೋದಯದ ಆರಂಭದ ಕವಿತೆಗಳೆಂದು ಹೇಳಬೇಕಾಗುತ್ತದೆ. ವಸ್ತುಸ್ಥಿತಿ ಹೀಗಿರುವುದರಿಂದ ನವೋದಯದ ಪ್ರಾರಂಭದ ಗಡುವನ್ನು 'ಇಂಗ್ಲಿಷ್ ಗೀತಗಳಿಂ'ದ ಗುರುತಿಸುವುದು ಎಷ್ಟರ ಮಟ್ಟಿಗೆ ಸೂಕ್ತ ಎಂಬ ಪ್ರಶ್ನೆ ಹುಟ್ಟಿಕೊಳ್ಳುತ್ತದೆ. ಹೊಸಗನ್ನಡ ಸಾಹಿತ್ಯ ಚರಿತ್ರೆ ಬರೆಯುವವರು ನವೋದಯದ ಪ್ರಾರಂಭದ ಕಾಲವನ್ನು ನಿಗದಿಪಡಿಸುವಾಗ ಪುನರ್-ಪರಿಶೀಲಿಸಬೇಕಾದ ಅಗತ್ಯವಿದೆ ಎಂದೆನಿಸುತ್ತದೆ.

ಕಾವ್ಯಬಂಧದ ದೃಷ್ಟಿಯಿಂದ, ಭಾಷೆ-ನುಡಿಗಟ್ಟು, ಲಯಗಳ ದೃಷ್ಟಿಯಿಂದ 'ಇಂಗ್ಲಿಷ್ ಗೀತಗಳ' ಪ್ರಭಾವಲಯದಲ್ಲಿ ಬೆಳೆದ ಕುವೆಂಪು, ವಿ. ಸೀ., ಪು. ತಿ. ನ. ಮೊದಲಾದ ಕವಿಗಳ ಕಾವ್ಯರಚನೆಗಳಿಗೂ ಕನ್ನಡ ಪರಂಪರೆ ಹಾಗೂ ಜನಪದ ಭಾಷೆ– ಲಯಗಳನ್ನು ಉಳಿಸಿಕೊಂಡ ಬೇಂದ್ರೆ, ಮಧುರಚೆನ್ನ ಮತ್ತು ಆನಂದಕಂದರ ಕವಿತೆಗಳ ರಚನಾವಿಧಾನಕ್ಕೂ ವ್ಯತ್ಯಾಸವಿಲ್ಲದಿಲ್ಲ. 'ಸುನೀತ'ದಂಥ ಬಂಧಗಳನ್ನು ಸ್ವೀಕರಿಸುವಾಗಲೂ ಬೇಂದ್ರೆಯವರು ಷಟ್ಪದಿಯ ದೀಕ್ಷೆ ಕೊಡುತ್ತಾರೆ; 'ಅಷ್ಟ ಷಟ್ಪದಿ'ಯೆಂದು ಅದನ್ನು ಗುರುತಿಸುತ್ತಾರೆ. ಹೀಗೆ ದೇಶೀ ಪರಂಪರೆ ಹೊಸಗನ್ನಡ, ಅಂದರೆ ನವೋದಯದ ಕಾವ್ಯದಲ್ಲಿ ವಿಶೇಷವಾಗಿರುವುದು ಬೇಂದ್ರೆಯವರ ಗೆಳೆಯರ ಗುಂಪಿನ ಕವಿಗಳಲ್ಲಿ.

ಕನ್ನಡ ನವೋದಯ ಕಾವ್ಯ ಧಾರವಾಡ ಕಡೆಗೆ ದೇಸೀನಿಷ್ಠವಾಗಿಯೂ ಮೈಸೂರ ಕಡೆಗೆ 'ಇಂಗ್ಲಿಷ್ ಗೀತಗಳ' ಮಾದರಿಯಲ್ಲಿ ಶಿಷ್ಟರಚನಾ ವಿಧಾನವಾಗಿಯೂ ಮೈಪಡೆದದ್ದು ಅವರೆಡೂ ಕನ್ನಡ ನವೋದಯ ಕಾವ್ಯದ ಎರಡು ಪ್ರವಾಹಗಳಾಗಿವೆ. ಕಾವ್ಯದ ಅಂತರಂಗದಲ್ಲಿ ಸಾಂಸ್ಕೃತಿಕ ಪ್ರಜ್ಞೆ ಕೆಲಸ ಮಾಡಿದ್ದು ಪ್ರಕೃತಿ ವರ್ಣನೆಯಿಂದ ಪಾರಮಾರ್ಥಿಕ ಅನುಭವದ ಅಭಿವ್ಯಕ್ತಿಯವರೆಗೆ ಹರವಿದ ವಸ್ತು ವಿನ್ಯಾಸ, ಅಖಂಡ ಕರ್ನಾಟಕದ ವ್ಯಾಪ್ತಿಯನ್ನು ಪಡೆದುಕೊಂಡಿದೆ. ಹಾಗಿರುವುದರಿಂದಲೇ ಈ ಕಾವ್ಯ 'ಸಂಗಮಜಲ ಬಿಳಿದು – ಕರಿದು' ಎಂಬಂತಿದೆ.

ಇದೇ ಸಂದರ್ಭದಲ್ಲಿ ಕಾವ್ಯದ ಮೇಲೆ ಗಾಢಪ್ರಭಾವ ಬೀರಿದ ರವೀಂದ್ರನಾಥ ಠಾಕೂರ, ಸಾಮಾಜಿಕ ಮತ್ತು ರಾಜಕೀಯ ಆಲೋಚನೆಗಳಿಗೆ ಹೊಸ ಆಯಾಮ ತಂದುಕೊಟ್ಟ ಮಹಾತ್ಮಾ ಗಾಂಧಿ, ಆಧ್ಯಾತ್ಮಿಕ, ಅನುಭಾವಿಕ ಚಿಂತನೆ ಹಾಗೂ ಸಾಧನೆಗಳಿಗೆ ಬೆಳಕು ನೀಡಿದ ಶ್ರೀ ರಾಮಕೃಷ್ಣ ಪರಮಹಂಸರು ಮತ್ತು ಶ್ರೀ ಅರವಿಂದರು ಕನ್ನಡ ನವೋದಯ ಸಾಹಿತ್ಯಕ್ಕೆ ಹೊಸತನವನ್ನು ತಂದುಕೊಡಲು ಕಾರಣಕರ್ತರಾಗಿದ್ದಾರೆ. ದ. ರಾ. ಬೇಂದ್ರೆಯವರು ತಮ್ಮ ಆತ್ಮಚರಿತ್ರೆಯಲ್ಲಿ " ಗಾಂಧಿ-ರವೀಂದ್ರ-ಅರವಿಂದ – ಈ ಮೂರೊಲೆಯ ಮೇಲೆ ಗೆಳೆಯರ ಪಾಕಸಿದ್ಧಿ ನಡೆದಿದೆ " ಎಂದಿರುವರಲ್ಲದೆ " ಗಾಂಧಿ ಬಯಲು, ರವೀಂದ್ರ ನಾಟಕರಂಗ, ಅರವಿಂದ ಸಮಾಧಿ ಇವು ಸಾಧನ ಸೋಪಾನದ ತಪ್ಪಲು ಭೂಮಿ ! " ಎಂದೂ ವಿವರಿಸಿದ್ದಾರೆ. ಬೇಂದ್ರೆಯವರು ತಾವಿನ್ನೂ ಬಿ. ಎ. ವಿದ್ಯಾರ್ಥಿಯಾಗಿದ್ದಾಗ ೧೯೧೮ ರಲ್ಲಿ ಶ್ರೀ ಅರವಿಂದರು ಪ್ರಕಟಿಸುತ್ತಿದ್ದ 'ಆರ್ಯ' ಪತ್ರಿಕೆಯಿಂದ ಪ್ರಭಾವಿತರಾಗಿ, ಅವರ ತತ್ತ್ವಜ್ಞಾನಕ್ಕೆ ತಮ್ಮನ್ನು ಒಪ್ಪಿಸಿಕೊಂಡಿದ್ದುದನ್ನು ಹೇಳಿಕೊಂಡಿದ್ದಾರೆ. ಹಾಗಾಗಿ ಬೇಂದ್ರೆಯವರು ಶ್ರೀಮಾತಾರವಿಂದರ ಭಕ್ತರು. ಅವರ ಗೆಳೆಯರೂ, ಅನುಯಾಯಿಗಳೂ ಕೂಡ ಅವರ ದಾರಿಯನ್ನೇ ಹಿಡಿದವರು.

ಕುವೆಂಪು ಅವರು ವಿದ್ಯಾರ್ಥಿಯಾಗಿರುವಾಗಲೇ ಮೈಸೂರಿನ ಶ್ರೀ ರಾಮಕೃಷ್ಣಾಶ್ರಮವನ್ನು ಸೇರಿ, ಅಲ್ಲಿಯ ಶ್ರೀಸ್ವಾಮಿ ಸಿದ್ಧೇಶ್ವರಾನಂದರ ಸನ್ನಿಧಿಯಲ್ಲಿ ತಮ್ಮ ಆಧ್ಯಾತ್ಮಿಕ ಆದರ್ಶವನ್ನು ಗುರುತಿಸಿಕೊಂಡವರು. ಹನ್ನೆರಡು ವರುಷಗಳ ಅವರ ಆಶ್ರಮದ ವಾಸ್ತವ್ಯ ಅವರನ್ನು ಒಬ್ಬ ತಪಸ್ವಿಯಂತೆ ಬೆಳೆಸಲು ಕಾರಣವಾಗಿದೆ. ಶ್ರೀಸ್ವಾಮಿ ಸಿದ್ಧೇಶ್ವರಾನಂದರ ಕೃಪೆಯಿಂದ ೧೯೨೯ ರಲ್ಲಿ ಶ್ರೀ ರಾಮಕೃಷ್ಣ ಪರಮಹಂಸರ ಅಂತರಂಗ ಶಿಷ್ಯರಾಗಿದ್ದ ಶ್ರೀಸ್ವಾಮಿ ಶಿವಾನಂದರಿಂದ ಬೇಲೂರು ಮಠದಲ್ಲಿಯೇ ಕುವೆಂಪು ಅವರು ಮಂತ್ರದೀಕ್ಷೆ ಪಡೆದಿದ್ದೂ ಕೂಡ ಅವರ ವ್ಯಕ್ತಿತ್ವದ ದಿವ್ಯತೇಜಸ್ಸಿಗೆ ಇನ್ನೊಂದು ಕಾರಣವಾಗಿದೆ. ಅವರ ಪ್ರಥಮ ಕವನ ಸಂಗ್ರಹ 'ಕೊಳಲು' ಪ್ರಕಟವಾಗುವಾಗ ಕುವೆಂಪು ಶ್ರೀ ರಾಮಕೃಷ್ಣ ಆಶ್ರಮದ ನಿವಾಸಿಯೇ ಆಗಿದ್ದರು. ಆ ಕವನ ಸಂಕಲನಕ್ಕೆ ಮುನ್ನುಡಿ ಬರೆದ ಬಿ. ಎಂ. ಶ್ರೀ ಅವರು " ಈಗ ಇವರ ವಾಸ ಮೈಸೂರಿನ ಶ್ರೀ ರಾಮಕೃಷ್ಣಾಶ್ರಮದಲ್ಲಿ; ಉದ್ಯೋಗ

ಕಾವ್ಯಪ್ರಿಯರೊಡನೆ ಕವಿತಾಪ್ರಸಾದವನ್ನು ಸವಿಯುವುದರಲ್ಲಿ. ಜೀವಾನಂದ, ಬ್ರಹ್ಮಾನಂದ, ಕಾವ್ಯನಂದಗಳನ್ನು ತಮ್ಮ ಶಕ್ತಿಗನುಗುಣವಾಗಿ ಅಂತಃಕರಣದಲ್ಲಿ ತುಂಬಿಕೊಳ್ಳುತ್ತಾ ಹಕ್ಕಿ ಹಾಡಿದಂತೆ ಸುಖವಾಗಿ ಹಾಡುವವರು ಪುಟ್ಟಪ್ಪನವರು" ಎಂದಿರುವುದು ಗಮನಿಸತಕ್ಕ ಸಂಗತಿಯಾಗಿದೆ. ಜೀವಾನಂದ, ಬ್ರಹ್ಮಾನಂದ, ಕಾವ್ಯಾನಂದ ಇವು ಮೂರು ನವೋದಯ ಕಾವ್ಯದ ಲಕ್ಷಣಗಳೇ ಆಗಿವೆ.

ನವೋದಯ ಕಾವ್ಯದ ಶಿಖರಗಳಾದ ಬೇಂದ್ರೆ ಮತ್ತು ಕುವೆಂಪು ಇಪ್ಪತ್ತನೆಯ ಶತಮಾನದ ಹಲವು ನೂತನ ಸ್ಪಂದನಗಳನ್ನು ಕಾವ್ಯಕ್ಕೆ ವಸ್ತುವಾಗಿರಿಸಿಕೊಂಡಾಗಲೂ ಆಧ್ಯಾತ್ಮಿಕ ಸಾಧಕರಾಗಿದ್ದರೆಂಬುದು ಮಹತ್ವದ ಮಾತಾಗಿದೆ. ನವೋದಯ ಕಾಲದ ಪ್ರಮುಖ ಕವಿಗಳಲ್ಲಿ ಒಂದಿಲ್ಲಾ ಒಂದು ರೀತಿಯಿಂದ ಆಧ್ಯಾತ್ಮಿಕತೆ ಕಂಡುಬಂದಿರುವುದುಂಟು.

ನಾವಿಲ್ಲಿ ಮುಖ್ಯವಾಗಿ ಗಮನಿಸಬೇಕಾದದ್ದು ಆ ಕಾಲದ ಪ್ರಮುಖ ಪ್ರೇರಣೆಗಳನ್ನು. ಕನ್ನಡದ ಪರಂಪರೆ ಹದಿನೇಳನೆಯ ಶತಮಾನದ ನಂತರ ರಾಜಕೀಯ ಸ್ಥಿತ್ಯಂತರಗಳಲ್ಲಿ ಮಂಕಾಗಿತ್ತಾದರೂ ತತ್ತ್ವಪದಕಾರರಲ್ಲಿ, ಜನಪದ ಸಾಹಿತ್ಯದಲ್ಲಿ, ಅಲ್ಲೊಮ್ಮೆ ಇಲ್ಲೊಮ್ಮೆ ಮಿಂಚುತ್ತಿರುವ ಮುದ್ದಣ. ಕೆಂಪುನಾರಾಯಣರಂಥವರಲ್ಲಿ ಅದು ತನ್ನ ಹೊಳಪನ್ನು ತೋರಿಸುತ್ತಿತ್ತು. ನವೋದಯ ಪೂರ್ವದಲ್ಲಿ ಕನ್ನಡ ಸಾಹಿತ್ಯದ ಪುನರುಜ್ಜೀವನಕ್ಕಾಗಿ ಸಂಸ್ಕೃತ, ಇಂಗ್ಲಿಷ್, ಬಂಗಾಲಿ ಮತ್ತು ಮರಾಠಿ ಭಾಷೆಗಳ ಕೆಲವು ಕೃತಿಗಳನ್ನು ಕನ್ನಡಕ್ಕೆ ತರುವ ಹಾಗೂ ಸ್ವತಂತ್ರವಾಗಿಯೂ ಕನ್ನಡದಲ್ಲಿ ಬರೆಯುವ ಪ್ರಯತ್ನಗಳು ನಡೆದು ಸಾಹಿತ್ಯಿಕ ಭೂಮಿಕೆಯೊಂದು ಸಿದ್ಧವಾಗಿತ್ತು. ಭಾರತದ ಮಟ್ಟದಲ್ಲಿ ಸ್ವತಂತ್ರ ರಾಷ್ಟ್ರ ನಿರ್ಮಾಣದ ಕಾರ್ಯ ಸಾಗಿರುವಂತೆ, ನಮ್ಮ ನಾಡಿನ ಮಟ್ಟದಲ್ಲಿ ಅಖಂಡ ಕರ್ನಾಟಕದ ಕನಸು ಕಾಣಲು ಪ್ರಾರಂಭವಾಗಿತ್ತು. ನೌಕರ ಶಾಹಿಯನ್ನು ನಿರ್ಮಿಸಲು ಹೊರಟ ಇಂಗ್ಲಿಷ್ ಶಿಕ್ಷಣವು ಅಂದಿನ ಯುವಕರಲ್ಲಿ ವೈಚಾರಿಕತೆಯನ್ನು ಬೆಳೆಸಿದ್ದು ಒಂದು ವಿಶೇಷ. ತಮ್ಮ ನಾಡು, ತಮ್ಮ ಭಾಷೆ, ತಮ್ಮ ಸಂಸ್ಕೃತಿ, ತಮ್ಮ ಪರಂಪರೆಗಳನ್ನು ಇತಿಹಾಸದ ಪುಟಗಳಲ್ಲಿ ಹೊರಳಿಸಿ ನೋಡುತ್ತ, ನವ ಕರ್ನಾಟಕ ನಿರ್ಮಾಣದ ದಾರಿಯನ್ನು ಹುಡುಕುವುದರಲ್ಲಿ ನಮ್ಮ ಹಿರಿಯರು ತನ್ಮಯರಾಗಿದ್ದರು. ಒಂದು ಕೈಯಿಂದ ನಮ್ಮ ಪರಂಪರೆಯ ಬೇರುಗಳನ್ನು ಗುರುತಿಸುತ್ತ, ಇನ್ನೊಂದು ಕೈಯಿಂದ ಆಧುನಿಕ ಪ್ರಗತಿಯನ್ನು ಸಾಧಿಸಲು ನಮ್ಮವರು ಹವಣಿಸಿದರು. ೧೯೨೩ ರಲ್ಲಿ ಬೇಂದ್ರೆಯವರು ಮಧುರಚೆನ್ನರಿಗೆ ಬರೆದ ಪತ್ರವೊಂದರಲ್ಲಿ "ಭೋಗಲಂಪಟವಾದ ಕನ್ನಡನಾಡನ್ನು ಬಸವ ಅಲ್ಲಮಾದಿ ಕಾರಣಿಕರು 'ದೇವನಲ್ಲಿ ನಿವೃತ್ತ'ರಾಗಿ ಆಮೇಲೆ ದೇವನಿಂದ ಪ್ರವೃತ್ತರಾಗಿ ಉದ್ಧರಿಸಿದರು.... ಒಕ್ಕಟ್ಟಿಲ್ಲದೆ ಇಕ್ಕಟ್ಟಿನಲ್ಲಿ ಬಿದ್ದಿದ್ದ ಕಾರ್ಯ ಪರಾಙ್ಮುಖ ಕರ್ನಾಟಕವನ್ನು ಧುರಂಧರ ಮಾಡಲು ಮಧ್ವ ವಿದ್ಯಾರಣ್ಯರು ಆ ಮಾರ್ಗವನ್ನೇ ಅನುಸರಿಸಿದರು. ವ್ಯವಹಾರಲೋಲುಪರಾದ ಕನ್ನಡಿಗರನ್ನು ದಾಸಕೂಟದವರು ಮತ್ತೆ ಅದೇ ರೀತಿಯಿಂದ ಮೇಲಕ್ಕೆತ್ತಿದರು. ಹೀಗೆ ೧೨-೧೪-೧೬

ಶತಮಾನಗಳಲ್ಲಿ ಮೂರು ಸಲದ ಧರ್ಮಗ್ಲಾನಿಯನ್ನು ಕರ್ನಾಟಕ ಸೀಮಾಪುರುಷರು, ಕನ್ನಡದವ್ವನ ಪವಾಡಪುರುಷರು ಹೋಗಲಾಡಿಸಿದರು. ೧೮ನೆಯ ಶತಮಾನದಲ್ಲಿ ಚಿಕದೇವರಾಯನು ಅಂಥದೇ ಒಂದು ಪ್ರಯತ್ನ ಮಾಡಿದನು. ಅದು ಅಷ್ಟು ಫಲಕಾರಿಯಾಗಲಿಲ್ಲ.... ಇದು ೨೦ನೆಯ ಶತಮಾನ. ಈ ಸಲ ನಾವು ಇಮ್ಮಡಿ ಹುರುಪಿನಿಂದ ಶುದ್ಧ ಪ್ರೇರಣೆಯ ಮಂದಾಕಿನಿಯನ್ನು ಭೂಲೋಕಕ್ಕೆ ಭಾಗೀರಥಿಯಾಗಿ ತರಲಿಕ್ಕೇ ಬೇಕು...." ಎಂದಿದ್ದಾರೆ. ಹೀಗೆ ಕನ್ನಡ ನಾಡನ್ನು ಪುನರ್ ನಿರ್ಮಿಸುವ ನೋಂಪಿಯನ್ನು ತಳೆಯುತ್ತ, ಹರಿಹರನ ಪಂಪಾಶತಕದ ಭಾವವನ್ನು, ದಾಸರ ವ್ಯಾಕುಲತೆಯನ್ನು ಅನುಭಾವಿಕ ನೆಲೆಯಲ್ಲಿ ಸ್ವೀಕರಿಸುತ್ತ, ಆಧುನಿಕತೆಗೆ ಹೊಸ ರೂಪಕೊಡುತ್ತಿದ್ದ ಮಹಾತ್ಮಾ ಗಾಂಧಿಯವರನ್ನು, ರವೀಂದ್ರರನ್ನು, ಶ್ರೀ ಅರವಿಂದರನ್ನು, ರಾಮಕೃಷ್ಣ ಪರಮಹಂಸ, ವಿವೇಕಾನಂದರನ್ನು ಮತ್ತೊಮ್ಮೆ ಸ್ಮರಿಸಿಕೊಳ್ಳುತ್ತಾರೆ ಬೇಂದ್ರೆಯವರು.

ಈ ತಾತ್ವಿಕ ಚಿಂತನೆಯ ಅಸ್ತಿವಾರದ ಮೇಲೆ ಕಾವ್ಯದ ಮತ್ತು ಕಾವ್ಯೇತರ ಸಾಹಿತ್ಯದ ಹೊಸ ಸೃಷ್ಟಿಯನ್ನು ನವೋದಯ ಕವಿಗಳು, ಲೇಖಕರು ತಮ್ಮದಾಗಿಸಿಕೊಳ್ಳುತ್ತಾರೆ. ದೇಸೀಯ ಪರಂಪರೆ ಘನಿಷ್ಠವಾಗಿರುವಾಗಲೂ ಪಾಶ್ಚಾತ್ಯ ಸಾಹಿತ್ಯದಿಂದ ಪ್ರೇರಣೆಗಳನ್ನು ಆ ಕಾಲದಲ್ಲಿ ನಮ್ಮ ಕವಿಗಳು ಪಡೆದರೆಂಬುದು ಒಂದು ಐತಿಹಾಸಿಕ ಸತ್ಯ. ವರ್ಡ್ಸ್‌ವರ್ಥ್, ಶೆಲ್ಲಿ, ಕೋಲರಿಜ್ ಮುಂತಾದ ರೋಮಾಂಟಿಕ್ ಕವಿಗಳ ಅಧ್ಯಯನ ಕನ್ನಡ ಕಾವ್ಯಕ್ಕೆ ಹೊಸ ಆಯಾಮವನ್ನು ತಂದುಕೊಟ್ಟಿದೆ. ಅಂತೆಯೇ ಹೊಸಗನ್ನಡ ಸಾಹಿತ್ಯ ಚರಿತ್ರೆ ಬರೆದ ಪ್ರೊ. ಎಲ್.ಎಸ್. ಶೇಷಗಿರಿರಾವ್ ಅವರು "ನವೋದಯ ಸಾಹಿತ್ಯ ಯುರೋಪಿನಲ್ಲಿ ರೋಮ್ಯಾಂಟಿಕ್ ಎಂದು ಕರೆಯುವ ಸಾಹಿತ್ಯಕ್ಕೆ ಹಲವು ರೀತಿಗಳಲ್ಲಿ ಸಮೀಪವಾಗಿದೆ" ಎಂದು ಹೇಳಬೇಕಾಯಿತು.

ಸಾಹಿತ್ಯದ ಯಾವುದೇ ಬದಲಾವಣೆ ಮೊದಲಿಗೆ ಕಾಣಿಸಿಕೊಳ್ಳುವದು ಕಾವ್ಯದಲ್ಲಿಯೇ. ಈ ನವೋದಯ ಕಾವ್ಯ ವಸ್ತುವಿನ ಆಯ್ಕೆಯಲ್ಲಿ ಸ್ವಾತಂತ್ರ್ಯ ವಹಿಸಿದ್ದು ಅದರ ಪ್ರಥಮ ಬದಲಾವಣೆಯಾಗಿದೆ. ಹನ್ನೆರಡನೆಯ ಶತಮಾನದ ವಚನಕಾರರೂ ಒಂದು ಬಗೆಯ ಸ್ವಾತಂತ್ರ್ಯವನ್ನು ವಹಿಸಿದ್ದರೂ ಅದು ಧರ್ಮನಿರಪೇಕ್ಷವಾಗಿರಲಿಲ್ಲ. ಇಲ್ಲಿ ಮಾತ್ರ ಪ್ರಕೃತಿಯ ವರ್ಣನೆ, ಪ್ರೀತಿಯ ಸ್ಪಂದನ, ಸಾಮಾಜಿಕ ಪ್ರತಿಕ್ರಿಯೆ, ನಾಡಿನ ಹಾಗೂ ರಾಷ್ಟ್ರದ ಸ್ಥಿತಿ-ಗತಿಗಳ ವರ್ಣನೆ ಮತ್ತು ಪರಂಪರೆಯ ಅಗ್ಗಳಿಕೆ ಇತ್ಯಾದಿಗಳಲ್ಲಿ ಧರ್ಮನಿರಪೇಕ್ಷತೆ ಎದ್ದು ಕಾಣುತ್ತದೆ. "ವೈಯಕ್ತಿಕ ವೈಶಿಷ್ಟ್ಯಗಳ ಮೊತ್ತವೇ ನವೋದಯದ ಸ್ಥೂಲಸ್ವರೂಪ" ಎಂಬ ವಿಮರ್ಶಕರ ಮಾತೂ ಇಲ್ಲಿ ಗಮನಿಸುವಂತಹದು. ಭಾವನಿಷ್ಠತೆ ಮತ್ತು ಗೀತಗುಣಗಳಿಂದಾಗಿ ಅದು "ಭಾವಗೀತ" ಎಂಬ ಸಾರ್ಥಕವಾದ ಅಭಿಧಾನವನ್ನು ಪಡೆದುಕೊಂಡಿದೆ. ಅಂತೆಯೇ ಭಾವಗೀತಗಳ ಹಲವು ವೈವಿಧ್ಯಗಳನ್ನು ರೂಪ

ಹಾಗೂ ವಸ್ತುಗಳೆರಡರಲ್ಲಿಯೂ ಅದು ತನ್ನ ತೆಕ್ಕೆಗೆ ಒಗ್ಗಿಸಿಕೊಂಡಿತು. ಷಟ್ಪದಿ ರಗಳೆ. ತ್ರಿಪದಿ. ಸಾಂಗತ್ಯ– ಇತ್ಯಾದಿ ಬಂಧಗಳು ಹಿಗ್ಗುತ್ತ, ಕುಗ್ಗುತ್ತ, ಜನಪದದ ವಿವಿಧ ಗತ್ತುಗಳು ಸ್ವೀಕೃತವಾಗುತ್ತ, ಮಾರ್ಪಾಡುಗೊಳ್ಳುತ್ತ ಕನ್ನಡ ಕಾವ್ಯ ಕಣ್, ಕಿವಿ. ಮನಸ್ಸು ಮೂರನ್ನೂ ತನ್ನ ಕಡೆಗೆ ಸೆಳೆದುಕೊಂಡಿತು. ಸುನೀತ, ಸೀಸಪದ್ಯ, ಪ್ರಗಾಥ. ಮುಕ್ತಕ ಇತ್ಯಾದಿ ನವೀನ ಬಂಧಗಳು ಕನ್ನಡದಲ್ಲಿ ರೂಪಗೊಂಡದ್ದು ವಿಶೇಷ. ಈ ಬಂಧಗಳಲ್ಲಿ ನವೋದಯ ಕವಿಗಳನ್ನು ವಿಶೇಷವಾಗಿ ಆಕರ್ಷಿಸಿದ್ದು ಸುನೀತ. ಕನ್ನಡದ ಎಲ್ಲ ಪ್ರಮುಖ ಕವಿಗಳು– ಮಾಸ್ತಿ. ಬೇಂದ್ರೆ, ಕುವೆಂಪು, ಗೋಕಾಕ– ಇವರೆಲ್ಲ ಸ್ವತಂತ್ರ ಸಂಕಲನ ತರುವಷ್ಟು ಸುನೀತಗಳನ್ನು ಬರೆದರು. ನಂತರದ ತಲೆಮಾರಿನವರಲ್ಲಿ ಈ ಬಂಧದಲ್ಲಿ ಹಲವು ಪ್ರಯೋಗಗಳನ್ನು ಮಾಡಿದವರು ಚೆನ್ನವೀರ ಕಣವಿಯವರು.

ಕನ್ನಡ ಪ್ರಾಚೀನ ಕಾವ್ಯ ಸಾಮಾನ್ಯವಾಗಿ ಆದಿಪ್ರಾಸವನ್ನು ನಿಯತವಾಗಿ ಬಳಸಿಕೊಂಡಿತ್ತು. ನವೋದಯ ಕಾವ್ಯ ಆದಿಪ್ರಾಸವನ್ನು ಬಿಟ್ಟುಕೊಡುತ್ತ ಅಂತ್ಯಪ್ರಾಸವನ್ನು ಇಟ್ಟುಕೊಂಡಿತು. ರಗಳೆ-ಸರಳರಗಳೆಯಾಗಿ ಹೊಸ ಮಾರ್ಗವೊಂದನ್ನು ನಿರ್ಮಿಸಿತು. ಇದು ಭಾವಗೀತ ಪ್ರಪಂಚಕ್ಕೆ ಸೀಮಿತವಾಗಿ ಉಳಿಯದೆ, ಕಥನ ಕಾವ್ಯ, ನಾಟಕ, ಮಹಾಕಾವ್ಯಗಳ ವಾಹಕವಾಯಿತು.

ನವೋದಯ ಕಾವ್ಯದ ವಸ್ತು ವೈವಿಧ್ಯವನ್ನು ಒಂದು ಲೆಕ್ಕಕ್ಕೆ ಹೊಂದಿಸಿ ಹೇಳುವುದು ಕಷ್ಟದ ಕೆಲಸ. ಮಾನವ ಮನಸ್ಸು-ಹೃದಯಗಳಲ್ಲಿ ಹುಟ್ಟುವ ಊರ್ಮಿಗಳಷ್ಟು, ಪ್ರಾಪಂಚಿಕ ಜೀವನದಲ್ಲಿ ಕಂಡುಬರುವ ಸರಸ-ವಿರಸ-ವಿಷಣ್ಣತೆಗಳಷ್ಟು, ಪ್ರಕೃತಿಯ ದೈನಂದಿನ ಉದಯಾಸ್ತಮಾನಗಳನ್ನು ಒಳಗೊಂಡು ಋತುಮಾನಗಳ ವಿವಿಧ ವ್ಯಾಪಾರ ಹಾಗೂ ಚೇತನಾಚೇತನದ ವಿವಿಧ ವಿನ್ಯಾಸಗಳಷ್ಟು, ನಾಡಿನ-ರಾಷ್ಟ್ರದ ಪರಂಪರೆ, ಪತನ-ಪುನರುಜ್ಜೀವನಗಳ ಏರುಪೇರುಗಳಷ್ಟು ವ್ಯಾಪಕವಾಗಿದೆಯಲ್ಲದೆ ಗೌರೀಶಂಕರ ಏರುವ ತೇನಸಿಂಗ, ಚಂದ್ರಮಂಡಲದಲ್ಲಿ ಕಾಲಿಟ್ಟ ಆರ್ಮಸ್ಟ್ರಾಂಗ, ಅಣುಬಾಂಬ ಶೋಧಕ ಐನ್‌ಸ್ಟೀನರ ಮಹಾನ್ ಸಾಧನೆಯೂ ಕಾವ್ಯಕ್ಕೆ ವಸ್ತುವಾಗುವಂತಾಯಿತು. ಹಾಗೆಯೇ ಬುದ್ಧನನ್ನೊಳಗೊಂಡು ರಮಣಮಹರ್ಷಿವರೆಗಿನ ಯೋಗಮುದ್ರೆ. ಯೋಗಸಿದ್ಧಿಗಳೂ ಕಾವ್ಯದ ವಸ್ತುವಾದವು.

ಕವಿ ಜೀವನ ಬ್ಯಾಸರ ಹರಿಸಾಕ  
ಹಾಡ ನುಡಿಸಾಕ  
ಹೆಚ್ಚಿಗೇನು ಬೇಕ ?  
ಒಂದು ಹೂತ ಹುಣಸಿಯ ಮರ ಸಾಕ.

ಇಂಥ ಸಾಮಾನ್ಯವೆನ್ನಬಹುದಾದ– ಹಾಗೆ ನೋಡಿದರೆ ಪ್ರಕೃತಿಯ ನೂತನ ಸೃಷ್ಟಿಯಲ್ಲಿ ಅದೂ ಅಸಾಮಾನ್ಯವಾದುದೇ– ವಸ್ತುವೂ ಕವಿಯ ಪ್ರತಿಭೆಯ ಮೂಸೆಯಲ್ಲಿ ಹೊಸ ಆವಿಷ್ಕಾರವನ್ನು ಪಡೆದುಕೊಳ್ಳುತ್ತದೆ.

ನವೋದಯ ಕವಿತೆಗಳು ಸಮಕಾಲೀನ ಜೀವನವನ್ನು ಚಿತ್ರಿಸುವಲ್ಲಿ ಮಹತ್ವದ ಪಾತ್ರವನ್ನು ವಹಿಸಿವೆ. ಕನಸುಗಾರಿಕೆ ಮತ್ತು ಆದರ್ಶಪ್ರಿಯತೆ ಈ ಕಾಲದ ಕವಿಗಳ ಮನೋಧರ್ಮದಲ್ಲಿ ಬೆರೆತುಕೊಂಡದ್ದರಿಂದ ವೈಪರಿತ್ಯಗಳಲ್ಲಿ, ವಿಷಣ್ಣತೆಗಳಲ್ಲಿಯೂ ಅವರು ಸಹ್ಯವಾದ, ಸೌಂದರ್ಯನಿಷ್ಠವಾದ ವಿಶೇಷತೆಯೊಂದನ್ನು ಕಾಣುವ ಹಂಬಲವುಳ್ಳವರಾಗಿದ್ದಾರೆ.

ಎನ್ನ ಪಾಡೆನಗಿರಲಿ ಅದರ ಹಾಡನ್ನಷ್ಟೆ
ನೀಡುವೆನು ರಸಿಕ, ನಿನಗೆ
ಕಲ್ಲುಸಕ್ಕರೆಯಂಥ ನಿನ್ನೆದೆಯು ಕರಗಿದರೆ
ಆ ಸವಿಯ ಹಣಿಸು ನನಗೆ

ಇದು ಬೇಂದ್ರೆಯವರ ಬಯಕೆ.

ಬಿರುಗಾಳಿ ಮಳೆಯೊಳು ಬಗ್ಗಡವಾಗದೆ
ಮಾಗಿಯ ಚಳಿಯೊಳು ಘನಹಿಮವಾಗದೆ
ಬಾಳಿನ ಹೊನಲು ಬ್ರಹ್ಮಾಂಬುಧಿಗೆ
ನಿರಂತರವಾಗಿ ಹರಿಯಲಿ ಸದಾ.

ಬಿರುಗಾಳಿ, ಮಳೆ, ಮಾಗಿಯ ಚಳಿಗಳು ಬದುಕಿನಲ್ಲಿದ್ದಾಗಲೂ ಬಾಳಿನ ಹೊನಲು ಬ್ರಹ್ಮಾಂಬುಧಿಗೆ ನಿರಂತರವಾಗಿ ಹರಿಯಬೇಕೆನ್ನುವುದು ಕುವೆಂಪು ಅವರ ಪ್ರಾರ್ಥನೆ.

ನವೋದಯ ಕವಿಗಳು ಪ್ರಕೃತಿಯ ಉಪಾಸಕರಾಗಿದ್ದರೆಂಬುವಕ್ಕೆ ಬೇಕಾದಷ್ಟು ಉದಾಹರಣೆಗಳು ಸಿಗುತ್ತವೆ. ಬೇಂದ್ರೆಯವರ 'ಬೆಳಗು', 'ಶ್ರಾವಣ', 'ಯುಗಾದಿ' ಮುಂತಾದ ಕವಿತೆಗಳು ಜನರ ನಾಲಗೆಯ ಮೇಲಿರುವಂತೆ ಕುವೆಂಪು ಅವರ 'ಕೊಳಲು', 'ಕಲಾಸುಂದರಿ', 'ನವಿಲು' ಕವನ ಸಂಗ್ರಹಗಳಲ್ಲಿಯ ಅನೇಕ ಕವಿತೆಗಳು ನಿಸರ್ಗದ ವಿವಿಧ ವಿನ್ಯಾಸಗಳನ್ನು ಚಿತ್ರಿಸಿರುವುದನ್ನು ಸಹೃದಯರು ಬಲ್ಲರು.

ಅಖಂಡವಾದ ಜೀವನ ಪ್ರೀತಿ, ಸ್ನೇಹ, ಒಲವು ನವೋದಯದ ಎಲ್ಲ ಕವಿಗಳಲ್ಲಿ ಕಾಮನ ಬಿಲ್ಲಿನ ಸೊಬಗಿನಂತೆ ಕಾಣಿಸಿಕೊಂಡಿದೆ. ನವಿಲುಗರಿಯ ರಂಗಿನಂತೆ ಹರವಿಕೊಂಡಿದೆ. ಬೇಂದ್ರೆ, ಕುವೆಂಪು, ಪು.ತಿ.ನ., ತೀ.ನಂ.ಶ್ರೀ. ಅವರನ್ನೊಳಗೊಂಡು, ನವೋದಯದ ಉಚ್ಛ್ರಾಯ ಕಾಲದಲ್ಲಿ ಕಾವ್ಯ ರಂಗವನ್ನು ಪ್ರವೇಶಿಸಿದ ಕೆ. ಎಸ್. ನರಸಿಂಹಸ್ವಾಮಿ, ಜಿ. ಎಸ್. ಶಿವರುದ್ರಪ್ಪ ಮತ್ತು ಚೆನ್ನವೀರ ಕಣವಿಯವರ ಕವಿತೆಗಳಲ್ಲಿಯೂ ಅವು ತಮ್ಮ ಸೊಗಸುಗಾರಿಕೆಯನ್ನು ಹೆಚ್ಚಿಸಿಕೊಂಡಿವೆ. ಬೇಂದ್ರೆಯವರ ಆರಂಭದ ಸಂಕಲನಗಳಾದ ಗರಿ, ಸಖೀಗೀತ, ಉಯ್ಯಾಲೆ, ನಾದಲೀಲೆ – ಈ ಸಂಕಲನಗಳಲ್ಲಿ ಪ್ರೀತಿಯನ್ನು ಪ್ರತಿನಿಧಿಸುವ ಹಲವು ಕವಿತೆಗಳು ದೊರೆಯುತ್ತವೆ. ಕುವೆಂಪು ಅವರ ಕಲಾಸುಂದರಿ, ನವಿಲು, ಪಕ್ಷಿಕಾಶಿ, ಪ್ರೇಮಕಾಶ್ಮೀರ, ಷೋಡಶಿ ಇತ್ಯಾದಿ ಕವನ ಸಂಗ್ರಹಗಳಲ್ಲಿ ಪ್ರೀತಿಯ ಉಕ್ಕಂದ ಇದ್ದೇ ಇದೆ.

ಇಲ್ಲಿಯ ಸೌಂದರ್ಯ ಪ್ರಾಚೀನ ಶೃಂಗಾರರಸವನ್ನು ಹೋಲುತ್ತಿದ್ದರೂ ಅದರಿಂದ ಭಿನ್ನವಾಗಿಯೇ ಇದೆ.

ನಾನು ಬಡವಿ, ಆತ ಬಡವ
ಒಲವೆ ನಮ್ಮ ಬದುಕು
ಬಳಸಿಕೊಂಡೆವದನೆ ನಾವು
ಅದಕು ಇದಕು ಎದಕು.

ಎಂಬಲ್ಲಿ ಒಲವಿನ ಆದರ್ಶವೊಂದು ಗಮನ ಸೆಳೆಯುತ್ತದೆ. "ತೋಳುಗಳಲಿ ತೊಳ ಬಂದಿ. ಕೆನ್ನೆ ತುಂಬ ಮುತ್ತು" ಎಂದು ಹೇಳಿದಾಗ ಶೃಂಗಾರದ ವಿಭಾವಾನುಭಾವಗಳು ಹೊಸರೂಪವನ್ನು ಪಡೆದುಕೊಳ್ಳುತ್ತವೆ. ತೋಳಬಂದಿ ಮತ್ತು ಮುತ್ತು ಶ್ಲೇಷಾರ್ಥದಿಂದ ಕಾವ್ಯಾಸ್ವಾದನೆಗೆ ನವೀನ ಹೊಳಪನ್ನು ತಂದುಕೊಡುತ್ತವೆ. ಬೇಂದ್ರೆಯವರ ಪ್ರಾಸ ಸಂಯೋಜನೆಯಲ್ಲಿ ಮತ್ತು ಪದಪ್ರಯೋಗಗಳಲ್ಲಿ ವಿಲಕ್ಷಣವಾದ ವ್ಯಂಜಕ ಶಕ್ತಿಯಿರುವುದನ್ನು ಅನೇಕ ಪದ್ಯಗಳಲ್ಲಿ ಕಾಣಬಹುದು. ಈ ಬಗೆಯ ಕಾವ್ಯಸೃಷ್ಟಿಯಿಂದಲೇ ಅವರು ಕನ್ನಡ ಕಾವ್ಯದ ಗಾರುಡಿ ಎನಿಸಿದ್ದು.

ಪ್ರೀತಿಯ ಅನೇಕ ಮುಖಗಳನ್ನು ಕಂಡ ಬೇಂದ್ರೆಯವರು ತಮ್ಮ ಸಖ್ಯದ ಆಖ್ಯಾನವನ್ನು 'ಸಖೀಗೀತ'ದಲ್ಲಿ ವಿವರವಾಗಿಯೇ ನಿರೂಪಿಸಿರುವರು. ಅದು ಕಟು ಮಧುರ ವ್ಯಾಖ್ಯಾನವಾಗಿರುವುದನ್ನು ಅವರು ಹೇಳಿದ್ದಾರೆ. ಅವರು ಪಟ್ಟಪಾಡು ಹುಟ್ಟು ಹಾಡಾಗಿ ಹೊಸವಾಗಿ ರಸವಾಗಿ ಹರಿದಿದ್ದು – ಕನ್ನಡ ಕಾವ್ಯಕ್ಕೆ ಒಂದು ಹೊಸ ರುಚಿಯನ್ನು ತಂದುಕೊಟ್ಟಿದೆ. ಲೌಕಿಕ ಜೀವನದ ಒಂದು ಶ್ರುತಿಯಂತಿರುವ ಈ ನೀಳ್ಗವನ ಆತ್ಮಕಥನದ ಖಂಡಕಾವ್ಯವೆನಿಸಿದೆ. ಮಧುರಚೆನ್ನರ 'ನನ್ನ ನಲ್ಲ'ವು ಆಧ್ಯಾತ್ಮಿಕ ಸಾಧನೆಯ ಇನ್ನೊಂದು ಮುಖವಾದ ಖಂಡಕಾವ್ಯವಾಗಿದೆ. ಇವೆರಡರ ಮಾದರಿಯನ್ನು ಅನುಸರಿಸಿದ ನವೋದಯ ಸಂದರ್ಭದಲ್ಲಿಯೇ ಮೂಡಿ ಬಂದ ಅಂದಿನ ಯುವಕವಿ ಚೆನ್ನವೀರ ಕಣವಿಯವರ "ಭಾವಜೀವಿ" ಅವರ ಪೂರ್ವಾಶ್ರಮದ ಜೀವನವನ್ನು ಚಿತ್ರಿಸುವಲ್ಲಿ ತನ್ಮಯವಾಗಿದೆ. ನವೋದಯ ಯುಗದ ಕಾವ್ಯಗಳಲ್ಲಿ ಈ ಆತ್ಮಕಥನಪರ ಖಂಡಕಾವ್ಯವೂ ಒಂದು.

ಪ್ರಕೃತಿಯ ಚೆಲುವೇ ಇರಲಿ, ಪ್ರೀತಿಯ ಸೊಬಗೇ ಇರಲಿ –ಅವೆಲ್ಲ ಇಂದ್ರಿಯ ಗ್ರಾಹ್ಯವಾದ ಸೌಂದರ್ಯ ದರ್ಶನಗಳು. ಹೀಗೆ ಐಂದ್ರಿಯಿಕ ಸೌಂದರ್ಯವನ್ನು ಕಂಡರಸುವ ಕವಿ ತಾನು ಬೆಳೆಬೆಳೆದಂತೆ ಅಥವಾ ಪ್ರತಿಭಾ ಸಂಪನ್ನತೆಯಿಂದ ಆ ಕ್ಷಣಕ್ಕೆ ಕಲ್ಪನಾ ಸೌಂದರ್ಯದ ಎತ್ತರಕ್ಕೂ ಏರುತ್ತಾನೆ. ಅದರ ಮುಂದಿನ ಘಟ್ಟಗಳು ತಾತ್ತ್ವಿಕ ಸೌಂದರ್ಯ ಮತ್ತು ಆಧ್ಯಾತ್ಮಿಕ ಸೌಂದರ್ಯಗಳು. ಶ್ರೀ ಅರವಿಂದರು ತಮ್ಮ 'The Future Poetry' ಎಂಬ ಕಾವ್ಯ ಮೀಮಾಂಸೆಯ (ಕಾವ್ಯ ವಿಮರ್ಶೆಯೂ ಅಹುದು) ಗ್ರಂಥದಲ್ಲಿ ಕೀಟ್ಸನ ಕಾವ್ಯದ ಬಗ್ಗೆ ಚರ್ಚೆ ಮಾಡುತ್ತ ಸೌಂದರ್ಯದ ನಾಲ್ಕು ಮುಖಗಳನ್ನು ಸೂಚಿಸಿದ್ದಾರೆ:

ಅವು ಇಂತಿವೆ : (1) Sensuous beauty (2) Imaginative beauty (3) Intellectual beauty (4) Ideal beauty – ಈ ನಾಲ್ಕನೆಯದನ್ನು ಇನ್ನೊಂದೆಡೆಯಲ್ಲಿ Spiritual beauty ಎಂದು ಗುರುತಿಸಲಾಗಿದೆ. ಇವುಗಳನ್ನು 'ಚತುರ್ಮುಖ ಸೌಂದರ್ಯ' ಎಂದು ಬೇಂದ್ರೆಯವರು ಹೆಸರಿಸಿದ್ದಾರೆ. 'ಸೌಂದರ್ಯ ಸಮೀಕ್ಷೆ'ಯಲ್ಲಿ ಡಾ. ಜಿ. ಎಸ್. ಶಿವರುದ್ರಪ್ಪನವರು ಕಾವ್ಯಮೀಮಾಂಸೆಯ ಕಕ್ಷೆಯಲ್ಲಿ ಪರಿಶೀಲಿಸಿದ್ದಾರೆ. ಆ ಪರಿಶೀಲನೆಯಲ್ಲಿ ಆಯ್ದುಕೊಂಡ ಪದ್ಯಭಾಗಗಳೆಲ್ಲ ನವೋದಯ ಕಾವ್ಯದಿಂದ ಎತ್ತಿಕೊಂಡವಾಗಿವೆ. ಒಂದೆರಡನ್ನು ಪ್ರಾಚೀನ ಕಾವ್ಯದಿಂದ ಇಲ್ಲವೆ ವಚನ ಸಾಹಿತ್ಯದಿಂದ ಎತ್ತಿಕೊಂಡಿದ್ದರೂ ಅವು ಅಪವಾದಾತ್ಮಕ ಎಂಬಂತಿವೆ. ಹಾಗೆ ನೋಡಿದರೆ ಕಾವ್ಯರಸಗಳು ಸೌಂದರ್ಯದ ಇನ್ನೊಂದು ಮುಖವಾಗಿಯೇ ಕಾಣುತ್ತವೆ. ಆದರೆ ಅವು ಸ್ಥಾಯೀ ಭಾವಗಳಿಗಷ್ಟೇ ಸೀಮಿತವಾಗಿವೆ. ಸಂಚಾರಿ ಭಾವಗಳಲ್ಲಿಯೂ ಸೌಂದರ್ಯವಿರುವುದು ನವೋದಯ ಕಾವ್ಯದಿಂದ ಗಮನಕ್ಕೆ ಬರುತ್ತದೆ. ಚತುರ್ಮುಖ ಸೌಂದರ್ಯಕ್ಕೆ ಬೇರೆ ಬೇರೆ ಕವಿಗಳಿಂದ ಆರಿಸಿಕೊಂಡ ಒಂದೊಂದು ಉದಾಹರಣೆಯನ್ನು ಇಲ್ಲಿ ಗಮನಿಸಬಹುದು.

ಐಂದ್ರಿಯಿಕ ಸೌಂದರ್ಯಕ್ಕೆ :

ಪೇರಲ ಮರದಡಿ ಹಣ್ಣನು ತಿನ್ನುತ
ಮಲಗಿರೆ ಹಸಿರೊಳು ನೀ ಬಂದೆ
ಕರಿ ಕುರುಳಿನ ಸುರಮೋಹವನೆರಚುತ
ಹೊಸ ವೈಯಾರದಿ ನೀ ಬಂದೆ.
ನೋಡಿದೊಡೆನ್ನನು ದೂರದಿ ನಿಂತೆ
ಮೂಡಿತು ಹೃದಯದೊಳೊಲವಿನ ಚಿಂತೆ

– ಕುವೆಂಪು

ಕಲ್ಪನಾ ಸೌಂದರ್ಯಕ್ಕೆ :

ಸ್ವರ ಸ್ವಪ್ನವಿದ್ದ ಪ್ರತಿಬಿಂಬ ಬಿದ್ದ
ಉದ್ಬುದ್ಧ ಶುದ್ಧ ನೀರೆ
ಎಚ್ಚತ್ತು ಎದ್ದ ಆಕಾಶದುದ್ದ
ಧರೆಗಿಳಿಯಲಿದ್ದ ಧೀರೆ
ಸಿರವಾರಿಜಾತ ವರಪಾರಿಜಾತ
ತಾರಾ ಕುಸುಮದಿಂದೆ
ವೃಂದಾರ ವಂಧ್ಯೆ ಮಂದಾರ ಗಂಧೆ
ನೀನೇ ತಾಯಿ - ತಂದೆ
ರಸಪೂರ ಜನ್ಯೆ ನೀನಲ್ಲ ಅನ್ಯೆ
ಸಚ್ಚಿದಾನಂದ ಕನ್ಯೆ

– ಬೇಂದ್ರೆ

ತಾತ್ವಿಕ ಅಥವಾ ಬೌದ್ಧಿಕ ಸೌಂದರ್ಯ :

ಯಾವ ಕಾಲದ ಶಾಸ್ತ್ರವೇನು ಹೇಳಿದರೇನು ?
ಎದೆಯ ದನಿಗೂ ಮಿಗಿಲು ಶಾಸ್ತ್ರವಿಹುದೇನು ?
ಎಂದೋ ಮನು ಬರೆದಿಟ್ಟುದಿಂದೆಮಗೆ ಕಟ್ಟೇನು ?
ನಿನ್ನೆದೆಯ ದನಿಯೆ ಋಷಿ ! ಮನು ನಿನಗೆ ನೀನು.

— ಕುವೆಂಪು

ಆಧ್ಯಾತ್ಮಿಕ ಸೌಂದರ್ಯ :

ನಿಶ್ಶಬ್ದ ನಿಶ್ಶಬ್ದ ಶಬ್ದದಾಚೆಯ ಶಬ್ದ
ನಿಶ್ಶಬ್ದವಿದ್ದರೂ ಮೌನವಲ್ಲ
ನಿಸ್ಸೀಮ ನಿಸ್ಸೀಮ ಸೀಮದಲೆ ನಿಸ್ಸೀಮ
ನಿಸ್ಸೀಮವೆಂದರೂ ಶೂನ್ಯವಲ್ಲ.

— ಮಧುರಚೆನ್ನ

ನವೋದಯ ಕಾವ್ಯ ಸೌಂದರ್ಯನಿಷ್ಠವಾಗಿ ರೂಪಗೊಂಡಿದ್ದು ಮತ್ತು ಬೆಳೆದದ್ದು. ಅದರ ಲಯ, ಪದ ಪ್ರಯೋಗಗಳು ಸೌಂದರ್ಯದ ಪೋಷಕ ಸಾಮಗ್ರಿಗಳು. ವಸ್ತುವಿನ್ಯಾಸದಲ್ಲಿ ಭಾವದೂರ್ಮಿಗಳು ತೆರೆ-ತೆರೆಯಾಗಿ ಪಸರಿಸುತ್ತ, ಸಹೃದಯನ ಅಂತಃಕರಣವನ್ನು ಸ್ಪರ್ಶಿಸುವುದು ಒಂದು ಸಹಜ ಕ್ರಿಯೆಯಾಗಿದೆ. ವೈಚಾರಿಕತೆ, ವಿಡಂಬನೆ, ಸಮಾಜ ವಿಮರ್ಶೆ, ರಾಷ್ಟ್ರಭಕ್ತಿ– ಏನಿದ್ದರೂ ಭಾವಗೀತಾತ್ಮಕವಾಗಿಯೇ ಅಭಿವ್ಯಕ್ತಿಗೊಳ್ಳಬೇಕು. 'ಮಂಕುತಿಮ್ಮನ ಕಗ್ಗ'ದಂಥ ಕಾವ್ಯವಾಗಲಿ, ದಿನಕರ ದೇಸಾಯಿಯವರ ಚುಟುಕುಗಳಾಗಲಿ, ಹನ್ನೆರಡನೆಯ ಶತಮಾನದ 'ವಚನ'ರೂಪವನ್ನು ಬಳಿಸಿಕೊಂಡ ಎಸ್. ವಿ. ರಂಗಣ್ಣ, ಎಸ್. ವಿ. ಪರಮೇಶ್ವರಭಟ್ಟ ಮತ್ತು ಸಿದ್ಧಯ್ಯ ಪುರಾಣಿಕರ ಚಿಂತನೆಗಳಾಗಲಿ ನವೋದಯದ ಮೂಲಭೂತ ಧೋರಣೆಯನ್ನು ಹಿಡಿದುಕೊಂಡೇ ಸಾಗಿವೆ.

ನವೋದಯ ಕಾವ್ಯ ಭಾವಗೀತ ಪ್ರಕಾರವಾಗಿದ್ದರೂ ವಸ್ತು ವೈವಿಧ್ಯಕ್ಕೆ ಅಲ್ಲಿ ಕೊರತೆಯಿಲ್ಲ. ಪ್ರಕೃತಿ ಗೀತೆಗಳು, ಪ್ರೇಮಗೀತೆಗಳು, ಕೌಟುಂಬಿಕ ಗೀತೆಗಳು, ಸಾಮಾಜಿಕ ಗೀತೆಗಳು, ನಾಡಗೀತೆಗಳು, ದೇಶಭಕ್ತಿಗೀತೆಗಳು, ಗಣ್ಯವ್ಯಕ್ತಿಗೀತೆಗಳು, ತತ್ವಚಿಂತನಾ ಗೀತೆಗಳು, ಅಧ್ಯಾತ್ಮಗೀತಗಳು ಹೀಗೆ ವರ್ಗೀಕರಿಸಿ ಅಧ್ಯಯನ ಮಾಡಲು ಅವಕಾಶವಿದೆ. ಅಲ್ಲಿ ವೀರಗೀತೆಗಳೂ, ಶೋಕಗೀತೆಗಳೂ, ಹಾಸ್ಯಗೀತೆಗಳೂ ಉಂಟು. ಕೀರ್ತಿನಾಥ ಕುರ್ತಕೋಟಿಯವರು ಹೇಳಿದಂತೆ "ಜೀವನದಲ್ಲಿಯ ಒಂದು ರಸನಿಮಿಷ, ಪ್ರಕೃತಿಯ ಒಂದು ರಮ್ಯವಿವರ, ದುರ್ದಮ್ಯವಾಗಿ ಉಕ್ಕಿಬರುವ ಒಂದು ಭಾವನೆ, ಅಪೂರ್ವವಾಗಿ ಮೂಡಿಬಂದ ಒಂದು ವಿಚಾರ, ಮನುಷ್ಯ ಜೀವನದ ಒಂದು ಸಣ್ಣ ಘಟನೆ ಇವೇ ಕೇಂದ್ರಬಿಂದುವಾಗಿ ತನಗನುಕೂಲವಾದ ಛಂದಸ್ಸು, ಭಾಷೆ, ಅಲಂಕಾರಗಳಲ್ಲಿ ಉಚಿತವಾಗಿ ಅಭಿವ್ಯಕ್ತಿಯನ್ನು ಪಡೆದು ಗೀತವಾಗಿ ಬರಬಹುದೆಂಬ

ಮಾತು ಹೊಸದಾಗಿತ್ತು." ಈ ಹೊಸತನದಲ್ಲಿಯೇ ಹಲವಾರು ಕವಿಗಳು ನೂತನವಾದ ಕಾವ್ಯಸೃಷ್ಟಿಯನ್ನು ಮಾಡಿದರು. ಅದು ವಿಪುಲವಾಗಿ, ವೈವಿಧ್ಯಪೂರ್ಣವಾಗಿ ಬೆಳೆಯಿತು. ಸುದೈವದಿಂದ ಹಲವಾರು ಪ್ರತಿಭಾವಂತ ಕವಿಗಳು ಮೂಡಿಬಂದದ್ದರಿಂದ ನವೋದಯ ಕಾವ್ಯ ಹೊಸಗನ್ನಡ ಸಾಹಿತ್ಯದ ಬಹುದೊಡ್ಡ ಕೊಡುಗೆಯಾಯಿತು. ಆ ಮುಂದೆ ಹೊಸ ತಿರುವುಗಳೇನೋ ಬಂದವು. ಆದರೆ ನವೋದಯವನ್ನು ಮೀರಿಸುವಂಥ ಸಾಧನೆ ಮಾತ್ರ ನಡೆಯಲಿಲ್ಲ. ನವ್ಯಯುಗದ ಅಡಿಗರ ಸಾಧನೆ ಮಾತ್ರ ಎತ್ತಿಹೇಳುವಂತಹದಾಗಿದೆ.

ಐತಿಹಾಸಿಕವಾಗಿ ಗೋಕಾಕರಿಂದ ಪ್ರಾಯೋಗಿಕವಾಗಿ ಅಡಿಗರಿಂದ ಹುಟ್ಟುಪಡೆದ ನವ್ಯಕಾವ್ಯ ೧೯೫೦ರ ದಶಕದ ಹೊಸಪೀಳಿಗೆಯನ್ನು ಆಕರ್ಷಿಸಿತು. ನವೋದಯಕ್ಕೆ ಸ್ಪರ್ಧೆಯೊಡ್ಡುವಂತೆ ಅವರು ಕಾವ್ಯಸೃಷ್ಟಿಗೆ ತೊಡಗಿದ್ದುದು ನಿಜ. ನವೋದಯದಿಂದ ನವ್ಯಕ್ಕೆ ಹೊರಳಿದ ಕೆ. ಎಸ್. ನರಸಿಂಹಸ್ವಾಮಿ, ಜಿ. ಎಸ್. ಶಿವರುದ್ರಪ್ಪ, ಚೆನ್ನವೀರ ಕಣವಿ ಮೊದಲಾದವರು ಸಂಪೂರ್ಣ ನವ್ಯರಾಗಿ ಉಳಿಯಲಿಲ್ಲ. ನವ್ಯ ಕವಿತೆಗಳನ್ನು ಬರೆಯುತ್ತಲೇ ಅವರು ಭಾವಗೀತಗಳನ್ನೂ ಸೃಷ್ಟಿಸಿದರು. ಅಂಥವರನ್ನು ಸಮನ್ವಯ ಕವಿಗಳೆಂದು ಕರೆದರು. ಡಿ. ಎಸ್. ಕರ್ಕಿ, ಸಿದ್ಧಯ್ಯ ಪುರಾಣಿಕರಂಥ ಕೆಲವು ಕವಿಗಳು ತಮ್ಮ ಎಂದಿನ ರೀತಿಯಲ್ಲಿಯೇ ಮುಂದುವರಿದರು.

ಐವತ್ತರ ದಶಕದಲ್ಲಿ ಅಡಿಗರ 'ಭೂಮಿಗೀತ' ಮೂಡಿಬಂದು ನವ್ಯದ ಔನ್ನತ್ಯವನ್ನು ತೋರಿಸಿಕೊಟ್ಟಂತೆ. ಅದೇ ದಶಕದಲ್ಲಿ ಬೇಂದ್ರೆಯವರ ಪರಿಪಕ್ವವಾದ ಭಾವಗೀತಗಳ ಗುಚ್ಛ 'ಅರಳು-ಮರಳು' ಪ್ರಕಟವಾಗಿ ನವೋದಯದ ಧ್ವಜವನ್ನು ಎತ್ತಿಹಿಡಿಯಿತು. ಕುವೆಂಪು ಅವರ 'ರಾಮಾಯಣ ದರ್ಶನ'ವು ಐವತ್ತರ ಅಂಚಿನ ಕಾಣಿಕೆಯೇ ಆಗಿದೆ. ನವ್ಯದ ಏರಿಕೆಯ ಕಾಲದಲ್ಲಿಯೂ ನವೋದಯ ಕಾವ್ಯ ನಿಂತುಹೋಗಲಿಲ್ಲವೆಂಬುದು ಮಹತ್ವದ ಸಂಗತಿಯಾಗಿದೆ.

ದಲಿತ-ಬಂಡಾಯದ ಹೋರಾಟಮಯ ಚಳುವಳಿಯಲ್ಲಿಯೂ ನವೋದಯ ಕಾವ್ಯ ಸಂಪೂರ್ಣ ಮರೆಯಾಗಲಿಲ್ಲ. ಕಾವ್ಯದ ಹೂರಣ ಬದಲಾದರೂ ಭಾವಗೀತದ ರೂಪ ಮತ್ತೆ ಕಾಣಿಸಿಕೊಂಡಿದ್ದು ಒಂದು ವಿಶೇಷ. ಕೆ. ಎಸ್. ಎನ್., ಜಿ. ಎಸ್. ಎಸ್., ಚೆನ್ನವೀರ ಕಣವಿ ಯಥಾಪ್ರಕಾರ ಭಾವಗೀತಗಳನ್ನು ಬರೆದಂತೆ, ನವ್ಯರೆನಿಸಿಕೊಂಡ ಕೆ. ಎಸ್. ನಿಸಾರ್ ಅಹಮ್ಮದ, ಚಂದ್ರಶೇಖರ ಕಂಬಾರ, ಎನ್. ಎಸ್. ಲಕ್ಷ್ಮೀನಾರಾಯಣ ಭಟ್. ಬಿ. ಆರ್. ಲಕ್ಷ್ಮಣರಾವ. ಎಚ್. ಎಸ್. ವೆಂಕಟೇಶಮೂರ್ತಿ ಮೊದಲಾದವರು ಸೊಗಸಾದ ಭಾವಗೀತೆಗಳನ್ನು ಬರೆದದ್ದು, ಮತ್ತು ಅಂಥ ರಚನೆಗಳನ್ನು ಮುಂದವರಿಸಿದ್ದನ್ನು ಮರೆಯುವಂತಿಲ್ಲ. ಗೀತರೂಪಕ, ಗೀತಚಿತ್ರ, ಗೀತಸಂಗೀತ ಇವೆಲ್ಲ ನವೋದಯ ಯುಗವನ್ನು ನೆನಪಿಸಿಕೊಡುತ್ತವೆ. ಇತ್ತೀಚಿನ ದಿನಗಳಲ್ಲಿ 'ಧ್ವನಿಸುರುಳಿ'ಯ ಪ್ರಸಾರ ಮಾಧ್ಯಮ ಭಾವಗೀತಕಾರರನ್ನು

ಪ್ರೋಷಿಸುತ್ತಲಿದೆ. ಹೀಗಾಗಿ ನವೋದಯ ಕಾವ್ಯದ ಪರಂಪರೆ ಮತ್ತೆ ಮತ್ತೆ ನವೀಕರಣಗೊಳ್ಳುವುದು ಸೋಜಿಗವನ್ನುಂಟುಮಾಡುತ್ತದೆ. ಅಥವಾ ನವೋದಯ ಗುಣವು ಮಾನವ ಹೃದಯಕ್ಕೆ ತೀರ ಹತ್ತಿರವಾಗಿರುವುದರಿಂದ, ಮಾನವ ಮನಸ್ಸಿಗೆ ಮುದವನ್ನು ನೀಡುವುದರಿಂದ ಅದು ಪುನರ್ಜನ್ಮ ಪಡೆಯುವ ಸಾಮರ್ಥ್ಯವನ್ನು ಹೊಂದಿದೆ ಎಂದು ಹೇಳಬಹುದು.

ನವೋದಯ ಸಾಹಿತ್ಯದ ಇನ್ನೊಂದು ಮಹತ್ವದ ಬೆಳೆ ಗದ್ಯಸಾಹಿತ್ಯ. ಹಿಂದೆ ಯಾವ ಶತಮಾನದಲ್ಲಿಯೂ ಇಷ್ಟೊಂದು ವೈವಿಧ್ಯಪೂರ್ಣವಾದ ಗದ್ಯ ಸೃಷ್ಟಿಗೊಂಡಿರಲಿಲ್ಲ. ಸೃಜನಶೀಲ ಮತ್ತು ಸೃಜನೇತರ– ಈ ಎರಡು ವಿಧದಲ್ಲಿ ಗದ್ಯ ಸಮೃದ್ಧವಾಗಿಯೇ ಬೆಳೆದಿದೆ. ಕತೆ, ಕಾದಂಬರಿ, ನಾಟಕ, ಲಲಿತಪ್ರಬಂಧ, ಜೀವನ ಚರಿತ್ರೆ ಇತ್ಯಾದಿಗಳಲ್ಲಿ ಸೃಜನಶೀಲತೆಯಿದ್ದರೆ, ಸಾಹಿತ್ಯವಿಮರ್ಶೆ, ವೈಚಾರಿಕ ಚಿಂತನೆ, ವೈಜ್ಞಾನಿಕ ಆಲೋಚನೆಗಳಲ್ಲಿ ಸೃಜನೇತರ ಕ್ರಿಯಾಶೀಲತೆಯಿದೆ. ಕಾವ್ಯಮೀಮಾಂಸೆ, ಅಲಂಕಾರಶಾಸ್ತ್ರ, ಛಂದಸ್ಸು, ವ್ಯಾಕರಣ– ಮುಂತಾದ ಶಾಸ್ತ್ರಸಾಹಿತ್ಯವೂ ಗದ್ಯಪ್ರಕಾರದಲ್ಲಿ ವಿದ್ವಾಂಸರ ಸಾಧನೆಯ ಪ್ರತೀಕವಾಗಿ ಸಾಕಷ್ಟು ಪ್ರಮಾಣದಲ್ಲಿಯೇ ಸೃಷ್ಟಿಗೊಳ್ಳುತ್ತ ನಡೆದಿದೆ.

ಸೃಜನಶೀಲ ಗದ್ಯದಲ್ಲಿ ಕಥಾಸೃಷ್ಟಿಯು ಬಹುಜನ ಲೇಖಕರ ಗಮನವನ್ನು ಸೆಳೆದುಕೊಂಡಿದ್ದು, ಓದುಗರ ವರ್ಗವನ್ನೂ ವಿಸ್ತರಿಸಿದೆ. ಭಾವಗೀತೆಗಳಂತೆ ಸಣ್ಣಕತೆಗಳು ನವೋದಯದ ಆಕರ್ಷಕವಾದ ಹಾಗೂ ರಸಾನುಭವದ ಕಲಾತ್ಮಕ ಸೃಷ್ಟಿಯಾಗಿದ್ದು, ಮಾಸ್ತಿ, ಆನಂದ, ಆನಂದಕಂದರಂಥ ಕತೆಗಾರರನ್ನು ಪಡೆದು ತನ್ನದೇ ಆದ ಸೊಗಸಿನಿಂದ ತುಂಬ ಜನಪ್ರಿಯತೆಯನ್ನು ಪಡೆದದ್ದು ಮಹತ್ವದ ಮಾತಾಗಿದೆ. ಭಾರತೀಯ ಸಾಹಿತ್ಯದಲ್ಲಿ ಕಥಾಸೃಷ್ಟಿ ಬೇರೆ ಬೇರೆ ರೂಪಗಳಲ್ಲಿ ಕಾಣಿಸಿಕೊಂಡಿದ್ದರೂ ಸಣ್ಣಕತೆಯ ಸ್ವರೂಪ ಮಾತ್ರ ಪಶ್ಚಿಮದಿಂದಲೇ ಬಂದದ್ದು. ಪಂಜೆ, ಎಂ. ಎನ್. ಕಾಮತ, ಕೆರೂರ ವಾಸುದೇವಾಚಾರ್ಯರು ಈ ಪ್ರಕಾರದಲ್ಲಿ ಹೊಸ ಹೆಜ್ಜೆಗಳನ್ನು ಇಟ್ಟರು.

ಸಣ್ಣಕತೆಯ ಸ್ವರೂಪಕ್ಕೆ ಒಂದು ಘನತೆಯನ್ನು ತಂದುಕೊಟ್ಟವರು ಶ್ರೀನಿವಾಸರು (ಮಾಸ್ತಿ ವೆಂಕಟೇಶ ಅಯ್ಯಂಗಾರ ಅವರು). ಅವರ ಪ್ರಥಮ ಕಥಾಸಂಗ್ರಹ 'ಕೆಲವು ಸಣ್ಣಕತೆಗಳು' ಕನ್ನಡದ ಕಥಾಸೃಷ್ಟಿಗೆ ಹೊಸ ಆಯಾಮವೊಂದನ್ನು ತಂದುಕೊಟ್ಟಿತೆಂದು ಹೇಳಬಹುದು. ಅಂದಿನ ವಾಸ್ತವ ಬದುಕು ಕಥೆಯ ವಸ್ತುವಾಗಿ ಸರಸದಾಂಪತ್ಯದ ವಿವಿಧ ಮುಖಗಳನ್ನು ಅವರು ಚಿತ್ರಿಸಿದ್ದು ವಿಶೇಷವಾಗಿದೆ. 'ರಂಗಪ್ಪ ಮದುವೆ', 'ರಂಗಪ್ಪನ ದೀಪಾವಳಿ', 'ಮೇಷ್ಟರ ಹೆಂಡತಿ', 'ವೆಂಕಟಶಾಮಿಯ ಪ್ರಣಯ' ಇತ್ಯಾದಿ ಕತೆಗಳು ನಮ್ಮ ಅಂದಿನ ಸಾಮಾಜಿಕ, ಕೌಟುಂಬಿಕ ಪರಿಸರದಲ್ಲಿ ಮೂಡಿಬಂದಿದ್ದು ಶ್ರೀನಿವಾಸರ ಸಾಂಸ್ಕೃತಿಕ ಕಾಳಜಿಯಿಂದ ಹೊಸರುಚಿಯನ್ನು ನೀಡುತ್ತವೆ. ಕತೆಯ ಹುಟ್ಟು, ಬೆಳವಣಿಗೆ, ಮುಕ್ತಾಯ ಈ ಮೂರೂ ಘಟ್ಟಗಳಲ್ಲಿ ಅದು ನೀರಸವಾಗುವುದೇ ಇಲ್ಲ. ಸಣ್ಣಕತೆಗಳ ಜನಕ

ಎನಿಸಿದ ಮಾಸ್ತಿಯವರು ಸುಮಾರು ಆರು ದಶಕಗಳ ಕಾಲ ಕತೆಗಳನ್ನು ಬರೆದು ಮುಂದಿನವರಿಗೆ ಒಂದು ರಾಜಮಾರ್ಗವನ್ನು ನಿರ್ಮಿಸಿಕೊಟ್ಟರು. ಅವರ ಕತೆಗಳಲ್ಲಿ ಭಾರತೀಯ ಪರಂಪರೆ, ಭಾರತೀಯ ಆದರ್ಶಗಳಿರುವಂತೆ ಅಂತಃಕರಣತುಂಬಿದ ಗಂಭೀರ ಚಿಂತನೆಗಳೂ ಇದ್ದವು, ವಿನೋದ – ವಿಡಂಬನೆಗಳೂ ಇದ್ದವು.

ನವೋದಯ ಕಾಲದ ಕತೆಗಳು ಸಾಮಾನ್ಯವಾಗಿ ಮಧ್ಯಮವರ್ಗದ ಜೀವನವನ್ನು ಚಿತ್ರಿಸುತ್ತವೆ. ಸಾಮಾಜಿಕ ಏರು-ಪೇರುಗಳನ್ನು ನವೋದಯ ಕತೆಗಾರರು ಗುರುತಿಸಿದ್ದರೂ ಕೌಟುಂಬಿಕ ಪರಿಸರವೇ ಅವರ ಕತೆಗಳಲ್ಲಿ ವಿಜೃಂಭಿಸುತ್ತದೆ. ಹೆಣ್ಣು-ಗಂಡಿನ ಪ್ರೇಮ ಅಲ್ಲಿ ಎದ್ದುಕಾಣುತ್ತದೆ. ತಾಯಿ-ತಂದೆ, ಅಕ್ಕ-ತಂಗಿ, ಬಂಧು-ಬಳಗದ ಸ್ವಭಾವ ಚಿತ್ರಣವೂ ಅಲ್ಲಿ ಬೇಕಾದಷ್ಟಿದೆ.

ಇದೇ ಕಾಲದಲ್ಲಿ ಐತಿಹಾಸಿಕ ಕತೆಗಳೂ ಮೂಡಿಬಂದಿವೆ. ಶ್ರೀನಿವಾಸರೇ ಇಂಥ ವಸ್ತುವಿಗೆ ವಿಶೇಷ ಗಮನವನ್ನು ಕೊಟ್ಟವರು. 'ಬಾದಷಹನ ದಂಡನೆ', 'ನಿಜಗಲ್ಲಿನ ರಾಣಿ', 'ಪ್ರಿಯದರ್ಶಿ ಅಶೋಕ' ಇಂಥ ಕತೆಗಳನ್ನು ಇಲ್ಲಿ ಹೆಸರಿಸಬಹುದು.

ಶ್ರೀನಿವಾಸರ ಪರಂಪರೆಯಲ್ಲಿ ಬೆಳೆದವರು ಆನಂದರು (ಎಂ. ಶಿವರಾಮ). ಇವರ ಕಥಾರಚನೆ ಹೆಚ್ಚು ಕಲಾತ್ಮಕವಾಗಿದ್ದು, ನೋವು, ನಲಿವುಗಳನ್ನು ಅವರು ಸ್ವಾರಸ್ಯಕರವಾಗಿ ಚಿತ್ರಿಸುತ್ತಾರೆ. 'ನಾನು ಕೊಂದ ಹುಡುಗಿ' ಆನಂದರ ಪ್ರಸಿದ್ಧ ಕತೆ. ಈ ವಸ್ತು ಪ್ರಗತಿಶೀಲರ ಕೈಯಲ್ಲಿ ಸಿಕ್ಕಿದ್ದರೆ ಅದರ ಸಂವೇದನೆಯೇ ಬೇರೆಯಾಗುತ್ತಿತ್ತು. ಕಂದಾಚಾರದಲ್ಲಿ ಮಹಿಳೆಯ ಶೋಷಣೆ ಹೇಗಾಗುತ್ತಿದೆ ಎಂಬುದನ್ನು ಅವರು ಗುರುತಿಸುತ್ತಿದ್ದರು. ಆದರೆ ಆನಂದರ ದೃಷ್ಟಿಯಲ್ಲಿ ಅದು ಅನುಕಂಪೆಯ ಚಿತ್ರವಾಗುತ್ತದೆ. ಅವರ 'ಮಾಟಗಾತಿ', 'ಬೇವು-ಬೆಲ್ಲ' ಕೂಡ ಸೊಗಸಾದ ಕತೆಗಳು. 'ಹೆಂಡತಿ-ಕಾಗದ' ಒಂದು ರಸವತ್ತಾದ ಕತೆ. ಬೇರೆ ಬೇರೆ ಊರುಗಳಲ್ಲಿರುವ ನೂತನ ದಂಪತಿಗಳ ವಿರಹದಲ್ಲಿ ಸಹಾಯಕ್ಕೆ ಬರುವ ಪತ್ರ ವ್ಯವಹಾರ-ಸರಸವಾಗಿ ಕೊನೆಗೊಳ್ಳುವ ರೀತಿ ಸೋಜಿಗದ್ದಾಗಿದೆ. ಪತಿಯ ಮನಸ್ಸಿನ ತುಮುಲ, ಸತಿಯ ವೈನೋದಿಕತೆಯ ಜಾಣತನ ಕೂಡಿಕೊಂಡಿರುವ ಕತೆ ಖುಷಿಕೊಡುತ್ತದೆ. ಆನಂದರ ಕುಸುರಿ ಕೆಲಸ ಇಂಥಲ್ಲಿ ಚಿತ್ತಾಕರ್ಷಕವೆನಿಸುತ್ತದೆ. "ಜೀವನದ ಒಂದು ಸರಸವಾದ ಅಂಶವನ್ನು ಆಯ್ದುಕೊಂಡು ಅದನ್ನು ಪ್ರತಿಭೆಯಿಂದ ಬೆಳೆಸಿ ಒಂದು ಚಿತ್ರಕೃತಿಯಲ್ಲಿ ಎರಕಹೊಯ್ಯುವದು ಆನಂದರ ಕಲೆಯ ರೀತಿಯಾಗಿದೆ" ಎಂದು ಪ್ರೊ. ಕೀರ್ತಿನಾಥ ಕುರ್ತಕೋಟಿಯವರು ನುಡಿದದ್ದು ಅಕ್ಷರಶಃ ಸತ್ಯವೆಂದು ಹೇಳಬಹುದು. ಸೊಗಸಾಗಿ ಕತೆಗಳನ್ನು ಬರೆಯಬಲ್ಲ ಆನಂದರು ಶ್ರೀನಿವಾಸರಂತೆ ವಿಪುಲವಾಗಿ ಕತೆಗಳನ್ನು ಸೃಷ್ಟಿಸದಿರುವುದೇ ಒಂದು ಕೊರತೆ.

ಶ್ರೀನಿವಾಸರ ದಾರಿಯಲ್ಲಿಯೇ ನಡೆದ ಕೆ. ಗೋಪಾಲಕೃಷ್ಣರಾಯರು ಲಲಿತ ಪ್ರಬಂಧಗಳ ಕಡೆಗೆ ವಾಲಿದರು. ಶ್ರೀಸ್ವಾಮಿ ಮಾತ್ರ 'ಪುಷ್ಪಮಾಲೆ', 'ಮೋಡಗಳು' ಕಥಾಸಂಗ್ರಹಗಳನ್ನು ತಂದರು.

ಧಾರವಾಡ ಕಡೆಯಲ್ಲಿ ನವೋದಯ ಕಾಲದಲ್ಲಿ ಹೆಚ್ಚು ಕತೆಗಳನ್ನು ಬರೆದವರು ಆನಂದಕಂದರು. ಗ್ರಾಮೀಣ ಬದುಕು, ಸಂಸ್ಕೃತಿ, ನಂಬಿಕೆ– ಇತ್ಯಾದಿಗಳ ಅಧ್ಯಯನವುಳ್ಳ ಆನಂದಕಂದರು ತುಂಬ ಸೊಗಸಾಗಿಯೇ ಕತೆಗಳನ್ನು ಬರೆದರು. 'ಜೋಗತಿ ಕಲ್ಲು', 'ಸೀಮೆಯ ಕಲ್ಲು' ಇತ್ಯಾದಿ ಕತೆಗಳಲ್ಲಿ ಐತಿಹ್ಯ ಹಾಗೂ ಜನಪದರ ನಂಬಿಕೆಗಳು ಬೆಸೆದುಕೊಂಡಿವೆ. ಜನಪದ ಸಾಹಿತ್ಯದ ಮತ್ತು ಜನಪದರ ಭಾವನಾತ್ಮಕ ಶ್ರದ್ಧೆಗಳ ಗಾಢ ಪರಿಚಯವಿಲ್ಲದೆ ಇಂಥ ಕಥೆಗಳನ್ನು ಬರೆಯಲಿಕ್ಕಾಗದು. 'ಜಾಡರ ಜಾನಪ್ಪ'ನ ಕತೆಯಲ್ಲಿ ಆತನ ವೈಯಕ್ತಿಕ ಅಧಃಪತನದ ಜೊತೆಗೆ, ಕೈಗಾರಿಕೆಗಳು ಬಿದ್ದುಹೋಗಿದ್ದರ ಬದಲಾವಣೆಯೂ ಇದೆ. ಗ್ರಾಮೀಣ ಕೈಗಾರಿಕೆಗಳು ಯಾಂತ್ರೀಕರಣದಲ್ಲಿ ಮೂಲೆಗುಂಪಾಗುತ್ತಿರುವುದು ಭಾರತೀಯ ಪರಿಸರದಲ್ಲಿ ಒಂದು ಅನಿಷ್ಟವೆಂದೇ ಹೇಳಬೇಕು. 'ಕಾಣದ ಕೈ'ಯಲ್ಲಿ ಚಿನ್ನದಂಥ ಹೆಂಡತಿಯನ್ನು ಸಂಶಯದಿಂದ ನೋಡಿದ ಪತಿಯ ಭಾವನೆಯಿಂದಾದ ಅನಾಹುತ ಹೃದ್ಯವಾಗಿ ಚಿತ್ರಿತವಾಗಿದೆ. ಸಂಶಯವು ಹಲವು ಸಂದರ್ಭಗಳಲ್ಲಿ ಹಿಗ್ಗುತ್ತ ಅಪಾಯಕ್ಕೆ ಸಿಲುಕಿಸುವ ಚಿತ್ರ ಆನಂದಕಂದರ ಕಲ್ಪಕಶಕ್ತಿಗೆ ಕುರುಹಾಗಿದೆ. ಪ್ರೀತಿ-ದ್ವೇಷ, ಎರಡಕ್ಕೂ ಕಾರಣವಾಗುವ ಸ್ನೇಹಪರರು ಇಲ್ಲವೆ ಅಸೂಯಾಪರರು ಹೇಗಿರುತ್ತಾರೆಂಬುದನ್ನು ಕತೆ ತೋರಿಸಿಕೊಡುತ್ತದೆ. ಆನಂದಕಂದರು ಪಾತ್ರಗಳ ಸ್ವಭಾವಚಿತ್ರಣದಲ್ಲಿ ತುಂಬಾ ಯಶಸ್ಸನ್ನು ಸಾಧಿಸುತ್ತಾರೆ. ಉತ್ತರ ಕರ್ನಾಟಕದ ಭಾಷೆಯನ್ನು ಬಳಸಿಕೊಳ್ಳುವುದರಲ್ಲಿ ಅವರು ಸಿದ್ಧಹಸ್ತರು.

ಆ ಕಾಲದ ಈ ಪ್ರದೇಶದ ಇನ್ನೊಬ್ಬ ಕತೆಗಾರರೆಂದರೆ ಕೃಷ್ಣಕುಮಾರ ಕಲ್ಲೂರರವರು. ಅವರ ಎರಡು ಕಥಾಸಂಗ್ರಹಗಳು (೧. ಬಿಸಿಲುಗುದುರೆ, ೨. ಜೀವನ) ಅವರ ಕಲ್ಪಕಶಕ್ತಿಗೆ ಕುರುಹುಗಳಾಗಿ ನಿಂತಿವೆ. ಇಲ್ಲಿಯೂ ಉತ್ತರ ಕರ್ನಾಟಕದ ಮಧ್ಯಮ ವರ್ಗದ ಜೀವನ ಪ್ರಮುಖವಾಗಿ ಕಂಡುಬರುತ್ತದೆ. ಕೃಷ್ಣಕುಮಾರರು ವರ್ಣನಾಪ್ರಿಯರು. ಅದರಿಂದಾಗಿ ಕಾವ್ಯಾತ್ಮಕ ನಿರೂಪಣೆ ಅವರ ಕತೆಗಳಲ್ಲಿ ಕಂಡುಬರುತ್ತದೆ.

ನವೋದಯ ಕಾಲದಲ್ಲಿ ಬೇಂದ್ರೆ, ಮುಗಳಿಯವರೂ ಕತೆಗಳನ್ನು ಬರೆದಿದ್ದಾರೆ. ಅವರ ಆ ಬರವಣಿಗೆ ಅವರ ಸಾಹಿತ್ಯದ ವೈವಿಧ್ಯವನ್ನು ಸೂಚಿಸುತ್ತದೆ, ಅಷ್ಟೆ. ಕವಿಯಾಗಿ ಕತೆಗಳನ್ನು ಬರೆದ ಕುವೆಂಪು ಅವರು ಈ ಕ್ಷೇತ್ರದಲ್ಲಿಯೂ ಮಲೆನಾಡಿನ ಜೀವನವನ್ನು ನಮ್ಮ ಕಣ್ಣುಮುಂದೆ ತಂದಿಡುತ್ತಾರೆ. ಗೊರೂರು ಅವರು ಹಳ್ಳಿಯ ಚಿತ್ರಗಳನ್ನು ಕೊಡುತ್ತಲೇ ಕತೆಗಳನ್ನು ಹೇಳುತ್ತಾರೆ. ಲಲಿತ ಪ್ರಬಂಧದ ಧಾಟಿಯಲ್ಲಿರುವ ಅವರ ಕತೆಗಳಲ್ಲಿ ಬದುಕಿನ ಅನುಭವಗಳಿವೆ. ವಿನೋದಪ್ರಿಯರಾದ ಗೊರೂರರವರು ಸರಸವಾಗಿಯೇ ಬರೆಯುತ್ತಾರೆ.

ದೇವುಡು ಮೊದಲು ಕತೆಗಳನ್ನು ಬರೆದು ಕಾದಂಬರಿಗಳ ಕಡೆಗೆ ಹೊರಳಿದರು. ಮಹತ್ವದ ಕವಿಯಾದ ಪು.ತಿ.ನ. ಕೂಡ ಕತೆಗಳನ್ನು ಬರೆದರು. ಅವರ

'ಧ್ವಜರಕ್ಷಣೆ'ಯಲ್ಲಿ ಸ್ವಾತಂತ್ರ್ಯ ಪ್ರಜ್ಞೆ ಮೂಡಿಬಂದಿದೆ. ಕೊಡಗಿನ ಗೌರಮ್ಮ, ಶ್ಯಾಮಲಾದೇವಿ, ಶಾಂತಾದೇವಿ ಮಾಳವಾಡ ಮೊದಲಾದ ಮಹಿಳೆಯರು ಕಥಾ ರಚನೆಗೆ ತೊಡಗಿದ್ದು ನವೋದಯ ಕಾಲದಲ್ಲಿಯೇ. ಕೌಟುಂಬಿಕ ಜೀವನದ ಹಿನ್ನೆಲೆಯುಳ್ಳ ಇವರ ಕತೆಗಳು ಮಹಿಳೆಯರ ಸುಖ-ದುಃಖಗಳನ್ನು, ಸರಸ-ವಿರಸಗಳನ್ನು ಹೃದ್ಯವಾಗಿ ನಿರೂಪಿಸುತ್ತವೆ. ಬಹಳ ಕಾಲದ ಮೇಲೆ ಮಹಿಳೆಯರು ತಮ್ಮದೇ ಆದ ರೀತಿಯಲ್ಲಿ ಬರವಣಿಗೆಗೆ ತೊಡಗಿದ್ದು ಮಹತ್ವದ ಸಂಗತಿಯಾಗಿದೆ.

ಹಿರೇಮಲ್ಲೂರ ಈಶ್ವರನ್, ದ. ಬಾ. ಕುಲಕರ್ಣಿ, ಮಿರ್ಜಿ ಅಣ್ಣಾರಾಯರು, ಸಿ. ಕೆ. ನಾಗರಾಜರಾವ್, ಎಲ್. ಎಸ್. ಶೇಷಗಿರಿರಾವ್, ಚದುರಂಗ ಮುಂತಾದವರು ನವೋದಯದ ಬೆಳವಣಿಗೆಯ ಕಾಲದಲ್ಲಿಯೇ ಕಥಾರಚನೆಗೆ ತೊಡಗಿದರು. ಹಿರೇಮಲ್ಲೂರ ಅವರು ಮಾನವಿಕ ವಿಜ್ಞಾನದ ಕಡೆಗೆ, ಶೇಷಗಿರಿರಾಯರು ವಿಮರ್ಶೆಯ ಕಡೆಗೆ ವಾಲಿದ್ದರಿಂದ ಅವರು ಆ ಮೇಲೆ ಕತೆಗಳನ್ನು ಬರೆಯಲಿಲ್ಲ. ಮಿರ್ಜಿಯವರು ಕಾದಂಬರಿ ಬರೆವಣಿಗೆಗೆ ವಿಶೇಷ ಗಮನಕೊಟ್ಟರು. ಚದುರಂಗರು ಪ್ರಗತಿಶೀಲ ಮಾರ್ಗವನ್ನು ಹಿಡಿದರು. ಅ. ನ. ಕೃಷ್ಣರಾಯರು, ತ. ರಾ. ಸುಬ್ಬರಾಯರು, ಬಸವರಾಜ ಕಟ್ಟೀಮನಿಯವರು ನವೋದಯದ ಮುಂದಿನ ಪೀಳಿಗೆಯಾಗುತ್ತಲೇ ಪ್ರಗತಿಪರದಾರಿ ತುಳಿದದ್ದು ಕಂಡುಬರುತ್ತದೆ. ಪ್ರಗತಿಶೀಲದ ನಂತರ ನವ್ಯರ ಒಂದು ಪಡೆ ಬಂದಿತು. ಕಥಾ ಸಂವಿಧಾನ, ವಸ್ತು, ಧೋರಣೆ, ಭಾಷೆಯನ್ನು ದುಡಿಸಿಕೊಳ್ಳುವ ರೀತಿ ಎಲ್ಲ ಬದಲಾದವು. ಹಾಗಿದ್ದರೂ ನಾ. ಡಿಸೋಜಾ, ದು. ನಿಂ. ಬೆಳಗಲಿಯಂಥವರು ನವೋದಯವನ್ನು ಸಂಪೂರ್ಣವಾಗಿ ಬಿಟ್ಟುಕೊಡಲಿಲ್ಲ. ಸೌಂದರ್ಯದೃಷ್ಟಿ, ಆದರ್ಶಪ್ರಿಯತೆ, ಸಂಸ್ಕೃತಿಯ ಗಾಢಚಿಂತನೆ ಇರುವಲ್ಲೆಲ್ಲ ನವೋದಯ ಇದ್ದೇ ಇರುತ್ತದೆಂದು ಹೇಳುಬಹುದು.

ಭಾವಗೀತೆಗಳ ನಂತರ ಹೆಚ್ಚು ಜನಪ್ರಿಯವಾದ ಪ್ರಕಾರವೆಂದರೆ ಸಣ್ಣಕತೆಯೇ. ಅದು ಕ್ಷಣಾರ್ಧದಲ್ಲಿ ಕಟ್ಟಿದ ತಾಜಮಹಲು ಎಂಬುದು ಹಳೆಯ ಮಾತಾದರೂ ಶಾಶ್ವತ ಸತ್ಯವಾಗಿದೆ. ವಾರಪತ್ರಿಕೆ, ಮಾಸಪತ್ರಿಕೆ ಹಾಗೂ ದಿನಪತ್ರಿಕೆಗಳ ಸಾಪ್ತಾಹಿಕ ಸೌರಭಗಳಲ್ಲಿ ನಾವು ತಪ್ಪದೇ ಕತೆಗಳನ್ನು ಕಾಣುತ್ತೇವೆ. ಅಲ್ಲಿ ನವೋದಯದ ಕತೆಗಳೂ ದೊರೆಯುತ್ತವೆ. ಪ್ರಗತಿಶೀಲ, ನವ್ಯ, ದಲಿತ-ಬಂಡಾಯದ ಕತೆಗಳೂ ಸಿಗುತ್ತವೆ. ಎಲ್ಲ ಬದಲಾವಣೆಗಳಲ್ಲಿಯೂ ಹೆಣ್ಣು-ಗಂಡಿನ ಸಂಬಂಧ, ತಂದೆ-ಮಕ್ಕಳ ಸಂಬಂಧ, ಸ್ನೇಹಸಂಬಂಧ ಮುಂತಾದವುಗಳಲ್ಲಿ ನಮ್ಮ ಸಂಸ್ಕೃತಿಯ ಗಟ್ಟಿ ಎಳೆಗಳು ಇದ್ದೇ ಇವೆ. ಎಂಥ ಬದಲಾವಣೆಯಲ್ಲಿಯೂ ಸ್ನೇಹ-ಪ್ರೀತಿ, ಸಹಾನುಭೂತಿ-ಅನುಕಂಪ, ತ್ಯಾಗ-ಬಲಿದಾನಗಳು ಯಾವ ಕಾಲಕ್ಕೂ ಜೀವಂತವಾಗಿ ಇರುವಂಥವು. ಮಾನವೀಯ ಮೌಲ್ಯಗಳನ್ನು ಉಳಿಸಿಕೊಂಡೇ ಆಕ್ರೋಶ, ಪ್ರತಿಭಟನೆ ತೋರಬೇಕಾಗುತ್ತದೆ. ಯಶವಂತ ಚಿತ್ತಾಲ, ರಾಘವೇಂದ್ರ ಖಾಸನೀಸರಂಥ ಕಥಾಲೇಖಕರು ಯಾವ ಲೇಬಲ್ಲಿಗೂ ಅಂಟಿಕೊಳ್ಳದೆ ಅರ್ಥಪೂರ್ಣವಾದ ಕಥೆಗಳನ್ನು ನಿರ್ಮಿಸಿದ್ದು ಮರೆಯುವಂತಿಲ್ಲ. ಯು. ಆರ್. ಅನಂತಮೂರ್ತಿ, ಶಾಂತಿನಾಥ

ದೇಸಾಯಿ, ಪಿ. ಲಂಕೇಶ್ – ನವ್ಯಕತೆಗಾರರಾಗಿಯೂ ಒಳಗೊಳಗೆ ಸಂಸ್ಕೃತಿಯ ಆರಾಧಕರಾಗಿತ್ತಾರೆ. ಲಂಕೇಶರ ಪ್ರಯೋಗಶೀಲತೆ ಮಾತ್ರ ಬೆರಗುಗೊಳಿಸುತ್ತದೆ.

ಕೀರ್ತಿನಾಥ ಕುರ್ತಕೋಟಿಯವರು "ಮುಂದಿನ ಪೀಳಿಗೆಗಳಲ್ಲಿ ಶ್ರೀನಿವಾಸರ ತೂಕದ ಲೇಖಕರು ಯಾರೂ ಇಲ್ಲವೆಂದೇ ಹೇಳಬೇಕು. ಪ್ರಾಮಾಣಿಕವಾದ ಸಾಹಿತ್ಯ ಪ್ರಜ್ಞೆಯುಳ್ಳ ಲೇಖಕರು ಆತ್ಮಪರೀಕ್ಷೆಗೆ ನಿಲ್ಲಬೇಕಾದ ಕಾಲವೀಗ ಬಂದಿದೆ" ಎಂದು ಒಂದೆಡೆಯಲ್ಲಿ ಹೇಳಿದ್ದರಲ್ಲಿ ಅರ್ಥವಿದೆ. ಹಾಗಿದ್ದರೂ ಲಂಕೇಶರ ಸಾಧನೆಯನ್ನು, ಆಮೇಲೆ ಬರೆಯುತ್ತಿರುವ ಕುಂ. ವೀರಭದ್ರಪ್ಪನವರ ವೈವಿಧ್ಯಪೂರ್ಣವಾದ ಕಥಾಸೃಷ್ಟಿಯನ್ನೂ, ಎಳೆವರೆಯದಲ್ಲಿಯೇ ತಮ್ಮ ಛಾಪು ಮೂಡಿಸುತ್ತಿರುವ ಅಮರೇಶ ನುಗಡೋಣಿ ಅವರ ಗಟ್ಟಿನಿಲುವನ್ನು ಕಂಡಾಗ ಆತ್ಮಪರೀಕ್ಷೆಗೆ ನಿಂತವರು ನಮ್ಮೆದುರಿಗೇ ಇದ್ದಾರೆ ಎನಿಸುತ್ತದೆ.

ಅಂತೂ ನವೋದಯ ಕಥಾಸೃಷ್ಟಿ ಒಂದು ಭದ್ರ ಬುನಾದಿಯನ್ನು ಹಾಕಿಕೊಟ್ಟಿದ್ದು, ಅಲ್ಲಿಯ ಕೆಲವು ತಂತ್ರಗಳನ್ನು ಬಳಸಿಕೊಂಡೂ ನಮ್ಮ ಕತೆಗಾರರು ದಿಟ್ಟಹೆಜ್ಜೆಗಳನ್ನು ಇಡುತ್ತಿರುವುದು ನಿಜಕ್ಕೂ ಸಂತೋಷದ ಸಂಗತಿಯಾಗಿದೆ.

ನವೋದಯ ಕಾಲದಲ್ಲಿ ಜನಮನವನ್ನು ಸೂರೆಗೊಂಡ ಮಹತ್ವದ ಗದ್ಯಪ್ರಕಾರವೆಂದರೆ ಕಾದಂಬರಿ. ಪುರಾಣಕಾವ್ಯಗಳಲ್ಲಿ ಅನೇಕ ಕಲ್ಪಿತ ಕತೆಗಳನ್ನು ಓದಿದ ಭಾರತೀಯರು (ಕನ್ನಡಿಗರು) ಪಾಶ್ಚಾತ್ಯ ಸಾಹಿತ್ಯದ ಪ್ರಭಾವದಿಂದ ನಮ್ಮಲ್ಲಿ ಪ್ರವೇಶಪಡೆದ ಕಾದಂಬರಿಗಳನ್ನು ತುಂಬ ಆಸಕ್ತಿಯಿಂದಲೇ ಬರಮಾಡಿಕೊಂಡರು. ಮೊದಮೊದಲಿಗೆ ಬಂಗಾಲಿಯಿಂದ, ಮರಾಠಿಯಿಂದ ಕನ್ನಡಕ್ಕೆ ಬಂದ ಕಾದಂಬರಿಗಳು ಓದುಬಲ್ಲವರಲ್ಲಿ ಆಸಕ್ತಿಯನ್ನು ಹುಟ್ಟಿಸಿದವು. ಕಾದಂಬರಿ ಓದುವದು ಒಂದು ಚಟವಾಗುವಷ್ಟು ಅವುಗಳ ಆಕರ್ಷಣೆ ಇದ್ದಿತೆಂದು ಹೇಳಬಹುದು. ಅನುವಾದದ ರೂಪದಲ್ಲಿದ್ದ ಕಾದಂಬರಿಗಳು ಸ್ವತಂತ್ರವಾಗಿ ಮೂಡಿಬಂದಾಗ ನಮ್ಮಲ್ಲಿಯ ಜೀವನವನ್ನು ಕಥಾವಸ್ತುವಾಗಿರಿಸಿಕೊಂಡು (ಕೆಲವು ಆದರ್ಶಗಳನ್ನು ಪ್ರತಿಬಿಂಬಿಸುತ್ತಿದ್ದರೂ) ಓದುಗರಿಗೆ ಹೊಸರುಚಿಯನ್ನು ನೀಡಿದವು. ಗುಲವಾಡಿ ವೆಂಕಟರಾಯರ 'ಇಂದಿರಾಬಾಯಿ' (೧೮೯೯), ಬೋಳಾರ ಬಾಬುರಾಯರ 'ವಾಗ್ದೇವಿ' (೧೯೦೫), ಕೆರೂರ ವಾಸುದೇವಾಚಾರ್ಯರ 'ಇಂದಿರೆ' (೧೯೦೮), – ಇವುಗಳ ಪ್ರಕಟನೆಯೊಂದಿಗೆ ಕನ್ನಡ ಕಾದಂಬರಿ ಯುಗ ತನ್ನದೇ ಆದ ಸೊಗಡಿನಿಂದ ಪ್ರಾರಂಭವಾಯಿತು. ಎಂ. ಎಸ್. ಪುಟ್ಟಣ್ಣ ಅವರ 'ಮಾಡಿದ್ದುಣ್ಣೊ ಮಹಾರಾಯ' (೧೯೧೫) ಕೂಡ ಪ್ರಾರಂಭದ ಕಾದಂಬರಿಗಳಲ್ಲಿ ಗಮನಾರ್ಹವಾದದ್ದು.

ಇಪ್ಪತ್ತರ ದಶಕದಲ್ಲಿ ಬಂದ ಶಿವರಾಮ ಕಾರಂತರ 'ದೇವದೂತರು' ಆನಂದಕಂದರ 'ಸುದರ್ಶನ', ಅ. ನ. ಕೃಷ್ಣರಾಯರ 'ಜೀವನ ಯಾತ್ರೆ' – ನಿಜವಾದ ಅರ್ಥದಲ್ಲಿ ಕನ್ನಡಕ್ಕೆ ಹೊಸನೀರನ್ನು ತಂದವು. ಮುಂದಿನ ಎರಡು-ಮೂರು ದಶಕಗಳಲ್ಲಿ ಕಾದಂಬರಿಯ ಮಹಾಪೂರ ಬಂದಿದ್ದುದನ್ನೇ ನಾವು ಕಾಣುತ್ತೇವೆ.

ಕೌಟುಂಬಿಕ, ಸಾಮಾಜಿಕ, ಐತಿಹಾಸಿಕ – ಮುಂತಾದ ವಸ್ತುಗಳನ್ನು ಆಧರಿಸಿದ ಕಾದಂಬರಿಗಳು ಸೊಗಸಾದ ಬದುಕಿನ ಚಿತ್ರಣಗಳನ್ನು ಕೊಡುತ್ತ, ಮಧ್ಯಮ ವರ್ಗದ ಜೀವನವನ್ನು ಚಿತ್ರಿಸಿ ಓದುಗರ ಸಂಖ್ಯೆ ಬೆಳೆಯುವಂತೆ ಮಾಡಿದವು. ಅ. ನ. ಕೃಷ್ಣರಾಯರು ಮತ್ತು ಶಿವರಾಮ ಕಾರಂತರು ಕಾದಂಬರಿ ಕ್ಷೇತ್ರದಲ್ಲಿ ಮಾಡಿದ ಸಾಧನೆ ಅತ್ಯಂತ ಮಹತ್ವದ್ದು. ಅ. ನ. ಕೃ. ಅವರ ಸಂಧ್ಯಾರಾಗ, ಉದಯರಾಗ, ಮಂಗಳಸೂತ್ರ, ನಟಸಾರ್ವಭೌಮ ಇತ್ಯಾದಿ ಕಾದಂಬರಿಗಳು ಆ ಕಾಲದಲ್ಲಿ ಜನಮೆಚ್ಚುಗೆ ಪಡೆದ ಕೃತಿಗಳು. ಸರಸವಾದ, ಲಲಿತವಾದ ಬರವಣಿಗೆಯಿಂದ ಅ. ನ. ಕೃ. ಅವರು ಬಹುಬೇಗನೇ ಜನಪ್ರಿಯತೆಯನ್ನು ಗಳಿಸಿಕೊಂಡರು. ಸಂಗೀತಗಾರ (ಸಂಧ್ಯಾರಾಗದ ನಾಯಕ), ಚಿತ್ರಕಲಾವಿದ (ಉದಯರಾಗದ ನಾಯಕ) ಹಾಗೆಯೇ ನಟಸಾರ್ವಭೌಮ ಕಾದಂಬರಿಯ ನಾಯಕರು ಕಲೆಯ ಮಹತ್ವವನ್ನು ತಿಳಿಸುತ್ತಲೇ ಬದುಕಿನ ಆಗು ಹೋಗುಗಳನ್ನು ತೆರೆದು ತೋರಿಸಿದರು. ಬದುಕಿನ ನಿಷ್ಠುರತೆ, ಕಲಾವಿದರ ಶ್ರದ್ಧೆಗಳನ್ನು ಅ. ನ. ಕೃ. ಅವರು ಆದರ್ಶದ ಹಿನ್ನೆಲೆಯಲ್ಲಿಯೇ ನೋಡಿದರು. ನೂರಕ್ಕಿಂತ ಹೆಚ್ಚು ಕಾದಂಬರಿಗಳನ್ನು ಬರೆದ ಅ. ನ. ಕೃ. ಜನಪ್ರಿಯತೆಯನ್ನೇನೋ ಗಳಿಸಿದರು. ಆದರೆ ಜನತೆಯಲ್ಲಿ ವೈಚಾರಿಕ ಎಚ್ಚರವನ್ನು ಉಂಟುಮಾಡಲಿಲ್ಲ. ಇದನ್ನು ಸಾಧಿಸಿದವರು ಕಾರಂತರು. ಸಮಕಾಲೀನ ಜೀವನವನ್ನು ಬಹಳ ಸೂಕ್ಷ್ಮವಾಗಿ ಗಮನಿಸುತ್ತ, ದೇವದೂತರು, ಸರಸಮ್ಮನ ಸಮಾಧಿ, ಚೋಮನ ದುಡಿ, ಮರಳಿ ಮಣ್ಣಿಗೆ, ಬೆಟ್ಟದ ಜೀವ – ಕಾದಂಬರಿಗಳನ್ನು ಬರೆದ ಕಾರಂತರು ಹೊಸ ದೃಷ್ಟಿಕೋನವನ್ನು ಮೊದಲಿನಿಂದಲೂ ಇರಿಸಿಕೊಂಡವರು. 'ಚೋಮನ ದುಡಿ' ಕನ್ನಡದಲ್ಲಿ ದಲಿತರ ಜೀವನವನ್ನು ಚಿತ್ರಿಸುವ ಪ್ರಥಮ ಕಾದಂಬರಿ ಎಂದು ಹೇಳಬಹುದು. 'ಮರಳಿ ಮಣ್ಣಿಗೆ' ದಕ್ಷಿಣ ಕನ್ನಡ ಜಿಲ್ಲೆಯ ಕರಾವಳಿ ಪ್ರದೇಶದ ಜೀವನವನ್ನು ವಿವರವಾಗಿಯೇ ಚಿತ್ರಿಸುತ್ತದೆ. ಹಾಗೆ ನೋಡಿದರೆ ಕಾರಂತರ ಕಾದಂಬರಿಗಳೆಲ್ಲ ದಕ್ಷಿಣಕನ್ನಡ ಜಿಲ್ಲೆಯ ಮಣ್ಣಿನಲ್ಲಿಯೇ ಹುಟ್ಟಿಕೊಂಡಿವೆ. ಅಲ್ಲಿಯ ಪಾತ್ರಗಳು (ಕೆಲವು) ಬೇರೆ ಬೇರೆ ಊರುಗಳನ್ನು ಕಂಡಿರಬಹುದು. ಬೇರೆ ತರಹದ ಅನುಭವವನ್ನು ಉಂಡಿರಬಹುದು. ಆದರೆ ಮೂಲಸತ್ವ ಮಾತ್ರ ಅಲ್ಲಿಯದೇ. 'ಮರಳಿ ಮಣ್ಣಿಗೆ' ಕಾರಂತರ ಅತ್ಯಂತ ಮಹತ್ವದ ಕೊಡುಗೆ. ಮೂರು ತಲೆಮಾರುಗಳ ವಿಸ್ತಾರವಾದ ಜೀವನ ಇಲ್ಲಿದ್ದು, ರಾಮ ಐತಾಳರು, ಸರಸೋತಿ, ಪಾರೋತಿ ಮೊದಲಾದವರು ನಮ್ಮ ಮುಂದೆ ನಿಂತು ಹೊಸ ಹೊಸ ಅನುಭವಗಳನ್ನು ನೀಡುತ್ತಾರೆ. 'ಮರಳಿ ಮಣ್ಣಿಗೆ'ಗಿಂತ 'ಬೆಟ್ಟದ ಜೀವ'ದಲ್ಲಿ ಪ್ರಕೃತಿ ಸಂಬಂಧ ಗಾಢವಾಗಿದೆ. ಗೋಪಾಲಯ್ಯನ ಪರಿಶ್ರಮದ ಬದುಕು ವಿಶೇಷವಾಗಿ ಕೃಷಿಕ ಜೀವನ ನಮ್ಮ ಮನಸ್ಸನ್ನು ಸೆರೆಹಿಡಿಯುತ್ತದೆ.

ಅ. ನ. ಕೃ. ಅವರ ಪ್ರಗತಿಶೀಲ ಗುಂಪಿಗೆ ಸೇರಿದ ತ. ರಾ. ಸು., ನಿರಂಜನ, ಕಟ್ಟೀಮನಿ ಇವರು ನವೋದಯದ ರೂಪವನ್ನು ಸ್ವೀಕರಿಸಿದ್ದರೂ ಪ್ರಗತಿಶೀಲರೆ

ಆಗಿ ಉಳಿದಿದ್ದಾರೆ. ತ. ರಾ. ಸು. ಅವರ ಐತಿಹಾಸಿಕ ಕಾದಂಬರಿಗಳಲ್ಲಿ ನವೋದಯ ಧೋರಣೆ ಕಂಡುಬರುತ್ತದೆ.

ಆನಂದಕಂದರು ಸಾಂಸ್ಕೃತಿಕ ಕಾಳಜಿಯಿಂದಲೇ ಕಾದಂಬರಿ ಬರೆದವರು. ಅವರ 'ಸುದರ್ಶನ' ಕಾದಂಬರಿಯ ನಾಯಕನು ಉಷೆಯ ಪ್ರಿಯಕರನಾಗಿ ಸಮಾಜ ಸೇವಕನಾಗುತ್ತಾನೆ. 'ಮಗಳ ಮದುವೆ'ಯಲ್ಲಿ ವಾಸ್ತವ ಪ್ರಜ್ಞೆಯಿದ್ದು. ಅದು ತನ್ನ ಕಾಲದ ಸಮಸ್ಯೆಯನ್ನು ಚಿತ್ರಿಸುತ್ತದೆ.

ವಿ. ಕೃ. ಗೋಕಾಕರ 'ಇಜ್ಜೋಡು' ೧೯೩೧ ರಲ್ಲಿಯೇ ಪ್ರಕಟವಾಗಿದ್ದರೂ ಅದು ಮುಂದೆ ಬೃಹತ್ ಕಾದಂಬರಿಯಾಗಿ 'ಸಮರಸವೇ ಜೀವನ' ಎಂಬ ಹೆಸರನ್ನು ಪಡೆದುಕೊಂಡಿದೆ. ವ್ಯಕ್ತಿ-ಕುಟುಂಬ-ಸಮಾಜ-ರಾಷ್ಟ್ರ- ಹೀಗೆ ಅದರ ಕ್ಷಿತಿಜ ವಿಸ್ತಾರವಾಗುತ್ತ ಹೋಗಿದ್ದು. ಗೋಕಾಕರ ದರ್ಶನವನ್ನು ಅದು ಪ್ರತಿಬಿಂಬಿಸುತ್ತದೆ. ಆದರೆ ಈ ಕಾದಂಬರಿಯನ್ನು 'ಮರಳಿ ಮಣ್ಣಿಗೆ'. 'ಕಾನೂರು ಹೆಗ್ಗಡತಿ', 'ನಿಸರ್ಗ' ಇಂಥ ಕಾದಂಬರಿಗಳ ಜೊತೆಗಿಟ್ಟು ನೋಡಿದಾಗ, ಅವುಗಳಷ್ಟು ಸಹಜತೆ ಇದಕ್ಕಿಲ್ಲದಿರುವುದು ಕಂಡುಬರುತ್ತದೆ. ಹಾಗಿದ್ದರೂ ಇದು ನವೋದಯ ಕಾಲವನ್ನು ಪ್ರತಿನಿಧಿಸುವ ಮಹತ್ವದ ಕಾದಂಬರಿ.

'ನಿಸರ್ಗ' ಕಾದಂಬರಿಯಿಂದ ಒಂದು ಮೈಲುಗಲ್ಲನ್ನು ನಿರ್ಮಿಸಿದ ಮಿರ್ಜಿ ಅಣ್ಣಾರಾಯರು ಒಬ್ಬ ಮಹತ್ವದ ಕಾದಂಬರಿಕಾರರು. ಬೆಳಗಾವಿ ಜಿಲ್ಲೆಯ ಶೇಡಬಾಳದ ಪರಿಸರ, ಅನಂತ-ತಾರೆಯರ ವಿಫಲ ಪ್ರೇಮಸಂಬಂಧ, ಗ್ರಾಮೀಣ ಜೀವನ, ಅಲ್ಲಿಯ ಸಮಸ್ಯೆಗಳು ಈ ಕಾದಂಬರಿಯಲ್ಲಿಯ ಮಹತ್ವದ ಸಂಗತಿಗಳು. ಮಿರ್ಜಿ ಅಣ್ಣಾರಾಯರು ಕನ್ನಡ ಕಾದಂಬರಿ ಕ್ಷೇತ್ರದಲ್ಲಿ ಕೀರ್ತಿಶಾಲಿಗಳಾಗುವುದಕ್ಕೆ ಈ ಕಾದಂಬರಿಯ ವಸ್ತುವಿನ್ಯಾಸ ಮತ್ತು ನಿಸರ್ಗದಷ್ಟೇ ಸಹಜವಾದ ಗ್ರಾಮೀಣ ಬದುಕು ಮುಖ್ಯ ಕಾರಣವಾಗಿವೆ. ಆಮೇಲೆ ಬರೆದ 'ರಾಮಣ್ಣ ಮಾಸ್ತರ', 'ಅಶೋಕ ಚಕ್ರ', 'ಭಸ್ಮಾಸುರ' ಈ ಕಾದಂಬರಿಗಳು ಸಾಮಾಜಿಕ ಮತ್ತು ರಾಜಕೀಯ ವಿಚಾರಗಳನ್ನು ವಸ್ತುವಾಗಿರಿಸಿಕೊಂಡಿದ್ದರೂ 'ನಿಸರ್ಗ'ದಷ್ಟು ಪ್ರಭಾವವನ್ನು ಬೀರುವುದಿಲ್ಲ.

ನಾಟಕಕಾರರಾಗಿದ್ದ ಶ್ರೀರಂಗರು ತೀರ ಹೊಸದೃಷ್ಟಿಯಿಂದ 'ವಿಶ್ವಾಮಿತ್ರನ ಸೃಷ್ಟಿ' (೧೯೩೪) ಎಂಬ ಕಾದಂಬರಿಯನ್ನು ಬರೆದರು. ಈ ಕಾದಂಬರಿಯ ನಾಯಕ ನಾರಾಯಣ. ಅವನು ಒಬ್ಬ ಬುದ್ಧಿಜೀವಿ. ಅವನ ಮನಸ್ಸಿಗೆ ವಿರುದ್ಧವಾದ ಮದುವೆಯನ್ನು ತಪ್ಪಿಸಿಕೊಂಡು, ಒಂದು ಬಗೆಯ ತೊಳಲಾಟವನ್ನು ಅನುಭವಿಸಿದ ಅವನ ಮನಸ್ಥಿತಿಯನ್ನು ಈ ಕಾದಂಬರಿ ವಿಶಿಷ್ಟರೀತಿಯಲ್ಲಿ ಚಿತ್ರಿಸುತ್ತದೆ. ನವ್ಯದ ಪ್ರಜ್ಞಾಪ್ರವಾಹದ ಒಳತೋಟೆಯನ್ನು ಇಲ್ಲಿ ಕಾಣಬಹುದು. 'ನಿಸರ್ಗ' (ಮಿರ್ಜಿಯವರ)ದಲ್ಲಿಯೂ ನವ್ಯದ ಮಾನಸಿಕ ತುಯ್ತ ಇದೆ. ಆದರೂ ಇದು ನವ್ಯವಲ್ಲ. 'ವಿಶ್ವಾಮಿತ್ರನ ಸೃಷ್ಟಿ'ಯಲ್ಲಿ ಮಾತ್ರ ನವ್ಯದ ಲಕ್ಷಣಗಳು

ಕಂಡುಬರುತ್ತವೆ. ಶ್ರೀರಂಗರು 'ಪುರುಷ'. 'ಪ್ರಕೃತಿ' ಇತ್ಯಾದಿ ಕಾದಂಬರಿಗಳನ್ನು ಕನ್ನಡಕ್ಕೆ ನೀಡಿದರು. ಆ ಕಾದಂಬರಿಗಳಲ್ಲಿಯೂ ಹೊಸತನವಿರುವುದನ್ನು ಕಾಣಬಹುದು.

ಕವಿ ಕುವೆಂಪು ಅವರ 'ಕಾನೂರು ಸುಬ್ಬಮ್ಮ ಹೆಗ್ಗಡತಿ' (೧೯೩೬) ನವೋದಯ ಕಾಲದ ಶ್ರೇಷ್ಠ ಕೃತಿಗಳಲ್ಲೊಂದು. ಅವರ 'ಮಲೆಗಳಲಿ ಮದುಮಗಳು' ಕೂಡ ಅನನ್ಯವಾದ ಕಾದಂಬರಿಯೇ. ಆದರೆ ಕಾಲಮಾನದ ದೃಷ್ಟಿಯಿಂದ ನವ್ಯಕ್ಕೆ ಸೇರುವಂತಿದೆ. ಎರಡೂ ಕಾದಂಬರಿಗಳಲ್ಲಿ ಮಲೆನಾಡಿನ ಜೀವನ, ಅಲ್ಲಿಯ ಪ್ರಕೃತಿ ಮೂಡಿನಿಂತಿದೆ. ಕವಿಮನೋಧರ್ಮ ಅಲ್ಲಿಗಲ್ಲಿಗೆ ತನ್ನ ವರ್ಣನಾ ನಿಪುಣತೆಯನ್ನು ಪ್ರಕಟಿಸುತ್ತಿದ್ದರೂ ವಾಸ್ತವ ಬದುಕನ್ನು ಹಿಂದೆ ಸರಿಸುವುದಿಲ್ಲ. 'ಕಾನೂರು ಸುಬ್ಬಮ್ಮ ಹೆಗ್ಗಡತಿ'ಯ ವೈಶಿಷ್ಟ್ಯಗಳನ್ನು ಪಟ್ಟಿಮಾಡಿದ ಒಬ್ಬ ವಿದ್ವಾಂಸರು –ಅಲ್ಲಿಯ ಕಾಡು-ಬೆಟ್ಟಗಳ ಚಿತ್ರಣ, ಜೀವನಾನುಭವ, ರಾಗ-ದ್ವೇಷಗಳ ವರ್ಣರಂಜಿತ ವ್ಯಾಖ್ಯಾನ, ಸಾಮಾಜಿಕ ಪ್ರಜ್ಞೆ, ಮಣ್ಣಿನ ವಾಸನೆ ಇತ್ಯಾದಿಗಳನ್ನು ಬೆರಳಿಟ್ಟು ತೋರಿಸಿದ್ದಾರೆ. ಈ ಕಾದಂಬರಿಯಲ್ಲಿಯ ಹೂವಯ್ಯನ ಪಾತ್ರ ಆದರ್ಶದ ಹಲವು ಲಕ್ಷಣಗಳನ್ನು ಹೊಂದಿದೆ. ಹಾಗಿದ್ದರೂ ಸುಬ್ಬಮ್ಮನ ಬದುಕೇ ಕಾದಂಬರಿಯ ಕೇಂದ್ರಬಿಂದುವಾಗುತ್ತದೆ.

ದೇವುಡು, ಕೆ. ವಿ. ಅಯ್ಯರ್, ಮಾಸ್ತಿ ಮೊದಲಾದವರ ಐತಿಹಾಸಿಕ ಕಾದಂಬರಿಗಳೂ ಈ ಕಾಲದಲ್ಲಿ ಬಂದಿದ್ದು ಒಂದು ವಿಶೇಷ.

೧೯೨೦ ರಿಂದ ೧೯೪೫ ರ ಅವಧಿಯಲ್ಲಿ ಬಂದ ಕಾದಂಬರಿಗಳ ಸಂಖ್ಯೆ ಸಣ್ಣದೇನಿಲ್ಲ. ಕನ್ನಡದ ಅತ್ಯಂತ ಮಹತ್ವದ ಕಾದಂಬರಿಗಳು ಬಂದದ್ದು ಈ ಅವಧಿಯಲ್ಲಿಯೇ. ಚದುರಂಗರ 'ಸರ್ವಮಂಗಳೆ' ೧೯೫೦ ರಲ್ಲಿ ಬಂದಿದ್ದರೂ ಅದು ಪ್ರಗತಿಶೀಲ ಪಂಥಕ್ಕೆ ಸೇರ್ಪಡೆಯಾಗುತ್ತದೆ. ತ್ರಿವೇಣಿಯವರ ಕಾದಂಬರಿಗಳು –ಹೂವು ಹಣ್ಣು, ಅಪಸ್ವರ, ಅಪಜಯ ಇತ್ಯಾದಿಗಳು– ಐವತ್ತರ ದಶಕದ ಕೊಡುಗೆಗಳೇ ಆಗಿವೆ. ವ್ಯಾಸರಾಯ ಬಲ್ಲಾಳ, ಯಶವಂತ ಚಿತ್ತಾಲ, ಎಸ್. ಎಲ್. ಭೈರಪ್ಪ ಇವರೆಲ್ಲ ಮಹತ್ವದ ಕಾದಂಬರಿಕಾರರು. ಆದರೆ ನವೋದಯ ಕಾಲದ ನಂತರವೇ ಅವರು ಬರವಣಿಗೆ ಮಾಡಿದ್ದಾರೆ. ಶಾಂತಿನಾಥ ದೇಸಾಯಿ, ಯು. ಆರ್. ಅನಂತಮೂರ್ತಿ, ಲಂಕೇಶ್, ತೇಜಸ್ವಿ ಇವರೆಲ್ಲ ನವ್ಯಮಾರ್ಗದವರು. ಮಾರ್ಗಗಳು ಬದಲಾದಂತೆ, ವಿಚಾರಧಾರೆಗಳು ಬದಲಾದಂತೆ, ತಂತ್ರ ನಿರೂಪಣೆಯ ವಿಧಾನ ಬದಲಾದಂತೆ ಕಾದಂಬರಿಗಳು ನವೋದಯದ ಧೋರಣೆಯಿಂದ ಭಿನ್ನವಾಗುವುದು ಸ್ವಾಭಾವಿಕ. ಹಾಗಿದ್ದರೂ ಆ ಕಾಲದ ಸಾಂಸ್ಕೃತಿಕ ಕಾಳಜಿ ಈಗಿಲ್ಲವೆಂದು ಹೇಳಲಿಕ್ಕಾಗದು. ಮೂಲಭೂತವಾದ ಪ್ರೀತಿ, ಮಮತೆ, ನೈತಿಕ ಹೊಣೆಗಾರಿಕೆಗಳು, ಕನಸುಗಾರಿಕೆಗಳು ಯಾವ ಕಾಲಕ್ಕೂ ಅಪೇಕ್ಷಣೀಯವಾದವು. ಈ ದೃಷ್ಟಿಯಿಂದ ನವೋದಯದ ಭಾವಸ್ಪಂದನಗಳು ಒಂದಿಲ್ಲ ಒಂದು ರೀತಿಯಿಂದ ನಮ್ಮ ಕಾದಂಬರಿಗಳಲ್ಲಿ ಉಳಿದುಕೊಂಡಿರುತ್ತವೆಂದು ಹೇಳಬಹುದು.

ಕನ್ನಡದಲ್ಲಿ ನಾಟಕಗಳು ಮೂಡಿಬಂದದ್ದು ಬಹಳ ತಡವಾಗಿಯೇ. ಪಂಪ, ರನ್ನ, ನಾಗಚಂದ್ರ, ಹರಿಹರ, ರಾಘವಾಂಕ, ಕುಮಾರವ್ಯಾಸ –ಮೊದಲಾದ ಕವಿಗಳು ತಮ್ಮ ಕಾವ್ಯಗಳಲ್ಲಿ ನಾಟಕೀಯತೆಯನ್ನು ಉಳಿಸಿಕೊಂಡಿದ್ದರೂ 'ನಾಟಕ' ಎಂಬ ಸ್ವತಂತ್ರ ಸೃಷ್ಟಿ ನಮ್ಮಲ್ಲಿ ಆಗಿರಲೇ ಇಲ್ಲ. ಸಂಸ್ಕೃತದ ನಾಟಕಗಳು ಮಾತ್ರ ನಮ್ಮ ಕವಿಗಳ ಅಧ್ಯಯನದ ವಿಷಯಗಳಾಗಿದ್ದವು. ಅರಮನೆಗಳಲ್ಲಿ ಇವುಗಳ ಪ್ರಯೋಗ ನಡೆಯುತ್ತಿರಬೇಕೆಂದು ಊಹಿಸಲಾಗುತ್ತಿದೆ. ಭಾರತೀಯ ಅಲಂಕಾರಿಕರು ಕಾವ್ಯವನ್ನು ಶ್ರವ್ಯ ಮತ್ತು ದೃಶ್ಯವೆಂದು ವಿಂಗಡಿಸಿದ್ದರಿಂದ ದೃಶ್ಯಕಾವ್ಯವೆನಿಸುವ ನಾಟಕಗಳು ಪ್ರಯೋಗದಲ್ಲಿರಲೇಬೇಕೆಂದು ಅನಿಸುತ್ತದೆ. ಉಳಿದಂತೆ ಪ್ರಚಲಿತವಿದ್ದದ್ದು ಜನಪದ ರಂಗಭೂಮಿಯೇ.

ಸಿಂಗರಾರ್ಯನ 'ಮಿತ್ರವಿಂದಾ ಗೋವಿಂದಾ' ಈಗಿನ ಮಟ್ಟಿಗೆ ಪ್ರಥಮ ನಾಟಕವಾಗಿ ಕಾಣಿಸುತ್ತದೆ. ಸಂಸ್ಕೃತದ "ರತ್ನಾವಳಿ"ಗೆ ಋಣಿಯಾಗಿರುವ ಈ ನಾಟಕ ಹಳಗನ್ನಡ ಶೈಲಿಯಲ್ಲಿದೆ. ಮೈಸೂರಿಗೆ ಭೇಟ್ಟಿಕೊಟ್ಟ ಪಾರ್ಸೀ ಕಂಪನಿ ನಮ್ಮವರಿಗೆ ಈ ಕಡೆಗೆ ಲಕ್ಷ್ಯವಹಿಸುವಂತೆ ಮಾಡಿರಬೇಕು.

ಮೊದಮೊದಲಿಗೆ ಸಂಸ್ಕೃತದಿಂದ, ಇಂಗ್ಲಿಷಿನಿಂದ ನಾಟಕಗಳು ಅನುವಾದವಾಗಿ ಬಂದವು. ಬಸವಪ್ಪ ಶಾಸ್ತ್ರಿಗಳ 'ಕನ್ನಡ ಶಾಕುಂತಲ' ಒಂದು ಅನುವಾದದ ಮಾದರಿಯೆನ್ನುವಷ್ಟು ಉತ್ಕೃಷ್ಟವಾದ ಕೃತಿ. ಶೆಕ್ಸ್‌ಪಿಯರನ ನಾಟಕಗಳ ಅನುವಾದವನ್ನೂ ಅವರು ಪ್ರಾರಂಭಿಸಿದರು. ಇನ್ನೂ ಒಬ್ಬಿಬ್ಬರು ಅನುವಾದ ಕಾರ್ಯ ಮಾಡಿದ್ದುದು ಕಂಡುಬರುತ್ತದೆ. ಇಂಗ್ಲಿಷ್ ನಾಟಕಗಳನ್ನು ಹೆಚ್ಚು ಶ್ರದ್ಧೆಯಿಂದ ಅನುವಾದ ಮಾಡಿದವರು ಎಂ. ಎಲ್. ಶ್ರೀಕಂಠೇಗೌಡರು.

ಕನ್ನಡ ನಾಟಕಗಳು ಕತೆ, ಕಾದಂಬರಿಗಳಂತೆ ಒಂದು ನಿರ್ದಿಷ್ಟ ಧೋರಣೆಗಾಗಲಿ, ನಿರ್ದಿಷ್ಟ ಚಿಂತನೆಗಾಗಲಿ ಒಳಗಾಗಿಲ್ಲ. ಕೈಲಾಸಂ, ಸಂಸರು ತಳೆದ ಧೋರಣೆಯೇ ಬೇರೆ, ಕುವೆಂಪು ಅವರು ತಳೆದ ನಿಲುವು ಮತ್ತು ಅಭಿವ್ಯಕ್ತಿ ಕ್ರಮವೇ ಬೇರೆ. ವೃತ್ತಿರಂಗಭೂಮಿಗಳ ಸರಸಸಂಗೀತ ನಾಟಕಗಳದ್ದು ಬೇರೆಯೇ ರೀತಿ. ಉದಾ– ನಲವಡಿ ಶ್ರೀಕಂಠಶಾಸ್ತ್ರಿಗಳ ನಾಟಕಗಳು. ಈ ಎಲ್ಲ ವೈವಿಧ್ಯಗಳ ಮಧ್ಯ ನಮ್ಮ ನಾಟಕ ಸಾಹಿತ್ಯ ನವೋದಯಕಾಲದಲ್ಲಿ ಓದುಗರ ಹಾಗೂ ನೋಡುಗರ ಪ್ರೀತಿಗೆ ಪಾತ್ರವಾಯಿತು.

ಇಪ್ಪತ್ತರ ದಶಕದಲ್ಲಿ ಜನ್ಮತಳೆದ ಕೈಲಾಸಂ ಅವರ ಟೊಳ್ಳು ಗಟ್ಟಿ (೧೯೨೨), ಪೋಲಿ ಕಿಟ್ಟಿ (೧೯೨೩) ಹೊಸ ಆಲೋಚನೆ, ಹೊಸ ಮಾರ್ಗ ಎರಡನ್ನೂ ಕನ್ನಡಕ್ಕೆ ತಂದುಬಿಟ್ಟವು. ಹೊಂರೂಲು, ಗಂಡಸ್ಕತ್ರಿ, ತಾಳೀಕಟ್ಟೋಕ್ಕೂಲೀನೇ – ಇತ್ಯಾದಿ ನಾಟಕಗಳು ಸಾಮಾಜಿಕ ಜೀವನದ ಮೇಲೆ ಹೊಸ ಪರಿಣಾಮವನ್ನು ಬೀರಿದವು. ಇದೇ ಕಾಲದಲ್ಲಿ ನಾಟಕ ಬರೆಯಲು ಪ್ರಾರಂಭಿಸಿದ ಸಂಸರು ಐತಿಹಾಸಿಕ ಸಾಮಗ್ರಿಯನ್ನು ಬಳಸಿಕೊಂಡರು. ಭಾಷೆಯನ್ನು ಬಳಸಿಕೊಳ್ಳುವಲ್ಲಿ ಕೈಲಾಸಂ

ಮತ್ತು ಸಂಸರು ಬೇರೆ ಬೇರೆ ದಾರಿಯನ್ನು ತುಳಿದರು. ಕೈಲಾಸಂ ಅವರದು ಅಂದಿನ ವಿದ್ಯಾವಂತರ ಮೈಸೂರಿನ ದೇಸಿ. ಸಂಸರದು ಸಂಸ್ಕೃತ ಬಾಹುಳ್ಯದ ಗಂಭೀರ ಭಾಷೆ. ಜನರ ಹತ್ತಿರಕ್ಕೆ ಬಂದವರು ಕೈಲಾಸಂ ಅವರೇ. ಜೀವನದ ಸಮಸ್ಯೆಗಳನ್ನು ನಾಟಕದ ಮೂಲಕ ಚರ್ಚಿಸುವ ಪ್ರಯತ್ನ ಮಾಡಿದವರು ಅವರು. ಶಿಕ್ಷಣ, ಮದುವೆ, ಹೆಣ್ಣಿನ ಬದುಕು ಇತ್ಯಾದಿ ವಿಷಯಗಳು ಅವರ ನಾಟಕದಲ್ಲಿ ಸ್ಥಾನಪಡೆದವು. ವ್ಯಂಗ್ಯ –ವಿಡಂಬನೆಗಳನ್ನು ಬಳಸಿಕೊಂಡೂ ಜೀವನ ವಿಮರ್ಶೆ ಮಾಡಿದವರು ಕೈಲಾಸಂ. ಅವರ 'ಕೀಚಕ' ಹೊಸದೃಷ್ಟಿಯ ನಾಟಕ, 'ಬಹಿಷ್ಕಾರ', 'ಸೂಳೆ'ಯಂಥ ಗಂಭೀರ ನಾಟಕಗಳು ಇಂದಿಗೂ ಪ್ರಸ್ತುತವೆನ್ನುವಂತಿವೆ.

ಉತ್ತರ ಕರ್ನಾಟಕದ ಭಾಷೆಯನ್ನು ಅರ್ಥವತ್ತಾಗಿ ಬಳಸಿಕೊಂಡ ಶ್ರೀರಂಗರ ನಾಟಕಗಳು ಕನ್ನಡ ನಾಟಕ ಕ್ಷೇತ್ರಕ್ಕೆ ಹೊಸ ಕಾಣ್ಕೆಗಳಾಗಿ ಬಂದವು. ಗಾಂಧೀಯುಗದ ವಿಚಾರಧಾರೆಯ ಪರಿಣಾಮ ಶ್ರೀರಂಗರ ಮೇಲೆ ಆಗಿದ್ದು, ಸ್ವತಃ ಪಾಶ್ಚಾತ್ಯ ನಾಟಕ ಹಾಗೂ ರಂಗಭೂಮಿಗಳ ಪರಿಚಯವುಳ್ಳ ಅವರು ದಿಟ್ಟತನದಿಂದಲೇ ನಾಟಕಗಳನ್ನು ಬರೆದರು. 'ಹರಿಜನ್ವಾರ', 'ಸಂಸಾರಿಗ ಕಂಸ', 'ಪ್ರಪಂಚ ಪಾಣಿಪತ್ತು' –ಶ್ರೀರಂಗರ ಪ್ರಸಿದ್ಧ ನಾಟಕಗಳು. ಇಪ್ಪತ್ತರ ದಶಕದಲ್ಲಿ ನಾಟಕ ಬರೆಯಲು ಪ್ರಾರಂಭಿಸಿದ ಶ್ರೀರಂಗರು ಒಟ್ಟು ಆರು ದಶಕಗಳ ಕಾಲ ಬಿಟ್ಟೂಬಿಡದೆ ನಾಟಕಗಳನ್ನು ಬರೆದಿದ್ದಾರೆ. ನವೋದಯ, ಪ್ರಗತಿಶೀಲ, ನವ್ಯ ಈ ಯಾವ ಕಾಲಕ್ಕೂ ತಳಕು ಹಾಕಿಕೊಳ್ಳದೆ, ಎಲ್ಲ ಕಾಲದಲ್ಲಿಯೂ ಹೊಂದಿಕೊಳ್ಳುವಂಥ, ಕೌಟುಂಬಿಕ, ಸಾಮಾಜಿಕ ಮತ್ತು ರಾಜಕೀಯ ಸಂಗತಿಗಳನ್ನು ಅಳವಡಿಸಿಕೊಂಡು, ವಿಡಂಬನೆಯನ್ನು ಬಳಸಿಕೊಂಡು, ಗಂಬೀರವಾದ ಚಿಂತನೆಗೂ ತೊಡಗಿಸುವಂಥ ನಾಟಕಗಳನ್ನು ಶ್ರೀರಂಗರು ಬರೆದದ್ದು ಒಂದು ವಿಶೇಷ.

ಕುವೆಂಪು, ಬೇಂದ್ರೆ, ಕಾರಂತರೂ ಈ ತಲೆಮಾರಿನಲ್ಲಿ ನಾಟಕಗಳನ್ನು ಬರೆದಿರುವರು. ಕುವೆಂಪು ಅವರು ಸರಳ ರಗಳೆಯನ್ನು ಬಳಸಿಕೊಂಡು ನಾಟಕ ಬರೆದದ್ದೂ ಉಂಟು. ಜಲಗಾರ, ಯಮನ ಸೋಲು, ಮಹಾರಾತ್ರಿ, ರಕ್ತಾಕ್ಷಿ, ಬಿರುಗಾಳಿ, ಬೆರಳ್‌ಗೆ ಕೊರಳ್, ಶೂದ್ರತಪಸ್ವಿ ಇತ್ಯಾದಿ ನಾಟಕಗಳು ಹೊಸ ವಿಚಾರಗಳಿಂದ ಕೂಡಿವೆ. ಏಕಲವ್ಯ, ಶಂಬೂಕರನ್ನು ನೋಡುವ ದೃಷ್ಟಿಯೇ ಭಿನ್ನವಾಗಿದೆ. ಸಂಪ್ರದಾಯ ಪ್ರಿಯರನ್ನು ಅವು ಕೆಣಕುವ ನಾಟಕಗಳು. ನವೋದಯದ ಒಳಗಿನ ಪ್ರಗತಿಶೀಲತೆ ಇಲ್ಲಿರುವುದನ್ನು ಕಾಣಬಹುದು.

ಬೇಂದ್ರೆಯವರು ಹುಚ್ಚಾಟಗಳು, ಹೊಸ ಸಂಸಾರ ಮತ್ತು ಇತರ ನಾಟಕಗಳನ್ನು ಪ್ರಸಿದ್ಧಿಸಿದ್ದು ಒಂದು ವಿಶೇಷ. ಇವರ ನಾಟಕಗಳಲ್ಲಿ ಹಾಸ್ಯವೂ ಇದೆ, ಜೀವನ ವಿಮರ್ಶೆಯೂ ಇದೆ.

ಪರ್ವತವಾಣಿ, ಎನ್ಕೆ ಮೊದಲಾದವರೂ ನಾಟಕಗಳನ್ನು ಬರೆದಿದ್ದಾರೆ. ಜೀವನದ ಅನೇಕ ಘಟನೆಗಳು ನಾಟಕದ ವಸ್ತುವಾಗಿ ರಂಜನೆಯ ಜೊತೆಗೆ

ವೈಚಾರಿಕತೆಯನ್ನು ನವೋದಯ ಕಾಲದ ನಾಟಕಗಳು ಬಳಸಿಕೊಂಡಿವೆ. ಕಾವ್ಯ, ಕತೆ, ಕಾದಂಬರಿಗಳ ವಸ್ತುವಿನ್ಯಾಸಕ್ಕೂ, ನಾಟಕದ ವಸ್ತುವಿನ್ಯಾಸಕ್ಕೂ ಸಂವಹನ ಕ್ರಿಯೆಗೂ ವ್ಯತ್ಯಾಸವಿರುವುದನ್ನು ಕಾಣಬಹುದು.

ವೃತ್ತಿರಂಗಭೂಮಿ ಒಂದು ಕಡೆಗೆ ಕಾರ್ಯಮಾಡುತ್ತಿದ್ದರೆ, ಹವ್ಯಾಸಿ ನಾಟಕ ಕ್ಷೇತ್ರ ಇನ್ನೊಂದು ಕಡೆಗೆ ಕಾರ್ಯ ಮಾಡತೊಡಗಿದ್ದು ನವೋದಯ ಕಾಲದ ಒಂದು ವಿಶೇಷ. ಈ ಕಾಲದ ಎಲ್ಲ ಲೇಖಕರೂ ನಾಟಕ ಬರೆಯಲು ಯತ್ನಿಸಿದ್ದಾರೆ. ಮುಂದೆ ಬೆಳೆಯಲಿರುವ ನಾಟಕ ಸಾಹಿತ್ಯಕ್ಕೆ ಭದ್ರ ಬುನಾದಿಯನ್ನು ಒದಗಿಸಿದ್ದಾರೆ.

ಗಿರೀಶ ಕಾರ್ನಾಡ, ಚಂದ್ರಶೇಖರ ಕಂಬಾರ, ಚಂದ್ರಶೇಖರ ಪಾಟೀಲ, ಪಿ. ಲಂಕೇಶ್, ಮೊದಲಾದವರು ನವ್ಯ ಯುಗದೊಂದಿಗೇ ಬೆಳೆದು ಬಂದವರು. ಹಾಗಿದ್ದರೂ ಜನಪದೀಯ ಅಂಶಗಳನ್ನು, ಪ್ರೀತಿಯ ವಿವಿಧ ಮುಖಗಳನ್ನು ನವೀನ ರೀತಿಯಲ್ಲಿ ಕಂಡವರು.

ನವೋದಯ ಕಾಲದಲ್ಲಿ ಗೀತನಾಟಕಗಳು ಸೃಷ್ಟಿಯಾಗಿದ್ದುದನ್ನು ಮರೆಯುವಂತಿಲ್ಲ. ಪು. ತಿ. ನ. ಈ ಕ್ಷೇತ್ರದಲ್ಲಿ ಮಾಡಿದ ಸಾಧನೆ ಮಹತ್ವದ್ದು. ಅವರ 'ಅಹಲ್ಯೆ', 'ಗೋಕುಲ ನಿರ್ಗಮನ' ನೆನಪಿಡುವಂಥ ಗೀತ ನಾಟಕಗಳು. ಆ ಮೇಲೆ ಸಾ. ಶಿ. ಮರುಳಯ್ಯ ಈ ಪ್ರಕಾರದಲ್ಲಿ ಶ್ರಮವಹಿಸಿದರು.

ಪ್ರಹಸನ, ಏಕಾಂಕ, ಮೂರಂಕಿನ ನಾಟಕ – ಹೀಗೆ ನಾಟಕ ಸಾಹಿತ್ಯ ವೈವಿಧ್ಯಪೂರ್ಣವಾಗಿ ಬೆಳೆಯಿತು. ಶಾಲೆ, ಕಾಲೇಜುಗಳ ಸಾಂಸ್ಕೃತಿಕ ಕಾರ್ಯಕ್ರಮಗಳಲ್ಲಿ ಈ ನಾಟಕಗಳಿಗೆ ವಿಶೇಷ ಸ್ಥಾನ ದೊರೆಯಿತು. ಈಗಲೂ ಇವುಗಳನ್ನು ಆಡುವವರು ಹವ್ಯಾಸಿ ತಂಡದವರೇ.

ಗದ್ಯಸಾಹಿತ್ಯದಲ್ಲಿ 'ಲಲಿತಪ್ರಬಂಧ' ಪ್ರಕಾರವು ಜನ್ಮತಳೆದದ್ದು, ಅಂದಿನ ಪ್ರಮುಖ ಲೇಖಕರ ಗಮನ ಸೆಳೆದದ್ದು, ಕಾವ್ಯಾತ್ಮಕ ಮತ್ತು ವೈನೋದಿಕ ದೃಷ್ಟಿಯಿಂದ ಜನಮನವನ್ನು ಸೆಳೆದದ್ದು ನವೋದಯ ಕಾಲದಲ್ಲಿಯೇ. ನಾ. ಕಸ್ತೂರಿ, ಎ. ಎನ್. ಮೂರ್ತಿರಾವ್, ಏ. ಸೀ. ಈ ಮುಂತಾದವರ ಪ್ರಬಂಧಗಳು ರಮ್ಯವಾದ ನಿರೂಪಣೆಯೊಂದಿಗೆ ಬದುಕಿನ ವಿವಿಧ ಮುಖಗಳನ್ನು ಚಿತ್ರಿಸಿ ಓದುಗರಿಗೆ ಪರಿಚಿತವಾದ ಆದರೆ ವರ್ಣನಾನೈಪುಣ್ಯದಿಂದ ನೂತನವಾದ ಜಗತ್ತನ್ನು ತೋರಿಸಿ, ಲವಲವಿಕೆಯನ್ನೂ ಹರ್ಷವನ್ನೂ ಉಂಟುಮಾಡುತ್ತವೆ. ಒಮ್ಮೊಮ್ಮೆ ಭಾವಗೀತೆಯಂತೆ, ಒಮ್ಮೊಮ್ಮೆ ಸಣ್ಣಕತೆಯಂತೆ, ಪ್ರಹಸನದ ತರಹದಲ್ಲಿಯೂ ಒಮ್ಮೊಮ್ಮೆ ಲಲಿತಪ್ರಬಂಧ ನಮ್ಮನ್ನು ಮೈಮರೆಸುತ್ತದೆ. ಈ ಬರವಣಿಗೆಯೇ ಕನ್ನಡಕ್ಕೆ ನವೀನವಾದದ್ದು.

ಪಾಶ್ಚಾತ್ಯ ಸಾಹಿತ್ಯದ ಪ್ರಭಾವದಿಂದ ರೂಪಗೊಂಡ ಲಲಿತ ಪ್ರಬಂಧ ನಮ್ಮ ನೆಲದಲ್ಲಿ ಹೊಸ ಸತ್ವವನ್ನು ಪಡೆದುಕೊಂಡು ಬೆಳೆಯಿತು. ೧೯೩೪ ರಲ್ಲಿ

ಧಾರವಾಡದ ಗೆಳೆಯರು (ಸಂಪಾದಕರು ಜಿ. ವಿ. ಜೋಶಿ) ಪ್ರಕಟಿಸಿದ ಇಪ್ಪತ್ತಾರು ಪ್ರಬಂಧಗಳ ಸಂಕಲನ 'ಸುಳುವು-ಹೊಳವು' ನವೋದಯದ ಒಂದು ಕೊಡುಗೆಯಾಗಿಯೇ ಬಂದಿದೆ. ಬೇಂದ್ರೆ, ಶ್ರೀರಂಗ, ಕಾರಂತ, ಕುವೆಂಪು, ವಿ.ಸೀ., ತೀ.ನಂ.ಶ್ರೀ., ಪು.ತಿ.ನ. ಎ. ಎನ್. ಮೂರ್ತಿರಾವ್, ನಾ. ಕಸ್ತೂರಿ, ಗೊರೂರು ರಾಮಸ್ವಾಮಿ ಅಯ್ಯಂಗಾರ, ರಾ. ಕು., ದ. ಬಾ. ಕು. – ಇವರೆಲ್ಲ ಈ ಕ್ಷೇತ್ರದಲ್ಲಿ ಮಾಡಿದ ಕೃಷಿ ಅಪ್ಯಾಯಮಾನವಾಗಿದೆ.

ಲಲಿತ ಪ್ರಬಂಧ ಕುರಿತು ಮಾತನಾಡುತ್ತ " ತೂರಿಬಿಟ್ಟ ಚಿಂತನೆಗಳು " ಎಂದು ಬೇಕನ್, " ಮನಸ್ಸಿನ ಸ್ವಚ್ಛಂದ ಲಹರಿ " ಎಂದು ಡಾ. ಜಾನ್‌ಸನ್, " ಗದ್ಯಕಲೆಯ ಬರಹಗಳು " ಎಂದು ಸೇಂಟ್ಸ್‌ಬರಿ ಹೇಳುತ್ತಾರೆ. ನಮ್ಮ ತೀ.ನಂ. ಶ್ರೀಕಂಠಯ್ಯನವರು " ಒಂದೊಂದು ಪ್ರಬಂಧವೂ ಲೇಖಕನ ಒಂದೊಂದು ಚಿತ್ತಲಹರಿಯ ನಿರೂಪಣೆ " ಎನ್ನುತ್ತಾರೆ. " ಪ್ರಬಂಧ ಅಥವಾ ಹರಟೆ ಯೌವನದಿಂದ ತುಂಬಿ ತುಳುಕುವ ಮುಗ್ಧೆಯ ಕಣ್ಣಿನಂತೆ. ಅದರ ಚಾಂಚಲ್ಯವೇ ಅದರ ಸೊಬಗು " ಎನ್ನುತ್ತಾರೆ ಎ. ಎನ್. ಮೂರ್ತಿರಾಯರು.

ಕನ್ನಡದಲ್ಲಿ ಬಂದ ಎಲ್ಲ ಲಲಿತಪ್ರಬಂಧಗಳನ್ನು ಗಮನಿಸಿದರೆ ಈ ಮೇಲಿನ ಮಾತುಗಳು ಒಂದು ಸೂತ್ರಕ್ಕೆ ಒಳಪಟ್ಟ ವ್ಯಾಖ್ಯೆಗಳಾಗಿ ಕಾಣುತ್ತವೆ. ಲಲಿತ ಪ್ರಬಂಧ ಒಂದು ಆತ್ಮೀಯ ಬರವಣಿಗೆ ಎನ್ನುವುದರಲ್ಲಿ ಸಂದೇಹವಿಲ್ಲ. ಲೇಖಕನ ವ್ಯಕ್ತಿತ್ವ, ಜೀವನದ ಅನುಭವ, ಬಹುಶ್ರುತತ್ವ, ಚಿಂತನೆಯ ಗಂಭೀರತೆ, ವಿನೋದ ಅಥವಾ ವ್ಯಂಗ್ಯವನ್ನು ಬಳಸಿಕೊಳ್ಳುವ ಚಮತ್ಕಾರಿಕವಾದ ವಾದಸರಣಿ ಇತ್ಯಾದಿಗಳನ್ನು ಪ್ರಬಂಧ ಅವಲಂಬಿಸಿರುತ್ತದೆ. ಲಘುಮನಸ್ಕರಲ್ಲಿ, ಸುತ್ತು-ಬಳಸಿ ಮಾತನಾಡುವಾಗ ಅದು ಹರಟೆಯಾಗುತ್ತದೆ. ಕನ್ನಡದಲ್ಲಿ ಹರಟೆ ಮತ್ತು ಲಲಿತ ಪ್ರಬಂಧಗಳಲ್ಲಿ ವ್ಯತ್ಯಾಸ ದೊಡ್ಡದಾಗಿಲ್ಲ. ಬೇಂದ್ರೆಯವರು 'ಹರಟೆ' ಎಂದೇ ಕರೆದಿದ್ದಾರೆ. ಬೀಚಿಯವರ ಇಂಥ ಬರವಣಿಗೆ ಹರಟೆಯಾಗಿರುವುದನ್ನೂ ಕಾಣಬಹುದು.

ಎ. ಎನ್. ಮೂರ್ತಿರಾವ್ ಅವರ 'ಹಗಲುಗನಸುಗಳು' ಕನ್ನಡದ ಲಲಿತ ಪ್ರಬಂಧಗಳ ಒಂದು ಮಾದರಿಯಾಗಿದ್ದು, ಇಲ್ಲಿಯ ಏಳೂ ಪ್ರಬಂಧಗಳು ಮೂರ್ತಿರಾವ್ ಅವರ ಆತ್ಮೀಯ ಬರವಣಿಗೆಯಿಂದ ಇಂದಿಗೂ ನವೀನವಾಗಿಯೇ ಕಾಣುತ್ತವೆ. 'ಗೌರಜ್ಜಿ' ಎಂಬ ಗ್ರಾಮೀಣ ಮಹಿಳೆಯ ಚಿತ್ರ, 'ಹೂವುಗಳು' ಎಂಬ ಭಾವಗೀತಾತ್ಮಕ ಕಲ್ಪಕ ನಿರೂಪಣೆ, 'ಗಾಡಿಪ್ರಯಾಣ' ಗ್ರಾಮೀಣ ಪ್ರದೇಶದವರ ಸೊಗಸಾದ ಗಾಡಿಪ್ರಯಾಣದ ಚಿತ್ರ –ಎಲ್ಲವೂ ಕಣ್ಣಿಗೆ ಕಟ್ಟುವಂತಿವೆ. ವಿ. ಸೀ. ಅವರ 'ಮೈಸೂರು ರೂಮಾಲು', 'ಬೆಳದಿಂಗಳು' ಒಮ್ಮೆ ಓದಿದರೆ ಸಾಕು ಅಲ್ಲಿಯ ವರ್ಣನೆ ನಮ್ಮ ಮನಸ್ಸಿನಲ್ಲಿ ನಿಂತುಬಿಡುತ್ತದೆ. ವಿ. ಸೀ ಅವರೇ ಹೇಳಿದಂತೆ "ಸಾಮಾನ್ಯದಿಂದ ವಿಶೇಷಕ್ಕೆ, ಸಪಲತೆಯಿಂದ ಗಂಭೀರತೆಗೆ ದಾಟಿ ಹೋಗುವುದೂ, ಅಲ್ಲಿ ಇಲ್ಲಿ ನಮ್ಮ ಅನುಭವಕ್ಕೂ ಲೋಕ ಜೀವನಕ್ಕೂ ಸಂಬಂಧಿಸಿದ ಸಂಗತಿಗಳನ್ನು

ಬೆರೆಸುವುದೂ ಪ್ರಬಂಧದ ಗತಿ'' ಎಂಬ ಮಾತಿಗೆ ನಿದರ್ಶನವೆಂಬಂತೆ ಅವರ ಪ್ರಬಂಧಗಳಿವೆ.

ಪು. ತಿ. ನ.. ರಾ. ಕು.. ಬಿ. ಆರ್. ವಾಡಪ್ಪಿ ಮೊದಲಾದವರ ಪ್ರಬಂಧಗಳಲ್ಲಿಯೂ ಅಂಥ ಗುಣವಿರುವುದನ್ನು ಕಾಣಬಹುದು. ಟಿ. ಸುನಂದಮ್ಮ, ಸುನಂದಾ ಬೆಳಗಾಂವಕರ, ವೈದೇಹಿ ಈ ಮೊದಲಾದ ಮಹಿಳೆಯರ ಪ್ರಬಂಧಗಳಲ್ಲಿ ಮಹಿಳೆಯರ ವಿಶೇಷ ಅನುಭವ ಬೆರೆತುಕೊಂಡಿರುವುದರಿಂದ ಅವು ಹೆಚ್ಚಿನ ಮುದವನ್ನು ನೀಡುತ್ತವೆ. ಒಟ್ಟಂದದಲ್ಲಿ ಲಲಿತ ಪ್ರಬಂಧ ನವೋದಯ, ನವ್ಯ, ಪ್ರಗತಿಶೀಲ ಯಾವ ಕಾಲದಲ್ಲಿಯೂ ತಮ್ಮ ಸೊಗಸನ್ನು ಉಳಿಸಿಕೊಂಡ ಒಂದು ವಿಶಿಷ್ಟ ಪ್ರಕಾರ.

ಸಂಶೋಧನೆ, ವಿಮರ್ಶೆ ಕೂಡ ಪ್ರಾರಂಭವಾದದ್ದು, ಬೆಳೆದದ್ದು ನವೋದಯ ಕಾಲದಲ್ಲಿಯೇ. ಶಾಸನಗಳನ್ನು ಹುಡುಕುವ, ಶಾಸನಗಳಲ್ಲಿ ವ್ಯಕ್ತವಾದ ಅಭಿಪ್ರಾಯದನ್ವಯ ನಮ್ಮ ಸಂಸ್ಕೃತಿಯ ಪ್ರಾಚೀನತೆಯನ್ನೂ ಮೌಲಿಕವಾದ ಕಾಣಿಕೆಗಳನ್ನೂ ಕಂಡುಕೊಳ್ಳುವ ಪ್ರಯತ್ನವನ್ನು ಕನ್ನಡದ ಅಂದಿನ ವಿದ್ವಾಂಸರು ಶ್ರದ್ಧೆ-ನಿಷ್ಠೆಗಳಿಂದ ಮಾಡಿದ್ದು ಇಂದು ಇತಿಹಾಸವಾಗಿದೆ.

ಸಂಶೋಧನೆಯ ಶಿಸ್ತು ನಮ್ಮಲ್ಲಿ ಮೂಡಿಬಂದದ್ದು ಪಾಶ್ಚಾತ್ಯ ವಿದ್ವಾಂಸರಿಂದ. ಕರ್ನಲ್ ಮೆಕೆಂರಿಝಿ, ವಾಲ್ಟರ್ ಎಲಿಯಟ್, ಹರ್ಮನ್ ಮೋಗ್ಲಿಂಗ್, ರಾಬರ್ಟ್ ಕಾಲ್ಡವೆಲ್, ಫರ್ಡಿನಾಂಡ ಕಿಟೆಲ್, ಬಿ. ಎಲ್. ರೈಸ್, ಜೆ. ಎಫ್. ಫ್ಲೀಟ್ ಮುಂತಾದವರು ಬ್ರಿಟಿಷರ ಆಳಿಕೆಯಲ್ಲಿ ಬೇರೆ ಬೇರೆ ಕಾರ್ಯದ ನಿಮಿತ್ತ ಭಾರತಕ್ಕೆ ಬಂದು, ತಮ್ಮ ಸ್ವಭಾವಸಿದ್ಧವಾದ ಸಂಶೋಧನಾ ಕುತೂಹಲವನ್ನು ಜೀವಂತವಾಗಿ ಉಳಿಸಿಕೊಂಡು ಭಾರತೀಯ ಆಯಾ ಭಾಷೆಯವರು ಬೆರಗುಗೊಳ್ಳುವಂತೆ ಕೆಲಸ ಮಾಡಿದರು; ಇಲ್ಲಿಯ ವಿದ್ವಾಂಸರಿಗೆ ಒಂದು ದಾರಿಯನ್ನು ನಿರ್ಮಿಸಿಕೊಟ್ಟರು. ಮೆಕೆಂರಿಝಿಯವರು ಎರಡು ದಶಕಗಳಲ್ಲಿ (೧೮೦೦ ರಿಂದ ೧೮೨೦) ಆರು ಸಾವಿರದಷ್ಟು ಶಾಸನಗಳನ್ನು ಸಂಗ್ರಹಿಸಿದ್ದರಲ್ಲದೆ, ಹಸ್ತಪ್ರತಿ, ಕೈಫಿಯತ್ತು, ನಾಣ್ಯ, ವಿಗ್ರಹ ಇತ್ಯಾದಿ ಸಂಶೋಧಕ ಸಾಮಗ್ರಿಯನ್ನು ವಿಪುಲವಾಗಿಯೇ ಕಲೆಹಾಕಿದ್ದರು. ಹರ್ಮನ್ ಮೋಗ್ಲಿಂಗ ಸುಮಾರು ನಾಲ್ಕು ಸಾವಿರ ಕನ್ನಡ ಗಾದೆಮಾತುಗಳನ್ನು ಸಂಗ್ರಹಿಸಿದ್ದಲ್ಲದೆ ೧೮೫೦ ರಲ್ಲಿ 'ದಾಸರಪದಗಳು' ಕೃತಿಯನ್ನು ಸಂಗ್ರಹಿಸಿಕೊಟ್ಟರು. ದಕ್ಷಿಣ ಭಾರತದ ದ್ರಾವಿಡ ಭಾಷೆಗಳಾದ ತಮಿಳು, ಮಲೆಯಾಳಂ, ತೆಲುಗು, ಕನ್ನಡ ಇವುಗಳನ್ನು ಅಧ್ಯಯನ ಮಾಡಿದ ರಾಬರ್ಟ್ ಕಾಲ್ಡವೆಲ್‌ರು 'ದ್ರಾವಿಡ ಭಾಷೆಗಳ ತೌಲನಿಕ ವ್ಯಾಕರಣ' (A Comparative Grammar of Dravidian Languages) ಎಂಬ ಗ್ರಂಥವನ್ನು ಭಾರತೀಯ ವ್ಯಾಕರಣಶಾಸ್ತ್ರ ಸಾಹಿತ್ಯಕ್ಕೆ ನೀಡಿದ್ದು ಬಹುದೊಡ್ಡ ಕೊಡುಗೆಯಾಗಿದೆ. ಎಫ್. ಕಿಟೆಲ್‌ರದು ಬಹುಮುಖ ಸಾಧನೆ. ಅವರ 'ಕನ್ನಡ ಇಂಗ್ಲಿಷ್ ನಿಘಂಟು' ಒಂದು ಮೇರು ಕೃತಿ. ಶಬ್ದಮಣಿದರ್ಪಣ ಮತ್ತು ನಾಗವರ್ಮನ ಕನ್ನಡ ಛಂದಸ್ಸು – ಅವರು ಸಂಪಾದಿಸಿ, ಪರಿಶೋಧಿಸಿದ ಮಹತ್ವದ ಗ್ರಂಥಗಳು.

ಹೀಗೆ ಶಾಸನ, ವ್ಯಾಕರಣ, ಕಾವ್ಯ ಮುಂತಾದ ಕ್ಷೇತ್ರಗಳಲ್ಲಿ ಆಂಗ್ಲ ವಿದ್ವಾಂಸರು ಹತ್ತೊಂಬತ್ತನೆಯ ಶತಮಾನದಲ್ಲಿಯೇ ಸಾಧನೆ ಮಾಡಿ ಮೈಲುಗಲ್ಲನ್ನು ನಿರ್ಮಿಸಿದ್ದು, ಮುಂದಿನ ಸಂಶೋಧಕರಿಗೆ ದಾರಿದೀಪವಾಯಿತು. ನವೋದಯದ ಹಿಂದು-ಮುಂದಿನ ಸಂದರ್ಭದಲ್ಲಿ ಕನ್ನಡದ ಸಂಶೋಧಕರು ಉದಿಸಿಬಂದರು. ಕೆ. ಬಿ. ಪಾಠಕ, ಎಂ. ಎಸ್. ಪುಟ್ಟಣ್ಣ, ಆರ್. ನರಸಿಂಹಾಚಾರ್, ಫ. ಗು. ಹಳಕಟ್ಟಿ, ಎಂ. ಗೋವಿಂದ ಪೈ, ನಾ. ಶ್ರೀ. ರಾಜಪುರೋಹಿತ, ಮುಳಿಯ ತಿಮ್ಮಪ್ಪಯ್ಯ, ಎಚ್. ಶೇಷಯ್ಯಂಗಾರ್, ಎಂ. ಎಚ್. ಕೃಷ್ಣ, ಶಿ. ಶಿ. ಬಸವನಾಳ, ಶಂ. ಬಾ. ಜೋಶಿ, ಆ. ನೇ. ಉಪಾಧ್ಯೆ, ಡಿ. ಎಲ್. ನರಸಿಂಹಾಚಾರ್ಯ, ಪಿ. ಬಿ. ದೇಸಾಯಿ, ಟಿ. ಎಸ್. ಗಾಯಿ – ಹೀಗೆ ಹಲವಾರು ಸಂಶೋಧಕರು ಹೊಸ ಹೊಸ ಕ್ಷಿತಿಜಗಳನ್ನು ಹುಡುಕಿಕೊಟ್ಟರು. ಶಾಸನ, ತಾಮ್ರಪಟ ತಾಡವೋಲೆಗಳನ್ನು ಹುಡುಕುತ್ತ ನಮ್ಮ ಇತಿಹಾಸ, ಸಂಸ್ಕೃತಿ, ಕಲೆ ಸಾಹಿತ್ಯಗಳ ಮೇಲೆ ಹೊಸಬೆಳಕು ಬೀರಿದ ಈ ಸಂಶೋಧಕರ ಪರಿಶ್ರಮ ಅನನ್ಯವಾದುದು. ಪ್ರಾಚೀನ ಕಾವ್ಯಗಳು ಒಂದೊಂದಾಗಿ ಬೆಳಕು ಕಂಡವಲ್ಲದೆ ಸೂಕ್ತ ಪ್ರಸ್ತಾವನೆಯಿಂದ ಕನ್ನಡ ಗದ್ಯಸಾಹಿತ್ಯ ಹೊಸ ಆಯಾಮವನ್ನು ಪಡೆದುಕೊಂಡಿತು. ಸಂಪಾದನಾ ಶಾಸ್ತ್ರ ಅದೇ ತಾನೇ ಕಣ್ಣು ತೆರೆಯುತ್ತಿರುವ ಸಂದರ್ಭದಲ್ಲಿ ಕನ್ನಡ ಸಂಶೋಧಕರು ಮಾಡಿದ ಸಾಧನೆ ಅಚ್ಚರಿಯನ್ನು ಹುಟ್ಟಿಸುತ್ತದೆ. ಸಂಪಾದಿತ ಗ್ರಂಥಗಳ ಪ್ರಸ್ತಾವನೆಯಿಂದ ಎರಡು ಅಂಶಗಳು ಸ್ಪಷ್ಟವಾಗುತ್ತವೆ. ೧) ಶಾಸ್ತ್ರೀಯವಾದ ಸಂಶೋಧನ ಕಾರ್ಯದ ಪರಿಶೀಲನೆ, ೨) ನಮ್ಮ ಕಾವ್ಯಗಳ ವಸ್ತು, ಅಭಿವ್ಯಕ್ತಿಗಳ ವಿಮರ್ಶಾತ್ಮಕ ಚರ್ಚೆ. ಕನ್ನಡ ವಿಮರ್ಶೆ ಪ್ರಾರಂಭವಾದದ್ದೇ ಪ್ರಾಚೀನ ಕಾವ್ಯಗಳ ಅವಲೋಕನೆಯೊಂದಿಗೆ. ವಿಮರ್ಶೆಯ ಮಾನದಂಡಗಳು ಪಾಶ್ಚಾತ್ಯರಿಂದ ಬಂದಿದ್ದರೂ ನಮ್ಮ ಕಾವ್ಯ ಮೀಮಾಂಸಾ ಶಾಸ್ತ್ರವೇ ನಮಗೆ ಮುಖ್ಯವಾಗಿತ್ತು. ಅಷ್ಟಲ್ಲದೆ ನಮ್ಮ ಸಾಹಿತ್ಯರಾಶಿಯನ್ನು ನಮ್ಮ ಜನಕ್ಕೇ ಪರಿಚಯಿಸುವಾಗ ಸಹೃದಯತೆಯಿಂದ, ಸಹಾನುಭೂತಿಯಿಂದ ಕೂಡ ನೋಡುವ ಅಗತ್ಯವೂ ಆಗಿತ್ತು. ಯಾಕೆಂದರೆ ನವೋದಯ ಲೇಖಕರು ಕನ್ನಡವನ್ನು ಪುನರುಜ್ಜೀವನಗೊಳಿಸುವ, ಜನತೆಯಲ್ಲಿ ಸದಭಿರುಚಿ ಬೆಳೆಸುವ ಕಾರ್ಯದಲ್ಲಿ ತನ್ಮಯರಾಗಿದ್ದರು.

ನವೋದಯ ಸಂಶೋಧಕರು, ಸಂಪಾದಕರು, ಶಾಸ್ತ್ರಾಭ್ಯಾಸಿಗಳು, ಕಾವ್ಯಾಭ್ಯಾಸಿಗಳು ಸ್ವತಃ ಕವಿಗಳಾದವರೂ ಕೂಡ ಕನ್ನಡ ಸಾಹಿತ್ಯವನ್ನು ವ್ಯಾಪಕವಾಗಿ ಅಧ್ಯಯನ ಮಾಡಿದವರಾಗಿದ್ದರು. ಸಂಸ್ಕೃತ, ಇಂಗ್ಲಿಷ್‌ಗಳನ್ನು ಚೆನ್ನಾಗಿಯೇ ಓದಿಕೊಂಡಿದ್ದ ಅವರು ಆ ಆ ಸಾಹಿತ್ಯದ ಮೌಲ್ಯಮಾಪನ ಮಾಡುವ ಸಾಮರ್ಥ್ಯವನ್ನು ಹೊಂದಿದ್ದರು. ಕನ್ನಡ ಇತಿಹಾಸ, ಸಂಸ್ಕೃತಿ, ಕಾಲಕಾಲಕ್ಕಾದ ಬದಲಾವಣೆ ಇತ್ಯಾದಿಗಳನ್ನು ಸಮಗ್ರವಾಗಿ, ತಲಸ್ಪರ್ಶಿಯಾಗಿ ಕೂಡ ಅವರು ತಿಳಿದುಕೊಂಡಿದ್ದರು. ಅವರ ಯಾವ ಬರವಣಿಗೆಯೂ ತಾತ್ಕಾಲಿಕ ದೃಷ್ಟಿಯುಳ್ಳದ್ದಾಗಿರಲಿಲ್ಲ. ಒಂದು ಕ್ಷೇತ್ರದಲ್ಲಿ ಪ್ರಮುಖವಾಗಿ ಕೆಲಸ

ಮಾಡುತ್ತಿದ್ದರೂ ಅವರು ಸಾಹಿತ್ಯದ ಇತರ ಕ್ಷೇತ್ರಗಳನ್ನು ತುಂಬಾ ಆಸಕ್ತಿಯಿಂದಲೇ ಗಮನಿಸುತ್ತಿದ್ದರು. ಸಾಧ್ಯವಿದ್ದಷ್ಟೂ ಕ್ಷೇತ್ರಗಳಲ್ಲಿ ಕೆಲಸಮಾಡುವ ಹಂಬಲವುಳ್ಳವರಾಗಿದ್ದರು. ಉದಾ : ೧) ಮಂ. ಗೋವಿಂದ ಪೈಯವರು ಮೂಲಭೂತವಾಗಿ ಸಂಶೋಧಕರು. ಕವಿಗಳಾಗಿಯೂ ಅವರ ಪ್ರಸಿದ್ಧಿಯಿದೆ. ಅಷ್ಟೇ ಅಲ್ಲ 'ಗೊಲ್ಗೊಥಾ', 'ವೈಶಾಖಿ'ಯಂಥ ನೀಳ್ಗವಿತೆಗಳನ್ನು ಬರೆದು ಹೊಸ ಕಾಣ್ಕೆಗಳನ್ನು ನೀಡಿದ್ದಾರೆ. ೨) ಮಾಸ್ತಿ ವೆಂಕಟೇಶ ಅಯ್ಯಂಗಾರ್ಯರು ಸಣ್ಣಕತೆಯ ಜನಕರು. ಹಾಗಿದ್ದರೂ ಕವಿಗಳು, ಕಾದಂಬರಿಕಾರರು, ವಿಮರ್ಶಕರೂ ಕೂಡ. ಹೀಗೆಯೇ ಕುವೆಂಪು, ಬೇಂದ್ರೆ, ರಾಜರತ್ನಂ ಮೊದಲಾದವರ ವೈವಿಧ್ಯಪೂರ್ಣ ಸಾಹಿತ್ಯ ನಮ್ಮೆದುರಿಗಿದೆ.

ಎಲ್ಲ ಸೃಜನಶೀಲ ಸಾಹಿತ್ಯದ ಜೊತೆ ಜೊತೆಗೆ ಈ ಕಾಲದಲ್ಲಿ ಬೆಳೆದು ಬಂದದ್ದು ವಿಮರ್ಶಾ ಸಾಹಿತ್ಯ. 'ಇಂಗ್ಲಿಷ್ ಗೀತ'ಗಳನ್ನು ಪ್ರಕಟಿಸಿ ಹೊಸಗನ್ನಡ ಕಾವ್ಯಕ್ಕೆ ಚಾಲನೆ ನೀಡಿದ ಬಿ. ಎಂ. ಶ್ರೀ ಅವರೇ ವಿಮರ್ಶಾಸಾಹಿತ್ಯಕ್ಕೂ ಆಚಾರ್ಯಪುರುಷರೆಂದು ಹೇಳಬಹುದು. ಅವರು ಪಂಪ, ರನ್ನ, ನಾಗಚಂದ್ರ, ಕುಮಾರವ್ಯಾಸ ಮೊದಲಾದ ಕವಿಗಳನ್ನು ಕುರಿತು ಬರೆದ ಲೇಖನಗಳು – ಅವು ಮುನ್ನುಡಿ ರೂಪದಲ್ಲಿದ್ದರೂ – ಕಾವ್ಯಾವಲೋಕನಕ್ಕೆ, ಕಾವ್ಯಸಮೀಕ್ಷೆಗೆ ದಾರಿಮಾಡಿಕೊಡುತ್ತವೆ. 'ರನ್ನಪ್ರಶಸ್ತಿ'ಗೆ ಮುನ್ನುಡಿ ಬರೆಯುವಾಗ ಪ್ರಾರಂಭದಲ್ಲಿಯೇ ಶ್ರೀ ಅವರು ಹೇಳಿದ ಮಾತನ್ನಿಲ್ಲಿ ಗಮನಿಸಬೇಕು. "ಕನ್ನಡ ಕಾವ್ಯರಾಶಿಯನ್ನು ಹೊರಕ್ಕೆ ತಂದು ಹೆಮ್ಮೆಪಟ್ಟುದಾಯಿತು. ಈಗ ಬೇಕಾಗಿರುವುದು ಅದರ ಯೋಗ್ಯತೆಯನ್ನು ಗೊತ್ತುಮಾಡುವ ವಿಮರ್ಶೆ. ಜಳ್ಳನ್ನು ತೂರಿ, ಕಾಳನ್ನು ತುಂಬಿಕೊಳ್ಳಬೇಕಾಗಿದೆ ಈಗ ಸಾಹಿತ್ಯ ಕಲಾಪುತ್ರರ ಆತ್ಮಪುಷ್ಟಿಗಾಗಿ" ರನ್ನನ ವಿಷಯವಾಗಿ ಪ್ರಸ್ತಾಪಿಸುತ್ತ "ರನ್ನನನ್ನು ನಿಲ್ಲಿಸಿ ಪ್ರಶ್ನೆ ಮಾಡಿ, ಪರೀಕ್ಷೆ ಮಾಡಿ" ಎಂದೂ ಅವರು ಹೇಳಿದ್ದು, ವಸ್ತುನಿಷ್ಠ ವಿಮರ್ಶೆ ನಮ್ಮ ಕಾವ್ಯದ ಬಗ್ಗೆ ಆಗಬೇಕೆಂಬ ಧೋರಣೆಯುಳ್ಳದ್ದಾಗಿದೆ.

ಈ ಬಗೆಯ ಧೋರಣೆ ಎಷ್ಟರ ಮಟ್ಟಿಗೆ ಕಾರ್ಯರೂಪಕ್ಕೆ ಬಂದಿತೆಂಬುದು ಆಲೋಚಿಸಬೇಕಾದ ಒಂದು ಪ್ರಶ್ನೆಯಾಗಿದೆ. ಕುವೆಂಪು, ರನ್ನನನ್ನು ಕುರಿತು ಮಾಡಿದ ವಿಮರ್ಶೆಯಲ್ಲಿ, ತೀ. ನಂ. ಶ್ರೀ ಅವರು ಪಂಪನ ವಿಕ್ರಮಾರ್ಜುನೀಯವನ್ನು ಕುರಿತು ಮಾಡಿದ ಒಂದು ಸಮೀಕ್ಷೆಯಲ್ಲಿ, ಎಸ್. ವಿ. ರಂಗಣ್ಣವರ 'ಶೈಲಿ' ಎಂಬ ಗ್ರಂಥದಲ್ಲಿ ಅಂಥ ವಿಮರ್ಶೆಯ ಮಾತುಗಳು ನಮಗೆ ದೊರೆಯುತ್ತವೆ. ಒಬ್ಬ ಕವಿಯ ಎಲ್ಲ ಉತ್ತಮೋತ್ತಮ ಕಾಣ್ಕೆಗಳನ್ನು ಗಮನಿಸಿಯೂ ಈ ಹಿರಿಯ ಲೇಖಕರು ತಕ್ಕ ಮಟ್ಟಿಗೆ ವಸ್ತನಿಷ್ಠವಾಗಿ ವಿಮರ್ಶೆ ಮಾಡಿದ್ದನ್ನು ನಾವು ಮರೆಯುವಂತಿಲ್ಲ. ಉದಾಹರಣೆಗಾಗಿ ಕುವೆಂಪು ಅವರು 'ಶಕ್ತಿಕವಿ ರನ್ನ' ಎಂಬ ಲೇಖನದಲ್ಲಿ ಪಂಪನ ಕಾವ್ಯದೊಂದಿಗೆ ರನ್ನನನ್ನು ತೂಗಿನೋಡುತ್ತ "ನೆರೆಯ

ಸಿರಿಮನೆಯಿಂದ ಎರವು ತಂದು ಸಿಂಗರಿಸಿದ ಬಡಮನೆಯ ಮದುಮಗಳಂತೆ ಕಾಣಿಸಿಕೊಳ್ಳುತ್ತಾನೆ ರನ್ನ ! ಓಹೊ ಈ ರೇಖೆಯ ವಿನ್ಯಾಸ ಅವನದಲ್ಲ; ಆ ಬಣ್ಣದ ಹೊಳಪು ಸಾಲದ ಸಿರಿ. ಈ ಸಂವಿಧಾನ ಕೃತಿಚೌರ್ಯವಲ್ಲದಿದ್ದರೂ ತತ್ಸದೃಶ; ಆ ಪ್ರತಾಪದ ಶಕ್ತಿ ತನ್ನದಾದರೂ ಉಕ್ತಿ ತನ್ನದಲ್ಲ. ಈ ಉಪಮೆ ಚರ್ವಿತ ಚರ್ವಣ. ಆ ರೂಪಕ ಸಂಪ್ರದಾಯದ್ದು. ಇಲ್ಲಿ ಪೂರ್ವಕವಿಯ ರೀತಿಯಿದ್ದರೂ ಅಲ್ಲಿರುವ ಧ್ವನಿಯಿಲ್ಲ. ಅಲ್ಲಿ ಅಕ್ಷರಾಡಂಬರವಿದ್ದರೂ ಪಂಪನ ಗುಣ್ಪಿಲ್ಲ. ಓಹೊ ಇಷ್ಟೆಯೇ ಈ ರನ್ನ ? ನವಿಲಿನ ಪುಕ್ಕ ಸಿಕ್ಕಿಸಿಕೊಂಡ ಕೆಂಬೂತ ! ಪೆಂಪೆಲ್ಲ ಪಂಪನದು: ಹೆಸರಿಗೆ ರನ್ನ..... ! ಲೌಕಿಕ ಕಾವ್ಯದಲ್ಲಿ ಹೇಗೋ ಹಾಗೆ ಆಗಮಿಕ ಕಾವ್ಯದಲ್ಲಿಯೂ ರನ್ನ ಪಂಪನ ಅನುಚರ. ಅಲ್ಲಿಯಂತೂ ಇಲ್ಲಿಗಿಂತ ಕೀಳೆ ! 'ಆದಿಪುರಾಣ'ದ ಆನೆಯ ಮುಂದೆ 'ಅಜಿತಪುರಾಣ'ದ ಆಡೆ ?'' ಎಂದಿರುವುದು ನಿರ್ದುಷ್ಟ ವಿಮರ್ಶೆಯ ಒಂದು ಮಾದರಿಯಾಗಿದೆ. ವಿಮರ್ಶೆಯ ಭಾಷೆಯಲ್ಲಿ ಕಾವ್ಯಾತ್ಮಕ ಗುಣವಿರುವುದು ಮಾತ್ರ ಕುವೆಂಪು ಅವರ ವೈಶಿಷ್ಟ್ಯವನ್ನು ಎತ್ತಿತೋರಿಸುತ್ತದೆ. ಈ ಬರವಣಿಗೆಯನ್ನು ಸೃಜಶೀಲ ವಿಮರ್ಶೆಯೆಂದೂ ಹೇಳಬಹುದು. ''ವಿಷಯ, ವಸ್ತು, ಸಂವಿಧಾನಗಳಿಗೆ ಅವನು ಅನ್ಯರಿಗೆ ಋಣಿಯಾಗಿರಬಹುದು, ಆದರೆ ಕೃತಿಯಲ್ಲಿ ಎಲ್ಲೆಲ್ಲಿಯೂ ಪ್ರವಹಿಸುತ್ತಿರುವ 'ಶಕ್ತಿ' ಅವನ ಸ್ವಂತ ವ್ಯಕ್ತಿತ್ವದ ತಪೋ ಗಭಸ್ತಿ'' ಎಂದು ಕುವೆಂಪು ಅವರು ರನ್ನನ ಶಕ್ತಿಸಂಪನ್ನತೆಯನ್ನು ಎತ್ತಿತೋರಿಸುವಾಗ, ಅವನ ವ್ಯಕ್ತಿತ್ವದ ಇನ್ನೊಂದು ಮುಖ ಗೋಚರವಾಗುತ್ತದೆ. ಇಂಥ ವಿಮರ್ಶಾ ವಿಚಕ್ಷಣತೆ ನಮ್ಮ ಪೂರ್ವದ ವಿದ್ವಾಂಸರಲ್ಲಿರುವುದು ಒಂದು ವಿಶೇಷ. ಹಾಗಿದ್ದರೂ ಅಂದಿನ ವಿಮರ್ಶೆ ಪ್ರಶಂಸಾಪರವಾಗಿತ್ತೆಂಬುದನ್ನು ಅಲ್ಲಗಳೆಯುವಂತಿಲ್ಲ. ಪ್ರಾಚೀನ ಕಾವ್ಯಗಳನ್ನು ಉಪಲಬ್ಧಗೊಳಿಸುವುದು, ಅವುಗಳ ಅಧ್ಯಯನದಲ್ಲಿ ಆಸಕ್ತಿ ಹುಟ್ಟುವಂತೆ ಮಾಡುವುದು ಅಂದಿನ ವಿದ್ವಾಂಸರ ಮಹತ್ವದ ಕಾರ್ಯವಾಗಿತ್ತು. ಅದನ್ನು ಅವರು ನಿಷ್ಠೆಯಿಂದ ಮಾಡಿದರೆಂದು ಬೇರೆ ಹೇಳಬೇಕಾಗಿಲ್ಲ. ಯಾಕೆಂದರೆ ಅವರ ನಿಷ್ಠೆ ಅನನ್ಯವಾದದ್ದೇ ಆಗಿತ್ತು.

ಪ್ರಾಚೀನ ಕಾವ್ಯಕೃತಿಗಳ ಸಂಪಾದನಾ ಕಾರ್ಯಮಾಡಿದ ಪ್ರತಿಯೊಬ್ಬರೂ ಅಭ್ಯಾಸಪೂರ್ಣವಾದ, ಶಾಶ್ವತವಾಗಿ ನೆನಪಿಡುವಂಥ ಪ್ರಸ್ತಾವನೆಗಳನ್ನು ಬರೆದಿದ್ದುದರಲ್ಲಿ ವಿಮರ್ಶೆಯ ದೃಷ್ಟಿಕೋನವಿರುವುದನ್ನು ಕಾಣಬಹುದು. ಪಾಂಡಿತ್ಯಪೂರ್ಣವಾಗಿಯೂ, ವಿಮರ್ಶಾತ್ಮಕವಾಗಿಯೂ ಪ್ರಸ್ತಾವನೆಗಳನ್ನು ಬರೆದವರಲ್ಲಿ ಪ್ರೊ. ಶಿ. ಶಿ. ಬಸವನಾಳರು ಎದ್ದುಕಾಣುತ್ತಾರೆ. 'ಪ್ರಭುಲಿಂಗ ಲೀಲೆ', 'ಬಸವಣ್ಣನವರ ಷಟ್‌ಸ್ಥಲ ವಚನಗಳು' ಗ್ರಂಥಗಳಿಗೆ ಬರೆದ ಅವರ ಪ್ರಸ್ತಾವನೆಗಳು ಅತ್ಯಂತ ಮೌಲಿಕವಾಗಿವೆ. ಆ ಆ ಗ್ರಂಥಗಳ ವಿಶೇಷತೆಯನ್ನು, ಹಿರಿಮೆಯನ್ನು ಎತ್ತಿತೋರಿಸುವಾಗ ಅತ್ಯಂತ ಸಂಯಮದಿಂದ, ಸಮತೂಕದಿಂದ ಬರೆಯುವ ಬಸವನಾಳರು ಖಚಿತವಾದ ಅಭಿಪ್ರಾಯಗಳನ್ನು ನೀಡುತ್ತಾರೆ.

'ಬಸವಣ್ಣನವರ ಷಟ್‌ಸ್ಥಲ ವಚನಗಳು' ಎಂಬ ಗ್ರಂಥದ ಪ್ರಸ್ತಾವನೆಯಲ್ಲಿ ವಚನ ಸಾಹಿತ್ಯದ ವಿಶೇಷತೆಯನ್ನು ಎತ್ತಿತೋರಿಸುವ ಮಾತು ಉಲ್ಲೇಖನೀಯವಾಗಿದೆ; "ಕನ್ನಡ ಸಾಹಿತ್ಯದ ಒಂದು ವಿಶಿಷ್ಟವಾದ, ಬಹು ಅಮೂಲ್ಯವಾದ ಭಾಗವೆಂದರೆ ವಚನಸಾಹಿತ್ಯ. ಈ ಬಗೆಯ ಸಾಹಿತ್ಯದಂತಹ ಉದಾಹರಣೆಗಳು ವಿರಳವಾಗಿ, ಕ್ವಚಿತ್ತಾಗಿ, ಬಿಡಿಬಿಡಿಯಾಗಿ ಒಂದೆರಡು ಇತರ ಭಾಷೆಗಳಲ್ಲಿ ಸಿಕ್ಕಬಹುದಾದರೂ ವಚನಗಳು ಸಾಹಿತ್ಯದ ಒಂದು ಪ್ರಕಾರವಾಗಿ ನೇರ್ಪಟ್ಟದ್ದು ಕನ್ನಡದಲ್ಲಿಯೇ ಎಂದು ನಿಸ್ಸಂದೇಹವಾಗಿ ಹೇಳಬಹುದು. ಅಂತೆಯೇ, ವಚನಸಾಹಿತ್ಯವು ಕನ್ನಡ ನುಡಿಯು ವಿಶ್ವಸಾಹಿತ್ಯಕ್ಕೆ ಕೊಟ್ಟ ಅಪೂರ್ವ ಕಾಣಿಕೆಯೆಂದು ಕನ್ನಡಿಗರು ಹೆಮ್ಮೆಪಡಬಹುದಾಗಿದೆ." ಕನ್ನಡ ಸಾಹಿತ್ಯದ ಚರಿತ್ರೆ ಬರೆಯುವವರೆಲ್ಲ ಈ ಮಾತನ್ನು ಯಥಾವತ್ತಾಗಿ ಸ್ವೀಕರಿಸಿದ್ದುಂಟು. ಸಂಶೋಧಕರೂ, ಸಂಪಾದಕರೂ ಆಗಿದ್ದ ಶಿ. ಶಿ. ಬಸವನಾಳರು ತಮ್ಮ ವಿಮರ್ಶನ ಶಕ್ತಿಯನ್ನು ಇನ್ನುಳಿದ ಗ್ರಂಥಗಳಲ್ಲಿ ಪ್ರಕಟಿಸಿದ್ದೂ ಕಂಡುಬರುತ್ತದೆ. ಮೈಲಾರ ಬಸವಲಿಂಗಶರಣರ ಕೃತಿಗಳನ್ನು ಪರಾಮರ್ಶಿಸಿದ ಅವರು ಬಸವಲಿಂಗಶರಣರ ಒಂದು ಕೃತಿಯಲ್ಲಿ ಬಂಧ ಶೈಥಿಲ್ಯವಿರುವುದನ್ನು ಗುರುತಿಸಿದ್ದಾರಲ್ಲದೆ, ನಿಜಗುಣಶಿವಯೋಗಿಗಳ ಮತ್ತು ಸರ್ಪಭೂಷಣ ಶಿವಯೋಗಿಗಳ ಶೈಲಿಯೊಂದಿಗೆ ತೂಗಿನೋಡಿದ್ದಾರೆ. ಅವರ ಆ ವಿಮರ್ಶೆಯ ಮಾತುಗಳು ಹೀಗಿವೆ :

೧) ".... ಲಿಂಗಪೂಜಾ ವಿಧಾನದಲ್ಲಿ ಕಂದದ ಛಂದಸ್ಸು ಬಳಸಲ್ಪಟ್ಟಿದ್ದರೂ, ಛಂದಸ್ಸಿನ ದೃಷ್ಟಿಯಿಂದ ಬಂಧವು ಬಹಳ ಶಿಥಿಲವಾಗಿದೆ. "ಪನ್ನೆರಡು ಮಾತ್ರೆ ಮೊದಲೊಳ್ ಸನ್ನುತಮಿಪ್ಪತ್ತು ಮಾತ್ರೆ ಎರಡನೆ ಕಡೆಯೊಳ್" ಎಂಬ ಲಕ್ಷಣವನ್ನು ಮಾತ್ರ ಗ್ರಹಿಸಿದಂತೆ ಕಂಡುಬರುತ್ತದೆ. ಇನ್ನಿತರ ಕಂದದ ಲಕ್ಷಣಗಳಾಗಲಿ, ಗಣವಿಭಾಗಗಳಾಗಲಿ, ಕಂದಾರ್ಧದ ಕೊನೆಯ ಅಕ್ಷರ ಲಘುವಾಗಿದ್ದರೂ ಗುರುವೆಂದು ಗ್ರಹಿಸಬೇಕೆಂಬ ನಿಯಮವಾಗಲಿ ಪಾಲಿಸಿದಂತೆ ಕಾಣುವದಿಲ್ಲ. ಮೇಲಾಗಿ ಮಾತ್ರೆಗಳ ಸಂಖ್ಯೆಯೂ ಅಲ್ಲಲ್ಲಿ ತಪ್ಪುತ್ತದೆ" ಇದು ಛಂದಶ್ಶಾಸ್ತ್ರ ದೃಷ್ಟಿಯ ವಿಮರ್ಶೆ.

೨) "ಹಾಡುಗಬ್ಬವಾದ ಶಿವಾನುಭವ ದರ್ಪಣದಲ್ಲಿ ಕವಿ ಬಳಸಿದ ಶೈಲಿ ನಿಜಗುಣಶಿವಯೋಗಿಗಳಂತೆ ಪಾಂಡಿತ್ಯ ಪ್ರೌಢಶೈಲಿಯಾಗಲಿ, ಸರ್ಪಭೂಷಣ ಶಿವಯೋಗಿಗಳಂತಹ ಸವಿ ಸೊಬಗಿನ ಶೈಲಿಯಾಗಲಿ ಅಲ್ಲವಾದರೂ ಭಾವಗರ್ಭಿತವಾಗಿದೆ" ಇದು ಅಭಿವ್ಯಕ್ತಿ ಸಾಮರ್ಥ್ಯವನ್ನು ಸೂಚಿಸುವ ವಿಮರ್ಶೆ.

ಹೀಗೆ ನವೋದಯ ಸಾಹಿತ್ಯ ವಿಮರ್ಶೆ ಪ್ರಾಚೀನ ಕಾವ್ಯಾಭ್ಯಾಸದ ಹಿನ್ನೆಲೆಯಲ್ಲಿ ರೂಪಗೊಳ್ಳುತ್ತ, ಸಮಕಾಲೀನ ಸಾಹಿತ್ಯವನ್ನು ತನ್ನ ತೆಕ್ಕೆಗೆ ಒಳಪಡಿಸಿಕೊಳ್ಳುವುದರ ಕಡೆಗೆ ಸಾಗಿದ್ದುದನ್ನು ನಾವು ಕಾಣುತ್ತೇವೆ. ಆ ಕಾಲದಲ್ಲಿ ಹಿರಿಯ ವಿದ್ವಾಂಸರೂ ಮಹತ್ವದ ಕವಿಗಳೂ ವಿಮರ್ಶಾಕ್ಷೇತ್ರದಲ್ಲಿ ಕಾರ್ಯ ಮಾಡಿದ್ದರಿಂದ ಅದಕ್ಕೊಂದು ಭದ್ರ ಬುನಾದಿ ದೊರಕಿತೆಂದು ಹೇಳಬಹುದು.

ಅವರ ವಿಮರ್ಶೆ ಒಂದು ನಿಟ್ಟಿನಿಂದ ಸೈದ್ಧಾಂತಿಕವೂ ಆಗಿತ್ತು. ಇನ್ನೊಂದು ನಿಟ್ಟಿನಿಂದ ಕೃತಿಪರೀಕ್ಷೆಯೂ ಆಗಿತ್ತು.

ಬೇಂದ್ರೆ, ಗೋಕಾಕ, ಮುಗಳಿ ಇವರೆಲ್ಲ ಕವಿಗಳಾಗಿದ್ದುಕೊಂಡೇ ವಿಮರ್ಶಾಕ್ಷೇತ್ರಕ್ಕೆ ಬಂದವರು. ಬೇಂದ್ರೆಯವರ ಮಾಂತ್ರಿಕಶಕ್ತಿ, ಸಾಹಿತ್ಯ, ಕಾವ್ಯ, ರಸ, ಆನಂದ ಮುಂತಾದವುಗಳನ್ನು ಕುರಿತು ಆಲೋಚಿಸುವಾಗಲೂ ವಿಮರ್ಶೆ ಪ್ರಕಟಗೊಳ್ಳುತ್ತದೆ. ಅನೇಕ ಕಡೆಗಳಲ್ಲಿ ಅವರ ಗದ್ಯ, ಕಾವ್ಯದ ಗಂಧವನ್ನು ಪಡೆದುಕೊಳ್ಳುತ್ತದೆ. ಈ ಮಾತು ಕುವೆಂಪು ಅವರಿಗೂ ಅನ್ವಯವಾಗುತ್ತದೆ. ಆದರೆ ಅವರದು ದರ್ಶನವಿಮರ್ಶೆಯಾಗಿ ಹೊಸತೊಂದನ್ನು ಕಂಡುಕೊಳ್ಳುತ್ತದೆ. ಬೇಂದ್ರೆಯವರ ಕಾವ್ಯಾತ್ಮಕ ವಾಕ್ಯಗಳು ಪಾತರಗಿತ್ತಿ ಪಕ್ಕದ ಚೆಲುವಿನೊಂದಿಗೆ ನಕ್ಷತ್ರಗಳ ಮಿಂಚಾಗಿಯೂ ಆಕರ್ಷಣೀಯವಾಗುತ್ತವೆ. ಕಾವ್ಯಮೀಮಾಂಸೆಯ ವಲಯಕ್ಕೆ ಸೇರಿದ ವಿಚಾರಗಳನ್ನೂ ಅವರು ಸೊಗಸಾಗಿಯೇ ಹೇಳುತ್ತಾರೆ. ಬೇಂದ್ರೆಯವರು ಕಾವ್ಯದ ಬಗೆಗೆ ಹೇಳುವ ಈ ಮಾತುಗಳನ್ನು ಗಮನಿಸಬೇಕು : "ಎದೆ ತೆರೆದು ಯಾವ ಕಾವ್ಯವನ್ನೂ ಕೇಳಿದರೆ ಇಂಪಿಗೆ ಕಿವಿ ಸೋಲುವುದು, ಬಣ್ಣನೆಗೆ ಕಣ್ಣರಳುವವು; ತಾಳ ಲಯಕ್ಕೆ ಪ್ರಾಣ ಕುಣಿಯುವುದು; ಅದರ ಕೊಂಕಿಗೆ, ವ್ಯಂಜನೆಗೆ, ಧ್ವನಿಗೆ ಮೈಮರೆಯುವುದು, ಮನವು ಉನ್ಮನವಾಗುವುದು, ಜೀವ ನೀರು ಕಡೆಯುವುದು, ಹಳೆಯದಿರಲಿ, ಹೊಸದಿರಲಿ ಹೀಗೆ ಮಾಡಬಲ್ಲುದೆಲ್ಲ ಕಾವ್ಯವೇ." ಇಲ್ಲಿಯ ಲಯಬದ್ಧ ಬರವಣಿಗೆ ಗಮನಸೆಳೆಯುತ್ತದೆ.

'ಕವಿಯ ಕಾರ್ಯ'ವನ್ನು ಕುರಿತು ಒಂದೆಡೆಯಲ್ಲಿ ಪ್ರಸ್ತಾಪಿಸುತ್ತ ವರ್ಣಕ, ವಸ್ತುಕ ಮತ್ತು ಭಾವಗೀತಗಳ ವಿಶೇಷತೆಯನ್ನು ಬೇಂದ್ರೆಯವರು ಗುರುತಿಸಿದ್ದು ಒಂದು ವಿಶಿಷ್ಟ ವಿಚಾರವಾಗಿದೆ. ಅವರು ಬರೆಯುತ್ತಾರೆ : "ವರ್ಣಕ ಕಾವ್ಯಗಳಲ್ಲಿ ವಸ್ತುಜಾತದೊಳಗಿನ ತೇಜೋಂಶವನ್ನೂ, ವಸ್ತುಕ ಕಾವ್ಯಗಳಲ್ಲಿ ಶೀಲಕಾರ್ಯಗಳೊಳಗಿನ ಊರ್ಜಿತ ತತ್ತ್ವವನ್ನೂ, ಭಾವಗೀತಗಳಲ್ಲಿ ವಿರಾಟಪುರುಷನ ಅಂತಃಕರಣದೊಳಗಿನ ಶ್ರೀಮತ್ತಾದ ವಿಭೂತಿಯುತ ಸತ್ವವನ್ನೂ ಕವಿಯು ಆಸ್ವಾದಾನುಕೂಲವನ್ನಾಗಿ ಮಾಡುವುದು ಭವಸಾಗರವನ್ನು ಮಂಥನ ಮಾಡಿ ರಸಾಮೃತವನ್ನು ಹೊರದೆಗೆಯುವುದೇ ಕವಿಯ ದೇವಕಾರ್ಯ." ಇದು ಬೇಂದ್ರೆ ದೃಷ್ಟಿ, ತತ್ವಚಿಂತನ ಮತ್ತು ಕಾವ್ಯಮಂಥನ. ತಮ್ಮದೇ ಆದ ರೀತಿಯಿಂದ ಕವಿಗಳನ್ನು, ಕಾವ್ಯವನ್ನು ನೋಡುತ್ತ ಬಂದ ಬೇಂದ್ರೆಯವರು ಕಾವ್ಯದ ಬಗೆಗಿನ ಚಿಂತನೆ ತಮ್ಮ ಕಾಲದಲ್ಲಿ ಪ್ರಾಚೀನ ಕಾಲಕ್ಕಿಂತ ಭಿನ್ನವಾಗಿರುವುದನ್ನು ಅರಿತವರಾಗಿದ್ದಾರೆ. "ವೈಯಾಕರಣಿಗಳೂ ತತ್ತ್ವಜ್ಞರೂ ತತ್ತ್ವಜಿಜ್ಞಾಸುಗಳೂ ಕಾವ್ಯವಿಮರ್ಶೆ ಮಾಡುವ ಯುಗವು ಬಂದಿದೆ" ಎಂದು ಒಂದೆಡೆಯಲ್ಲಿ ಅವರು ಸ್ಪಷ್ಟವಾಗಿಯೇ ಹೇಳಿದ್ದಾರೆ.

'ಕಾವ್ಯದ ಗೊತ್ತು ಗುರಿ'ಗಳನ್ನು ಗುರುತಿಸಿದ ವಿ. ಕೃ. ಗೋಕಾಕ, ಕನ್ನಡ ಸಾಹಿತ್ಯ ಚರಿತ್ರೆಯನ್ನು ಪ್ರಥಮಬಾರಿಗೆ ಸಮಗ್ರವಾಗಿ ಅವಲೋಕಿಸಿದ ರಂ. ಶ್ರೀ. ಮುಗಳಿಯವರರು ವಿಮರ್ಶೆಯಲ್ಲಿ ತುಳಿದ ದಾರಿ ಸಾಮಾನ್ಯವಾದುದೇನೂ ಆಗಿಲ್ಲ.

ಇವರಿಬ್ಬರು ನಮ್ಮ ಕಾವ್ಯಮೀಮಾಂಸೆಯ ಜೊತೆಗೆ ಪಾಶ್ಚಾತ್ಯ ವಿಮರ್ಶಾ ಸಿದ್ಧಾಂತಗಳನ್ನೂ ಬಲ್ಲವರು. ಅದರಿಂದಾಗಿ ಇವರ ವಿಮರ್ಶೆ ಹೆಚ್ಚು ಅರ್ಥಪೂರ್ಣವಾಗುತ್ತದೆ. ಇವರಿಬ್ಬರಲ್ಲಿ ಒಂದು ವ್ಯತ್ಯಾಸವೆಂದರೆ, ಗೋಕಾಕರದು ಸೈದ್ಧಾಂತಿಕ ವಿಮರ್ಶೆ, ಮುಗಳಿಯವರದು ಚಾರಿತ್ರಿಕ ವಿಮರ್ಶೆ. ಮುಗಳಿಯವರ 'ಕನ್ನಡ ಸಾಹಿತ್ಯ ಚರಿತ್ರೆ' ಒಂದು ಮಹತ್ವದ ಕೊಡುಗೆಯಾಗಿರುವಂತೆ ಅವರ 'ಪ್ರಾಚೀನ ಕನ್ನಡ ಕಾವ್ಯರೂಪಗಳು' ಕೂಡ ಒಂದು ಮೈಲುಗಲ್ಲಾಗಿದೆ.

ಈ ಸಂದರ್ಭದಲ್ಲಿ ಬಹುದೊಡ್ಡ ಚಿಂತಕರಾದ, ಶಿಸ್ತಿನ ಹಾಗೂ ತೂಕದ ವಿಮರ್ಶೆ ನೀಡಿದ ತೀ. ನಂ. ಶ್ರೀಕಂಠಯ್ಯನವರ ಕೊಡುಗೆಯನ್ನು ನೆನೆಯಲೇಬೇಕಾಗುವುದು. ಅವರ 'ಕಾವ್ಯಸಮೀಕ್ಷೆ', 'ಸಮಾಲೋಕನ' ಹೊಸಗನ್ನಡ ಸಾಹಿತ್ಯ ವಿಮರ್ಶೆಗೆ ಒಂದು ದಿಕ್ಕನ್ನು ತೋರಿಸುತ್ತವೆ. 'ಗರಿ' 'ಸಖೀಗೀತ'ಗಳನ್ನು ಕುರಿತು ಬರೆದ ವಿಮರ್ಶೆಯಲ್ಲಿ ಹೊಸಗನ್ನಡ ಕಾವ್ಯದ ನರನಾಡಿಗಳನ್ನು ಗುರುತಿಸುವ ರಸಜ್ಞತೆಯಿದ್ದರೆ, 'ಕೆರೆಗೆ ಹಾರ' ಜನಪದ ಕಾವ್ಯದ ಪ್ರಾಯೋಗಿಕ ವಿಮರ್ಶೆಯಲ್ಲಿ ವಿಚಕ್ಷಣತೆಯಿದೆ. ಇನ್ನೂ ಪ್ರಾಯೋಗಿಕ ವಿಮರ್ಶೆ ರೂಪುಗೊಳ್ಳದಿದ್ದ ಸಂದರ್ಭದಲ್ಲಿ ಜನಪದಗೀತವೊಂದನ್ನು ಅಷ್ಟು ವಿವರವಾಗಿ ಸಮೀಕ್ಷಿಸಿದ್ದು ಮಹತ್ವದ ಸಂಗತಿಯಾಗಿದೆ. ಸಮೀಕ್ಷೆಯ ಕೊನೆಯಲ್ಲಿ "ಈ ಕೃತಿಯ ಸೊಗಸುಗಳಲ್ಲಿ ಯಾವುದನ್ನು ವರ್ಣಿಸುವುದು, ಯಾವುದನ್ನು ಬಿಡುವುದು! ಜೀವರತ್ನಕ್ಕೆ ಇಷ್ಟೆಲ್ಲ ಪ್ರಶಂಸೆಯ ಹಂಗು ತಾನೆ ಏಕೆ ? ಅದು ಸ್ವಯಂ ಪ್ರಕಾಶದಿಂದ ಬೆಳಗಬಲ್ಲುದು. ಈ ಕೃತಿಯನ್ನು ಕಟ್ಟಿದ ಅಜ್ಞಾತ ವ್ಯಕ್ತಿ ಒಬ್ಬ ಶ್ರೇಷ್ಠಕವಿ. 'ಕೆರೆಗೆ ಹಾರ' ಕನ್ನಡಶ್ರೀಯ ಕಂಠದ ಹಾರ!" ಎಂದು ಭಾವತುಂಬಿ ಬಣ್ಣಿಸಿರುವುದು ಪ್ರಶಂಸೆಯಾಗಿ ಕಂಡರೂ ಒಂದು ವಾಸ್ತವ ಸತ್ಯವಾಗಿದೆ. ಇಂಥ ಸಹೃದಯತೆಯ ಒಳಗೇ ಸತ್ಯದ ಆವಿಷ್ಕಾರವಿರುವುದು.

ತೀ. ನಂ. ಶ್ರೀ ಅವರ 'ಭಾರತೀಯ ಕಾವ್ಯಮೀಮಾಂಸೆ' ಒಂದು ಅನರ್ಘ್ಯವಾದ ಗ್ರಂಥ. ಕಾವ್ಯ ಮೀಮಾಂಸೆ ಶಾಸ್ತ್ರೀಯವಾದ ವಿಷಯವಾಗಿದ್ದರೂ, ಶಾಸ್ತ್ರದ ಸೂತ್ರಗಳಿಗೆ ಕಿಂಚಿತ್ತೂ ಧಕ್ಕೆತಗುಲದಂತೆ ತೀ. ನಂ. ಶ್ರೀ ಅವರು ಮಾಡಿದ ವ್ಯಾಖ್ಯಾನ ಮನೋಜ್ಞವಾಗಿದೆ. ಸಾಮಾನ್ಯವಾಗಿ ಶಾಸ್ತ್ರಗ್ರಂಥಗಳು ಶುಷ್ಕವಾಗಿರುವುದೇ ಹೆಚ್ಚು. ಆದರೆ ತೀ. ನಂ. ಶ್ರೀ. ಅವರ ಪರುಷಮಣಿ ಹಸ್ತದ ಸ್ಪರ್ಶದಿಂದ ಲಕ್ಷಣಶಾಸ್ತ್ರವು ಸುವರ್ಣಕಾಂತಿಯನ್ನು ಪಡೆದಿದೆ. ಸುಂದರ ಕಾದಂಬರಿಯಂತೆ ಸರಸವಾಗಿ ಓದಿಸಿಕೊಂಡು ಹೋಗುತ್ತದೆ.

ತೀ. ನಂ. ಶ್ರೀ. ಹರಿಹರನನ್ನು ಕುರಿತು ಬರೆಯಲಿ, ಪಂಪನನ್ನು ಕುರಿತು ವಿವೇಚಿಸಲಿ, ಗದಾಯುದ್ಧವನ್ನು ಕುರಿತು ಪರಾಮರ್ಶಿಸಲಿ ಅವರದೇ ಆದ ಮುದ್ರೆ ಅದಕ್ಕಿರುತ್ತದೆ. ಸಂಪಾದನೆ, ವಿಮರ್ಶೆ, ಮೀಮಾಂಸೆ, ವ್ಯಾಕರಣ, ಛಂದಸ್ಸು ಇತ್ಯಾದಿಗಳನ್ನು ಕುರಿತು ಅವರು ವಿಪುಲವಾಗಿ ಬರೆಯದಿದ್ದರೂ ಬರೆದದ್ದೆಲ್ಲ ಚೊಕ್ಕ ಚಿನ್ನವಾಗಿದೆ.

ಕನ್ನಡ ಸಂಶೋಧಕರಲ್ಲಿ ಎದ್ದುಕಾಣುವ ಹೆಸರು ಡಿ. ಎಲ್. ನರಸಿಂಹಾಚಾರ್ಯ ಅವರದು. ಪ್ರೊ. ತೀ. ನಂ. ಶ್ರೀಕಂಠಯ್ಯ ಒಮ್ಮೆ ಹೇಳಿದ್ದರು : "ಡಿ. ಎಲ್. ಎನ್. ಅಂದರೆ ಪಾಂಡಿತ್ಯ, ಪಾಂಡಿತ್ಯ ಎಂದರೆ ಡಿ. ಎಲ್. ಎನ್." ಇದು ಉತ್ಪ್ರೇಕ್ಷೆಯಲ್ಲ. ಪ್ರಾಚೀನ ಮತ್ತು ಮಧ್ಯಕಾಲೀನ ಸಾಹಿತ್ಯ ಕುರಿತು ಸಂಶೋಧನಾತ್ಮಕ ದೃಷ್ಟಿಯಿಂದ ವಿವೇಚನೆ ಮಾಡಿದವರು ಡಿ. ಎಲ್. ಎನ್. 'ಪಂಪರಾಮಾಯಣ ಸಂಗ್ರಹ', 'ಸಿದ್ಧರಾಮ ಚರಿತ್ರ ಸಂಗ್ರಹ', 'ಸುಕುಮಾರ ಚರಿತಂ' ಸಂಪಾದಿಸಿಕೊಟ್ಟ ಅವರು ಅವುಗಳಿಗೆ ಪ್ರಶಸ್ತವಾದ ಪ್ರಸ್ತಾವನೆಗಳನ್ನು ಬರೆದಿದ್ದಾರೆ. ಅವರು 'ವಡ್ಡಾರಾಧನೆ'ಗೆ ಬರೆದ ಪೀಠಿಕೆಯಲ್ಲಿ "ಚಾವುಂಡರಾಯ ಪುರಾಣದ ಶೈಲಿಗಿಂತಲೂ ಇದರ ಶೈಲಿ ಕಡಿಮೆ ಸಂಸ್ಕೃತಮಯವಾಗಿದ್ದು, ವಿಪುಲವಾಗಿ ದೊರೆಯುವ ಈಚಿನ ನೋಂಪಿನ ಕತೆಗಳಿಗಿಂತ ಹೆಚ್ಚು ಗಂಭೀರವಾಗಿದೆ" ಎಂಬಲ್ಲಿ, "ಈ ಗ್ರಂಥದ ಗದ್ಯ ಶಕ್ತಿಯುತವಾಗಿದ್ದು ಸಂಸ್ಕೃತ ಕನ್ನಡ ಶಬ್ದಗಳನ್ನು ಸಮತೂಕದಿಂದ ಬಳಸಿಕೊಂಡಿದೆ. ಕೆಲವು ಕನ್ನಡ ಚಂಪೂಗ್ರಂಥಗಳಲ್ಲಿ ಕಾಣುವ ಸಂಸ್ಕೃತಪದಭೂಯಿಷ್ಠವಾದ ಸಾಂಪ್ರದಾಯಿಕ ಗದ್ಯಶೈಲಿಯನ್ನು ಇದು ಅನುಕರಿಸಿದೆ" ಎಂಬಲ್ಲಿ ಡಿ. ಎಲ್. ಎನ್. ಅವರ ವಿಮರ್ಶನ ಪ್ರಜ್ಞೆ ಕೆಲಸ ಮಾಡಿದ್ದನ್ನು ಕಾಣಬಹುದು. ಆಧುನಿಕ ಅಥವಾ ಹೊಸಗನ್ನಡ ಸಾಹಿತ್ಯವನ್ನು ಕುರಿತು ಅವರು ಬರೆದದ್ದು ತೀರಕಡಿಮೆ. ಕೆ. ಎಸ್. ನರಸಿಂಹಸ್ವಾಮಿ ಅವರ 'ಶಿಲಾಲತೆ'ಗೆ ಬರೆದ ಅವರ ಮುನ್ನುಡಿ ಅಪರೂಪಕ್ಕೆ ಎಂಬಂತಿದೆ.

ಕಾಲೇಜು ಹಾಗೂ ವಿಶ್ವವಿದ್ಯಾಲಯದಿಂದ ದೂರವಿದ್ದು ತಮ್ಮ ಅಸಾಧಾರಣ ವಿದ್ವತ್ತಿನಿಂದ ಕನ್ನಡ ಸಾಹಿತ್ಯದಲ್ಲಿ ವಿಮರ್ಶಕರಾಗಿಯೂ ಕಂಗೊಳಿಸಿದವರು ಡಿ.ವಿ.ಜಿ. ಅವರ 'ಜೀವನ ಸೌಂದರ್ಯ ಹಾಗೂ ಸಾಹಿತ್ಯ' ಮತ್ತು 'ಸಾಹಿತ್ಯ ಶಕ್ತಿ' ಒಂದು ಕಾಲದಲ್ಲಿ ತುಂಬ ಪ್ರಸಿದ್ಧವಾಗಿದ್ದವು. ಅವರ ಕಾವ್ಯದ, ಸಾಹಿತ್ಯದ ಹಾಗೂ ಕನ್ನಡದ ಚಿಂತನೆಗಳು ಅಭ್ಯಾಸದ ವಿಷಯಗಳಾಗಿದ್ದವು.

ಎಸ್. ವಿ. ರಂಗಣ್ಣನವರ 'ಶೈಲಿ' – ಮೂರು ಸಂಪುಟಗಳು, ವಿ. ಸೀ. ಅವರ 'ಸಾಹಿತ್ಯ ವಿಮರ್ಶೆ' ಇವೆಲ್ಲ ಮಹತ್ವದ ಕೊಡುಗೆಗಳೇ ಆಗಿವೆ. ಪ್ರೊ. ಸ. ಸ. ಮಾಳವಾಡರ 'ಕರ್ನಾಟಕ ಸಾಹಿತ್ಯ ಸಂಸ್ಕೃತಿ ದರ್ಶನ'ದಲ್ಲಿ ಸಾಹಿತ್ಯ ವಿಮರ್ಶೆಯ ಲೇಖನಗಳಿವೆ. ಹನ್ನೆರಡನೆಯ ಶತಮಾನದಿಂದ ಆರಂಭಿಸಿ ಹದಿನೇಳನೆಯ ಶತಮಾನದ ವರೆಗಿನ ಸಾಹಿತ್ಯವನ್ನು ಅವರು ಅವಲೋಕಿಸಿದ್ದು ನಮ್ಮ ಸಾಹಿತ್ಯೇತಿಹಾಸದ ಚರಿತ್ರೆಯಲ್ಲಿ ಗಮನಿಸತಕ್ಕ ಸಂಗತಿಯಾಗಿದೆ.

ಹೀಗೆ ನವೋದಯ ಕಾಲದಲ್ಲಿ ಹಲವು ವಿಮರ್ಶಕರು ಕಾರ್ಯಮಾಡಿದ್ದು, ಆ ಮುಂದಿನ ತಲೆಮಾರಿನವರಿಗೆ ಒಂದು ರಾಜಮಾರ್ಗವನ್ನು ನಿರ್ಮಿಸಿಕೊಟ್ಟಿದ್ದಾರೆ. ಎಲ್. ಎಸ್. ಶೇಷಗಿರಿರಾವ್, ಜಿ. ಎಸ್. ಶಿವರುದ್ರಪ್ಪ, ಕೀರ್ತಿನಾಥ ಕುರ್ತಕೋಟಿ, ಜಿ. ಎಸ್. ಆಮೂರ ಮುಂತಾದವರು ನವೋದಯದ ಜಾಡನ್ನೇ ಹಿಡಿದು ಬೆಳೆದಿದ್ದರೂ ತಮ್ಮ ಕಾಲದ ಸಾಹಿತ್ಯದ ತಿರುವುಗಳಲ್ಲಿ ತಮ್ಮ ಅಭಿವ್ಯಕ್ತಿಯನ್ನು ಹೆಚ್ಚು

ಮೊನಚುಗೊಳಿಸಿಕೊಂಡಿದ್ದಾರೆ. ಸಂಸ್ಕೃತಕ್ಕಿಂತ ಹೆಚ್ಚಾಗಿ ಇಂಗ್ಲಿಷ್ ವಿಮರ್ಶೆ ಇವರಿಗೆ ನೆರವು ನೀಡಿದೆ. ಈ ದ್ವಿತೀಯ ಘಟ್ಟದ ವಿಮರ್ಶಕರು ಬರವಣಿಗೆಗೆ ತೊಡಗಿದಾಗ ನಮ್ಮ ಆಧುನಿಕ ಸಾಹಿತ್ಯವೂ ಸಮೃದ್ಧವಾಗಿ ಬೆಳೆದಿತ್ತು. ಒಂದೊಂದು ಪ್ರಕಾರ –ಕಾವ್ಯ, ಕತೆ, ಕಾದಂಬರಿ, ನಾಟಕ –ಈ ಎಲ್ಲ ಸೃಜನಶೀಲ ಸಾಹಿತ್ಯ ಕುರಿತು ಪ್ರತ್ಯೇಕವಾಗಿ ಆಲೋಚಿಸುವಷ್ಟು ಸಾಹಿತ್ಯ ಬಂದಿತ್ತು. ಅಷ್ಟೇ ಅಲ್ಲ, ಮಾಸ್ತಿ, ಬೇಂದ್ರೆ, ಕುವೆಂಪು, ಕಾರಂತ, ಡಿ.ವಿ.ಜಿ., ಗೋಕಾಕ ಇವರೆಲ್ಲ ವ್ಯಕ್ತಿಗತವಾಗಿ ವಿಮರ್ಶೆಗೆ ವಸ್ತುವಾಗಿದ್ದರು. ಸೃಜನಶೀಲ ಸಾಹಿತ್ಯ ಹೊಸ ಹೊಸ ಆಯಾಮಗಳನ್ನು ಪಡೆಯುತ್ತಿರುವಂತೆ ವಿಮರ್ಶೆಯೂ ತನ್ನ ನವೀನ ಮಾನದಂಡಗಳನ್ನು ಸಿದ್ಧಪಡಿಸಿಕೊಳ್ಳಬೇಕಾಗುತ್ತದೆ.

ನವೋದಯ ಕಾಲದಲ್ಲಿ ಪ್ರಾರಂಭವಾದ ಹಾಗೂ ಬೆಳೆದ ವಿಮರ್ಶೆ ಪ್ರಗತಿಶೀಲ ಧೋರಣೆಯಲ್ಲಿ ನವ್ಯದ ಕಾಲದಲ್ಲಿ, ಬೇರೆ ಮಾರ್ಗವನ್ನೇ ತುಳಿಯಬೇಕಾಯಿತು. ಸಮಾಜವಾದೀ ವಿಮರ್ಶೆ, ಅಸ್ತಿತ್ವವಾದಿ ವಿಮರ್ಶೆ, ಮಾನಸಶಾಸ್ತ್ರೀಯ ದೃಷ್ಟಿಕೋನದ ವಿಮರ್ಶೆ ಮುಂತಾದವುಗಳು ಮುಂದಿನ ಹೆಜ್ಜೆಗಳಾದವು. ಡಾ. ಎಚ್. ತಿಪ್ಪೇರುದ್ರ ಸ್ವಾಮಿಗಳ 'ತೌಲನಿಕ ಕಾವ್ಯಮೀಮಾಂಸೆ' ಡಾ. ಜಿ. ಎಸ್. ಶಿವರುದ್ರಪ್ಪನವರ 'ಸೌಂದರ್ಯ ಸಮೀಕ್ಷೆ' ಮತ್ತು 'ಕಾವ್ಯಾರ್ಥ ಚಿಂತನ' ಪ್ರೊ. ಎಂ. ವಿ. ಇನಾಮದಾರರ 'ಪಾಶ್ಚಾತ್ಯ ಕಾವ್ಯಮೀಮಾಂಸೆ' ಇತ್ಯಾದಿ ಗ್ರಂಥಗಳು ಮುಂದಿನ ವಿಮರ್ಶಕರ ಮೇಲೆ ಒಂದಿಲ್ಲ, ಒಂದು ರೀತಿಯಿಂದ ಪ್ರಭಾವಬೀರಿದ್ದು, ನಮ್ಮಲ್ಲಿ ವಿಮರ್ಶಾ ಪರಂಪರೆ ಬೆಳೆಯುತ್ತಲೇ ಇದೆ. ಜಿ. ಎಚ್. ನಾಯಕ, ಗಿರಡ್ಡಿ ಗೋವಿಂದರಾಜ, ಡಿ. ಆರ್. ನಾಗರಾಜ, ಎಚ್. ಎಸ್. ರಾಘವೇಂದ್ರರಾವ್ –ಇವರ ವಿಮರ್ಶೆಯಲ್ಲಿ ಬೇಕಾದಷ್ಟು ಹೊಸತನವಿದೆ.

ಒಟ್ಟಂದದಲ್ಲಿ ನವೋದಯ ಸಾಹಿತ್ಯವು ಎಲ್ಲ ಬಗೆಯ ಸೃಜನಶೀಲ ಸಾಹಿತ್ಯಕ್ಕೆ ಸ್ಮರಣೀಯವಾದ ಕೊಡುಗೆಗಳನ್ನು ನೀಡಿದಂತೆ, ವಿಮರ್ಶಾ ಸಾಹಿತ್ಯಕ್ಕೂ ಉನ್ನತಮಟ್ಟದ ಕೊಡುಗೆಯನ್ನೇ ನೀಡಿದೆ. ದೀರ್ಘಕಾಲದ ಕನ್ನಡ ಸಾಹಿತ್ಯ ಚರಿತ್ರೆಯಲ್ಲಿ ಹತ್ತನೆಯ ಶತಮಾನ, ಹನ್ನೆರಡನೆಯ ಶತಮಾನ, ಹದಿನೈದನೆಯ ಶತಮಾನ ಹಾಗೂ ಹದಿನೇಳನೆಯ ಶತಮಾನ ಮಹತ್ವದ ಯುಗಗಳಾಗಿರುವಂತೆ ಈ ಇಪ್ಪತ್ತನೆಯ ಶತಮಾನವೂ ವೈವಿಧ್ಯ, ವೈಶಿಷ್ಟ್ಯ, ಮೌಲಿಕತೆ ಮೊದಲಾದ ದೃಷ್ಟಿಯಿಂದ ಅಸಾಧಾರಣ ಯುಗವೇ ಆಗಿದೆ. ಅದರಲ್ಲಿ ನವೋದಯ ಸಾಹಿತ್ಯ ಈ ಶತಮಾನದ ಶಿರೋರತ್ನದಂತಿದೆ.

• • •

# ಕನ್ನಡ ಪ್ರಗತಿಶೀಲ ಸಾಹಿತ್ಯ ಘಟ್ಟ

ಡಾ. ಎಚ್. ಎಸ್. ರಾಘವೇಂದ್ರರಾವ್

# ಕನ್ನಡ ಪ್ರಗತಿಶೀಲ ಸಾಹಿತ್ಯ ಘಟ್ಟ

ಒಂದು ಭಾಷೆಯ ಸಾಹಿತ್ಯರಚನೆಯ ಸಂದರ್ಭದಲ್ಲಿ, ಚರಿತ್ರೆಯೆನ್ನುವುದು ವರ್ತಮಾನದ ಅಗತ್ಯಗಳಿಗೆ ಅನುಗುಣವಾಗಿ ರೂಪಿತವಾಗುವ ಒಂದು ಕೃತಕನಿರ್ಮಿತಿಯೇ ವಿನಾ ಶಾಶ್ವತವೂ ನಿತ್ಯಸತ್ಯವೂ ಆದ ವಾಸ್ತವಸಂಗತಿಯಲ್ಲ. ಪ್ರತಿಯೊಂದು ಸನ್ನಿವೇಶ ಅಥವಾ ಲೇಖಕನು ಪರಂಪರೆಯನ್ನು ಕಾಣುವ, ಕಟ್ಟಿಕೊಳ್ಳುವ ರೀತಿಯು ಅವನಿಗೇ ಅನನ್ಯವಾಗಿರುತ್ತದೆ. ಸೃಜನಶೀಲ ಬರವಣಿಗೆಯಲ್ಲಿ ತೊಡಗಿಕೊಳ್ಳದ ವಿಮರ್ಶಕ ಅಥವಾ ಸಾಹಿತ್ಯಚರಿತ್ರಕಾರನ ವಿಷಯದಲ್ಲಿಯೂ ಈ ಮಾತು ಸತ್ಯದೂರವಲ್ಲ. ಒಂದು ಸನ್ನಿವೇಶವನ್ನು ವಸ್ತುನಿಷ್ಠವಾಗಿ, ಪಕ್ಷಪಾತರಹಿತವಾಗಿ ನೋಡುವೆನೆನ್ನುವ ಮಾತು ಕೂಡ ಉದ್ದೇಶದ ನೆಲೆಯಲ್ಲಿ ನಿಜವಾಗುವಂತೆ, ಬರವಣಿಗೆಯಲ್ಲಿ ಆಗುವುದಿಲ್ಲ. ಅವನ ಇಂದಿನ ಆಯ್ಕೆಗಳು ಹಾಗೂ ತಲ್ಲಣಗಳು ಹಿಂದಿನ ಚಳುವಳಿಗಳನ್ನು ಗ್ರಹಿಸುವ ಕನ್ನಡಕಗಳಾಗಿ ಪರಿಣಮಿಸಿದರೆ ಅಚ್ಚರಿಯಿಲ್ಲ. ಕಡಿಮೆ ಓದಿನ, ಮೇಲುಮೇಲಿನ ದೃಷ್ಟಿಕೋನವು ಒಂದು ಸಾಹಿತ್ಯಕ ಸನ್ನಿವೇಶದ ಬಗ್ಗೆ ಇರುವ ಗೃಹೀತಗಳನ್ನು ಒಪ್ಪಿಕೊಂಡೇ ಹೊರಡುವುದರಿಂದ ಅಂಥ ಪರಿಶೀಲನೆಯು ಮರುಮಂಡನೆ ಮಾತ್ರವಾಗಿರುತ್ತದೆ.

ಹೊಸಗನ್ನಡದ ಸಾಹಿತ್ಯಕ ಚಳುವಳಿಗಳ ಸಂದರ್ಭದಲ್ಲಿ ಯೋಚಿಸಿದಾಗ, ನವೋದಯ ಸನ್ನಿವೇಶವು ಆಮೂಲಾಗ್ರವಾದ ಪುನರವಲೋಕನಕ್ಕೆ ಒಳಗಾಯಿತೆಂದು

ತೋರುತ್ತದೆ. 'ರೊಮ್ಯಾಂಟಿಕ್ ಸಾಹಿತ್ಯ' ಎಂಬ ಹೆಸರಿನಿಂದ ಮೊದಲಾಗಿ, ಅದರ ಒಟ್ಟು ಮೌಲ್ಯಮಾಪನದವರೆಗೆ ಹಲವು ನೆಲೆಗಳಲ್ಲಿ ಇದು ಸಾಧ್ಯವಾಗಿದೆ. ಕಳೆದ ಇಪ್ಪತ್ತೈದು ವರ್ಷಗಳಲ್ಲಿ ಮುನ್ನೆಲೆಗೆ ಬಂದ ವಿಮರ್ಶಕರು ನವ್ಯದ ಸಾಧನೆಗಳನ್ನು ನಿರಾಕರಿಸದೆಯೂ ನವೋದಯದ ಹಿರಿಯರ ಕೃತಿಗಳನ್ನು ಪ್ರೀತಿ, ಗೌರವಗಳಿಂದ ಪರಿಶೀಲಿಸಿದ್ದಾರೆ. ಆದರೆ ಇದೇ ರೀತಿಯ ಅವಕಾಶವನ್ನು ಪ್ರಗತಿಶೀಲ ಲೇಖಕರಾಗಲಿ, ಅವರು ನಡೆಸಿದ ಚಳುವಳಿಯಾಗಲಿ ಪಡೆಯಲಿಲ್ಲ. ನಿರಂಜನರ ಕೆಲವು ಕಾದಂಬರಿಗಳನ್ನು ಹೊರತುಪಡಿಸಿದರೆ ಉಳಿದವರ ಬರವಣಿಗೆಯು, ಒಂದು ನೆಲೆಯಲ್ಲಿ ಪ್ರಗತಿಶೀಲರ ಉತ್ತರಾಧಿಕಾರಿಗಳಾದ ದಲಿತ-ಬಂಡಾಯ ಲೇಖಕರಿಂದಲೂ ಮುಖ್ಯವೆಂದು ಪರಿಗಣಿತವಾಗಲಿಲ್ಲ. ಇದು ಯಾಕೆ ಹೀಗೆ ಆಯಿತು ಎನ್ನುವ ಪ್ರಶ್ನೆಗೆ ಉತ್ತರವನ್ನು ಆ ಚಳುವಳಿಯ ಸಾಹಿತ್ಯಕ ಮುಖ ಮತ್ತು ಸಾಮಾಜಿಕ ಮುಖಗಳೆರಡರಲ್ಲಿಯೂ ಹುಡುಕುವ ಅಗತ್ಯವಿದೆ.

ಪ್ರಗತಿಶೀಲ ಸಾಹಿತ್ಯಕ ಚಳುವಳಿ ಮತ್ತು ಪ್ರಗತಿ ಎಂಬ ಪರಿಕಲ್ಪನೆಯ ತಾತ್ವಿಕತೆಯ ಸ್ವರೂಪವನ್ನು ಅರಸುವ ಕೆಲಸದಲ್ಲಿ ಈ ಲೇಖನವು ತೊಡಗುವುದಿಲ್ಲ. ಅಂಥ ವಿವರವಾದ ಬರವಣಿಗೆಯನ್ನು 'ಪ್ರಗತಿಶೀಲತೆ' ಎಂಬ ಪುಸ್ತಕದಲ್ಲಿ ಕಾಣಬಹುದು. (ಪ್ರಗತಿಶೀಲತೆ, ಎಚ್. ಎಸ್. ರಾಘವೇಂದ್ರರಾವ್, ೧೯೯೦, ೧೯೯೫, ೨೦೦೦) ಅಲ್ಲಿ, ಕನ್ನಡ ಪ್ರಗತಿಶೀಲ ಸಾಹಿತ್ಯ ಹಾಗೂ ಚಳುವಳಿಗಳನ್ನು ಭಾರತೀಯ ಹಾಗೂ ಜಾಗತಿಕ ಚಳುವಳಿಗಳ ಹಿನ್ನೆಲೆಯಲ್ಲಿ ಗಮನಿಸಲಾಗಿದೆ. (ಅಲ್ಲಿ ಕೊಟ್ಟಿರುವ ವಿವರವಾದ ಗ್ರಂಥ ಲೇಖನಸೂಚಿಯ ಜೊತೆಗೆ ಶ್ರೀ ಅಶೋಕ ಶೆಟ್ಟರ್ ಅವರ 'ಕನ್ನಡ ಸಾಹಿತ್ಯದ ಪ್ರಗತಿಶೀಲ ಪರ್ವ; ಒಂದು ಚಾರಿತ್ರಿಕ ಹಿನ್ನೋಟ', ಸಂಕ್ರಮಣ, ಸಂಚಿಕೆ ೨೨೮, ೧೯೯೧ ಮತ್ತು ಶ್ರೀ ಆರ್ಕೆ ಮಣಿಪಾಲ ಅವರ 'ಪ್ರಗತಿಶೀಲ-ನವ್ಯ-ದಲಿತ ಬಂಡಾಯಗಳ ಅಂತಃಸ್ಸಂಬಂಧ', ಸಂಕ್ರಮಣ-೨೧೩, ೧೯೯೦ ಎಂಬ ಲೇಖನಗಳನ್ನು ಗಮನಿಸಬಹುದು. ಹಾಗೆಯೇ ಕರ್ನಾಟಕ ಸಾಹಿತ್ಯ ಅಕಾಡೆಮಿಯವರು ಪ್ರಕಟಿಸಿರುವ 'ಕನ್ನಡ ಸಾಹಿತ್ಯದ ಪುನರ್ಮೌಲ್ಯೀಕರಣ' ಮಾಲೆಯ ಕೃತಿಗಳಲ್ಲಿ, ಪ್ರಗತಿಶೀಲ ಸಾಹಿತ್ಯಕ್ಕೆ ಸಂಬಂಧಿಸಿದ ಲೇಖನಗಳು ಗಮನೀಯವಾಗಿವೆ.) ಪ್ರಸ್ತುತ ಲೇಖನವು ಆ ಪುಸ್ತಕಕ್ಕೆ ಪೂರಕವಾಗುವ ಉದ್ದೇಶವನ್ನೂ ಹೊಂದಿದೆ. ಹಾಗೆಯೇ ಅಲ್ಲಿನ ಅನೇಕ ವಿಷಯಗಳನ್ನು ಇಲ್ಲಿಯೂ ಬಳಸಿಕೊಳ್ಳಲಾಗಿದೆ. ಕಳೆದ ಹತ್ತು ವರ್ಷಗಳಲ್ಲಿ ಆಗಿರುವ ಸೂಕ್ಷ್ಮವಾದ ರಾಜಕೀಯ ಮತ್ತು ಸಾಂಸ್ಕೃತಿಕವಾದ ಬದಲಾವಣೆಗಳು ಇನ್ನೊಂದು ಪ್ರಗತಿಪರ ಹೋರಾಟವನ್ನು ಅನಿವಾರ್ಯವಾಗಿಸಿರುವುದರಿಂದಲೂ ಇಂಥ ಪ್ರಯತ್ನವು ಅಗತ್ಯವೆಂದು ತೋರುತ್ತದೆ. ಆಕಾಶವಾಣಿಯಲ್ಲಿ ಮಂಡಿತವಾದ ಉಪನ್ಯಾಸಕ್ಕೂ ಈ ಲೇಖನಕ್ಕೂ ಇರುವ ವ್ಯತ್ಯಾಸಗಳೂ ಅಂತಹುದೇ ಜರೂರಿನಿಂದ ಹುಟ್ಟಿಕೊಂಡಿವೆ. ಏಕೆಂದರೆ ಬಹುಪಾಲು ಶ್ರೋತೃಗಳಿಗೆ ಲಭ್ಯವಿಲ್ಲದಿರುವ ಆಕರಗಳು ಓದುಗರಿಗೆ ದೊರಕಿರುತ್ತವೆ.

ಪ್ರಗತಿಶೀಲ ಚಳುವಳಿಯು ಸಾಮಾಜಿಕ ಉದ್ದೇಶಗಳನ್ನು ಇಟ್ಟುಕೊಂಡ ಸಾಹಿತ್ಯಕ ಚಳುವಳಿಯೆನ್ನುವುದು ಅದರ ಮುಖ್ಯ ಲಕ್ಷಣ ಮತ್ತು ಪರಿಮಿತಿ. ಇಂಥ ತಪ್ಪು ತಿಳಿವಳಿಕೆಯು ಸಾಹಿತ್ಯದ ಸಂವಹನ ಹಾಗೂ ಸಾಮರ್ಥ್ಯವನ್ನು ಕುರಿತ ಹುಸಿ ನಂಬಿಕೆಯಿಂದಲೇ ಹುಟ್ಟುತ್ತದೆ. ಅಖಿಲಭಾರತ ಮಟ್ಟದಲ್ಲಿ ಹಾಗೂ ಕರ್ನಾಟಕದಲ್ಲಿ, ಮಾರ್ಕ್ಸ್‌ವಾದ ಹಾಗೂ ಸಮಾಜವಾದದ ಪರವಾದ ಒಲವನ್ನು ಆ ಚಳುವಳಿಯ ನೇತಾರರು ತೋರಿಸಿದರು. ಆದರೆ ಆ ರಾಜಕೀಯ ಪಕ್ಷಗಳು ಕರ್ನಾಟಕದಲ್ಲಿ ಕ್ರಿಯಾಶೀಲವಾಗಿರಲಿಲ್ಲ. ಇದ್ದರೂ ಪ್ರಗತಿಶೀಲ ಲೇಖಕರು ಅಂಥ ಪಕ್ಷಗಳೊಂದಿಗೆ ಹೊಂದಿದ್ದ ಸಂಬಂಧವು ಅಲ್ಪಾಯುವೂ ಏರು ಹುಬ್ಬಿನದೂ ಆಗಿತ್ತು. ಅಷ್ಟೇ ಅಲ್ಲ, ಅವರು ಆರಿಸಿಕೊಂಡ ಸಾಹಿತ್ಯಕ ಮಾದರಿಗಳೂ ಸಮಾಜವಾದೀ ವಾಸ್ತವತೆ ಅಥವಾ ನ್ಯಾಚುರಲಿಸಂನ ನೆಲೆಯಿಂದ ಮೂಡಿಬಂದವಾಗಿದ್ದವು. ಕೊನೆಯ ಪಕ್ಷ ಇತರ ಭಾರತೀಯ ಭಾಷೆಗಳ ಪ್ರಗತಿಶೀಲ ಲೇಖಕರ ವಿಸ್ತಾರವೂ ವೈವಿಧ್ಯಮಯವೂ ಆದ ಸಾಮಾಜಿಕ ಹಿನ್ನೆಲೆಯಿಂದಲಾದರೂ ಅವರು ಸೂಕ್ತ ಮಾದರಿಗಳನ್ನು ಆರಿಸಿಕೊಳ್ಳಬಹುದಾಗಿತ್ತು. ಮಾಣಿಕ್ಯ ಬಂದ್ಯೋಪಾಧ್ಯಾಯ ಅವರ 'ಪದ್ಮಾನದಿಯ ನಾವಿಕ', ತಕಳಿ ಶಿವಶಂಕರ ಪಿಳ್ಳೆಯವರ 'ಎರಡು ಬಳ್ಳ' ಮತ್ತು 'ತೋಟಿಯ ಮಗ', ಫಕೀರಮೋಹನ ಸೇನಾಪತಿಯವರ 'ಆರು ಗುಂಟೆ ಜಮೀನು' ಕೊನೆಗೆ ಪ್ರೇಮಚಂದ್ ಅವರ 'ನಿರ್ಮಲಾ' ಹಾಗೂ 'ಗೋದಾನ'ಗಳು ಕೂಡ ಪ್ರಗತಿಶೀಲ ಲೇಖಕರ ಪ್ರಜ್ಞಾವಲಯವನ್ನು ಪ್ರವೇಶಿಸಲಿಲ್ಲವೆನ್ನುವುದು ಕುತೂಹಲಕಾರಿಯಾದ ಸಂಗತಿ. ತಾನು ಸಹಾನುಭೂತಿಯಿಂದ ನೋಡುವ ಸಮುದಾಯಗಳನ್ನು ಕೇವಲ ಹೊರಗೆ ನಿಂತು ಚಿತ್ರಿಸಬೇಕಾಗುವ ಲೇಖಕನಿಗೆ ಈ ಪಾಡು ಅನಿವಾರ್ಯವೆಂದು ತೋರುತ್ತದೆ.

ಹೊಸ ಶತಮಾನದ ಅಂಚಿನಲ್ಲಿ ದೊರೆತಿರುವ ಹಿನ್ನೋಟದ ಬಲದಿಂದ ನೋಡಿದಾಗ ಹುಟ್ಟುವ ಮುಖ್ಯ ಪ್ರಶ್ನೆಯೆಂದರೆ ಪ್ರಗತಿಶೀಲ ಸಾಹಿತ್ಯವು ಸೋತ ಜಾಗದಲ್ಲಿ ಬಂಡಾಯ ದಲಿತ ಸಾಹಿತ್ಯಕೃತಿಗಳು ಯಶಸ್ವಿಯಾಗಿವೆಯೇ ಎನ್ನುವುದು. ಅನುಭವಲೋಕದ ಅಧಿಕೃತತೆಯೊಂದೇ ಯಶಸ್ಸಿನ ರೂವಾರಿಯಾಗಿದ್ದರೆ ಅದು ಸಾಧ್ಯವಾಗಬೇಕಾಗಿತ್ತು. ಆದರೆ ಅನೇಕ ಸಂದರ್ಭಗಳಲ್ಲಿ ಅದು ಸಾಧ್ಯವಾಗಿಲ್ಲ. ಚಳುವಳಿಯ ಹಿನ್ನೆಲೆ ಯಾವುದೇ ಇರಲಿ, ಸಾಮಾಜಿಕ ಸನ್ನಿವೇಶವನ್ನು ಕಪ್ಪು-ಬಿಳುಪು ಅತಿರೇಕಗಳಾಗಿ ಒಡೆಯದೆ, ಸಂಕೀರ್ಣಗ್ರಹಿಕೆಯ ನೆಲೆಯಲ್ಲಿ ಚಿತ್ರಿಸುವ ಪ್ರಯತ್ನ ಮಾಡಿದ ಕೃತಿಗಳು ಮಾತ್ರ ಯಶಸ್ವಿಯಾಗಿರುವುದನ್ನು ಗಮನಿಸಬಹುದು. ಬೇರೆ ಮಾತುಗಳಲ್ಲಿ ಹೇಳುವುದಾದರೆ, ಆಶಯಗಳ ಪ್ರಗತಿಪರತೆಗೆ ಸರಿತೂಗುವ ಆಕೃತಿನಿರ್ಮಾಣದ ಸಾಮರ್ಥ್ಯಹೊಂದಿರುವ ಲೇಖಕರು ಮಾತ್ರ ಹಲವು ಕಾಲ ಉಳಿಯುವ ಕೃತಿಗಳನ್ನು ರಚಿಸಿದ್ದಾರೆ. ಅನುಭವಲೋಕಗಳ ಹೊಸತನವೇ ಕಾರಣವಾಗಿ ದೊರೆಯುವ ಉತ್ಸಾಹದ ಸ್ವಾಗತವು ಬಹುಕಾಲ ಉಳಿಯಲಿಲ್ಲ. ಪರಿವರ್ತನೆ

ಮಾಡಿಬಿಡುತ್ತೇನೆ ಎನ್ನುವ ಆವೇಶಕ್ಕಿಂತ, ಪರಿವರ್ತನೆಯ ಸಾಧ್ಯತೆ, ವೇಗ ಮತ್ತು ಆ ಕೆಲಸದಲ್ಲಿ ಸಾಹಿತ್ಯದ ಅಲ್ಪಸಾಮರ್ಥ್ಯದ ಬಗೆಗಿನ ಅನುಮಾನದ ಫಲವಾದ ವಿಷಾದವೇ ಹೆಚ್ಚು ಉಪಯುಕ್ತವಾದ ಕೃತಿಗಳನ್ನು ನೀಡಿರುವುದನ್ನು ಗಮನಿಸಬಹುದು. ಇಂಥ ಕೃತಿಗಳು ಪ್ರಗತಿಪರವಾಗಿಯೂ ಸಾಹಿತ್ಯವೆಂಬ ಕಲಾಮಾಧ್ಯಮದ ಮಿತಿಯೊಳಗಡೆಯೇ ತಮ್ಮ ಸಾಧನೆಗಳನ್ನು ಕಂಡುಕೊಳ್ಳುತ್ತವೆ. ಪಾರಿಭಾಷಿಕ ಪದಗಳನ್ನು ಬಳಸಬಹುದಾದರೆ ವಿಶ್ಲೇಷಣಾತ್ಮಕ ವಾಸ್ತವತಾವಾದವೇ ಸಾಹಿತ್ಯಕೃತಿಗಳ ಮೌಲಿಕತೆಯ ಮಾರ್ಗವಾಗಿರುವಂತೆ ತೋರುತ್ತದೆ. ಈ ಕೃತಿಗಳು ಸಾಂಕೇತಿಕತೆಯನ್ನು ಕೂಡ ರೂಢಿಸಿಕೊಂಡಿರುತ್ತವೆಂದು ಪ್ರತ್ಯೇಕವಾಗಿ ಹೇಳುವ ಅಗತ್ಯವಿಲ್ಲ. ಇಷ್ಟು ಹಿನ್ನೆಲೆಯೊಂದಿಗೆ ಕನ್ನಡದ ಪ್ರಗತಿಶೀಲ ಚಳುವಳಿಯ ಇತಿಹಾಸ, ಸಾಧನೆಗಳು ಮತ್ತು ಪ್ರಮುಖ ಕೃತಿಗಳ ಸಂಗ್ರಹವಾದ ಪರಿಶೀಲನೆಯನ್ನು ನಡೆಸಲಾಗಿದೆ.

**ಕನ್ನಡ ಪ್ರಗತಿಶೀಲ ಚಳುವಳಿಯ ಇತಿಹಾಸ :**

೧೯೩೬ ರಲ್ಲಿ ಲಖನೌ ನಗರದಲ್ಲಿ ನಡೆದ 'ಅಖಿಲ ಭಾರತ ಪ್ರಗತಿಶೀಲ ಲೇಖಕರ ಸಂಘದ' ಮೊದಲ ಅಧಿವೇಶನವು ಈ ದೇಶದಲ್ಲಿ ಸಾಂಘಿಕವಾದ ಪ್ರಗತಿಪರ ಚಟುವಟಿಕೆಗಳ ಬೀಜಾರೋಪಣೆ ಮಾಡಿತು. ಆ ವೇಳೆಗಾಗಲೇ ಅಂಥ ಕೃತಿಗಳ ರಚನೆಯಲ್ಲಿ ತೊಡಗಿದ್ದ ಲೇಖಕರಿಂದ ಪ್ರೇರಣೆಯನ್ನು ಪಡೆದಂತೆಯೇ ಅವರಲ್ಲಿ ಕೆಲವರ ನಾಯಕತ್ವವನ್ನೂ ಈ ಚಳುವಳಿಯು ಪಡೆಯಿತು. ಪ್ರೇಮಚಂದ್, ಜವಾಹರ್‌ಲಾಲ್ ನೆಹರೂ, ಆಚಾರ್ಯ ನರೇಂದ್ರದೇವ್, ಕಾಕಾ ಕಾಲೇಲ್ಕರ್, ಮುಲ್ಕ್‌ರಾಜ್ ಆನಂದ್, ಸುಮಿತ್ರಾನಂದನ್ ಪಂತ್, ಉಮಾಶಂಕರ್ ಜೋಶಿ ಮುಂತಾದ ಹೆಸರುಗಳನ್ನು ಗಮನಿಸಿದಾಗ, ಇಲ್ಲಿ ಸಾಹಿತಿಗಳ ಹಾಗೆಯೇ ಸಾಮಾಜಿಕ ಮುಂದಾಳುಗಳೂ ಭಾಗಿಯಾಗಿರುವುದನ್ನು ಗಮನಿಸಬಹುದು. ೧೯೩೮-೪೩ ರ ಅವಧಿಯಲ್ಲಿ ನಡೆದ ಅಧಿವೇಶನಗಳ ವರದಿಯಿಂದ ಸ್ಪಷ್ಟವಾಗುವಂತೆ ಚಳುವಳಿಯು ಭದ್ರವಾದ ಬೇರುಗಳನ್ನು ಬಿಡುವುದಕ್ಕೆ ಮುಂಚಿತವಾಗಿಯೇ ಪರಸ್ಪರ ವಿರುದ್ಧವಾದ ಸೆಳೆತಗಳನ್ನು ಹೊಂದಿರುವುದು ಸ್ಪಷ್ಟವಾಗುತ್ತದೆ. ಕಮ್ಯೂನಿಸ್ಟ್ ಪರವಾದ ಹಾಗೂ ವಿರೋಧಿಯಾದ ನಿಲುವುಗಳೆಂದು ಈ ಒತ್ತಡಗಳನ್ನು ಹೆಸರಿಸಬಹುದು. ಕೆ. ಎ. ಅಬ್ಬಾಸ್, ಮಾಮಾ ವರೇರ್ಕರ್, ಬಿಷ್ಣು ಡೇ ಮುಂತಾದವರು ಒಂದುಕಡೆ ಇದ್ದರೆ ಹೀರಾಲಾಲ್ ವಾತ್ಸಾಯನ್ (ಅಜ್ಞೇಯ), ಮುಲ್ಕ್‌ರಾಜ್ ಆನಂದ್ ಮುಂತಾದವರು ಕಮ್ಯೂನಿಸಂ ಅನ್ನು ನಿರಾಕರಿಸಿದ್ದರು. ಈ ಗುಂಪುಗಳ ನಡುವಿನ ಘರ್ಷಣೆಯು ಕನ್ನಡದಲ್ಲಿಯೂ ಪ್ರತಿಫಲಿತವಾಗಿದೆ. ಹೀಗೆಯೇ ಸಮತಾವಾದ, ಸಮಾಜವಾದ, ಗಾಂಧೀವಾದ ಹಾಗೂ ಅಂಬೇಡ್ಕರ್‌ವಾದಗಳನ್ನು ಪುರಸ್ಕರಿಸುವುದರ ಮೂಲಕ ಸ್ಥೂಲವಾಗಿ ಜನಪರತೆಯ ನೆಲೆಗಳನ್ನು ಉಳಿಸಿಕೊಂಡರೂ ತಾತ್ವಿಕತೆ ಮತ್ತು ಕಾರ್ಯವಿಧಾನಗಳ ನೆಲೆಯಲ್ಲಿ ತೀವ್ರವಾದ ಭಿನ್ನಾಭಿಪ್ರಾಯಗಳನ್ನು ಹೊಂದಿರುವ ವಾಸ್ತವವನ್ನು ಇಂದಿನ ದಲಿತ ಬಂಡಾಯ ಚಳುವಳಿಯಲ್ಲಿಯೂ ಗುರುತಿಸಬಹುದು.

ಮುಂಬಯಿ ನಗರದಲ್ಲಿ ನಡೆದ ೧೯೪೩ ರ ಅಧಿವೇಶನದಲ್ಲಿ ಕನ್ನಡದ ಶ್ರೀರಂಗ ಮತ್ತು ನಿರಂಜನರು ಭಾಗವಹಿಸಿದ್ದರು. ವಿ. ಎಂ. ಇನಾಂದಾರ್ ಮತ್ತು ಕೃಷ್ಣಕುಮಾರ್ ಕಲ್ಲೂರ್ ಅವರು ಕರ್ನಾಟಕ ಶಾಖೆಯ ಕಾರ್ಯದರ್ಶಿಗಳಾಗಿ ಆಯ್ಕೆಯಾದರು. ಬೆಂಗಳೂರು, ಧಾರವಾಡ, ಮಂಗಳೂರು ಶಾಖೆಯ ಅಧ್ಯಕ್ಷರಾಗಿ ಅಂದು ಅತ್ಯಂತ ಪ್ರಭಾವಶಾಲೀ ಲೇಖಕರಾಗಿದ್ದ ಅ. ನ. ಕೃಷ್ಣರಾವ್ ಅವರೂ ಕಾರ್ಯದರ್ಶಿಗಳಾಗಿ ಅನಂತ ಪದ್ಮನಾಭ ಸೋಗಾಲ ಅವರೂ ನೇಮಕವಾದರು. ಈ ಶಾಖೆಗಳು ಸ್ವತಂತ್ರ ಘಟಕಗಳಂತೆ ಕೆಲಸ ಮಾಡುತ್ತಿದ್ದವೇ ವಿನಾ ಅವುಗಳ ನಡುವೆ ಹೆಚ್ಚಿನ ಕೊಳುಕೊಡೆ ಇರಲಿಲ್ಲವೆಂಬ ಅಭಿಪ್ರಾಯವನ್ನು ನಿರಂಜನರು ವ್ಯಕ್ತಪಡಿಸಿದ್ದಾರೆ. ಆದರೂ ಬೆಂಗಳೂರು ಶಾಖೆಯು ಹೆಚ್ಚು ಕ್ರಿಯಾಶೀಲವಾಗಿದ್ದು ಕೇಂದ್ರಪಾತ್ರವನ್ನು ವಹಿಸಿತೆನ್ನುವುದರಲ್ಲಿ ಅನುಮಾನವಿಲ್ಲ. ಸಾಹಿತ್ಯರಚನೆ, ಪುಸ್ತಕಪ್ರಕಟಣೆ ಹಾಗೂ ಉಪನ್ಯಾಸಗಳು ಅದರ ಪ್ರಮುಖ ಚಟುವಟಿಕೆಗಳಾಗಿದ್ದವು. ಬೇರೆ ಯಾವುದೇ ಸಮಾಜಸುಧಾರಣೆಯ ಅಥವಾ ರಾಜಕೀಯ ಚಟುವಟಿಕೆಗಳ ಅಜೆಂಡಾವನ್ನು ಸಂಘವು ಹೊಂದಿದ್ದಂತೆ ಕಾಣುವುದಿಲ್ಲ. ಅದು 'ಭಾರತಶಕ್ತಿ', 'ನನ್ನನ್ನು ನಾನೇ ಕಂಡೆ', 'ಪ್ರಗತಿಶೀಲ ಸಾಹಿತ್ಯ', 'ಮ್ಯಾಕ್ಸಿಂ ಗಾರ್ಕಿ', 'ಸೋವಿಯತ್ ಸಂಸ್ಕೃತಿ', 'ರಷ್ಯನ್ ಕಥೆಗಳು' ಮತ್ತು 'ಪ್ರಗತಿಶೀಲ ಕಥೆಗಳು' ಎಂಬ ಏಳು ಕೃತಿಗಳನ್ನು ಕೇವಲ ಒಂದೆರಡು ವರ್ಷಗಳಲ್ಲಿ ಹೊರತಂದಿತು. ಇವಲ್ಲದೆ ಸಂಬಂಧಪಟ್ಟ ಲೇಖಕರ ಕತೆ ಕಾದಂಬರಿಗಳಲ್ಲಿಯೂ ಪ್ರಗತಿಶೀಲ ನೆಲೆಗಳು ಢಾಳಾಗಿಯೇ ಕಾಣಿಸಿಕೊಂಡವು. ತಮಗಿಂತ ಹಿಂದೆಯೇ ಬರೆಯತೊಡಗಿದ್ದ, ಜನಪರರೇ ಆಗಿದ್ದ ಕುವೆಂಪು, ಕಾರಂತ ಮುಂತಾದ ಲೇಖಕರನ್ನು ಅನಗತ್ಯವಾಗಿ ಟೀಕಿಸುವುದರ ಮೂಲಕ ಈ ಚಳುವಳಿಯು ತನಗಿದ್ದ ಒಳ್ಳೆಯ ಮಾದರಿಗಳನ್ನು ನಿರ್ಲಕ್ಷಿಸಿತು.

ಅಖಿಲ ಭಾರತ ಮಟ್ಟದಲ್ಲಿ ಕಾಣಿಸಿಕೊಂಡ ಬಿರುಕು ಮತ್ತು ಒಳಜಗಳಗಳು ಕರ್ನಾಟಕದಲ್ಲಿಯೂ ಬಹುಬೇಗ ಪ್ರತ್ಯಕ್ಷವಾದವು. ಕಮ್ಯೂನಿಸ್ಟ್ ಪರವಾದ ಗುಂಪಿನ ಮುಂಚೂಣಿಯಲ್ಲಿ ನಿರಂಜನರಿದ್ದರೆ ಇನ್ನೊಂದು ಬಣದ ನಾಯಕರಾಗಿ ಸ್ವತಃ ಅ. ನ. ಕೃ. ಅವರೇ ಇದ್ದರು. ಸಾಹಿತ್ಯಕೃತಿಗಳಲ್ಲಿ ಅಶ್ಲೀಲತೆಯ ಅವತಾರ ಮತ್ತು ಭಾರತೀಯತೆಯ ಪುನರುಜ್ಜೀವನದ ಹೆಸರಿನಲ್ಲಿ ಯಥಾಸ್ಥಿತಿವಾದದ ಸಮರ್ಥನೆ ಮಾಡುವುದನ್ನು ನಿರಂಜನರು ತೀವ್ರವಾಗಿ ಖಂಡಿಸಿದರು. ಸಮತಾವಾದವು ನಮಗೆ ರಷ್ಯಾದಿಂದ ಆಮದಾಗಿ ಬರಬೇಕಿಲ್ಲವೆಂಬ ನಿಲುವನ್ನು ತಳೆದವರು ಅ. ನ. ಕೃ. ಈ ಜಗಳದಲ್ಲಿ, ಸಮಾಜವಾದವನ್ನು ಬೆಂಬಲಿಸುತ್ತಿದ್ದ ಇನ್ನೊಬ್ಬ ಹಿರಿಯ ಲೇಖಕರಾದ ಬಸವರಾಜ ಕಟ್ಟೀಮನಿಯವರು ಮೌನವಹಿಸಿದರು. ೧೯೫೨ ರ ವೇಳೆಗೆ ಒಂದು ಸಂಘಟನೆಯಾಗಿ ಪ್ರಗತಿಶೀಲ ಲೇಖಕರ ಸಂಘವು ತನ್ನ ಕೊನೆಯುಸಿರನ್ನು ಎಳೆಯಿತೆಂದರೂ ತಪ್ಪಿಲ್ಲ. ೧೯೫೨ ರಲ್ಲಿ ಹಿರಿಯೂರಿನಲ್ಲಿ ಅ. ನ. ಕೃ. ಅವರು ನಡೆಸಿದ ಪ್ರಗತಿಶೀಲ ಸಾಹಿತಿಗಳ ಪ್ರಥಮ ಸಮ್ಮೇಳನವಾಗಲಿ, ೧೯೭೬ ರಲ್ಲಿ

ನಿರಂಜನ ಮತ್ತು ಕಟ್ಟೀಮನಿಯವರ ಮುಂದಾಳುತನದಲ್ಲಿ ಸ್ಥಾಪಿತವಾದ ಪ್ರಗತಿಪಂಥವಾಗಲಿ. ಈ ಚಳುವಳಿಯು ಪುನರುಜ್ಜೀವನ ಕಾರ್ಯದಲ್ಲಿ ಯಶಸ್ವಿಯಾಗಲಿಲ್ಲ. ಹಾಗೆ ನೋಡಿದರೆ ಪ್ರಗತಿಶೀಲ ಸಂದರ್ಭದ ಸಾಂಘಿಕ ನೆಲೆಗಳಿಗೂ ಸೃಜನಾತ್ಮಕ ನೆಲೆಗಳಿಗೂ ಅಂಥ ನಿಕಟ ಸಂಬಂಧ ಏರ್ಪಡಲಿಲ್ಲ. ಈ ಮಾತು ಬಂಡಾಯಸಾಹಿತ್ಯ ಸಂಘಟನೆ ಮತ್ತು ದಲಿತ ಸಂಘರ್ಷಸಮಿತಿಗಳಿಗೂ ಅನ್ವಯಿಸುತ್ತದೆ ಎನ್ನುವುದು ಕಾಕತಾಳೀಯವಲ್ಲ. ಅದೇನೇ ಇರಲಿ. ಪ್ರಗತಿಶೀಲ ಚಳುವಳಿಯನ್ನು ಒಟ್ಟಂದದಲ್ಲಿ ವಿಶ್ಲೇಷಣೆಮಾಡುವ ಕೆಲವು ಅಂಶಗಳೊಂದಿಗೆ ಈ ಐತಿಹಾಸಿಕ ಪರಿಶೀಲನೆಯನ್ನು ಮುಗಿಸಬಹುದು.

೧. ಒಂದು ನಿಚಿತವಾದ ಅಂಗರಚನೆಯುಳ್ಳ ಚಳುವಳಿಯಾಗಿ ಪ್ರಾರಂಭವಾದರೂ, ಪ್ರಗತಿಶೀಲ ಚಳುವಳಿಯು ತನ್ನ ಜೊತೆಜೊತೆಯಾಗಿ ಹೆಜ್ಜೆಹಾಕಿ ತನಗೆ ರಕ್ತದಾನ ಮಾಡಬಲ್ಲ ಸಾಮಾಜಿಕ. ರಾಜಕೀಯ ಚಳುವಳಿಗಳ ಸಾಂಗತ್ಯವನ್ನು ಪಡೆದಿರಲಿಲ್ಲ. ಈ ಪರಿಸ್ಥಿತಿಗೆ ಸಮುದಾಯದ ಒಟ್ಟು ಚೈತನ್ಯದ ಮುಖ್ಯಭಾಗವು ಸ್ವಾತಂತ್ರ್ಯ ಚಳುವಳಿಯಲ್ಲಿ ತೊಡಗಿಸಿಕೊಂಡಿದ್ದು ಕೂಡಾ ಕಾರಣವಾಗಿರಬಹುದು.

೨. ಪ್ರಗತಿಶೀಲ ಚಳುವಳಿಯ ಕಾಳಜಿಗಳ ಕೇಂದ್ರವು ಶ್ರಮಿಕವರ್ಗ ಮತ್ತು ಕೃಷಿಕವರ್ಗಗಳಾದರೂ, ಅದರಲ್ಲಿ ತೊಡಗಿಸಿಕೊಂಡ ಲೇಖಕರು ಮಧ್ಯಮವರ್ಗದಿಂದ ಬಂದವರೇ ಆಗಿದ್ದರು. ಆದರೆ ಅವರು ಉನ್ನತಶಿಕ್ಷಣ ಪಡೆದವರೂ ಆಗರ್ಭ ಶ್ರೀಮಂತರೂ ಆಗಿರಲಿಲ್ಲ. ಕಟ್ಟೀಮನಿಯವರನ್ನು ಹೊರತುಪಡಿಸಿ ಉಳಿದ ಪ್ರಮುಖ ಲೇಖಕರು ಮೇಲುಜಾತಿಗೆ ಸೇರಿದವರಾದುದರಿಂದ ತಾವು ಚಿತ್ರಿಸಬಯಸುವ ಜೀವನಕ್ರಮದ ಸರಿಯಾದ ಗ್ರಹಿಕೆ ಅವರಿಗೆ ಇರಲಿಲ್ಲ. ಆದ್ದರಿಂದ ಒಟ್ಟು ಸಮುದಾಯವನ್ನು ಚಳುವಳಿಯ ಅಥವಾ ತಮ್ಮ ಬರವಣಿಗೆಯ ವ್ಯಾಪ್ತಿಯಲ್ಲಿ ತಂದುಕೊಳ್ಳುವುದು ಅವರಿಗೆ ಸಾಧ್ಯವಾಗಲಿಲ್ಲ. (ಆದರೆ ಒಂದು ವರ್ಗದ ಓದುಗರಲ್ಲಿ ಜನಪ್ರಿಯತೆಯನ್ನು ಸಂಪಾದಿಸಿ, ವಾಚನಾಸಕ್ತಿಯನ್ನು ಬೆಳೆಸುವುದರಲ್ಲಿ ಅವರು ಯಶಸ್ವಿಯಾದರು.)

೩. ಕನ್ನಡದ ಸಂದರ್ಭದಲ್ಲಂತೂ ಒಟ್ಟು ಚಳುವಳಿಯು ಬೌದ್ಧಿಕತೆಗಿಂತ ಹೆಚ್ಚಾಗಿ ಭಾವುಕತೆಯಿಂದ ನಿಯಂತ್ರಿತವಾಗಿತ್ತು. ಆ ಲೇಖಕರು ಸಾವಿರಾರು ಪುಸ್ತಕಗಳನ್ನು ಓದಿರಬಹುದು. ಆದರೆ ಅದೆಲ್ಲದರ ನೆರವಿನಿಂದ ಒಂದು ಆಲೋಚನಾಕ್ರಮವನ್ನು ರೂಪಿಸಿಕೊಳ್ಳಲು ಅಗತ್ಯವಾದ ಬೌದ್ಧಿಕ ಶಿಸ್ತು ಅವರಿಗೆ ಇರಲಿಲ್ಲ. ಅವರು ಮಾರ್ಕ್ಸ್‌ವಾದವನ್ನು ಗ್ರಹಿಸಿದ ರೀತಿ ಕೂಡ ಹೀಗೆಯೇ ಮೇಲುಮೇಲಿನದೂ ಅತಿ ಸರಳೀಕೃತವಾದುದೂ ಆಗಿತ್ತು.

ಮಾರ್ಕ್ಸ್‌ವಾದಿ ಸಾಹಿತ್ಯ ವಿಮರ್ಶೆಯಲ್ಲಿ ಆದ ಬೆಳವಣಿಗೆಗಳ ಸ್ಥೂಲ ಪರಿಚಯವನ್ನು ಮಾಡಿಕೊಳ್ಳುವ ಅವಕಾಶವೂ ಅವರಿಗೆ ದೊರೆತಂತೆ ತೋರುವುದಿಲ್ಲ. ಆದ್ದರಿಂದಲೇ ಮನುಷ್ಯಸ್ವಭಾವವನ್ನು ಕಪ್ಪು-ಬಿಳುಪುಗಳ ಸರಳ ವಿಂಡಗಣೆಗೆ ಅತೀತವಾದ, ಅದರ ಸಂಕೀರ್ಣ ವಾಸ್ತವದಲ್ಲಿ ಗ್ರಹಿಸುವುದು ಅವರಿಗೆ ಅಸಾಧ್ಯವಾಯಿತು. ಒಂದು ಕಡೆ ಅಧಿಕೃತತೆ ಇನ್ನೊಂದು ಕಡೆ ವಾಸ್ತವದ ಸಂಕೀರ್ಣ ಗ್ರಹಿಕೆ ಎರಡನ್ನೂ ಕಳೆದುಕೊಂಡ ಬರವಣಿಗೆಯು ಪೇಲವವಾಗುವುದು ಅನಿವಾರ್ಯ.

೪. ಸಾಮಾಜಿಕ ಸಮಸ್ಯೆಗಳನ್ನು ಕುರಿತ ಸ್ಥೂಲವಾದ ಕಳಕಳಿಯಿರುವ ಎಲ್ಲರೂ ಒಂದೇ ಚಳುವಳಿಯ ಕೊಡೆಯಡಿಯಲ್ಲಿ ಬರಬಹುದೆಂಬ ತಪ್ಪು ತಿಳಿವಳಿಕೆಯು, ಇತರ ಪ್ರಗತಿಪರ ಹೋರಾಟಗಳಂತೆ ಇಲ್ಲಿಯೂ ಆತ್ಮನಾಶಕವಾದ ಭಿನ್ನಮತಗಳಿಗೆ ದಾರಿಮಾಡಿಕೊಟ್ಟಿದೆ. ಏಕೆಂದರೆ ಯಾವುದೇ ಹೋರಾಟವು ಗುರಿಯ ಬಗೆಗಿನ ಒಮ್ಮತದಷ್ಟೇ ಮುಖ್ಯವಾಗಿ ಮಾರ್ಗದ ಬಗೆಗಿನ ಏಕಮತವನ್ನೂ ಬಯಸುತ್ತದೆ, ಸಾಮ್ಯವಾದ, ಸಮತಾವಾದ, ಗಾಂಧೀವಾದಗಳಂಥ ವಿಭಿನ್ನ ನಿಲುವುಗಳ ಸಾಹಚರ್ಯವು ಅಸಾಧ್ಯವಾಗಿ ಪ್ರಗತಿಶೀಲ ಚಳುವಳಿಯು ಹಿನ್ನಡೆಯನ್ನು ಅನುಭವಿಸಿತು.

೫. ಪ್ರಗತಿಶೀಲ ಚಳುವಳಿಯ ದುರದೃಷ್ಟವೆನ್ನುವಂತೆ, ಅದಕ್ಕಿಂತ ಹೆಚ್ಚು ತುರ್ತು ಎನ್ನಿಸುತ್ತಿದ್ದ ಒಂದೆರಡು ಚಳುವಳಿಗಳು ಆಗ ಕರ್ನಾಟಕದಲ್ಲಿ ಪ್ರವೃತ್ತವಾಗಿದ್ದವು. ಸ್ವಾತಂತ್ರ್ಯ ಹೋರಾಟ, ಕರ್ನಾಟಕ ಏಕೀಕರಣ ಚಳುವಳಿ ಮತ್ತು ಭಾರತೀಯತೆಯ ಪುನರುಜ್ಜೀವನದ ಒತ್ತಾಯಗಳನ್ನು ಇಲ್ಲಿ ಹೆಸರಿಸಬಹುದು.

ಇಂಥ ಚಳುವಳಿಗಳಲ್ಲಿ ತೊಡಗಿಸಿಕೊಳ್ಳುವ ಅವಕಾಶ ಪಡೆದ ವರ್ಗಕ್ಕೆ ಮೊದಲ ಮೂರು ಕಾಳಜಿಗಳು ಹೆಚ್ಚು ಜರೂರಿನವು ಎನ್ನಿಸಿದ್ದರಲ್ಲಿ ಆಶ್ಚರ್ಯವಿಲ್ಲ.

೬. ಕೆಲವು ಬಾರಿ ಸಾಹಿತ್ಯಕ ಚಳುವಳಿಗಳಿಗೆ ವಿಶೇಷ ಶಕ್ತಿಕೊಡುವ ವಿಶ್ವವಿದ್ಯಾಲಯ, ಅಧಿಕಾರವರ್ಗ, ರಾಜಕೀಯಪಕ್ಷ ಮುಂತಾದವುಗಳ ಬೆಂಬಲವು ಈ ಚಳುವಳಿಗೆ ಇರಲಿಲ್ಲ. ಬದಲಾಗಿ ಅಂತಹ ಶಕ್ತಿಗಳೊಂದಿಗೆ ವಿರೋಧದ ನೆಲೆಗಳೇ ರೂಪಿತವಾಗಿದ್ದವು.

೭. ಹೀಗಾಗಿ, ಸಂಕೀರ್ಣತೆಯ ಅಭಾವವೇ ಸುಲಭ ಸಂವಹನಕ್ಕೆ ದಾರಿಯಾಗಿ ಪ್ರಗತಿಶೀಲ ಸಾಹಿತ್ಯವು ತನ್ನದೇ ವಾಚಕವರ್ಗವನ್ನು ಪಡೆದುಕೊಂಡಿದ್ದು ನಿಜ. ಆ ಓದುಗರು ಕೂಡ ಭಾವುಕ ಸಮಾಧಾನ ಮತ್ತು ಮನರಂಜನೆಗಾಗಿ ಕಾದಂಬರಿಗಳನ್ನು ಓದುವವರಾಗಿದ್ದರೇ ಹೊರತು, ಸಾಮಾಜಿಕ

ಚಳುವಳಿಯಲ್ಲಿ ಆಸಕ್ತವಾದ ಸಮುದಾಯವಾಗಿರಲಿಲ್ಲ. ಸಹಜವಾಗಿಯೇ. ಅನತಿ ಕಾಲದಲ್ಲಿ ಈ ಓದುಗರು ಜನಪ್ರಿಯ ಸಾಹಿತ್ಯದ ಹೆಸರಿನಲ್ಲಿ ಬರತೊಡಗಿದ ಕಾದಂಬರಿಗಳ ಮಹಾಪೂರದ ಕಡೆಗೆ ಚಲಿಸಿದರು.

## ವಿಭಿನ್ನ ಸಾಹಿತ್ಯ ಪ್ರಕಾರಗಳಲ್ಲಿ ಪ್ರಗತಿಶೀಲತೆಯ ಆವಿಷ್ಕಾರ :

**ಕಾವ್ಯ** : ಪ್ರಗತಿಶೀಲ ಚಳುವಳಿಯ ಆಸಕ್ತಿ ಮತ್ತು ಸಾಧನೆಗಳು ಕಥಾಸಾಹಿತ್ಯಕ್ಕೆ, ಅದರಲ್ಲಿಯೂ ಕಾದಂಬರಿಗಳಿಗೆ ಸೀಮಿತವಾಯಿತೆಂಬ ಜನಜನಿತವಾದ ಅಭಿಪ್ರಾಯದಲ್ಲಿ ಸಾಕಷ್ಟು ಸತ್ಯವಿದೆ. ಏಕೆಂದರೆ ಮನುಕುಲದ ಹಾಡುಪಾಡುಗಳನ್ನು ಮೂರ್ತವಾದ ವಿವರಗಳ ಮೂಲಕ ಚಿತ್ರಿಸಲು ಆ ಮಾಧ್ಯಮಗಳು ಹೆಚ್ಚು ಸೂಕ್ತವಾದವು. ಕಾವ್ಯಮಾಧ್ಯಮದಲ್ಲಿ ದ. ರಾ. ಬೇಂದ್ರೆ ಮತ್ತು ಕುವೆಂಪು ಅತ್ಯಂತ ಜನಪರವೂ ಪ್ರಗತಿಶೀಲವೂ ಆದ ಸಾಧನೆಯನ್ನು ಮಾಡುತ್ತಲೇ ಇದ್ದರು. ಅವರ ಆಶಯ ಮತ್ತು ಆಕೃತಿಗಳನ್ನು ಸಾರಾಸಗಟಾಗಿ ನಿರಾಕರಿಸಿ ಬೇರೆ ಬಗೆಯ ಪ್ರಗತಿಶೀಲ ಕಾವ್ಯದ ಅಜೆಂಡಾವನ್ನು ಮಂಡಿಸುವುದು ಸುಲಭ ಸಾಧ್ಯವಾಗಿರಲಿಲ್ಲ. ಅಲ್ಲದೆ ಕಾವ್ಯಸಹಜವಾದ ಅಮೂರ್ತತೆ ಹಾಗೂ ರೂಪಕನಿಷ್ಠೆಗಳ ಚೌಕಟ್ಟಿನಲ್ಲಿ ಪ್ರಗತಿಪರ ಕಾವ್ಯವು ಹೇಳಿಕೆಗಳ ಸರಮಾಲೆಯಾಗದಂತೆ ನೋಡಿಕೊಳ್ಳುವುದು ಬಹು ದೊಡ್ಡ ಸವಾಲು. ಇದು ನಿಜವಾದರೂ ನವೋದಯ ಕವಿಗಳ ಆಧ್ಯಾತ್ಮಿಕ ಕಾಳಜಿಗಳು, ಅವರ ಆಶಯಗಳಲ್ಲಿ ಮೇಲುನೋಟಕ್ಕೆ ಪರಸ್ಪರ ವಿರೋಧವೆಂದೇ ತೋರಬಹುದಾದ ನೆಲೆಗಳನ್ನು ಮೂಡಿಸಿದ್ದವು. ಸಾಮಾಜಿಕ ಸಮಸ್ಯೆಗಳ ಕಾರಣಮೀಮಾಂಸೆಯಲ್ಲಾಗಲೀ ಉಚಿತ ಪರಿಹಾರಗಳ ರೂಪಣದಲ್ಲಾಗಲಿ ಅದು ಗಂಭೀರ ಆಸಕ್ತಿಯನ್ನು ತೋರಿಸಿರಲಿಲ್ಲ. ಕುವೆಂಪು ಅವರು ಕೂಡ 'ಕೋಗಿಲೆ ಮತ್ತು ಸೋವಿಯತ್ ರಷ್ಯಾ' ದಂತಹ ಕವಿತೆಯಲ್ಲಿ ಸಮತಾವಾದವನ್ನು ಕುರಿತು ದ್ವಂದ್ವಮಾನವಾದ ನಿಲುವುಗಳನ್ನೇ ತೋರಿಸಿದ್ದರು.

ಇಂತಹ ಸನ್ನಿವೇಶದಲ್ಲಿಯೂ ಪ್ರಮುಖ ಪ್ರಗತಿಶೀಲ ಲೇಖಕರು ಕವಿತೆಯ ಮಾಧ್ಯಮದಲ್ಲಿ ಅಷ್ಟೊಂದು ಆಸಕ್ತಿಯನ್ನು ತೋರಿಸಲಿಲ್ಲ. ಆದರೆ ಶಿವೇಶ್ವರ ದೊಡ್ಡಮನಿ, ಗೋಪಾಲಕೃಷ್ಣ ಅಡಿಗ, ಸು. ರಂ. ಎಕ್ಕುಂಡಿ, ಜಿ. ಪಿ. ರಾಜರತ್ನಂ ಮತ್ತು ರಾಮಚಂದ್ರ ಶರ್ಮರ ಕಾವ್ಯದಲ್ಲಿ ಸರಿಸುಮಾರು ಇದೇ ಕಾಲದಲ್ಲಿ ಪ್ರಗತಿಶೀಲತೆಯ ಸೆಲೆಯೊಂದು ಸ್ಪಷ್ಟವಾಗಿ ಕಾಣಿಸಿಕೊಂಡಿತು. ಇವರ ಪೈಕಿ ಕೊನೆಯ ಮೂರು ಜನರ ಕಾವ್ಯವು ತದನಂತರದ ವರ್ಷಗಳಲ್ಲಿ ಹಿಡಿದ ದಿಕ್ಕುಗಳು ಕನ್ನಡ ಕಾವ್ಯದ ಅಭ್ಯಾಸಿಗಳಿಗೆ ಪರಿಚಿತವಾಗಿಯೇ ಇದೆ. ಆದರೆ 'ಕಟ್ಟುವೆವು ನಾವು', 'ಹೃದಯಗೀತೆ', 'ಮತ್ಸ್ಯಕನ್ಯೆ' ಮುಂತಾದ ಸಂಕಲನಗಳನ್ನು ಪ್ರಗತಿಶೀಲವೆಂದೇ ಕರೆಯಬೇಕು. ಗಂಗಾಧರ ಚಿತ್ತಾಲರ ಮೊದಲ ಸಂಕಲನವಾದ 'ಕಾಲದ ಕರೆ' ಕೂಡ ಇದೇ ಗುಂಪಿಗೆ ಸೇರುತ್ತದೆ. ಈ ಬಗೆಯ ಕಾವ್ಯದ ಮ್ಯಾನಿಫೆಸ್ಟೋವನ್ನು ಶರ್ಮರ 'ಹೃದಯಗೀತೆ'ಗೆ ಎಕ್ಕುಂಡಿಯವರು ಬರೆದಿರುವ ಹಿನ್ನುಡಿಯಲ್ಲಿ

ನೋಡಬಹುದು : "ಅಲಂಕಾರಗಳಿದ್ದರೂ ನಮ್ಮ 'ಮಹಾಕವಿ'ಗಳನ್ನು ನಮ್ಮ ಜನತೆಯ 'ಗುಡಿಸಲು'ಗಳಲ್ಲಿ ಕೇಳುತ್ತಿಲ್ಲ. ಒಪ್ಪಿದರೂ ಸರಿ, ಒಪ್ಪದಿದ್ದರೂ ಸರಿ-ಇಂದಿನದು ಜನಯುಗ. ಕವಿ ಜನವಾಣಿಯಾಗದಿದ್ದರೆ ಅವನು ಏನು ಬರೆದರೂ ಎಷ್ಟು ಬರೆದರೂ ಅಷ್ಟೆ. ಹೊಸಗನ್ನಡದಲ್ಲಿ ಇಂಥ ಕಾವ್ಯ ಈಚೆಗೆ ಬರುತ್ತಿರುವುದು ನಮ್ಮ ಉಜ್ವಲ ಭವಿಷ್ಯದ ಒಂದು ಚಿಹ್ನೆಯಾಗಿದೆ. ಹೊಸಗನ್ನಡ ಕಾವ್ಯದ ಮೂರು ತಲೆಮಾರುಗಳಲ್ಲಿ ಕಾಣದ ಹೊಸದೃಷ್ಟಿಯೊಂದು ಈಗ ಒಡಮೂಡುತ್ತಿದೆ. 'ಕಲೆಗಾಗಿ ಕಲೆ', 'ಕಾವ್ಯಕ್ಕಾಗಿ ಕಾವ್ಯ' ಎಂದು ನಂಬಿದವರು ತಮ್ಮ ಮನಸ್ಸನ್ನು, ನಿರ್ಧಾರವನ್ನು ಬದಲಿಸುತ್ತಿದ್ದಾರೆ. ಜನ ಓದಬೇಕೆಂದಲ್ಲವೇ ಬರೆಯುವುದು ? ತಮ್ಮ ಆಸೆ, ನಿರಾಸೆ, ಸುಖ-ದುಃಖಗಳು ಇಲ್ಲದ ಕಾವ್ಯ ಓದಿ ಜನ ಅಂಥದನ್ನು ಓದಬೇಕೆಂದು ಮತ್ತೊಮ್ಮೆ ಆಸೆಪಟ್ಟಾರೆ ?

ಈ 'ಜನಯುಗ' ಕನ್ನಡದಲ್ಲಿ, ಈಚೆಗೆ ಆರಂಭವಾಗಿದೆ. ದಿವಂಗತ ಶಿವೇಶ್ವರ ದೊಡ್ಡಮನಿಯಿಂದ ಆರಂಭವಾದ ಯುಗವಿದು. ಕಾವ್ಯವನ್ನು ಜನಜೀವನದ ಹೋರಾಟಕ್ಕೆ ಮೀಸಲಿಟ್ಟು ಅವರ ಬದುಕನ್ನು ಬೆಳಗುವುದು ಇದರ ಗುರಿ. ಇಂಥ ಕಾವ್ಯವನ್ನು 'ಎಡಕಾವ್ಯ, ಕೆಂಪು ಕಾವ್ಯ' ಎಂದು ಕರೆಯುತ್ತಾರೆ. ಕರೆದರೂ ಸರಿಯೆ. ಈ ಕಾವ್ಯ, ಕಾವ್ಯದ ಇತಿಹಾಸದಲ್ಲಿಯೆ ಮೊದಲ ಬಾರಿಗೆ ಸ್ಪಷ್ಟವಾಗಿ, ಧೈರ್ಯವಾಗಿ ಸಮಸ್ಯೆಗಳನ್ನು ತಿಳಿದುಕೊಂಡಿದೆ. ಹಾಗೆ ಅದು ಸ್ಪಷ್ಟವಾಗಿ ಹೇಳಿದೆ. ಇನ್ನೂ ಸ್ಪಷ್ಟವಾಗಿ ಹೇಳುವುದಾದರೆ ಅದು ಕಮ್ಯೂನಿಸ್ಟ ಕಾವ್ಯ. ........ರಾಜಕೀಯವನ್ನು ಬಿಟ್ಟು ಬಾಳಿಲ್ಲ. ಬಾಳನ್ನು ಬಿಟ್ಟು ಕಾವ್ಯವಿಲ್ಲ. ಜೀವನದ ಅನೇಕ ಮುಖಗಳ ಸಮನ್ವಯ ಈ ಜನತೆಯ ಕಾವ್ಯದ ಬೆನ್ನೆಲುಬು." (ಸು. ರಂ. ಎಕ್ಕುಂಡಿ, ೧೯೫೨)

ಇಂದಿನ ದಲಿತ ಬಂಡಾಯಕಾವ್ಯದ ಮ್ಯಾನಿಫೆಸ್ಟೊ ಕೂಡ ಆಗಬಹುದಾದ ಈ ಮಾತುಗಳು ಆ ಕಾಲದಲ್ಲಿ ಕಾವ್ಯರೂಪದ ಅಭಿವ್ಯಕ್ತಿಯನ್ನೂ ಪಡೆದವು. ಅಡಿಗರ 'ಓ ನನ್ನ ಜನವೇ' ಆಗಲಿ, ಬಂಕೀಕೊಡ್ಲದ ಮೀನುಗಾರರ ಸಂತ್ರಸ್ತ ಬದುಕಿಗೆ ಕನ್ನಡಿ ಹಿಡಿಯುವ ಎಕ್ಕುಂಡಿಯವರ ಕವಿತೆಗಳೇ ಆಗಲಿ ಈ ಮಾತಿಗೆ ಸಾಕ್ಷಿಯಾಗಿವೆ. ಉದಾಹರಣೆಯಾಗಿ ಕೆಳಗೆ ನೀಡಿರುವ ಗಂಗಾಧರ ಚಿತ್ತಾಲರ ಸಾಲುಗಳನ್ನು ಗಮನಿಸಿ.

> ಇಗೊ ಬೀದಿ;* ರಾಜಬೀದಿಯ ಕಳೆಯ ತಳೆದಿಹುದು
> ಇಕ್ಕೆಲಕು ಸಾಲುದೀಪಗಳ ಜಲ್ಲಿ
> ಹಗಲಿಗೂ ನಡೆಯುವುದು ಸುಲಿಗೆಗಳ್ಳರ ಕೊಳ್ಳೆ,
> ಲಕ್ಷ ಜೀವಗಳೊಡನೆ ಲೆಕ್ಕವಿಲ್ಲಿ !
> ತಾಯಾಗಿ ಬರಲಿರುವ ಸ್ವಾತಂತ್ರ್ಯವಿದು ಬಂತೆ

* ಧನಿಕವರ್ಗದ ಎಲ್ಲ ಅನಾಚಾರಗಳಿಗೆ ಪ್ರತೀಕವಾದ ಮುಂಬಯಿಯ ಕಾಳಬಾದೇವಿ ರಸ್ತೆ.

ಹಣದ ಮಕ್ಕಳ ಮನೆಯ ಸೂಳೆಯಾಗಿ ?
ಒಳಗೊಳಗೆ ಕುದಿದೆದ್ದ ಜೀವ ಕನಲುವುದು ಈ
ಮೋಸ ಮಾಟದ ಸುಡುವ ಹೋಳಿಯಾಗಿ !

(ಸಮಗ್ರ ಕಾವ್ಯ ಪುಟ ೪೦)

ಒಂದೆ ಒಂದೆ ಒಂದೆ ಒಂದೆ
ಜಗದ ಕುರುಡು ಸ್ವಾರ್ಥವೊಂದೆ
ಇವನ ಮೈಯನುಂಡಿತು. ಇವನ ಜೀವ ಹಿಂಡಿತು
ಅದನೆ ಅದನೆ ನೆನೆದು ಶಪಿಸಿ ಇವನ ಮೌನ ಕೂಗುತಿದೆ
ಇಳೆಯನಾಳ್ವ ಬಲವಂತರ ಕೈವಾಡಕೆ ರೇಗುತಿದೆ
ನೊಗವನೆತ್ತಿ ಒಗೆವೆನೆಂಬ ಹೊಂಚಿನಲ್ಲಿ ನೂಗುತಿದೆ
ಏಳಲಿಹುದು ಏಳಲಿಹುದು
ಒಂದು ದಿನದಲೇಳಲಿಹುದು
ಈ ಹಸಿದ ಮೈಯ್ಯೂ, ಕುಸಿವ ಕೈಯ್ಯೂ ಕನಲಿ ಕೆರಳಿ ಏಳಲಿಹುದು
ಬಿರುಗಾಳಿಯ ಕೂಗಿನಿಂದ
ಮೂಜಗವನೆ ನಡುಗಿಸುತ್ತ
ತನ್ನ ತುಳಿದ ಸುಲಿದ ಕತೆಗೆ ಒಂದುತ್ತರ ಕೇಳಲಿಹುದು !

(ಸಮಗ್ರ ಕಾವ್ಯ, ಪುಟ ೪೬)

ಇದೇ ರೀತಿಯಲ್ಲಿ ರಾಮಚಂದ್ರ ಶರ್ಮರ 'ಎಂದಿಗೆ' ಎಂಬ ಕವಿತೆಯಲ್ಲಿ ಬರುವ ಸಾಲುಗಳನ್ನೂ ನೆನಪುಮಾಡಿಕೊಳ್ಳಬಹುದು.

ಇರುಳ ಬಸಿರ ಬಗೆದು ಉದಯರಾಗ ಬರುವುದೆಂದಿಗೆ ?
ನನ್ನ ನಾಡ ಮಂದಿಗೆ ?
ನಾಡ ಮೂಲೆಮೂಲೆಗೆ ರಾಜಬೀದಿ ಸಂದಿಗೆ.
ಕ್ರಾಂತಿಭಾನು ಹೊಳೆದು ಹೊಂಬೆಳಕ ಚೆಲ್ವುದೆಂದಿಗೆ ?
ಎಂದಿಗಯ್ಯ ಎಂದಿಗೆ ?

(ಹೃದಯಗೀತೆ, ಪುಟ ೪೦)

ನಿದರ್ಶನಗಳ ಪಟ್ಟಿಯನ್ನು ಬೆಳೆಸದೆ ಹೇಳುವುದಾದರೂ ಹಲವು ಒಳ್ಳೆಯ ಪ್ರಗತಿಪರ ಕವಿತೆಗಳು ಈ ಅವಧಿಯಲ್ಲಿ ಬಂದವೆನ್ನುವುದು ನಿರ್ವಿವಾದವಾದ ಸಂಗತಿ. ದ. ರಾ. ಬೇಂದ್ರೆಯವರೂ ಇದರ ಅಸ್ತಿತ್ವವನ್ನು ಗುರುತಿಸಿ, ತಮ್ಮದೇ ಆದ ರೀತಿಯಲ್ಲಿ ಅದನ್ನು ಟೀಕಿಸುತ್ತಾರೆ. ಅವರ ಪ್ರಕಾರ ಇದು ವಾಸ್ತವಿಕ ಕಾವ್ಯ.

" ಯಾವ ವಾಸ್ತವಿಕತೆಯಲ್ಲಿಯೂ ಪ್ರತ್ಯಕ್ಷವೇ ಪರಮಸತ್ಯ. ಅದಕ್ಕೆ ತತ್ವಜ್ಞಾನ, ಅಪರೋಕ್ಷದ ಅನುಭವ ಎರಡೂ ಬಾಯಿಬ್ರಹ್ಮದ ಬಡಬಡಿಕೆ ಎಂದು ತೋರುವುದು. ಹೀಗಾಗಿ ರಾಜಕೀಯ ಸಾಮಾಜಿಕ ಚಳುವಳಿಗಳ ಚಲಚ್ಚಿತ್ರವೇ ವಾಸ್ತವಿಕತೆಗೆ ಪರಮಾರಾಧ್ಯವಾಗಿಬಿಡುವುದು. ಸಾಹಿತ್ಯದ, ಅದರಲ್ಲೂ ರಸವತ್ಕವಿತೆಯ ಪ್ರಕೃತಿ ಇದರಿಂದ ಬಹುದೂರ. ಕವಿತೆ ಯಾವ ಬಣ್ಣಗಳನ್ನು ಬಣ್ಣಿಸಿದರೂ ಅದರ ಭಾವ ಎಲ್ಲ ಜೀವದಂತೆ ಬೆಳಕಿನತ್ತ ಹರಿಯುತ್ತದೆ. ವಾಸ್ತವಿಕತೆಯು ಸಾಹಿತ್ಯದ ಕಣ್ಣನ್ನೇ ಬೇರೆ ಮುಖವಾಗಿ ಹೊರಳಿಸಿದರೂ ಸಾಹಿತ್ಯವು ವಾಸ್ತವಿಕತೆಯ ಬಣ್ಣವನ್ನೇ ಬದಲುಮಾಡಿಬಿಡುತ್ತದೆ.

ವಾಸ್ತವಿಕತೆಯ ಚಪಲದಿಂದ ಕವಿತೆಯ ಭಾಷೆ, ಛಂದ, ವಿಷಯ ಎಲ್ಲವೂ ತಮಗೆ ತೋಚಿದ ಮಾರ್ಗ ಇಂದು ಹಿಡಿದಿವೆ............. ವಾಸ್ತವಿಕತೆ ಪ್ರಗತಿವಾದವನ್ನು ಹೂಡಿದೆ." ('ಕನ್ನಡ ಸಾಹಿತ್ಯದಲ್ಲಿ ವಾಸ್ತವತೆ', ೧೯೫೭)

ಇಲ್ಲಿ ಪ್ರಗತಿಶೀಲತೆ ಎಂಬ ಆಶಯಕ್ಕೂ ವಾಸ್ತವಮಾರ್ಗ ಎಂಬ ಬರವಣಿಗೆಯ ತಂತ್ರಕ್ಕೂ ತಳುಕು ಹಾಕಲು ಬೇಂದ್ರೆಯವರು ಪ್ರಯತ್ನಿಸಿದ್ದಾರೆ. ಇದು ಸಾಧುವಲ್ಲ. ಪ್ರಗತಿಪರವಾದ ಆಶಯಗಳನ್ನು ಹೊಂದಿರುವ ಕವಿತೆಯೆಲ್ಲವೂ ವಾಸ್ತವಮಾರ್ಗಕ್ಕೆ ಶರಣಾಗಬೇಕಿಲ್ಲ. ಹಾಗೆ ನೋಡಿದರೆ ಪ್ರಗತಿಶೀಲತೆ ಮತ್ತು ಮಾನವತಾವಾದಗಳ ಸಂಯೋಜನೆಯು ಸಾಕಷ್ಟು ಭಾವನಾತ್ಮಕ ಚೈತನ್ಯವನ್ನು ಪಡೆದಿರುತ್ತದೆ. ಕನ್ನಡದಲ್ಲಿ ಅಲ್ಲದಿದ್ದರೂ ಇತರ ಭಾಷೆಗಳಲ್ಲಿ ಇಂತಹ ಕಾವ್ಯವು ಬಹು ಯಶಸ್ವಿಯಾಗಿ ಬಂದಿದೆ. ಪಾಬ್ಲೋ ನೆರುಡಾಗಿಂತ ಪರಿಣಾಮಕಾರಿಯಾದ ನಿದರ್ಶನವನ್ನು ನೀಡುವ ಅಗತ್ಯವಿಲ್ಲ.

ಕನ್ನಡದ ಕಾವ್ಯದ ಆಕೃತಿ ಮತ್ತು ಭಾಷಾಶರೀರದ ಮೇಲೆ ಪ್ರಗತಿಶೀಲತೆಯು ಬೀರಿದ ಪ್ರಭಾವದ ಶೋಧನೆ ಕೂಡ ಕುತೂಹಲಕಾರಿಯಾದುದು. ಸಹಜವಾಗಿಯೇ ಸಂಕೀರ್ಣತೆಯಿಂದ ಮಾತುಗಾರಿಕೆಯ ಕಡೆಗೆ, ಬಹುಮುಖತೆಯಿಂದ ಏಕತಾನತೆಯ ಕಡೆಗೆ ಚಲನೆಯು ಪ್ರಾರಂಭವಾಯಿತು. ಹಲವು ಕವಿತೆಗಳಲ್ಲಿ ಪರಸ್ಪರ ಪೂರಕವೋ ವಿರುದ್ಧವೋ ಆದ ಧೋರಣೆಗಳನ್ನು ತಳೆಯುವ ಸ್ವಾತಂತ್ರ್ಯವನ್ನು(!) ಉಳಿಸಿಕೊಂಡಿದ್ದ ಸನ್ನಿವೇಶದ ಬದಲು, ಒಬ್ಬನೇ ಕವಿಯ ಎಲ್ಲ ಕವಿತೆಗಳ ಹಿಂದೆ ಗುಪ್ತಗಾಮಿಯಾದ, ಸೂರ್ಯಸ್ಪಷ್ಟವಾದ ವೈಚಾರಿಕ ಧೋರಣೆಯೊಂದು ಇರತೊಡಗಿತು. ಗೇಯತೆ ಮತ್ತು ನಿಯತ ಲಯಗಳು ಸಂಪೂರ್ಣವಾಗಿ ಬಹಿಷ್ಕೃತವಾಗದಿದ್ದರೂ ಮುಕ್ತಛಂದದ ಕಡೆಗಿನ ಪಯಣವು ಈ ಅವಧಿಯಲ್ಲೇ ಪ್ರಾರಂಭವಾಯಿತು. ಆದರೆ ಕವಿತೆಯಂಥ ಮಾಧ್ಯಮದಲ್ಲಿ ಸಹಜವಾಗಿಯೇ ಆಗುವಂತೆ, ನಿಜವಾದ ಕವಿಯು " ಸಾರ್ವಜನಿಕವಾದ ಭಾಷೆಯ ಮೇಲೆ ಸ್ವಂತಿಕೆಯ ಛಾಪುಹಾಕಿ " ತನ್ನದೇ ಆದ ಶೈಲಿಯನ್ನು ಬೆಳೆಸಿಕೊಳ್ಳುವ ಕ್ರಿಯೆಯು ಪ್ರಗತಿಶೀಲರಲ್ಲಿ ಉತ್ತಮರಾದವರಿಗೆ ಸಾಧ್ಯವಾಯಿತು. ಉಳಿದಂತೆ ಬಂಡಾಯಕವಿಗಳ ಮೇಲೆ ಇಂದು ಮಾಡಲಾಗುತ್ತಿರುವ ಮುಖಹೀನತೆಯ ಆರೋಪಕ್ಕೆ

ಅರ್ಹರಾದ ಅನೇಕ ಕವಿಗಳು ಆಗಲೂ ಇದ್ದು ಈಗ ಮರವೆಗೆ ಸಂದಿರುವರೆನ್ನುವುದರಲ್ಲಿ ಅನುಮಾನವಿಲ್ಲ. ಕಾವ್ಯಭಾಷೆಯನ್ನು ಜನಭಾಷೆಯ ಕಡೆಗೆ ಒಯ್ಯುವ ಪ್ರಯತ್ನದಲ್ಲಿ ಈ ಕವಿಗಳು ಯಶಸ್ವಿಯಾಗಲಿಲ್ಲ. ಮಧ್ಯಮ ವರ್ಗದ ಪ್ರಮಾಣೀಕೃತ ಕನ್ನಡ ಮಾತ್ರವೇ ಕಾವ್ಯಭಾಷೆಯಾಗಲು ಸೂಕ್ತವೆಂಬ ನಿಲುವನ್ನು ಇವರು ತಳೆದಂತೆ ತೋರುತ್ತದೆ. 'ರತ್ನನ ಪದಗಳು' ಸಂಕಲನದ ಕೆಲವು ಕವಿತೆಗಳನ್ನು ಬಿಟ್ಟರೆ ಈ ಮಾತಿಗೆ ಅಪವಾದವಿಲ್ಲ.

ಹೀಗೆ ಪ್ರಗತಿಶೀಲ ಚಳುವಳಿಯ ಅವಧಿಯಲ್ಲಿ ಹಾಗೂ ನಂತರದ ಕೆಲವು ವರ್ಷಗಳಲ್ಲಿ ಕಾವ್ಯವು ಆ ದಿಕ್ಕಿನಲ್ಲಿ ಕೆಲವು ಹೆಜ್ಜೆಗಳನ್ನಿಟ್ಟಿತು. ನಂತರದ ನವ್ಯಕಾವ್ಯದಲ್ಲಿ ಸಾಮಾಜಿಕ ಪರಿವರ್ತನೆಯ ಸಾಧ್ಯತೆಯನ್ನು ಕುರಿತಂತೆ ಮೂಡಿಬಂದ ಅನುಮಾನಗಳು ಪ್ರಗತಿಶೀಲತೆಗೆ ತಾತ್ಕಾಲಿಕವಾದ ನಿಲುಗಡೆಯನ್ನು ತಂದವು.

**ನಾಟಕ - ರಂಗಭೂಮಿ :**

ನಾಟಕದ ಬಗ್ಗೆ ಮಾತನಾಡುವಾಗ ರಂಗಭೂಮಿಯ ಹಿನ್ನೆಲೆಯು ಅನಿವಾರ್ಯವಾದರೂ ಕನ್ನಡದ ಮಟ್ಟಿಗಂತೂ ಅವೆರಡರ ನಡುವೆ ಏರ್ಪಟ್ಟಿ ಕಂದರವು ಸಾಹಿತ್ಯಕ ನಾಟಕಗಳ ಪ್ರತ್ಯೇಕ ಪರಿಶೀಲನೆಯನ್ನು ಅನಿವಾರ್ಯವಾಗಿ ಮಾಡುತ್ತದೆ. ತಮ್ಮ ಸಾಮಾಜಿಕ ಆಶಯಗಳ ಪ್ರಚಾರ ಮತ್ತು ಪ್ರಸಾರಗಳಿಗೆ ನಾಟಕವು ಅತಿ ಪ್ರಬಲ ಮಾಧ್ಯಮವೆಂಬ ಸಂಗತಿಯನ್ನು ಎಂಬತ್ತು ಮತ್ತು ತೊಂಬತ್ತರ ದಶಕಗಳ ರಂಗಭೂಮಿಯು ಕಂಡುಕೊಂಡಂತೆ ಪ್ರಗತಿಶೀಲ ಲೇಖಕರು ಮನಗಾಣಲಿಲ್ಲ. ಅವರು ಪ್ರೊಫೆಶನಲ್ ಕಂಪನಿಗಳಿಂದ ದೂರ ಉಳಿದಂತೆಯೇ ಕಲಾವಿಲಾಸೀ ರಂಗಭೂಮಿಯನ್ನು ಪ್ರಹಸನಪ್ರಿಯತೆಯ ದಿಕ್ಕಿನಲ್ಲಿ ನಡೆಸಿದರು. ಇಪ್ಟಾದಂತಹ (ಇಂಡಿಯನ್ ಪೀಪಲ್ಸ್ ಥಿಯೇಟರ್ ಅಸೋಸಿಯೇಶನ್) ಸಂಘಟನೆಗಳು ಕರ್ನಾಟಕದಲ್ಲಿ ತಮ್ಮ ಅಸ್ತಿತ್ವವನ್ನು ಕಂಡುಕೊಳ್ಳಲಿಲ್ಲ. ಇಂಥ ಸನ್ನಿವೇಶದಲ್ಲಿ ಸಾಮಾಜಿಕ ಸಮಸ್ಯೆಗಳನ್ನು ಕುರಿತ ನಾಟಕಗಳು ರಚಿತವಾದರೂ ಪ್ರದರ್ಶಿತವಾದರೂ ಒಂದು ರಂಗಚಳುವಳಿಯನ್ನು ನೆಲೆನಿಲ್ಲಿಸುವ ನಿಟ್ಟಿನಲ್ಲಿ ಅವು ಯಶಸ್ವಿಯಾಗಲಿಲ್ಲ. ಅನುವಾದಗಳ ಸಂದರ್ಭದಲ್ಲಿಯೂ ಭಾರತೀಯ ಭಾಷೆಗಳಲ್ಲಿಯೇ ರಚಿತವಾಗುತ್ತಿದ್ದ ಪ್ರಗತಿಪರ ನಾಟಕಗಳ ಕಡೆಗೆ ಗಮನ ಹರಿಯಲಿಲ್ಲ. ಆಂಟನ್ ಚೆಖಾವ್, ಇಬ್ಸೆನ್, ಬರ್ನಾರ್ಡ್ ಶಾ ಮುಂತಾದವರ ಕೃತಿಗಳ ಅನುವಾದಗಳೋ ರೂಪಾಂತರಗಳೊ ಆಗೊಮ್ಮೆ ಈಗೊಮ್ಮೆ ಹೊರಬಂದರೂ ತೀವ್ರ ಪ್ರಭಾವವನ್ನು ಬೀರಲಿಲ್ಲ.

ಇಂಥ ಸನ್ನಿವೇಶದಲ್ಲಿ ನಿಜವಾಗಿಯೂ ಪ್ರಗತಿಪರವಾದ ನಾಟಕಗಳನ್ನು ಬರೆಯುವುದು ಸಾಧ್ಯವಿತ್ತೇ ವಿನಾ ಆಡುವುದಲ್ಲ. ಕುವೆಂಪುರವರ 'ಶೂದ್ರ ತಪಸ್ವಿ', 'ಜಲಗಾರ', 'ಬೆರಳ್ಗೆ ಕೊರಳ್', ಬೇಂದ್ರೆಯವರ 'ಉದ್ಧಾರ' ಹಾಗೂ ಗೋಕಾಕರ 'ಯುಗಾಂತರ'ದಂತಹ ನಾಟಕಗಳು ಈ ರೀತಿಯ ಸಾಹಿತ್ಯಕ ಮತ್ತು ಪ್ರಗತಿಪರ ನಾಟಕಗಳ ಪರಂಪರೆಯನ್ನು ಹಾಕಿಕೊಟ್ಟಿದ್ದವು. ಅವುಗಳ ಪೌರಾಣಿಕವಾದ ಕಥಾವಸ್ತು

ಮತ್ತು ಆರ್ಷೇಯವಾದ ಭಾಷಾಶರೀರಗಳು ಕುವೆಂಪುರವರ ನಾಟಕಗಳ ಕ್ರಾಂತಿಕಾರಕತೆಯನ್ನು ಮರೆಮಾಡಿದವು.

ಕೈಲಾಸಂ ಅವರ ವ್ಯಕ್ತಿತ್ವ ಮತ್ತು ಕೃತಿಗಳು ಈ ಸಂದರ್ಭದಲ್ಲಿ ಗಂಭೀರವಾದ ಪರಿಶೀಲನೆಯನ್ನು ಬಯಸುತ್ತವೆ. ಹಾಗೆ ನೋಡಿದರೆ ಅನೇಕ ಪ್ರಗತಿಶೀಲ ಲೇಖಕರಿಗೆ ಒಂದು ಬಗೆಯ 'ಬೊಹೆಮಿಯನ್ ಮಾದರಿ'ಯನ್ನು ಒದಗಿಸಿದವರೇ ಕೈಲಾಸಂ. ಈ ಬೊಹೆಮಿಯನಿಸಂ, ಬಂಡಾಯ ಮತ್ತು ಅಸಹಾಯಕತೆಗಳು ಏಕತ್ರ ಸಂಧಿಸಿದಾಗ ಉಂಟಾಗುವ ಪರಿಣಾಮ. ತನ್ನ ಸುತ್ತಲಿನ ಬದುಕಿನ ಟೊಳ್ಳುತನ ಹಾಗೂ ಅದರ ನಡುವೆ ಎಲ್ಲೋ ಉಸಿರಾಡುತ್ತಿದ್ದ ಮಾನವೀಯತೆಯನ್ನು ಒಟ್ಟಿಗೆ ಗ್ರಹಿಸಿದ್ದ ಕೈಲಾಸಂ, ಸುಧಾರಣೆಯ ಪ್ರಯತ್ನಗಳು ನಿಷ್ಪ್ರಯೋಜಕವೆಂದು ಮನಗಂಡಿದ್ದರು. ಅವರು ಪಾಶ್ಚಾತ್ಯಸಂಸ್ಕೃತಿಯ ನಿಕಟ ಪರಿಚಯ ಪಡೆದ ನಂತರವೂ ಅದರ ಅನುಕರಣೆಯ ಅಪಾಯಗಳಿಗೆ ಕುರುಡಾಗಿರಲಿಲ್ಲ. ತಮಗೆ ಸಹಜವಾಗಿದ್ದ ಮಧ್ಯಮವರ್ಗದ ಮಿತಿಗಳನ್ನು ದಾಟಲು ಅವರು ಅಪವರ್ಗೀಕರಣದ ಸಾಧ್ಯತೆಗಳನ್ನು ಶೋಧಿಸಿದರು. ಅವರ ಬರವಣಿಗೆಯಲ್ಲಿಯೂ ಅಂಥ ಪಾತ್ರಗಳು ಕಾಣಿಸಿಕೊಂಡವು. (ತಾವರೆಕೆರೆ) ಆದರೆ ಸ್ವಂತ ಜೀವನಕ್ರಮದಲ್ಲಿ ಕಂಡುಕೊಂಡ ಲಂಘನಗಳು ಅವರನ್ನು ರೊಮಾಂಟಿಕ್ ಆಗಿಸಿದವೇ ವಿನಾ ಸಮಾಜಮುಖಿಯಾಗಿಸಲಿಲ್ಲ. ಆದರೆ ಈ ಪರಿಮಿತಿಗಳ ನಡುವೆಯೂ ಹೆಣ್ಣಿನ, ('ಬಹಿಷ್ಕಾರ', 'ಸೂಳೆ', 'ಹೋಮ್ ರೂಲು'), ಬಡವನ (ಪೋಲಿ ಕಿಟ್ಟಿ) ಶೋಷಣೆಯನ್ನು ಗುರುತಿಸಿ ದಾಖಲೆಮಾಡಿದ್ದು ಪ್ರಗತಿಪರವೆಂದೇ ಹೇಳಬೇಕು. ಅವರ ಇಂಗ್ಲಿಷ್ ನಾಟಕಗಳಲ್ಲಿ ಏಕಲವ್ಯ, ಕರ್ಣರಿಗೆ ಆದ ಅನ್ಯಾಯವನ್ನು ನಿರೂಪಿಸುವಾಗಲೂ ಇಂಥದೊಂದು ವರ್ಣಾಧಾರಿತ ಶೋಷಣೆಯ ತಿಳಿವಳಿಕೆಯನ್ನು ಗುರುತಿಸಬಹುದು. ಅತಿ ಭಾವುಕತೆ, ಹಾಗೂ ನಿಯೋಗರಹಿತವಾದ ಹಾಸ್ಯದಿಂದ ತಪ್ಪಿಸಿಕೊಂಡಿದ್ದರೆ ಅವರು ಇನ್ನೂ ಮಹತ್ವದ ಸಾಧನೆ ಮಾಡಬಹುದಿತ್ತು.

ನಿಜವಾಗಿಯೂ ಗಂಭೀರವಾದ ಚರ್ಚೆಯನ್ನು ಬಯಸುವುದು ಪ್ರಗತಿಶೀಲ ಚಳುವಳಿಯ ಸಂಗಡವೂ ಸಂಬಂಧದ ನೆಲೆಗಳನ್ನು ಸ್ಥಾಪಿಸಿಕೊಂಡಿದ್ದ ಶ್ರೀರಂಗರ ನಾಟಕಗಳು. ಇಂಗ್ಲೆಂಡಿನಲ್ಲಿದ್ದಾಗ ಅವರು ಬರ್ನಾರ್ಡ್ ಷಾನ ನಾಟಕಗಳ ನಿಕಟ ಪರಿಚಯ ಪಡೆದರೆಂಬ ಸಂಗತಿಯೂ ಗಮನೀಯವಾದುದು. ವಿಚಾರಕೇಂದ್ರಿತ ರಂಗಭೂಮಿಯ ಸಾಧ್ಯತೆಗಳನ್ನು ಅನ್ವೇಷಿಸಿದ ಶ್ರೀರಂಗರು ಭಾವೋದ್ರೇಕಗಳಿಗೆ ಎಡೆಮಾಡಿಕೊಡುವ ಸಂಭವ ಇರಲಿಲ್ಲ. ಅವರು ಗಾಂಧಿಯವರ ವಿಚಾರಗಳಿಂದ ಹಾಗೆಯೇ ಸಂಸ್ಕೃತಸಾಹಿತ್ಯದ ಆಳವಾದ ಅಧ್ಯಯನದಿಂದ ಪ್ರಭಾವಿತರಾದವರು. ಒಂದು ನೆಲೆಯಲ್ಲಿ, ಅವರಲ್ಲಿ ಪೌರ್ವಾತ್ಯ - ಪಾಶ್ಚಿಮಾತ್ಯಗಳ ಶಕ್ತ ಸಂಯೋಜನೆಯನ್ನು ಗುರುತಿಸಲು ಸಾಧ್ಯ. ಇದೆಲ್ಲದರ ಫಲವಾಗಿ ತುಂಬ ಪರಿಣಾಮಕಾರಿಯಾದ ಪ್ರಗತಿಪರ ನಾಟಕಗಳನ್ನು ಬರೆಯಲು ಅವರಿಗೆ

ಸಾಧ್ಯವಾಯಿತು. 'ಹರಿಜನ್ವಾರ', 'ಶೋಕಚಕ್ರ' ಮತ್ತು 'ಸಂಧ್ಯಾಕಾಲ'ದಂತಹ ಕೃತಿಗಳು ಸಮುದಾಯವಿಮರ್ಶೆಯಲ್ಲಿ ಮಾತ್ರವಲ್ಲ, ಆತ್ಮವಿಮರ್ಶೆಯಲ್ಲಿಯೂ ತೊಡಗುತ್ತವೆ. ಬಹಿರಂಗದ ಆಗುಹೋಗುಗಳು ವ್ಯಕ್ತಿಗಳ ಅಂತರಂಗದಲ್ಲಿ ಮೂಡಿಸುವ ತುಮುಲಗಳನ್ನು ಶ್ರೀರಂಗರು ಯಾವಾಗಲೂ ನಿರ್ಲಕ್ಷಿಸುವುದಿಲ್ಲ. ಅಲ್ಲದೆ ನಾಟಕಮಾಧ್ಯಮವೇ ದ್ವಂದ್ವಗಳ ಮುಖಾಮುಖಿಯನ್ನು ಬಯಸುವುದರಿಂದ ಅಸಂಕೀರ್ಣ ಏಕತಾನತೆಯಿಂದ ತಪ್ಪಿಸಿಕೊಳುತ್ತವೆ. ಆದರೆ ಶ್ರೀರಂಗರು ಮಾತಿಗೆ ನೀಡುವ ಅತಿಮಹತ್ವದಿಂದಲೇ, ಕ್ರಿಯೆಯಿಂದ ಆಕಾರಪಡೆಯುವ ನಾಟಕೀಯತೆಗೆ ಎರವಾಗುತ್ತಾರೆ. ಭಾವನೆಯು ಮಾತುಗಳ ಪ್ರವಾಹದಲ್ಲಿ ಮುಳುಗಿಹೋಗಬಹುದೆಂಬ ಸರಳ ಸಂಗತಿಯು ಅವರ ಗಮನಕ್ಕೆ ಬರದೆಹೋಗುತ್ತದೆ. ಪ್ರಗತಿಶೀಲರ ಕಥೆ ಕಾದಂಬರಿಗಳಲ್ಲಿ ಕಾಣಿಸಿಕೊಳ್ಳುವ ಅತಿ ಮಾತುಗಾರಿಕೆಯು ಕಿರಿಯಾಳದ ಹುಸಿ ಭಾವುಕತೆಗೆ ಕಾರಣವಾದರೆ, ಶ್ರೀರಂಗರ ಅನೇಕ ಅಮುಖ್ಯ ನಾಟಕಗಳಲ್ಲಿ ಭಾವನೆಗಳ ಸೆಲೆಯು ಒಣಗಿಹೋಗುತ್ತದೆ. ಅಲ್ಲದೆ ಅವರ ಅನೇಕ ಪಾತ್ರಗಳು ಪ್ರತಿನಿಧೀಕರಣದ ದೋಷಕ್ಕೆ ಪಕ್ಕಾಗುತ್ತವೆ. ಎಂದರೆ ತಾವು ಹೇಳಬೇಕಾದ ಯಾವುದೋ ದೃಷ್ಟಿಕೋನದ ಪ್ರತಿನಿಧಿಗಳಂತೆ ಅವರು ಪಾತ್ರಗಳನ್ನು ರೂಪಿಸುತ್ತಾರೆ. ಪರಿಣಾಮವಾಗಿ ಆ ಪಾತ್ರಗಳು ತಮ್ಮ ಬಹುಮುಖ ವಿಕಸನ ಸಾಧ್ಯತೆಯನ್ನು ಕಳೆದುಕೊಂಡು ಸೂತ್ರದ ಗೊಂಬೆಗಳಾಗಿಬಿಡುತ್ತವೆ. ಗಂಡುಹೆಣ್ಣಿನ ಸಂಬಂಧ, ಸಾಮಾಜಿಕ ಅಧಃಪತನದ ಕಾರಣಮೀಮಾಂಸೆ ಮುಂತಾದ ಸಂಗತಿಗಳು ಆಧುನಿಕವೂ ಪ್ರಖರವೂ ಆದ ವಿಚಾರಗಳಾಗಿ ಹೊರಬರುತ್ತವೆಯೇ ವಿನಾ ನಾಟಕ ಕ್ರಿಯೆಯ ಅನಿವಾರ್ಯ ಅಂಗವಾಗಿ ಅಲ್ಲ. ಪ್ರಗತಿಶೀಲ ಲೇಖಕನಿಗೆ ಅಗತ್ಯವಾದ ಮುಗ್ಧ ಉತ್ಸಾಹವಾಗಲೀ ಗಾಢ ವಿಷಾದದ ನಡುವೆಯೂ ಪರಿವರ್ತನೆಯನ್ನು ಬಯಸುವ ಛಲವಾಗಲೀ ಶ್ರೀರಂಗರಲ್ಲಿ ಇಲ್ಲದೆ ಹೋದುದರಿಂದ ಅವರ ಕೃತಿಗಳು ಕ್ರಮೇಣ ಸಿನಿಕತೆಯ ಕಡೆಗೆ ಚಲಿಸಿದವು. ಸಿನಿಕತೆಯು ಪ್ರಗತಿಪರತೆಯ ಬಹು ದೊಡ್ಡ ಶತ್ರು.

ಉಳಿದಂತೆ ಗ್ರಾಮೀಣ ಪ್ರೇಕ್ಷಕ ವರ್ಗವನ್ನಾಗಲಿ, ನಗರಗಳ ಅವಿದ್ಯಾವಂತ ಕಾರ್ಮಿಕ ಸಮುದಾಯವನ್ನಾಗಲಿ ತಲುಪಲು ಯಾವುದೇ ಪ್ರಯತ್ನವನ್ನು ಮಾಡದೆ ಉಳಿದ ಆ ಕಾಲದ ರಂಗಭೂಮಿ ಹಾಗೂ ನಾಟಕಗಳು ಮನರಂಜನಪರವಾದ ಆಶಯಗಳನ್ನು ಉಲ್ಲಂಘಿಸಿ ಪ್ರಗತಿಪರ ಸಾಧ್ಯತೆಗಳನ್ನು ಪಡೆಯಲಿಲ್ಲ.

## ಸಣ್ಣಕಥೆ :

ಈ ಚಳುವಳಿಯು ಕಾದಂಬರಿಗಳಿಗೆ ನೀಡಿದ ಮಹತ್ವವನ್ನು ಕಥೆಗಳಿಗೆ ನೀಡಲಿಲ್ಲ. ವಿರಾಮಗತಿಯ, ವಿವರವಿಪುಲವಾದ ಈ ಲೇಖಕರ ಶೈಲಿಗೆ ಸಣ್ಣ ಕಥೆಯ ಮಾಧ್ಯಮ ಒಗ್ಗಲಿಲ್ಲ. ಆದರೂ ಚದುರಂಗ, ಕಟ್ಟೀಮನಿ, ನಿರಂಜನ, ವ್ಯಾಸರಾಯ ಬಲ್ಲಾಳ, ಕೋ. ಚೆನ್ನಬಸಪ್ಪ ಮುಂತಾದವರು ಚಳುವಳಿಯ ಅವಧಿಯಲ್ಲಿ ಮತ್ತು ಅನಂತರ ಅನೇಕ ಮಹತ್ವದ ಕಥೆಗಳನ್ನು ಬರೆದರು. ಕೊನೆಯ

ಗಿರಾಕಿ' (ನಿರಂಜನ), 'ಗಿರಿಜಾ ಕಂಡ ಸಿನಿಮಾ' (ಕಟ್ಟೀಮನಿ), 'ಶವದ ಮನೆ' (ಚದುರಂಗ), 'ಮುಕ್ಕಣ್ಣನ ಮುಕ್ತಿ' (ಕೋ. ಚೆನ್ನಬಸಪ್ಪ), 'ಧನಿಯರ ಸತ್ಯನಾರಾಯಣ' (ಕೊರಡ್ಕಲ್ ಶ್ರೀನಿವಾಸರಾವ್) ಮುಂತಾದ ಕತೆಗಳು ಇಂದಿಗೂ ಉದ್ದೇಶಿತ ಓದುಗರಿಗೆ ಪರಿಣಾಮಕಾರಿಯಾಗಿವೆ. ಇಂಥ ಕಥೆಗಳ ಸೋಲು ಗೆಲುವುಗಳ ಕಾರಣಗಳನ್ನು ಅಂದು ಅವುಗಳಿಗೆ ದೊರೆತ ವಿಮರ್ಶಾತ್ಮಕ ಪ್ರತಿಕ್ರಿಯೆಯ ಹಿನ್ನೆಲೆಯಲ್ಲಿ ಪರಿಶೀಲಿಸುವುದು ಅಗತ್ಯ.

ಕನ್ನಡದ ಶ್ರೇಷ್ಠ ಕಥೆಗಾರರಾದ ಮಾಸ್ತಿಯವರು ಪ್ರಗತಿಶೀಲ ಕಥಾಸಾಹಿತ್ಯಕ್ಕೆ ವಿವರವಾಗಿ ಮತ್ತು ಕಟುವಾಗಿ ಪ್ರತಿಕ್ರಿಯಿಸಿದ್ದಾರೆ. ಅವರು ಈ ದಾರಿಯನ್ನು 'ವಾಸ್ತವವನ್ನು ಕಟ್ಟಿಕೊಂಡು ಕೆಡುವ ಮಾರ್ಗ' ಎಂದೇ ಕರೆದರು. : " ವಾಸ್ತವಿಕತೆ ಅತಿಯಾಗುವುದಕ್ಕೆ ಇತ್ತೀಚೆಗೆ ಒಂದು ಹೊಸ ಕಾರಣ ಒದಗಿದೆ. ಇದು ಸಾಹಿತ್ಯವನ್ನು Progressive ಮಾಡುವ ಹಂಬಲ. ಸಾಹಿತ್ಯ ದಲಿತ ದರಿದ್ರ ನಿರ್ಭಾಗ್ಯರ ಜೀವನವನ್ನು ಚಿತ್ರಿಸಿ ಅದನ್ನು ಸರಿಪಡಿಸುವ ಸಾಧನವಾಗಬೇಕು ಎಂಬುದು ಈ ಹಂಬಲದ ಹಿಂದಿನ ಮನೋಧರ್ಮ. ಇದು ಶ್ಲಾಘನೀಯವೇ. ಆದರೆ ಸಾಹಿತ್ಯವನ್ನು ಈ ಸಾಧನವಾಗಿ ಮಾಡುವುದರಲ್ಲಿ ಲೇಖಕರು ಕೊಳಕುಕೊಚ್ಚೆ ಅಷ್ಟನ್ನು ವಿವರಿಸುತ್ತಾ ಕಲೆಯ ಮಿತಿಯನ್ನು ಮರೆತು ಒಂದು ವರದಿಯ ರೀತಿಯಲ್ಲಿ ವಿವರಗಳನ್ನು ಸೇರಿಸುತ್ತಾರೆ.... .... .... ವಿವರಣೆಯ ಅತಿರೇಕ ಬೇಡದಿರುವುದಕ್ಕೆ ಕಾರಣ ಇದು. .....ಒಳಗಿನ ಬೇನೆ ಬೇಸರವನ್ನು ಚಿತ್ರಿಸುವುದಕ್ಕೆ ಪೂರ್ಣ ವರ್ಣನೆ ಅನವಶ್ಯಕ. ಕತೆ, ಚಿತ್ರ, ಶಿಲ್ಪವನ್ನು ನಿರ್ಮಿಸಿದವರೊಂದಿಗೆ ನಾವು ಸೇರಿ ಅವರ ಕೃತಿಯನ್ನು ಪೂರ್ಣಮಾಡುತ್ತೇವೆ. ಅವರು ನಮ್ಮ ಮನಸ್ಸಿನಲ್ಲಿ ಜೀವನವನ್ನು ಉತ್ಪಾದಿಸಲು ಸಾಕಾದಷ್ಟು ವಿವರವನ್ನು ಕೊಡಬೇಕು. ಅಂದರೆ ಕಲೆ ಅವಲಂಬಿಸುವ ಪದ್ಧತಿ ಸೂಚನೆ. ಇದು ಚೆನ್ನಾಗಿ ನಡೆದಾಗ ವರ್ಣಿತವಸ್ತು ಎದುರಿಗೆ ಇಲ್ಲದೆ ಪ್ರತ್ಯಕ್ಷವಾಗುತ್ತದೆ. " (ಮಾಸ್ತಿ ' ಸಣ್ಣ ಕತೆಯಲ್ಲಿ ವಾಸ್ತವತೆಯ ಸ್ಥಾನ ', ೧೯೫೭)

ತನ್ನ ಕಾಲದ ಓದುಗರ ಮೇಲೆ ಸಾಕಷ್ಟು ಪರಿಣಾಮ ಬೀರಿಯೂ ಪ್ರಗತಿಶೀಲ ಕಥೆಗಳು ವಿಫಲವಾದುದಕ್ಕೆ ಇರುವ ಕಾರಣಗಳು ಸಂಕೀರ್ಣವಾದವು. ಕತೆಯ ಲೋಕವು ವಾಸ್ತವ ಲೋಕಕ್ಕೆ ಸಂವಾದಿಯೆಂಬ ತಪ್ಪು ತಿಳಿವಳಿಕೆಯ ಜೊತೆಗೆ. ವಾಸ್ತವ ಲೋಕವನ್ನು ಗ್ರಹಿಸಲು ಅಗತ್ಯವಾದ ಸಂವೇದನಶೀಲತೆ ಮತ್ತು ಕಲ್ಪನಾಶಕ್ತಿಗಳ ಅಭಾವವು ಈ ಕಥೆಗಳನ್ನು ಹದಗೆಡಿಸಿವೆ. ಅಲ್ಲದೆ ವಾಸ್ತವದ ದಾಖಲೆ ಮಾಡುವೆನೆಂದು ಹೊರಟವನಿಗೆ ಪಕ್ಷಪಾತ ವಹಿಸುವ ಸೌಲಭ್ಯವಿರುವುದಿಲ್ಲ. ಪ್ರಗತಿಶೀಲ ಕಥೆಗಾರರು ಅಂಥದೊಂದು ಬಯಾಸ್ ಅನ್ನು ಹೊಂದಿದ್ದರು. ಕಿರುಗಾತ್ರದ ಕಥೆಯಲ್ಲಿ, ಕಾದಂಬರಿಯಲ್ಲಿ ಆಗಬಹುದಾದಂತೆ ಭಾವಾವೇಶ ಮತ್ತು ವಸ್ತುನಿಷ್ಠೆಗಳ ನಡುವೆ ಸಮತೋಲನವನ್ನು ತರುವ ಅವಕಾಶವು ಇರುವುದಿಲ್ಲ. ಆದ್ದರಿಂದ ಈ ಕಥೆಗಳು ಬಹುಮುಖತೆ ಮತ್ತು ಸಂಕೀರ್ಣತೆಗಳನ್ನು ಕಳೆದುಕೊಂಡವು. ಕಟ್ಟೀಮನಿಯವರೂ ಸೇರಿದಂತೆ ಎಲ್ಲ ಪ್ರಗತಿಶೀಲರಿಗೆ. ತಾವು ಚಿತ್ರಿಸಹೊರಟ

ದೀನದಲಿತರು ಬಾಹ್ಯವರ್ತನೆಯ ಹಂತದಲ್ಲಿ ಪರಿಚಿತರಾಗಿದ್ದರೇ ವಿನಾ ತಮ್ಮ ಸಮಸ್ತ ಚಾರಿತ್ರಿಕ ಸಾಮಾಜಿಕ ವಾಸ್ತವತೆಯಲ್ಲಿ ಅಲ್ಲ. ಅವರು ಶೋಷಿತರೆಂದು ತೋರಿಸಲು ಅವರಲ್ಲಿ ಆರೋಪಿಸಲಾಗುವ ಅತಿ ಒಳ್ಳೆಯತನವೇ ಅವರ ಅಧಿಕೃತತೆಯನ್ನು ಹಾಳುಮಾಡುತ್ತವೆ. ಕುವೆಂಪು ಅವರು ಸೃಷ್ಟಿಸುವ ಬಾಡುಗಳ್ಳ ಸೋಮ, ಹಳೇಪೈಕದ ತಿಮ್ಮ, ಐತ ಮುಂತಾದವರ ಜೊತೆಯಲ್ಲಿ ಪ್ರಗತಿಶೀಲರ ಕಥೆಗಳಲ್ಲಿ ಬರುವ ಶೋಷಿತರನ್ನು ಹೋಲಿಸಿದರೆ ಈ ಮಾತಿನ ಸತ್ಯವು ಮನದಟ್ಟಾಗುತ್ತದೆ. ಅದೂ ಅಲ್ಲದೆ ಇಂಥ ಕಥೆಗಳಲ್ಲಿ ಬರುವ ಭೌತಿಕ ವಿವರಗಳು ಕೇವಲ ವಿವರಗಳಾಗಿಬಿಟ್ಟು ತಮ್ಮ ಧ್ವನಿಶಕ್ತಿಯನ್ನು ಕಳೆದುಕೊಳ್ಳುತ್ತವೆ. ಇದೆಲ್ಲ ನಿಜವಾದರೂ ಪ್ರಗತಿಶೀಲರ ಹಲವು ಕಥೆಗಳು ಇಂದಿಗೂ ಕನ್ನಡದ ಅತ್ಯುತ್ತಮ ಕತೆಗಳೆಂದು ಪರಿಗಣಿತವಾಗುವುದನ್ನು ನಾವು ಮರೆಯುವಂತಿಲ್ಲ. ಏಕೆಂದರೆ ಬಹುಪಾಲು ಓದುಗರು ಅವನ್ನು ಕಲಾಕೃತಿಗಳೆಂದು ಪರಿಗಣಿಸದೆ ಜೀವನಚಿತ್ರಣವೆಂದು ತಿಳಿಯುತ್ತಾರೆ. ಅಲ್ಲಿ ಕಾಣಸಿಗುವ ಜೀವನವು ಮನಕಲಕುವಂಥದೂ, ತಮಗೆ ಅಪರಿಚಿತವೂ ಆಗಿರುವುದರಿಂದ, ಅಂಥ ಕಥೆಗಳಿಂದ ಅವರು ಪ್ರಭಾವಿತರಾಗುತ್ತಾರೆ. ಹೀಗಾಗುವುದು ಉಚಿತವಲ್ಲವೆಂದು ವಿಮರ್ಶಕರು ಎಷ್ಟೇ ಹೇಳಿದರೂ, ಅಂಥ ಆದರ್ಶ ಓದುಗ ಅಥವಾ ಭಾವನಾತ್ಮಕವಾದ ಪರಿಣಾಮ ಬೀರದೆ ಕೇವಲ ರಸಾನುಭವ ನೀಡುವ ಸಾಹಿತ್ಯಕೃತಿ ಎರಡೂ ಅತ್ಯಪರೂಪವೆಂದೇ ಹೇಳಬೇಕು. ಈಗಾಗಲೇ ವಿಮರ್ಶಕರು ಗುರುತಿಸಿರುವಂತೆ, ಪ್ರಗತಿಶೀಲರು ಅನಾವರಣ ಮಾಡಿದ ಜೀವನವಲಯ ಅಕಡೆಮಿಕ್ ಆದುದಲ್ಲ. ಮಡಿವೈಲಿಗೆಗಳ ಭಾವನೆಗಳಿಂದ ನಿಯಂತ್ರಿತವಲ್ಲ. ವಿಚಾರಗಳ ಭಾರದಿಂದ ಬೀಗಿದುದಲ್ಲ. ಇಷ್ಟಲ್ಲದೆ ಕಾರಂತ ಮತ್ತು ಮಾಸ್ತಿಯವರನ್ನು ಬಿಟ್ಟರೆ ಸಮಕಾಲೀನ ಕನ್ನಡ ಬದುಕನ್ನು ಕಥೆ-ಕಾದಂಬರಿಗಳ ಕಕ್ಷೆಯೊಳಗೆ ಸತತವಾಗಿ ತಂದ ಬೇರೆ ಲೇಖಕರೂ ಆಗ ಇರಲಿಲ್ಲ. ಈಚಿನ ದಿನಗಳಲ್ಲಿ, ಉಪಭಾಷೆಗಳನ್ನು ಬಳಸುವ ಗ್ರಾಮೀಣಚಿತ್ರಗಳೆಲ್ಲವೂ ನಮಗೆ ಆಕರ್ಷಕವೆನಿಸುವಂತೆ, ಅಂದಿನ ಓದುಗರಿಗೂ ಆಯಿತೆಂದು ತೋರುತ್ತದೆ. ಎಲ್ಲರಿಗೂ ಅರ್ಥವಾಗಬೇಕೆಂಬ ಉದ್ದೇಶದಿಂದಲೇ ರಚಿತವಾದ ಈ ಕಥೆಗಳು ಮೆಲೊಡ್ರಮಾಟಿಕ್ ಆಗುವುದು ಅನಿವಾರ್ಯವಾಯಿತೇನೋ. ನಿರಂಜನರಂಥ ಲೇಖಕರು ಕೂಡ ತಮ್ಮ ಉಪಭಾಷೆಗಳನ್ನು ಬಳಸಲು ಹಿಂಜರಿದುದಕ್ಕೆ ಇಂಥದೇ ಕಾರಣಗಳಿದ್ದವು. ಅವರು ಮಂಗಳೂರಿನಲ್ಲಿ ಇದ್ದಾಗ ಬರೆದ 'ನಾವೂ ಮನುಷ್ಯರು' ಎಂಬ ನಾಟಕವು ಮಂಗಳೂರು ಕನ್ನಡದಲ್ಲಿದೆ. ಆದರೆ ಬೆಂಗಳೂರಿಗೆ ಬಂದ ನಂತರ ಬರೆದ ಕಾದಂಬರಿಗಳು ಹಳೆಯ ಮೈಸೂರು ಕಡೆಯ ಶಿಷ್ಟಕನ್ನಡಕ್ಕೆ ಸೀಮಿತವಾಗುತ್ತವೆ.

ಇಲ್ಲಿ ಗಮನಿಸಬೇಕಾದ ಇನ್ನೊಂದು ಸಂಗತಿಯೆಂದರೆ ಸರಿಸುಮಾರು ಅದೇ ಕಾಲದಲ್ಲಿ ಮಹಿಳೆಯರು ಬರೆದ ಅನೇಕ ಕತೆಗಳು ಸಹಜವಾಗಿಯೇ ಪ್ರಗತಿಪರವಾಗಿರುವುದು. ಹೆಣ್ಣುಮಕ್ಕಳ ಅಳಲುಗಳ ಬಗೆಗಿನ ಗಂಭೀರಚಿಂತನೆಯ ಫಲವಾಗಿ ಮೂಡಿದ ಹಲವು ಕಥೆಗಳು ತಮಗೆ ತಿಳಿದೋ ತಿಳಿಯದೆಯೋ

ಪ್ರಗತಿಪರವೇ ಆಗಿದ್ದವು. ಅದಕ್ಕಿಂತ ಮುಖ್ಯವಾಗಿ ಅ. ನ. ಕೃ., ತ. ರಾ. ಸು. ಮುಂತಾದ ಲೇಖಕರು ಚಿತ್ರಿಸಿದ ಸ್ತ್ರೀಯರಿಗಿಂತ ಹೆಚ್ಚು ಸಂಕೀರ್ಣವೂ ಸಂವೇದನಶೀಲವೂ ಆದ ಪಾತ್ರಗಳನ್ನು ಅವರು ಸೃಷ್ಟಿಸಿದ್ದಾರೆ. ಈ ದೃಷ್ಟಿಯಲ್ಲಿ ಕೊಡಗಿನ ಗೌರಮ್ಮ, ಎಚ್. ವಿ. ಸಾವಿತ್ರಮ್ಮ, ಸರಸ್ವತೀಬಾಯಿ ರಾಜವಾಡೆ, ಎಚ್. ಎಸ್. ಕಾತ್ಯಾಯಿನಿ, ಶ್ಯಾಮಲಾ ಬೆಳಗಾಂವ್ಕರ್ ಮುಂತಾದವರ ಕಥೆಗಳನ್ನು ಮರುಪರಿಶೀಲನೆಗೆ ಒಳಪಡಿಸುವ ಅಗತ್ಯವಿದೆ. ಈ ತಲೆಮಾರಿನ ಲೇಖಕಿಯರು ಕಾದಂಬರಿಗಳಿಗಿಂತ ಹೆಚ್ಚಾಗಿ ಸಣ್ಣಕಥೆಗಳನ್ನು ಬರೆದುದು ಆಕಸ್ಮಿಕವಲ್ಲ. ಈ ಆಯ್ಕೆಗೂ ಅವರಿಗೆ ಸಿಗುತ್ತಿದ್ದ ಕಾಲ ಹಾಗೂ ಅವಕಾಶಗಳಿಗೂ ನೇರವಾದ ಸಂಬಂಧವಿರುವಂತೆ ತೋರುತ್ತದೆ.

## ಕಾದಂಬರಿ :

ಕನ್ನಡ ಕಾದಂಬರಿಯ ಚರಿತ್ರೆಯಲ್ಲಿ ಪ್ರಗತಿಶೀಲ ಕಾದಂಬರಿಗಳದು ರೋಚಕವಾದ ಅಧ್ಯಾಯ. ಆಗ ಬರೆಯತೊಡಗಿದ ಮುಖ್ಯ ಲೇಖಕರು ಚಳುವಳಿಯು ಕಾಲಗರ್ಭಕ್ಕೆ ಸಂದು ದಶಕಗಳು ಕಳೆದರೂ ಬರವಣಿಗೆಯನ್ನು ಮುಂದುವರಿಸಿದರು; ವಿಭಿನ್ನವಾದ ಹಾದಿಯನ್ನು ಹಿಡಿದರು. ತಮ್ಮ ಆಶಯ ಆಕೃತಿಗಳಲ್ಲಿ ಬದಲಾವಣೆ ಮಾಡಿಕೊಳ್ಳದೆ ಬರೆಯುತ್ತ ಹೋದವರು ಕೆಲವರಾದರೆ, ತಮಗೆ ಸಮಕಾಲೀನವಾದ ಇತರ ಚಳುವಳಿಗಳೊಂದಿಗೆ ಅರ್ಥಪೂರ್ಣವಾದ ಸಂವಾದ ನಡೆಸಿ ಬೆಳೆದವರು ಕೆಲವರು. ಸ್ವಘೋಷಿತವಾದ ನಿಲುವುಗಳಿಗೆ ವಿದಾಯಹೇಳಿ ಪ್ರತಿಗಾಮಿಯೆಂದೇ ಕರೆಯಬಹುದಾದ ಕೃತಿಗಳನ್ನು ರಚಿಸಿದವರೂ ಇಲ್ಲದಿಲ್ಲ. ವ್ಯಾಸರಾಯಬಲ್ಲಾಳರ 'ಹೆಜ್ಜೆ' ಮತ್ತು ಚದುರಂಗರ 'ಹೆಜ್ಜಾಲ'ಗಳವರೆಗೆ ಇಂಥ ಒಳ್ಳೆಯ ಕಾದಂಬರಿಗಳ ಹರಹು ಇದೆ. ಮೊದಲ ಹಂತದ ಪ್ರಗತಿಶೀಲ ಕಾದಂಬರಿಗಳ ಬಗ್ಗೆ ಕೀರ್ತಿನಾಥ ಕುರ್ತಕೋಟಿ (ಯುಗಧರ್ಮ ಹಾಗೂ ಸಾಹಿತ್ಯ ದರ್ಶನ), ಗಿರಡ್ಡಿ ಗೋವಿಂದರಾಜ (ಕಾದಂಬರಿ-ವಸ್ತು ಮತ್ತು ತಂತ್ರ), ಮತ್ತು ಎಲ್. ಎಸ್. ಶೇಷಗಿರಿರಾವ್ (ಹೊಸಗನ್ನಡ ಸಾಹಿತ್ಯ) ಅವರು ಬಹಳ ಮೌಲಿಕವಾದ ಅಭಿಪ್ರಾಯಗಳನ್ನು ಮಂಡಿಸಿದ್ದಾರೆ. ಅವು ಆ ಕಾದಂಬರಿಗಳ ಸಾಧನೆಗಳಿಗಿಂತ ಪರಿಮಿತಿಗಳ ಕಡೆಗೆ ಗಮನಹರಿಸುತ್ತವೆ.

ಪ್ರಾಚೀನ ಕಾಲದಿಂದಲೂ ನಮ್ಮ ಮಹಾಕಾವ್ಯಗಳಾದ ರಾಮಾಯಣ, ಮಹಾಭಾರತಗಳು ಜನಸಮುದಾಯಕ್ಕೆ ಸಂವಹನವಾಗುತ್ತಾ ಬಂದಿರುವ ಬಗೆಯನ್ನು ಗಮನಿಸಿದಾಗ ಕೆಲವು ಕುತೂಹಲಕಾರೀ ಸಂಗತಿಗಳು ನಮ್ಮ ಗಮನಕ್ಕೆ ಬರುತ್ತವೆ. ವಿದ್ಯಾವಂತನಾದ ಅಥವಾ ಅಲ್ಲದ ಜನಸಾಮಾನ್ಯನೊಬ್ಬನ ಮನಸ್ಸಿನಲ್ಲಿ ಈ ಕಾವ್ಯಗಳು ರೂಪುತಳೆದಿರುವ ಕ್ರಮವನ್ನು ಗಮನಿಸಿ. ಅಲ್ಲಿ ವ್ಯಾಸ, ವಾಲ್ಮೀಕಿ, ಕುಮಾರವ್ಯಾಸ, ಲಕ್ಷ್ಮೀಶರ ಸಾಹಿತ್ಯಕೃತಿಗಳ ಪುನಃಸೃಷ್ಟಿ ಆಗಿರುವುದಿಲ್ಲ. ಬದಲಾಗಿ ಅಲ್ಲಿರುವುದು ಭಾವನೆಗಳ ಲೇಪಪಡೆದ ಕತೆ ಮಾತ್ರ. ಅದು ಸಾಹಿತ್ಯಕ

ಸೂಕ್ಷ್ಮಗಳನ್ನೆಲ್ಲ ಕಳೆದುಕೊಂಡ ಅಕ್ಷರ ರೂಪ. ಅಲ್ಲಿನದು ನಿತ್ಯಜೀವನದೊಂದಿಗೆ ಹೋಲಿಕೆಗಳನ್ನು ಪಡೆಯುವ, ಮಾರ್ಗದರ್ಶನವನ್ನು ನೀಡುವ ಸಾಹಿತ್ಯೇತರ ದ್ರವ್ಯ. ಸಂಕೀರ್ಣತೆಯನ್ನು ಕಳೆದುಕೊಂಡ, ಪ್ರಶ್ನೆಗಳನ್ನು ಕೇಳದ ಮನೋಧರ್ಮ. ಬದುಕನ್ನು ಒಳಿತು ಕೆಡಕುಗಳ ಸಂಘರ್ಷವಾಗಿ ಗ್ರಹಿಸುವ ಇಂಥ ಮನೋಧರ್ಮಕ್ಕೆ ವಾಸ್ತವತೆಯ ಪುನರ್ನಿರ್ಮಾಣಕ್ಕಿಂತ, ರಾಮ-ರಾವಣರಂಥ ಪ್ರತಿನಿಧೀಕೃತ ಪಾತ್ರಗಳ ಜಗತ್ತು ಸುಲಭಗ್ರಾಹ್ಯವೂ ಅಪ್ಯಾಯಮಾನವೂ ಆಗುತ್ತದೆ. ಅಂಥ ಬರವಣಿಗೆಯು ಓದುಗನ ಭಾವನಾತ್ಮಕವಾದ ತೊಡಗುವಿಕೆಯನ್ನು ಬಯಸುತ್ತದೆಯೇ ವಿನಾ ವೈಚಾರಿಕವಾದ ಚೈತನ್ಯವನ್ನಲ್ಲ. (ಈ ಮಾತು ಮೂಲ ಕಾವ್ಯಗಳ ಓದಿಗೆ ಅನ್ವಯಿಸುವುದಿಲ್ಲ).

ಪ್ರಗತಿಶೀಲ ಕಾದಂಬರಿಗಳು ಸೃಷ್ಟಿಸಿಕೊಟ್ಟ ಜಗತ್ತು ಕೂಡ ಈ ಬಗೆಯ ಕಪ್ಪು ಬಿಳುಪುಗಳ ಲೋಕ. ಈ ಲೋಕವು ಖಂಡಿತವಾಗಿಯೂ ವಾಸ್ತವದ ಪುನಃಸೃಷ್ಟಿಯಾಗಲೀ ಅಥವಾ ಸಾಹಿತ್ಯಕ ರೂಪಾಂತರವಾಗಲೀ ಅಲ್ಲ. ಹಾಗಾದರೆ ಇದು ಏನು ? ಇದು ತನ್ನ ಇಚ್ಛೆಗೆ ತಕ್ಕಂತೆ ಪಾತ್ರಗಳನ್ನು ನಡೆಸುತ್ತಾ ಅವುಗಳ ಅಂತರಂಗವನ್ನು ಪ್ರವೇಶಿಸುವ ಯಾವುದೇ ಉಮೇದನ್ನು ತೋರಿಸದ ಕಾದಂಬರಿಕಾರನ ಜಗತ್ತು. ಎಂದರೆ ವರ್ತನೆಯ ಮಟ್ಟದಲ್ಲಿ ನಿಜವೇನೋ ಎನ್ನಿಸುವ - ಕೇವಲ ಆ ಮಟ್ಟದಲ್ಲಿ ನಿಜವಿರಲೂಬಹುದಾದ - ಆದರೆ ಅಂತರಂಗಿಕ ಜಗತ್ತಿನ ಬಾಗಿಲುಗಳನ್ನು ಹಾಕಿಕೊಂಡ ಪಾತ್ರಗಳನ್ನು ಇವರು ಸೃಷ್ಟಿಸುತ್ತಾರೆ. 'ಸಂಧ್ಯಾರಾಗ'ದ ಲಕ್ಷ್ಮಣ ಅಥವಾ 'ರುಕ್ಮಿಣಿ'ಯ ರುಕ್ಮಿಣಿ ತಮ್ಮ ಸಾರ್ವಜನಿಕ ಅಸ್ತಿತ್ವದ ಕ್ಷಣಗಳಲ್ಲಿ ಮಾತ್ರವಲ್ಲ, ಮನಸು - ಕನಸುಗಳಲ್ಲಿಯೂ 'ಅಪ್ಪಟ ಸಜ್ಜನ'ರಂತೆ ಇರಬೇಕಾದ ಹೊರೆಯನ್ನು ತಾಳಲಾರದೆ ಕುಸಿಯುತ್ತಾರೆ. ಇಂಥದೊಂದು ಮನೋಧರ್ಮವು ಕನ್ನಡದ ಬಹುಪಾಲು ಜೀವನಚರಿತ್ರೆಗಳ ರಚನೆಯನ್ನೂ ನಿಯಂತ್ರಿಸಿದೆ.

ಆದರೆ ನಮ್ಮ ವಾಚಕವರ್ಗಕ್ಕೆ ಪರಿಚಯವಿರುವುದು ಈ ಸನ್ನಿವೇಶವೇ. ಸರಳವಾದ ಒಳಿತು ಕೆಡಕುಗಳ ಸಂಘರ್ಷವನ್ನು ವಾಸ್ತವಕ್ಕೆ ಸಂವಾದಿಯೆಂದು ತಿಳಿದು, ಅದರಲ್ಲಿ ಪರ-ವಿರೋಧಗಳನ್ನು ವಹಿಸುತ್ತಾ, ಭಾವನಾತ್ಮಕವಾದ ಪ್ರತಿಕ್ರಿಯೆ ತೋರಿಸುತ್ತಾ, ಕೆಟ್ಟ ಅರ್ಥದಲ್ಲಿ ಕೃತಿಯಲ್ಲಿ ತಲ್ಲೀನರಾಗುವ ಓದುಗರನ್ನು ಸೃಷ್ಟಿಸುವುದರಲ್ಲಿ ಪ್ರಗತಿಶೀಲ ಸಾಹಿತ್ಯವು ಯಶಸ್ವಿಯಾಯಿತು. ಅಥವಾ ಮೊದಲಿನಿಂದಲೂ ಹಾಗೆಯೇ ಇದ್ದು, ಮೌಖಿಕ ಸಾಹಿತ್ಯಕ್ಕೆ ಸ್ಪಂದಿಸುತ್ತಿದ್ದ ನವಸಾಕ್ಷರ ಮಧ್ಯಮವರ್ಗವನ್ನು ತನ್ನ ಕಡೆಗೆ ಆಕರ್ಷಿಸಿತು. ಈ ಮಾತಿಗೆ ಪುರಾವೆಯೆಂದರೆ, ಈ ಪೀಳಿಗೆಗೆ ಸೇರಿದ ವಾಚಕವರ್ಗವು ಬೇಂದ್ರೆ, ಕಾರಂತ, ಕುವೆಂಪು, ಮಾಸ್ತಿ ಮುಂತಾದ ಸಾಹಿತಿಗಳನ್ನು ಇಂದಿಗೂ ತನ್ನ ತೆಕ್ಕೆಯೊಳಗೆ ತೆಗೆದುಕೊಳ್ಳದೆ ಹೋದದ್ದು. ಮುಖ್ಯವಾಗಿ ಅ. ನ. ಕೃ. ಅವರನ್ನು ಕುರಿತಂತೆ ಹೇಳಿದ್ದರೂ ಎಲ್ಲ ಪ್ರಗತಿಶೀಲ ಕಾದಂಬರಿಗಳಿಗೆ ಅನ್ವಯಿಸಬಹುದಾದ ಕೆಲವು ಮುಖ್ಯ ಸಂಗತಿಗಳನ್ನು ಕುರ್ತಕೋಟಿಯವರು ಹೇಳಿದ್ದಾರೆ :

" ಮುಖ್ಯತಃ ಅವರು ವಿಚಾರವಾದಿಯಲ್ಲ, ಆದ್ದರಿಂದ ಸರಳವಾದ ಕಥೆಗಳ ಕಡೆಯೇ ಅವರು ಗಮನ ಕೊಡಬೇಕಾಗಿತ್ತು. ವಿಪರೀತವಾದ ಭಾವನಾವಶತೆಯ ಪರಿಣಾಮವಾಗಿ, ಬುದ್ಧಿವಂತಿಕೆಯ ಬಲವೂ ತಪ್ಪಿಹೋಯಿತು. ಅಂತಃಕರಣದ ಆಳವನ್ನು ತೋರಿಸಬಲ್ಲ ಕಲ್ಪನಾಶಕ್ತಿಯೂ ಇಲ್ಲವಾಯಿತು. ಅವರ ಸಾಹಿತ್ಯದ ಹೃದಯದಲ್ಲೇ ಬೌದ್ಧಿಕ ತಪ್ಪು ತಿಳಿವಳಿಕೆಯ ಮಂಜುಮುಸುಕಿದೆ. ಅದರಾಚೆಗಿರುವ ಜೀವನ ಅವರಿಗೆ ಕಾಣುವುದಿಲ್ಲ. ಹೀಗಾಗಿ ಮಂಡಿಸಬೇಕೆಂದರೆ ಸ್ವಂತ ವಿಚಾರಗಳಿಲ್ಲದೆ, ಚಿತ್ರಿಸಲಿಕ್ಕೆ ಜೀವನವೂ ಇಲ್ಲದೆ ಅ. ನ. ಕೃ. ದುರಂತಚಿತ್ರವಾಗಿದ್ದಾರೆ. ಅವರು ಜೀವನವೆಂದು ಹಿಡಿದದ್ದು ಕನಸಾಗುತ್ತದೆ; ಭಾವಪ್ರಪಂಚ ತರಲವಾಗುತ್ತದೆ; ಪಾತ್ರಗಳೆಲ್ಲ ನೆರಳುಗಳಾಗುತ್ತವೆ. ಅವರ ಕಾದಂಬರಿಗಳಿಗೆ ವಸ್ತುವಿನ ಕೊರತೆ ಎಂದಿಗೂ ತಪ್ಪಿಲ್ಲ. ಬರೆಯುವುದು ಅವರಿಗೆ ಉಸಿರಾಡಿಸುವಷ್ಟು ಸುಲಭವಾಗಿದೆ. ಆದರೆ ಯಾವುದನ್ನು ಕುರಿತು ಬರೆಯಬೇಕೆಂದೇ ಅವರ ಸಮಸ್ಯೆ. ಹೀಗಾಗಿ ಈ ಕೊರತೆಯನ್ನು ಅವರು ಸ್ವಂತ ಕನಸುಗಳಿಂದ ತುಂಬುತ್ತಾರೆ, ಜೀವನ ಅವರ ಕೈಗೆ ಅನುಭವವಾಗಿ ದೊರಕದೆ ಕನಸಾಗಿಯೇ ದೊರೆತಿದೆ." (ಯುಗಧರ್ಮ ಹಾಗೂ ಸಾಹಿತ್ಯ ದರ್ಶನ, ೧೯೬೨, ಪುಟ ೧೯೭)

ಬಸವರಾಜ ಕಟ್ಟೀಮನಿಯವರ ಕೆಲವು ಕಾದಂಬರಿಗಳನ್ನು ಹೊರತುಪಡಿಸಿದರೆ ಈ ಮಾತುಗಳು ನಾಲ್ಕೂ ಜನ ಹೆಸರುವಾಸಿಯಾದ ಕಾದಂಬರಿಗಾರರಿಗೂ ಅನ್ವಯಿಸುತ್ತದೆ. ಇವರಲ್ಲಿ ಕೆಲವರು ಪ್ರಗತಿಶೀಲ ಚಳುವಳಿಯ ಉಗಮಕ್ಕಿಂತ ಮೊದಲೇ ಬರೆಯತೊಡಗಿ ಅದು ಕೊನೆಯುಸಿರನ್ನು ಎಳೆದ ನಂತರವೂ ಕಾದಂಬರಿರಚನೆಯನ್ನು ಮುಂದುವರಿಸಿದರು. ತುಸು ಕಿರಿಯರಾದ ಇತರರು ಸರಿಸುಮಾರು ಆಗಲೇ ಬರೆಯತೊಡಗಿ ನಂತರ ದಶಕಗಳ ಕಾಲ ಬರವಣಿಗೆಯನ್ನು ಮುಂದುವರಿಸಿದರು. ಇನ್ನು ಮುಂದೆ ಅವರೆಲ್ಲರ ಒಟ್ಟು ಸಾಧನೆ ಹಾಗೂ ಪರಿಮಿತಿಗಳ ಸಂಗ್ರಹವಾದ ಪರಿಚಯ ಮಾಡಿಕೊಡಲಾಗಿದೆ.

ಅ. ನ. ಕೃ. ಅವರು ಚಳುವಳಿಯು ಪ್ರಾರಂಭವಾಗುವ ವೇಳೆಗೆ ಸಾಕಷ್ಟು ಹೆಸರುವಾಸಿಯಾಗಿದ್ದ ಲೇಖಕರಾಗಿದ್ದರು. ಪ್ರಗತಿಶೀಲತೆಯು ಅವರಿಗೆ ತಮ್ಮ ಅನನ್ಯತೆಯನ್ನು ತೋರಿಸಿಕೊಳ್ಳುವ ಅವಕಾಶವಾಗಿ ಒದಗಿಬಂತು. ಕೈಲಾಸಂ ಅವರ ಮಾದರಿ ಮತ್ತು ವಾಗ್ಮಿತೆಗಳು ಅವರಿಗೆ ವಿಶಾಲವಾದ ಕಿರಿಯಾಳದ ಅನುಭವಲೋಕವನ್ನು ಒದಗಿಸಿಕೊಟ್ಟಿದ್ದವು. ಹಳೆಯ ಮೈಸೂರಿನ ನಗರ ಮತ್ತು ಗ್ರಾಮೀಣ ಜೀವನಕ್ರಮಗಳು ಅವರ ತೆಕ್ಕೆಗೆ ಬಂದಿದ್ದವು. ಅಂಥ ಅನುಭವಗಳೊಂದಿಗೆ ಸರ್ಕಾರೀ ಅಧಿಕಾರಿಗಳಾಗಿದ್ದ ಮಾಸ್ತಿಯವರು ಉಳಿಸಿಕೊಂಡಿದ್ದ ನಿರ್ಲಿಪ್ತ ದೂರವನ್ನು ಕಾಪಾಡಿಕೊಳ್ಳಲು ಇವರಿಗೆ ಸಾಧ್ಯವಾಗಲಿಲ್ಲ. ಇವರ ಪಾಶ್ಚಾತ್ಯ ಮಾದರಿಗಳಾದ ಗಾರ್ಕಿ, ಕುಪ್ರಿನ್, ಝೋಲಾ, ಸಿಂಕ್ಲೇರ್ ಮುಂತಾದವರ ಅನುಭವದ ಅಧಿಕೃತತೆಯಿಲ್ಲದ ಅವರ ಕೃತಿಗಳಿಗೆ ಸಂವಾದಿಯಾದುದನ್ನು ರಚಿಸುವುದು ಸಾಧ್ಯವೇ

ಇರಲಿಲ್ಲ. ಕೆಳವರ್ಗದ ಜನರ ಹೋರಾಟದ ಬದುಕಿನ ವಿವರಗಳನ್ನು ರೋಚಕವಾಗಿ ಚಿತ್ರಿಸುವುದರಿಂದಲೇ ಪ್ರಗತಿಶೀಲ ಕಾದಂಬರಿಗಳು ಮೂಡಿಬರುವುದಿಲ್ಲ. ಜಮೀನುದಾರರಿಂದ ಹಿಡಿದು ಪುರೋಹಿತರವರೆಗೆ, ಮಂತ್ರವಾದಿಗಳಿಂದ ಹಿಡಿದು ಜಟಕಾ ಸಾಬಿಯವರೆಗೆ ಪ್ರತಿಯೊಂದು ಗುಂಪಿನಿಂದಲೂ ಒಳ್ಳೆಯವರನ್ನೋ ಕೆಟ್ಟವರನ್ನೋ ತಾವು ಆಗ ಬರೆಯುತ್ತಿರುವ ಕಾದಂಬರಿಯ ಅಗತ್ಯಗಳಿಗನುಗುಣವಾಗಿ ಕಟ್ಟಿಕೊಡುವ ಅ. ನ. ಕೃ. ಅವರಿಗೆ ಒಟ್ಟು ಸಮಾಜದ ವರ್ಣ - ವರ್ಗ ವಾಸ್ತವತೆಗಳ ನಿಕಟಗ್ರಹಿಕೆಯಾಗಲಿ ಅಥವಾ ಹಾಗೆ ಪ್ರಾತಿನಿಧಿಕ ವಾಸ್ತವವನ್ನು ನಿರ್ಮಿಸಬೇಕೆಂಬ ಹಂಬಲವಾಗಲಿ ಇರಲಿಲ್ಲ. ಇಂಥ ವಿಂಗಡಣೆಯು ಪ್ರಗತಿಶೀಲರ ಮ್ಯಾನಿಫೆಸ್ಟೋದ ಮೊದಲ ನೆಲೆ. ಆದ್ದರಿಂದ ಅ. ನ. ಕೃ. ಅವರು ಪ್ರಗತಿಶೀಲ ವಿಚಾರಗಳ ಪ್ರತಿಪಾದಕರೋ ಅಥವಾ ಅಂಥ ಕೃತಿಗಳ ಅನುವಾದಕರೋ ಆಗಿ ಉಳಿದರೇ ಹೊರತು ಸ್ವತಃ ಅವುಗಳನ್ನು ಸೃಷ್ಟಿಸಲಿಲ್ಲ. ಏಕೆಂದರೆ ಪದಲಲಿತ ಹಿನ್ನೆಲೆಯ ಪಾತ್ರಗಳನ್ನು ಆರಿಸಿಕೊಂಡಾಗ ಕೂಡ ಅವರ ಕಾದಂಬರಿಗಳು ವೈಯಕ್ತಿಕ ಸಾಧನೆಯ ಆಖ್ಯಾನವಾಗುವುದೇ ವಿನಾ ಸಾಮುದಾಯಿಕ ಹೋರಾಟದ ಪ್ರತಿಫಲನವಾಗುವುದಿಲ್ಲ. ಆದ್ದರಿಂದಲೇ ನಿರ್ದಿಷ್ಟ ಕೃತಿಗಳನ್ನು ಹೆಸರಿಸುವುದೂ ಕಷ್ಟವಾಗುತ್ತದೆ. ಆಧುನಿಕತೆ ಮತ್ತು ಭಾರತೀಯ ಸಂಸ್ಕೃತಿಗಳ ಮುಖಾಮುಖಿಯಲ್ಲಿ ಒಂದು ಬಗೆಯ ಮಧ್ಯಮಾರ್ಗವನ್ನು ಸೂಚಿಸುವುದು ಅವರಿಗೆ ಸಾಧ್ಯವಾಯಿತೇನೋ.

ಪ್ರಗತಿಶೀಲತೆಯ ಪ್ರಶ್ನೆ ಬಂದಾಗ ತ. ರಾ. ಸು. ತಮ್ಮ ಗುರು ಅಥವಾ ಹಿರಿಯ ಮಾರ್ಗದರ್ಶಿಯಾದ ಅ. ನ. ಕೃ. ಅವರಿಗಿಂತ ಭಿನ್ನವಾಗಲಿಲ್ಲ. ಅವರ ಸಾಮಾಜಿಕ ಕಾದಂಬರಿಗಳಾದ ಚಂದವಳ್ಳಿಯ ತೋಟ, ಶಿಶುದೈತ್ಯ, ಹಂಸಗೀತೆ, ಮಸಣದ ಹೂವು ಮುಂತಾದವು ಬೇರೆ ಕಾರಣಗಳಿಗಾಗಿ ಕುತೂಹಲಕಾರಿಯೆನಿಸಿದರೂ ನಮ್ಮ ಅಧ್ಯಯನಕ್ಕೆ ಪ್ರಸ್ತುತವೆನಿಸುವುದಿಲ್ಲ. ಅವರು ತಮ್ಮ ಐತಿಹಾಸಿಕ ಕಾದಂಬರಿಗಳಿಗಾಗಿ ಪ್ರಸಿದ್ಧರಾಗಿದ್ದಾರೆ. ಕಂಬನಿಯ ಕುಯಿಲು, ರಕ್ತರಾತ್ರಿ, ತಿರುಗುಬಾಣ, ಹಂಸಗೀತೆ ಮುಂತಾದ ಕಾದಂಬರಿಗಳು ಈಗಲೂ ತನ್ಮಯವಾದ ಓದನ್ನು ಪಡೆಯಬಲ್ಲವು. ಆದರೆ ಅಲ್ಲಿ ರಾಜಮನೆತನಗಳ ಇತಿಹಾಸವನ್ನು ಸಮುದಾಯದ ಹಾಡುಪಾಡುಗಳೊಂದಿಗೆ ಇಟ್ಟು ನೋಡುವ ಪ್ರಯತ್ನವೂ ಕಂಡಬರುವುದಿಲ್ಲ, ಬದಲಾಗಿ ಪಾಳೆಯಗಾರಿಕೆಯಂಥ ರಾಜಕೀಯ ಸಂಸ್ಥೆಗಳನ್ನು ವೈಭವೀಕರಿಸಿ ಅವುಗಳ ಧನಾತ್ಮಕ ನೆಲೆಗಳನ್ನು ಹಾಡಿಹೊಗಳುವ ಪ್ರಯತ್ನವನ್ನು ಇಲ್ಲಿ ಕಾಣಬಹುದು. ಕಟ್ಟೀಮನಿಯವರ 'ಸಂಗೊಳ್ಳಿ ರಾಯನಾಯಕ' ಅಥವಾ ನಿರಂಜನರ 'ಕಲ್ಯಾಣಸ್ವಾಮಿ'ಯಂಥ ಕೃತಿಗಳಲ್ಲಿರುವ ಸಾಮುದಾಯಿಕ ಪ್ರಜ್ಞೆಯನ್ನೂ ಇಲ್ಲಿ ಕಾಣಲಾಗುವುದಿಲ್ಲ. ಅವರ ವೈಚಾರಿಕತೆಯಲ್ಲಿಯೇ ಯಾವುದೇ ರಾಜಕೀಯ-ಸಾಮಾಜಿಕ ಚಿಂತನೆಯ ಅಸ್ತಿತ್ವವನ್ನು ಗುರುತಿಸುವುದು ಕಷ್ಟ. ಚದುರಂಗ, ಬಲ್ಲಾಳರಂತೆ ಜನಪರವಾದ ಹೋರಾಟಗಳಲ್ಲಿ ತೊಡಗಿಸಿಕೊಳ್ಳಲು ತ. ರಾ. ಸು.

ಮನಸ್ಸುಮಾಡಲಿಲ್ಲ. ಬದಲಾಗಿ ಅವರ ಮನಸ್ಸು ಧಾರ್ಮಿಕ ಪುನರುಜ್ಜೀವನದ ಕಡೆ ಹರಿಯಿತು. ನೈತಿಕ ಸ್ವಚ್ಛಂದತೆ ಮತ್ತು ಧಾರ್ಮಿಕ ಬದ್ಧತೆಗಳ ಜೋಡಿಯನ್ನು ಒಟ್ಟಿಗೆ ಮಂಡಿಸಿದಾಗ ವಿಶ್ವಸನೀಯತೆಯನ್ನು ಕಳೆದುಕೊಳ್ಳುವುದು ಕೇವಲ ಸಹಜ.

ಆದರೆ ನಿರಂಜನ ಮತ್ತು ಬಸವರಾಜ ಕಟ್ಟೀಮನಿಯವರು ಇನ್ನಿಷ್ಟು ಗಂಭೀರವಾದ ಅಧ್ಯಯನವನ್ನು ಬಯಸುತ್ತಾರೆ. ಅವರಿಬ್ಬರೂ ಅನೇಕ ದಶಕಗಳ ಕಾಲ ಪ್ರಗತಿಶೀಲ ನಿಲುವುಗಳು ಹಾಗೂ ಎಡಪಂಥೀಯ ರಾಜಕೀಯ ಚಿಂತನೆಯ ಸಂಗಡ ಸಹಾನುಭೂತಿಯ ಸಂಬಂಧಗಳನ್ನು ಉಳಿಸಿಕೊಂಡು ಬಂದವರು. ಅಮೆರಿಕಾ ಮತ್ತು ರಷ್ಯಾಗಳ ನಡುವಿನ ಶೀತಲಸಮರದ ಫಲವಾದ 'ರಷ್ಯಾವಿರೋಧಿ ಪ್ರಚಾರ' ಮತ್ತು 'ಬುದ್ಧಿಜೀವಿಗಳ ಭ್ರಮನಿರಸನ'ದಲ್ಲಿ ಅವರು ಸೇರಿರಲಿಲ್ಲ. ಹಾಗೆಂದು ಸಮಾಜವಾದ, ಸಮತಾವಾದಗಳನ್ನು ಅವಿಮರ್ಶಿತವಾಗಿ ಒಪ್ಪಿಕೊಳ್ಳುವುದೂ ಅವರಿಗೆ ಅಗತ್ಯವೆನಿಸಲಿಲ್ಲ. ಇಂಥ ಭಿನ್ನಮತಗಳು ಅವರ ಸೃಜನಶೀಲ ಬರವಣಿಗೆಯ ಗುಣಮಟ್ಟವನ್ನು ಹೆಚ್ಚಿಸಿದವೆಂದೇ ಹೇಳಬಹುದು.

ಸಾಮಾಜಿಕವಿರಲಿ, ಐತಿಹಾಸಿಕವಿರಲಿ ನಿರಂಜನರ ಕಾದಂಬರಿಗಳ ಹಿಂದೆ ಮಾನವ ಸಮಾಜವು ವರ್ಗಗಳ ಆಧಾರದ ಮೇಲೆ ವಿಭಜಿತವಾದುದೆಂಬ ತಿಳಿವಳಿಕೆ ಮತ್ತು ಶೋಷಿತರ ಪರವಾದ ತೀರ್ಮಾನಗಳಿರುತ್ತವೆ. ಆದ್ದರಿಂದಲೇ ಅವರಿಗೆ ವ್ಯಕ್ತಿಯ ಸಂಕೀರ್ಣಚಿತ್ರಣಕ್ಕಿಂತ ಹೆಚ್ಚಾಗಿ ಅವನು ಪ್ರತಿನಿಧಿಸುವ ವರ್ಗದ ಮಾದರಿಯಂತೆ ಅವನನ್ನು ಚಿತ್ರಿಸುವ ಹಂಬಲ ಮುಖ್ಯವಾಗುತ್ತದೆ. ಹೀಗಾದಾಗ ಕೃತಿಯಲ್ಲಿ ಮೂಡಿಬರುವುದು ವಿರುದ್ಧವಾದ ಹಿತಾಸಕ್ತಿಗಳ ಮುಖಾಮುಖಿಯೊಂದೇ ಆಗಿರುತ್ತದೆ. ಆದರೆ ನಿರಂಜನರ ಎಲ್ಲ ಕಾದಂಬರಿಗಳಿಗೆ ಮಾನವೀಯತೆಯ ಸ್ಪರ್ಶವಾಗಿರುವುದರಿಂದ ಅವು ಕೇವಲ ಕಪ್ಪು ಬಿಳುಪುಗಳ ಲೋಕವಾಗಿ ಉಳಿಯುವುದಿಲ್ಲ. ಅವರ ರಾಜಕೀಯಪ್ರಜ್ಞೆಗೆ ಸಾಧ್ಯವಾಗದ ಅಂತರಂಗ ಪರಿವೀಕ್ಷಣೆ ಮಾನವೀಯತೆಗೆ ಸಾಧ್ಯವಾಗಿಬಿಡುತ್ತದೆ. ಅದಲ್ಲದೆ ಕಾದಂಬರಿಗಳುದ್ದಕ್ಕೂ ಪಾತ್ರಗಳ ಮೂಲಕ ಅಥವಾ ನಿರೂಪಕನಾಗಿ ಕಾದಂಬರಿಕಾರನ ವ್ಯಾಖ್ಯಾನಗಳು ನಡೆದೇ ಇರುತ್ತವೆ. ಇವು ಒಂದು ಮಟ್ಟದ ಓದುಗನ ಚಿಂತನೆಯ ದಿಕ್ಕನ್ನು ನಿರ್ಧರಿಸುತ್ತವೆ ಕೂಡ. ನಿರಂಜನರ ಇನ್ನೊಂದು ಸಾಧನೆಯೆಂದರೆ ಸಂವಹನದ ಅನುಕೂಲಕ್ಕಾಗಿ ಮಾಡಿಕೊಂಡ ಒಪ್ಪಂದಗಳು ಕೀಳು ಅಭಿರುಚಿಗೆ ದಾರಿಮಾಡಿಕೊಡದಂತೆ ನೋಡಿಕೊಂಡಿದ್ದು. ಭಾವನೆಗಳ ತೀವ್ರತೆಯನ್ನು ಉಳಿಸಿಕೊಂಡೂ ಭಾವುಕವಾಗದಂತಹ ನಿಯಂತ್ರಣವನ್ನು ಅವರು ಅನೇಕ ಕಡೆ ಸಾಧಿಸುತ್ತಾರೆ. ಅತಿ ಅಲಂಕೃತವಲ್ಲದ ಸರಳತೆಗೆ ಅಂಟಿಕೊಳ್ಳುವುದರ ಮೂಲಕವೇ ಅಧಿಕೃತತೆಯನ್ನು ಸಂಪಾದಿಸುತ್ತಾರೆ. ಅನೇಕ ಕಡೆ ಸಾಂಕೇತಿಕವಾದ ವಿವರಗಳನ್ನು ಬಳಸಿಕೊಳ್ಳುತ್ತಾರೆ. ಅವರ 'ವಿಮೋಚನೆ', 'ರಂಗಮ್ಮನ ವಠಾರ', 'ಬನಶಂಕರಿ', 'ಚಿರಸ್ಮರಣೆ', 'ಮೃತ್ಯುಂಜಯ'ದಂತಹ ಕೃತಿಗಳು ಯಾವ ಅಬ್ಬರವಿಲ್ಲದೆ ನಿಜವಾದ ಅರ್ಥದಲ್ಲಿ ಪ್ರಗತಿಶೀಲವಾಗಿವೆ. ಆದರೆ ಸಾಹಿತ್ಯದ

ವ್ಯಾಪ್ತಿಯಲ್ಲಿ ಬರಬಹುದಾದ ಅನುಭವದ ಮೇಲೆ ಅವರೇ ಹಾಕಿಕೊಳ್ಳುವ ನಿಯಂತ್ರಣವು ಅವರ ಬರವಣಿಗೆಯನ್ನು ಪರಿಮಿತವಾಗಿಸುತ್ತದೆ. ಉದಾಹರಣೆಗೆ ಕಮ್ಯೂನಿಸ್ಟ್ ಪಕ್ಷದ ಕಾರ್ಯವಿಧಾನಗಳ ಬಗ್ಗೆ ತಮಗಾದ ಭ್ರಮನಿರಸನವನ್ನು ಕುರಿತು ಕಾದಂಬರಿಯನ್ನು ಬರೆಯುವುದು ಅವರಿಗೆ ಸಾಧ್ಯವಾಗಲೇ ಇಲ್ಲ. ಹಾಗೆಯೇ ಕಾದಂಬರಿ ಯಾವುದೇ ಇರಲಿ, ವೈಚಾರಿಕ ಚೌಕಟ್ಟು ಬದಲಾಗದೆ ಉಳಿಯುವುದರಿಂದ, ಅವರ ಬರವಣಿಗೆಯಲ್ಲಿ ಅದೇ ಅದೇ ವಿನ್ಯಾಸಗಳ ಪುನರಾವರ್ತನೆಯಾಗುತ್ತಿರುವಂತೆ ಭಾಸವಾಗುತ್ತದೆ.

ಪ್ರಗತಿಶೀಲ ಸಂದರ್ಭದ ಅತ್ಯುತ್ತಮ ಕಾದಂಬರಿಕಾರರು ಬಸವರಾಜ ಕಟ್ಟೀಮನಿಯವರು. ಅವರ 'ಸ್ವಾತಂತ್ರ್ಯದೆಡೆಗೆ', 'ಮಾಡಿ ಮಡಿದವರು', 'ಜ್ವಾಲಾಮುಖಿಯ ಮೇಲೆ', 'ಜರತಾರಿ ಜಗದ್ಗುರು', 'ಜನಿವಾರ ಶಿವದಾರ' ಮುಂತಾದ ಕೃತಿಗಳು ಮರವೆಗೆ ಸಂದಿರುವುದು ಸರಿಯಲ್ಲ. ಕಟ್ಟೀಮನಿಯವರು ಭಾವನೆಗಳ ಹಿಡಿತದಲ್ಲಿ ಬರೆಯುವಾಗಲೂ ವಸ್ತುನಿಷ್ಠೆಯನ್ನು ಬಲಿಕೊಟ್ಟವರಲ್ಲ. ಒಂದು ಬಗೆಯ ಆತ್ಮವಿಮರ್ಶೆಯ ಎಳೆಗಳು ಅವರಲ್ಲಿ ಸದಾ ಜಾಗೃತವಾಗಿರುತ್ತವೆ. ಅವರ ಕಾದಂಬರಿಗಳದು ಮುಗ್ಧತೆ ಮತ್ತು ವಾಸ್ತವತೆಗಳ ನಡುವಿನ ಮುಖಾಮುಖಿಯ ಲೋಕ. ವಾಸ್ತವವನ್ನು ವಿರೂಪಗೊಳಿಸದೆ ಚಿತ್ರಿಸಬೇಕೆಂಬ ರೊಚ್ಚಿನ ಸಂಗಡವೇ ತಾನು ಸಮರ್ಥಿಸುತ್ತಿರುವ ಚಳುವಳಿಯ ಕುಂದುಕೊರತೆಗಳ ಬಗ್ಗೆಯೂ ಸದಾ ಕೊರಗುವ ದೃಷ್ಟಿಕೋನ ಅಲ್ಲಿನದು. ಅಲ್ಲದೆ ಉತ್ತರ ಕರ್ನಾಟಕದ ಗ್ರಾಮೀಣ ಅನುಭವಲೋಕವನ್ನು ಕಾದಂಬರಿಯ ತೆಕ್ಕೆಯೊಳಗೆ ಅನುಭವ- ಭಾಷೆಗಳೆಂಬ ಎರಡು ನೆಲೆಗಳಲ್ಲಿಯೂ ತಂದ ಲೇಖಕರಲ್ಲಿ ಅವರು ಮುಖ್ಯರು. ಹಿಂದೂ ಧರ್ಮದ ಬಗೆಗಿನ ಖಚಿತವಾದ ನಕಾರಾತ್ಮಕ ನಿಲುವು ಮತ್ತು ಕಮ್ಯೂನಿಸಂ ಹಾಗೂ ಸಮಾಜವಾದಗಳ ಬಗೆಗಿನ ವಿಮರ್ಶಾತ್ಮಕ ಧೋರಣೆಗಳು ಅವರ ಕಾದಂಬರಿಗಳಿಗೆ ಸಮತೋಲನ ಮತ್ತು ತಾಳಿಕೆಯ ಗುಣಗಳನ್ನು ತಂದುಕೊಟ್ಟಿವೆ. ಅವರ ಕಾದಂಬರಿಗಳ ಬಗ್ಗೆ ಕುರ್ತಕೋಟಿಯವರು ಹೇಳಿರುವ ಕೆಲವು ಮಾತುಗಳು ಪರಿಶೀಲನಾರ್ಹವಾಗಿವೆ.

"ಜ್ವಾಲಾಮುಖಿಯ ಮೇಲೆ", 'ಬೀದಿಯಲ್ಲಿ ಬಿದ್ದವಳು' ಮೊದಲಾದ ಕಾದಂಬರಿಗಳಲ್ಲಿ ಇನ್ನೂ ಕುದಿಯುತ್ತಿರುವ ರೋಷವಿದೆ. ಮುಂದೆ ಬರಬರುತ್ತ ಅದು ತಣ್ಣಗಾದರೂ ಅವರ ಜೀವನ ದೃಷ್ಟಿಯನ್ನೇ ಬದಲಿಸಿಬಿಟ್ಟಿತು. 'ಕಾದಂಬರಿಯನ್ನು ಬರೆದು ಜೀವನದ ಮೇಲೆ ಸೇಡು ತೀರಿಸಿಕೊಳ್ಳಬೇಕೆಂಬ ಭಾವನೆ ಅವರ ಎಷ್ಟೋ ಕೃತಿಗಳಿಗೆ ಮೂಲವಾದಂತೆ ಕಾಣುತ್ತದೆ. ಅತಿಯಾದ ಆದರ್ಶವಾದದಂತೆ ಅತಿಯಾದ ರೋಷವೂ ಕಾದಂಬರಿಯ ಕಲಾತ್ಮಕತೆಯನ್ನು ನುಂಗುತ್ತದೆ. ಯಾವುದೇ ಅನುಭವ ಇದ್ದಕ್ಕಿದ್ದಂತೆ ಹಸಿಯಾಗಿ ಬಂದುಬಿಟ್ಟರೆ ಸಾಹಿತ್ಯಕ್ಕೆ ಮಾರಕವಾಗಬಲ್ಲುದು. ....ಸಮಾಜದ ಅಂತಃಸಾಕ್ಷಿಯಾಗಿರಬೇಕಾದ ಲೇಖಕ ಸಮಾಜದ ಅನ್ಯಾಯಗಳನ್ನು ಬಯಲಿಗೆಳೆಯಬೇಕೆಂದರೆ ಅವನನ್ನು ಯಾರೂ ತಡೆಯಲಾರರು. ಆದರೆ ಲೇಖಕ, ಪಾತ್ರಗಳನ್ನು ವ್ಯಕ್ತಿಗಳೆಂದೇ ತಿಳಿದು ಅವುಗಳನ್ನು ನಡೆಸಿಕೊಳ್ಳುವುದು

ಕಲೆಯಲ್ಲ. .... .... .... ಕಟ್ಟೀಮನಿಯವರಲ್ಲಿ ಲೇಖನಕಲೆಗೇನೂ ಕೊರತೆಯಿಲ್ಲ. ವಾಸ್ತವತೆಯ ಮಾರ್ಮಿಕವಾದ ಉಪಯೋಗವನ್ನು ಅವರು ಬಲ್ಲರೆನ್ನುವುದಕ್ಕೆ 'ಖಾನಾವಳಿಯ ನೀಲಾ'ದಂತಹ ಕಾದಂಬರಿಗಳು ಉದಾಹರಣೆಗಳಾಗಿವೆ. ಸಾಮಾನ್ಯ ಮನುಷ್ಯನ ಇರುವಿಕೆಯ ರೀತಿ-ನೀತಿಗಳನ್ನೂ ಅವರು ಯಥಾವತ್ತಾಗಿ, ಹೃದಯಂಗಮವಾಗಿ ಚಿತ್ರಿಸಬಲ್ಲರು. ಅವರ ಭಾಷೆ ವ್ಯವಹಾರದ ಭಾಷೆಯ ಕಸುವನ್ನು ಚೆನ್ನಾಗಿ ಮೈಗೂಡಿಸಿಕೊಂಡಿದೆ. ಸನ್ನಿವೇಶಕ್ಕೆ ತಕ್ಕಹಾಗೆ ಭಾವನಿರ್ಮಿತಿಯನ್ನೂ ಅವರು ಮಾಡಬಲ್ಲರು. ಅವರ ದೊಡ್ಡ ಕೊರತೆಯೆಂದರೆ ವಿಚಾರಶೀಲತೆಯಿಲ್ಲದಿರುವುದು. ಸಮಸ್ಯೆಗಳನ್ನುಚ್ಚರಿಸುವ ಲೇಖಕನಿಗೆ ಇದು ಅವಶ್ಯವಾದ ಗುಣವಾಗಿದೆ. ಕಟ್ಟೀಮನಿಯವರು ವಿಚಾರಗಳ ಬದಲಾಗಿ ಭಾವನೆಗಳನ್ನೇ ಬಳಸಿಕೊಳ್ಳುವುದರಿಂದ ಅವರ ವಾದಗಳೆಲ್ಲ ಅಪೂರ್ಣವಾಗುತ್ತವೆ. ಕಥಾವಸ್ತುವಿನಲ್ಲಿ ತೂಕ ತಪ್ಪುತ್ತವೆ. ಪಾತ್ರಗಳು ತಮ್ಮ ಸಾಹಿತ್ಯಕ ಗೌರವವನ್ನು ಕಳೆದುಕೊಳ್ಳುತ್ತವೆ." (ಯುಗಧರ್ಮ ಹಾಗೂ ಸಾಹಿತ್ಯದರ್ಶನ, ೧೯೬೨, ಪುಟ ೩೨೦-೩೨೨)

ಸುದೀರ್ಘವಾದ ಈ ಉಲ್ಲೇಖದಲ್ಲಿ ಕಟ್ಟೀಮನಿಯವರನ್ನು ಮೆಚ್ಚಿ ಬರೆದ ಮಾತುಗಳು ನೇರವಾಗಿಯೂ ಸ್ಪಷ್ಟವಾಗಿಯೂ ಇದ್ದರೆ, ಅವರ ಪರಿಮಿತಿಗಳನ್ನು ಹೇಳುವ ಮಾತುಗಳನ್ನು ಅರ್ಥಮಾಡಿಕೊಳ್ಳುವುದು ಕಷ್ಟ. ಅದೇನೇ ಇರಲಿ, ಈ ವಿಮರ್ಶೆಯ ಮರುಪರಿಶೀಲನೆಯು ಕಟ್ಟೀಮನಿಯವರ ಒಟ್ಟು ಬರೆಹದ ಬಗ್ಗೆ ಹೊಸ ಒಳನೋಟಗಳನ್ನು ನೀಡಬಲ್ಲವು. ಅಲ್ಲದೆ ಇಂದಿನ ದಲಿತ ಬಂಡಾಯ ಕಥಾಸಾಹಿತಿಗಳಲ್ಲಿ ಕೆಲವರು ಎದುರಿಸುತ್ತಿರುವ ಸಮಸ್ಯೆಗಳ ಮೇಲೆಯೂ ಬೆಳಕು ಚೆಲ್ಲಬಲ್ಲವು.

ಕೇವಲ ಕೃತಿಪ್ರಕಟಣೆಯ ಕಾಲಮಾನದಿಂದ ನೋಡಿದರೆ ಚದುರಂಗ ಮತ್ತು ವ್ಯಾಸರಾಯ ಬಲ್ಲಾಳರ ಮುಖ್ಯ ಕಾದಂಬರಿಗಳು ಪ್ರಗತಿಶೀಲ ಘಟ್ಟಕ್ಕೆ ಸೇರಿದವಲ್ಲ. ಆಶಯಗಳ ಪ್ರಗತಿಪರತೆ ಮತ್ತು ಜನಪರ ಹೋರಾಟಗಳಲ್ಲಿ ಆಸಕ್ತಿಯನ್ನು ಕಾಪಾಡಿಕೊಂಡೇ ತಾಂತ್ರಿಕತೆಯ ನೆಲೆಯಲ್ಲಿ ಇತರ ಮೂಲಗಳಿಂದ ಆರೋಗ್ಯಕರವಾದ ಪ್ರಭಾವಗಳನ್ನು ಅರಗಿಸಿಕೊಂಡವರು ಈ ಲೇಖಕರು.

ಇತರ ಗೆಳೆಯರು ವರ್ಷಕ್ಕೊಂದರಂತೆ ಕಾದಂಬರಿಗಳನ್ನು ಬರೆಯುತ್ತಿದ್ದಾಗ ಚದುರಂಗರು ಬರವಣಿಗೆಯ ಬಗೆಗಿನ ಸಂಯಮದಿಂದಲೇ, ಅನ್ಯ ಚಳುವಳಿಗಳ ಉತ್ತಮಾಂಶಗಳನ್ನು ಆರೋಗ್ಯಕರವಾಗಿ ಗ್ರಹಿಸುವ ರೀತಿಯಿಂದಲೇ ವಿಶಿಷ್ಟವಾದವರು. ಅವರ ಕಾದಂಬರಿಗಳು ನಗರಜೀವನದಿಂದ ಗ್ರಾಮೀಣ ಬದುಕಿನ ಕಡೆಗೆ ಚಲಿಸಿದ ರೀತಿಯೂ ಅನನ್ಯವಾದುದು. ಅವರು ತಮ್ಮ ಪಾತ್ರಗಳ ಮೂಲಕ ಅ-ಶಿಕ್ಷಿತವೆಂದು ಕರೆಯಬಹುದಾದ ಸಂವೇದನಾಕ್ರಮವನ್ನು ರೂಪಿಸಿಕೊಡುತ್ತಾರೆ. 'ವೈಶಾಖ' ಮತ್ತು 'ಹೆಜ್ಜಾಲ'ಗಳ ಅನೇಕ ಪಾತ್ರಗಳ ಅಸ್ತಿತ್ವವನ್ನು ಇಂಥ ಗೆರೆಗಳ ಮೂಲಕವೇ ಕಟ್ಟಿಕೊಡಲಾಗಿದೆ. ಅವರ 'ಸರ್ವಮಂಗಳಾ'ದಲ್ಲಿ ಪ್ರಣಯಕಥೆಯೊಂದಕ್ಕೆ

ಆನುಷಂಗಿಕವಾಗಿ ಬರುವ ಕಾರ್ಮಿಕ ಸಂಘಗಳ ರಾಜಕೀಯದ ಕಥೆಯು, ಸಾಮಾಜಿಕ ಸಂಗತಿ ಮತ್ತು ವೈಯಕ್ತಿಕ ಜೀವನದ ದುರಂತಗಳ ನಡುವಿನ ಸಂಕೀರ್ಣ ಸಂಬಂಧಗಳನ್ನು ಸಮರ್ಥವಾಗಿ ಹೇಳುತ್ತದೆ. 'ಉಯ್ಯಾಲೆ'ಯಲ್ಲಿಯೂ ವಿವಾಹಬಾಹಿರ ಆಕರ್ಷಣೆಗಳ ಸ್ವರೂಪವನ್ನು ಅನ್ವೇಷಿಸಲಾಗಿದೆ. 'ವೈಶಾಖ'ವು ದಲಿತ-ಬಂಡಾಯ ಚಳುವಳಿಗಳ ಪರಿಸರದಲ್ಲಿ ಸೃಜನಾತ್ಮಕ ಅನುಭವದ ಸ್ವರೂಪವನ್ನು ಕುರಿತು ಪುರುಧ್ಯಾನ ನಡೆಸಿದುದರ ಪರಿಣಾಮವಾಗಿದೆ. ದಲಿತ ಯುವಕನೊಬ್ಬನ ಅಂತರಂಗದಲ್ಲಿ ನಡೆಯುವ ಪ್ರಜ್ಞೆಯ ವಿಕಾಸವನ್ನು ಕಟ್ಟಿಕೊಡುವ ಪ್ರಯತ್ನ ಇಲ್ಲಿದೆ. ವಿಭಿನ್ನ ಅನುಭವಗಳ ಸಂಗಡ ಆಗುವ ಮುಖಾಮುಖಿಯಲ್ಲಿಯೇ ತನ್ನ ಚಿಂತನಲೋಕವನ್ನು ವಿಸ್ತರಿಸಿಕೊಳ್ಳುತ್ತಾ ಹೋಗುವ ಲಕ್ಕನು ಆಧುನಿಕ ವಿದ್ಯಾಭ್ಯಾಸವನ್ನು ಪಡೆಯದಿರುವುದರಿಂದಲೇ ಹೆಚ್ಚು ಪ್ರಾತಿನಿಧಿಕವಾಗುತ್ತಾನೆ. ಕಾದಂಬರಿಯು ತನ್ನ ಆಕೃತಿಗೆ 'ಅನ್ಯ'ವಾದ ವಿಚಾರಗಳ ಭಾರದಿಂದ ಬಳಲುವುದಿಲ್ಲ. 'ಲೈಂಗಿಕತೆ'ಯಂತಹ ಪ್ರಬಲಶಕ್ತಿಯನ್ನು ನಿರ್ವಹಿಸುವ ರೀತಿ ಕೂಡ ಇತರ ಪ್ರಗತಿಶೀಲ ಲೇಖಕರಿಗಿಂತ ಪ್ರಬುದ್ಧವಾಗಿದೆ. ಹಾಗೆಯೇ ಜೀವಜಗತ್ತಿನಿಂದ ಹೆಕ್ಕಿ ತೆಗೆದ ಪ್ರತಿಮೆಗಳಿಗೆ ಸಾಂಕೇತಿಕ ಅರ್ಥವನ್ನು ರೂಪಿಸಿಕೊಟ್ಟಿರುವುದೂ ಹೊಸ ಉಪಕ್ರಮವೇ ಆಗಿದೆ. 'ಹೆಜ್ಜಾಲ', ಕನ್ನಡ ಕಾದಂಬರೀಲೋಕಕ್ಕೆ ಬಹುಮಟ್ಟಿಗೆ ಅಪರಿಚಿತವಾಗಿರುವ, ಭೂಮಿಹೀನ ಕೃಷಿಕಾರ್ಮಿಕರ ಜೀವನದ ಅನ್ವೇಷಣೆಯಾಗಿದೆ. ಹಾಗೆ ನೋಡಿದರೆ ಇಲ್ಲಿನ ಕಾಲೂರನಿಗೂ ಕಾರಂತರ ಚೋಮನಿಗೂ ಇರುವ ಸಂಬಂಧಾಂತರಗಳ ಪರಿಶೀಲನೆಯು ಕುತೂಹಲಕಾರಿಯಾದುದು. ಇಲ್ಲಿ ಪ್ರಗತಿಶೀಲ ಬರೆಹಗಾರರ ಅಧಿಕೃತತೆಯ, ನೈಜ ಸಾಧ್ಯತೆಗಳ ಪರಿಚಯವಾಗುತ್ತದೆ.

ಈ ಶತಮಾನದ ನಲವತ್ತರ ದಶಕದಲ್ಲಿ ಮುಂಬಯಿಗೆ ವಲಸೆ ಹೊರಟ ಬುದ್ಧಿಜೀವಿ – ಶ್ರಮಜೀವಿ ಸಮುದಾಯವು ಕಂಡ ಜಗತ್ತು ಮತ್ತು ಎದುರಿಸಿದ ಸಮಸ್ಯೆಗಳು ಕರ್ನಾಟಕದ ಕನ್ನಡ ಲೇಖಕರಿಗೆ ಮುಖಾಮುಖಿಯಾಗಲಿಲ್ಲ. ಪ್ರಗತಿಶೀಲ ಬರೆಹಗಾರರ ವಿಷಯದಲ್ಲಂತೂ ಆ ಮಾತು ಇನ್ನಷ್ಟು ನಿಜ. ಉತ್ತರ ಕರ್ನಾಟಕದ ಸ್ವಾತಂತ್ರ್ಯ ಚಳುವಳಿಯ ಆಕರ್ಷಣೆಯ ಕೇಂದ್ರವೂ ಆ ನಗರದಲ್ಲಿಯೇ ಇತ್ತು. ಆನಂತರದ ದಶಕಗಳಲ್ಲಿ ಕಾರ್ಮಿಕರ ಚಳುವಳಿಯು ಅನುಭವಿಸಿದ ತೀವ್ರವಾದ ಭ್ರಮನಿರಸನದ ಫಲವಾಗಿ, ಕಾಂಗ್ರೆಸ್‌ನಿಂದ ಎಡಪಂಥೀಯ ರಾಜಕೀಯದ ಕಡೆಗೆ ನಡೆದ ಚಲನೆಗೂ ಆ ನಗರದ ಕೈಗಾರಿಕಾ ಜಗತ್ತು ಮೂಲಕೇಂದ್ರ. ಈ ಎಲ್ಲ ಚಲನವಲನಗಳನ್ನು ಕೇವಲ ಹಾದಿಬದಿಯಲ್ಲಿ ನಿಂತುನೋಡುವ ಆಸಕ್ತ ಬುದ್ಧಿಜೀವಿಯಂತಲ್ಲದೆ, ಸಕ್ರಿಯ ಕಾರ್ಯಕರ್ತನಾಗಿ ಅನುಭವಿಸುವ ಅವಕಾಶವನ್ನು ಪಡೆದ ಏಕೈಕ ಕನ್ನಡ ಲೇಖಕರೆಂದರೆ ವ್ಯಾಸರಾಯ ಬಲ್ಲಾಳರು. ಅವರು ಈ ಸನ್ನಿವೇಶವನ್ನು ವ್ಯಕ್ತಿ-ಕುಟುಂಬ-ಸಮುದಾಯ-ಸಮಾಜಗಳೆಂಬ ನಾಲ್ಕು ನೆಲೆಗಳಲ್ಲಿಯೂ ಗ್ರಹಿಸುತ್ತಾರೆ. ಅಷ್ಟೇ ಅಲ್ಲ, ಈ ನಾಲ್ಕು ಘಟಕಗಳ ನಡುವಿನ ಸಂಕೀರ್ಣ ಸಂಬಂಧಗಳನ್ನು ವಿಶ್ಲೇಷಣೆ ಮಾಡಲು ತಮ್ಮ ಬರವಣಿಗೆಯ

ಸಮಗ್ರತೆಯಲ್ಲಿ ಯತ್ನಿಸುತ್ತಾರೆ. ಮನುಷ್ಯಸಂಬಂಧಗಳ ಮೂಲಕವೇ ಬೆಳೆಯುವ, ಬದಲಾಗುವ ಮನುಷ್ಯನ ಪ್ರೇರಕಗಳೂ ಸಾಮಾಜಿಕ ಸಂಗತಿಗಳೇ ಎಂಬ ಸ್ಪಷ್ಟ ಅರಿವು ಅವರ ಬರವಣಿಗೆಯ ಹಿಂದೆ ಕೆಲಸಮಾಡಿದೆ. ವ್ಯಕ್ತಿಗೆ, ಎಷ್ಟೇ ಸ್ವಾತಂತ್ರ್ಯದ ಭ್ರಮೆಗಳಿದ್ದರೂ ಅವನೂ ತನ್ನ ಸುತ್ತಲಿನ ಪರಿಸರದಿಂದಲೇ ರೂಪಿತನಾಗುವನೆನ್ನುವ ಮಾರ್ಕ್ಸಿಸ್ಟ್ ತಿಳಿವಳಿಕೆಯು ಅವರ ಬರವಣಿಗೆಯನ್ನು ರೂಪಿಸಿದೆ. ಅವರ 'ಹೇಮಂತಗಾನ', 'ಬಂಡಾಯ' ಮತ್ತು 'ಹೆಜ್ಜೆ'ಗಳು ಪ್ರಗತಿಶೀಲ ಬರವಣಿಗೆಯಲ್ಲಿ ಎದುರಿಸಬೇಕಾದ ಹಲವು ಸಮಸ್ಯೆಗಳನ್ನು ಚರ್ಚಿಸಲು ಅವಕಾಶ ಮಾಡಿಕೊಡುತ್ತವೆ. ಹಿಂಸೆಯು ಪಡೆಯಬಹುದಾದ ಹಲವು ಆಯಾಮಗಳು, ಹೋರಾಟಗಳಲ್ಲಿ ಆದರ್ಶ ಮತ್ತು ವಾಸ್ತವಗಳ ದ್ವಂದ್ವ, ಬರವಣಿಗೆಯಲ್ಲಿ ಭಾವುಕತೆಯ ಸಮಸ್ಯೆ, ಸಾಮಾಜಿಕ ಸಂಬಂಧಗಳೊಡನೆ ವೈಯಕ್ತಿಕ ಸಂಬಂಧಗಳು ಬೆಸೆದುಕೊಳ್ಳುವ ಬಗೆ, ವಾಸ್ತವವಾದೀ ನಿರೂಪಣೆಯ ದಾರಿಯಲ್ಲಿ ಸಾಂಕೇತಿಕತೆಯು ಕಾಣಿಸಿಕೊಂಡ ರೀತಿ ಮುಂತಾದವು ಅವುಗಳಲ್ಲಿ ಕೆಲವು. ಬಲ್ಲಾಳರ ಕೃತಿಗಳು ಇಂಥ ಸಮಸ್ಯೆಗಳೊಂದಿಗೆ ಯಶಸ್ವಿಯಾದ ಅನುಸಂಧಾನ ನಡೆಸಿವೆ. (ವಿವರಗಳಿಗೆ ನೋಡಿ : 'ವ್ಯಾಸರಾಯ ಬಲ್ಲಾಳರ ಕಾದಂಬರಿಗಳು : ಕೆಲವು ಸಂಗತಿಗಳು', ಎಚ್. ಎಸ್. ರಾಘವೇಂದ್ರರಾವ್, 'ಅಕ್ಕರೆ', ವ್ಯಾಸರಾಯ ಬಲ್ಲಾಳ ಅಭಿನಂದನಾ ಗ್ರಂಥ, ೧೯೯೬, ಪುಟಗಳು ೧೨೫-೧೩೩).

ಪ್ರಗತಿಶೀಲ ಚಳುವಳಿಯ ಆರಂಭದ ದಿನಗಳಲ್ಲೇ ಅದರೊಂದಿಗೆ ತೊಡಗಿಸಿಕೊಂಡ ಹಿರಿಯ ನಾಟಕಕಾರರಾದ ಶ್ರೀರಂಗರ ಕಾದಂಬರಿಗಳನ್ನು ಇಲ್ಲಿ ಹೆಸರಿಸಲೇ ಬೇಕು. ಸಾಕಷ್ಟು ಹಿಂದೆಯೇ ಬಂದ 'ಪ್ರಕೃತಿ', 'ವಿಶ್ವಾಮಿತ್ರನ ಸೃಷ್ಟಿ', 'ಅನಾದಿ', 'ಅನಂತ' ಮುಂತಾದ ಕೃತಿಗಳು ಪ್ರಗತಿಶೀಲತೆ ಮತ್ತು ನವ್ಯತೆಗಳೆರಡನ್ನೂ ತಮ್ಮೊಳಗೆ ಬೀಜರೂಪದಲ್ಲಿ ಹುದುಗಿಸಿಕೊಂಡಿವೆ. ಅವರು ಪ್ರಗತಿಶೀಲತೆಯಾಚೆಗಿನ ವಾಸ್ತವತೆಯನ್ನು ಕೂಡ ನಿರ್ಭಾವುಕವಾದ ಶೈಲಿಯಲ್ಲಿ ಗ್ರಹಿಸುವ ಸಾಮರ್ಥ್ಯವನ್ನು ಪಡೆದಿದ್ದರು. 'ಪ್ರಕೃತಿ'ಯು ಯಾವುದೇ ಹುಸಿಹೇಳಿಕೆಗಳನ್ನು ಮಾಡದೆ, ಮೇಲುವರ್ಗದ ಮನೆತನವೊಂದರ ಅಧಃಪತನವನ್ನೂ ದಲಿತ ಯುವಕನೊಬ್ಬನ ಉನ್ನತಿಯನ್ನೂ ತನ್ನ ವಸ್ತುವಾಗಿ ಹೊಂದಿದೆ. ಈ ಪರಿವರ್ತನೆಗೆ ಕಾರಣವಾದ ಸಂಗತಿಗಳನ್ನು ಅವರು ಹುಸಿಯೆನಿಸದಂತೆ ನಿರ್ವಹಿಸಿದ್ದಾರೆ. ಪರಿಸರದ ಅರಿವಿಗೇ ಬರದಂತೆ ಪ್ರಗತಿಪರ ಆಶಯಗಳು ಕ್ರಮೇಣ ಸಕ್ರಿಯವಾಗುವ ಬಗೆಯನ್ನು ಈ ಕಾದಂಬರಿಯು ಸಮರ್ಥವಾಗಿ ಹಿಡಿಯುತ್ತದೆ. 'ಅನಾದಿ', 'ಅನಂತ'ಗಳಂತಹ ಕಾದಂಬರಿಗಳೂ ಸ್ತ್ರೀ-ಪುರುಷ ಸಂಬಂಧದ ಸೂಕ್ಷ್ಮಗಳನ್ನು ರೊಮಾಂಟಿಕ್ ಅಲ್ಲದ, ಪುರುಷಪ್ರಧಾನವಲ್ಲದ ರೀತಿಯಲ್ಲಿ ನಿರ್ವಹಿಸುವ ಬಗೆಯನ್ನು ಅ. ನ. ಕೃ., ತ. ರಾ. ಸು. ಮುಂತಾದವರ ಅತಿರಂಜಿತ, ಸುಳ್ಳು ರೀತಿಯೊಂದಿಗೆ ಹೋಲಿಸಿದಾಗ ಶ್ರೀರಂಗರ ಮಹತ್ವವು ಗೊತ್ತಾಗುತ್ತದೆ.

ಇವರಲ್ಲದೆ ಬೀಚಿ, ಸಾಡಿಗೇರ ಕೃಷ್ಣರಾಯ, ಕೋ. ಚೆನ್ನಬಸಪ್ಪ, ಎಸ್. ಅನಂತನಾರಾಯಣ, ಕುಮಾರವೆಂಕಣ್ಣ ('ಬಣ್ಣದ ಮಾಲಿಂಗ') ಮುಂತಾದವರು ಪ್ರಗತಿಶೀಲ ಚಳುವಳಿಯ ಆಸುಪಾಸಿನಲ್ಲಿ ಕೃತಿರಚನೆ ಮಾಡಿದ್ದಾರೆ. ಅವೆಲ್ಲದರ ವಿವರವಾದ ಪರಿಶೀಲನೆಯು ಇಲ್ಲಿ ಸಾಧ್ಯವಿಲ್ಲ. ಪ್ರಾಯಶಃ ಅದರ ಅಗತ್ಯವೂ ಇಲ್ಲ.

## ಪ್ರಸ್ತುತ ಸಂದರ್ಭದಲ್ಲಿ ಚರ್ಚಿಸಬಹುದಾದ ಕೆಲವು ಸಂಗತಿಗಳು :

೧. **ಪ್ರಗತಿಶೀಲತೆಯ ಪ್ರಾದೇಶಿಕ ಆಯಾಮಗಳು :** ಕರ್ನಾಟಕದ ಬೇರೆ ಬೇರೆ ಭಾಗಗಳಲ್ಲಿ ಪ್ರಗತಿಶೀಲವಾದ ಧೋರಣೆಗಳು ಆವಿರ್ಭಾವವಾದ ಕಾಲಘಟ್ಟಗಳಿಗೂ ಅವು ತಳೆದ ಸ್ವರೂಪಕ್ಕೂ ಯಾವ ಬಗೆಯ ಸಂಬಂಧವಿದೆಯೆನ್ನುವುದು ಕುತೂಹಲಕಾರಿಯಾದ ಪ್ರಶ್ನೆ. ಕರಾವಳಿಯ ಲೇಖಕರು ಸುಧಾರಣವಾದಿ ಬರೆಹಗಾರರ ಸುದೀರ್ಘ ಪರಂಪರೆಯನ್ನು ಹೊಂದಿರುವುದಕ್ಕೂ ಅಲ್ಲಿ ಪ್ರಗತಿಶೀಲ ಚಳುವಳಿಯು ಸಕ್ರಿಯವಾಗದಿರುವುದಕ್ಕೂ ಸಂಬಂಧವಿದೆಯೇ ? ನೆರೆಯಲ್ಲಿಯೇ ಇದ್ದ ಕೇರಳದ ಬ್ರಾಹ್ಮಣೇತರ ಪ್ರಗತಿಶೀಲ ಲೇಖಕರ ದಟ್ಟ ಪ್ರಭಾವವು ಅಲ್ಲಿ ಯಾಕೆ ಆಗಲಿಲ್ಲ ? (ತಕಳಿ ಶಿವಶಂಕರಪಿಳ್ಳೆ, ವೈಕಂ ಮೊಹಮ್ಮದ್ ಬಶೀರ್, ಲಲಿತಾಂಬಿಕಾ ಅಂತರ್ಜನಂ) ಹೈದರಾಬಾದ್ ಕರ್ನಾಟಕವೆಂದು ಕರೆಯಲಾಗುವ ಜಿಲ್ಲೆಗಳಲ್ಲಿ ಅಂದಿನಿಂದಲೂ ಪ್ರಗತಿಪರವಾದ ಒಲವುಗಳಿರುವುದಕ್ಕೂ ಅಲ್ಲಿನ ಫ್ಯೂಡಲ್ ಪರಿಸರಕ್ಕೂ ಇರುವ ಸಂಬಂಧವು ಯಾವು ಬಗೆಯದು ? ಹಾಗೆ ನೋಡಿದರೆ ಪಂಡಿತ ತಾರಾನಾಥ, ಸಿದ್ದವನಹಳ್ಳಿ ಕೃಷ್ಣಶರ್ಮ, ಬಳ್ಳಾರಿ ರಾಘವ, ವೀರೇಶಲಿಂಗಂ ಪಂತುಲು ಮುಂತಾದವರ ವ್ಯಕ್ತಿತ್ವವು ಈ ಪ್ರದೇಶದಲ್ಲಿ ತೀವ್ರ ಪ್ರಭಾವ ಬೀರಿದಂತೆ ತೋರುತ್ತದೆ. ಹಳೆಯ ಮೈಸೂರಿನ ಗ್ರಾಮೀಣ ಪರಿಸರದ ಲೇಖಕರು ಇಂಥ ಬರವಣಿಗೆಯಿಂದ ದೂರವೇ ಉಳಿಯಲು ಕಾರಣವೇನು ?

ಇಲ್ಲಿಯೇ ಕೇಳಿಕೊಳ್ಳಬಹುದಾದ ಮತ್ತೊಂದು ಪ್ರಶ್ನೆಯು, ಪ್ರಾದೇಶಿಕ ಹಾಗೂ ಸಾಮಾಜಿಕ ಉಪಭಾಷೆಗಳ ಬಳಕೆಗೂ ಕೃತಿಗಳು ಪಡೆದುಕೊಳ್ಳುವ ಅಧಿಕೃತತೆಗೂ ಸಂಬಂಧಿಸಿದ್ದು. ಹಳೆಯ ಮೈಸೂರಿನ ಶಿಷ್ಟ ಕನ್ನಡವನ್ನು ಕಣ್ಣುಮುಚ್ಚಿಕೊಂಡು ಎಲ್ಲ ಸಂದರ್ಭಗಳಲ್ಲಿಯೂ ಬಳಸಿದ್ದರಿಂದ ಎಂಥ ಅನಾಹುತವಾಯಿತೆಂದು ಕನ್ನಡ ವಿಮರ್ಶೆಯು ದಾಖಲಿಸಿದೆ. ಉತ್ತರ ಕರ್ನಾಟಕದ ಕಥಾಸಾಹಿತ್ಯದಲ್ಲಿ ಕಾಣಿಸಿಕೊಳ್ಳುತ್ತಿದ್ದ ಭಾಷಾವೈವಿಧ್ಯವನ್ನು ಇಲ್ಲದಂತೆ ಮಾಡುವುದರಲ್ಲಿ ಅ. ನ. ಕೃ. ರವರ 'ಆಕರ್ಷಕ ಶೈಲಿ'ಯು ವಹಿಸಿದ ಪಾತ್ರವನ್ನು ಕುರ್ತಕೋಟಿಯವರು ತಮ್ಮ ಲೇಖನವೊಂದರಲ್ಲಿ ಪ್ರಸ್ತಾಪಿಸಿದ್ದಾರೆ. ಹಾಗೆಂದು ಉಪಭಾಷೆಯು ತಂತಾನೇ 'ಅಧಿಕೃತತೆ'ಗೆ ಕಾರಣವಾಗುವುದೆಂದು ಹೇಳಲಾಗುವುದಿಲ್ಲ. ಉದಾಹರಣೆಗೆ ಶಾಂತರಸ, ಗೀತಾ ನಾಗಭೂಷಣ ಮತ್ತು ಅಮರೇಶ

ನುಗಡೋಣಿಯವರ ಕಥೆಗಳಲ್ಲಿ ಭಾಷೆಯನ್ನು ಬಳಸಿಕೊಂಡಿರುವ ಬಗೆಯ ತೌಲನಿಕ ಪರಿಶೀಲನೆಯು ಈ ಸಮಸ್ಯೆಯ ಮೇಲೆ ಬೆಳಕು ಚೆಲ್ಲಬಹುದು.

೨. **ವೈಚಾರಿಕತೆ ಮತ್ತು ಕಲಾತ್ಮಕತೆ :** ಪ್ರಗತಿಶೀಲ ಸಾಹಿತ್ಯವು ಎದುರಿಸಿದ ಮತ್ತು ಇಂದಿನ ಸನ್ನಿವೇಶದಲ್ಲಿಯೂ ಪ್ರಸ್ತುತವಾದ ಸಂಗತಿಗಳಲ್ಲಿ ಇದೂ ಒಂದು. ಸಾಹಿತ್ಯಕೃತಿಯು ಮೊದಲು ಅನುಭವವಾಗಿ ಸಂವಹನವಾಗುತ್ತದೆ ಮತ್ತು ಅನಂತರ ಓದುಗನಲ್ಲಿ ವಿಚಾರಗಳನ್ನು ಹುಟ್ಟಿಸುತ್ತದೆ ಎನ್ನುವ ತಿಳಿವಳಿಕೆಯು ಮುಖ್ಯವಾದುದು. ಬದಲಾಗಿ ವಿಚಾರಗಳನ್ನು ನೇರವಾಗಿ ಹೇಳತೊಡಗುವ ಸಾಹಿತ್ಯಕೃತಿಗಳು ಬಹಳ ಸೀಮಿತವಾದ ಯಶಸ್ಸನ್ನು ಪಡೆಯುತ್ತವೆ. ಪ್ರಗತಿಶೀಲರು ಹೇಳುವ ವಿಚಾರಗಳಿಗೂ ಅವರ ಕೃತಿಗಳು ಹುಟ್ಟಿಸುವ ವಿಚಾರಗಳಿಗೂ ಅನೇಕ ಬಾರಿ ತಾಳಮೇಳ ಇರುವುದಿಲ್ಲವೇ ? ವೈಚಾರಿಕವಾದ ಏಕಮುಖತೆಯು ಕಾವ್ಯದ ಬಹುಮುಖೀ ಅರ್ಥಸಾಧ್ಯತೆಗಳನ್ನಾಗಲೀ ಸಂಕೀರ್ಣತೆಯನ್ನಾಗಲೀ ಕಡಿಮೆ ಮಾಡುವುದೇ ? ಲೇಖಕನ ಸಮಗ್ರ ವೈಚಾರಿಕತೆಗೂ ನಿರ್ದಿಷ್ಟ ಕಥೆ ಕವಿತೆಗಳು ಒಳಗೊಳ್ಳಬಹುದಾದ ವೈಚಾರಿಕತೆಗೂ ಇರುವ ಸಂಬಂಧ ಯಾವ ಬಗೆಯದು ? ಒಬ್ಬ ಲೇಖಕನ ವೈಚಾರಿಕ ನಿಲುವುಗಳು ಬದಲಾದ ಕೂಡಲೇ ಅವನು ಅದುವರೆಗೆ ರಚಿಸಿರುವ ಕೃತಿಗಳು ಅಪ್ರಸ್ತುತವಾಗಿ ಬಿಡುತ್ತವೆಯೇ ? ಸಾಹಿತ್ಯಕೃತಿಗೂ ಲೇಖಕನಿಗೂ ನಡುವೆ ಇಂಥ ಸಂಬಂಧಗಳನ್ನು ಹುಡುಕುವ ಕೆಲಸವೇ ತಪ್ಪು ಎಂದು ತಿಳಿಯಬೇಕೇ ? ಮುಂತಾದ ಪ್ರಶ್ನೆಗಳು ಶಾಶ್ವತವಾದ ಅಥವಾ ಸರ್ವಸಮ್ಮತವಾದ ಉತ್ತರಗಳನ್ನು ಪಡೆಯುವುದಿಲ್ಲ. ಆದರೆ ನಾವು ಕೊಟ್ಟುಕೊಳ್ಳುವ ತಾತ್ಕಾಲಿಕ ಉತ್ತರಗಳು ಪ್ರಗತಿಶೀಲ ಸಾಹಿತ್ಯದ ಮೌಲ್ಯಮಾಪನದ ದಿಕ್ಕಿನಲ್ಲಿ ಮುಖ್ಯವಾಗುತ್ತವೆ. ಇಂದು ವಿಮರ್ಶೆಯ ವಲಯಗಳು ಪರಸ್ಪರ ಸಂವಾದದ ಸಾಧ್ಯತೆಯೇ ಇಲ್ಲವೇನೋ ಎನ್ನುವಂತೆ ದೂರಸರಿದಿರುವಾಗ ಈ ರೀತಿಯ ಪ್ರಶ್ನೆಗಳು ಮುಖ್ಯವಾಗುತ್ತವೆ.

ಆಧುನಿಕ ಕನ್ನಡ ಸಾಹಿತ್ಯದ ವಿವಿಧ ಘಟ್ಟಗಳ ಪರಿಶೀಲನೆಯಲ್ಲಿ 'ಪ್ರಗತಿಶೀಲ'ವೆಂಬ ಈ ಹಂತದ ಪರಿಶೀಲನೆಯು ಕೊಂಚ ಕಟುವಾಯಿತೆಂದು ಮೇಲುನೋಟಕ್ಕೆ ತೋರಬಹುದು. ಅದು ಈ ಬರೆಹಗಾರನ ಪಕ್ಷಪಾತದ ಫಲವಲ್ಲ. ಕೇವಲ ಸಹಾನುಭೂತಿಯು ಗುಣಾತ್ಮಕವಾದ ವ್ಯತ್ಯಾಸಗಳನ್ನು ತರಲಾರದು. ಈ ಹಂತದ ಬಗ್ಗೆ ಬರೆಯುವಾಗಲೂ ಇತರ ಹಂತಗಳಲ್ಲಿ ಆಗಿರುವ ಸಾಹಿತ್ಯಕ ಸಾಧನೆಯನ್ನು ಮರೆಯಬಾರದು. ಒಟ್ಟಂದದಲ್ಲಿ ನೋಡಿದಾಗ, ಕನ್ನಡ ವಿಮರ್ಶೆಯು ಪ್ರಗತಿಶೀಲ ಸಾಹಿತ್ಯವನ್ನು ಕುರಿತಂತೆ ತಲುಪಿರುವ ನಿರ್ಣಯಗಳಿಗೂ ಇಲ್ಲಿ ಪ್ರಸ್ತಾಪಿಸಿದ ವಿಚಾರಗಳಿಗೂ ಹೆಚ್ಚಿನ ಅಂತರವಿಲ್ಲ. ಸಾಹಿತ್ಯದ ಸಾಮಾಜಿಕತೆಯನ್ನು ಬಹುಮುಖ್ಯವೆಂದು ತಿಳಿದಿರುವ ವಿಮರ್ಶಕರೂ ಈ ಹಂತದ ಬಗ್ಗೆ ಅಪಾರ ಉತ್ಸಾಹ ತೋರಿಸಿಲ್ಲ. ಪ್ರಗತಿಶೀಲ ಲೇಖಕರ ಮಿತಿಗಳು ಕಲಿಸುವ ಪಾಠಗಳನ್ನು ನಮ್ಮದಾಗಿ ಮಾಡಿಕೊಳ್ಳುವುದರಿಂದ ಮುಂದೆ ನಡೆಯಬೇಕಾದ ದಾರಿಗಳು

ನಿಚ್ಚಳವಾಗಬಹುದು. ಅವರ ಉದ್ದೇಶಗಳ ಸಮರ್ಪಕತೆ ಮತ್ತು ವಿಧಾನಗಳ ಕೊರತೆಗಳು ನಮ್ಮನ್ನು ಭಾರತೀಯ, ಜಾಗತಿಕ ಜನಪರ ಸಾಹಿತ್ಯದ ಮಾದರಿಗಳ ಕಡೆಗೆ ಕರೆದೊಯ್ಯಬೇಕು. ಕಳೆದ ಮೂವತ್ತು ವರ್ಷಗಳಲ್ಲಿ ಕನ್ನಡ ಸಾಹಿತ್ಯವೂ ಅಂಥ ಕೃತಿಗಳನ್ನು ನೀಡಿದೆ. ಅವುಗಳ ಪರಿಶೀಲನೆಯೂ ನಡೆದಿದೆ.

● ● ●

# ಕನ್ನಡ ನವ್ಯಸಾಹಿತ್ಯ ಘಟ್ಟ

ಡಾ. ಎಚ್. ಎಸ್. ವೆಂಕಟೇಶಮೂರ್ತಿ

# ಕನ್ನಡ ನವ್ಯಸಾಹಿತ್ಯ ಘಟ್ಟ

ಕನ್ನಡ ನವ್ಯಸಾಹಿತ್ಯದ ಘಟ್ಟದ ಬಗ್ಗೆ ಚಿಂತಿಸುವುದಕ್ಕೆ ಇದು ತಕ್ಕ ಕಾಲ. ಕಾರಣ, ನಡೆದು ಬಂದ ದಾರಿಯ ಕಡೆ ಈಗ ತಿರುಗಿ ನೋಡುವುದು ಸುಲಭ. ೧೯೫೦, ಆ ಘಟ್ಟದ ಆರಂಭದ ಕಾಲ. ೬೦ ನೇ ದಶಕ ಆ ಘಟ್ಟದ ಉಚ್ಛ್ರಾಯದ ಕಾಲ. ೭೦ ನೇ ದಶಕ ಪಕ್ವತೆಯ ಕಾಲ. ಸ್ವಾತಂತ್ರ್ಯೋತ್ತರ ಯುಗದಲ್ಲಿ ಕನ್ನಡ ಸಾಹಿತ್ಯ ಕಂಡ ಮಹಾನ್ ಉತ್ಕರ್ಷ, ನವ್ಯಸಾಹಿತ್ಯದ ಉತ್ಕರ್ಷವೇ. ಇಪ್ಪತ್ತು ವರ್ಷಗಳ ಆ ಕಾಲಾವಧಿಯಲ್ಲಿ ನಾವು ಕನ್ನಡ ಸಾಹಿತ್ಯ ಪರಂಪರೆಯ ಒಂದು ಮಹತ್ವದ ತಿರುವನ್ನು ಕಂಡೆವು. ಕಾವ್ಯ. ನಾಟಕ, ಸಣ್ಣ ಕತೆ, ಕಾದಂಬರಿ ಮತ್ತು ವಿಮರ್ಶೆ ಈ ಪ್ರಕಾರಗಳಲ್ಲಿ ಮಹತ್ವದ ಕೃತಿಗಳನ್ನು ಕಂಡೆವು. ಮಹತ್ವದ ಲೇಖಕರನ್ನೂ ಕಂಡೆವು. ನವ್ಯ ಸಾಹಿತ್ಯ ಸಂದರ್ಭದಲ್ಲಿ ನಾವು ಕಂಡ ಲೇಖಕರು ನವೋದಯದಲ್ಲಿ ನಾವು ಕಂಡಿದ್ದ ದೈತ್ಯ ಪ್ರತಿಭೆಗಳೊಂದಿಗೆ ಹೋಲಿಕೆಗೆ ನಿಲ್ಲಬಲ್ಲಷ್ಟು ಸಮರ್ಥರು ಎನ್ನುವುದರಲ್ಲಿ ಯಾವುದೇ ಬಗೆಯ ಸಂದೇಹವಿಲ್ಲ.

ಕನ್ನಡ ಸಾಹಿತ್ಯ ಪರಂಪರೆಯಲ್ಲಿ. ನವ್ಯ ಸಾಹಿತ್ಯದ ತಿರುವು ಕಾಣಿಸಿಕೊಂಡಿದ್ದಕ್ಕೆ ಕಾರಣವನ್ನು ಕೆಲವು ವಿಮರ್ಶಕರು ಸಾಮಾಜಿಕ ಸಂದರ್ಭದಲ್ಲಿ ಕಂಡರೆ. ಕೆಲವು ವಿಮರ್ಶಕರು ಲೇಖಕರ ವೈಯಕ್ತಿಕ ಅಭಿಲಾಷೆಯಲ್ಲಿ ಕಂಡುಕೊಂಡರು. ಈ ಎರಡೂ ಅಂಶಗಳು ಕೂಡಿಯೇ ಹೊಸತುಡಿತವನ್ನು ಹುಟ್ಟುಹಾಕಿವೆ ಎನ್ನಬೇಕು. ನವೋದಯದ ಸಾಧ್ಯತೆಗಳು ತೀರಿವೆ ಎಂದು ಅಡಿಗರಿಗೆ ಅನ್ನಿಸಿದ್ದು. ತಾವು ಹೊಸದಾರಿ ಹಿಡಿಯಬೇಕೆಂದು

ಅವರಿಗೆ ಅನ್ನಿಸಿದ್ದು ಪರಸ್ಪರ ಚೋದಕವೂ, ಪೂರಕವೂ ಆದ ಅಂಶಗಳಾಗಿವೆ. ಹೊಸ ಸಂದರ್ಭಕ್ಕೆ ತಕ್ಕಂಥ ಅಭಿವ್ಯಕ್ತಿಯನ್ನು ಕಂಡುಕೊಳ್ಳಬೇಕಾದ ಅಗತ್ಯವನ್ನು ಅಡಿಗರು, ಗೋಕಾಕರು ಕಂಡುಕೊಂಡಿದ್ದು ಮಾತ್ರವಲ್ಲ ಅದನ್ನು ಸ್ಪಷ್ಟವಾಗಿ ತಮ್ಮ ಭಾಷಣ ಮತ್ತು ಬರಹದಲ್ಲಿ ಹೇಳಿದರು. ಹೊಸರೀತಿಯ ಬರವಣಿಗೆಯ ಅಗತ್ಯವನ್ನು ಅಡಿಗ, ಗೋಕಾಕ ಒಮ್ಮೆಗೇ ಕಂಡುಕೊಂಡಿದ್ದು ನೋಡಿದರೆ ಹೊಸ ಬಗೆಯ ಸಾಹಿತ್ಯವನ್ನು ಆವತ್ತಿನ ವಾತಾವರಣವೇ ಅಪೇಕ್ಷಿಸುತ್ತಿತ್ತು ಎಂಬುದು ತನಗೆ ತಾನೇ ಸ್ಪಷ್ಟವಾಗುತ್ತದೆ. ಆದರೆ ಆ ಹೊಸಬಗೆಯ ಸಾಹಿತ್ಯದ ಸ್ವರೂಪ ಹೇಗೆ ಎಂಬುದನ್ನು ಅವರು ತಮ್ಮ ತಮ್ಮ ರೀತಿಯಲ್ಲಿ ಕಂಡುಕೊಂಡರು. ನವ್ಯ ಸಾಹಿತ್ಯ ಮುಂದೆ ಅಡಿಗರ ಮಾರ್ಗವನ್ನು ತನ್ನ ಅಧಿಕೃತ ಮಾರ್ಗವಾಗಿ ಒಪ್ಪಿ ಪಥಕ್ರಮಣ ಮಾಡಿತು.

ಗೋಪಾಲ ಕೃಷ್ಣ ಅಡಿಗರ ' ನಡೆದು ಬಂದ ದಾರಿ ' ನವ್ಯ ಸಾಹಿತ್ಯದ ಆರಂಭದ ಬಿಂದು ಎನ್ನಬಹುದು. ೧೯೫೨ ರಲ್ಲಿ ಪ್ರಕಟವಾದ ಈ ಕೃತಿಯಲ್ಲಿ ಅಡಿಗರು ನವ್ಯ ಸಾಹಿತ್ಯದ ಅಗತ್ಯವನ್ನು ಹೀಗೆ ಉದ್‌ಘೋಷಿಸುತ್ತಾರೆ : " ಪ್ರತಿ ತಲೆಮಾರಿನಲ್ಲೂ ಕವಿ ತನ್ನದೇ ಆದ ಒಂದು ಹೊಸ ಭಾಷೆಯನ್ನು ರೂಪಿಸಿಕೊಳ್ಳದೆ ಉತ್ತಮ ಅಭಿವ್ಯಕ್ತಿಯನ್ನು ಪಡೆಯಲಾರ. ಭಾಷೆ ಹೀಗೆ ಪುನಃಪುನಃ ಸೃಷ್ಟಿಯಾದಾಗಲೇ ಅದು ಭಾವ ವಿಚಾರಗಳನ್ನು ಯಥಾವತ್ತಾಗಿ ಪ್ರತಿಬಿಂಬಿಸಲು ಸಮರ್ಥವಾಗುತ್ತದೆ. ಗತಕಾಲದ ಭಾಷೆ ಭಾವವನ್ನು ಕೊಲ್ಲುತ್ತದೆ; ಮನಸ್ಸನ್ನು ಮಂಕಾಗಿಸುತ್ತದೆ. ಅರ್ಥಕ್ಕಿಂತ ಶಬ್ದಗಳ ಹಾರಾಟವೇ ಹೆಚ್ಚಿ ಅರ್ಥ ಮರೆಯಾಗುತ್ತದೆ; ಸಂಕೇತ ಮೂಲರೂಪವನ್ನು ಮರೆಸುತ್ತದೆ; ಉತ್ಸವ ಮೂರ್ತಿ ತಾನೇ ಮೂಲ ವಿಗ್ರಹವೆಂದು ವಿಜೃಂಭಿಸುತ್ತದೆ. ಆದ ಕಾರಣವೇ ಹೊಸ ಜೀವನ, ಭಾವನೆಗಳಿಗೆ ತಕ್ಕ ರೀತಿ ರೂಪುಗೊಳ್ಳಬೇಕಾದ ಕಾಲ ಈಗ ಸಾಹಿತಿಗಳನ್ನು ಎದುರಿಸಿ ನಿಂತಿದೆ. "

" ಹತ್ತೊಂಬತ್ತನೆ ಶತಮಾನದ ಆಂಗ್ಲ ಕವಿಗಳಾದ ವರ್ಡ್ಸ್‌ವರ್ತ್, ಷೆಲ್ಲಿ, ಕೀಟ್ಸ್ ಮುಂತಾದ ರೊಮ್ಯಾಂಟಿಕ್ ಕವಿಗಳಿಂದ ಪ್ರೇರಿತವಾದ ನಮ್ಮ ಆಧುನಿಕ ಕನ್ನಡ ಕಾವ್ಯ ಆ ಸಂಪ್ರದಾಯದಲ್ಲಿ ತಾನು ಮಾಡಬಹುದಾದಷ್ಟು ಕೆಲಸವನ್ನು ಮಾಡಿ ಮುಗಿಸಿದೆ. ಆ ಸಂಪ್ರದಾಯದ ಸತ್ವ ಈಗ ತೀರಿದೆ, ಅದಕ್ಕೆ ಅವನತಿ ಬಂದಿದೆ. ಅದರ ದೋಷಗಳೆಲ್ಲಾ ಈಗ ಎದ್ದುಕಾಣಿಸುತ್ತಿವೆ. ನೆಲದ ಮೇಲೆ ಕಾಲೂರಿ ನಿಂತೇ ನಕ್ಷತ್ರವನ್ನು ತುಡುಕುತ್ತಿದ್ದುದು ಈಗ ನೆಲ ಬಿಟ್ಟು ಮೇಲೇರಿ ವೇದಾಂತದ ಮಂಜಿನಲ್ಲಿ ಮರೆಯಾಗಿ ಹೋಗುತ್ತಿದೆ. ಶಬ್ದಗಳು ಅರ್ಥದ ಸ್ಥಾನವನ್ನು ಆಕ್ರಮಿಸುತ್ತಿವೆ. ಪ್ರತಿಯೊಂದು ಭಾವವೂ ಅನುಭವವೂ ಅತಿ ಸರಳವಾಗಿ ಸತ್ಯದಿಂದ ದೂರ ದೂರ ಹೋಗುತ್ತಿವೆ. ಇಂಥ ಕಾಲದಲ್ಲಿ ಕಾವ್ಯಕ್ಕೆ ಮತ್ತೆ ವಾಸ್ತವದ ರಕ್ತದಾನ ನಡೆಯಬೇಕು. ಕಾವ್ಯದಲ್ಲಿ ಮತ್ತೆ ಮಣ್ಣಿನ ವಾಸನೆ ಹೊಡೆಯಬೇಕು. ಈ ಜಗತ್ತನ್ನು ಬಿಟ್ಟು ಕಾವ್ಯ ಬದುಕಲಾರದು ಎಂಬುದನ್ನು ಮತ್ತೆ ಕವಿಗಳು ಅರಿಯಬೇಕಾಗಿದೆ. ನಿಜವಾದ ಕವಿ ಈ ಮಾತನ್ನು ಎಂದೂ ಮರೆಯುವುದಿಲ್ಲ, ಮರೆಯಲಾರ. ಆದರೆ ಕೇವಲ ವಾಸ್ತವವಾದುದು, ಇಂದ್ರಿಯಗಮ್ಯವಾದುದು ಮಾತ್ರವೇ ಕಾವ್ಯದ

ವಸ್ತುವಾಗಲಾರದು. ಈ ಜಗತ್ತಿನಲ್ಲಿ ನಮ್ಮ ಸುತ್ತ ಕಾಣುವ ವಸ್ತುಗಳು ಎಷ್ಟು ನಿಜವೋ ಆ ವಸ್ತುಗಳ ವಿಷಯದಲ್ಲಿ ನಮ್ಮ ಮನಸ್ಸಿನಲ್ಲಿ ಹುಟ್ಟುವ ಭಾವಗಳೂ ಅಷ್ಟೇ ನಿಜ. ಪಂಚಭೌತಿಕವಾದದ್ದು ಕಾವ್ಯಕ್ಕೆ ಎಷ್ಟು ಅಗತ್ಯವೋ ಅಷ್ಟೇ ನಮ್ಮ ಆದರ್ಶವೂ, ಕಲ್ಪನೆಯೂ, ಕನಸೂ ಅಗತ್ಯ. ಈ ಎರಡೂ ಸೇರಿ ಆದ ಪಾಕವೇ ಕಾವ್ಯ. ವಿದ್ಯಮಾನಗಳ ಅನುಭವಗಳ ಆದರ್ಶ ಸ್ವರೂಪದ ಕನಸಿನ ಒಂದು ಅಂಶ ಸೇರದೇ ಇದ್ದುದ್ದು ಕಾವ್ಯವಾಗಲೀ ಸಾಹಿತ್ಯವಾಗಲೀ ಆಗಲಾರದು. ಈ ದೃಷ್ಟಿಯಿಂದ ಆಧುನಿಕ ಇಂಗ್ಲಿಷ್ ಕಾವ್ಯದ ಪ್ರಸಿದ್ಧ ಕವಿಗಳಾದ ಇಲಿಯಟ್, ಆಡನ್ ಮುಂತಾದವರಿಂದ ನಾವು ಇನ್ನು ಮುಂದೆ ಸ್ಫೂರ್ತಿ ಪಡೆಯಬೇಕಾದದ್ದು ಅತ್ಯಗತ್ಯ. ಆದರೆ ನಮ್ಮ ಹೊಸ ಕವಿತೆ ಆ ಇಂಗ್ಲಿಷ್ ಕವಿಗಳ ಕಾವ್ಯದಂತೆಯೇ ರೂಪುಗೊಳ್ಳಲಾರದು. ಆ ಕವಿಗಳ ಅಂಧಾನುಕರಣೆಯಿಂದ ಹೊಸತನ ಬಂದೀತು; ಆದರೆ ಅದು ಕಾವ್ಯವಾಗಲಾರದು. ನಮ್ಮ ಹೊಸ ಕಾವ್ಯ ನಮ್ಮ ನಾಡಿನ ಹೊಸ ವಾತಾವರಣಕ್ಕೂ, ನಮ್ಮ ಜನಜೀವನಕ್ಕೂ, ನಮ್ಮ ಹೊಸ ಭಾಷೆಯ ಪರಿಪಾಕದ ಪರಿಮಿತಿಗೂ ಒಳಪಟ್ಟಿದೆ ಎಂಬುದನ್ನು ನಾವು ಎಂದೂ ಮರೆಯತಕ್ಕದ್ದಲ್ಲ."

ನಮ್ಮ ನಾಡಿನ 'ಹೊಸ ವಾತಾವರಣ' ಎಂದು ಅಡಿಗರು ಹೇಳಿದ್ದು ಮುಖ್ಯವಾದ ಮಾತು. ೧೯೪೭ ರಲ್ಲಿ ನಮ್ಮ ದೇಶ ಸ್ವಾತಂತ್ರ್ಯವನ್ನು ಪಡೆಯಿತು. ಸ್ವಾತಂತ್ರ್ಯ ಸಿಗುವವರೆಗೆ ಇಡೀ ದೇಶ ಒಮ್ಮನಸ್ಸಿನಿಂದ ಹೋರಾಟ ಮಾಡಿತು. ಸ್ವಾತಂತ್ರ್ಯ ಒಂದು ದೊರೆತುಬಿಟ್ಟರೆ ದೇಶದ ಎಲ್ಲಾ ಸಮಸ್ಯೆಗಳೂ ಒಮ್ಮೆಗೇ ಬಗೆಹರಿದುಬಿಡುತ್ತವೆ ಎಂದು ದೇಶ ನಂಬಿಕೊಂಡಿತ್ತು. ಆದರೆ ಆದದ್ದೇ ಬೇರೆ. ನಾವೆಲ್ಲರು ಒಂದೆ ಜಾತಿ ಒಂದೆ ಮತ ! ನಾವು ಮನುಜರು ! ಎಂಬ ಉತ್ಸಾಹದ ಘೋಷಣೆ ಮೊದಲು ಛಿದ್ರಗೊಂಡಿತು. ಸ್ವಾತಂತ್ರ್ಯವನ್ನು ಪಡೆದ ಹೊತ್ತಿನಲ್ಲೇ ದೇಶ ಇಬ್ಭಾಗವಾಗಿ ನಾವೆಲ್ಲರೂ ಒಂದೆ ಕುಲ ಎನ್ನುವುದು ಕೇವಲ ಸುಳ್ಳು ಎಂಬುದು ಸಾಬೀತಾಯಿತು. ದೇಶ ವಿಭಜನೆಯ ಸಂದರ್ಭದಲ್ಲಿ ರಕ್ತದ ಕೋಡಿ ಹರಿಯಿತು. ನಾವು ಮನುಜರು ಹೌದೆ ? ಎಂದು ಕೇಳಿಕೊಳ್ಳಬೇಕಾಯಿತು. ೧೯೪೫ ರಲ್ಲಿ ಜಗತ್ತಿನ ಎರಡನೇ ಮಹಾಯುದ್ಧ ಮುಗಿದಾಗ ಪಾಶ್ಚಾತ್ಯ ಜಗತ್ತು ಹೇಗೆ ಮನುಷ್ಯತ್ವದ ಮರುವ್ಯಾಖ್ಯಾನ ಮಾಡಿಕೊಳ್ಳಬೇಕಾಯಿತೋ ಹಾಗೇ ನಾವೂ ದೇಶದಲ್ಲಿ ನಡೆದ ಮಾರಣ ಹೋಮದ ಹಿನ್ನೆಲೆಯಲ್ಲಿ ಮನುಷ್ಯತ್ವದ ಮರುವ್ಯಾಖ್ಯಾನ ಮಾಡಿಕೊಳ್ಳಬೇಕಾಗಿ ಬಂತು. ಮನುಷ್ಯನ ಹಿಂದೆ ಅಡಗಿಕೊಂಡಿದ್ದ ರಾಕ್ಷಸ ಈ ಪ್ರಮಾಣದಲ್ಲಿ ಪ್ರಕಟವಾದಾಗ ದೇಶದ ಸಂವೇದನೆ ತೀವ್ರವಾದ ತಲ್ಲಣಕ್ಕೆ ಒಳಗಾಗುವುದು ಅನಿವಾರ್ಯವಾಯಿತು. ಭಾರತೀಯತೆ ಎಂಬ ಕಟ್ಟಿನಲ್ಲಿ ಒಟ್ಟಿಡಿಯಾಗಿದ್ದ ನಾವು ಹಿಂದುಗಳಾಗಿ, ಕ್ರೈಸ್ತರಾಗಿ, ಮುಸ್ಲಿಮರಾಗಿ, ಮತ್ತೊಂದು ಧರ್ಮದವರಾಗಿ ಸಿಡಿದು ಬಿದ್ದೆವು. ಆದರ್ಶದ ಕನಸೇ ಬೇರೆ; ವ್ಯಾವಹಾರಿಕತೆಯ ವಾಸ್ತವವೇ ಬೇರೆ ಎಂಬುದು ಎಲ್ಲರಿಗೂ ಸ್ಪಷ್ಟವಾಯಿತು. ವೈಯಕ್ತಿಕ ಲಾಭಕ್ಕಾಗಿ ಹತ್ತು ಹಲವು ಗುಂಪುಗಳಾಗಿ ನಾವು ಒಡೆದುಕೊಳ್ಳತೊಡಗಿದೆವು.

ಈ ವಿಭಜನ ಪ್ರವೃತ್ತಿಯನ್ನೂ ಈವತ್ತಿಗೂ ನಾವು ಚಾಲ್ತಿಯಲ್ಲಿ ಇಟ್ಟಿದ್ದೇವೆ. ಗುಂಪುಗಳು ಹೀಗೆ ಸ್ವಾರ್ಥದ ಹುನ್ನಾರವನ್ನು ಪ್ರಕಟಿಸತೊಡಗಿದಾಗ ಸೂಕ್ಷ್ಮ ಮನಸ್ಸಿನ ವ್ಯಕ್ತಿ ಗುಂಪಿನಿಂದ ದೂರ ಸಿಡಿದು ಏಕಾಕಿಯಾಗುವುದು ಅನಿವಾರ್ಯ. ನವ್ಯ ಸಾಹಿತ್ಯದ ಹಿಂದೆ ಹೀಗೆ ಗುಂಪಿನ ರಾಜಕೀಯದಲ್ಲಿ ಬೆರೆತು ಆತ್ಮನಾಶ ಮಾಡಿಕೊಳ್ಳಲು ಒಪ್ಪದೆ ಏಕಾಂಗಿಯಾಗಿ ಉಳಿದ ಸೂಕ್ಷ್ಮ ಸಂವೇದಿಯಿದ್ದಾನೆ.

ನವೋದಯದ ಶ್ರದ್ಧೆ, ಮೌಲ್ಯನಿಷ್ಠೆ, ಆದರ್ಶದ ಯುಗ ಮುಗಿದು ನವ್ಯದ ವಿಷಾದ ಪರ್ವ ಪ್ರಾರಂಭವಾದ ಹಿನ್ನೆಲೆ ಇದು. ಸ್ವಾನುಭವದ ಹಿನ್ನೆಲೆಯಲ್ಲಿ ಮನುಷ್ಯನ ಅಂತರಂಗವನ್ನು ಅರ್ಥಮಾಡಿಕೊಳ್ಳಲು ನವ್ಯ ಸಾಹಿತ್ಯ ಸಂಕಲ್ಪಿಸಿತು. ಶ್ರದ್ಧೆ – ಆಶಂಕೆ, ಆರಾಧನೆ – ವಿಡಂಬನೆ, ಕನಸುಗಾರಿಕೆ – ವಾಸ್ತವ ಪ್ರಜ್ಞೆ, ಸರಳತೆ – ಸಂಕೀರ್ಣತೆ, ಅಂತರಂಗ – ಬಹಿರಂಗ, ವ್ಯಕ್ತಿ – ಸಮುದಾಯ, ಭೂಮಿ – ಆಕಾಶ ಹೀಗೆ ಅನೇಕ ದ್ವಂದ್ವಗಳನ್ನು ಇದಿರು ಹಾಕಿಕೊಂಡು ನವ್ಯ ಲೇಖಕ ಅನುಭವ ಪ್ರಾಮಾಣ್ಯದಲ್ಲಿ ಬದುಕಿನ ಅರ್ಥವನ್ನು ಹುಡುಕಿಕೊಂಡು ಹೊರಟ ವ್ಯಗ್ರನಾಯಕನಾಗಿ ನಮಗೆ ಕಾಣುತ್ತಾನೆ.

ಗೋಪಾಲಕೃಷ್ಣ ಅಡಿಗರ ನಾಯಕ ' ನನ್ನ ಮನವ ನನಗೆ ಕೊಡು ಓ ಸಮಾಜ ಭೈರವ ' ಎಂದು ವ್ಯಕ್ತಿ ಸ್ವಾತಂತ್ರ್ಯವನ್ನು ಎತ್ತಿ ಹಿಡಿಯುವ ಸತ್ಯಾಗ್ರಹಿ. ಈ ಮನುಷ್ಯನಿಗೆ ಪರಂಪರೆಯೊಂದಿಗೆ ತನ್ನ ಸಂಬಂಧವನ್ನು ಅರ್ಥಪೂರ್ಣವಾಗಿ ಸಾಧಿಸಬೇಕಾಗಿದೆ, ವರ್ತಮಾನದ ಕುಬ್ಜ ಸಮಾಜದೊಂದಿಗೆ ನಿರಂತರ ಹೋರಾಟವನ್ನೂ ಮಾಡಬೇಕಾಗಿದೆ, ಜೊತೆಗೆ ಭವಿಷ್ಯದ ಕನಸುಗಳನ್ನೂ ಬೆಳೆದುಕೊಳ್ಳಬೇಕಾಗಿದೆ. ಯಾವುದೇ ಅನುಭವವನ್ನು ಸಮಗ್ರವಾಗಿ ನೋಡುವ ಹಠ ಮತ್ತು ಛಾತಿ ಅಡಿಗರ ಕಾವ್ಯನಾಯಕನಿಗಿದೆ. ಸಿದ್ಧಮಾರ್ಗ, ಸಿದ್ಧವಸ್ತು, ಸಿದ್ಧಪ್ರತಿಕ್ರಿಯೆ ಎಲ್ಲವನ್ನೂ ಇವನು ಸಂದೇಹದಿಂದ ನೋಡುತ್ತಾನೆ. ವಿಡಂಬನೆ ಅವನ ಪ್ರಧಾನ ಹತ್ಯಾರವಾಗಿ ಪರಿಣಮಿಸುತ್ತದೆ. ಶೋಧನೆ ಅವನ ಪ್ರಧಾನ ಆತ್ಮ ಪ್ರವೃತ್ತಿ. ಆದುದರಿಂದಲೇ ಗಣಿಕಾರ ಮತ್ತು ಕುಂಗ ಅವರ ಕಾವ್ಯದ ಪ್ರಧಾನ ಪ್ರತೀಕಗಳಾಗಿದ್ದಾರೆ. ಗಣಿಕಾರ ನೆಲವನ್ನು ಆಳಕ್ಕೆ ಬಗಿದು ಚಿನ್ನವನ್ನು ಶೋಧಿಸುತ್ತಾನೆ. ಕುಂಗ ಸಮುದ್ರದಲ್ಲಿ ಆಳಕ್ಕೆ ಮುಳುಗಿ ಮುತ್ತನ್ನು ಎತ್ತಿಕೊಂಡುಬರುತ್ತಾನೆ.

೧

ಅಗೆವಾಗ್ಗೆ ಮೊದಲು ಕೋಶಾವಸ್ಥೆ ಮಣ್ಣು;
ಕೆಳಕ್ಕೆ ತಳಕ್ಕೆ ಗುದ್ದಲಿಯೊತ್ತಿ ಕುಕ್ಕಿದರೆ
ಕಂಡೀತು ಗೆರೆಮಿರಿವ ಚಿನ್ನದದಿರು.
ಹೊರತೆಗೆದು ಸುಟ್ಟು ಸೋಸುವಪರಂಜಿ ವಿದ್ಯೆಗಳ
ಇನ್ನಾದರೂ ಕೊಂಚ ಕಲಿಯಬೇಕು;
ಹೊನ್ನ ಕಾಯಿಸಿ, ಹಿಡಿದು ಬಡಿದಿಷ್ಟದೇವತಾ
ವಿಗ್ರಹಕ್ಕೊಗ್ಗಿಸುವ ಅಸಲು ಕಸಬು. (ಭೂತ)

೨

ಹಿತ್ತಲ ಜಗಲಿ ಮೇಲೆ ಕುಳಿತು ಧುಮ್ಮಿಕ್ಕಿದೆನು ಕೆಳಗೆ ಮತ್ತೂ ಕೆಳಗೆ. ತಳಕೆ ಕುಂಗ.
ಹಸುರುತೆರೆ ಅಪ್ಪಳಿಸುತಿರೆ ಮೇಲೆ ನೊರೆಕಾರಿ, ಬೀಸುತಿರೆ ಬಿರುಗಾಳಿ ಗುಡುಗು ಮೊಳಗೆ;
ತಳದಾಣಿಮುತ್ತುಗಳ ಮತ್ತ ದೀಪ್ತಿಗೆ ಕಣ್ಣು ಕುಕ್ಕಿ ಕರುಡಾಡಿದೆನು ಸಂಜೆವರೆಗೆ –
ಬುಂಡೆಗಂಟಿದ್ದ ತುಟಿ ಕಿತ್ತರೂ ಕಲ್ಪನೆ ಹೆಂಡ ಹೊಂಡದ ಸೆಲೆಯ ಹುಡುಕುತಿತ್ತು.

(ಭೂಮಿಗೀತ)

ಕಾವ್ಯವೆನ್ನುವುದು ನಿರಂತರ ಪರಿಶ್ರಮದ, ಶೋಧನೆಯ ಫಲವೆಂಬುದನ್ನು ಈ ಪ್ರತೀಕಗಳು ಸೂಚಿಸುವಂತಿವೆ. ಹಾಗೆಯೇ ಕಾವ್ಯವು ಒಂದು ಕಸುಬುಗಾರಿಕೆ, ಒಂದು ಕಲೆ ಎಂದು ನಂಬಿ ಅಡಿಗರು ಕಾವ್ಯ ನಿರ್ಮಾಣದಲ್ಲಿ ತೊಡಗುತ್ತಾರೆ. ಅದೇ ರೀತಿ ಕಾವ್ಯವು ಸಂಕಲ್ಪ ಬಲದಿಂದ ಸಾಧಿಸಬೇಕಾದ ಒಂದು ಪರಿಪೂರ್ಣತೆಯ ಶಿಲ್ಪವೆಂಬುದು ಅಡಿಗರ ನಂಬಿಕೆಯಾಗಿದೆ.

ಸೂತ್ರರೂಪವಾಗಿ ಅಡಿಗರೇ ತಮ್ಮ ಕಾವ್ಯ ಸಿದ್ಧಾಂತವನ್ನು ಹೀಗೆ ಮಂಡಿಸುತ್ತಾರೆ :

೧. ಮನಸ್ಸಿನ ಮೇಲ್ಪದರುಗಳನ್ನಷ್ಟೇ ಒಳಗೊಳ್ಳುವ ಹಾಗೆ ಕಾವ್ಯ ರಚನೆಯಾದರೆ ಉತ್ತಮ ಕಾವ್ಯ ಸಿದ್ಧಿಸುವುದಿಲ್ಲ. ಪ್ರಜ್ಞೆಯ ಜೊತೆಗೆ ಪ್ರಜ್ಞೆಯ ತಳದಲ್ಲಿ ಅಥವಾ ಅದರ ಮೇಲಕ್ಕೆ ಇರುವ ಎಲ್ಲ ಒಳ ಅಂಶಗಳೂ ಹಠತ್ತಾಗಿ ಸೇರಿದರೆ ಉತ್ತಮ ಕಾವ್ಯ ಆಗುತ್ತದೆ. ಇದಕ್ಕೆ ನಿರಂತರ ಪರಿಶ್ರಮ ಹೇಗೋ ಹಾಗೇ ಅಸಾಧಾರಣವಾದ ತಾಳ್ಮೆಯಿಂದ ತಕ್ಕ ಮುಹೂರ್ತಕ್ಕಾಗಿ ಕಾಯುವುದೂ ಅಗತ್ಯ.

೨. ಸಾಧಿಸಬೇಕಾದ್ದು ಇತರರಿಗೆ ಮನೋರಂಜಕವಾಗುವ ಅಭಿವ್ಯಕ್ತಿಯನ್ನಲ್ಲ, ತನಗೆ ಅತ್ಯಂತ ಸಹಜವಾದದ್ದನ್ನು. ಆಡುವ ಮಾತು ಅಂತರನುಭವದ ತದ್ರೂಪು ಆಗುವ ಹಾಗೆ, ಕವಿಯ ವ್ಯಕ್ತಿ ವಿಶೇಷವನ್ನು ಮೆರೆಯುವ ಹಾಗೆ.

೩. ರೂಢಿಯಾದದ್ದರ ಒಳಹೊಕ್ಕು ಸಿಡಿಮದ್ದಿನ ಹಾಗೆ ಸ್ಫೋಟಿಸಿ ಅದನ್ನು ಅಸ್ತವ್ಯಸ್ತಗೊಳಿಸದೆ ಹೊಸಕಾಲದ ಹೊಸ ಬದುಕಿಗೆ ಅತ್ಯಗತ್ಯವಾದ ಮೌಲ್ಯಗಳನ್ನು ಬೆಳೆಯುವುದು ಸಾಧ್ಯವಾಗುವುದಿಲ್ಲ. ಆದಕಾರಣ ಯಾಂತ್ರಿಕ ವ್ಯವಸ್ಥೆಯಲ್ಲಿ ಸೇರಿದ ನಮ್ಮ ಮೌಲ್ಯಗಳ ತಿರುಳನ್ನು ಭೇದಿಸಿ ಮೂಲ ಬೀಜಗಳನ್ನು ಹೊರತೆಗೆದು ಅದಕ್ಕೆ ಇಂದಿಗೆ ತಕ್ಕ ರೂಪಗಳನ್ನು ಸಿದ್ಧಪಡಿಸುವುದೇ ಬುದ್ಧಿಯ ಮೂಲಕ ಕೆಲಸ ಮಾಡುವವನ ಕರ್ತವ್ಯ.

೪. ಇಷ್ಟು ಕವನಗಳನ್ನು ರಚಿಸಿದೆ. ಇಷ್ಟು ಗ್ರಂಥಗಳನ್ನು ಪ್ರಕಟಿಸಿದೆ ಎಂದು ಸಂಖ್ಯೆಯನ್ನು ಬಿತ್ತರಿಸುವ ಹುಡುಗಾಟಿಕೆ ಬಿಟ್ಟು ಸಾರ್ಥಕವಾಗುವ ಕವನಗಳಲ್ಲಿ ಸದಾಕಾಲಕ್ಕಾಗಿ ಅನುಭವವನ್ನು ಭಟ್ಟಿ ಇಳಿಸಬೇಕು. ಕವನಗಳನ್ನು ಬರೆಯದೆ ಇದ್ದರೂ ನಷ್ಟವಿಲ್ಲ. ಆದರೆ ಬರೆದದ್ದು ಉತ್ತಮವಾಗುವ ಹಾಗೆ ಪರಿಶ್ರಮ ವಹಿಸಬೇಕು: ಕಾಯಬೇಕು.

೫. ಅತ್ಯಂತ ಸೂಕ್ಷ್ಮವೇದಿಯಾದ ಮನಸ್ಸುಳ್ಳ ಕವಿ ಮಾಡುವ ಕೆಲಸ ಸಾಮಾಜಿಕವಾಗಿ. ಸಾಂಸ್ಕೃತಿಕವಾಗಿ ತುಂಬಾ ಬೆಲೆಯುಳ್ಳದ್ದು – ತನಗೆ ತಾನೆ; ಮನುಷ್ಯನ ಜೀವನದ ಅತ್ಯಂತ ಅಪೂರ್ವ ಸಾಧನವಾದ ಮಾತಿನ ಅತ್ಯಂತ ಸರಿಯಾದ ಬಳಕೆಯಿಂದಲೇ ಕವಿ ಸಮಾಜಕ್ಕೆ ಅತ್ಯುತ್ತಮ ಸೇವೆ ಸಲ್ಲಿಸುತ್ತಾನೆ. ಎಲ್ಲ ಜನ ಒಂದು ಕಾಲದಲ್ಲಿ ತಮ್ಮ ಮನಸ್ಸಿನ ಒಳತಳದಲ್ಲಿ ಯಾವುದನ್ನು ಅಸ್ಪಷ್ಟವಾಗಿ ಕಾಣುತ್ತಾರೋ ಅನುಭವಿಸುತ್ತಾರೋ ಅದನ್ನೇ ಕವಿಯಾದವನು ಇನ್ನಷ್ಟು ಸ್ಪಷ್ಟವಾಗಿ ಅನುಭವಿಸಿ ಅದನ್ನು ತಕ್ಕ ಶಬ್ದಗಳಲ್ಲಿ ಮೂರ್ತಿಗೊಳಿಸಿ ಆ ಮೂರ್ತಿಯಲ್ಲಿ ಅದರ ಆದರ್ಶರೂಪವೂ ಹೊಳೆಯುವ ಹಾಗೆ ಮಾಡುತ್ತಾನೆ. ಹೀಗೆ ಅವನು ಬದುಕಿನ ಅಭ್ಯುದಯಕ್ಕೂ ಶ್ರೇಯಸ್ಸಿಗೂ ತಕ್ಕ ಪ್ರತಿಮೆಗಳನ್ನು ಸೃಷ್ಟಿಸಿ ಹೊಸ ಕಾಲಕ್ಕೆ ಅತ್ಯಗತ್ಯವಾದ ಹೊಸ ನಂಬಿಕೆಗಳಿಗೆ ತಕ್ಕ ಬಿಂಬವಾಗುವಂಥ ಕೃತಿಗಳನ್ನು ರಚಿಸುವುದರ ಮೂಲಕ ಸಮಕಾಲೀನನಾಗುತ್ತಾನೆ. ಸಮಕಾಲೀನತೆ ಅಂದರೆ ತಾತ್ಕಾಲಿಕತೆ ಅಲ್ಲ. ಎಲ್ಲ ಕಾಲದಲ್ಲೂ ಸಲ್ಲುವಂಥದು. ಈಗ ಈ ಕಾಲದಲ್ಲಿ ಯಾವ ರೀತಿ ಎಂಥ ವೇಷದಲ್ಲಿ ಎಂಥ ರೂಪಾಂತರದಲ್ಲಿ ವ್ಯಕ್ತವಾಗುತ್ತದೆ ಎಂದು ಕಾಣುವ. ಕಂಡರಿಸುವ ಶಕ್ತಿ.

೬. ತನಗೆ ನಿಜವಾಗಿ ಅನಿಸಿದ್ದು, ತಾನು ಹೇಳುವುದು ಈ ಎರಡರ ನಡುವೆ ಸಹಜವಾಗಿಯೇ ಇರುವ ಕಂದಕವನ್ನು ಆದಷ್ಟು ಸಂಕುಚಿತಗೊಳಿಸುತ್ತಾ ಹೋಗಿ – ಏಕೆಂದರೆ ಇದೇ ನಾವು ಸಾಹಿತ್ಯದಲ್ಲಿ ಬಯಸುವ ಪ್ರಾಮಾಣಿಕತೆ – ಕೊನೆಗೆ ಆ ಎರಡೂ ಒಂದೇ ಆಗುವ ಹಾಗೆ ಮಾಡುವುದು. ಅಥವಾ ಮಾಡಲು ಯತ್ನಿಸುತ್ತಾ ಹೋಗುವುದು. ಇದು ಅತ್ಯುತ್ತಮ ಕಾವ್ಯದ ಲಕ್ಷಣ. ಚಿಂತನೆ. ಮಾತು ಕೃತಿಗಳ ಒಂದುವಳಿಕೆಯೇ ಅತ್ಯುತ್ತಮ ಬದುಕಿನ ಲಕ್ಷಣವಾಗಿರುವ ಹಾಗೆ.

ಅಡಿಗರ ಕಾವ್ಯ ಚಿಂತನೆಯನ್ನು ಈ ಮಾತುಗಳು ಬಹಳ ಸ್ಪಷ್ಟವಾಗಿ ಸಾದರಪಡಿಸುತ್ತಿವೆ. ಇದು ಕಾವ್ಯಕ್ಕೆ ಮಾತ್ರ ಸಂಬಂಧಿಸಿದ ಸೂತ್ರವಲ್ಲ. ಇಡೀ ನವ್ಯ ಸಾಹಿತ್ಯಕ್ಕೆ ಸಂಬಂಧಿಸಿದ್ದು. ಅಡಿಗರ ಬೇರು ಆರ್ಷೇಯ ಪರಂಪರೆಯಲ್ಲಿದ್ದೂ ಅವರು ಪಶ್ಚಿಮದ ಸಾಹಿತ್ಯದಿಂದ ಅನೇಕ ಅಂಶಗಳನ್ನು ಕಲಿತಿದ್ದಾರೆ. ಅಡಿಗರಿಗೂ ಆಂಗ್ಲ ಕವಿಗಳಿಗೂ ಇರುವ ಸಮಾನ ಅಂಶಗಳು – ಅವರೇ ಗುರುತಿಸಿಕೊಂಡಿರುವಂತೆ – ೧. ಇರುವ ವ್ಯವಸ್ಥೆ ಒಡೆಯುತ್ತಿರುವ ಪ್ರಜ್ಞೆ, ೨. ವ್ಯಕ್ತಿ ವಿಶೇಷದ, ಮೂಲ ಸ್ವಾತಂತ್ರ್ಯಗಳ ಬಗ್ಗೆ ಆಳವಾದ ಕಾಳಜಿ. ೩. ಬದುಕಿನ ನಿರಂತರತೆಯ ಅರಿವು. ೪. ಕಾವ್ಯ ವಾಚಾಳಿತನವಾಗಬಾರದು. ಕೃತಿಯಾಗಬೇಕು ಎಂಬ ಹಂಬಲ, ಪ್ರಯತ್ನ.

ನಮ್ಮ ದೇಶ ಸ್ವತಂತ್ರವಾಗಿ ಆ ಸ್ವಾತಂತ್ರ್ಯೋತ್ಸಾಹದ ಹೊಸತನ ಕಳೆದು ನಿಜದ ರೂಪ ಸೂಕ್ಷ್ಮಗ್ರಾಹಿಗಳಿಗೆ ಅರ್ಥವಾಗತೊಡಗಿದ ಕಾಲದಲ್ಲಿ ಸಂವೇದನಾಶೀಲರು ಭ್ರಮನಿರಸದ ಅನುಭವ ಪಡೆದದ್ದು ತೀರಾ ಸಹಜವಾಗಿಯೇ ಇದೆ. ಅದರ ಫಲವೇ ನವ್ಯ ಸಾಹಿತ್ಯ.

## ಕಾವ್ಯದಲ್ಲಿ ನವ್ಯತೆ

ನವ್ಯ ಸಾಹಿತ್ಯ ಚಳುವಳಿ ಪ್ರಧಾನವಾಗಿ ಕಾವ್ಯ ಕೇಂದ್ರಿತವಾದದ್ದು. ಬದಲಾದ ಯುಗಪ್ರಜ್ಞೆಯನ್ನು, ಆ ಯುಗದ ದನಿಯಾಗಲಿಕ್ಕಾಗಿ ಅಗತ್ಯವಾದ ಹೊಸ ಅಭಿವ್ಯಕ್ತಿ ಕ್ರಮದ ಅಗತ್ಯವನ್ನು ಮೊದಲು ಕಂಡುಕೊಂಡವರು ಅಡಿಗ, ಗೋಕಾಕರಂತಹ ಕವಿಗಳು ಎಂಬುದನ್ನೂ ಈಗಾಗಲೇ ಪ್ರಸ್ತಾಪಿಸಲಾಗಿದೆ. ನವ್ಯಸಾಹಿತ್ಯದ ವಿಮರ್ಶಾಲೋಕವೂ ತನ್ನ ಮೀಮಾಂಸೆ ಮತ್ತು ಮೌಲ್ಯ ಶೋಧಕ್ಕಾಗಿ ಕಾವ್ಯದ ಸುತ್ತಾ, ಅದರಲ್ಲೂ ವಿಶೇಷವಾಗಿ ಅಡಿಗರ ಕಾವ್ಯದ ಸುತ್ತಾ ಗಿರಕಿಹೊಡೆಯುತ್ತದೆ. ಅಡಿಗರು ಬರೆಯುತ್ತಿರುವ ಸಂದರ್ಭದಲ್ಲಿ –ಎಂಬ ನುಡಿಗಟ್ಟೇ ಚಾಲ್ತಿಗೆ ಬರುತ್ತದೆ. ಅಡಿಗರು ಒಂದು ಜನಾಂಗದ ಕಣ್ಣು ತೆರೆಸಿದ ಕವಿ ಎಂದು ಕರೆಸಿಕೊಳ್ಳುತ್ತಾರೆ. ಅವರು ಕಣ್ಣು ತೆರೆಸಿದ, ಹೊಸ ಜನಾಂಗದ ಲೇಖಕರು (ಅನಂತಮೂರ್ತಿ, ಲಂಕೇಶ್, ಶಾಂತಿನಾಥ ದೇಸಾಯಿ, ಯಶವಂತ ಚಿತ್ತಾಲ, ಗಿರೀಶ ಕಾರ್ನಾಡ)– ವಿಶೇಷವಾಗಿ ಸಣ್ಣಕತೆ, ಕಾದಂಬರಿ, ನಾಟಕದಲ್ಲಿ ತೊಡಗಿದ ಲೇಖಕರಾದರೂ ಕಾವ್ಯದಲ್ಲಿ ಅನಿವಾರ್ಯವಾದಂಥ ಧ್ವನಿ ಶಕ್ತಿ, ಸಾಂಕೇತಿಕತೆ, ಭಾಷೆಯ ಎಚ್ಚರ, ಶಿಲ್ಪದ ಅಚ್ಚುಕಟ್ಟುತನ, ಆತ್ಮಾಭಿವ್ಯಕ್ತಿಯ ತುಡಿತಗಳನ್ನು ಸಣ್ಣಕತೆ, ನಾಟಕ, ಕಾದಂಬರಿಗಳಲ್ಲೂ ಸಾಧಿಸಲು ಯತ್ನಿಸುತ್ತಾರೆ, ಸಫಲತೆಯನ್ನೂ ಗಳಿಸುತ್ತಾರೆ.

ಅಡಿಗರ ಕಾವ್ಯವನ್ನು ಚರ್ಚಿಸುವ ಮೊದಲು, ಗೋಕಾಕರ ಕಾವ್ಯದ ನವ್ಯತೆಯ ಕಲ್ಪನೆಯನ್ನು ಸ್ವಲ್ಪ ಚರ್ಚಿಸಿ ನಾವು ಮುಂದುವರಿಯಬೇಕಾಗಿದೆ. ಗೋಕಾಕರದ್ದು ಒಂದು ಘನವಾದ, ಸಮೃದ್ಧವಾದ ವ್ಯಕ್ತಿತ್ವ. ಅದು ಆದರ್ಶ, ವೈಚಾರಿಕತೆ, ಧನಾತ್ಮಕ ಮೌಲ್ಯಗಳಿಗೆ ತನ್ನನ್ನು ಕಟ್ಟಿಕೊಂಡಿದೆ. ಎಂಥ ಬಿಕ್ಕಟ್ಟಿನ ಸಂದರ್ಭದಲ್ಲೂ ತನ್ನ ಶಮತ್ವವನ್ನು ಕಳೆದುಕೊಂಡಿಲ್ಲ. ಜಗತ್ತಿನ ದುಷ್ಟತನದ ಅರಿವಿದ್ದೂ ಅನಂತ ಸೃಷ್ಟಿಯ ನೆಲೆಯಲ್ಲಿ ಎಲ್ಲವೂ ಮಂಗಲಪ್ರದವೇ ಎಂಬ ದೃಢವಿಶ್ವಾಸವನ್ನು ಅದು ಹೊಂದಿದೆ. ಪುರಾಣ, ಇತಿಹಾಸ, ಹೊಸ ವೈಚಾರಿಕ ಸ್ಫೋಟಗಳು, ಯಾಂತ್ರೀಕರಣ, ಔದ್ಯೋಗಿಕರಣ, ನಗರೀಕರಣ, ಮಾನವ ಸಂಬಂಧಗಳ ವಿಘಟನೆ –ಈ ಎಲ್ಲಕ್ಕೂ ಈ ಕವಿ ತೆರೆದುಕೊಂಡಿದ್ದರೂ, ಆಳದಲ್ಲಿ ಪೂರ್ಣ ಮಾನವತೆಯ ವಿಕಾಸದಲ್ಲಿ ನಂಬಿಕೆಯುಳ್ಳ, ಮಾನವಾತೀತ ಶಕ್ತಿಯ ಒಟ್ಟು ಪ್ರವೃತ್ತಿ ಶುಭಪ್ರದವೆಂದೇ ನಂಬುವ, ಅನುಭಾವಿಕ ನೆಲೆಯ ಮನಸ್ಸುಳ್ಳವರು. ಎಲ್ಲ ತತ್ತ್ವ, ಎಲ್ಲ ದರ್ಶನ, ಎಲ್ಲ ಮಾರ್ಗಗಳಿಗೂ ಮನಸ್ಸು ತೆರೆದು, ತಮ್ಮ ವ್ಯಕ್ತಿತ್ವವನ್ನೇ ಪಣವಾಗಿ ಇರಿಸಿಕೊಂಡು ಅದು ಸುತ್ತಲ ಜಗತ್ತಿಗೆ ಸ್ಪಂದಿಸುವ ಕ್ರಮವನ್ನೇ ಭಾಷೆಯ ಮೂಲಕ ನಿರರ್ಗಳವಾಗಿ, ಆತ್ಮವಿಶ್ವಾಸದಿಂದ ಪಡಿಮೂಡಿಸುತ್ತ ಹೋದವರು. ಹೀಗಾಗಿ ಗೋಕಾಕರ ಕಾವ್ಯವೆಂದರೆ, ಸುತ್ತಲ ಜಗತ್ತು ಅವರ ವ್ಯಕ್ತಿತ್ವದ ಮೂಲಕ ಹಾದು ಹೊರಬಂದ ವರ್ಣಮಯ ಸೃಷ್ಟಿಯಾಗಿ ಕಂಡುಬರುತ್ತದೆ. ಯಾವುದೂ ಅಲ್ಲಿ ತಂಗಿ ಹೊರಬರುವುದಿಲ್ಲ. ಸ್ಫಟಿಕದಿಂದ ಹಾದ ಬೆಳಕು ವರ್ಣಮಯ ಕಿರಣಾವಳಿಗಳಾಗಿ ಆ ಕ್ಷಣವೇ ಹೊರಬರುವಂತೆ ಈ ಕವಿಯ ಕಾವ್ಯ ಸದ್ಯೋಜಾತ ಸ್ವರೂಪದ್ದಾಗಿದೆ. ಅವರ ಕಾವ್ಯದ ಸಮೃದ್ಧಿ, ಅಸ್ಖಲಿತತೆ, ಅನಿರ್ಬಂಧತೆ

ಇವುಗಳಿಗೆ ಅವರ ಸೃಷ್ಟಿಶೀಲತೆಯ ಈ ಸದ್ಯೋಜಾತ ಸ್ವರೂಪವೇ ಕಾರಣವಾಗಿದೆ. ಕಾವ್ಯದ ಸದ್ಯೋಜಾತ ಸ್ವರೂಪಕ್ಕೆ ಅಭಿಜಾತದ ಕಸಬುಗಾರಿಕೆ, ವಸ್ತುನಿಷ್ಠೆ, ಪ್ರಜ್ಞಾ ಪ್ರಕ್ರಿಯೆಗಿಂತಾ ರೊಮಾಂಟಿಸಿಸಂನ ಸ್ಫೂರ್ತವಾದ, ವ್ಯಕ್ತಿನಿಷ್ಠೆ, ಮುಕ್ತತೆ ಹೆಚ್ಚು ಹತ್ತಿರವಾಗುತ್ತವೆ. ಆದುದರಿಂದಲೇ ಗೋಕಾಕರಲ್ಲಿ ಉದ್ದಕ್ಕೂ ಕಂಡುಬರುವುದು ರೊಮಾಂಟಿಕ್ ಮನೋಧರ್ಮವೇ ವಿನಾ ನವ್ಯ ಮನೋಧರ್ಮವಲ್ಲ. " ಶಾಸ್ತ್ರೀಯವಾಗಿ ಅವರಲ್ಲಿ ನವ್ಯತೆ, ಬಂದಿದೆ. ಅವರ ಹೃದಯ ಎಂದಿನಂತೆ ಜೀವನದ ಉನ್ನತ ಆದರ್ಶಗಳ ಕಡೆಗೇ ಒಲಿದಿದೆ " – ಎಂಬ ಕುರ್ತಕೋಟಿಯವರ ಮಾತನ್ನು ಇಲ್ಲಿ ನೆನೆಯಬಹುದು. ನವ್ಯತೆ ಎಂಬುದು ಗೋಕಾಕರಿಗೆ ಕಾವ್ಯಾಭಿವ್ಯಕ್ತಿಯ ಒಂದು ತಂತ್ರವಾಗಿದೆ. ಪ್ರಯೋಗಶೀಲತ್ವದ ಹಿಂದೆ ವಿಕಾಸಕ್ರಮದ ಒಂದು ನಿಚ್ಚಣಿಕೆ ಇರುತ್ತದೆ. ಅದರ ಫಲವಾಗಿ ಗೋಕಾಕರ ಕಾವ್ಯದಲ್ಲಿ, ನವೋದಯ – ನಂತರ ನವ್ಯ – ಎಂಬ ಒಂದು ತಿರುವಲ್ಲ ಕಾಣಿಸುವುದು. ಅವರ ಕಾವ್ಯದ ಉದ್ದಕ್ಕೂ ಅನೇಕ ಹೊರಳುಗಳಿವೆ, ಅವೆಲ್ಲಾ ಕಾವ್ಯದ ಬಹಿರಂಗಕ್ಕೆ ಸಂಬಂಧಪಟ್ಟಿವೆ. ಆದರೆ ಅಂತರಂಗದ ಅದರ ಜೀವಸತ್ವ ಮಾತ್ರ ಯಾವತ್ತೂ ಒಂದೇ ಆಗಿದೆ. ಆ ಜೀವಸತ್ವ ಕನಸುಗಾರಿಕೆಯಿಂದ ಉಗಮಗೊಂಡು, ವಾಸ್ತವದ ಕಠೋರತೆಯಿಂದ ತಲ್ಲಣಗೊಂಡು, ವಿಷಾದಪೂರ್ಣ ದರ್ಶನವೊಂದರ ನೆಲೆಗೆ ಸಾಗುವ ನಿರಂತರ ಗಮನಶೀಲತೆ. ಒಂದು ರೀತಿಯಲ್ಲಿ ಈ ಗಮನಶೀಲತೆಯೇ ಅವರ ಕಾವ್ಯದ ಗತಿಶೀಲ ಜೀವಪ್ರತೀಕ.

ಗೋಪಾಲಕೃಷ್ಣ ಅಡಿಗರು ಮನೋಭೂಮಿಕೆಯಲ್ಲಿ ಗೋಕಾಕರಿಗೆ ತದ್ವಿರುದ್ಧ ನೆಲೆಯಲ್ಲಿ ನಿಲ್ಲುತ್ತಾರೆ. ಹಾಗೆ ನೋಡಿದರೆ ಅಡಿಗರು ಪಂಪನ ವಾರಸುದಾರರಂತೆ ಕಾಣುತ್ತಾರೆ. ಬಂಧದ ಬಿಗಿ, ಅಚ್ಚುಕಟ್ಟು, ಧ್ವನಿರಮ್ಯತೆ, ಮಹತ್ವಾಕಾಂಕ್ಷೆ, ದಾರ್ಶನಿಕ ಘನತೆ, ಕೊನೆಕೊನೆಗೆ ಕಾಣುವ ಮಾತಿನ ಸಂಯಮ – ಎಲ್ಲದರಲ್ಲೂ ಇವರು ನಮಗೆ ಪಂಪನನ್ನು ನೆನೆಸುತ್ತಾರೆ. ಮೊದಮೊದಲು ಅಡಿಗರಲ್ಲಿ ಕಂಡದ್ದು ನಾಟಕೀಯತೆ, ಕುಮಾರವ್ಯಾಸನ ವಾಗ್ಮಿತೆ, ಯಕ್ಷಗಾನದ ಜೋರು. ಉದ್ವೇಗ ಕ್ರಮೇಣ ತಣಿದು, ಕೊನೆಕೊನೆಗೆ ಅಡಿಗರ ಕಾವ್ಯ ವಿಶೇಷವಾಗಿ ಧ್ಯಾನಶೀಲತೆಯ ಕಾವ್ಯವಾಗಿ ಪರಿಣಮಿಸುತ್ತದೆ. ವ್ಯಂಗ್ಯ, ಅಡಿಗರ ಆತ್ಮಪಾಕಕ್ಕೆ ದಾರಿಮಾಡಿಕೊಡುತ್ತದೆ. ಅಡಿಗರ ನವ್ಯಕಾವ್ಯದ ಆರಂಭದ ಉದ್ವೇಗವನ್ನು ಅವರ ಉತ್ತರ ಕಾಂಡದ ಕಾವ್ಯದೊಂದಿಗೆ ಹೋಲಿಸಿದಾಗ ಅಚ್ಚರಿಯಾಗುತ್ತದೆ.

೧

ಹೊಗೆ, ಬೆಂಕಿ,
– ಅಯ್ಯೋ ಹಾಳಾಗ –
ಉರಿ, ಶಖೆ, ತಾಪ;
ಹೊರಗೆ ರಣ ರಣ ಬಿಸಿಲು, ಒಳಗೆ ಮಾರಣ ಬೆಂಕಿ.
ಮಲಗಿತ್ತು ಮನ ಚಿತೆಯ ಮೇಲೆ ಆಫೀಸಿನಲ್ಲಿ.

ಭೂತಗನ್ನಡಿ ಬಿಸಿಲುಮಚ್ಚು ಚುಚ್ಚಿತು ತಲೆಯ;
ಮಿದುಳು –ಬಚ್ಚಲ ಹಂಡೆಯಲ್ಲಿ ಬೇಯುವ ಆಮೆ–
ಎದ್ದೆದ್ದು ಬಿದ್ದು ಒದ್ದಾಡುತ್ತಿತ್ತು.

(ಹಿಮಗಿರಿಯ ಕಂದರ)

೨

ಶ್ರೀರಾಮನವಮಿಯ ದಿವಸ ರಾಮಾನಾಮಾಮೃತವೆ
ಪಾನಕ ಪನಿವಾರ ಕೋಸಂಬರಿ;
ಕರಬೂಜ ಸಿದ್ಧೋಟುಗಳ ಹೋಳು ಸೀಕರಣೆ:
ವ್ಯಕ್ತ ಮಧ್ಯಕ್ಕೆ ಬಂದುರಿವ ಶಬರಿ.

ಕಾದು ಗಾರಾದ ಮಣ್ಣೊಡಲಿನೊಳಗಡೆಗೆ ಕಿಡಿ–
ಕುಳಿತ ಮೂಲಾಧಾರ ಜೀವಧಾತು
ಮೋಡದ ಸಹಸ್ರಾರದೆಡೆಗೆ ತುಡಿಯುವ ತುರುಸು;
ಮಣ್ಣೊಡೆದು ಹಸುರು ಹೂ ಹುಲ್ಲು ಮುಳ್ಳು.

ಮಣ್ಣುಟ್ಟ ಪುಟ್ಟ ಬಿತ್ತಕ್ಕೆ ಮಳೆಹನಿಸೇಕ;
ಅಶ್ವತ್ಥದ ವಿವರ್ತ ನಿತ್ಯ ಘಟನೆ;
ಗುಮ್ಮಟಗಿರಿಯ ನೆತ್ತಿಯಲ್ಲಿ ಕಲ್ಲರಳಿದ್ದು
ಕಾರ್ಯ ಕಾರಣದೊಂದಪೂರ್ವ ನಟನೆ.

(ಶ್ರೀರಾಮನವಮಿಯ ದಿವಸ)

ಹಿಮಗಿರಿಯ ಕಂದರ (೧೯೫೨) ಮತ್ತು ಶ್ರೀರಾಮನವಮಿಯ ದಿವಸ(೧೯೬೮) –ಈ ಕವಿತೆಗಳ ನಡುವಣ ವ್ಯತ್ಯಾಸ ಸ್ವಯಂಸಿದ್ಧವಾದುದಾಗಿದೆ. ಈ ಕವಿತೆಗಳ ನಡುವಣ ಅಂತರವನ್ನು ಗಮನಿಸಿದಾಗ ಅಡಿಗರ ಕಾವ್ಯ, ಪ್ರೊಸೆಸ್ ಕಾವ್ಯ ಎಂಬುದು ಸಿದ್ಧವಾಗುತ್ತದೆ. ಡಾ. ಲಕ್ಷ್ಮೀನಾರಾಯಣ ಭಟ್ಟರು ಹೇಳುವಂತೆ– " ಚಂಡೆ ಮದ್ದಳೆ ಹೊಸ ಕಾವ್ಯ ಮಾರ್ಗವನ್ನು ಉದ್ಘಾಟಿಸಿದ ಕೃತಿ. ಹೊಸ ಭಾಷೆ, ಅರ್ಥಸಾಧಕ ಲಯ, ಕಣ್ಣು ಕುಕ್ಕುವಂಥ ನವೀನ ಪ್ರತಿಮೆಗಳು, ಆತ್ಮವಿಮರ್ಶಕ ವ್ಯಂಗ್ಯ, ಗಾಳಿಗುದುರೆಯಿಂದ ಇಳಿದು ನೆಲದ ಮೇಲೆ ನಿಂತು ಪಡೆದ ವಾಸ್ತವ ಜಗತ್ತಿನ ನಿಜ ದರ್ಶನ –ಈ ಎಲ್ಲ ಹುರಿಗಟ್ಟಿ ಮೂಡಿದ ಕಾವ್ಯ ಅದು. ಆ ಕೃತಿಯಲ್ಲಿ ಕವಿ ಹಳೆಯ ಕಾವ್ಯದ ಅಚ್ಚು ಒಡೆದು ಹೊಸ ದೃಷ್ಟಿ ದ್ರವ್ಯಕ್ಕೆ ಅನುರೂಪವಾದ ಕಾವ್ಯಶಿಲ್ಪವನ್ನು ನಿರ್ಮಿಸುತ್ತಿರುವ ಕಾಮಗಾರಿ ಎದ್ದು ಕಾಣುತ್ತದೆ. ಮಾತುಗಳಲ್ಲಿ ಇರುವ ರಭಸ, ಆವೇಶ, ರೇಗು, ಕೆಚ್ಚುಗಳೆಲ್ಲಾ ಹೊಸ ರೂಪಕ್ಕಾಗಿ ಧುಮುಧುಮಿಸುತ್ತಿರುವ ಅದಮ್ಯ ಕಾವ್ಯ ಸತ್ವದ ಅಬ್ಬರವನ್ನು ತೋರುತ್ತವೆ. "

" ಚಂಡೆಮದ್ದಳೆಯ ಕವನಗಳಲ್ಲಿ ಕವಿ ತನ್ನ ರಸಾವೇಶವನ್ನು ಪೂರ್ತಿಯಾಗಿ ನಿಯಂತ್ರಿಸಿಕೊಂಡಿಲ್ಲವೆನ್ನುವುದೇನೋ ನಿಜವೇ. ಕವನ ಇನ್ನೂ ಹಬೆಯಾಡುತ್ತಿರುವುದು

ಕಾಣುತ್ತದೆ. ಮಾತಿನ ಸೊಕ್ಕು ಅಲ್ಲಲ್ಲಿ ಕವಿಯನ್ನೇ ಆಡಿಸುತ್ತದೆ. ಕವನ ಓದುವಾಗ ಭಾವದ ಝಳ ತಾಗಿ. ಉರಿಯುವ ಒಲೆಗೆ ಹತ್ತಿರ ನಿಂತ ಅನುಭವ ಆಗುತ್ತದೆ. ರಸಾನುಭವದ ಮೇಲು ನೆಲೆಯಿಂದ ಭಾವಾವೇಶದ ಕೆಳ ಸ್ತರಗಳಿಗೆ ಕವಿ ಲಾಳಿ ಹೊಡೆಯುವುದು ಪ್ರತಿ ಪುಟದಲ್ಲಿ ತಪ್ಪದ ದೃಶ್ಯವಾಗುತ್ತದೆ. ಹೀಗಿದ್ದೂ ಹೊಸ ಕವಿತೆ ಅವತರಿಸಿಬಿಟ್ಟಿರುವುದು ಮಾತ್ರ ಸ್ಪಷ್ಟವಾಗುತ್ತದೆ. '' (ಡಾ. ಎನ್. ಎಸ್. ಎಲ್.)

೧೯೫೯ ರಲ್ಲಿ ಪ್ರಕಟವಾದ ' ಭೂಮಿಗೀತ ', ನವ್ಯಕಾವ್ಯದ ಮಹತ್ವದ ಕೃತಿ. ಭೂಮಿಗೀತ, ಹದ್ದು, ಪ್ರಾರ್ಥನೆ, ಭೂತ –ಈ ಎಲ್ಲ ಮಹತ್ವದ ಕವಿತೆಗಳು ಪ್ರಕಟವಾಗಿರುವುದು ಈ ಸಂಗ್ರಹದಲ್ಲಿಯೇ. ಡಾ. ಅನಂತಮೂರ್ತಿಯವರ ಚಾರಿತ್ರಿಕ ಮಹತ್ವದ ಮುನ್ನುಡಿ ಕೂಡಾ ಈ ಸಂಗ್ರಹದಲ್ಲಿಯೇ ಇದೆ. '' ಸಾಹಿತ್ಯ ಸೃಷ್ಟಿಯ ಅಸಲು ಕಸಬಿನ ಬಗ್ಗೆ ಅಡಿಗರು ತೋರಿಸುತ್ತಿರುವ ಶ್ರದ್ಧೆ ಅವರನ್ನು ನಮ್ಮ ತಲೆಮಾರಿನ ಪ್ರಮುಖ ಕವಿಯಾಗಿ ಮಾಡಿದೆ. ಇವರಲ್ಲಿ ಕಲೆಗಾಗಿ ಕಲೆ ಎನ್ನುವ ಅಪ್ರಬುದ್ಧ ಸೌಂದರ್ಯೋಪಾಸನೆಯೂ ಇಲ್ಲ; ಭಾಷೆ ಮತ್ತು ಸ್ವಾನುಭವದ ತೆಕ್ಕೆಗೊಗ್ಗದ ತತ್ತ್ವಗಳ ಪ್ರಚಾರಕ್ಕಾಗಿ ಪದ್ಯ ರಚನೆಯ ಕಲೆಯನ್ನು ವಾಹಕವಾಗಿ ಮಾಡುವ ಆತ್ಮವಂಚನೆಯೂ ಇಲ್ಲ. ಜೀವನದ ಬಗ್ಗೆ ಎಷ್ಟೋ. ಪದ್ಯ ರಚನೆಯ ಬಗ್ಗೆಯೂ ಅಷ್ಟೇ ಆಸಕ್ತಿ ತೋರಿಸುವ, ಅಂತಃಕರಣದ ಪ್ರಾಮಾಣ್ಯವಿಲ್ಲದೆ ಯಾವ ಮಾತನ್ನೂ ಆಡದ ಇವರ ಪ್ರವೃತ್ತಿ, ವಿಮರ್ಶೆಯೇ ದುರ್ಲಭವಾದ ನಮ್ಮ ನಾಡಿನಲ್ಲಿ ಆಶ್ಚರ್ಯದ ಸಂಗತಿ. '' (ಡಾ. ಅನಂತಮೂರ್ತಿ)

ಅಡಿಗರ ಭೂಮಿಗೀತ ಕವಿತೆಯಲ್ಲಿ ಭೂಮಿಯ ಬಗ್ಗೆ ಮನುಷ್ಯನ ಅತ್ಯಂತ ಸಂಕೀರ್ಣವಾದ ಸಂವೇದನೆಯ ಅಭಿವ್ಯಕ್ತಿ ಇದೆ. ಈ ಕವಿತೆಯ ಹರಹು ಬೆರಗು ಹುಟ್ಟಿಸುವಂಥದು. ಮನುಷ್ಯ ಮತ್ತು ಭೂಮಿಯ ಸಂಬಂಧ –ಭೂಮಿ ಮತ್ತು ಆಕಾಶದ ಕರ್ಷಣೆ–ಭೂಮಿ ತಾಯಿಯಾಗಿರುವಂತೇ ಮಲತಾಯಿಯೂ ಆಗಿದ್ದಾಳೆಂಬ ಅರಿವು–ಭೂಮಿಯ ಸಹಜ ಸಂತಾನದಿಂದ ಮನುಷ್ಯ ಹೊರಗೆ ಬಿದ್ದು ಮಲಮಗನಾಗುವ ದುರಂತ –ಭೂಮಿಯಲ್ಲಿ ಮಾನವನ ಬಾಳ ಪಯಣದ ಬಿಕ್ಕಟ್ಟು –ಹೀಗೆ ಮನುಷ್ಯನನ್ನು ಕೇಂದ್ರದಲ್ಲಿ ಇಟ್ಟುಕೊಂಡು ಆಕಾಶ–ಭೂಮಿಗಳ ಅನಂತವಾದ ಕಾಲ ದೇಶದ ಪರಿಪ್ರೇಕ್ಷ್ಯದಲ್ಲಿ ಅನುಭವವನ್ನು ಸಮಗ್ರವಾಗಿ ಶೋಧಿಸುವ ಕವಿತೆಯಾಗಿ ಭೂಮಿಗೀತ ಮೈದಾಳುತ್ತದೆ. ಕವಿತೆಯಲ್ಲಿ ಭಾಷೆ ಮತ್ತು ಲಯಗಳು ಕವಿತೆಯ ಒಡಲು ಮತ್ತು ಉಸಿರಾಗಿ ಮೈಪಡೆಯುವ ಕ್ರಮ ಚೇತೋಹಾರಿಯಾಗಿದೆ. ಕವಿತೆಯ ಉದ್ದಕ್ಕೂ ಬರುವ ಪುರಾಣದ ನೆನಪುಗಳು ಮನೋಲೋಕದ ಆದಿಮ ಸ್ಮೃತಿಕೋಶಗಳನ್ನು ಅನಾವರಣಗೊಳಿಸಿಕೊಳ್ಳುವ ಕ್ರಮ ಕೂಡ ವಿಶಿಷ್ಟವಾದುದು.

ಪ್ರಾರ್ಥನೆ ಅಡಿಗರ ಮ್ಯಾನಿಫೆಸ್ಟೋ ಕವಿತೆ. ಕವಿತೆ ಹೇಗೆ ಇರಬಾರದು, ಹೇಗೆ ಇರಬೇಕು ಎಂಬುದನ್ನು ಒಂದೇ ಉಸುರಿನಲ್ಲಿ ಈ ಕವಿತೆ ಚಿಂತಿಸುತ್ತಾ ಹೋಗುತ್ತದೆ. ಅಥವಾ ಚಿಂತನೆಯೇ ಕವಿತೆಯಲ್ಲಿ ಪ್ರತೀಕಾತ್ಮಕ ಶರೀರ ಧರಿಸುತ್ತಾ ಹೋಗುತ್ತದೆ.

೧

ಕಮರುತೇಗಿನ ಕಪಿಲೆ ಹೊಡೆದು ಹಗಲೂ ಇರುಳು
ತೇಗಿಗೊಂದು ಅಮೋಘ ಸ್ಫೂರ್ತಿಗೀತವ ಕರೆವ
ರೋಗದ ಫಸಲನಾದಷ್ಟು ಸವರೋ ತಂದೆ !

೨

ತಿಂದದ್ದು ಸರಿಯಾಗಿ ರಕ್ತವಾಗುವ ಹಾಗೆ
ಅನುಗ್ರಹಿಸು; ಅರಗದಂಥ ಕಚ್ಚಾ ಗಾಳಿಗೀಳುಗಳ
ಕಾಗದದ ಮೇಲೇ ಕಾರಿಕೊಳ್ಳದಹಾಗೆ
ಏರ್ಪಡಿಸು ಸಹಜ ಹೊರದಾರಿಗಳ; ರಹದಾರಿಗಳ
ಕೊಡು ಎಲ್ಲರಿಗೂ ತಮ್ಮ ತಮ್ಮ ಖಾಸಗಿ ಮನೆಗೆ.

'ಭೂತ', ವ್ಯಕ್ತಿ ಮತ್ತು ಪರಂಪರೆಯ ನಡುವಣ ಸಂಬಂಧದ ಸ್ವರೂಪವನ್ನು ಕುರಿತು ಚಿಂತಿಸುತ್ತದೆ.

ಅಗೆವಾಗ್ಗೆ ಮೊದಲು ಕೋಶಾವಸ್ಥೆ ಮಣ್ಣು;
ಕೆಳಕ್ಕೆ ತಳಕ್ಕೆ ಗುದ್ದಲಿ ಒತ್ತಿ ಕುಕ್ಕಿದರೆ
ಕಂಡೀತು ಗೆರೆ ಮಿರಿವ ಚಿನ್ನದದಿರು.
ಹೊರತೆಗೆದು ಸುಟ್ಟು-ಸೋಸುವಪರಂಜಿ ವಿದ್ಯೆಗಳ
ಇನ್ನಾದರೂ ಕೊಂಚ ಕಲಿಯಬೇಕು;
ಹೊನ್ನ ಕಾಯಿಸಿ ಹಿಡಿದು ಒಡಿದಿಷ್ಟದೇವತಾ
ವಿಗ್ರಹಕ್ಕೊಗ್ಗಿಸುವ ಅಸಲು ಕಸಬು.

ಮೇಲಿನ ಸಾಲುಗಳಲ್ಲಿ ಅಡಿಗರ ಪರಂಪರೆಯ ಬಗೆಗಿನ ಚಿಂತನೆಯೂ, ಕಾವ್ಯ ಚಿಂತನೆಯೂ ಸಾರವತ್ತಾಗಿ ಅಭಿವ್ಯಕ್ತವಾಗಿದೆ ಎನ್ನಬಹುದು.

ರಾಜಕೀಯ ನೆಲೆಯಲ್ಲಿ ಅಡಿಗರು ವ್ಯಕ್ತಿ ಸ್ವಾತಂತ್ರ್ಯವನ್ನು ಎತ್ತಿ ಹಿಡಿಯುವ ಕವಿಯಾಗಿದ್ದಾರೆ. ಸಮವಸ್ತ್ರ ಸಂಸ್ಕೃತಿಯನ್ನು ಅವರು ವಿರೋಧಿಸುತ್ತಾರೆ. ಎಡಪಂಥದ ಬಗೆಗಿನ ಅವರ ವಿರೋಧವನ್ನು ಈ ನೆಲೆಯಲ್ಲಿ ಅರ್ಥ ಮಾಡಿಕೊಳ್ಳಬೇಕಾಗಿದೆ. ಸರ್ವಾಧಿಕಾರೀ ರಾಜಕೀಯ ವ್ಯವಸ್ಥೆಯನ್ನಂತೂ ಅವರು ಅತ್ಯಂತ ತೀವ್ರವಾಗಿ ವಿರೋಧಿಸುತ್ತಾರೆ. ಪ್ರತಿಯೊಬ್ಬ ವ್ಯಕ್ತಿಯೂ ತನ್ನ ತನ್ನ ಯೋಗ್ಯತೆಗೆ ತಕ್ಕಂತೆ ಪೂರ್ಣವಾಗಿ ಬೆಳೆಯುವ ಅವಕಾಶವನ್ನು ಸಮಾಜ ಕಲ್ಪಿಸಿಕೊಡಬೇಕು. ಅಂಥ ಸಮಾಜ ಮಾತ್ರ ಆರೋಗ್ಯವಂತ ಸಮಾಜ– ಇದು ಅಡಿಗರ ವಿಚಾರವಾಗಿದೆ.

ಸಂಕಲ್ಪ ಬಲಕ್ಕೆ ಅಡಿಗರು ವಿಶೇಷವಾದ ಒತ್ತು ಕೊಡುತ್ತಾರೆ. ಮನುಷ್ಯ ಪುರುಷೋತ್ತಮನಾಗಬೇಕು ಎಂಬುದು ಅವರ ಆಶಯವಾಗಿದೆ. ೧೯೭೨ ರಲ್ಲಿ ಹೊರಬಂದ ವರ್ಧಮಾನ ಸಂಗ್ರಹದಲ್ಲಿ ಅಡಿಗರು ವ್ಯಕ್ತಿತ್ವ ವಿಕಾಸದ ಬಗ್ಗೆ ಆಳವಾಗಿ

ಚಿಂತಿಸಿದ್ದಾರೆ. ' ಶ್ರೀರಾಮನವಮಿಯ ದಿವಸ ' ಆ ದೃಷ್ಟಿಯಿಂದ ಅಡಿಗರ ಅತ್ಯಂತ ಸಫಲ ಕೃತಿಯಾಗಿದೆ. ಈ ಕವಿತೆಯಲ್ಲಿ ಕಾಣುವ ಸಂಯಮ, ದಟ್ಟಣೆ, ಧ್ವನಿ ರಮ್ಯತೆ, ಬಂಧ ಪ್ರಜ್ಞೆ ಅಪರೂಪದ್ದು. ಧ್ಯಾನ ಸ್ಥಿತಿಯಲ್ಲಷ್ಟೆ ಇಂಥ ಕವನಗಳು ಸೃಷ್ಟಿಯಾಗಬಲ್ಲವು. ಇದು ಅಡಿಗರ ಪ್ರಾಸೆಸ್ ಕವಿತೆಗೆ ಪರಿಪೂರ್ಣತೆಯ ಶಿಖರ.

ಅಡಿಗರ ಜೊತೆ ಜೊತೆಯಲ್ಲೇ ಕಾವ್ಯ ಕೃಷಿಯಲ್ಲಿ ತೊಡಗಿದ ಕವಿಗಳಲ್ಲಿ ರಾಮಚಂದ್ರ ಶರ್ಮರು ಮುಖ್ಯರು. ಶರ್ಮರು ತಮ್ಮ ' ಏಳುಸುತ್ತಿನ ಕೋಟೆ ' (೧೯೫೩) ಎಂಬ ಮುಖ್ಯ ಕೃತಿಯನ್ನು ಪ್ರಕಟಿಸಿದಾಗ ಭಾರತದಲ್ಲಿ ಇದ್ದರು. ಈ ನೆಲದ ಅನುಭವಗಳನ್ನು ಭಾಷೆಯಲ್ಲಿ ಅಭಿನೀತಗೊಳಿಸುವಲ್ಲಿ ಕವಿ ಯಶಸ್ವಿಯಾಗಿದ್ದರು. ಆ ಕಾವ್ಯದ ನೆನಪುಗಳು ಈ ನೆಲದವಾಗಿದ್ದವು. ರೂಪಕಗಳು ಈ ಪರಿಸರದಿಂದ ಒಡಮೂಡಿ ಬರುತ್ತಿದ್ದವು. ಶರ್ಮರು ಆಮೇಲೆ ದಶಕಗಳ ಕಾಲ ಹೊರದೇಶದಲ್ಲಿ ಜೀವಿಸಬೇಕಾಗಿ ಬಂತು. ಅವರು ಈ ನೆಲದಿಂದ ದೂರದಲ್ಲಿ ಇದ್ದ ಸಂದರ್ಭದಲ್ಲಿ ಅವರ ' ಹೇಸರಗತ್ತೆ ' (೧೯೬೯) ಪ್ರಕಟವಾಯಿತು. ಶರ್ಮರಿಗೆ ನವ್ಯ ಕವಿ ಎಂದು ಖ್ಯಾತಿಯನ್ನು ಗಳಿಸಿಕೊಟ್ಟ ಕೃತಿ ಅದು. ಅದರ ಕಲೆಗಾರಿಕೆ, ಸಾಂಕೇತಿಕತೆ, ಅನುಭವಗಳನ್ನು ನಿಷ್ಠುರವಾಗಿ ಶೋಧಿಸಬೇಕೆಂಬ ಹಠ ಇವುಗಳ ಬಗ್ಗೆ ಎರಡು ಮಾತಿಲ್ಲ. ಆದರೆ, ಕೀರ್ತಿನಾಥ ಕುರ್ತಕೋಟಿ ಅವರು ಗುರುತಿಸುವಂತೆ, ರಾಮಚಂದ್ರ ಶರ್ಮರ ಪರದೇಶದ ಅನುಭವ " ಕನ್ನಡ ಭಾಷೆಯಲ್ಲಿ ಸಂಭವಿಸಿದಾಗ ಭಾಷೆ ಅದನ್ನು ತನ್ನದಾಗಿಸಿಕೊಳ್ಳುವಾಗ ಕಷ್ಟಪಡಬೇಕಾಗುತ್ತದೆ. ಶರ್ಮರ ಕಾವ್ಯದಲ್ಲಿ ಈ ಕಷ್ಟ ಎದ್ದುಕಾಣುತ್ತದೆ. ಇಂಥ ಕಾವ್ಯದ ಬಗ್ಗೆ ಆಕ್ಷೇಪ ಇಲ್ಲವಾದರೂ, ಈ ಕಾವ್ಯದ ಮೌಲ್ಯಮಾಪನಕ್ಕೆ ಆಂತರಿಕ ಹಾಗೂ ಬಾಹ್ಯ ಪ್ರಮಾಣಗಳಿಲ್ಲ. ಕಾವ್ಯದ ಸಾಮಾಜಿಕ ಸಂದರ್ಭ ಮಾತ್ರ ಕಾವ್ಯಕ್ಕೆ – ಅದು ಪೂರ್ತಿಯಾಗಿ ವ್ಯಕ್ತಿನಿಷ್ಠ ಕಾವ್ಯವಾಗಿದ್ದರೂ ಕೂಡಾ – ಈ ಪ್ರಮಾಣಗಳನ್ನು ಒದಗಿಸಬಲ್ಲದು. ಕಾರಣವೇನೆಂದರೆ ಕಾವ್ಯದ ಮಾಧ್ಯಮವಾಗಿರುವ ಭಾಷೆ ಕವಿಯ ವೈಯಕ್ತಿಕ ಸ್ವತ್ತಲ್ಲ. ಅದು ಅವನ ಸಮಾಜಕ್ಕೆ ಸೇರಿದ್ದಾಗಿದೆ. "

ಮೊದಲಿನಿಂದಲೂ ಕಾವ್ಯದ ಬಗ್ಗೆ ಶರ್ಮರದ್ದು ವೀರನಿಷ್ಠೆ. ಕಾವ್ಯದ ಬಗ್ಗೆ ಖಚಿತವಾದ ನಿಲುವುಗಳನ್ನು ಇಟ್ಟುಕೊಂಡೇ ಕಾವ್ಯರಚನೆಗೆ ಅವರು ತೊಡಗುತ್ತಾರೆ. " ಕಾವ್ಯ ಕೊಡುವುದು ವಿಚಾರವಲ್ಲ, ಪರಿಕಲ್ಪನೆಯಲ್ಲ, ಕತೆ ಹೇಳುವುದು ಅದರ ಕೆಲಸವಲ್ಲ, ಅದರ ತರ್ಕ ವೈಜ್ಞಾನಿಕ ಬರಹದ ತರ್ಕವಲ್ಲ, ಮೊದಲೇ ಅರಗಿಸಿಕೊಂಡ ಕವಿಯ ಅನುಭವಕ್ಕೆ ಕಾವ್ಯ ಎರಕದ ಅಚ್ಚಲ್ಲ. ಕಾವ್ಯದ್ದು ರಸಭಾವಗಳ ಪಾತಳಿ, ಕವಿಯ ರಸಭಾವ – ವಿಚಾರಗಳನ್ನು ಸಂವಹಿಸುವುದಕ್ಕೆ ಅದು ಬಳಸುವ ತರ್ಕ ಮುತ್ತಿನ ಸರದ ಸೂತ್ರದಂತೆ. ಕವಿಯ ಮಾತು ಪ್ರತಿಮೆಗಳು ಓದುಗನಲ್ಲಿ ಪ್ರಚೋದಿಸುವ ಭಾವದ ನೆಲೆಯ ಪ್ರತಿಸ್ಪಂದನೆಯೇ ಅದರ ಅಸ್ತಿತ್ವಕ್ಕೆ ಸಾಕ್ಷಿ. "

ರಾಜೇಂದ್ರ ಚೆನ್ನಿ ಗುರುತಿಸಿರುವಂತೆ – ಕಾವ್ಯಶಿಲ್ಪದ ಬಗೆಗೆ ಪಶ್ಚಿಮದ ನವ್ಯತೆಯಿಂದ ಶರ್ಮರು ಪಡೆದದ್ದು ಈ ನಿಲುವು. ಕನ್ನಡ ಕಾವ್ಯದ ಸಾವಿರ ವರ್ಷದ

ಕಾವ್ಯ ಪರಂಪರೆಯ ಬಗ್ಗೆ ಶರ್ಮರಿಗೆ ಆಸಕ್ತಿಯೂ ಇಲ್ಲ; ಉತ್ಸಾಹವೂ ಇಲ್ಲ. ಇವತ್ತು ಬರೆಯುತ್ತಿರುವ ಒಬ್ಬ ಕವಿ ೩೦-೪೦ ವರ್ಷಗಳ ಹಿಂದಿನ ಕಾವ್ಯವನ್ನು ಓದಿಕೊಂಡರೆ ಸಾಕು ಎಂದು ಈಚೆಗೆ ಹೇಳಿಕೆ ನೀಡಿ ಪರಂಪರೆಯ ಆರಾಧಕರನ್ನು ಶರ್ಮರು ಬೆಚ್ಚಿಬೀಳಿಸಿದ್ದು ನೆನಪಿನಲ್ಲಿದೆ. ಅದು ಹೇಗೇ ಇರಲಿ. ಶರ್ಮರು ಮರಳಿ ಭಾರತಕ್ಕೆ ಬಂದ ಮೇಲೆ ಅವರು ಪ್ರಕಟಿಸಿದ 'ಮಾತು – ಮಾಟ' (೧೯೬೪), ಅವರ ಕಾವ್ಯದಲ್ಲಿ ಆದ ಇನ್ನೊಂದು ಮಹತ್ವದ ತಿರುವನ್ನು ಪ್ರತಿನಿಧಿಸುತ್ತದೆ. ಈ ಸಂಗ್ರಹದಲ್ಲಿ ಪ್ರಕಟವಾಗಿರುವ 'ಅಮ್ಮ' ಎಂಬ ಕವಿತೆ ಧ್ವನಿಪೂರ್ಣವಾಗಿದೆ. ಶರ್ಮರ ಕಾವ್ಯಯಾನದ ಅಪೇಕ್ಷಿತ ತಿರುವನ್ನು ಸೂಚಿಸುವಂಥ ಕವನವಿದು. ವಿಲಾಯತಿ ತಳೀ 'ಬೇಒಬಾಬ್' ಅನ್ನು ಈ ನೆಲದಲ್ಲಿ ಬೆಳೆವ ಛಲ ಫಲಿಸಿದ ತೃಪ್ತಿ 'ಬೇಒಬಾಬ್' ಪದ್ಯದಲ್ಲಿ ಇದೆ. ಸಂಭ್ರಮ ಮತ್ತು ಹೆದರಿಕೆ ಕೂಡಿಯೇ ಇಲ್ಲಿ ಕಾವ್ಯಸಂವೇದನೆ ರೂಪುಗೊಂಡಿದೆ. ಆನಂತರ ಶರ್ಮರು ಜಯನಗರದ ಹಿರಿಯ ಪ್ರಜೆಗಳು, ಪ್ರಭು ಮೊದಲಾದ ಶಕ್ತವಾದ ಕವಿತೆಗಳನ್ನು ಬರೆದಿದ್ದಾರೆ. ೧೯೯೬ ರಲ್ಲಿ ಪ್ರಕಟವಾದ 'ಸಪ್ತಪದಿ' ಶರ್ಮರ ಕಾವ್ಯಯಾನದ ಮಹತ್ವದ ಕೃತಿ. ದಾಂಪತ್ಯದ ಬಗ್ಗೆ ಇಲ್ಲಿ ಮೂವತ್ತು ಸಾನೆಟ್‌ಗಳಿವೆ. ಪತ್ನಿಯ ಬಗ್ಗೆ ವ್ಯಕ್ತವಾಗುವ ಕೃತಜ್ಞತಾ ಭಾವ ವಸ್ತುನಿಷ್ಠೆಯ ಚಚ್ಚರದಲ್ಲೂ ಆರ್ದ್ರವಾಗಿ ಅಭಿವ್ಯಕ್ತಿ ಪಡೆದಿದೆ. ಹೆಣ್ಣಿನ ಹಿರಿಮೆಯನ್ನು ರೊಮಾಂಟಿಸೈರ್ಝ್ ಮಾಡದೆ ಕಂಡುಕೊಳ್ಳಲಾಗಿದೆ. 'ಮನೆಯೆದುರಿನ ಪಿಚಕಾರಿ ಮರ –೧' ರಲ್ಲಿ ಹೆಣ್ಣಿನ ತಾಯ್ತನದ ಹಿರಿಮೆಯನ್ನು ಅತ್ಯಂತ ಸಂಯಮದಿಂದ ಸಾಂಕೇತಿಕ ಮಾರ್ಗದಲ್ಲಿ ಅಭಿವ್ಯಕ್ತಿಸಲಾಗಿದೆ. 'ಬೇಒಬಾಬ'ನ್ನು ಕೊನೆಗೂ ಈ ನೆಲದಲ್ಲಿ ಪಟ್ಟು ಹಿಡಿದು ಬೆಳೆಸಿದ ಶರ್ಮರ ಕಾವ್ಯನಿಷ್ಠೆಯ ಬಗ್ಗೆ ಗೌರವ ಉದಿಸುತ್ತದೆ.

ಎ. ಕೆ. ರಾಮಾನುಜನ್ನರೂ ಶರ್ಮರಂತೇ ಭಾರತದ ಹೊರಗೆ ಜೀವಿಸಿದವರು. ಆದರೆ ಇಂಡಿಯಾದ ಸಾಹಿತ್ಯ ಪರಂಪರೆಯೊಂದಿಗೆ ಕೊನೆಯವರೆಗೂ ಆಳವಾದ ಕರುಳು ಸಂಬಂಧ ಉಳಿಸಿಕೊಂಡಿದ್ದವರು. ಆದುದರಿಂದಲೇ ಶರ್ಮರು ಎದುರಿಸಿದ ಸಮಸ್ಯೆಯನ್ನು ಅವರು ಎದುರಿಸುವುದಿಲ್ಲ. ರಾಮಾನುಜನ್ನರ ಕಾವ್ಯ ವಚನ ಸಾಹಿತ್ಯದಿಂದಲೂ ಕಲಿಯಬಹುದಾದದ್ದನ್ನು ಕಲಿತಿದೆ. ಶಬ್ದವೇ ಅವರ ಕಾವ್ಯದ ಮೂಲ ಘಟಕ. ಆದುದರಿಂದಲೇ ಅವರ ಲಯಗಾರಿಕೆ ತೀರಾ ವಿಶಿಷ್ಟವಾದುದು. ಅಡಿಗರು ಒಂದು ತುದಿಯಾದರೆ ರಾಮಾನುಜನ್ ಇನ್ನೊಂದು ತುದಿ. ಗದ್ಯತೆಗೂ ಅದರದ್ದೇ ಆದ ಚೆಲುವಿದೆ ಎಂಬುದನ್ನು ಅವರು ತೋರಿಸಿಕೊಟ್ಟರು. ಗುಣವಾಚಕಗಳನ್ನು ದೂರವಿಡುವ ಅವರ ಕಾವ್ಯ ಭಾಷೆ ನಿರ್ಭಾವದ ನೆಲೆಯಲ್ಲಿ ಎದೆಯನ್ನು ಬಗಿಯುತ್ತದೆ. ಕಥನವನ್ನು, ನಾಟ್ಯಮಾನತೆಯನ್ನು, ಹಾಸ್ಯವನ್ನು, ನಿಸ್ಸಂಕೋಚವಾಗಿ ಅವರು ಬಳಸಿಕೊಳ್ಳುತ್ತಾರೆ. ರಾಮಾನುಜನ್ನರ 'ಶೀಘ್ರಲಿಪಿ'ಯ ಶೈಲಿಯನ್ನು ಚೆನ್ನಾಗಿ ಪ್ರತಿನಿಧಿಸುವ ಈ ಕವಿತೆಯನ್ನು ನೋಡಿ :

ಅಗ್ನಿ ಮಾಸ

ಕಾಗೆ ಇಲ್ಲದ
ಅಗ್ನಿ ಮಾಸ.
ವೆರಾಂಡದ ಜಾಲರಿ ನೆರಳು.
ಲಂಬಾಣಿ ಕೈ ಬೆಳ್ಳಿ ಬಳೆ: ಬಿಸಿಲು;

ಸೂಜಿ.

" ಒಳಗೆ ಬರಬೇಡ ಹೋಗೇ
ಆಚೆ ! "
ಅಂದೆ.

ಈ ಕವಿತೆ ಹರಿತವಾದ ಚಿತ್ರಗಳ ಮೂಲಕ ಮಾತನಾಡುತ್ತದೆ. ಬಾಗಿಲ ಮುಂದೆ ನಿಂತಿರುವ ಬಿಸಿಲು = ಲಂಬಾಣಿ = ಸೂಜಿ. ಮನೆಯ ಒಳಗೆ ಇರುವ ವ್ಯಕ್ತಿ ಒಳಗೆ ಬರಬೇಡ ಎನ್ನುತ್ತಾನೆ. ಈ ಚಿತ್ರ, ವ್ಯಾಖ್ಯಾನದ ಅನೇಕ ಸಾಧ್ಯತೆಗಳನ್ನು ಹೊಂದಿದೆ. ವ್ಯಾಖ್ಯಾನದ ಹೊಣೆಗಾರಿಕೆ ಓದುಗನದ್ದು. ನನಗೂ ಅದಕ್ಕೂ ಸಂಬಂಧವೇ ಇಲ್ಲ ಎನ್ನುವ ನಿರ್ಲಿಪ್ತತೆ ರಾಮಾನುಜನ್ನರ ಕವಿತೆಯ ನಿಲುವಿನಲ್ಲಿ ಇರುತ್ತದೆ. ಕವಿತೆಯನ್ನು ಅರ್ಥದ ಗೂಟಕ್ಕೆ ಬಿಗಿಯದೆ ಕೊಳ್ಳು ಹರಿದು ಬಿಡುವ ಈ ಅರ್ಥಮುಕ್ತತೆ ಕನ್ನಡ ಕಾವ್ಯಕ್ಕೆ ಕಿರುಮಾರ್ಗ ಒಂದರ ಹೊಸ ಸಾಧ್ಯತೆಯನ್ನು ತೆರೆದಿದೆ.

ಮೈಸೂರ ಮಲ್ಲಿಗೆಯ ಕವಿ ಕೆ. ಎಸ್. ನರಸಿಂಹಸ್ವಾಮಿ ನವ್ಯ ಕಾವ್ಯದ ಪ್ರಭಾವಕ್ಕೆ ತೆರೆದುಕೊಂಡಿದ್ದರ ಒಳ್ಳೆಯ ಪರಿಣಾಮ 'ಶಿಲಾಲತೆ' (೧೯೫೮). "ಸ್ವಾತಂತ್ರ್ಯ ಬಂದ ಸ್ವಲ್ಪ ಕಾಲದಲ್ಲಿಯೇ ರಾಜಕೀಯವಾಗಿ, ಸಾಮಾಜಿಕವಾಗಿ, ಭಾರತೀಯ ಬದುಕಿನಲ್ಲಿ ಮಹತ್ವದ ಪಲ್ಲಟ ಗೋಚರಿಸತೊಡಗಿತ್ತು. ದೇಶಾಭಿಮಾನ, ತ್ಯಾಗ, ಪ್ರಾಮಾಣಿಕತೆ –ಮೊದಲಾದ ಮೌಲ್ಯಗಳು ಬದಲಾದ ಪರಿಸರದಲ್ಲಿ ಅರ್ಥಹೀನವಾಗುತ್ತಿದ್ದವು. ಮನೆಯೊಳಗಿನ ಬದುಕಿನ ರೀತಿಗೂ, ಮನೆಯಾಚೆಯ ಸಾಮಾಜಿಕ ಬದುಕಿನ ರೀತಿಗೂ ಅಪಾರವಾದ ಅಂತರ ಕಾಣತೊಡಗಿತ್ತು. ಸ್ವತಂತ್ರ ಭಾರತದ ವ್ಯಕ್ತಿಯ ಮುಂದೆ ಅನೇಕ ದ್ವಂದ್ವಗಳು ಹುಟ್ಟಿಕೊಂಡು ಆತನ ಬದುಕು ಹೋಳಾಯ್ತು. ಈ ಸ್ಥಿತಿ ಸ್ವಾತಂತ್ರ್ಯ ಪೂರ್ವದಲ್ಲೇ ಇದ್ದರೂ, ಆಗ ಸ್ವಾತಂತ್ರ್ಯದ ಆಕಾಂಕ್ಷೆ ಎಲ್ಲವನ್ನೂ ಆಕ್ರಮಿಸಿತ್ತು. ಆದರೆ ಸ್ವಾತಂತ್ರ್ಯಾನಂತರದಲ್ಲಿ ಎಲ್ಲವೂ ಧುತ್ತೆಂದು ಗೋಚರಿಸತೊಡಗಿ ಸ್ವಾತಂತ್ರ್ಯದ ಕನಸು ಕಂಡ ಮನಸ್ಸಿಗೂ, ಅದನ್ನು ಪಡೆದಾದ ನಂತರದ ಸ್ಥಿತಿಗೂ ಅಗಾಧ ಅಂತರವನ್ನು ಕಂಡ ಸಂವೇದನಾಶೀಲ ಮನಸ್ಸು ತತ್ತರಿಸತೊಡಗಿತು. ಇದು ಅಡಿಗ, ಗೋಕಾಕರ ಕಾವ್ಯದಲ್ಲಿ ಮಾತ್ರವಲ್ಲ, ಇತರ ಅನೇಕ ಸಂವೇದನಾಶೀಲ ಮನಸ್ಸುಗಳ ಅನುಭವವೂ ಆಗಿತ್ತು" (ಡಾ. ನರಹಳ್ಳಿ ಬಾಲಸುಬ್ರಹ್ಮಣ್ಯ). ಗಿರಡ್ಡಿ ಗೋವಿಂದರಾಜ ಗುರುತಿಸುವಂತೆ– " ವಿ. ಜಿ. ಭಟ್ಟ, ಪೇಜಾವರ ಸದಾಶಿವರಾಯ, ಅಡಿಗ ಮೊದಲಾದವರ ಕಾವ್ಯದಲ್ಲಿ; ಶ್ರೀರಂಗ, ಕಾರಂತ

ಮೊದಲಾದವರ ಕಾದಂಬರಿಗಳಲ್ಲಿ; ಈ ನವ್ಯ ಪ್ರಜ್ಞೆ ಬೇರೆ ಬೇರೆ ದಿಕ್ಕಿನಿಂದ ಸ್ವತಂತ್ರವಾಗಿ ಅಭಿವ್ಯಕ್ತಿ ಪಡೆಯಲು ಯತ್ನಿಸಿದ್ದು ಕೇವಲ ಆಕಸ್ಮಿಕವಲ್ಲ; ಬದಲಾದ ಮನೋಧರ್ಮದ ಸ್ಪಷ್ಟ ಗುರುತಾಗಿದೆ. "

" ಬದಲಾವಣೆಯ ಈ ಹೊಸ ವಾತಾವರಣವನ್ನು ಕೆ. ಎಸ್. ನ. ಅವರ ಕವಿಮನಸ್ಸು ಎಚ್ಚರದಿಂದಲೇ ಗಮನಿಸುತ್ತಿತ್ತು. ಮೈಸೂರ ಮಲ್ಲಿಗೆಯ ಈ ಕವಿ ತಾವೂ ಬದಲಾವಣೆಗೆ ತವಕಿಸುತ್ತಿದ್ದರು. ಅವರ ಹೊಸಬಗೆಯ ಹುಡುಕಾಟವನ್ನು ನಾವು ದೀಪದ ಮಲ್ಲಿ. ಇರುವಂತಿಗೆ, ಉಂಗುರ –ಸಂಕಲನಗಳ ಕೆಲವು ಕವಿತೆಗಳಲ್ಲಿ ಕಾಣಬಹುದು. ಆದರೆ ಇದು ಸ್ಪಷ್ಟ ರೂಪ ಪಡೆದದ್ದು ' ಶಿಲಾಲತೆ ' (೧೯೫೮) ಸಂಕಲನದಲ್ಲಿ. ' ಶಿಲಾಲತೆ ' ಕೆ. ಎಸ್. ನ. ಅವರ ಕಾವ್ಯ ಜೀವನದ ಒಂದು ಮಹತ್ವದ ಘಟ್ಟ. ' ಇರುವಂತಿಗೆ ' ಯ ವರೆಗೆ (೧೯೫೨) ಅಷ್ಟೇನೂ ಮಹತ್ವದ ಬದಲಾವಣೆಯನ್ನು ತೋರದ ಕೆ. ಎಸ್. ನ. ' ಶಿಲಾಲತೆ ' ಯಲ್ಲಿ ಸಂಪೂರ್ಣ ಬೇರೆಯೇ ಆದ ರೀತಿಯ ಕಾವ್ಯ ರಚನೆ ಮಾಡುವುದರ ಮೂಲಕ ವಿಮರ್ಶಕರ ಗಮನವನ್ನು ತಮ್ಮತ್ತ ಸೆಳೆದುಕೊಂಡರು. ಆಡುಮಾತಿನ ನಿರಾಭರಣ ಶೈಲಿಯನ್ನು ಬಿಟ್ಟುಕೊಟ್ಟ ಅವರ ಕಾವ್ಯ, ಪ್ರತಿಮಾನಿಷ್ಠ ರೂಪ ಪಡೆಯಿತು. ಆಧುನಿಕ ಕನ್ನಡ ಕಾವ್ಯದಲ್ಲಿಯೇ ಶ್ರೇಷ್ಠವೆನ್ನಬಹುದಾದ ಕವಿತೆಗಳನ್ನು ಕೆ. ಎಸ್. ನ. ಈ ಹಂತದಲ್ಲಿ ರಚಿಸಿದ್ದಾರೆ. ಹಾಗೆ ನೋಡಿದರೆ ಕೆ. ಎಸ್. ನ. ಅವರ ಈ ಘಟ್ಟದ ಕಾವ್ಯದ ಬಗ್ಗೆಯೇ ಕನ್ನಡ ವಿಮರ್ಶೆ ಹೆಚ್ಚು ಚರ್ಚಿಸಿರುವುದು. ಗಡಿಯಾರದಂಗಡಿಯ ಮುಂದೆ, ಬಿಳಿಯ ಹೂಗಳ ಕವಿತೆ ಗೋರಿಗಳ ಮೇಲೆ, ಇಡದಿರು ನನ್ನ ನಿನ್ನ ಸಿಂಹಾಸನದ ಮೇಲೆ, ಮನೆಯಿಂದ ಮನೆಗೆ, ಬರಿಗೊಡಗಳಿಗೆ ಸಮಾಧಾನ –ಮೊದಲಾದ ಕವಿತೆಗಳನ್ನು ವಿಮರ್ಶಕರು ಬಿಡಿಯಾಗಿ ಚರ್ಚಿಸಿರುವುದು ಮಾತ್ರವಲ್ಲ. ಕೆ. ಎಸ್. ನ. ಅವರ ಕಾವ್ಯ ಸ್ವರೂಪವನ್ನು ಅರ್ಥ ಮಾಡಿಕೊಳ್ಳುವ ಹಿನ್ನೆಲೆಯಲ್ಲೂ ಈ ಕವಿತೆಗಳು ಚರ್ಚೆಗೊಳಗಾಗಿವೆ." (ಡಾ. ನರಹಳ್ಳಿ).

ಅಡಿಗರನ್ನು ಘನತೆಯ ಪ್ರೇಮಿಯೆಂದೂ, ಕೆ. ಎಸ್. ನ. ಸಾಮಾನ್ಯತೆಯ ಆರಾಧಕರೆಂದೂ ಹೇಳಲಾಗುತ್ತದೆ. ಆದರೆ ಒಳ್ಳೆಯ ಕವಿಗೆ ಯಾವುದೂ ಸಾಮಾನ್ಯವಲ್ಲ; ಯಾವುದೂ ಅಸಾಮಾನ್ಯವಲ್ಲ. ಕಾವ್ಯದಲ್ಲಿ ಅಸಾಮಾನ್ಯತೆ ಎಂಬುದು ಕವಿಯ ಸಂವೇದನೆಯ ಫಲವಾಗಿರುತ್ತದೆ. ಕೆ. ಎಸ್. ನ. ಸಾಮಾನ್ಯ ಕೌಟುಂಬಿಕ ಸಂದರ್ಭವನ್ನೇ ಅಸಾಮಾನ್ಯತೆಯ ನೆಲೆಗೆ ಟ್ರಾನ್‌ಸೆಂಡ್ ಮಾಡುವುದನ್ನು ನಾವು ' ಇಡದಿರು ನನ್ನ ನಿನ್ನ ಸಿಂಹಾಸನದ ಮೇಲೆ ' ಎನ್ನುವ ಕವಿತೆಯಲ್ಲಿ ನೋಡಬಹುದು. ತಂದೆ–ತಾಯಿ–ಮಗ ಈ ತ್ರಿಕೋನ ಸಂಬಂಧ, ದೇವರು–ಭೂಮಿ–ಮನುಷ್ಯ ಈ ಭೂಮ ಭೂಮಿಕೆಗೆ ದಾಟಿಕೊಳ್ಳುವುದು ನೋಡುವಾಗ ನಾವು ಗ್ರಹಿಸಬೇಕಾದದ್ದು ಕಾವ್ಯ ಸಂವೇದನೆಯ ಅಸಾಮಾನ್ಯತೆಯನ್ನೇ.

ಕೆ. ಎಸ್. ನ. ಅವರ ಕವಿತೆಯ ನಾಯಕ ನಿರೀಶ್ವರವಾದಿ ಅಲ್ಲವಾದರೂ ದೈವದ ಹಂಗಿಲ್ಲದೆ ಬದುಕುವುದಕ್ಕೆ ಅವನು ಬಯಸುತ್ತಾನೆ.

ನಿನ್ನ ಹಂಗಿಲ್ಲದೆಯೆ ನಾ ಬಾಳುವುದ ಕಲಿಸು;
ನೊಂದು ಮಾಗಲಿ ಜೀವ ಎಂದು ಹರಸು;
ನಿನ್ನ ಕುರಿಯದ ನನ್ನ ದಾರಿಗೆಡರನು ನಿಲಿಸು;
ನಡೆದಂತೆ ದಾರಿಯನು ಬಿಚ್ಚಿ ಬೆಳೆಸು.

ಮಗನ ಕಾಡುವ ತಂದೆ ನೀನಾಗು, ಹಗೆಯಾಗು
ಹಣ್ಣಾಗಿಸೆನ್ನ ಸಿರನು.
ನಿನ್ನ ಒಂಡೆಯಮೇಲೆ ನನ್ನ ನೆತ್ತರ ಹನಿಸು
ಕಾಣಲ್ಲಿ ನಿನ್ನ ಹೆಸರನು !

ಒಂದ ಬಾಗಿಲು ಮಣ್ಣು; ಬಿಡುವ ಬಾಗಿಲು ಮಣ್ಣು
ನಡುವೆ ಕಾಪಾಡುವುದು ತಾಯ ಕಣ್ಣು.
ಈ ಕಣ್ಣ ಸೆರೆಯ ಕಲ್ ಕೋಟೆಯಲ್ಲಾ ಹೊನ್ನು
ನನ್ನ ಕೈ ಬಿಡುವುದೇ ನಿನಗೆ ಚೆನ್ನು.

ಕೆ. ಎಸ್. ನ. ಅವರ ಚಿತ್ರಕ ಶಕ್ತಿ ಅಪೂರ್ವವಾದುದು. ನವ್ಯ ಸಾಹಿತ್ಯ ಸಂದರ್ಭದಲ್ಲೂ ಸೌಂದರ್ಯ ಪ್ರಜ್ಞೆಯನ್ನು ಕಳೆದುಕೊಳ್ಳದ ಕವಿ ಅವರೊಬ್ಬರೇ.

ನಾನಾದೆ ನಕ್ಷತ್ರ ನೀಲಿ ಕಂಪಿನಲಾಲಿ;
ದೂರತೀರದ ನಿನ್ನ ಬಳಿಗೆ ಕರೆದೆ.
ಆಗ ಚೈತ್ರದ ಮಾವು ಜೂಲುನಾಯಿಯ ಜೋಲಿ
ತಳಿರ ಕೆನ್ನಾಲಿಗೆಯ ಬೆಂಕಿ ಪರದೆ.

ಹುಚ್ಚಿ ಬೇವಿನ ತಲೆಗೆ ಹಕ್ಕಿ ಹಾಡಿನ ಹೆಡಿಗೆ
ಬಂಗಾರದಂಗಾಲು ಮೋಡದೊಳಗೆ.
ಅಲ್ಲಿಂದ ಮುಂದೆ ಮುಂಗಾರ ಕಂಬನಿ ಕೊಡಿಗೆ;
ಜಿಂಕೆ ಚಕ್ಕಳದಂಚು ಕಾಡ ಹೊಳೆಗೆ.

ಮಳೆ ನಿಂತು ಚಳಿ ಬಂತು. ಗಲ್ಲ ಬೆಳ್ಳಗೆ ಹುಡುಗಿ
ಬಿಳಿ ಹೂವ ಮುಟ್ಟಿಸಿದೆ ನನ್ನ ತುಟಿಗೆ.
ಸಂಜೆಗೊಬ್ಬಳು ಮುದುಕಿ ಕೊನೆಯ ಕೆಂಡವ ಕೆದಕಿ
ಎತ್ತಿ ಮುಡಿದಳು ಇದ್ದ ಗಂಟು ಜಡೆಗೆ.

(ಗಡಿಯಾರದಂಗಡಿಯ ಮುಂದೆ)

ಮೇಲಿನ ಚಿತ್ರಗಳ ಚೆಲುವು ತನ್ನಷ್ಟಕ್ಕೇ ಚೇತೋಹಾರಿಯಾಗಿದೆ. ಕವಿತೆಯ ಸಂದರ್ಭದಲ್ಲೂ ಚಿತ್ರಗಳು ಅರ್ಥಪೂರ್ಣವಾಗಿವೆ ಎಂಬುದು ಬೇರೆಮಾತು. ಕೌಟುಂಬಿಕ ಚೌಕಟ್ಟಿನಲ್ಲೇ ಕೆ. ಎಸ್. ನ. ಕವಿತೆಗಳು ಮುಪ್ಪು, ಸಾವು, ಮನುಷ್ಯನ ಅಸ್ತಿತ್ವ ಮತ್ತು

ಬದುಕಿನ ಅರ್ಥಪೂರ್ಣತೆಯ ಶೋಧನೆಯನ್ನು ಗಹನವಾದ ನೆಲೆಯಲ್ಲಿ ನಡೆಸುತ್ತವೆ. ಬದುಕಿನ ಚೆಲುವು ಒಲವು ಸಂಪನ್ನತೆಯನ್ನು ಎತ್ತಿ ಹಿಡಿಯುತ್ತವೆ.

' ತೆರೆದ ಬಾಗಿಲು ' (೧೯೭೬) ಕೆ. ಎಸ್. ನ. ಅವರಿಗೆ ಕೇಂದ್ರ ಸಾಹಿತ್ಯ ಅಕಾಡೆಮಿ ಪ್ರಶಸ್ತಿಯನ್ನು ದೊರಕಿಸಿದ ಕೃತಿ. ತೆರೆದ ಬಾಗಿಲು ಆಂಗ್ಲ ಕವಿ ಎಸ್ರಾ ಪೌನ್ಡ್‌ನಿಂದ ಪ್ರಭಾವಿತವಾಗಿದೆ; ಕನ್ನಡ ಕವಿ ಮಾಸ್ತಿ ಅವರಿಂದಲೂ ಪ್ರಭಾವಿತವಾಗಿದೆ. ಪ್ರಭಾವಿತವಾಗಿದ್ದೂ ತನ್ನ ಅಸ್ಮಿತೆಯನ್ನು ಉಳಿಸಿಕೊಳ್ಳುವಲ್ಲಿ ಅನನ್ಯ ರೀತಿಯಲ್ಲಿ ಸಫಲವಾಗಿದೆ. ಮುಪ್ಪು ಮತ್ತು ಸಾವಿನ ಅನುಭವಗಳನ್ನು ಈ ಕವಿತೆಗಳು ಚಿತ್ರಿಸಿರುವ ರೀತಿ ತೀರ ಹೊಸಬಗೆಯದಾಗಿದೆ. ಲೋಕಾಭಿರಾಮವಾಗಿಯೆ ಗಹನ ಸಂಗತಿಗಳ ಬಗ್ಗೆ ಅರಿವು ಹಿಗ್ಗುವಂತೆ ಬರೆಯುವುದು ಸಾಧ್ಯ ಎಂಬುದನ್ನು ಕವಿ ಇಲ್ಲಿ ಸಾಧಿಸಿ ತೋರಿಸಿದ್ದಾರೆ. ಕೆ. ಎಸ್. ನ. ಅವರ ಈ ಸ್ವಭಾವೋಕ್ತಿಯ ಕಾವ್ಯ ಅವರ ಪಕ್ವಾನುಭವದ ಪ್ರತಿಫಲ ಎಂದು ಕನ್ನಡ ವಿಮರ್ಶೆ ' ತೆರೆದ ಬಾಗಿಲು ' ಸಂಗ್ರಹವನ್ನು ಕೈವಾರಿಸಿದೆ.

ನವ್ಯ ಕಾವ್ಯಕ್ಕೆ ವೈವಿಧ್ಯವನ್ನು ದೊರಕಿಸಿದ ಇತರ ಹಿರಿಯ ಕವಿಗಳು : ಜಿ. ಎಸ್. ಶಿವರುದ್ರಪ್ಪ, ಚೆನ್ನವೀರ ಕಣವಿ; ಗಂಗಾಧರ ಚಿತ್ತಾಲ; ಸು. ರಂ. ಎಕ್ಕುಂಡಿ. ಜಿ. ಎಸ್. ಎಸ್. ಮತ್ತು ಕಣವಿಯವರಿಗೆ ಸಮನ್ವಯ ಕವಿಗಳೆಂದು ಹಣೆಪಟ್ಟಿ ಹಚ್ಚಿ ಅವರನ್ನು ನವ್ಯ ವೃತ್ತದಿಂದ ಹೊರಗೆ ಇಡುವ ಪ್ರಯತ್ನ ನಡೆಯಿತು. ನವೋದಯದ ನೆಲೆಯಿಂದ ಬಂದ ಜಿ. ಎಸ್. ಎಸ್. ನಿರೀಶ್ವರವಾದೀ ಕವಿ. ಅವರ ಆಧುನಿಕ ಪ್ರಜ್ಞೆಯನ್ನು ಸೂಚಿಸಲು ಅಷ್ಟೇ ಅಂಶ ಸಾಕಾಗಿತ್ತು. ಮೊದಲಿನಿಂದಲೂ ಸಮಾಜವ್ಯವಸ್ಥೆ, ಜಾತಿ ಹುನ್ನಾರಗಳನ್ನೂ ಅವರು ಎದುರಿಸಿಕೊಂಡು ಬಂದವರು. ವ್ಯಕ್ತಿ ಸ್ವಾತಂತ್ರ್ಯವನ್ನು ಎತ್ತಿ ಹಿಡಿಯುತ್ತಾ ಬಂದವರು. ಸಾಮಾಜಿಕ ಮತ್ತು ವೈಯಕ್ತಿಕ ಹೊಣೆಗಾರಿಕೆಗೆ ಈ ಕವಿಯ ಪ್ರಜ್ಞೆ ಬದ್ಧವಾಗಿದೆ. ಆಶಯಗಳು ಗಟ್ಟಿಯಾಗಿದ್ದು. ಕಾವ್ಯ ವಸ್ತುವಿನ ವಿಸ್ತರಣಕ್ಕೆ ಕವಿ ತೊಡಗುವುದಿಲ್ಲ. ಸಮಾಜ ಈ ಕವಿಗೆ ಬೇಕು; ಆದರೆ ಸಮಾಜಕ್ಕೆ ಇವರ ನಿಷ್ಠುರತೆ ಬೇಕಾಗಿಲ್ಲ. ಈ ದ್ವಂದ್ವ ಇವರ ಕಾವ್ಯ ಸಂದರ್ಭದಲ್ಲಿ ಇದೆ. ಇಂಥ ತೊಡಕುಗಳನ್ನೇ ಈ ಕವಿಯ ಕಾವ್ಯ ಉದ್ದಕ್ಕೂ ಕಲಕಿದ ಮನಸ್ಥಿತಿಯಲ್ಲಿ ಅಭಿವ್ಯಕ್ತಿಸುತ್ತಾ ಬಂದಿದೆ.

ಚೆನ್ನವೀರ ಕಣವಿ ಕಲಾಪ್ರಜ್ಞೆ ಮತ್ತು ಸಮಕಾಲೀನ ಪ್ರಜ್ಞೆ ಎರಡನ್ನೂ ಸಮಸಮವಾಗಿ ರೂಢಿಸಿಕೊಂಡು ಬಂದಿರುವ ಕವಿ. ಅವರ ರಾಜಕೀಯ ಕವನಗಳಲ್ಲಿ ವಿಡಂಬನೆ ಕಾಣುವುದಾದರೂ, ಸಮಕಾಲೀನ ಸಮಾಜದಲ್ಲಿ ತನ್ಮಯತೆಗೆ ಅರ್ಹವಾದ ಅನೇಕ ಸಂಗತಿಗಳು ಇನ್ನೂ ಜೀವಂತವಾಗಿವೆ ಎಂಬ ನಂಬಿಕೆಯನ್ನು ಅವರ ಕಾವ್ಯ ಕಳೆದುಕೊಂಡಿಲ್ಲ. ಮಾನವೀಯತೆಯಲ್ಲೂ ಅವರಿಗೆ ವಿಶೇಷವಾದ ನೆಚ್ಚು. ನಿಸರ್ಗದ ಚೈತನ್ಯ ಮತ್ತು ಚೆಲುವಿಗೆ ಅವರು ಮನಸೋತಿದ್ದಾರೆ. ವ್ಯಗ್ರತೆ ಅವರ ಕಾವ್ಯದಲ್ಲಿ ಕಾಣುವುದಿಲ್ಲ. ಕೆ. ಎಸ್. ನ. ಅವರಂತೆ ಕಣವಿಯವರೂ ಬದುಕಿನ ಚೆಲುವಿಗೆ ತೆರೆದುಕೊಂಡಿರುವ ಕವಿ. ಬದುಕಿನಲ್ಲಿ ಚೆಲುವಿದೆ ಎಂದಮೇಲೆ ಕಲೆಯಲ್ಲೂ ಅದರ ನಿರ್ಮಾಣ ಸಹಜವೆನ್ನಿಸಬೇಕು; ಸಾಧ್ಯವಾಗಬೇಕು. ಅವರ ಕಾವ್ಯ ಆ ಚೆಲುವಿನ

ಅಭಿವ್ಯಕ್ತಿಯಾಗಿದೆ. ಕಣವಿಯವರ ಸಾನೆಟ್ಟುಗಳಂತೂ ಚೆಲುವನ್ನೂ ಅದರ ಮೂಲಕ ಜೀವನ ಪಾರಮ್ಯವನ್ನೂ ಶೋಧಿಸುವ ಯತ್ನಗಳಾಗಿ ಕಾಣುತ್ತವೆ.

ಗಂಗಾಧರ ಚಿತ್ತಾಲರು ಅಂಬಿಕಾತನಯದತ್ತರಂತೆ ತಮ್ಮ ವೈಯಕ್ತಿಕ ಬದುಕಿನ ಅನುಭೂತಿಯನ್ನೇ ಕಾವ್ಯವಾಗಿ ದಾಟಿಸಿದ ಕವಿ. ಆದುದರಿಂದಲೇ ಚಿತ್ತಾಲರು ತಮ್ಮ ತಾಯಿಯ ಬಗ್ಗೆ ಬರೆಯಲಿ, ತಂದೆಯ ಬಗ್ಗೆ ಬರೆಯಲಿ, ಹತ್ತಿರದ ಬಂಧುಗಳ ಬಗ್ಗೆ ಬರೆಯಲಿ. ಅದರಲ್ಲಿ ಒಂದು ವೈಯಕ್ತಿಕ ಜರೂರು ವಿಶೇಷವಾಗಿ ಕಂಡುಬರುತ್ತದೆ. ವೈಯಕ್ತಿಕ ದುರಂತಗಳನ್ನು ಚಿತ್ತಾಲರಂತೆ ಜೀವಂತ ಕಾವ್ಯವಾಗಿ ರೂಪಾಂತರಿಸಿದವರು ವಿರಳ. ಚಿತ್ತಾಲರ ಕಾವ್ಯ ನಮ್ಮ ಎದುರು ನಿಲ್ಲಿಸುವುದು ವಿಧಿಗೆ ಸವಾಲು ಹಾಕುವ ಒಬ್ಬ ಧೀರೋದಾತ್ತ ನಾಯಕನನ್ನು. ನವ್ಯ ಸಾಹಿತ್ಯ ಸಂದರ್ಭದಲ್ಲಿ ಇಂಥ ನಾಯಕರು ಸಾಮಾನ್ಯವಾಗಿ ಕಾಣಸಿಗುವುದಿಲ್ಲ. ಬದುಕಿನ ದುರಂತ ಪ್ರಜ್ಞೆಯ ಅರಿವಿನಲ್ಲಿ ಚಿತ್ತಾಲರ ಕಾವ್ಯದ ಆಧುನಿಕ ಸಂವೇದನೆಯ ಅಭಿವ್ಯಕ್ತಿ ಇದೆ.

ಅರವಿಂದ ನಾಡಕರ್ಣಿ, ಜಿ. ಎಸ್. ಸಿದ್ಧಲಿಂಗಯ್ಯ, ಪಿ. ಲಂಕೇಶ್, ಯು. ಆರ್. ಅನಂತಮೂರ್ತಿ. ಎಚ್. ಎಂ. ಚನ್ನಯ್ಯ, ಸುಮತೀಂದ್ರ ನಾಡಿಗ್, ಕೆ. ಎಸ್. ನಿಸಾರ್ ಅಹಮದ್, ಎನ್. ಎಸ್. ಲಕ್ಷ್ಮೀನಾರಾಯಣ ಭಟ್ಟ, ಸಿದ್ಧಲಿಂಗ ಪಟ್ಟಣಶೆಟ್ಟಿ, ಚಂದ್ರಶೇಖರ ಕಂಬಾರ, ಕೆ. ವಿ. ತಿರುಮಲೇಶ್, ಚಂದ್ರಶೇಖರ ಪಾಟೀಲ, ದೇಶ ಕುಲಕರ್ಣಿ, ಬಿ. ಆರ್. ಲಕ್ಷ್ಮಣರಾವ್, ಶ್ರೀಕೃಷ್ಣ ಆಲನಹಳ್ಳಿ, ಸುಬ್ರಾಯ ಚೊಕ್ಕಾಡಿ – ಇವರು ನವ್ಯ ಕಾವ್ಯಕ್ಕೆ ವೈವಿಧ್ಯವನ್ನೂ ಕಸುವನ್ನೂ ದೊರಕಿಸಿದ ಇತರ ಮುಖ್ಯ ಕವಿಗಳು. ೧೯೭೦ ರಲ್ಲಿ ಪಿ. ಲಂಕೇಶ್ ಅಕ್ಷರ ಹೊಸ ಕಾವ್ಯವನ್ನು ಸಂಪಾದಿಸಿ ಮೊಟ್ಟ ಮೊದಲ ನವ್ಯ ಕವಿತೆಗಳ ಸಂಗ್ರಹವನ್ನು ಅಭ್ಯಾಸಿಗಳ ಮುಂದೆ ಇರಿಸಿದರು. ಸಹಜವಾಗಿಯೇ ಇಲ್ಲಿ ಅಡಿಗ ಮತ್ತು ರಾಮಚಂದ್ರ ಶರ್ಮರು ವಿಶೇಷವಾದ ಚರ್ಚೆಗೆ ಒಳಗಾಗಿದ್ದಾರೆ. ಗಂಗಾಧರ ಚಿತ್ತಾಲರು. ಅವರನ್ನು ಮುನ್ನುಡಿಯಲ್ಲಿ ಎತ್ತಿಹಿಡಿದಿದ್ದ ಅನಂತಮೂರ್ತಿ ಟೀಕೆಗೆ ತುತ್ತಾಗಿದ್ದಾರೆ. ಸಂಪೂರ್ಣ ಮುಕ್ತ ಸಂವೇದನೆಯ ಚಿತ್ತಾಲರ ಕಾವ್ಯ ಸಂಕೋಚದಿಂದ ಮುರುಟಿಕೊಂಡಿರುವ ನವ್ಯ ಕಾವ್ಯಕ್ಕೆ ಒಂದು ಅವಶ್ಯ ಚಿಕಿತ್ಸೆಯಾಗಬಹುದು ಅನ್ನಿಸುತ್ತದೆ – ಎಂದು ಅನಂತಮೂರ್ತಿ ಬರೆದಿದ್ದು ಲಂಕೇಶರನ್ನು ಕೆರಳಿಸಿದೆ. ಮುನ್ನುಡಿಕಾರರನ್ನು ವ್ಯಂಗ್ಯಕ್ಕೆ ಗುರಿಪಡಿಸಿ ಲಂಕೇಶ್ ಬರೆಯುತ್ತಾರೆ : " ನನ್ನ ವ್ಯಂಗ್ಯ ಸಮರ್ಥನೀಯವೆಂದು ತಿಳಿದಿದ್ದೇನೆ: ಯಾಕೆಂದರೆ ಸಂಪೂರ್ಣ ಮುಕ್ತ ಸಂವೇದನೆ (ಸೆಂಟಿಮೆಂಟಲಿಸ್ಟರು ಮಾತ್ರ ' ಸಂಪೂರ್ಣ ವೃತ್ತ ', ' ಸಂಪೂರ್ಣ ಶ್ರೇಷ್ಠ ' ದಂಥ ಮಾತು ಆಡಬಲ್ಲರು) ರೀತಿಯ ಆಕರ್ಷಕ ಮಾತುಗಳಿಂದ ನಿಜಕ್ಕೂ ಉತ್ತಮ ಕಾವ್ಯ ಬರೆಯುತ್ತಿರುವವರಿಗೆ ಅನ್ಯಾಯವಾಗುತ್ತದೆ. ಜೀವಂತ ಸಾಹಿತ್ಯಕ್ಕೆ ಸ್ಪಂದನಗೊಳ್ಳಬಲ್ಲ ಯಾರೂ ಗುರುತಿಸಬಲ್ಲ ವೀರ್ಯವತ್ತಾದ ಅನುಭವ ಲಕ್ಷ್ಮಣರಾವ್ ಅವರ ಗೋಪಿ ಮತ್ತು ಗಾಂಡಲೀನ, ಫೋಟೋಗ್ರಾಫರ್, ಸುಮತೀಂದ್ರರ ಉಲೂಪಿ, ಕಪ್ಪು ದೇವತೆ, ತಿರುಮಲೇಶ್ ಅವರ ನಾಸಿಯಾ, ಕೇರಳದ ಹುಡುಗಿಯರು, ಕಂಬಾರರ ಗಂಗಾಮಾಯಿ, ಮಾವೋತ್ಸೆ ತುಂಗನಿಗೆ, ಚನ್ನಯ್ಯನವರ ಆಮೆ – ಮುಂತಾದ

ಕವನಗಳಲ್ಲಿದೆ. ಇದು ಬರೀ ಹೊಳಪಲ್ಲ, ಆಕರ್ಷಕ ಭಾವಾಭಿನಯವಲ್ಲ ಎಂಬುದು ಇವರ ಹಲವು ಕವನಗಳನ್ನು ಒಟ್ಟಿಗೆ ತೆಗೆದುಕೊಂಡು ನೋಡಿದರೆ ಗೊತ್ತಾಗುತ್ತದೆ. ಇವರು ಬೇಂದ್ರೆ, ಅಡಿಗರಿಂದ ಭಿನ್ನ. ಅಡಿಗರು ಅತ್ಯಂತ ಗಾಢ ಹೋರಾಟದ ಮೂಲಕವೂ ಚಿನ್ನದ ಗೆರೆ, ಗುಡಿ ಗೋಪುರಗಳ ಬಂಗಾರ ಶಿಖರದತ್ತ ಮುಖ ಮಾಡುತ್ತಾರೆ; ನೆಲ–ಮುಗಿಲುಗಳ, ಇಹ–ಪರಗಳ ಸಂಬಂಧವನ್ನು ತೆಕ್ಕೆಗೊಗ್ಗಿಸಿಕೊಳ್ಳುವ ಧಾಟಿಯಲ್ಲೇ ಆದರ್ಶಪ್ರಿಯತೆ ಕಂಡು ಬರುತ್ತದೆ. ಆದರೆ ಅಡಿಗರಿಂದ ಭಿನ್ನವಾದ ಬಂಡಾಯ. ಅವರು ಯಾವುದನ್ನು ಹಿಪ್ಪೀ ಅನ್ನುತ್ತಾರೋ ಅದಕ್ಕೆ ಹತ್ತಿರವಾದ ಸ್ವಾತಂತ್ರ್ಯಾಕಾಂಕ್ಷೆ, ಉಲ್ಲಾಸ, ನೋವು ಇಲ್ಲಿವೆ; ಪ್ರಾಣ ದೇವರಾದ ಹನುಮನ ವಿಕಾಸ ಇಲ್ಲಿದೆ. ಆದರೆ ಅದು ಎಲ್ಲ ಕಾಲದಲ್ಲಿ ಕಂಡುಬರುವ ಯೌವನಕ್ಕೆ ಸಹಜವಾದ ನೋವು ಮಾತ್ರವಲ್ಲದೆ ಎರಗಿಸಿಕೊಳ್ಳುವಷ್ಟು ಬಲವಾದ ವ್ಯವಸ್ಥೆ ಕೂಡ ಇಲ್ಲದ. ದಬ್ಬಾಳಿಕೆ ಮಾಡಿ ದಮನಗೊಳಿಸುವ ತಾಕತ್ತು ಕೂಡ ಇಲ್ಲದ, ಏಳಲಾರದ, ನಿಲ್ಲಲಾರದ ಸಮಾಜದಲ್ಲಿ ಪೂರ್ವದವರೂ ಅಲ್ಲದ ಪಶ್ಚಿಮದವರೂ ಅಲ್ಲದ, ಆದರೂ ತಮ್ಮ ಅಸ್ತಿತ್ವ ಖಚಿತಪಡಿಸಿಕೊಳ್ಳದೆ ಗತ್ಯಂತರವಿಲ್ಲ ಎಂಬ ಅರಿವುಳ್ಳ ಜನಾಂಗದ ನೋವು.

ಎರಡನೆಯ ಪೀಳಿಗೆಯ ಮನೋಸ್ಥಿತಿಯನ್ನು ಲಂಕೇಶ್ ಇಲ್ಲಿ ತುಂಬ ಚೆನ್ನಾಗಿ ಹಿಡಿದಿಟ್ಟಿದ್ದಾರೆ. ಈ ವರ್ಧಮಾನರಲ್ಲಿ ವಿಕಾಸದ ನಿಚ್ಚಣಿಕೆಗೆ ಏರಿದವರು ಯಾರು ? ಎನ್ನುವುದು ಎರಡು ದಶಕಗಳ ಕಾಲಾಂತರದಲ್ಲಿ ತನಗೆ ತಾನೇ ಸ್ಪಷ್ಟವಾಗಿದೆ. ಕೆಲವರು ಕೋಶಾವಸ್ಥೆಗೆ ಮರಳಿದ್ದಾರೆ. ಪ್ರಯೋಗಶೀಲತೆಯನ್ನು ಕೆಲವರು ಈವತ್ತಿಗೂ ಉಳಿಸಿಕೊಂಡಿದ್ದಾರೆ. ಲಂಕೇಶರು ಗಮನಿಸದಿದ್ದ ಹಿಂದಿನ ಸಾಲಿನ ಕೆಲವರು ಮುಂದೆ ಬಂದಿದ್ದಾರೆ. ವಿಮರ್ಶಕ ಎಷ್ಟೇ ಕ್ರಾಂತಿದರ್ಶಿಯಾಗಿದ್ದರೂ ಸಮಕಾಲೀನ ವಿಮರ್ಶೆಗೆ ಅನೇಕ ಇತಿ ಮಿತಿಗಳಿವೆ. ಆ ಇತಿ ಮಿತಿಗಳಲ್ಲೇ ನಮಗೆ ದಕ್ಕಿದಷ್ಟನ್ನು ನಾವು ನಿವೇದಿಸಿಕೊಳ್ಳಬೇಕಾಗುತ್ತದೆ.

## ಕಥೆ - ಕಾದಂಬರಿಗಳಲ್ಲಿ ನವ್ಯತೆ :

ಕನ್ನಡ ನವ್ಯ ಕಥೆಗಳ ಬಗ್ಗೆ ಮಾತಾಡುವಾಗ ನವ್ಯ ಕಥೆಗೆ ಆದ್ಯರಾದ ರಾಮಚಂದ್ರ ಶರ್ಮರ ಹೆಸರನ್ನು ಮೊದಲು ಎತ್ತಿಕೊಳ್ಳಬೇಕಾಗಿದೆ. " ಶರ್ಮರ ಮೊದಲ ಕಥೆಗಳಲ್ಲಿ ನವೋದಯದ ಪ್ರಮುಖ ಧೋರಣೆಯಾದ ರೋಮ್ಯಾಂಟಿಕ್ ಒಲವು ನಿಲುವುಗಳನ್ನೂ, ಭಾವ ಪರವಶತೆಯನ್ನೂ ಕಾಣಬಹುದಾದರೂ ಅವರು ಬಲು ಬೇಗ ಇದರಿಂದ ಬಿಡುಗಡೆ ಪಡೆದಿರುವುದನ್ನು ಎರಡನೆಯ ಸಂಕಲನ –ಏಳನೆಯ ಜೀವ–ದಲ್ಲೇ ಕಾಣಬಹುದು. ಶರ್ಮರನ್ನು ನವ್ಯ ಕವಿ, ನವ್ಯ ಕಥೆಗಾರ ಎಂದು ಆ ಮಾರ್ಗದ ಪ್ರಥಮ ಪಂಕ್ತಿಯಲ್ಲಿ ಅಡಿಗರ ಸಮಸಮ ಕಾಣಲಾಗುತ್ತದೆ. ಕಾವ್ಯದ ಮಟ್ಟಿಗೆ ಇದು ನಿಜವೂ ಹೌದು. ಆದರೆ ಸಣ್ಣ ಕಥೆಗೆ ಬಂದಾಗ ' ಮಂದಾರ ಕುಸುಮ ' ದ ನಂತರದ ಸಂಕಲನಗಳಲ್ಲಿ ಕಾಣಬರುವ ನವ್ಯತೆ ಬಗ್ಗೆ ವಿಮರ್ಶಕರಲ್ಲಿ ಒಮ್ಮತದ ಅಭಿಪ್ರಾಯವಿಲ್ಲ. ಶರ್ಮರು ನವ್ಯತೆಯನ್ನು ಹಠದಿಂದ ಎಂಬಂತೆ ಸಾಧಿಸಿದರು, ಅನೇಕ

ಕಥೆಗಳನ್ನು ಅವರು ತಂತ್ರದ ಮೋಹಕ್ಕಾಗಿಯೇ ಬರೆದ ಹಾಗೆ ತೋರುತ್ತದೆ– ಎಂದು ಗಿರಡ್ಡಿ ಗೋವಿಂದರಾಜ ಅಭಿಪ್ರಾಯ ಪಡುತ್ತಾರೆ. ಶರ್ಮ ನವ್ಯ ಕಥೆಯ ಆದ್ಯ ಪ್ರವರ್ತಕರೆಂದು ಎಲ್. ಎಸ್. ಶೇಷಗಿರಿರಾವ್ ಮತ್ತು ಜಿ. ಎಸ್. ಆಮೂರ ಗುರುತಿಸಿದ್ದಾರೆ. .....ಶರ್ಮರನ್ನು ನವ್ಯ ಕಥೆಗಾರರೆಂದೇ ಪ್ರಜ್ಞಾಪೂರ್ವಕ ತಿಳಿದು ನೋಡಿದರೂ ಅವರ ಕಥೆಗಳಲ್ಲಿ ನವ್ಯತೆ ಆರೋಪಿಸಲಾದ ಆತ್ಮರತಿ, ಅನಾಥ ಪ್ರಜ್ಞೆ, ಅತಿ ಕಾಮುಕತೆ, ಪ್ರಜ್ಞಾಪ್ರವಾಹ ತಂತ್ರ (ಒಂದೆರಡು ಕಥೆಗಳ ಹೊರತು) ಹಳೆಯ ಮೌಲ್ಯಗಳ ವಿರುದ್ಧ ಬಂಡಾಯ ಮೊದಲಾದುವು ಕಾಣುವುದಿಲ್ಲ .....ಆದರೆ ನವ್ಯ ಮಾರ್ಗದ ವ್ಯಕ್ತಿವಿಶಿಷ್ಟತೆ, ಭಾಷೆಯನ್ನು ಸೃಜನಶೀಲವಾಗಿ ದುಡಿಸಿಕೊಳ್ಳುವ ಪರಿ, ಮನಸ್ಸಿನ ಆಳಗಳಿಗೆ ಇಳಿದು ನೋಡುವ ಮನೋವೈಜ್ಞಾನಿಕ ಅನ್ವೇಷಣಾಶೀಲತೆ –ಈ ಎಲ್ಲ ಗುಣಗಳನ್ನೂ ಶರ್ಮರ ಕಥೆಗಳು ಯಥೇಚ್ಛವಾಗಿ ಮೈಗೂಡಿಸಿಕೊಂಡಿವೆ " (ಜಿ. ಎನ್. ರಂಗನಾಥರಾವ್).

ರಾಮಚಂದ್ರ ಶರ್ಮರು ಕನ್ನಡ ಸಣ್ಣ ಕಥೆಗೆ ನವ್ಯತೆ ತಂದ ಮೊದಲ ಲೇಖಕರಾದರೂ, ಸಣ್ಣ ಕಥೆಗೆ ಗಹನವಾದ ಜವಾಬ್ದಾರಿ ಹೊರಿಸಿದವರು ಅನಂತ ಮೂರ್ತಿ, ಲಂಕೇಶ ಮತ್ತು ಚಿತ್ತಾಲ. ಅವರೆವಿಗೂ ಒಂದು ಕಥೆಯನ್ನು ಆಕರ್ಷಕವಾಗಿ ನಿರೂಪಿಸುವುದು, ಒಂದು ಅನುಭವವನ್ನು ಚೊಕ್ಕಟವಾಗಿ ಮಂಡಿಸುವುದು ಸಣ್ಣ ಕಥೆಯೊಂದು, ಸಣ್ಣ ಕಥೆಯಾಗಲು ಸಾಕಾಗುತ್ತಿತ್ತು. ಮಾಸ್ತಿಯವರ ನಂತರ ಮತ್ತೆ ನಾವು ಕನ್ನಡದ ಗಟ್ಟಿ ಕಥೆಗಳನ್ನು ನೋಡಬೇಕೆಂದರೆ ನವ್ಯ ಕಥೆಗಾರರ ಕಥೆಗಳನ್ನೇ ಗಮನಿಸಬೇಕಾಗುತ್ತದೆ (ಈ ಮಾತಿಗೆ ಬೆರಳೆಣಿಕೆಯ ಕಥೆಗಳಷ್ಟೇ ಅಪವಾದ).

ಅನಂತಮೂರ್ತಿಯವರ ಕಥೆಗಳಲ್ಲಿ ಕಾಣುವುದು ಅವರ ಭಾಷೆಯ ಕಾವ್ಯ ಸೂಕ್ಷ್ಮತೆ; ಭಾವಾನುವರ್ತಿಯಾದ ಲಯ. ಉದ್ದಕ್ಕೂ ಕಾಣುವ ಸಾಂಕೇತಿಕತೆ; ಬಂಧ ಪ್ರಜ್ಞೆ. ಹೀಗಾಗಿ ಅನಂತಮೂರ್ತಿಗಳ ಕತೆಗಳು ಒಂದು ಕವಿತೆಯ ಹಾಗೆ ಓದಿಸಿಕೊಳ್ಳುತ್ತವೆ. ನೈತಿಕ ಮೌಲ್ಯವನ್ನು ಒಂದು ನಿಶ್ಚಿತ ಸಾಮಾಜಿಕ ಹಿನ್ನೆಲೆಯಲ್ಲಿ, ಅನುಭವ ಪ್ರಾಮಾಣ್ಯದಲ್ಲಿ ಆತ್ಯಂತಿಕವಾಗಿ ಶೋಧನೆಗೆ ಒಳಪಡಿಸುವುದು ಅವರ ಕಥೆಗಳಲ್ಲಿ ಕಂಡುಬರುತ್ತದೆ. ಪರಂಪರಾನುಗತವಾಗಿ ಬಂದ ಮೌಲ್ಯಗಳನ್ನು ಎಗ್ಗಿಲ್ಲದೆ ಪರೀಕ್ಷೆಗೆ ಒಳಪಡಿಸುತ್ತಾರೆ. ಕಾಮ, ಮೌಲ್ಯ ಶೋಧನೆಯ ಒಂದು ನಿಕಷವಾಗಿ ಒದಗಿಬರುತ್ತದೆ. ಪ್ರಕೃತಿ ಎಂಬ ಕತೆಯಲ್ಲಿ ಇದನ್ನು ಗಮನಿಸಬಹುದು. ಪ್ರಕೃತಿಯನ್ನು ಪರಾಜಿತಗೊಳಿಸುವಲ್ಲಿ ಸಂಕಪ್ಪಯ್ಯ ಮತ್ತು ಅವನ ಮಗಳು ಲಕ್ಷ್ಮಿ ಸೋಲುವುದು ನಿಸರ್ಗದ ವಿರುದ್ಧ ಮನುಷ್ಯನ ಹೋರಾಟದ ನಿರಂತರತೆಯನ್ನು ಸೂಚಿಸುತ್ತದೆ. ಈ ಸೋಲನ್ನು ಒಂದು ನೈತಿಕ ಪ್ರಶ್ನೆಯಾಗಿ ಎತ್ತಿಕೊಳ್ಳಬಹುದೆ ಎಂಬುದು ಕಥೆಯ ಅಂತರಂಗದಿಂದ ಹೊರಡುವ ಧ್ವನಿಯಾಗುತ್ತದೆ. ಪ್ರಶ್ನೆ, ಖೋಜರಾಜ, ಕ್ಲಿಪ್ ಜಾಯಿಂಟ್, ನವಿಲುಗಳು, ಕಾರ್ತೀಕ, ಘಟಶ್ರಾದ್ಧ, ಪ್ರಸ್ತ, ಆಕಾಶ ಮತ್ತು ಬೆಕ್ಕು, ಸೂರ್ಯನ ಕುದುರೆ– ಅನಂತಮೂರ್ತಿ ಬರೆದಿರುವ ಇತರ ಘನವಾದ ಕಥೆಗಳು.

ಲಂಕೇಶರದ್ದು ಎಂಥ ಪಿಸುದನಿಯನ್ನೂ ಕೇಳಿಸಬಲ್ಲಂಥ ಸೂಕ್ಷ್ಮ ಗದ್ಯ. ಮನುಷ್ಯನ ಸಣ್ಣತನಗಳನ್ನು ಇವರ ಕಥೆಗಳು ಅನಾವರಣ ಮಾಡುವ ರೀತಿ ದಿಗಿಲು ಹುಟ್ಟಿಸುತ್ತದೆ. ಓದುಗ, " ಇದು ನಾನೇನೆ ? " ಎಂದು ಮತ್ತೆ ಮತ್ತೆ ತನ್ನನ್ನು ತಾನೇ ಪ್ರಶ್ನಿಸಿಕೊಳ್ಳುವಂತೆ ಮಾಡುತ್ತದೆ. ವಸ್ತುಸ್ಥಿತಿಯನ್ನು ಅದು ಇದ್ದಂತೇ ಒದರಿಬಿಡಬೇಕೆಂಬ ಹಠ ಉದ್ದಕ್ಕೂ ಕಂಡುಬರುತ್ತದೆ. ಸತ್ಯವನ್ನು ಪ್ರಿಯವಾಗಿ ಹೇಳುವುದು ಅಸಾಧ್ಯ ಎಂದು ಲಂಕೇಶ್ ದೃಢವಾಗಿ ನಂಬಿರುವ ಹಾಗಿದೆ. ವಾಮನ ನಿವೃತ್ತರು, ರೊಟ್ಟಿ, ಉಮಾಪತಿಯ ಸ್ಕಾಲರ್‌ಷಿಪ್ ಯಾತ್ರೆ, ಮಾರಲಾಗದ ನೆಲ ಮೊದಲಾದವು ಲಂಕೇಶರ ಯಶಸ್ವಿ ಕಥೆಗಳು. ' ರೊಟ್ಟಿ ' ಕಥೆಯಲ್ಲಿ ವಿಲಕ್ಷಣವಾದ ಒಂದು ಪಾಪ ಪ್ರಜ್ಞೆ, ಕಥೆಯ ಭಾವ ಕೇಂದ್ರದಲ್ಲಿದೆ. ಭಿಕ್ಷುಕ ಏಕೆ ರೊಟ್ಟಿಯನ್ನು ಕಿತ್ತುಕೊಳ್ಳುತ್ತಾನೆ ಎನ್ನುವುದು ಕಥೆ ಎತ್ತುತ್ತಿರುವ ನೈತಿಕ ಪ್ರಶ್ನೆಯಾಗಿದೆ. ಭಿಕ್ಷುಕನ ಕೋಪ ಮತ್ತು ನೋವಿನ ಕಾರಣಗಳು ಕಥೆಯಲ್ಲಿ ಅನುಕ್ತವಾಗಿವೆ. ಆ ಅನುಕ್ತವನ್ನು ಕಥೆಯ ಧ್ವನಿಯಿಂದ ಹೊರಡಿಸುವುದೇ ಕಥೆಯ ಉದ್ದೇಶವಾಗಿದೆ.

ಕಥಾರಚನೆ, ಯಶವಂತ ಚಿತ್ತಾಲರಿಗೆ ಜೀವನ್ಮರಣದ ಪ್ರಶ್ನೆಯಷ್ಟು ಗಹನವಾದುದು. ಇವರ ಕಥಾಪ್ರಜ್ಞೆ ಭಾಷೆಯನ್ನು ಕಟ್ಟೆಚ್ಚರದಿಂದ ಬಳಸುತ್ತದೆ. ಇವರ ಕಥಾಶಿಲ್ಪದಲ್ಲಿ ಅಡಿಗರ ಕವಿತೆಯಲ್ಲಿ ಕಾಣುವಂಥ ಸಾವಯವ ಶಿಲ್ಪದ ಸಮಗ್ರೀಕರಣ ಕಂಡುಬರುತ್ತದೆ. ಚಿತ್ತಾಲರ ಸೆರೆ, ಪಯಣ, ಆಟ, ಛಲ – ಒಂದೊಂದೂ ಓದುಗರ ಮನಸ್ಸಿನ ಮೇಲೆ ಲಗ್ಗೆ ಹಾಕುವ ಕಥೆಗಳು. ಅಂತರಂಗದ ನಿಗೂಢಗಳನ್ನು, ಬಾಳಿನ ವಿರೋಧ ವ್ಯಂಗ್ಯವನ್ನು ಚಿತ್ತಾಲರ ಕಥೆಗಳು ಅದ್ಭುತವಾಗಿ ಅನಾವರಣ ಮಾಡುತ್ತವೆ. ವಸ್ತುಸ್ಥಿತಿಯೇ ಇವರ ಕಥೆಗಳಲ್ಲಿ ನಿರಾಯಾಸವಾಗಿ ಸಾಂಕೇತಿಕತೆಯನ್ನು ಪಡೆಯುವುದನ್ನು ನೋಡುತ್ತೇವೆ. ಮನಸ್ಸಿನ ಆಳಕ್ಕೆ ಈ ಕಥೆಗಳು ಪಾತಾಳಗರಡಿ ಹಾಕುವುದರಿಂದ ಚಿತ್ತಾಲರ ಕಥೆಗಳನ್ನು ಓದುವುದೇ ಒಂದು ಅನುಭವ. ' ಕಥೆಯಾದಳು ಹುಡುಗಿ ' ಚಿತ್ತಾಲರ ಅತ್ಯಂತ ಮಹತ್ವದ ಕಥೆ. ಇದರಲ್ಲಿ ಸಾಮಾಜಿಕ ಸಾಹಿತ್ಯ ಸಂದರ್ಭ ಲೇಖಕನ ಮೇಲೆ ತರುವ ಒತ್ತಡ ಹೇಗೆ ಕಥೆಯ ಮೂಲ ಅನುಭವಕ್ಕೆ ತರುತ್ತದೆ ಎಂಬುದನ್ನು ಚಿತ್ತಾಲರು ಚಿತ್ರಿಸಿದ್ದಾರೆ.

ಶಾಂತಿನಾಥ ದೇಸಾಯಿ ನಗರ ಪ್ರಜ್ಞೆಯ ನಮ್ಮ ಮುಖ್ಯ ಲೇಖಕರಾಗಿದ್ದಾರೆ. ಇವರ ಭಾಷೆಗೆ ಕಾವ್ಯದ ಸೂಕ್ಷ್ಮತೆ ಇಲ್ಲ. ಇವರ ಕಥೆಗಳ ಶಿಲ್ಪ ತೀರ ಸಮಗ್ರ ಸ್ವರೂಪದ್ದಲ್ಲ. ಆದರೆ ಮನುಷ್ಯ ಮನುಷ್ಯ ಸಂಬಂಧಗಳನ್ನು ನೈಜನೆಲೆಯಲ್ಲಿ ತೋರಿಸುವುದರಲ್ಲಿ, ಕಾಮದ ವಿಷಯದ ಪೊಳ್ಳುತನಗಳನ್ನು ಹೊರಹಾಕುವುದರಲ್ಲಿ, ಇವರ ಕಥೆಗಳು ತುಂಬ ಗಟ್ಟಿತನವನ್ನು ತೋರಿಸುತ್ತವೆ. ಏನೆಲ್ಲ ಕ್ರಿಯೆಗೂ ತಯಾರಾಗಿ, ಅದರ ಜವಾಬ್ದಾರಿಗಳನ್ನು ನಕ್ಕು ಬಿಡುವ ದೇಸಾಯಿ ಅವರ ಕಥಾನಾಯಕರು ಬೇರೆ ನವ್ಯ ಕಥೆಗಾರರ ನಾಯಕರಿಗಿಂತಾ ಭಿನ್ನರಾಗಿ ತೋರುತ್ತಾರೆ. ' ಕ್ಷಿತಿಜ ' ಕಥೆಯಲ್ಲಿ ಶಾಂತಿನಾಥರು ನಮ್ಮ ಸಾಂಪ್ರದಾಯಿಕ ಗಡಿಗಳನ್ನು ವಿಸ್ತರಿಸುವುದಕ್ಕೆ ನೋಡುತ್ತಾರೆ.

ಈ ಪ್ರಯತ್ನದಲ್ಲಿ ಗಂಡು ಹೆಣ್ಣಿನ ಸಂಬಂಧ ಮುಖ್ಯ ವಿವಕ್ಷೆಗೆ ಬರುತ್ತದೆ. ಕ್ಷಿತಿಜದಲ್ಲಿ ಕಾಣುವ ಸಂಕೀರ್ಣತೆ ಕಥೆಗಾರರ ಪ್ರಬುದ್ಧತೆಯನ್ನು ತೋರಿಸುವಂತಿದೆ. ಭಾರತದ ಹುಡುಗಿ ಮಂದಾಕಿನಿ ಈ ಕಥೆಯ ನಾಯಕಿ. ಇವಳು ಉನ್ನತ ತರಬೇತಿಗಾಗಿ ಇಂಗ್ಲೆಂಡಿಗೆ ಹೊರಟಿದ್ದಾಳೆ. ಹಡಗಿನಲ್ಲಿ ಪ್ರಯಾಣ ಮಾಡುವಾಗ ಹೊಸ ಅನುಭವ ಜಗತ್ತೊಂದನ್ನು ಅವಳು ಎದುರಿಸುತ್ತಾಳೆ. ಆ ಅನುಭವ ಜಗತ್ತಿನಲ್ಲಿ ಒಂದಾಗುವುದು ಅವಳಿಗೆ ಸಾಧ್ಯವಾಗುವುದಿಲ್ಲ. ಆಗ ಮೆಕಾರ್ಥಿ ಎಂಬ ವೃದ್ಧ ಅವಳ ಆಸರೆಗೆ ಬರುತ್ತಾನೆ. ಹೊಸ ಅನುಭವದ ಸ್ವೀಕಾರಕ್ಕೆ ಮಂದಾಕಿನಿ ಸಿದ್ಧಳಾಗುತ್ತಾಳೆ. ಈ ಕಥೆಯ ಸಂಕೇತಯೋಜನೆ ಬೆರಗು ಕವಿಸುವಂತಿದೆ. ಕಥೆಯ ವರ್ಣನಾಂಶಗಳೇ ಸಹಜ ಸಂಕೇತಗಳಾಗಿ ಮಾರ್ಪಟ್ಟು ಕಥೆಯ ಅರ್ಥವಿಸ್ತರಣೆ ಸಾಧಿತವಾಗುತ್ತದೆ.

ಕೆ. ಸದಾಶಿವ ನಮ್ಮ ಇನ್ನೊಬ್ಬ ಮುಖ್ಯ ನವ್ಯ ಕಥೆಗಾರರು. ರಾಮಚಂದ್ರ ಶರ್ಮರಂತೆ ನವ್ಯದ ಆರಂಭದ ಕಥೆಗಾರರು. ಅವರ ಬಹಳಷ್ಟು ಕಥೆಗಳು ಕೌಟುಂಬಿಕ ಬಿಕ್ಕಟ್ಟುಗಳನ್ನು ವಸ್ತುವಾಗಿ ಹೊಂದಿವೆ. ಮೇಲ್ನೋಟಕ್ಕೆ ರೋಮ್ಯಾಂಟಿಕ್ ಎಂಬಂತೆ ಕಾಣುವ ಪ್ರೀತಿ–ಕಾಮ–ಸಂಸಾರದ ಗೋಳಿನ ಸದಾಶಿವರ ವಸ್ತುವಿನ ನವ್ಯತೆ ಇರುವುದು, ಅವರು ಅನುಭವವನ್ನು ಶೋಧಿಸುವ ದೃಷ್ಟಿಯಲ್ಲಿ. ಕಥನವನ್ನು ಕಥೆಗಾರರು ಎಷ್ಟು ಅನ್ಯೋನ್ಯವಾಗಿ ಒಳಗೊಳ್ಳುತ್ತಾರೆಂದರೆ ಅದು ಅವರದ್ದೇ ಕಥೆ ಎಂಬಷ್ಟು. ಅದಕ್ಕಾಗಿಯೇ ಅವರಿಗೆ ಬರೆಯುವುದು ಬಹಳ ನೋವಿನ ಕ್ರಿಯೆಯಾಗಿದೆ. ಹೀಗೆ ಕಥೆಗಳ ಸೃಷ್ಟಿಯಲ್ಲಿ ತಾವೇ ಒಂದಾಗಿ ತೊಡಗಿಯೂ ಆ ಸಂದರ್ಭವನ್ನು ಎಳೆ ಎಳೆಯಾಗಿ ಬಿಡಿಸಿ ನೋಡುತ್ತಾ ಅನುಭವದ ಆಂತರ್ಯವನ್ನು ಶೋಧಿಸುವುದು ಸದಾಶಿವ ಅವರಿಗೆ ಅವರ ಅತ್ಯುತ್ತಮ ಕಥೆಗಳಲ್ಲಿ ಸಾಧ್ಯವಾಗಿದೆ. 'ರಾಮನ ಸವಾರಿ ಸಂತೆಗೆ ಹೋದದ್ದು' ಸದಾಶಿವರ ಮಹತ್ವದ ಕಥೆ. ದಾಂಪತ್ಯದ ವಿಷಮತೆಯ ಪರಿಣಾಮವನ್ನು ಮಕ್ಕಳ ನಿಟ್ಟಿನಿಂದ ನೋಡಿರುವಲ್ಲಿ ಈ ಕಥೆಯ ವೈಶಿಷ್ಟ್ಯವಿದೆ. ನಲ್ಲಿಯಲ್ಲಿ ನೀರು ಬಂತು, ಹಾವು, ಅಪರಿಚಿತರು, ಪೋಸ್ಟಮಾರ್ಟಂ ಮೊದಲಾದವು ಸದಾಶಿವರ ಇತರ ಮುಖ್ಯ ಕಥೆಗಳು.

ಟಿ. ಜಿ. ರಾಘವ, ರಾಘವೇಂದ್ರ ಖಾಸನೀಸ್, ಪೂರ್ಣಚಂದ್ರ ತೇಜಸ್ವಿ, ರಾಜಲಕ್ಷ್ಮಿ ಎನ್. ರಾವ್, ಜಿ. ಎಸ್. ಸದಾಶಿವ ಮೊದಲಾದವರು ಮುಖ್ಯರಾದ ಇತರ ನವ್ಯ ಕತೆಗಾರರು. ತೇಜಸ್ವಿಯವರ ಮಹತ್ವದ ಕಥೆಗಳು ಅವರ 'ಅಬಚೂರಿನ ಪೋಸ್ಟಾಫೀಸಿನಲ್ಲಿ' (೧೯೭೩) ಎಂಬ ಸಂಗ್ರಹದಲ್ಲಿ ಪ್ರಕಟವಾಗಿವೆ. ಆ ಸಂಕಲನದ ಮುನ್ನುಡಿಯಲ್ಲಿ ಅವರು ನವ್ಯ ಮಾರ್ಗದ ಬಗ್ಗೆ ತಮ್ಮ ಆಕ್ಷೇಪವನ್ನು ವ್ಯಕ್ತಪಡಿಸಿ ಹೊಸ ಮಾರ್ಗದ ಅನ್ವೇಷಣೆಯಲ್ಲಿ ತೊಡಗಿದ್ದಾರೆ. ಕಲಾವಿದನ ಪ್ರಜ್ಞೆಯೊಳಗೇ ವಿಕಾಸವಾಗುವ ಅಥವಾ ಕಲಾವಿದನ ಪ್ರಜ್ಞೆಯೇ ಕೇಂದ್ರವಾಗುವ ಅಥವಾ ಸಾಹಿತಿಯೇ ನಾಯಕನಾದ ಆತ್ಮನಿಷ್ಠ ಬರವಣಿಗೆಯನ್ನು ಬಿಟ್ಟುಕೊಟ್ಟು, ಸರಳವಾಗಿ, ನೇರವಾಗಿ, ನೋಡುವ ಕೇವಲ ದೃಷ್ಟಿಕೋನ ಮಾತ್ರವಾಗಿ ಸಾಹಿತಿ ಕಥೆಗಳಲ್ಲಿ ವ್ಯಕ್ತವಾಗುವ ಹೊಸದೊಂದು ಶಿಸ್ತನ್ನು ಕಲಿಯಬೇಕೆಂದು ಅವರು ಬಯಸುತ್ತಾರೆ. ಅವರ ಈ

ಹೊಸಮಾರ್ಗದ ಕೃತಿಗಳು ಪ್ರಿಯವಾದ ಕೃತಿಗಳಾಗಿದ್ದರೂ ನವ್ಯದ ಕಕ್ಷೆಯ ಆಚೆ ಅವು ಇರುವುದರಿಂದ ಅವನ್ನು ಇಲ್ಲಿ ಚರ್ಚೆಗೆ ಎತ್ತಿಕೊಂಡಿಲ್ಲ.

ನವ್ಯ ಮಾರ್ಗದಲ್ಲಿ ಮುಂದೆ ಹೊಸ ಪೀಳಿಗೆಯ ಕೆಲವು ಶಕ್ತ ಲೇಖಕರು ಕಾಣಿಸಿಕೊಂಡಿದ್ದಾರೆ. ಎಸ್. ದಿವಾಕರ, ಜಯಂತ ಕಾಯ್ಕಿಣಿ, ಎ. ಎನ್. ಪ್ರಸನ್ನ, ಆಲನಹಳ್ಳಿ ಕೃಷ್ಣ, ರಾಮಚಂದ್ರ ದೇವ, ವೈದೇಹಿ, ಎಮ್. ಎಸ್. ಶ್ರೀರಾಂ, ಶ್ರೀಧರ ಬಳಗಾರ್, ಮಹಾಬಲಮೂರ್ತಿ ಕೊಡ್ಲೆಕೆರೆ, ಚಿಂತಾಮಣಿ ಕೊಡ್ಲೆಕೆರೆ, ಬಿದರಹಳ್ಳಿ ನರಸಿಂಹ ಮೂರ್ತಿ, ವಿವೇಕ ಶಾನ್ಭಾಗ್, ಬೊಳುವಾರು, ರಾಘವೇಂದ್ರ ಪಾಟೀಲ್, ಟಿ. ಆರ್. ರಾಧಾಕೃಷ್ಣ ಮೊದಲಾದವರು ಪ್ರತ್ಯೇಕ ಚರ್ಚೆಯನ್ನೇ ಒತ್ತಾಯಿಸುವಂಥ ಲೇಖಕರು. ಇವರಲ್ಲಿ ಕೆಲವರು ಶುದ್ಧಾಂಗ ನವ್ಯ ಮಾರ್ಗದ ಲೇಖಕರು ಎನ್ನಬಹುದಾದರೆ ಮತ್ತೆ ಕೆಲವರು ನವ್ಯ ಮಾರ್ಗದಿಂದ ಕಲಿಯಬೇಕಾದದ್ದನ್ನು ಕಲಿತು ನವ್ಯೋತ್ತರದಲ್ಲಿ ಬೆಳೆಯುತ್ತಿರುವ ಲೇಖಕರು. ದಲಿತ ಬಂಡಾಯ ಸಂಪ್ರದಾಯದ ವಿವಕ್ಷೆಯಲ್ಲಿ ಬರುವ ದೇವನೂರು ಮಹಾದೇವ, ಕಾಳೇಗೌಡ ನಾಗವಾರ, ಮೊಗಳ್ಳಿ ಗಣೇಶ, ಅಮರೇಶ ನುಗುಡೋಣಿ, ನವ್ಯದಿಂದ ಕಲಿಯಬೇಕಾದದ್ದು ಕಲಿತು ಈಗ ಯಾವುದೇ ಸಂಪ್ರದಾಯಕ್ಕೂ ಗೌರವ ತರಬಲ್ಲ ಲೇಖಕರಾಗಿ ಬೆಳೆದಿದ್ದಾರೆ.

ನವ್ಯ ಕಥೆಗಳಿಗೆ ಹೋಲಿಸಿದರೆ ನವ್ಯ ಕಾದಂಬರಿಗಳ ಬೆಳೆ ಅಷ್ಟೇನು ಸಮೃದ್ಧವಾದುದಲ್ಲ. ಶಾಂತಿನಾಥ ದೇಸಾಯಿ ಅವರ ' ಮುಕ್ತಿ ' ಕನ್ನಡದಲ್ಲಿ ನವ್ಯ ಕಾದಂಬರೀ ಮಾರ್ಗವನ್ನು ಉದ್ಘಾಟಿಸಿದ ಕೃತಿ. ಶ್ರೀಕಾಂತ, ಮುಕ್ತಿ ಕಾದಂಬರಿಯ ನಾಯಕ. ಅವನ ಬದುಕಿನ ಕ್ರಮಕ್ಕೂ, ಒಪ್ಪಿಕೊಂಡ ಆದರ್ಶಗಳಿಗೂ ನಡುವೆ ದೊಡ್ಡ ಕಂದರ ಇರುವುದು ಅವನ ಸಮಸ್ಯೆಯಾಗಿದೆ. ಕೊನೆಗೆ ಆತ್ಮಹತ್ಯೆ ಮಾಡಿಕೊಳ್ಳುತ್ತಾನೆ. ಶ್ರೀಕಾಂತನನ್ನು ಅವನ ಆದರ್ಶಗಳಿಗಾಗಿ ಮೆಚ್ಚಿಕೊಂಡಿದ್ದ ಗೌರೀಶ ಈಗ ತನ್ನ ಆದರ್ಶಗಳನ್ನು ತಾನೇ ಕಂಡುಕೊಳ್ಳುತ್ತಾನೆ. ಇದೇ ಅವನ ಪಾಲಿನ ಮುಕ್ತಿ. ' ವಿಕ್ಷೇಪ ' ದೇಸಾಯಿ ಅವರ ಎರಡನೇ ನವ್ಯ ಕಾದಂಬರಿ. ನಾಯಕ ರಾಹುಲನ ವಿಕ್ಷಿಪ್ತತೆಯನ್ನು ಈ ಕಾದಂಬರಿ ಚಿತ್ರಿಸುತ್ತಿದೆ. ರಾಹುಲನದು ಎಲ್ಲೂ ನೆಲೆನಿಲ್ಲಲಾರದ ಮನಸ್ಸು. ಉದ್ದಕ್ಕೂ ತ್ರಸ್ತನಾಗಿ ರಾಹುಲ ಪಾಡುಪಡುತ್ತಾನೆ. ತನ್ನ ಸಂಪರ್ಕಕ್ಕೆ ಬಂದವರಿಗೂ ಪಾಡುಪಡಿಸುತ್ತಾನೆ. ಮನುಷ್ಯನ ಹೊರಬಾಳು ಒಳಬಾಳುಗಳನ್ನು ಅದ್ಭುತವಾಗಿ ಕಾದಂಬರಿ ಮುಖಾಮುಖಿಗೊಳಿಸುತ್ತದೆ. ಲಂಕೇಶರ ' ಬಿರುಕು ' ನವ್ಯ ಸಾಹಿತ್ಯ ಸಂದರ್ಭದಲ್ಲಿ ಬಹು ಚರ್ಚಿತವಾದ ಇನ್ನೊಂದು ಕಾದಂಬರಿ. ಇಲ್ಲಿ ಅದ್ಭುತ ರಮ್ಯತೆಯ ತಂತ್ರವನ್ನು ಲೇಖಕರು ಬಳಸಿಕೊಂಡಿದ್ದಾರೆ. ನಾಯಕನ ಸುತ್ತಾ ಆಷಾಢಭೂತಿಗಳೇ ತುಂಬಿಕೊಂಡಿರುವುದನ್ನು ಕಾದಂಬರಿ ಚಿತ್ರಿಸುತ್ತದೆ. ಇವರ ನಡುವೆ ನಾಯಕ ತ್ರಸ್ತನಾಗುತ್ತಾನೆ. ಕಾದಂಬರಿಯಲ್ಲಿ ವಾಸ್ತವ ಮತ್ತು ಭ್ರಮಾಲೋಕಗಳು ಬೆರೆತು ಹೋಗುತ್ತವೆ. ಸ್ವಕೇಂದ್ರಿತ ಮನಸ್ಸಿನ ನಾಯಕ ಎಲ್ಲೆಲ್ಲೂ ದುಷ್ಟತೆಯನ್ನೇ ಕಾಣುತ್ತಾನೆ. ಈ ವಿಷಮತೆ ಅಂತರಂಗದ್ದೋ ಬಹಿರಂಗದ್ದೋ ಎಂಬ ಸೂಕ್ಷ್ಮ ಪ್ರಶ್ನೆಯನ್ನು ಕಾದಂಬರಿ ಓದುಗರ ಮುಂದೆ ನಿಲ್ಲಿಸುತ್ತಿದೆ.

ಸಂಸ್ಕಾರ, ಭಾರತೀಪುರ, ಅವಸ್ಥೆ, ಭವ ಮೊದಲಾದ ಕೃತಿಗಳನ್ನು ಕೊಟ್ಟಿರುವ ಯು. ಆರ್. ಅನಂತಮೂರ್ತಿ ಇನ್ನೊಬ್ಬ ಮುಖ್ಯ ನವ್ಯ ಕಾದಂಬರೀ ಲೇಖಕರು. " ಸಂಸ್ಕಾರದ ಕೇಂದ್ರ ಪಾತ್ರ ಪ್ರಾಣೇಶಾಚಾರ್ಯರು. ಧರ್ಮಶಾಸ್ತ್ರಗಳನ್ನೆಲ್ಲಾ ಬಲ್ಲವರಾಗಿ, ಕಾಯಿಲೆಯಾದ ಹೆಂಡತಿಯನ್ನು ಆದರದಿಂದ ಆರೈಕೆ ಮಾಡಿ ಸೌಂದರ್ಯವೆಲ್ಲಾ ಲಕ್ಷ್ಮೀದೇವಿಯದು, ರತಿಯೆಲ್ಲ ಶ್ರೀಕೃಷ್ಣನದು ಎಂದು ಬಾಳು ನಡೆಸುವ ಪ್ರಾಣೇಶಾಚಾರ್ಯರಿಗೆ ನಿಸ್ಸಂಕೋಚವಾಗಿ ಭೋಗಜೀವನ ನಡೆಸುವ ನಾರಣಪ್ಪ ಪ್ರತಿಸ್ಪರ್ಧಿ. ನಾರಾಣಪ್ಪ ಸತ್ತಾಗ ಅವನ ಶವಸಂಸ್ಕಾರದ ಗೊಂದಲದಲ್ಲಿ ಪ್ರಾಣೇಶಾಚಾರ್ಯರನ್ನು ನಾರಣಪ್ಪನ ಪ್ರೇಯಸಿ ಚಂದ್ರಿ ಸ್ಪರ್ಶಿಸುತ್ತಾಳೆ. ಪ್ರಾಣೇಶಾಚಾರ್ಯರು ದೇಹದ ಸುಖವನ್ನು ಅನುಭವಿಸುತ್ತಾರೆ. ತಾವು ಓದಿನಿಂದ ಪಡೆದಿದ್ದ ಮೌಲ್ಯಗಳ ಮೇಲೆ ಕಟ್ಟಿದ್ದ ಬಾಳು ವಾಸ್ತವದ ಸ್ಪರ್ಶದಿಂದ ಉರುಳಿಬಿದ್ದಾಗ, ಪ್ರಾಣೇಶಾಚಾರ್ಯರು ಹೊಸ ಜೀವನದ ಅನ್ವೇಷಣೆಗೆ ಹೊರಡುತ್ತಾರೆ " (ಎಲ್. ಎಸ್. ಶೇಷಗಿರಿರಾವ್).

ಸಂಸ್ಕಾರದ ಕಲಾತ್ಮಕತೆ ಅನ್ಯಾದೃಶವಾದದ್ದು. ಇಲ್ಲಿ ಕಾದಂಬರಿ, ಕಾವ್ಯದ ಧ್ವನಿಶಕ್ತಿ, ಬಿಗುವು, ಬಂಧ, ದಟ್ಟಣೆಯನ್ನು ಸಾಧಿಸುತ್ತದೆ. ಮನಸ್ಸಿನ ಒಳಗನ್ನಾಗಲೀ ಹೊರಗನ್ನಾಗಲಿ ಕಾದಂಬರಿ ನಿರಾಯಾಸವಾಗಿ ಚಿತ್ರಿಸಬಲ್ಲುದು. ಕಾದಂಬರಿ ಗಟ್ಟಿಯಾದ ಕಥೆ ಹೇಳುವುದರಲ್ಲಿ ತೃಪ್ತಿ ಪಡೆಯುವುದಿಲ್ಲ. ಒಂದು ನೈತಿಕ ಪ್ರಶ್ನೆಗೆ ಕಾದಂಬರಿಯ ಅನುಭವಲೋಕ ಮುಖಾಮುಖಿಯಾಗುತ್ತಿದೆ. ಸ್ವಾನುಭವದ ನೆಲೆಯಲ್ಲಿ ವ್ಯಕ್ತಿ ತನ್ನ ಬದುಕಿನ ಮೌಲ್ಯಗಳನ್ನು ತಾನು ಕಂಡುಕೊಳ್ಳಬೇಕಾಗುತ್ತದೆ. ಸಿದ್ಧ ಮೌಲ್ಯಗಳಾಗಲಿ, ಜೀವನ ಮಾರ್ಗವಾಗಲಿ ಅಧಿಕೃತತೆಯ ಮುದ್ರೆಯನ್ನು ಪಡೆಯಲಾರದು. ನಮ್ಮ ನಮ್ಮ ಸ್ವರ್ಗದ ಅನ್ವೇಷಣೆಯನ್ನೂ ನಾವೇ ಮಾಡಬೇಕಾಗಿದೆ ಎಂಬ ಅಸ್ತಿತ್ವವಾದದ ತತ್ವವನ್ನು ಕಾದಂಬರಿ ಅನುಭವಗ್ರಾಹ್ಯವಾಗಿಸುತ್ತಿದೆ.

ಯಶವಂತ ಚಿತ್ತಾಲರ 'ಶಿಕಾರಿ' ನವ್ಯ ಕಾದಂಬರಿ ಕಂಡ ದಟ್ಟಣೆಯ ಪರಾಕಾಷ್ಠೆ. ಔದ್ಯೋಗಿಕ ಅನುಭವ ಜಗತ್ತಿನ ಚಕ್ರವ್ಯೂಹದ ಉಸುರುಗಟ್ಟಿಸುವ ಚಿತ್ರಣ ಶಿಕಾರಿಯಲ್ಲಿದೆ. ಏಲಿಯನೇಶನ್ನಿನ ಸಮಸ್ಯೆಯನ್ನು ಇಷ್ಟು ದಟ್ಟವಾಗಿ ಕಟ್ಟಿಕೊಡುವ ಇನ್ನೊಂದು ಕೃತಿ ಕನ್ನಡದಲ್ಲಿ ಇಲ್ಲ. ಮನುಷ್ಯನ ಪಕ್ವತೆಯ ಕಡೆಗಿನ ಪಯಣವನ್ನು ನಾವು ಶಿಕಾರಿಯಲ್ಲಿ ನೋಡುತ್ತೇವೆ. ತೊಡಕಾದ ಲೋಕಮಾರ್ಗದಲ್ಲಿಯೇ ಈ ಯಾತನಾಮಯ ಯಾನ ನಡೆಯಬೇಕಾಗಿರುವುದರಿಂದ ಸಮಾಜದ ಜಟಿಲ ಸ್ವರೂಪವನ್ನೂ ಕಾದಂಬರಿ ಚಿತ್ರಿಸುತ್ತಾ ಹೋಗುತ್ತದೆ. ಒಬ್ಬನಿಗೆ ಇನ್ನೊಬ್ಬ ವ್ಯಕ್ತಿ ಏರುವ ಏಣಿಯಾಗಿ ಪರಿಣಮಿಸುವ ದುರಂತ ಶಿಕಾರಿಯಲ್ಲಿ ಕಣ್ಣಿಗೆ ಕಟ್ಟುವಂತೆ ನಿರೂಪಿತವಾಗಿದೆ. ಆಧುನಿಕ ಸಮಾಜದ ಜಟಿಲತೆ, " ಗಂಡುಸಾದರೆ ನಿನ್ನ ಬಲಿಕೊಡುವೆಯೇನು ? " ಎಂದು ನಾಗಪ್ಪನಿಗೆ ಸವಾಲೊಡ್ಡುತ್ತಿದೆ. ಅಭಿನವ ಅಭಿಮನ್ಯುವಿನಂತೆ ಕಾಣುವ ನಾಗಪ್ಪ ಚಕ್ರವ್ಯೂಹದ ಸಮಸ್ಯೆಯನ್ನು ಜೀವವನ್ನು

ಪಣವಾಗಿ ಒಡ್ಡಿ ಮತ್ತೆ ಎದುರಿಸಬೇಕಾಗಿ ಬಂದುದು ಪ್ರತೀಕಗಳ ಅವತರಣದ ಛಲವನ್ನು ನಮಗೆ ತೋರಿಸಿಕೊಡುವಂತಿದೆ.

ಕುಸುಮಾಕರ ದೇವರಗಣ್ಣೂರರ ಮುಗಿಯದ ಕಥೆ, ನಾಲ್ಕನೆಯ ಆಯಾಮ, ತೇಜಸ್ವಿಯವರ ಸ್ವರೂಪ, ರಾಮಾನುಜನ್ನರ ಅನುವಾದ ಹಳದಿ ಮೀನು, ಗಿರಿಯವರ ಗತಿ ಸ್ಥಿತಿ, ಶ್ರೀಕೃಷ್ಣ ಆಲನಹಳ್ಳಿಯವರ ಕಾಡು, ಶಂಕರ ಮೊಖಾಶಿಯವರ ಗಂಗವ್ವ ಗಂಗಾಮಾಯಿ ಮುಖ್ಯವಾದ ಇತರ ನವ್ಯ ಕಾದಂಬರಿಗಳಾಗಿವೆ.

## ನಾಟಕದಲ್ಲಿ ನವ್ಯತೆ :

ಗಿರೀಶ ಕಾರ್ನಾಡ, ಪಿ. ಲಂಕೇಶ್, ಚಂದ್ರಶೇಖರ ಕಂಬಾರ, ಚಂದ್ರಶೇಖರ ಪಾಟೀಲ –ನವ್ಯನಾಟಕ ಕ್ಷೇತ್ರದಲ್ಲಿ ಮೊದಲ ಪಂಕ್ತಿಯಲ್ಲಿ ನಿಲ್ಲುವ ನಾಟಕಕಾರರು. ಇವರಲ್ಲಿ ಶುದ್ಧಾಂಗ ನಾಟಕಕಾರರಾಗಿಯೆ ಹೆಸರು ಮಾಡಿರುವವರು ಗಿರೀಶ ಕಾರ್ನಾಡರು. ಉಳಿದವರು ಕವಿಗಳಾಗಿ, ಕಥೆಗಾರರಾಗಿ ಹೆಸರು ಮಾಡಿ ಆಮೇಲೆ ನಾಟಕಕಾರರಾಗಿಯೂ ಸಾಧನೆ ಮಾಡಿದವರು. ಇವರೊಂದಿಗೆ ಒಂದೆರಡು ನಾಟಕ ಬರೆದೂ ಶಕ್ತ ನವ್ಯ ನಾಟಕಕಾರರೆಂದು ಹೆಸರಾಗಿರುವ ಜಿ. ಬಿ. ಜೋಷಿ, ಕೀರ್ತಿನಾಥ ಕುರ್ತಕೋಟಿ, ಕುಸನೂರರಂಥ ಲೇಖಕರೂ ಇದ್ದಾರೆ. ಅನುವಾದದ ಮೂಲಕ ಮೊದಲ ಅಸಂಗತ ನಾಟಕ ತಂದವರೆಂಬ ಕಾರಣಕ್ಕೆ ಸುಮತೀಂದ್ರ ನಾಡಿಗರ ಹೆಸರನ್ನೂ ಇಲ್ಲಿ ಉಲ್ಲೇಖಿಸಬೇಕಾಗಿದೆ. ಮುಂದೆ ಅಸಂಗತ ನಾಟಕ ರಚನೆಗೆ ವಿಶೇಷವಾಗಿ ಮನಸ್ಸು ಕೊಟ್ಟವರು ಚಂದ್ರಕಾಂತ ಕುಸನೂರ.

ತುಘಲಕ್, ಯಯಾತಿ, ಹಯವದನ, ನಾಗಮಂಡಲ, ಅಗ್ನಿ ಮತ್ತು ಮಳೆ ಮುಂತಾದ ನಾಟಕಗಳಿಂದ ಅಂತಾರಾಷ್ಟ್ರೀಯ ಖ್ಯಾತಿ ಗಳಿಸಿರುವವರು ಗಿರೀಶ ಕಾರ್ನಾಡರು. ಅವರ ಯಯಾತಿ ಪ್ರಕಟವಾದದ್ದು ೧೯೬೧ ರಲ್ಲಿ. ಕಾವ್ಯದಲ್ಲಿ, ಕಥೆಯಲ್ಲಿ, ಕಾದಂಬರಿಯಲ್ಲಿ ನವ್ಯತೆಯು ರೂಪಗೊಳ್ಳುತ್ತಿದ್ದ ಕಾಲವದು. ಕಾರ್ನಾಡರ ಯಯಾತಿಯ ಮೂಲಕ ನವ್ಯತೆ ನಾಟಕದಲ್ಲೂ ಕಾಣಿಸಿಕೊಂಡಿತು. ಯಯಾತಿಯಲ್ಲಿ ಪೌರಾಣಿಕ ವಸ್ತುವನ್ನು ಕಾರ್ನಾಡರು ಬಳಸಿಕೊಂಡಿದ್ದಾರೆ. ವಸ್ತು ಪೌರಾಣಿಕವಾದರೂ ನಾಟಕ ಆಧುನಿಕವಾಗಿದೆ. ಕಾರಣ, ನವ್ಯತೆ ಎಂಬುದು ವಸ್ತುವಿಗೆ ಸಂಬಂಧಿಸಿದ್ದಲ್ಲ; ವಸ್ತುವಿನ ನಿರ್ವಹಣೆಗೆ ಸಂಬಂಧಿಸಿದ್ದು.

'ಯಯಾತಿ', ಮುಪ್ಪು ಮತ್ತು ಯೌವನಗಳು ವಯೋಮಾನದ ಸ್ಥಿತಿಗಳು ಎಂದು ಮಾತ್ರ ಗ್ರಹಿಸದೆ ವಯೋಮಾನದ ಆ ಸ್ಥಿತಿಗಳಿಗೆ ತಗುಲಿಕೊಳ್ಳುವ ಜವಾಬ್ದಾರಿಗಳನ್ನು ಕುರಿತು ಚರ್ಚಿಸುತ್ತದೆ. ಯಯಾತಿ ಮತ್ತು ಪುರು, ಮುಪ್ಪು ಮತ್ತು ಯೌವನಗಳನ್ನು ಅದಲು ಬದಲು ಮಾಡಿಕೊಳ್ಳುವುದರಿಂದ ಉಂಟಾಗುವ ಧರ್ಮ ಸೂಕ್ಷ್ಮಗಳನ್ನು ನಾಟಕ ನೋಟಕರು ಅವಾಕ್ಕಾಗುವಂತೆ ತನ್ನ ಸ್ವಧರ್ಮದಲ್ಲೇ ನಿಂತು ಪರೀಕ್ಷೆಗೆ ಒಳಪಡಿಸುತ್ತದೆ.

ತುಘಲಕ್ ಇತಿಹಾಸದಿಂದ ತನ್ನ ವಸ್ತುವನ್ನು ತೆಗೆದುಕೊಂಡಿದೆ. ಇತಿಹಾಸ ಪುರುಷನಾದ ತುಘಲಕ್ ನಾಟಕದಲ್ಲಿ ನಮ್ಮ ಮಧ್ಯದಿಂದಲೇ ಬೆಳೆದು ನಿಲ್ಲುತ್ತಾನೆ. ವಿಕ್ಷಿಪ್ತ ಮನಸ್ಸಿನ ಈ ನಾಯಕ ಅದಮ್ಯ ಕನಸುಗಾರ. ಆದರೆ ಜಾಗೃತ ಪ್ರಪಂಚಕ್ಕೂ ನಾಯಕ ಕರೆಯುತ್ತಿರುವ ಕನಸಿನ ಪ್ರಪಂಚಕ್ಕೂ ಅಜಗಜಾಂತರ ವ್ಯತ್ಯಾಸವಿದೆ. ಇದು ನಾಟಕದ ಕರ್ಷಣೆಗೆ ಮೂಲವಾಗುತ್ತದೆ. ಕನಸು ತಾನಾಗಿ ಒಲಿಯದಿದ್ದಾಗ ಹಿಂಸೆ ಅನಿವಾರ್ಯವಾಗುತ್ತದೆ. ಇಡೀ ವಾತಾವರಣ ಕ್ಷುದ್ರತೆಯ ನೆಲೆಯಲ್ಲೇ ಇದಿರುಬೀಳುವುದು ನಾಟಕ ಕಾಣಿಸುವ ಕಾಮಿಕ್ ಐರನಿಯಾಗಿದೆ. ಇದು ಕೊನೆಗೆ ತುಘಲಕ್ ಅನುಭವಿಸುವ ವಿಫಲತೆಯ ದಾರುಣ ಭಾವಕ್ಕೆ ಎಡೆಮಾಡಿಕೊಡುತ್ತದೆ.

ಕಾರ್ನಾಡರ 'ಹಯವದನ' ಮನುಷ್ಯನ ಅಪೂರ್ಣತೆಯ ಸಮಸ್ಯೆಯನ್ನು ಎತ್ತಿಕೊಂಡಿದೆ. 'ನಾಗ ಮಂಡಲ' ಕಾಮ ಮತ್ತು ಹಿಂಸೆಗಳ ಇಜ್ಜೋಡನ್ನು ಚಿಂತಿಸುತ್ತದೆ. ಇತ್ತೀಚಿನ 'ಅಗ್ನಿ ಮತ್ತು ಮಳೆ'. ನರಹಳ್ಳಿ ಗುರುತಿಸುವಂತೆ, ಬೌದ್ಧಿಕ ದುರಹಂಕಾರ ಹಾಗೂ ಮುಗ್ಧ ಜೀವನಪ್ರೀತಿಯ ಮುಖಾಮುಖಿಯ ದರ್ಶನವನ್ನು ಕಟ್ಟಿಕೊಡುವ ಮೂಲಕ ನಮ್ಮ ಮನಸ್ಸನ್ನು ತಲ್ಲಣಗೊಳಿಸುತ್ತದೆ.

ಸಮಕಾಲೀನ ಸಾಮಾಜಿಕ ಸಂದರ್ಭಗಳನ್ನು ತೆಗೆದುಕೊಂಡು ಲಂಕೇಶರು ಬರೆದಿರುವ ಏಕಾಂಕಗಳು ವ್ಯಕ್ತಿಯ ಪೊಳ್ಳುತನವನ್ನು ಬಯಲುಗೊಳಿಸುವಲ್ಲಿ ವ್ಯಗ್ರವಾಗಿ ತೊಡಗಿಸಿಕೊಳ್ಳುತ್ತವೆ. ಇವನ್ನು ಕುಪಿತ ಯುವಕ ನಾಟಕಗಳು ಎಂದು ಗುರುತಿಸಲಾಗಿದೆ. ಕ್ರಾಂತಿ ಬಂತು ಕ್ರಾಂತಿ. ಗಿಳಿಯು ಪಂಜರದೊಳಿಲ್ಲ, ಪೋಲೀಸರಿದ್ದಾರೆ ಎಚ್ಚರಿಕೆ ಮೊದಲಾದ ನಾಟಕಗಳು ತಮ್ಮ ಸಂಭಾಷಣೆಯ ಸತ್ವ, ಮನಸ್ಸಿನ ಒಳಗನ್ನು ಹೊರಹಾಕುವ ಸೂಕ್ಷ್ಮ. ವ್ಯವಸ್ಥೆಯನ್ನು ಗುಮ್ಮುವ ಧಾರ್ಷ್ಟ್ಯದಿಂದ ಗೆಲುವು ಸಾಧಿಸುತ್ತವೆ. ಲಂಕೇಶರ ಮಹತ್ವಾಕಾಂಕ್ಷೆಯ ನಾಟಕ: ಸಂಕ್ರಾಂತಿ, ಎಲ್. ಎಸ್. ಶೇಷಗಿರಿ ರಾಯರು ಗುರುತಿಸಿರುವಂತೆ– "ಈ ನಾಟಕವು ಎಂಟುನೂರು ವರ್ಷಗಳ ಹಿಂದಿನ ಮಹತ್ವದ ಸಾಮಾಜಿಕ ಘಟನೆಯನ್ನು ವಿಶ್ಲೇಷಿಸುತ್ತಲೇ ಎಲ್ಲ ಕಾಲದ ವ್ಯವಸ್ಥೆಯ ಸ್ವರೂಪ, ಸಾಮಾಜಿಕ ಸುಧಾರಣೆಯ ವೈಫಲ್ಯಕ್ಕೆ ಕಾರಣಗಳು– ಇವನ್ನು ವಿಶ್ಲೇಷಿಸುತ್ತದೆ. ಸಾಮಾಜಿಕ ಸುಧಾರಣೆಯನ್ನು ಮಾಡಬಯಸುವವರನ್ನು ವ್ಯವಸ್ಥೆಯು ಎಷ್ಟು ಜಾಣ್ಮೆಯಿಂದ ಬಳಸಿಕೊಳ್ಳಬಲ್ಲದು ಎನ್ನುವುದು ಬಿಜ್ಜಳನು ಬಸವಣ್ಣನವರನ್ನು ಮಂತ್ರಿಯಾಗಿ ಉಳಿಸಿಕೊಂಡು ಬಳಸಿಕೊಳ್ಳುವ ವಿಧಾನದಲ್ಲಿ ಸ್ಪಷ್ಟವಾಗುತ್ತದೆ." ಗುಣ ಮುಖ, ಲಂಕೇಶರ ಇತ್ತೀಚಿನ ನಾಟಕ. ರೋಗಗ್ರಸ್ತ ಸಮಾಜದ ಚಿಕಿತ್ಸೆಯನ್ನು ವಿಷಾದದ ನೆಲೆಯಲ್ಲಿ ಈ ನಾಟಕ ಪರ್ಯಾಲೋಚಿಸುತ್ತಿದೆ.

ನವ್ಯ ರಂಗಭೂಮಿಯ ಇನ್ನೊಂದು ಮುಖ್ಯ ಹೆಸರು – ಚಂದ್ರಶೇಖರ ಕಂಬಾರ. ಋಷ್ಯಶೃಂಗ, ಜೋಕುಮಾರ ಸ್ವಾಮಿ, ಹುಲಿಯ ನೆರಳು ಇವರ ಮುಖ್ಯ ನಾಟಕಗಳು. "ಋಷ್ಯಶೃಂಗದ ವಸ್ತು ಆತ್ಮಶೋಧನೆ. ನಾಯಕ ತಾನು ಯಾರು ಎಂದು ಕೇಳಿಕೊಳ್ಳುತ್ತಿದ್ದಾನೆ, ಕಂಡುಕೊಳ್ಳಲು ಹೆಣಗುತ್ತಿದ್ದಾನೆ. ಸೂತ್ರಧಾರ ನಿನ್ನ

ನಾಮಾಂಕಿತವೇನು ? ನೀನು ಯಾರು ? ಎಂದು ಕೇಳಿದರೆ ಉತ್ತರ ಹೇಳುವುದಿಲ್ಲ. ದುಷ್ಟತನವು ನಿರ್ಜೀವಗೊಳಿಸಿದ ಭೂಮಿಯಲ್ಲಿ ಮತ್ತೆ ಜೀವ ಅರಳುವ ಹಂಬಲ, ಅದರ ವೈಫಲ್ಯ ಋಷ್ಯಶೃಂಗದಲ್ಲಿ ರೂಪದಾಳಿದೆ '' (ಎಲ್. ಎಸ್. ಶೇಷಗಿರಿರಾವ್).

ನಪುಂಸಕನಾದ ಊರ ಗೌಡ, ಗೌಡಿತಿ, ಮತ್ತು ಉಳುಮೆದಾರ ಬಸಣ್ಣ – ಈ ಮೂವರ ಸುತ್ತ 'ಜೋಕುಮಾರ ಸ್ವಾಮಿ' ನಾಟಕ ಪರಿಭ್ರಮಿಸುತ್ತದೆ. ಮಕ್ಕಳಿಲ್ಲದವರಿಗೆ ಮಕ್ಕಳನ್ನು ಕೊಡುವ ದೈವ ಜೋಕುಮಾರಸ್ವಾಮಿ. ಮಕ್ಕಳಿಲ್ಲದ ಗೌಡಿತಿ ಜೋಕುಮಾರಸ್ವಾಮಿಯ ಆರಾಧನೆ ಮಾಡಿ, ಪ್ರಸಾದವನ್ನು ಗೌಡನಿಗೆ ಕೊಡಲು ಹೊಲಕ್ಕೆ ಬಂದು ಬಸ್ಯಾನನ್ನು ಸೇರುತ್ತಾಳೆ, ಫಲವತಿಯಾಗುತ್ತಾಳೆ. ಗೌಡ ಬಸ್ಯಾನನ್ನು ಕೊಲೆ ಮಾಡಿಸುತ್ತಾನೆ. ಬಸ್ಯಾನ ಮಗುವನ್ನು ಗರ್ಭದಲ್ಲಿ ಧರಿಸಿದ್ದ ಗೌಡಿತಿ ಗೌಡನಿಂದ ಪಾರಾಗಿ ಉಳಿಯುತ್ತಾಳೆ. ನಾಟಕವು ಸಹಜವಾಗಿಯೇ ಸಾಂಕೇತಿಕ ಅರ್ಥವನ್ನು ಸಾಧಿಸುತ್ತದೆ. ನಾಟಕದಲ್ಲಿ ನಾವು ನೋಡುವುದು ಸೃಷ್ಟಿ ಸಫಲಗೊಳ್ಳುವ ಆರಾಧನೆಯನ್ನು.

ಚಂದ್ರಶೇಖರ ಪಾಟೀಲರ ನಾಟಕಗಳು ಪ್ರಹಸನದ ಧಾಟಿಯನ್ನು ಜೀವನಶೋಧನೆಯ ಗಹನ ಉದ್ದೇಶಕ್ಕೆ ತೊಡಗಿಸುತ್ತವೆ. ಅವರ 'ಅಪ್ಪ' ನಾಟಕದಲ್ಲಿ ಗುಪ್ತಗಾಮಿನಿಯಾಗಿರುವ ವಿಷಾದವನ್ನು ಅಲಕ್ಷಿಸುವಂತಿಲ್ಲ. ಕೊಡೆಗಳು, ಗುರ್ತಿನವರು, ಟಿಂಗರ ಬುಡ್ಡಣ್ಣ ಪಾಟೀಲರ ಇತರ ಮುಖ್ಯ ನಾಟಕಗಳು. ಟಿಂಗರ ಬುಡ್ಡಣ್ಣ, ಅವಿವೇಕಿಗಳಿಗೆ ಘಾತಕವಾದ ಶಕ್ತಿ ದೊರೆತಾಗ ಆಗಬಹುದಾದ ಉತ್ಪಾತಗಳನ್ನು, ಕೊನೆಗೆ ಹೇಗೆ ಅದು ಆತ್ಮಘಾತಕವೂ ಆಗಬಲ್ಲದು ಎಂಬುದನ್ನು ಹಾಸ್ಯದ ಮರೆಯಲ್ಲಿ ಸ್ಫೋಟಿಸುವ ನಾಟಕವಾಗಿದೆ. ಪಾಟೀಲರ ಸಹಜ ಶಕ್ತಿಯಾದ ವ್ಯಂಗ್ಯ, ಶಬ್ದಗಳನ್ನು ತನ್ನ ಅಗತ್ಯಕ್ಕೆ ತಕ್ಕಂತೆ ಮಣಿಸಿಕೊಳ್ಳಬಲ್ಲ ವಿಲಕ್ಷಣ ಶಕ್ತಿ, ಚುಚ್ಚುಹಾಸ್ಯ ಅವರ ನಾಟಕಗಳಿಗೆ ಉಕ್ಕುವ ಜೀವಂತಿಕೆ ನೀಡುತ್ತವೆ.

ತೇಜಸ್ವಿಯವರ ಯಮಳ ಪ್ರಶ್ನೆ, ಎಚ್. ಎಂ. ಚೆನ್ನಯ್ಯನವರ ಎಲ್ಲರಂಥವನಲ್ಲ ನನ ಗಂಡ, ರತ್ನ ಅವರ ಬೊಂತೆ, ಅನಂತಮೂರ್ತಿಯವರ ಆವಾಹನೆ – ಇತರ ಮುಖ್ಯ ನವ್ಯ ನಾಟಕಗಳು.

ನವ್ಯಸಾಹಿತ್ಯವು ನವ್ಯವಿಮರ್ಶೆಯನ್ನೂ ತನ್ನೊಟ್ಟಿಗೇ ರೂಪಿಸಿಕೊಂಡಿತು. ಗೋಪಾಲಕೃಷ್ಣ ಅಡಿಗರು 'ನಡೆದು ಬಂದ ದಾರಿ' ಸಂಗ್ರಹಕ್ಕೆ ಬರೆದ ವಿಮರ್ಶೆಯಲ್ಲಿ ಅದು ತನ್ನ ಮೊದಲ ಹೆಜ್ಜೆಯನ್ನು ಗುರುತಿಸಿಕೊಂಡಿತು. ಅದೇ ಸರಿಸುಮಾರಿಗೆ ಗೋಕಾಕರೂ ನವ್ಯಸಾಹಿತ್ಯದ ತಮ್ಮದೇ ಆದ ಮೀಮಾಂಸೆ, ವಿಮರ್ಶೆಯ ಸ್ವರೂಪವನ್ನು ಗುರುತಿಸಿಕೊಳ್ಳತೊಡಗಿದ್ದರು. ನವ್ಯ ವಿಮರ್ಶೆ ಸಹಜವಾಗಿಯೇ ಪಾಶ್ಚಾತ್ಯ ವಿಮರ್ಶೆಯಿಂದ ಪ್ರಭಾವಿತವಾಗಿದೆ. ಡಿ. ಎಚ್. ಲಾರೆನ್ಸ್, ಎಫ್. ಆರ್. ಲೀವಿಸ್, ಕ್ಲಿಯಾಂತ್ ಬ್ರೂಕ್ಸ್, ಐ. ಎ. ರಿಚರ್ಡ್ಸ್, ಟಿ. ಎಸ್. ಎಲಿಯಟ್, ಎಜ್ರಾ ಪೌಂಡ್ ಮೊದಲಾದವರು ನವ್ಯ ವಿಮರ್ಶಾ ಚಿಂತನೆಯ ಹಿಂದೆ ಇದ್ದಾರೆ.

ನವ್ಯ ವಿಮರ್ಶೆ, ವಿಮರ್ಶೆಯನ್ನು ವ್ಯಕ್ತಿಕೇಂದ್ರಿತ ನೆಲೆಯಿಂದ ಕೃತಿ ಕೇಂದ್ರಿತ ನೆಲೆಗೆ ವರ್ಗಾಂತರಿಸಿತು. ಅದು ಕೃತಿಯ ಭಾಷೆ, ಲಯ, ವಿನ್ಯಾಸಗಳನ್ನು ಎಷ್ಟು ಅರ್ಥಪೂರ್ಣವಾಗಿ(ಎಷ್ಟು ಆಕರ್ಷಕವಾಗಿ ಅಲ್ಲ) ಬಳಸಿಕೊಳ್ಳಲಾಗಿದೆ ಎಂಬುದನ್ನು ತನ್ನ ಕೃತಿ ಪರೀಕ್ಷೆಯಲ್ಲಿ ಕಟ್ಟೆಚ್ಚರದಿಂದ ನೋಡತೊಡಗಿತು. ಕೃತಿಯ ಶಿಲ್ಪಕ್ಕೆ ಹೆಚ್ಚಿನ ಒತ್ತು ಕೊಟ್ಟಿತು. ವಿಶೇಷವಾದ ಸತ್ಯ ನಿಷ್ಠುರತೆಯನ್ನು ವ್ರತದಂತೆ ರೂಢಿಸಿತು. ಭಾವಾವೇಶವನ್ನು ಉಚ್ಚಾಟಿಸಿ ಸಂಯಮವನ್ನು ರೂಢಿಸಿತು. ಹರಿತವಾದ ವಾಗ್ವಾದಗಳಲ್ಲಿ ಆಸಕ್ತಿ ವಹಿಸಿತು. ಕೃತಿಯ ಮೌಲ್ಯಮಾಪನದಲ್ಲಿ ಆಸಕ್ತಿ ತೋರಿಸಿತು. ಸಂಕೀರ್ಣತೆ, ಸಮಗ್ರತೆ, ಅನುಭವ ಪ್ರಾಮಾಣ್ಯ, ಅಧಿಕೃತತೆ, ಸತ್ಯಶೋಧನೆ, ಅಂತರಂಗದ ಅಭಿವ್ಯಕ್ತಿ, ಪ್ರತಿಮಾನಿಷ್ಠತೆ ಮತ್ತು ಮೌಲ್ಯಶೋಧನೆ ನವ್ಯವಿಮರ್ಶಕರಿಗೆ ಕೃತಿಯ ಘನತೆಯನ್ನು ಕಂಡುಕೊಳ್ಳುವಲ್ಲಿ ಮುಖ್ಯ ಅಂಶಗಳಾಗಿ ಪರಿಣಮಿಸಿದವು.

ಕೀರ್ತಿನಾಥ ಕುರ್ತಕೋಟಿ, ಜಿ. ಎಸ್. ಆಮೂರ, ಯು. ಆರ್. ಅನಂತಮೂರ್ತಿ, ಪಿ. ಲಂಕೇಶ್, ಎಂ. ಜಿ. ಕೃಷ್ಣಮೂರ್ತಿ, ಗಿರಡ್ಡಿ ಗೋವಿಂದರಾಜ, ಜಿ. ಎಚ್. ನಾಯಕ್, ಜಿ. ಎನ್. ರಂಗನಾಥರಾವ್, ಸುಮತೀಂದ್ರ ನಾಡಿಗ್, ಸಿ. ಎನ್. ರಾಮಚಂದ್ರನ್, ಎನ್. ಎಸ್. ಲಕ್ಷ್ಮೀನಾರಾಯಣ ಭಟ್ಟ, ದೇಶ ಕುಲಕರ್ಣಿ, ರಾಮಚಂದ್ರ ದೇವ ಮೊದಲಾದವರು ನವ್ಯ ವಿಮರ್ಶೆಯನ್ನು ಘನವಾದ ನೆಲೆಗೆ ಬೆಳೆಸಿದರು. ಯುಗಧರ್ಮ ಹಾಗೂ ಸಾಹಿತ್ಯ ದರ್ಶನ (ಕೀರ್ತಿನಾಥ ಕುರ್ತಕೋಟಿ), ಪ್ರಜ್ಞೆ ಮತ್ತು ಪರಿಸರ (ಅನಂತಮೂರ್ತಿ), ಆಧುನಿಕ ಭಾರತೀಯ ಸಾಹಿತ್ಯ (ಎಂ. ಜಿ. ಕೃಷ್ಣಮೂರ್ತಿ), ಸಮಕಾಲೀನ (ಜಿ. ಎಚ್. ನಾಯಕ), ಸಣ್ಣಕಥೆಯ ಹೊಸ ಒಲವುಗಳು (ಗಿರಡ್ಡಿ ಗೋವಿಂದರಾಜ) ಇವು ನವ್ಯ ವಿಮರ್ಶೆಯ ಮೌಲಿಕ ಕೃತಿಗಳು. ಬೆಂಗಳೂರು ವಿಶ್ವವಿದ್ಯಾಲಯದ ಕನ್ನಡ ಅಧ್ಯಯನ ಕೇಂದ್ರ, ಜಿ. ಎಸ್. ಶಿವರುದ್ರಪ್ಪನವರ ನೇತೃತ್ವದಲ್ಲಿ, ನಡೆಸುತ್ತಿದ್ದ ವಿಚಾರ ಸಂಕಿರಣಗಳು. ಅಡಿಗರ ಸಂಪಾದಕತ್ವದಲ್ಲಿ ಬರುತ್ತಿದ್ದ ಸಾಕ್ಷಿ (ಸಾಹಿತ್ಯ ಪತ್ರಿಕೆ), ಚಂದ್ರಶೇಖರ ಪಾಟೀಲ, ಗಿರಡ್ಡಿ ಗೋವಿಂದರಾಜ, ಸಿದ್ಧಲಿಂಗ ಪಟ್ಟಣಶೆಟ್ಟಿ ಹೊರತರುತ್ತಿದ್ದ ಸಂಕ್ರಮಣ (ಸಾಹಿತ್ಯ ಪತ್ರಿಕೆ), ನವ್ಯ ವಿಮರ್ಶೆಯನ್ನು ಬೆಳೆಸುವಲ್ಲಿ ಮಹತ್ವದ ಪಾತ್ರ ವಹಿಸಿದ್ದವು.

ಕಾವ್ಯ, ನಾಟಕ, ಸಣ್ಣಕಥೆ, ಕಾದಂಬರಿ, ವಿಮರ್ಶೆ – ಈ ಎಲ್ಲ ವಿಭಾಗಗಳಲ್ಲೂ ಅನನ್ಯವಾದ, ಘನವಾದ ಕೃತಿಗಳನ್ನು ನೀಡಿದ್ದು ನವ್ಯ ಸಾಹಿತ್ಯದ ಹೆಚ್ಚಳವಾಗಿದೆ. ಕೃತಿ ಮತ್ತು ವಿಮರ್ಶೆ ಒಂದನ್ನೊಂದು ಕೆಣಕುತ್ತಾ, ಚೋದಿಸುತ್ತಾ ಎತ್ತರಕ್ಕೆ ಬೆಳೆದದ್ದು ನವ್ಯ ಸಾಹಿತ್ಯ ಸಂದರ್ಭದ ಮಹತ್ವದ ಸಂಗತಿಯಾಗಿ ಕಾಣುತ್ತದೆ. ಈ ಅರ್ಥದಲ್ಲೂ ನವ್ಯ ಸಾಹಿತ್ಯ ಭಾವ ಬುದ್ಧಿಗಳ ಎರಕವೇ ಸರಿ. ನವ್ಯ ಸಾಹಿತ್ಯವನ್ನು ನವ್ಯೋತ್ತರ ಸಂದರ್ಭದಲ್ಲಿ ಸಮಾಜನಿಷ್ಠ ಕೃತಿಗಳು ಸ್ಥಳಾಂತರಿಸಿದಾಗಲೂ, ಅವು ನವ್ಯ ಸಾಹಿತ್ಯದಿಂದ ಕಲಿಯಬೇಕಾದ ಅನೇಕ ಸಂಗತಿಗಳನ್ನು ಕಲಿತೇ ಮುಂದುವರಿಯುತ್ತಿವೆ ಎಂಬುದನ್ನೂ ಯಾರೂ ಮರೆಯುವಂತಿಲ್ಲ.

• • •

# ಕನ್ನಡ ದಲಿತ ಸಾಹಿತ್ಯ ಘಟ್ಟ

ಡಾ. ಜಿ. ಆರ್. ತಿಪ್ಪೇಸ್ವಾಮಿ

# ಕನ್ನಡ ದಲಿತ ಸಾಹಿತ್ಯ ಘಟ್ಟ

ಸುಮಾರು ೧೯೫೦ ರ ದಶಕದಲ್ಲಿ ಕನ್ನಡ ಸಾಹಿತ್ಯದಲ್ಲಿ ನವೋದಯ ಮತ್ತು ಪ್ರಗತಿಶೀಲಕ್ಕಿಂತ ಭಿನ್ನವಾದ ಹೊಸಗಾಳಿ ಬೀಸಲಾರಂಭಿಸಿತು. ೧೯೪೭ ರಲ್ಲಿ ದೇಶಕ್ಕೆ ಸ್ವಾತಂತ್ರ್ಯವೇನೋ ಬಂದಿತು. ಜನರಲ್ಲಿ ದೇಶದ ದಾರಿದ್ರ್ಯ, ಅಜ್ಞಾನ, ಕಷ್ಟಗಳೆಲ್ಲ ಸ್ವಾತಂತ್ರ್ಯ ಬಂದ ಕೂಡಲೆ ನಿವಾರಣೆಯಾಗುತ್ತವೆ ಎಂಬ ವಿಶ್ವಾಸವಿತ್ತು. ಆದರೆ ಆ ವಿಶ್ವಾಸದ ಕನಸು ನನಸಾಗದೆ ಭಗ್ನವಾಗತೊಡಗಿತು. ಹೋರಾಟದ ಕಾಲದ ತ್ಯಾಗ – ಔದಾರ್ಯಗಳೆಂಬ ಮೌಲ್ಯಗಳು ಮೂಲೆಗುಂಪಾದವು. ಸ್ವಾರ್ಥ ಮೇಲಾಯಿತು. ಜಾತಿಭೇದ, ವರ್ಗಭೇದದ ಕಂದರಗಳು ಇನ್ನೂ ಹಿರಿದಾದವು. ಸತ್ಯ-ಅಹಿಂಸೆ. ತ್ಯಾಗ – ಬಲಿದಾನಗಳೆಂಬ ಮಾತುಗಳು ಸವಕಲಾಗಿ ಪರಿಹಾಸ್ಯಕ್ಕೆ ಗುರಿಯಾದವು. ವ್ಯಕ್ತಿತ್ವದಲ್ಲಿ ಬಿರುಕುಗಳು ಕಂಡುಬಂದವು. ಪ್ರಾಮಾಣಿಕತೆ. ಶ್ರಮಕ್ಕೆ ಬೆಲೆ ಇಲ್ಲವಾಯಿತು. ಕನಸು ಒಡೆದು ನಿರಾಸೆ ಕಾಲಿಟ್ಟಿತು. ಎರಡನೇ ಮಹಾಯುದ್ಧದ ಪರಿಣಾಮವಾಗಿ ಕಷ್ಟಕೋಟಲೆ, ಪರಕೀಯ ಪ್ರಜ್ಞೆ, ಅನಾಥ ಪ್ರಜ್ಞೆ – ಇತ್ಯಾದಿಗಳು ಜನಮನದಲ್ಲಿ ಬೇರೂರಿದವು. ಇದನ್ನು ಕಂಡ ಸೂಕ್ಷ್ಮ ಸಂವೇದನಾಶೀಲ ಬರಹಗಾರ ತಾಳ್ಮೆಯನ್ನು ಕಳೆದುಕೊಂಡ. ಮಾರ್ಕ್ಸ್‌ನ ಸಿದ್ಧಾಂತಗಳು. ಫ್ರಾಯ್ಡ್‌ನ ಮನಃಶಾಸ್ತ್ರ. ಕವಿ – ಸಾಹಿತಿಗಳ ಮೇಲೆ ಅಗಾಧ ಪರಿಣಾಮ ಮಾಡಿದವು. ವಿಜ್ಞಾನ ಮತ್ತು ತಂತ್ರಜ್ಞಾನಗಳು ಸಮಾಜದ ರೀತಿ-ನೀತಿಗಳನ್ನು ಪಲ್ಲಟಗೊಳಿಸಿದವು.

ತತ್ಪರಿಣಾಮಗಳು ಕಲಾಜಗತ್ತಿನ ಮೇಲೂ ಆಯಿತಷ್ಟೆ. ೧೯೨೦-೪೫ ರ ಅವಧಿಯಲ್ಲಿ ಸಂಭ್ರಮದಿಂದ ಸೃಷ್ಟಿಯಾದ ನವೋದಯದಲ್ಲಿ ಕೇವಲ ಕನಸುಗಾರಿಕೆ, ಶಬ್ದಾಡಂಬರ ಇದೆ ಎಂದೂ, ೧೯೪೫ ರಿಂದ ೫೦ ರ ಸಮಯದಲ್ಲಿ ಸೃಷ್ಟಿಯಾದ ಪ್ರಗತಿಶೀಲರ ಸಾಹಿತ್ಯದಲ್ಲಿ ಕೇವಲ ವಾಸ್ತವದ ಅತಿರಂಜಿತ ಅಶ್ಲೀಲತೆ ಇದೆ ಎಂಬುದಾಗಿಯೂ ಆರೋಪಿಸಿ, ೧೯೫೦ ರ ನಂತರದ ನವ್ಯರು ಸಾಹಿತ್ಯ ರಚನೆಗೆ ತೊಡಗಿದರು. ಎಜರಾ ಪೌಂಡ್, ಟಿ. ಎಸ್. ಇಲಿಯಟ್ ಮುಂತಾದ ಪಾಶ್ಚಾತ್ಯ ನವ್ಯ ಕವಿ – ವಿಮರ್ಶಕರು ಇವರಿಗೆ ಆದರ್ಶವಾದರು. ಒಟ್ಟಿನಲ್ಲಿ 'ನಡೆದುಬಂದ ದಾರಿಯ ಕಡೆ ತಿರುಗಿ ನೋಡಬೇಡ, ಕಣ್ಣು ಹೊರಳಿಸಬೇಡ' ಎಂದು ಶಪಥ ಮಾಡುವ ಮೂಲಕ ನವ್ಯರು ಸಾಹಿತ್ಯ ರಚನೆಗೆ ಕೈಹಾಕಿದರು. ನವೋದಯ ಮತ್ತು ಪ್ರಗತಿಶೀಲರು ಕಾವ್ಯ, ಕಾದಂಬರಿ ಫಲವನ್ನು ಕೊಟ್ಟು ಮುಗಿಸಿದ್ದರು. ಅವುಗಳ ಸತ್ವ ತೀರಿತು ಎಂದು ನವ್ಯರು ಘೋಷಿಸಿದರು. ಹೊಸ ನಾಡಿಗೆ ಹೊಸ ಸಂದರ್ಭಕ್ಕೆ ಹೊಸ ಭಾಷೆಯ ಬಳಕೆಯ ಅಗತ್ಯವಿದೆಯೆಂದು ಇವರು ಬರೆಯಲು ತೊಡಗಿದರು. ೧೯೫೦ ರಲ್ಲಿ ಗೋಕಾಕರು 'ಸಾಹಿತ್ಯ ಹಾಗೂ ನವ್ಯತೆ' ಎಂಬ ಉಪನ್ಯಾಸವನ್ನು ಮಾಡಿದರು. ಸಾಹಿತ್ಯ ಕೇವಲ ಸತ್ಯ ಹಾಗೂ ಸೌಂದರ್ಯ ಎಂದು ಬಡಬಡಿಸದೆ ಸ್ವಪ್ನತಂತ್ರದಲ್ಲಿ ಚಿತ್ರದಿಂದ ಚಿತ್ರಕ್ಕೆ ಕವನ ಸಾಗಬೇಕು ಎಂದರು. ಆದರೆ ಗೋಕಾಕರು ಕಲ್ಪಿಸಿಕೊಂಡ ನವ್ಯಕಾವ್ಯ ಹಿಂದಿನ ರಮ್ಯಕಾವ್ಯಕ್ಕಿಂತ ಭಿನ್ನವಾದುದೇನಲ್ಲ. ಆ ಭಿನ್ನತೆ ಏನಾದರೂ ಇದ್ದರೆ ಅವರು ಬಳಸಿದ ಸ್ವಚ್ಛಂದ ಛಂದಸ್ಸಿನಲ್ಲಿ ಮಾತ್ರ ಎಂದು ತಿಳಿಯಲಾಯಿತು. ಹಾಗಾದರೆ ನವ್ಯಸಾಹಿತ್ಯ ಹಿಂದಿನ ಸಾಹಿತ್ಯಕ್ಕಿಂತ ಹೇಗೆ ಭಿನ್ನ ಎಂಬ ಪ್ರಶ್ನೆ ಮೂಡಿತು. ನವ್ಯಸಾಹಿತಿ ತನ್ನ ವೈಯಕ್ತಿಕ ಜೀವನ ಧೋರಣೆಯನ್ನು ವಾಸ್ತವ ಬದುಕಿನ ಅಭಿವ್ಯಕ್ತಿ ಮಾಧ್ಯಮದಲ್ಲಿ ನಿರೂಪಿಸಲು ತೊಡಗಿದ. ಆದರೆ ಬದುಕಿನಲ್ಲಿ ಅರ್ಥವಿದೆ, ಅಂಥ ಬದುಕಿಗೆ ಅರ್ಥ ಕೊಡುವ ಮೌಲ್ಯಗಳು ಇವು ಎಂಬ ಮಾತನ್ನು ಸಾಹಿತ್ಯದ ಮೂಲಕ ತಿಳಿಸದೆ ತನ್ನ ಅನುಭವವನ್ನೇ ಪ್ರಧಾನವಾಗಿಸಿಕೊಂಡು ಅದರ ಪದರ ಪದರಗಳನ್ನು ಬಿಚ್ಚಿ ನೋಡುವ ಪ್ರಯತ್ನ ಮಾಡಿದ. ಜೀವನವನ್ನು ಸರಳಗೊಳಿಸದೆ ಅದರ ಸಂಕೀರ್ಣತೆಯನ್ನು ಹಿಡಿದಿಡಲು ನವ್ಯಕವಿ ಪ್ರಯತ್ನಿಸಿದ. ಇಂಥ ಸಾಹಿತ್ಯ ೧೯೫೦ ರಿಂದ ೭೦ ರ ವರೆಗೆ ಹರಿದುಬಂತು. ಕೆ. ಎಸ್. ನರಸಿಂಹಸ್ವಾಮಿ, ಜಿ. ಎಸ್. ಶಿವರುದ್ರಪ್ಪ, ಚೆನ್ನವೀರ ಕಣವಿ ಮುಂತಾದವರೂ ಇದರ ಉತ್ತಮಾಂಶಗಳನ್ನು ಬಳಸಿಕೊಂಡರು. ಗೋಪಾಲಕೃಷ್ಣ ಅಡಿಗರು ಈ ಯುಗದ ಪ್ರವರ್ತಕರಾದರು. ನವ್ಯಸಾಹಿತ್ಯ ಉತ್ತಮ ಸಣ್ಣಕತೆ, ಕಾದಂಬರಿಗಳ ಬರಹಗಾರರನ್ನು ನೀಡಿತು. ಲಂಕೇಶ್, ಚಂಪಾ ಮುಂತಾದ ಅಸಂಗತ ನಾಟಕಕಾರರು ಕಾಣಿಸಿಕೊಂಡರು. ಕನ್ನಡ ಗದ್ಯ ಮಾತ್ರ ಹೊಸ ಲವಲವಿಕೆಯನ್ನು ಪಡೆಯಿತು. ಆದರೂ, ನವ್ಯಸಾಹಿತ್ಯ ಓದುಗನನ್ನು ಮುಟ್ಟಲಿಲ್ಲ. 'ಬರೆದವರಷ್ಟೇ ಓದಬಲ್ಲರು' ಎಂಬ ಕುಖ್ಯಾತಿಗೆ ಒಳಗಾಯಿತು.

ಪ್ರಗತಿಶೀಲರ ರಂಜಿತ ಶೈಲಿ ಮಾತ್ರ ಜನಪ್ರಿಯತೆಯನ್ನು ಪಡೆಯಿತು. ಆದರೆ ಅದರಿಂದ ಪ್ರಯೋಜನವೇನು ? ಬಿಚ್ಚಿಟ್ಟ ಸೆಕ್ಸ್ ವಿಚಾರಗಳು ರಂಜಿತವಲ್ಲದೆ ಮತ್ತೇನು ಎಂಬ ಪ್ರಶ್ನೆಯೂ ಬಂತು. ಸಾಹಿತ್ಯ ರಂಜನೆಗಾಗಿಯೋ ಬದುಕಿಗಾಗಿಯೋ ಎಂಬ ಪ್ರಯೋಜನ ದೃಷ್ಟಿಯೂ ಇಲ್ಲಿ ಚರ್ಚಿತವಾಯಿತು. ಕಡೆಯದಾಗಿ ವ್ಯಾಖ್ಯಾನ–ವಿಮರ್ಶೆ ಇಲ್ಲದೆ ಸಾಹಿತ್ಯ ನೇರವಾಗಿ ಹೃದಯಕ್ಕೆ ಮುಟ್ಟಿದರೆ ಸಾಕು ಎಂಬ ಮಾತು ಗಟ್ಟಿಯಾಯಿತು. ೧೯೫೦ ರಿಂದೀಚೆಗೆ ಹೊಸಬಗೆಯ ಕಾದಂಬರಿಗಳು ಬಂದವು. ಅ.ನ.ಕೃ, ತ.ರಾ.ಸು, ಕಟ್ಟೀಮನಿ, ನಿರಂಜನ – ಈ ಎಲ್ಲರೂ ಮನುಷ್ಯನಲ್ಲಿ ಘನತೆಯನ್ನು ಕಾಣಲು ಹೊರಟವರು. ಬೆಟಗೇರಿ, ಪಂಜೆ, ಕುವೆಂಪು, ಕಾರಂತರು ತಮ್ಮ ಕೃತಿಗಳಲ್ಲಿ ಅಂಥ ಘನತೆಯನ್ನು ಸ್ಪಷ್ಟವಾಗಿ ಗುರುತಿಸತೊಡಗಿದರು. ಆದರೆ ಈ ೫೦-೬೦ ರ ದಶಕದಲ್ಲಿ ಇಂಥ ಅಪೂರ್ವ ಸಂದರ್ಭದಲ್ಲಿ ಜಿ. ವೆಂಕಟಯ್ಯನವರಂಥ ಒಬ್ಬ ದಲಿತ ಸಾಹಿತಿ ಕನ್ನಡದಲ್ಲಿ ಮೂಡಿಬಂದದ್ದು ಪರಮಾಶ್ಚರ್ಯ. ಕೌಟುಂಬಿಕತೆಯ ಮತ್ತು ಸಾಮಾಜಿಕ ಸಮಸ್ಯೆಗಳನ್ನು ಕುರಿತಂತೆ ಬರೆಯುವ ಸಂದರ್ಭದಲ್ಲಿ ವೆಂಕಟಯ್ಯ ಬರವಣಿಗೆಯಲ್ಲಿ ತೊಡಗಿದ್ದರು ಎಂಬುದು ರೋಮಾಂಚನವನ್ನುಂಟುಮಾಡುವ ವಿಷಯವಲ್ಲವೆ ?

ಕುವೆಂಪು ಮತ್ತು ಕಾರಂತರು ಚಿತ್ರಿಸಿರುವ ದಲಿತರ ಲೋಕ ಸಹಾನುಭೂತಿ ನೆಲೆಯಲ್ಲಿ ರೂಪಿತಗೊಂಡಿರುವಂಥದ್ದು. ಆದರೆ ವೆಂಕಟಯ್ಯನವರ ದಲಿತರ ಲೋಕ ನೋವಿನ ನೆಲೆಯಿಂದ ಚಿತ್ರಿಸಲ್ಪಟ್ಟಿದ್ದು. ಮಾಸ್ತಿಯವರ ಸಾಹಿತ್ಯದ ದಲಿತರ ಲೋಕ ಇಷ್ಟೂ ಇಲ್ಲ. ಅವರು ಸಹಾನುಭೂತಿಯ ನೆಲೆಗಿಂತಲೂ ಕರ್ಮಸಿದ್ಧಾಂತದ ನೆಲೆಗಳ ಕಡೆಗೆ ಒತ್ತು ಕೊಡುತ್ತಾರೆ. ದಲಿತರಲ್ಲಿದ್ದಂಥ ಮೇಲ್ವರ್ಗವನ್ನು ಸೇವಿಸುವ ದಲಿತರಲ್ಲಿರುವ ಒಳ್ಳೆಯತನದ ಬಗ್ಗೆ ಮಾತ್ರ ಉದಾರವಾಗಿ ಬರೆಯುತ್ತಾರೆ. ಕುಡಿಯುವವರ, ಬಯ್ಯುವವರ ಮತ್ತು ಮಾಂಸ ತಿನ್ನುವವರ ಬಗ್ಗೆ ಬರೆಯಲಿಲ್ಲ. ಇವೆಲ್ಲದರಿಂದ ದೂರವಿರುವ 'ಒಳ್ಳೆಯ' ದಲಿತನ ಬಗ್ಗೆ ಮಾತ್ರ ಅವರು ಕಾಳಜಿ ವಹಿಸುತ್ತಾರೆ. ಅಂದರೆ 'ನಿಜವಾದ' ದಲಿತನ ಬಗ್ಗೆ ಉದ್ದೇಶಪೂರ್ವಕವಾಗಿ ಬರೆಯುವುದೇ ಇಲ್ಲ. ಆದರೆ ವೆಂಕಟಯ್ಯನವರಿಗೆ ನಿಜವಾದ ದಲಿತನ ಬಗ್ಗೆ ಬರೆಯುವುದು ಮುಖ್ಯ ಗುರಿಯಾಗುತ್ತದೆ. ಈ ಹಿನ್ನೆಲೆಯಲ್ಲೇ ನಾವು ಅವರ 'ನೊಂದಜೀವ' ಕಾದಂಬರಿಯನ್ನು ಗಮನಿಸಬೇಕಾಗುತ್ತದೆ. ಇದೇ ಸಂದರ್ಭದಲ್ಲಿ ಶ್ರೀ ಶ್ರೀ, ಆರುದ್ರ, ದಾಶರಥಿ, ಆವಂತ್ಯ ಸೋಮಸುಂದರ್, ಡಾ. ಸಿ. ನಾರಾಯಣರೆಡ್ಡಿ, ನಾರಪರೆಡ್ಡಿ ರೆಂಟಾಲ, ಪಲ್ಲಾದುರ್ಗಯ್ಯ, ಕೆ. ವಿ. ರಮಣಾರೆಡ್ಡಿ, ಅಮರೇಂದ್ರ, ಮುಕುರಾಲ, ರಾಮಿರೆಡ್ಡಿ – ಮೊದಲಾದ ಪ್ರಗತಿಗಾಮಿ ಧೋರಣೆಯ ಲೇಖಕರು ತೆಲುಗು ಭಾಷೆಯಲ್ಲಿ ಸಾಹಿತ್ಯ ರಚನೆಯಲ್ಲಿ ತೊಡಗಿದ್ದರು. ೧೯೫೫ ರ ಸಂದರ್ಭದಲ್ಲಿ ಮಹಾರಾಷ್ಟ್ರದಲ್ಲಿ 'ದಲಿತ ಪ್ಯಾಂಥರ್' ಚಳುವಳಿ ಆರಂಭವಾಗಿತ್ತು. ಶಂಕರರತವೆಳ ಖಿರಾತ್, ಅಣ್ಣಾಬಾಪೂಸಾಠ್, ಬಾಬೂರಾವ ಬಾಗೋಲ, ನಾಮದೇವ

ಪಸಾಳ್, ರಾಜಾಡಾಜೆ –ಮೊದಲಾದ ದಲಿತವರ್ಗದ ಲೇಖಕರು ಮರಾಠಿ ಭಾಷೆಯಲ್ಲಿ ಬರೆಯತೊಡಗಿದ್ದರು. ಇದೇ ಸಂದರ್ಭದಲ್ಲಿ ಮೈಸೂರಿನ ವಾತಾವರಣವಲ್ಲಿ ವೆಂಕಟಯ್ಯನವರು ಹರಿಜನರ ಸಮಸ್ಯೆಗಳನ್ನು ಕುರಿತಾದ ಚಿಂತನೆಯಲ್ಲಿ ತೊಡಗಿದ್ದರು. ಆ ಚಿಂತನೆಯ ಫಲವಾಗಿ ಮೂಡಿ ಬಂದದ್ದೇ ಅವರ 'ನೊಂದ ಜೀವ' ಕಾದಂಬರಿ. ಇದು ಪ್ರಕಟವಾದದ್ದು ೧೯೫೫ ರಲ್ಲಿ. ದಲಿತ ಪ್ಯಾಂಥರ್ ಚಳುವಳಿ ಹುಟ್ಟಿದ ಸಂದರ್ಭದಲ್ಲಿ. ಈ ಚಳುವಳಿಯ ಪ್ರಭಾವ ಕನ್ನಡದ ಮೇಲಾದಾಗಲೂ ಸಹ ಸಾಹಿತ್ಯಲೋಕದಲ್ಲಿ ೩೦ ರ ದಶಕದಲ್ಲಿ ಬಂದ ಕಾರಂತರ 'ಚೋಮನ ದುಡಿ', ದೇವನೂರರ 'ದ್ಯಾವನೂರು' (೧೯೭೩), ಸಿದ್ಧಲಿಂಗಯ್ಯನವರ 'ಹೊಲೆಮಾದಿಗರ ಹಾಡು' ಕೃತಿಗಳು ಚರ್ಚೆಗೊಳಪಟ್ಟವೇ ಹೊರತು ಕನ್ನಡದ ಮೊದಲ ದಲಿತ ಲೇಖಕ ವೆಂಕಟಯ್ಯನವರು ಬರೆದ ಮೊದಲ ದಲಿತ ಸಂವೇದನೆಯ ಕಾದಂಬರಿ 'ನೊಂದ ಜೀವ' ಚರ್ಚೆಯಾಗಲೇ ಇಲ್ಲ. ೭೦ ರ ದಶಕದಲ್ಲಿ ಕನ್ನಡದಲ್ಲಿ ದಲಿತ ಸಾಹಿತ್ಯದ ಬಗ್ಗೆ ವಿಪರೀತ ಚರ್ಚೆಯಾಯಿತು, ಆಗಲೂ ವೆಂಕಟಯ್ಯನವರ ಹೆಸರು ಕೇಳಿಬರಲಿಲ್ಲ. ಯಾಕೆ? ಹಾಗೆ ನೋಡಿದರೆ "ಕನ್ನಡ ನವೋದಯ ಸಾಹಿತ್ಯ ಟಿ. ಎಸ್. ವೆಂಕಣ್ಣಯ್ಯನವರಿಂದ ಆರಂಭವಾದರೆ ಆಧುನಿಕ ದಲಿತ ಸಾಹಿತ್ಯ ಜಿ. ವೆಂಕಟಯ್ಯನವರಿಂದ ಆರಂಭವಾಗುತ್ತದೆ" (ಮನಜ) ಎಂಬ ಮಾತು ನಿಜವೆನಿಸುತ್ತದೆ. ದಲಿತ ಚಳುವಳಿ ಮತ್ತು ಅದರ ರಚನೆಯ ಪ್ರತ್ಯುತ್ಪನ್ನವಾಗಿ ಹುಟ್ಟಿಬಂದ ದಲಿತಸಾಹಿತ್ಯದ ಸಂದರ್ಭದಲ್ಲಿ ದಲಿತ ಸಾಹಿತ್ಯದ ಬಗೆಗಿನ ಚರ್ಚೆಗಿಂತ ದಲಿತ ಪದದ ಬಗೆಗಿನ ವ್ಯಾಖ್ಯಾನಗಳೇ ಅತಿ ಎಂಬಷ್ಟರ ಮಟ್ಟಿಗೆ ನಡೆದವು.

## ದಲಿತ ಪದದ ವ್ಯಾಖ್ಯೆ :

ದಲಿತ ಪದಪ್ರಯೋಗದಲ್ಲಿ ಸಾಕಷ್ಟು ಗೊಂದಲವೂ ಉಂಟಾಯಿತು. ಪ್ರಗತಿಪಂಥದ ಬರಹಗಾರರ ಸಂದರ್ಭದಲ್ಲಿ 'ದಲಿತ' ಪದ ಬೆಳಕಿಗೆ ಬಂದರೂ ಹೆಚ್ಚು ಚಾಲ್ತಿಗೆ ಬಂದದ್ದು ದಲಿತ ಬಂಡಾಯ ಚಳುವಳಿಯ ಸಂದರ್ಭದಲ್ಲಿ. ದಲಿತ ಎಂದರೆ ದಳ, ಗುಂಪು, ಸೈನ್ಯ, ಶೋಷಿತ, ಹಿಂದುಳಿದವನು, ಆರ್ಥಿಕವಾಗಿ, ಸಾಮಾಜಿಕವಾಗಿ ಕೆಳಮಟ್ಟದವರು– ಹೀಗೆ, ಶಬ್ದಕೋಶದ ಅರ್ಥಗಳಿವೆ. ಭಾರತದಾದ್ಯಂತ ಅಸ್ಪೃಶ್ಯತೆಗೆ ದಲಿತ ಪದವನ್ನು ಬಳಸಲಾಯಿತು. ಡಾ. ಅಂಬೇಡ್ಕರ್ 'ಡಿಪ್ರೆಸ್ಡ್' ಎಂಬ ಪದವನ್ನು ಬಳಸಿದರು. ಮರಾಠಿಯಲ್ಲಿ ದಲಿತ ಪದಕ್ಕೆ ಬದಲಾಗಿ 'ಬೌದ್ಧ' ಶಬ್ದವನ್ನು ಬಳಸುವ ಪ್ರಯತ್ನವೂ ನಡೆಯಿತು. ದಲಿತ ಪದಕ್ಕಿಂತ ವ್ಯಾಪಕವಾದ ಅರ್ಥ ನೀಡುತ್ತದೆಂದು ಭಾವಿಸಿದ ಕೆಲವರು 'ಬೌದ್ಧ ಸಾಹಿತ್ಯ' ಎಂದು ಕರೆಯತೊಡಗಿದರಾದರೂ ಅದು ರೂಢಿಗೆ ಬರಲಿಲ್ಲ. ರುಜುವಾತು, ಸಂಕ್ರಮಣ, ಅಂಕಣ, ಅನ್ವೇಷಣೆ ಸಂವಾದ– ಮೊದಲಾದ ಸಾಹಿತ್ಯಿಕ ಪತ್ರಿಕೆಗಳಲ್ಲಿ ಅನೇಕ ಬರಹಗಾರರು ದಲಿತ ಪದದ ಬಗ್ಗೆ ತಮ್ಮ ಅಭಿಪ್ರಾಯಗಳನ್ನು ವ್ಯಕ್ತಪಡಿಸಿದ್ದಾರೆ.

ಸಾಂಸ್ಕೃತಿಕವಾಗಿ, ಸಾಮಾಜಿಕವಾಗಿ, ಆರ್ಥಿಕವಾಗಿ, ರಾಜಕೀಯವಾಗಿ, ಧಾರ್ಮಿಕವಾಗಿ ಯಾರು ದಮನಕ್ಕೆ ಒಳಗಾಗಿರುತ್ತಾರೊ ಅವರೆಲ್ಲ ದಲಿತರು. ಅಸ್ಪೃಶ್ಯರ ಜೊತೆ ಅನ್ಯಜಾತಿಯ ಬಡವರೂ ಇದರಲ್ಲಿ ಸೇರುತ್ತಾರೆಂದು ಲೋಹಿಯಾವಾದಿಗಳು ಅಭಿಪ್ರಾಯಪಟ್ಟರು. ಭಾರತದ ಶ್ರೇಣೀಕೃತ ಸಮಾಜದಲ್ಲಿ ಅತ್ಯಂತ ಕೆಳಗಿನವರೆಂದು ಕರೆಯಲ್ಪಡುವ ಅಸ್ಪೃಶ್ಯರೇ ದಲಿತರು ಎಂಬ ವಾದವನ್ನು ಅಂಬೇಡ್ಕರ್‌ವಾದಿಗಳು ಎತ್ತಿಹಿಡಿದರು. ಮುಂದೆ ಇದೇ ಪದ ರೂಢಿಗೆ ಬಂದಿತು. ಸಾಹಿತ್ಯದ ಸಂದರ್ಭದಲ್ಲಿ 'ದಲಿತ' ಎಂಬುದರ ಬಗ್ಗೆ ಇದೇ ಬಗೆಯ ಹಲವು ಅಭಿಪ್ರಾಯಗಳು ವ್ಯಕ್ತವಾದವು.

ಹುಟ್ಟಿನಿಂದ ದಲಿತರಾದ ಜನ ಬರೆದ ಸಾಹಿತ್ಯವನ್ನು ದಲಿತಸಾಹಿತ್ಯ ಎಂದು ಕರೆಯಲಾಯಿತು. ಮೊದಲಿನಿಂದಲೂ ಅಕ್ಷರ ಕಲಿಯುವಿಕೆಯಿಂದ ವಂಚಿತರಾದ ಈ ವರ್ಗದ ಸಾಹಿತ್ಯವನ್ನು ಪ್ರತ್ಯೇಕವಾಗಿ ಗುರುತಿಸುವ ಆವಶ್ಯಕತೆ ಇದೆ. ಈ ಮಾತನ್ನು ಸಮರ್ಥಿಸುವಂತೆ ಸಿ. ವೀರಣ್ಣನವರ ಅಭಿಪ್ರಾಯಗಳು ಹೀಗಿವೆ: "ಎಲ್ಲ ಜಾತಿಗಳಲ್ಲಿಯೂ ತುಳಿತಕ್ಕೊಳಗಾಗಿರುವವರನ್ನೆಲ್ಲ ದಲಿತರು ಎಂದು ಕರೆದು 'ದಲಿತ' ಪದದ ವ್ಯಾಪ್ತಿಯನ್ನು ವಿಸ್ತರಿಸುವುದಕ್ಕಿಂತ, ಈಗ ಅದು ಹುಟ್ಟಿ ಬೆಳೆದಿರುವ ಹಿನ್ನೆಲೆಯಲ್ಲಿ ಅದನ್ನು ಅಸ್ಪೃಶ್ಯ ಜನಾಂಗಕ್ಕೆ ಸೀಮಿತಗೊಳಿಸುವುದು ಚಾರಿತ್ರಿಕ ಅಧ್ಯಯನದ ದೃಷ್ಟಿಯಿಂದ ಸೂಕ್ತವೆನಿಸುತ್ತದೆ. ಹೀಗೆ ಮಾಡಿದರೆ ಕಲಸುಮೇಲೋಗರವಾಗುವುದು ತಪ್ಪುತ್ತದೆ. ಅಲ್ಲದೆ, ಜಾತಿಯ ದೃಷ್ಟಿಯಿಂದಲೆ ಸಾಹಿತ್ಯವನ್ನು ಅಭ್ಯಾಸ ಮಾಡುವ ಸಾಂಪ್ರದಾಯಿಕ ನೋಟವೊಂದಕ್ಕೆ 'ದಲಿತ ಸಾಹಿತ್ಯ'ವೆನ್ನುವುದು ಸಮೀಪವಾಗುತ್ತದೆ. ಈ ದಲಿತ ಸಾಹಿತ್ಯವೆಂದು ಕರೆಯುವುದನ್ನು 'ಶ್ರಮಜೀವಿಗಳ ಸಾಹಿತ್ಯ'ವೆಂದೊ 'ಬಡವರ ಸಾಹಿತ್ಯ'ವೆಂದೋ ಕರೆದು ಗೊಂದಲ ಉಂಟುಮಾಡುವುದು ತಪ್ಪುತ್ತದೆ. ಏಕೆಂದರೆ ಸವರ್ಣೀಯರಿಂದ ದೂರವಿಡಲಾದ ಜನಗಳಲ್ಲಿ ತುಳಿತಕ್ಕೊಳಗಾದವರು ಬಹುಪಾಲು ಸಂಖ್ಯೆಯಲ್ಲಿರಬಹುದಾದರೂ ಅವರಲ್ಲಿಯೇ ಅನುಕೂಲಸ್ಥರಾದ, ತಮ್ಮವರನ್ನು ಶೋಷಿಸುವವರು ಕೂಡ 'ದಲಿತ' ಪದದ ವ್ಯಾಪ್ತಿಯಲ್ಲಿ ಬರುವುದರಿಂದ ದಲಿತರು ಎನ್ನುವುದು ವರ್ಗ ವಿಭಜನೆಯಲ್ಲ ಎನ್ನುವುದನ್ನು ಮನಗಾಣಬೇಕು. ಇಲ್ಲವೆ ದಲಿತ ಚಳುವಳಿ, ದಲಿತರಲ್ಲಿಯೇ ಹುಟ್ಟಿ ಬೆಳೆದು ದಲಿತರನ್ನೇ ಶೋಷಿಸುವವರು ದಲಿತರಲ್ಲ ಎನ್ನುವುದನ್ನು ಹೇಳಿ ಸ್ಪಷ್ಟಪಡಿಸಬೇಕು." [೧] ಇದು ನಮ್ಮ ಚರಿತ್ರೆಯ ಕಟುವಾಸ್ತವತೆಯ ಚಿತ್ರಣವಾಗಿದೆ. ಇನ್ನೊಂದು ಸಂಗತಿ ಎಂದರೆ ದಲಿತರು ಬರೆದುದೆಲ್ಲಾ ದಲಿತಸಾಹಿತ್ಯವಾಗುವುದಿಲ್ಲ. ಹುಟ್ಟಿನಿಂದ ದಲಿತರಾದವರು ಸೃಷ್ಟಿಸಿದ ಪ್ರಗತಿಪರ ಸಾಹಿತ್ಯವನ್ನು ದಲಿತ ಸಾಹಿತ್ಯವೆಂದು ಪರಿಗಣಿಸಬಹುದೆಂಬ ನಿಲುವು ಹೊರಬಿತ್ತು. ಇದರ ಬಗ್ಗೆ ಡಾ. ಜಿ. ಎಸ್. ಶಿವರುದ್ರಪ್ಪನವರ ವಾದ ಹೀಗಿದೆ: "ದಲಿತರು ಕೇವಲ ಶೋಷಿತರಷ್ಟೇ ಅಲ್ಲ; ಶೋಷಣೆಯ ಜೊತೆಗೆ

ಅಮಾನವೀಯವಾದ ಹಿಂಸೆ–ಕ್ರೌರ್ಯಗಳಿಗೆ ಒಳಗಾದವರು. ಒಂದು ವ್ಯಕ್ತಿತ್ವವೇ ಇಲ್ಲದವರಂತೆ ನಡೆಯಿಸಿಕೊಳ್ಳುವವರು " ಆದ್ದರಿಂದ ಈ ಗುಂಪಿನವರಿಗೆ ತಮ್ಮದೇ ಆದ ವಿಶಿಷ್ಟ ಅನುಭವವಿರುತ್ತದೆ. ಅನುಭವಗಳನ್ನು ಆಯಾ ವರ್ಗದಿಂದ ಬಂದವರು ಅಭಿವ್ಯಕ್ತಿಸಿದರೆ ಮಾತ್ರ ಅದರಲ್ಲಿ ತಾಜಾತನವಿರುತ್ತದೆ. " ಹುಟ್ಟಿನಿಂದ ದಲಿತನಾಗಿದ್ದು ಪ್ರತಿಗಾಮಿ ಆಶಯಗಳನ್ನು ಅಭಿವ್ಯಕ್ತಿಸಿದ ಸಾಹಿತಿ ಬಂಡಾಯ ಸಾಹಿತ್ಯದ ಪಟ್ಟಿಗೆ ಸೇರುವುದಿಲ್ಲ. ಮತ್ತೊಮ್ಮೆ ಸ್ಪಷ್ಟಪಡಿಸಬೇಕೆಂದರೆ ಪ್ರಗತಿಪರ ದಲಿತ ಸಾಹಿತಿಗಳೆಲ್ಲಾ ಬಂಡಾಯ ಸಾಹಿತಿಗಳು. ಬಂಡಾಯ ಸಾಹಿತಿಗಳೆಲ್ಲಾ ದಲಿತ ಸಾಹಿತಿಗಳಲ್ಲ "೨ ಎಂದು ಹೇಳುವುದರ ಮೂಲಕ ಬರಗೂರು ಅವರು ಅತ್ಯಂತ ಸ್ಪಷ್ಟವಾಗಿ ದಲಿತ ಸಾಹಿತ್ಯದ ವ್ಯಾಪ್ತಿಯನ್ನು ತಿಳಿಸಿದ್ದಾರೆ.

ದಲಿತ ಲೇಖಕರಲ್ಲಿ ಈ ಬಗ್ಗೆ ಇನ್ನು ಕೆಲವು ಅಭಿಪ್ರಾಯಗಳು ಹೊರಬಿದ್ದಿವೆ. 'ಅಸ್ಪೃಶ್ಯ ಬರಹಗಾರರು ಇತರ ಜಾತಿಯ ಬಡವರನ್ನು, ಜನಪರ ಬರಹಗಾರರನ್ನು ಒಳಗೊಂಡು ವಿಶಾಲಾರ್ಥದಲ್ಲಿ ದಲಿತ ಸಾಹಿತ್ಯವನ್ನು ಬೆಳೆಸಬೇಕು..... ದಲಿತ ಸಾಹಿತ್ಯಕ್ಕೆ ಅಸ್ಪೃಶ್ಯತೆಯೇ ಮಾನದಂಡ' ಇತ್ಯಾದಿ ಮಾರ್ಕ್ಸ್‌ವಾದ ಮತ್ತು ಅಂಬೇಡ್ಕರ್ ವಾದಕ್ಕೆ ಹೊಂದಿಕೊಂಡಂಥ ಅಭಿಪ್ರಾಯಗಳು ವ್ಯಕ್ತವಾದವು. " ಸಾಮಾಜಿಕವಾಗಿ ಹಾಗೂ ಆರ್ಥಿಕವಾಗಿ ಶತಮಾನಗಳಿಂದ ಶೋಷಣೆಗೆ, ಅವಮಾನಕ್ಕೆ, ಕ್ರೌರ್ಯಕ್ಕೆ ಬಲಿಯಾದ ದಲಿತ ಪ್ರಜ್ಞಾವಂತ ಲೇಖಕ ಬರೆದ ಪ್ರತಿಭಟನಾ ಸಾಹಿತ್ಯವೇ ಅಥೆಂಟಿಕ್ ಆದ ಸಾಹಿತ್ಯ. " ಎಂಬ ಚಂದ್ರಶೇಖರ ಪಾಟೀಲರ ಮಾತು ದಲಿತ ಸಾಹಿತ್ಯದ ಅನನ್ಯತೆಯನ್ನು ತೋರಿಸುತ್ತದೆ. " ದಲಿತವರ್ಗದ ವ್ಯಕ್ತಿ ದಲಿತ ಪ್ರಜ್ಞೆಯಿಂದ ದಲಿತ, ದಲಿತೇತರರಿಗಾಗಿ ಬರೆದ ಸಾಹಿತ್ಯ ಮಾತ್ರ ದಲಿತ ಸಾಹಿತ್ಯ " ಎಂದು ಕೆಲವರು ಹೇಳಿದರೆ ಮತ್ತೆ ಕೆಲವರು " ದಲಿತರ ಶೋಷಣೆಯನ್ನು ಚಿತ್ರಿಸುವ ಸಾಹಿತ್ಯ ಯಾರೇ ಬರೆದಿದ್ದರೂ ಅದೆಲ್ಲ ದಲಿತ ಸಾಹಿತ್ಯ " ಎಂದೂ ವಾದಿಸಿದರು. ಇನ್ನೊಂದು ಘಟ್ಟದಲ್ಲಿ, ದಲಿತರ ಬಗೆಗೆ ದಲಿತೇತರರು ಬರೆವ ಸಾಹಿತ್ಯವನ್ನು 'ಅನುಕಂಪ ಸಾಹಿತ್ಯ'ವೆಂದು ಕರೆಯತೊಡಗಿದರು. ದಲಿತರ ಅಸಲೀ ಅನುಭವಗಳನ್ನು ದಲಿತ ಲೇಖಕರೇ ಬರೆಯಲು ಸಾಧ್ಯ, ದಲಿತ ಸಂವೇದನೆಗಳು ಅವರ ಬರವಣಿಗೆಯಲ್ಲಿ ಮಾತ್ರ ಇರಲು ಸಾಧ್ಯ ಎಂಬ ಚರ್ಚೆ ಬೆಳೆದಿದ್ದರ ಪರಿಣಾಮವಾಗಿ ದಲಿತೇತರರು ದಲಿತರ ಬಗ್ಗೆ ಬರೆದದ್ದನ್ನು 'ಅನುಕಂಪ ಸಾಹಿತ್ಯ'ವೆಂದು ಕರೆಯತೊಡಗಿದರು. ದಲಿತರ ಒಳಹೊರಗನ್ನು ಆಮೂಲಾಗ್ರವಾಗಿ ದಾಖಲಿಸಲು ದಲಿತೇತರರಿಂದ ಸಾಧ್ಯವಿಲ್ಲವೆಂದು ಅವರ ಮಿತಿಗಳನ್ನು ಗುರ್ತಿಸಲಾಯಿತು. ಈ ಹಿನ್ನೆಲೆಯಲ್ಲಿ ಶಿವರಾಮ ಕಾರಂತರ 'ಚೋಮನ ದುಡಿ' ಕಾದಂಬರಿಯ ಬಗ್ಗೆ ಸಾಕಷ್ಟು ಚರ್ಚೆಯಾಗಿದ್ದನ್ನು ಗಮನಿಸಬಹುದು.

ದಲಿತೇತರರ ಬರವಣಿಗೆಯ ಬಗ್ಗೆ ಚರ್ಚೆಗಳು ನಡೆಯುವಾಗಲೇ ಕೆಲವು ಅಭಿಪ್ರಾಯಗಳು ವ್ಯಕ್ತವಾದವು– " ಕೆಳಜಾತಿಯ ಜನ ರಚಿಸಿದ ವಿಮೋಚನೆಯ

ಸಾಹಿತ್ಯವೇ ದಲಿತ ಸಾಹಿತ್ಯ ", " ಹುಟ್ಟಿನ ಕಾರಣಕ್ಕಾಗಿ ತಮ್ಮ ಜಾತಿ, ಸಂಸ್ಕೃತಿಯ ಬಗ್ಗೆ ಬಹಿರಂಗವಾಗಿ ಹೇಳಿಕೊಳ್ಳಲು ಅವಮಾನ ಪಟ್ಟುಕೊಳ್ಳುವ ಭಾಗದಲ್ಲಿದ್ದರೆ ಅವರ ಸಾಹಿತ್ಯವೆಲ್ಲ ದಲಿತ ಸಾಹಿತ್ಯವೇ ". " ಯಾರು ಹುಟ್ಟಿನಿಂದ ಅಸ್ಪೃಶ್ಯರಾಗಿದ್ದು ನಿರಂತರವಾಗಿ ದಲಿತಮನೋಧರ್ಮವನ್ನು ಮೈಗೂಡಿಸಿಕೊಂಡು ದಲಿತಪರ ಕಾಳಜಿಯನ್ನು ಕಾಯ್ದುಕೊಳ್ಳುತ್ತಾರೋ ಅವರೇ ದಲಿತರು, ಅವರು ಬರೆದ ಸಾಹಿತ್ಯವೇ ದಲಿತ ಸಾಹಿತ್ಯ. " ಇಲ್ಲೊಂದು ಪ್ರಶ್ನೆ ಉದ್ಭವವಾಗುತ್ತದೆ. ದಲಿತ ವ್ಯಕ್ತಿ ಬರೆದದ್ದೆಲ್ಲ ದಲಿತ ಸಾಹಿತ್ಯವೆ ? ಎಂದು. ದಲಿತ ಸಾಹಿತಿಗೆ ದಲಿತ ಪ್ರಜ್ಞೆ ಇರಲೇಬೇಕು. ಅಂದರೆ, ಅಸ್ಪೃಶ್ಯತೆ, ದಾಸ್ಯತನ, ವಿಷಮತೆ, ದುಃಖ – ಇತ್ಯಾದಿಗಳನ್ನು ಧಿಕ್ಕರಿಸುವ ಪ್ರಜ್ಞೆಯೇ ದಲಿತ ಪ್ರಜ್ಞೆ. ಸನಾತನ ಮೌಲ್ಯಗಳನ್ನು, ವರ್ಣ ಹಾಗೂ ಜಾತಿಯ ಶ್ರೇಷ್ಠತೆಯನ್ನು ವಿರೋಧಿಸುವುದೆಲ್ಲ ದಲಿತ ಪ್ರಜ್ಞೆಯಾಗುತ್ತದೆ. ಇಂತಹ ಪ್ರಜ್ಞೆ ದಲಿತೇತರರಲ್ಲಿ ಇರಲು ಸಾಧ್ಯವಿಲ್ಲ. ಆದ್ದರಿಂದ ಅಂತಹವರು ದಲಿತರ ಬಗ್ಗೆ ಬರೆದ ಸಾಹಿತ್ಯ ದಲಿತ ಸಾಹಿತ್ಯವಾಗುವುದಿಲ್ಲ ಎಂಬ ಖಚಿತ ನಿಲುವಿಗೆ ಬಂದದ್ದುಂಟು. ಹೀಗೆ ನಡೆದು ಬಂದ ಕನ್ನಡ ದಲಿತ ಸಾಹಿತ್ಯದ ಚಿಂತನೆ, ಮರಾಠಿ ದಲಿತ ಸಾಹಿತ್ಯದ ಚಿಂತನೆಯ ಮಾದರಿಯಲ್ಲಿಯೇ ಬೆಳೆದು ಬಂದಿತು.

**ಪ್ರೇರಣೆ :**

ಯಾವುದೇ ಸಾಹಿತ್ಯ ಪರಂಪರೆ ತನ್ನ ಸಾಧ್ಯತೆಗಳನ್ನು ಮುಗಿಸಿಕೊಂಡು ಸ್ಥಗಿತವಾಗುವ ಸಮಯಕ್ಕೆ ಮತ್ತೊಂದು ಸಾಹಿತ್ಯ ಪರಂಪರೆ ಹುಟ್ಟಿಕೊಳ್ಳುವುದಕ್ಕೆ ಬೇಕಾಗುವ ಆಶಯಗಳನ್ನು ತನ್ನ ಗರ್ಭದಲ್ಲಿಯೇ ಅಳವಡಿಸಿಕೊಂಡಿರುತ್ತದೆ. ಬಹಳ ಮುಖ್ಯವಾದ ಈ ಆಶಯದ ಜೊತೆಗೆ ಬೇರೆ ದೇಶದ, ಬೇರೆ ಕಾಲದ, ಬೇರೆ ಶಿಸ್ತಿನ ಹಲವು ಸಂಗತಿಗಳು ನೂತನ ಸಾಹಿತ್ಯದ ನಿರ್ಮಾಣಕ್ಕೆ ಕಾರಣವಾಗಿರುತ್ತವೆ. ಈ ಮಾತುಗಳು ಸಾಹಿತ್ಯದ ಶ್ರೇಷ್ಠತೆಯನ್ನು ಗುರುತಿಸಲು ಬೇಕಾಗುವ ಸೃಜನಶೀಲತೆಯ ನೆಲೆಯನ್ನು ಅರ್ಥ ಮಾಡಿಸುವುದಕ್ಕೆ ಭದ್ರವಾದ ನೆಲೆಗಟ್ಟನ್ನು ಒದಗಿಸುತ್ತವೆ. ಇಲ್ಲಿ ಮೊಟ್ಟ ಮೊದಲು ಗಮನಕ್ಕೆ ಬರುವವರು ಡಾ. ಬಾಬಾಸಾಹೇಬ ಅಂಬೇಡ್ಕರ್ ಅವರು. ನೋವಿನ ನೆಲೆಯಿಂದ ಬಂದ ಡಾ. ಅಂಬೇಡ್ಕರ್ ಅವರು ಸಮಾಜವನ್ನು ಸೂಕ್ಷ್ಮವಾಗಿ ನೋಡಿದವರು. ಫುಲೆ, ಬುದ್ಧ, ಕಬೀರ, ತುಕಾರಾಂ ರ ಪ್ರಭಾವವೂ ಅವರ ಮೇಲೆ ಆಗಿತ್ತು. ಹಾಗಾಗಿ ಅವರ ಮನಸ್ಸು ಸಂಸ್ಕಾರಗೊಂಡು ಅವರು ಶೋಷಿತರ, ದಲಿತರ ದನಿಯಾಗಿ ನಿಂತರು. " ನಮಗೆ ನ್ಯಾಯ ಬೇಕು. ಭಿಕ್ಷೆಯಲ್ಲ " ಎಂದು ಗಟ್ಟಿಯಾಗಿ ಮಾತನಾಡತೊಡಗಿದರು : " ನಿಮ್ಮ ಉದ್ಧಾರವನ್ನು ನೀವೇ ಮಾಡಿಕೊಳ್ಳಬೇಕೆಂದು " ಕರೆ ನೀಡಿ ೧೯೨೪ ಜುಲೈ ೨೦ ರಂದು 'ಬಹಿಷ್ಕೃತ ಹಿತಕಾರಿಣಿ ಸಭೆ' ಯನ್ನು ಆರಂಭಿಸಿದರು. 'Educate, Organise and Agitate' ಇದು ಅವರ ಪ್ರಣಾಳಿಕೆಯಾಯಿತು. ಅಂಬೇಡ್ಕರರ ಶಿಕ್ಷಣ ಪ್ರಸಾರ ಯೋಜನೆಗಳಿಂದಲೂ ದಲಿತರು ಪ್ರಭಾವಿತರಾದರು. ಶಿಕ್ಷಣ ಪ್ರಸಾರದಿಂದಾಗಿ ದಲಿತರು ತಮ್ಮ ಅನುಭವಗಳನ್ನು ಹಂಚಿಕೊಂಡರು. ೧೯೫೬ ರಲ್ಲಿ ಅಂಬೇಡ್ಕರ್ ಹಿಂದೂ ಧರ್ಮವನ್ನು ಬಿಟ್ಟು

ಬೌದ್ಧ ಧರ್ಮವನ್ನು ಅವಲಂಬಿಸಿದರು. ದಲಿತರಲ್ಲಿ ಇದು ಮಹತ್ವಪೂರ್ಣ ಬದಲಾವಣೆಯನ್ನು ಉಂಟುಮಾಡಿತು. ಅಂಬೇಡ್ಕರರ ಈ ಧರ್ಮ ಬದಲಾವಣೆ ಮೂಲತಃ ಮೌಲ್ಯಾಂತರವಾಗಿತ್ತು. ದಲಿತರ ನಿಜವಾದ ಪ್ರತಿಭಟನಾ ಸಾಹಿತ್ಯ ಹುಟ್ಟಲು ಇದೂ ಸಹ ಮುಖ್ಯವಾಯಿತು. " ವಿದ್ರೋಹಿ ಸಾಹಿತ್ಯ ಪ್ರಕಾರಗಳು ಸಾಹಿತ್ಯದಲ್ಲಿ ನಾಸ್ತಿಕತೆಯನ್ನು ಪೋಷಿಸಿದವು. ಈ ಸಾಹಿತ್ಯವು ಸಾಹಿತ್ಯದೊಳಗಿರುವ ಹಿಂದೂ ಧರ್ಮ ತ್ಯಜಿಸಿತು. ಕ್ರಾಂತಿಕಾರಿ ಜೀವನ ನಿಷ್ಠ ಸೌಂದರ್ಯಶಾಸ್ತ್ರವು ಈ ಸಂಸ್ಕೃತಿಯ, ಸಾಹಿತ್ಯದ ಸೌಂದರ್ಯ ಶಾಸ್ತ್ರವಾಗಿ ಪರಿಣಮಿಸಿತು. " [೩] ಹಿಂದೂ ಧರ್ಮದಲ್ಲಿನ ಸ್ಥಗಿತತೆಯನ್ನು, ಅಮಾನುಷತೆಯನ್ನು ವಿರೋಧಿಸುತ್ತ ಬೌದ್ಧ ಧರ್ಮದ ಮಾನವೀಯ ನೆಲೆಗಳನ್ನು ಅಪ್ಪವಾಗಿಸಿಕೊಂಡದ್ದು ಕ್ರಾಂತಿಕಾರಕವಾದುದು. ದಲಿತರಲ್ಲಿ ಇದರ ಅರಿವು ಮೂಡುತ್ತಲೇ ಅವರು ತಮ್ಮ ಸಂಕಟಗಳ ಮೂಲಭೂತ ಕಾರಣಗಳನ್ನು ಅರಿಯತೊಡಗಿದರು. ಅಸಮಾನತೆ, ಕ್ರೌರ್ಯ, ಮೌಢ್ಯ, ಅನ್ಯಾಯಗಳ ವಿರುದ್ಧ ಸಮರ ನಡೆಸುತ್ತಾ ಬಂದ ಅಂಬೇಡ್ಕರರ ಪ್ರಭಾವ ದಲಿತ ಲೇಖಕರ ಮೇಲಾಯಿತು. ಹಾಗೆ ನೋಡಿದರೆ ಇಡೀ ದಲಿತರಿಗೆ ಅಂಬೇಡ್ಕರ ಸ್ಫೂರ್ತಿಯ ಕೇಂದ್ರವಾಗಿಬಿಟ್ಟರು. ಅವರ ಬದುಕಿನ ಬದಲಾವಣೆಗೆ ನಿಜವಾದ ದಾತರಾದರು. " ತಲೆ ಎತ್ತಿ ದಾರಿ ಮೇಲೆ ನಡೆಯಲಾಗುತ್ತಿರಲಿಲ್ಲ, ಮೈ ಮೇಲೆ ಬಟ್ಟೆ ಹಾಕಿಕೊಳ್ಳಲಾಗುತ್ತಿರಲಿಲ್ಲ. ಹಾಗೆಯೇ ಕೈಯಲ್ಲಿ ಪುಸ್ತಕ ಹಿಡಿಯಲು ಆಗುತ್ತಿರಲಿಲ್ಲ, ಸ್ವತಂತ್ರವಾಗಿ ವಿಚಾರ ಮಾಡಲು ಆಗುತ್ತಿರಲಿಲ್ಲ. ಸಮೂಹ ಧೈರ್ಯ ಬರುತ್ತಿರಲಿಲ್ಲ. ಸ್ಫೂರ್ತಿಯಿಂದ ಕ್ರಾಂತಿ ಕವಿತೆಯ ಸಾಲುಗಳನ್ನು ಬರೆಯಲಿಕ್ಕಾಗುತ್ತಿರಲಿಲ್ಲ. ಪದ – ಪದವಿ ಪ್ರತಿಷ್ಠೆಗಳನ್ನು ಕಾಯ್ದುಕೊಳ್ಳಲಾಗುತ್ತಿರಲಿಲ್ಲ. ಮಾನವೀಯ ಮೌಲ್ಯಗಳಿಗಾಗಿ ಸೊರಗಲು, ಕೊರಗಲು ಆಗುತ್ತಿರಲಿಲ್ಲ. ಮಾನವ ಸ್ವಾತಂತ್ರ್ಯದ ಕ್ರಾಂತಿಗೀತೆಗಳನ್ನು ಮೈಮರೆತು ಹಾಡಲಾಗುತ್ತಿರಲಿಲ್ಲ. ಡಾ. ಅಂಬೇಡ್ಕರ್ ಅಂದರೆ ಒಂದು ವಿರಾಟ್ ಸ್ವರೂಪದ ಮಂತ್ರ, ಅದ್ಹೇಗೆಂದರೆ ಆ ಮಂತ್ರದಿಂದ ದಲಿತಸಾಹಿತ್ಯ ಮೈದುಂಬಿ ತುಳುಕುವಂತಾಯಿತು " [೪]

ಆಧುನಿಕ ಸಾಹಿತ್ಯದಲ್ಲಿ ಪಾಶ್ಚಾತ್ಯರನ್ನು ಅನುಕರಿಸುವುದೇ ಅತಿಯಾಯಿತು. ಅನುಕರಣೆ ಸಮಕಾಲೀನ ಸಂದರ್ಭಕ್ಕೆ ಪ್ರಸ್ತುತವಾಗಿರಲಿಲ್ಲ. ಪ್ರೀತಿ – ಪ್ರಣಯವನ್ನು ವಿಜೃಂಭಿಸಿ ಬರೆದರು; ಧರ್ಮ ಮತ್ತು ಪುರಾಣದ ಸಂಗತಿಗಳನ್ನು ವೈಭವೀಕರಿಸಿ ನೋಡಿದರು. ಹೀಗಾಗಿ ಅಂದಿನ ಸಾಹಿತ್ಯ ಬಹುಸಂಖ್ಯಾತ ಜನರ ಕಡೆಗೆ ಒಲವು ತೋರದೆ ವೈಯಕ್ತಿಕ ನೆಲೆಯಲ್ಲಿಯೇ ತನ್ನ ತೆವಲುಗಳನ್ನು ತೀರಿಸಿಕೊಂಡಿತು. ಆದ್ದರಿಂದ ಹಳ್ಳಿಯಿಂದ ಮತ್ತು ಅಸ್ಪೃಶ್ಯ ನೆಲೆಯಿಂದ ಬಂದವರಿಗೆ ಈ ಸಾಹಿತ್ಯ ಪರಕೀಯವಾಗೇ ಉಳಿಯಿತು. ದೇಶದಲ್ಲಿ ಹಲವಾರು ಕ್ಷೇತ್ರದಲ್ಲಿ ಬದಲಾವಣೆಗಳು ಆಗಿದ್ದರೂ ಸಾಹಿತ್ಯ ಮಾತ್ರ ತನ್ನ ದಿಕ್ಕನ್ನು ಬದಲಾಯಿಸಿರಲಿಲ್ಲ, ದಲಿತ ಸಾಹಿತ್ಯದ ಹುಟ್ಟಿಗೆ ಈ ಬೆಳವಣಿಗೆಗಳೂ ಕಾರಣವಾದವು.

ಮರಾಠಿ ಸಾಹಿತ್ಯಲೋಕದಲ್ಲಿ ಜನಪರವಾದ ಆಲೋಚನೆಗಳು, ದಲಿತಪರವಾದ ದನಿಗಳು ಮೂಡಲು ಕಷ್ಟವೆನಿಸುವ ವಾತಾವರಣ ಉಂಟಾದಾಗಲೂ ಅಲ್ಲಿ ತಮ್ಮ

ಅಭಿಪ್ರಾಯಗಳನ್ನು ಮಂಡಿಸಲು ಯಾವುದೇ ಅಡೆತಡೆ ಇರಬಾರದೆಂಬ ಒಂದು ವೇದಿಕೆಯೂ ಘುಟ್ಟಿಕೊಂಡಿತು. ಇದು ದಲಿತ ಸಾಹಿತ್ಯದ ವೈಶಿಷ್ಟ್ಯವಲ್ಲವೇ ? " ಈ ಸಾಹಿತ್ಯಕ್ಕೆ ಒದಗಿದ ಸಾಹಿತ್ಯಿಕ ಸಂದರ್ಭವನ್ನು ಗಮನಿಸಿದರೆ ಇದು ಸಾಹಿತ್ಯಕ್ಕಾಗಿ ಹುಟ್ಟಿ ಬರದೆ ಜೀವನದೊಳಗಿನಿಂದ ಜೀವನಕ್ಕಾಗಿ ಜನ್ಮ ತಳೆಯಿತೆಂಬುದು ಸ್ಪಷ್ಟವಾಗುತ್ತದೆ. ಕೇಶವಸುತರ ಕವಿತೆಗಳು, ಫುಲೆ, ಆಗರಕರರ ಸಾಹಿತ್ಯ, ಮರಾಠಿ ಸಾಹಿತ್ಯದ ಪರಂಪರೆಯೊಳಗಿನಿಂದ ಹುಟ್ಟಿ ಬಂದಿರಲಿಲ್ಲ. ಪರಂಪರೆಯನ್ನು ಪ್ರಶ್ನಿಸುವ, ಪರಂಪರೆ ಮರೆತ ಮೌಲ್ಯವನ್ನು ನೆನಪಿಸುವ ಪ್ರಖರ ವೈಚಾರಿಕತೆಯಿಂದ, ನೊಂದವರ ನೋವನ್ನು ನಿವಾರಿಸುವ ಮಾನವೀಯತೆಯಿಂದ ರೂಪುಗೊಂಡಿದ್ದವು. ಕೇಶವಸುತರು ಮರಾಠಿ ಸಾಹಿತ್ಯಲೋಕದ ಮೊದಲ ಬಂಡಾಯ ಕವಿ ಎನಿಸುತ್ತಾರೆ. ಮರಾಠಿ ಸಾಹಿತ್ಯ ಈ ಹಿಂದೆ ಕಾಣದಂಥ ಕ್ರಾಂತಿ ಕವಿತೆಗಳು ಕೇಶವಸುತರಿಂದ ರಚನೆಯಾದವು. 'ಅಂತ್ಯಜಾಚಾ ಮುಲಾಚಾ ಪಹಿಲಾ ಪ್ರಶ್ನ' ಮತ್ತು 'ಮಜೂರ' ಮುಂತಾದ ಕವಿತೆಗಳಿಂದ ಈ ಕವಿ ದಲಿತ ಸಾಹಿತ್ಯದ ಆದಿಕವಿ ಎನಿಸುತ್ತಾರೆ. "[೫] ನಂತರ ಮರಾಠಿ ಸಾಹಿತ್ಯದಲ್ಲಿ ಅಮಾನವೀಯ ಕೃತ್ಯಗಳ ವಿರುದ್ಧದ ಹೋರಾಟ ಶುರುವಾಯಿತು. ನಿರೀಕ್ಷಣೆ ಮೀರಿದ ಅನುಭವ ಗ್ರಹಿಕೆಗಳು ದಲಿತ ಸಾಹಿತ್ಯದಲ್ಲಿ ಕಾಣಿಸಿಕೊಂಡವು.

ಸುದೀರ್ಘ ಇತಿಹಾಸವನ್ನು ಒಳಗೊಂಡಿರುವ ನಮ್ಮ ನಾಡಿನ ಕನ್ನಡ ಸಾಹಿತ್ಯವನ್ನು ಗಮನಿಸಿದರೆ ಅಲ್ಲಲ್ಲಿ ದಲಿತಪರವಾದ ಆಶಯಗಳು ವ್ಯಕ್ತಗೊಂಡಿರುವುದನ್ನು ಗಮನಿಸಬಹುದು. " ಮಾನವ ಜಾತಿ ತಾನೊಂದೇ ವಲಂ " ಎಂದ ಪಂಪನ ಕಾವ್ಯದಿಂದ ಹಿಡಿದು ನವೋದಯ, ನವ್ಯದ ವರೆಗೆ ಅಲ್ಲಲ್ಲಿ ಈ ದನಿಗಳು ಕೇಳಿಬರುತ್ತವೆ. ಆಯಾ ಕಾಲದ ಸಂದರ್ಭಗಳಿಗೆ ತಕ್ಕಂತೆ ಅವು ಅಭಿವ್ಯಕ್ತಗೊಂಡಿರುವುದನ್ನು ಗಮನಿಸಬಹುದು. ಆದರೆ ಪ್ರಾಚೀನ ಸಾಹಿತ್ಯದಲ್ಲಿನ ಈ ದಲಿತಪರ ದನಿಗಳು ಆಧುನಿಕ ದಲಿತ ಪ್ರಜ್ಞೆಗಿಂತ ಭಿನ್ನವಾದವು. ಅಂದರೆ ಈ ರೀತಿಯ ಪ್ರಖರತೆಯನ್ನು ಅಲ್ಲಿ ಕಾಣಲು ಸಾಧ್ಯವಾಗುವುದಿಲ್ಲ. ಅಂದರೆ ನಿರೂಪಣಾ ಸ್ವರೂಪದಲ್ಲಿ ಈ ದನಿಗಳು ಭಿನ್ನತೆಯನ್ನು ಹೊಂದಿವೆ.

ದಲಿತ ಸಾಹಿತ್ಯವನ್ನು ಅವಲೋಕಿಸುವ ಸಂದರ್ಭದಲ್ಲಿ ೧೨ ನೇ ಶತಮಾನದ ವಚನ ಚಳುವಳಿಯನ್ನು ಗಮನಿಸಲೇಬೇಕು. ಕರ್ನಾಟಕದ ಚರಿತ್ರೆಯಲ್ಲಿ, ಕನ್ನಡ ಸಾಹಿತ್ಯದ ಸಂದರ್ಭದಲ್ಲಿ ೧೨ ನೇ ಶತಮಾನ ಒಂದು ವಿಶಿಷ್ಟ ಕಾಲಘಟ್ಟ. ಈ ಕಾಲದ ಚಳುವಳಿ ಸೃಷ್ಟಿಸಿದ ಸಾಹಿತ್ಯ, ನಡೆಸಿದ ಪ್ರಯೋಗಗಳು ಜಾಗತಿಕ ಮಟ್ಟದ ಸಾಹಿತ್ಯ ವಲಯದಲ್ಲಿ ಚರ್ಚೆಯ ವಸ್ತುವಾದವು. ಸಾಮಾಜಿಕ, ಸಾಹಿತ್ಯಕ್ಷೇತ್ರದಲ್ಲಿ ಗುರುತರವಾದ ಸ್ಥಿತ್ಯಂತರಕ್ಕೆ ಕಾರಣವಾದ ಸಂದರ್ಭವಿದು. ಗತ ಇತಿಹಾಸದಲ್ಲಿ ಕಂಡರಿಯದಷ್ಟು ಸುಧಾರಣೆಗಳನ್ನು ಕಂಡ ವಿಶಿಷ್ಟ ಸಂದರ್ಭವಿದು. ಬಸವಣ್ಣನೇ ಈ ಎಲ್ಲಾ ಸುಧಾರಣೆಗಳ ಕೇಂದ್ರಬಿಂದುವಾಗಿದ್ದ. ರಾಜಕೀಯವಾಗಿ ಬಸವಣ್ಣ ಉನ್ನತ ಸ್ಥಾನದಲ್ಲಿದ್ದುಕೊಂಡೇ ಹಲವಾರು ರೀತಿಯ ಕ್ರಾಂತಿಕಾರಕ ಬದಲಾವಣೆಗಳಿಗೆ

ಕಾರಣವಾದ ಆಳುವ ವರ್ಗದ ನಿರಂಕುಶತ್ವ ಮತ್ತು ವರ್ಣಾಶ್ರಮ ಧರ್ಮದ ವೈಪರಿತ್ಯಗಳ ವಿರುದ್ಧ ಹೋರಾಡಿದ. ಈತನ ಬೆಂಬಲದಿಂದಾಗಿ, ಶರಣ ಚಳುವಳಿಯಲ್ಲಿ ಅಲ್ಲಿಯವರೆಗೂ ಮೂಕರಾಗಿದ್ದವರಿಗೆ ಮಾತನಾಡುವ ಅವಕಾಶ ಒದಗಿ ಬಂತು. ಕೆಳವರ್ಗದ ವಚನಕಾರರು ಮೊದಲ ಬಾರಿಗೆ ನಿರ್ಭಿಡೆಯಿಂದ ಬಾಯಿಬಿಟ್ಟರು. ಅನೇಕ ವಚನಕಾರರು ತಾವು ಮಾಡುತ್ತಿದ್ದ ಕಾಯಕವನ್ನು ಆಧ್ಯಾತ್ಮಿಕ ಚಿಂತನೆಯ ಅಭಿವ್ಯಕ್ತಿ ಮಾಧ್ಯಮವೆಂದು ಭಾವಿಸಿದರು. ಅನೇಕ ದಲಿತ ವಚನಕಾರರನ್ನು ನೀಡಿದ್ದೂ ಸಹ ವಚನ ಚಳುವಳಿಯ ಒಂದು ವೈಶಿಷ್ಟ. ಇವರೆಲ್ಲ ತಮ್ಮ ವಚನಗಳ ಮೂಲಕ ಆತ್ಮ ವಿಮರ್ಶೆಯನ್ನು, ಸಮಾಜ ವಿಮರ್ಶೆಯನ್ನು ಮಾಡಿಕೊಂಡದ್ದಲ್ಲದೆ 'ಸಮಾಜೋ ಧಾರ್ಮಿಕ ಆಂದೋಲನ'ವಾಗಿ ಪರಿವರ್ತಿತವಾದ ಈ ಚಳುವಳಿಯಲ್ಲಿ ಜೇಡರ ದಾಸಿಮಯ್ಯ, ಅಂಬಿಗರ ಚೌಡಯ್ಯ, ಮಾದಾರ ಚೆನ್ನಯ್ಯ, ಡೋಹರ ಕಕ್ಕಯ್ಯ, ಮಡಿವಾಳ ಮಾಚಯ್ಯ, ಮಾದಾರ ಧೂಳಯ್ಯ, ಕಾಳವ್ವೆ, ಹಾವಿನಹಾಳ ಕಲ್ಲಯ್ಯ ಮೊದಲಾದ ದಲಿತವರ್ಗದ ಅನುಭಾವಿಗಳು ಮುಂಚೂಣಿಯಲ್ಲಿ ನಿಂತದ್ದು ಚಾರಿತ್ರಿಕ ದಾಖಲೆ. ಚಳುವಳಿಯ ಭಾಗವಾಗಿ ನಿರ್ಮಾಣಗೊಂಡ ವಚನಗಳಲ್ಲಿ ಇವರೆಲ್ಲ ತಮ್ಮ ಅನುಭವಗಳಿಗೆ ರೂಪನೀಡಿದರು. ಇಲ್ಲಿ ದಲಿತ ಮಹಿಳೆಯರ ಪಾತ್ರವನ್ನು ಅಲ್ಲಗಳೆಯುವಂತಿಲ್ಲ.

ವರ್ಗ ಮತ್ತು ವರ್ಣರಹಿತವಾದ, ಸಮಾನತೆಯಿಂದ ಕೂಡಿದ ಸಮಾಜ ರಚನೆ ಅವರ ಮುಖ್ಯ ಉದ್ದೇಶವಾಗಿತ್ತು. ಭಾರತದ ಸಂದರ್ಭದಲ್ಲಿಯೇ ಒಂದು ಸಾಮಾಜಿಕ ಪಿಡುಗಾಗಿದ್ದ ಜಾತೀಯತೆಯನ್ನು ಹೋಗಲಾಡಿಸಲು ಇವರೆಲ್ಲ ಪಣ ತೊಟ್ಟರು. ಆದ್ದರಿಂದಲೇ ಕರ್ನಾಟಕದಲ್ಲಿ ಜಾತಿ ನಿರ್ಮೂಲನೆ ಮಾಡಲು ಹೊರಟ ಮೊದಲ ಸಾಮಾಜಿಕ ಚಳುವಳಿ ಇದಾಗಿತ್ತು. ಆದರೆ ವೀರಶೈವ ಧರ್ಮ ಸಿದ್ಧಾಂತದ ಮ್ಯಾನಿಫ್ಯಾಸ್ಟೊ ಹೇಳುವ ಪ್ರಕಾರ ಜೀವನವನ್ನು ಗ್ರಹಿಸಲು ಹೊರಟಿದ್ದರಿಂದ ಸಾಮಾಜಿಕ ಬದುಕು ಹೊಸದಾಗಿ ಸೃಷ್ಟಿಗೊಳ್ಳಲಿಲ್ಲ. ಅವರ ಧೋರಣೆಗಳಿಂದ ಧಾರ್ಮಿಕ ಮನುಷ್ಯನ ಸೃಷ್ಟಿಯಾಯಿತೇ ಹೊರತು ಸಾಮಾಜಿಕ ಮನುಷ್ಯನ ನಿರ್ಮಾಣವಾಗಲಿಲ್ಲ ಎಂಬುದು ನಿಜ.

ನಂತರ ರಗಳೆ, ಷಟ್ಪದಿ, ಸಾಂಗತ್ಯ, ಕೀರ್ತನೆಗಳಲ್ಲಿ ಕಾವ್ಯಗಳು ರಚನೆಯಾದವು. ದೇಸಿ ಛಂದಸ್ಸಿನಲ್ಲಿ ಪ್ರಯೋಗಗೊಂಡ ಈ ಕಾವ್ಯಗಳು ಜನಭಾಷೆಗೆ ಪ್ರಾತಿನಿಧ್ಯ ನೀಡಿದವು. ಸಂವಹನದಲ್ಲಿನ ತೊಡಕನ್ನು ನಿವಾರಿಸಿದವು. ಆದರೆ ಶರಣ ಚಳುವಳಿ ನೀಡಿದ ಫಲವನ್ನು ಇವು ನೀಡಲಿಲ್ಲ. ಸಾಮೂಹಿಕ ಹೋರಾಟವಾಗಿ ಇವು ರೂಪುಗೊಳ್ಳಲಿಲ್ಲ. ಶೋಷಣೆಯ ವಿಚಾರವನ್ನು ಒಂದು ಗುಂಪಾಗಿ ಧಿಕ್ಕರಿಸಲು ಶರಣರ ನಂತರದವರಿಗೆ ಸಾಧ್ಯವಾಗಲೇ ಇಲ್ಲ.

ಸಾಹಿತ್ಯ ಲೋಕದಲ್ಲಿನ ಈ ಬದಲಾವಣೆಗಳು ಒಂದು ರೀತಿಯಾದರೆ, ಸಾಮಾಜಿಕ ಕ್ಷೇತ್ರದಲ್ಲಿನ ಸ್ಥಿತ್ಯಂತರಗಳು ಇನ್ನೊಂದು ರೀತಿಯವು. ಹಿಂದುಳಿದವರು

ತಾವು ಮುಂದೆ ಬರಬೇಕೆಂದು ಸಂಘಟಿತರಾದದ್ದು ಮಹತ್ವದ ವಿಷಯ. "ಕೇರಳ ಮತ್ತು ತಮಿಳುನಾಡುಗಳಲ್ಲಿ ಆದಂತೆ ೨೦ ನೆಯ ಶತಮಾನದ ಮೊದಲ ಭಾಗದಲ್ಲಿ ಹಳೆಯ ಮೈಸೂರಿನಲ್ಲಿಯೂ ಬ್ರಾಹ್ಮಣೇತರ ಜಾತಿಗಳ ಚಳುವಳಿ ಪ್ರಾರಂಭವಾಯಿತು. ಹಳೆಯ ಮೈಸೂರಿನ ಬ್ರಾಹ್ಮಣೇತರ ಜಾತಿಗೆ ಮುಖ್ಯ ಗುರಿಯಾಗಿದ್ದುದು ವಿದ್ಯಾಭ್ಯಾಸ ಮತ್ತು ಉದ್ಯೋಗಾವಕಾಶಗಳಲ್ಲಿ ತಮಗೆ ನ್ಯಾಯಬದ್ಧವಾಗಿ ದಕ್ಕಬೇಕಾಗಿದ್ದ ಪಾಲನ್ನು ಪಡೆದುಕೊಳ್ಳುವುದು. ಜಾತಿಪದ್ಧತಿಯಿಂದ ಬ್ರಾಹ್ಮಣರಿಗೆ ಲಭ್ಯವಾಗಿದ್ದ ಆನುವಂಶಿಕ ಸಾಂಸ್ಕೃತಿಕ ಸೌಲಭ್ಯ, ಧಾರ್ಮಿಕ ಪ್ರಕ್ರಿಯೆಗಳಲ್ಲಿನ ಉನ್ನತಸ್ಥಾನ, ವಸಾಹತುಶಾಹಿ ಶಿಕ್ಷಣ ಪದ್ಧತಿ ಅವರನ್ನು ಮೇಲಕ್ಕೆ ತಂದ ಕ್ರಮ – ಇವುಗಳಿಂದಾಗಿ ಅವರು ಪ್ರತಿಷ್ಠಿತ ಸ್ಥಾನದಲ್ಲಿದ್ದರು. ಶೇಕಡ ನಾಲ್ಕರಷ್ಟಿದ್ದ ಬ್ರಾಹ್ಮಣರು ಶೇಕಡ ಎಪ್ಪತ್ತರಷ್ಟು ಸ್ಥಾನಗಳನ್ನು ಹೊಂದಿರುವುದರ ವಿರುದ್ಧ ಎಲ್ಲ ಬ್ರಾಹ್ಮಣೇತರ ಜಾತಿ, ಜನಾಂಗಗಳು ಒಟ್ಟಾಗಿ ಚಳುವಳಿಯನ್ನು ಪ್ರಾರಂಭಿಸಿದವು."[೬] ಬಹುಪಾಲು ಮಂದಿ ಭಾವಿಸಿದಂತೆ ಇದು ಕರ್ನಾಟಕದ ಸಂದರ್ಭದಲ್ಲಿ ದಲಿತರು ಜಾಗೃತರಾದ ಆರಂಭದ ಹಂತ. ಹಾಗೆಯೇ ಮಹಾರಾಷ್ಟ್ರದ ಜ್ಯೋತಿಬಾ ಫುಲೆ, ಉತ್ತರ ಕರ್ನಾಟಕದ ಸಿದ್ಧಪ್ಪ ಕಂಬಳಿ, ತಮಿಳುನಾಡಿನ ಪೆರಿಯಾರರು ಇವರೆಲ್ಲ ದಲಿತರಿಗೆ ನ್ಯಾಯ ದೊರಕಿಸುವ ಚಳುವಳಿಯ ನೇತಾರರಾಗಿದ್ದರು.

ಕಾಲಗತಿಯಲ್ಲಿ ಜರುಗಿದ ಕೆಲವು ಸುಧಾರಣೆಗಳು ಸಮಕಾಲೀನ ಶಿಕ್ಷಣ, ಶ್ರಮಜೀವಿಗಳ ಪರವಾದ ಚಿಂತನೆಗಳು ಇವೆಲ್ಲದರಿಂದಾಗಿ ದಲಿತರಲ್ಲಿ ಅರಿವಿನ ವಾತಾವರಣ ಮೂಡತೊಡಗಿತು. ಸಾಹಿತ್ಯ ಕ್ಷೇತ್ರದಲ್ಲೂ, ಅದರಲ್ಲೂ ೪೦ ರ ದಶಕದ ಪ್ರಗತಿಶೀಲ ಸಾಹಿತ್ಯದಲ್ಲಂತೂ ದಲಿತರ ಬದುಕಿನ ವಿವಿಧ ಆಯಾಮಗಳು ಅಭಿವ್ಯಕ್ತಗೊಂಡವು. ಪ್ರಗತಿಶೀಲ ಪಂಥದ ಬರಹಗಾರರು, ಕಾರ್ಲ್ ಮಾರ್ಕ್ಸ್, ಮ್ಯಾಕ್ಸಿಂ ಗಾರ್ಕಿ ಮೊದಲಾದ ರಷಿಯನ್ ಬರಹಗಾರರಿಂದ ಪ್ರಭಾವಿತರಾದ್ದರಿಂದ ಸಹಜವಾಗಿ ಅವರ ಕತೆ, ಕಾದಂಬರಿಗಳಲ್ಲಿ ಶ್ರಮಜೀವಿಗಳ ಬದುಕು, ವೇಶ್ಯೆಯರು, ರೈತರು ಮೊದಲಾದವರ ಸಮಸ್ಯೆಗಳು, ದಲಿತರ ಮೇಲಿನ ದೌರ್ಜನ್ಯಗಳು ಹೇರಳವಾಗಿ ಅಭಿವ್ಯಕ್ತಗೊಂಡವು. ಹಾಗಾಗಿ ಪ್ರಗತಿಶೀಲ ಸಾಹಿತ್ಯ ಜನಸಮ್ಮುಖತೆಯನ್ನು ಪಡೆಯಿತು. ಇವರು ಬಳಸಿದ ಸಿದ್ಧಾಂತಗಳು ಹೊರಗಿನಿಂದ ಬಂದವುಗಳಾದರೂ ಒಳಗಿನ ಹೂರಣ ಮಾತ್ರ ನಮ್ಮದೇ ಆಗಿತ್ತು. ನಂತರ ಬಂದ ನವ್ಯ ಸಾಹಿತ್ಯ ಭಾಷೆಯಲ್ಲಿಯೇ ಕಸರತ್ತು ಮಾಡಿ ವ್ಯಷ್ಟಿ ನೆಲೆಯಲ್ಲಿ ಮುಳುಗಿ ಜನರಿಂದ ದೂರ ಸರಿಯಿತು. ನವ್ಯದ ಮಿತಿಗಳನ್ನು ಪೂರ್ಣಚಂದ್ರ ತೇಜಸ್ವಿಯವರು ಸ್ಪಷ್ಟವಾಗಿ ಸೂಚಿಸಿದ್ದಾರೆ. ಪಾಪಪ್ರಜ್ಞೆ, ಅನಾಥ ಪ್ರಜ್ಞೆ ಇವುಗಳಲ್ಲಿಯೇ ತೊಳಲಾಡಿದ ನವ್ಯ ಸಾಹಿತ್ಯ ಉಪಾಧ್ಯಾಯರಿಂದಲೇ ಸೃಷ್ಟಿಯಾದದ್ದನ್ನು, ಸಾಂಕೇತಿಕ ಶೈಲಿ - ತಂತ್ರಗಳಲ್ಲಿಯೇ ಮುಳುಗಿಹೋದದ್ದು, ಸಾಹಿತ್ಯದ ಮಟ್ಟಿಗೇನೆ ಕ್ರಾಂತಿಕಾರಕತನ ಸೀಮಿತಗೊಂಡದ್ದು – ಇತ್ಯಾದಿ ನವ್ಯದ ಅಧೋಗತಿಯನ್ನು ಯಾವುದೇ ಮುಲಾಜಿಲ್ಲದೆ ಘೋಷಿಸಿದರು. ತಮ್ಮ 'ಅಬಚೂರಿನ ಪೋಸ್ಟಾಫೀಸು' ಕಥಾಸಂಕಲನದ ಮುನ್ನುಡಿಯಲ್ಲಿ ಅವರು ನವ್ಯದ ಮಿತಿಗಳನ್ನು

ದೀರ್ಘವಾಗಿ ವಿಶ್ಲೇಷಿಸಿದ್ದಾರೆ. ಅವರ ಈ ಬರವಣಿಗೆ ನವ್ಯದ ಅಧೋಗತಿಯನ್ನು, ಹೊಸ ಸಂಸ್ಕೃತಿಯ ಮತ್ತು ಹೊಸ ಮಾದರಿಯ ಬರವಣಿಗೆಯ ಅಸ್ತಿತ್ವವನ್ನು ಸಾರಿತು. ಇದೇ ಸಂದರ್ಭದಲ್ಲಿ ತೆಲುಗಿನ ' ದಿಗಂಬರ ಕಾವ್ಯ ' ಹಾಗೂ ' ಮರಾಠಿ ದಲಿತ ಸಾಹಿತ್ಯ ' ಚಳುವಳಿಯ ಚಟುವಟಿಕೆಗಳು ರಭಸವಾಗಿದ್ದವು.

ಆಂಧ್ರಪ್ರದೇಶದಲ್ಲಿ ೧೯೬೫ ರಿಂದೀಚೆಗೆ ' ದಿಗಂಬರ ಕಾವ್ಯ ' ವ್ಯಾಪಕವಾಗಿಯೇ ವೃದ್ಧಿಸಿತು. ಇದರ ಪ್ರೇರಣೆ ದಲಿತ ಸಾಹಿತ್ಯದ ಮೇಲೂ ಉಂಟಾಯಿತು. ಚೆರಬಂಡರಾಜು, ನಗ್ನಮುನಿ, ನಿಖಿಲೇಶ್ವರ್, ಭೈರವಯ್ಯ ಮಹಾಸ್ವಪ್ನ, ಜ್ವಾಲಾಮುಖಿ ಮೊದಲಾದವರ ಪ್ರಭಾವಕ್ಕೆ ದಲಿತ ಲೇಖಕರು ಒಳಗಾದರು. ೧೯೬೭ ರಿಂದೀಚೆಗೆ ಮಹಾರಾಷ್ಟ್ರದಲ್ಲಿ ಜನಪ್ರಿಯತೆ ಗಳಿಸಿದ ದಲಿತ ಸಾಹಿತ್ಯ ಚಳುವಳಿ ಕನ್ನಡ ನಾಡಿನ ದಲಿತರ ಮೇಲೆ ಯಥೇಚ್ಛವಾಗಿ ಪ್ರಭಾವ ಬೀರಿತು. ಅಂಬೇಡ್ಕರ್ ಅವರು ದಲಿತರಿಗೆ ನಾಯಕರಾದುದರಿಂದಲೂ ಈ ಪ್ರಭಾವ ಅನಿವಾರ್ಯವಾಯಿತು. ಈ ನಡುವೆ ದಯಾ ಪವಾರ, ನಾಮದೇವ ಢಸಾಳ, ಲತೀಫಾ, ಕೇಶವ ಮೇಶ್ರಾಮ್, ವಾಮನ ನಿಂಬಾಳಕರ್, ಅರುಣ್ ಕಾಂಬಳೆ, ಬಾಬುರಾವ್ ಬಾಗುಲ್ – ಮೊದಲಾದವರ ಸಾಹಿತ್ಯದ ಪ್ರಭಾವ ಮತ್ತು ಪ್ರೇರಣೆ ಕನ್ನಡದ ದಲಿತರ ಮೇಲೆ ಉಂಟಾಯಿತು. ಹಾಗೆ ನೋಡಿದರೆ ಕರ್ನಾಟಕದ ಜನಪರ ಚಳುವಳಿಗೂ ಇವರಿಂದ ಸಾಕಷ್ಟು ಲಾಭವೇ ಆಯಿತು. ಜೊತೆಗೆ ಹಿಂದಿಯಲ್ಲಿ ಮಾರ್ಕ್ಸ್‌ವಾದಿಗಳ ಪ್ರಭಾವದಿಂದ ಕಾಣಿಸಿಕೊಂಡ ಜನವಾದಿಸಾಹಿತ್ಯ, ಕೇರಳದ ಮಾರ್ಕ್ಸ್‌ವಾದಿ ಲೇಖಕರ ಸಾಹಿತ್ಯ, ಅಂತರಾಷ್ಟ್ರೀಯ ಮಟ್ಟದಲ್ಲಿ ಪ್ರಭಾವ ಗಿಟ್ಟಿಸುತ್ತಿದ್ದ ' ಕಪ್ಪು ಸಾಹಿತ್ಯ ', ' ಗೆರಿಲ್ಲಾ ಸಾಹಿತ್ಯ ' ಮೊದಲಾದುವುಗಳೆಲ್ಲ ದಲಿತರ ಮೇಲೆ ಪ್ರಭಾವ ಬೀರಿದವುಗಳಾಗಿವೆ. ಇದರಿಂದ ತುಳಿತಕ್ಕೊಳಗಾದವರು ಸ್ಥಗಿತತೆಯ ವಿರುದ್ಧ ತಿರುಗಿಬೀಳುವಂತಾಯಿತು. ಜೊತೆಗೆ ತಮ್ಮ ಅನಿಸಿಕೆಗಳಿಗೆ ಅಭಿವ್ಯಕ್ತಿ ನೀಡುವಂತಾಯಿತು. ಇದು ಒಂದು ದೊಡ್ಡ ಸಾಧನೆಯೇ ಸರಿ. ೧೯೭೦ ರ ದಶಕದಲ್ಲಿ ಇದು ದಲಿತ ಪ್ರಜ್ಞೆಯ ಅಭಿವ್ಯಕ್ತಿಯಾಗಿ ಚಳುವಳಿಯ ರೂಪವನ್ನು ಪಡೆದದ್ದು ಚಾರಿತ್ರಿಕ ದಾಖಲೆ. ದಲಿತ ಸಾಹಿತ್ಯ ಬಂಡಾಯ ಸಾಹಿತ್ಯದೊಂದಿಗೆ ಕಾಣಿಸಿಕೊಂಡಿತು. ಇವೆರಡೂ ಜೊತೆ ಜೊತೆಯಲ್ಲಿಯೇ ಕಾಣಿಸಿಕೊಂಡವುಗಳೆಂದು ಹೇಳಿದರೂ, ದಲಿತ ಸಾಹಿತ್ಯದ ಚರಿತ್ರೆಯ ದೃಷ್ಟಿಯಿಂದ ಬೆಳಗಾವಿ ಜಿಲ್ಲೆಯ ದಲಿತ ಹೋರಾಟಗಾರ ದೇವರಾಯ ಇಂಗಳೆಯವರ ಅಪ್ರಕಟಿತ ಕವಿತೆ. ನಾಟಕಗಳನ್ನು ಗಮನಿಸಿದರೆ ಈ ಕಾಲ ಇನ್ನೂ ಹಿಂದೆ ಸರಿಯುತ್ತದೆ, ಅಂದರೆ ೧೯೧೮ ಕ್ಕೆ. – ಎಂದು ವಾದಿಸುವ ಸರಜೂ ಕಾಟ್ಕರ್ ಅವರ ಅಭಿಪ್ರಾಯವನ್ನು ಒಪ್ಪಲಾಗುವುದಿಲ್ಲ. ಇಂಗಳೆಯವರ ಸಾಹಿತ್ಯ ಪ್ರಕಟವಾಗಿಲ್ಲವಾದ್ದರಿಂದ ಪರಿಗಣನೆಗೆ ತೆಗೆದುಕೊಳ್ಳುವ ಅಗತ್ಯವಿಲ್ಲ. ಈ ಮುಂಚೆ ಪ್ರಸ್ತಾಪಿಸಿದಂತೆ ಜಿ. ವೆಂಕಟಯ್ಯನವರೇ ಆಧುನಿಕ ಕನ್ನಡ ದಲಿತ ಸಾಹಿತ್ಯದ ಮೊದಲ ಲೇಖಕರು.

ಆಧುನಿಕ ಭಾರತದಲ್ಲಿ ದಲಿತ ಸಾಹಿತ್ಯವನ್ನು ಕುರಿತು ಮಾತನಾಡುವಾಗ ಕೆಲವರ ಹೆಸರುಗಳನ್ನು ಉಲ್ಲೇಖಿಸಿಯೇ ಮುಂದೆ ಹೋಗಬೇಕಾಗುತ್ತದೆ. ಬಂಗಾಳಿ

ಭಾಷೆಯಲ್ಲಿ ಬರೆಯುತ್ತಿದ್ದ ಲೇಖಕರಲ್ಲಿ ರಾಜಾರಾಂ ಮೋಹನ್ ರಾಯ್, ಬಂಕಿಮಚಂದ್ರ, ಶರತ್‌ಚಂದ್ರ, ಠಾಕೂರ್ ಇವರೆಲ್ಲಾ ಮಾನವತಾವಾದಿಗಳು. ಇವರು ತುಳಿತಕ್ಕೆ ಸಿಕ್ಕವರನ್ನು ಗುರುತಿಸಲಿಲ್ಲ ನಿಜ, ಆದರೆ ಎಂ. ಎನ್. ರಾಯ್ ಮತ್ತು ರಂಗಭೂಮಿಯ ಮುಖಾಂತರ ಕೆಲಸ ಮಾಡಿದ ಉತ್ಪಲದತ್ತರನ್ನು ಮರೆಯಲಾಗದು. ಹಿಂದಿ ಭಾಷೆಯಲ್ಲಿ ೧೫, ೧೬ ನೇ ಶತಮಾನದ ಕಬೀರ್ ಮತ್ತು ರವಿದಾಸ್ ಮುಖ್ಯರು. ಲೋಹಿಯಾ ರಾಜಕೀಯವಾಗಿ ಪ್ರಭಾವ ಬೀರಿದರೆ, ಇವರು ಸಾಹಿತ್ಯರಂಗದಲ್ಲಿ ಆ ಪ್ರಮಾಣದಲ್ಲಿ ಪ್ರಭಾವ ಬೀರಿದರು. ಮಲೆಯಾಳಿ ಭಾಷೆಯಲ್ಲಿ ದಲಿತಕ್ಕಿಂತ ಎಡಪಂಥೀಯ ಸಾಹಿತ್ಯ ಹೆಚ್ಚು. ಕವಿ ಕುಮಾರ ಆಶಾನ್, ನಾರಾಯಣಗುರು ಈ ದೃಷ್ಟಿಯಲ್ಲಿ ಮುಖ್ಯರು. ಕೈಫಿ ಅಜ್ಮಿ, ಪರ್ವೇಜ್ ಸಹೇದಿ, ಸರ್ದಾರ್ ಜಾತ್ರಿ ಮೊದಲಾದ ಪ್ರಗತಿಪರರು ಉರ್ದು ಭಾಷೆಗೆ ಕೀರ್ತಿಯನ್ನು ತಂದುಕೊಟ್ಟವರು. ಬಿಹಾರಿಗಳಲ್ಲಿ ಕೀಳುಜಾತಿಗೆ ಸೇರಿದ ನಾಗಾರ್ಜುನ ಮತ್ತು ಫಣೀಶ್ವರನಾಥ ರೇಣು ದಲಿತ ಸಾಹಿತಿಗಳ ಗುಂಪಿನಲ್ಲಿಯೇ ಬರುತ್ತಾರೆ. ಪಂಜಾಬಿನಲ್ಲಿ ಸಿಖ್ ಆಂದೋಲನ ಮಾಡಿದ ಗುರುನಾನಕರು ವೈದಿಕ ಧರ್ಮದ ವಿರುದ್ಧ ಹೋರಾಡಿದವರು. ಇವರೂ ಸಹ ದಲಿತಸಾಹಿತಿಗಳ ಪಟ್ಟಿಯಲ್ಲಿ ಬರುತ್ತಾರೆ. ಇನ್ನು ದಲಿತಸಾಹಿತ್ಯ ಆರಂಭವಾದದ್ದೇ ಮರಾಠಿ ಭಾಷೆಯಲ್ಲಿ. ೧೯೩೫ ರ ವೇಳೆಗಾಗಲೇ ಅಲ್ಲಿ 'ಗ್ರಾಮೀಣ ಸಾಹಿತ್ಯ' ವಿಪುಲವಾಗಿತ್ತು. ಕೆಳವರ್ಗದ ಬದುಕಿನ ಸುತ್ತ ಸಾಹಿತ್ಯ ಹುಟ್ಟಲು ಅನುಕೂಲವಾಯಿತು. ರಾಜಕೀಯ ಬದಲಾವಣೆಯಾದಂತೆ ಸಾಹಿತ್ಯದಲ್ಲೂ ಬದಲಾವಣೆ ಕಂಡುಬಂದಿತು.

ದಲಿತ ಪ್ರಜ್ಞೆಯನ್ನು ಮೂಡಿಸಿಕೊಂಡು ಬರೆಯಲು ಹೊರಟ ದಲಿತ ಬರಹಗಾರರಿಗೆ ಮುಖ್ಯವಾಗಿ ಪ್ರೇರಣೆ ದೊರೆತದ್ದು ಮಹಾರಾಷ್ಟ್ರದ 'ದಲಿತ ಪ್ಯಾಂಥರ್' ಚಳುವಳಿಯಿಂದ. ಇದು ಉತ್ತರ ಕರ್ನಾಟಕದ ಲೇಖಕರ ಮೇಲೆ ಮೊದಲು ಪ್ರಭಾವ ಬೀರಿತು. ನಂತರ ಕರ್ನಾಟಕದ ಉಳಿದ ಭಾಗಗಳನ್ನು ಆವರಿಸಿಕೊಂಡಿತು. "ಪ್ಯಾಂಥರ್ಸ್ ಚಳುವಳಿಯು ಹಿಂದೂ ಧರ್ಮದ ಅನಿಷ್ಟಗಳಾದ ಚಾತುರ್ವರ್ಣ, ಜಾತೀಯತೆ, ಅಸ್ಪೃಶ್ಯತೆ, ದೇವರ ಪರಿಕಲ್ಪನೆ, ಡಂಭಾಚಾರ, ಧರ್ಮದ ದುರ್ಬಳಕೆ, ಅಮಾಯಕರ ಮೇಲೆ ದೌರ್ಜನ್ಯ ಮತ್ತು ಬ್ರಾಹ್ಮಣರು–ಬ್ರಾಹ್ಮಣೇತರರನ್ನು ವಂಚಿಸುವುದರ ವಿರುದ್ಧ ಪ್ರತಿಭಟಿಸಿ ನಡೆಸುವ ಚಳುವಳಿಯಾಗಿದೆ. ಅಂಬೇಡ್ಕರರ ಕನಸಿನ ಕೂಸಾದ 'ರಿಪಬ್ಲಿಕನ್ ಪಾರ್ಟಿ ಆಫ್ ಇಂಡಿಯಾ' ನಾಯಕತ್ವದ ಗೊಂದಲದಲ್ಲಿ ದಲಿತರ ಹಿತಾಸಕ್ತಿಗಳನ್ನು ಕಡೆಗಣಿಸಲಾಗಿ ಇದನ್ನು ವಿರೋಧಿಸಿ ಪ್ಯಾಂಥರ್ಸ್, ದಲಿತ ನಿಷ್ಠೆಯಿಂದ ಕ್ರಿಯಾಶೀಲವಾಗಬೇಕಾಯಿತು. ಜಮೀನ್ದಾರರು ಬಂಡವಾಳಶಾಹಿ, ನೌಕರಶಾಹಿ ಮತ್ತು ಸವರ್ಣೀಯರ ದೌರ್ಜನ್ಯಗಳನ್ನು ಎದುರಿಸಲು ಈ ಸಂಘಟನೆ ವ್ಯಾಪಕ ಕಾರ್ಯಕ್ರಮಗಳನ್ನು ಹಾಕಿಕೊಂಡಿತು. ಸರಕಾರಿ ವಲಯದಲ್ಲಿ ದಲಿತರಿಗೆ ಹೆಚ್ಚು ಸ್ಥಾನಗಳು ಮೀಸಲಿಡುವಂತೆ ಒತ್ತಾಯಿಸಿ ಪ್ಯಾಂಥರ್ಸ್ ಉಗ್ರಸ್ವರೂಪದ ಚಳುವಳಿ ಕೈಗೊಂಡಿತು. ಈ ಚಳುವಳಿ ಒಮ್ಮೊಮ್ಮೆ ಎಷ್ಟು

ಭಯಂಕರವಾಗಿತ್ತೆಂದರೆ ೭೦ ರ ದಶಕದಲ್ಲಿ ರಾಜ್ಯದ ಮುಖ್ಯಮಂತ್ರಿಗಳು, ವರಿಷ್ಠ ಅಧಿಕಾರಿಗಳು ನಿದ್ರೆಗೆಡಬೇಕಾದ ಪರಿಸ್ಥಿತಿ ಎದುರಾಯಿತು. ಮಹಾರಾಷ್ಟ್ರದ ಅವಿದ್ಯಾವಂತ ದಲಿತರು, ವಿದ್ಯಾರ್ಥಿಗಳು ಹಾಗೂ ಚಳುವಳಿಗಾರರು, ಅಂಬೇಡ್ಕರರ ಹೆಸರಿಗೆ ಸವರ್ಣೀಯ ಹಿಂದೂಗಳಿಂದ ಅವಮಾನವಾದಾಗ ತಮ್ಮ ಜೀವದ ಹಂಗು ತೊರೆದು ಹೋರಾಡಲು ಸಿದ್ಧರಾದರು." ೬ ದಲಿತ ಪ್ಯಾಂಥರ್ಸ್‌ನವರು ಹೊಸ ಹಾದಿಯನ್ನು ತೋರಿಸಿದರು. ದಲಿತರ ಭವಿಷ್ಯ ಅವರ ಕೈಯಲ್ಲಿಯೇ ಇರಬೇಕು ಎಂದು ದಲಿತರ ಮೇಲೆ, ಮೇಲ್ಜಾತಿಯವರು ಕಟ್ಟಿದ ಭೋಗ ಜೀವನವನ್ನು ಖಂಡಿಸಿದರು. 'ತ್ಯಾಗ' ಎಂಬುದು ಸುಳ್ಳು. ಅದು ಇರಲೇಬಾರದು, ಅದನ್ನು ಒಪ್ಪಲೇಬಾರದು. ಸಾಂಪ್ರದಾಯಿಕ ಮರಾಠಿ ಸಾಹಿತ್ಯವನ್ನು 'ಇದು ಬ್ರಾಹ್ಮಣರ ಸಾಹಿತ್ಯ', 'ಸದಾಶಿವ ಪೇಟೆ ಸಾಹಿತ್ಯ', 'ಚಿತ್ ಪಾವನ ಬ್ರಾಹ್ಮಣರ ಸಾಹಿತ್ಯ' – ಎಂಬುದಾಗಿ ಖಂಡಿಸಿದ್ದೂ ಉಂಟು. ಕನ್ನಡ ದಲಿತ ಕಾವ್ಯದ ಮೇಲೆ ವಿಶೇಷವಾದ ಪ್ರಭಾವವನ್ನು ಇದು ಬೀರಿತು. ಕಪ್ಪು ಸಾಹಿತ್ಯದ ಪ್ರತಿಭಟನೆಯಂತೂ ಭಾರತದ ಬೇರೆ ಬೇರೆ ಭಾಷೆಗಳ ಮೇಲೆ ಆದದ್ದು ಸ್ಪಷ್ಟ. ಕರ್ನಾಟಕವೂ ಸಹ ಇದರ ಪ್ರಭಾವಕ್ಕೆ ಒಳಗಾಯಿತು.

ಸಾಹಿತ್ಯಿಕ ಪ್ರೇರಣೆಗಳ ಜೊತೆಗೆ ಸಾಹಿತ್ಯೇತರ ಪ್ರೇರಣೆಗಳೂ ಕೆಲಸ ಮಾಡಿದವು. ಮುಖ್ಯವಾಗಿ ಎಡಪಂಥೀಯ ಸಿದ್ಧಾಂತಗಳೆಲ್ಲವೂ ದಲಿತ ಸಾಹಿತ್ಯದ ಮೇಲೆ ಪ್ರಭಾವ ಬೀರಿದವು. ಇದರ ಮೂಲಕ ಈ ಪಂಥದ ಲೇಖಕರ ಸೃಜನಶೀಲ ಚಟುವಟಿಕೆಗಳಿಗೆ ಬೆಂಬಲ ಒದಗಿತ್ತು. ಮಾರ್ಕ್ಸ್‌ವಾದ, ಲೋಹಿಯಾವಾದ, ಅಂಬೇಡ್ಕರ್‌ವಾದ ಈ ಸಿದ್ಧಾಂತಗಳು ಪ್ರಮುಖವಾದುವು. ಹಿಂದೆ ಬಂದ ಪ್ರಗತಿಶೀಲ ಚಳುವಳಿಯ ಮೇಲೂ ಮಾರ್ಕ್ಸ್‌ವಾದದ ಪ್ರಭಾವವಿತ್ತು. ದಲಿತ ಬಂಡಾಯದ ಮೇಲೂ ಇದು ಪ್ರಭಾವ ಬೀರಿತು. ಇದರಡಿಯಲ್ಲಿ ಬರುವ ಬಹುಪಾಲು ಲೇಖಕರು ಮಾರ್ಕ್ಸ್‌ವಾದಿಗಳೇ ಆಗಿದ್ದಾರೆ. ಅವರು ಎಲ್ಲ ಜಾತಿಗಳಲ್ಲಿ ಕಾಣಿಸುವ ನಿರ್ಗತಿಕರನ್ನು ಸಮಾನರೆಂದು ಭಾವಿಸಿ ವರ್ಗ ಸಂಘರ್ಷಕ್ಕೆ ಪ್ರಚೋದನೆ ನೀಡಿದರು. ಇವರು ಜಾತಿಯನ್ನು ಮುಖ್ಯವಾಗಿ ಪರಿಗಣಿಸದೆ ಆರ್ಥಿಕ ವಿಷಯಗಳಿಗೆ ಹೆಚ್ಚು ಗಮನ ಕೊಟ್ಟರು. " ಸಾಹಿತ್ಯಕೃತಿ ತಿಳಿದೋ ತಿಳಿಯದೆಯೋ ಬರಹಗಾರನ ವರ್ಗದ ಮಾನಸಿಕ ಧೋರಣೆಗಳನ್ನು ಪ್ರತಿಬಿಂಬಿಸುತ್ತದೆ. ಅಥವಾ ಸಾಮಾನ್ಯವಾಗಿ ಆಗುವಂತೆ ಬರಹಗಾರನ ಮೇಲಾಗುವ, ವಿವಿಧ ವರ್ಗಗಳಿಂದ ಪ್ರಭಾವಿತವಾದ ಬೆರಕೆ ಅಂಶಗಳನ್ನು ಪ್ರತಿಬಿಂಬಿಸುತ್ತದೆ ಎಂದು ಮಾರ್ಕ್ಸವಾದಿ ವಿಮರ್ಶಕರು ಭಾವಿಸುತ್ತಾರೆ. ಇಂಥ ಕಡೆ ಸೃಜನಶೀಲ ಬರಹಗಾರರು ಕೃತಿಯ ವಸ್ತುವಿನ ಬಗ್ಗೆ, ಅದರಲ್ಲಿರುವ ಸಮಾಜರೂಪದ ಬಗ್ಗೆ ಹೆಚ್ಚಿನ ಗಮನ ಹರಿಸುತ್ತಾರೆ. ಕೃತಿಯ ರೂಪಕ್ಕೆ ಇವರಲ್ಲಿ ಅಷ್ಟಾಗಿ ಗಮನವಿಲ್ಲ. ಪ್ರತಿ ಶ್ರೇಷ್ಠ ಕೃತಿಯಲ್ಲಿಯೂ ವಸ್ತುವೇ ರೂಪವನ್ನು ನಿರ್ಣಯಿಸುತ್ತದೆ ಎಂದು ನಂಬಿಯೇ ಇಲ್ಲಿ ಸಾಹಿತ್ಯ ಸೃಷ್ಟಿಯಾಗುತ್ತದೆ. ಇದರ ಜೊತೆಗೆ ಸಾಹಿತ್ಯದ ಮತ್ತು ಸಾಹಿತಿಯ ಹುಟ್ಟು ಸಮಾಜದ ಒಟ್ಟು ಉತ್ಪಾದನಾ ವ್ಯವಸ್ಥೆಯ ಒಂದು ಭಾಗವೇ ಆಗಿರುತ್ತದೆಂಬ ನಂಬಿಕೆ ಪೂರ್ವಗ್ರಹೀತವಾಗಿ ಇಲ್ಲಿ ಕೆಲಸ ಮಾಡುವುದರಿಂದ, ಸಾಹಿತಿ ಮತ್ತು ಅವನ ಸಾಹಿತ್ಯ

ಸಮಾಜದೊಂದಿಗೆ ಸ್ಪಂದಿಸಿಯೇ ತೀರಬೇಕೆಂದು ಅವರು ಹಠ ಹಿಡಿಯುತ್ತಾರೆ. ಈ ಹಠ ಅಂತಿಮವಾಗಿ ಸಾಹಿತಿಯು ರಾಜಕೀಯ ಸಂಗತಿಗಳಲ್ಲೂ ಆಸಕ್ತನಾಗಿರಬೇಕು ಎಂಬಲ್ಲಿಗೆ ತಲುಪುತ್ತದೆ. "[೮]

ರಾಮಮನೋಹರ ಲೋಹಿಯಾ ಅವರು ಬ್ರಾಹ್ಮಣೇತರ ಬರಹಗಾರರಿಗೆ ಮುಖ್ಯ ಪ್ರೇರಣೆಯಾದರು. ಅಧಿಕಾರ ವಿಕೇಂದ್ರೀಕರಣವನ್ನು ಒಳಗೊಂಡಂತೆ ಪುರಾಣದ ಸಂಗತಿಗಳ, ಜಾತಿಪದ್ಧತಿ, ಕಪ್ಪು-ಬಿಳುಪು ಸಮಸ್ಯೆ, ದೇಶಭಾಷೆಗಳ ಸ್ಥಿತಿಗತಿ – ಮೊದಲಾದವುಗಳ ಬಗ್ಗೆ ಅವರು ಮಂಡಿಸಿದ ವಿಚಾರಧಾರೆ ದಲಿತ ಬಂಡಾಯದ ಬರಹಗಾರರ ಮೇಲೆ ಗಾಢ ಪ್ರಭಾವ ಬೀರಿತು. ಇವರ ಸಿದ್ಧಾಂತಗಳು ದಲಿತ ಮತ್ತು ಬಂಡಾಯದವರಲ್ಲಿ ಸ್ಪಷ್ಟ ಗಡಿಗೆರೆಗಳನ್ನು ರೇಖಿಸಿದವು.

ಭಾರತೀಯ ಸಮಾಜದ ನ್ಯೂನತೆಗಳನ್ನು, ಸತ್ವಹೀನತೆಯನ್ನು ಕಣ್ಣಾರೆ ಕಂಡಿದ್ದ ಅಂಬೇಡ್ಕರ್ ಅವನ್ನೆಲ್ಲ ಆಮೂಲಾಗ್ರವಾಗಿ ಅಧ್ಯಯನ ನಡೆಸಿ ಸೂಕ್ತ ಪರಿಹಾರ ಕಂಡುಕೊಳ್ಳಲು ಹೋರಾಟವನ್ನು ಹುಟ್ಟು ಹಾಕಿದರು. "ಹಿಂದೂ ಧರ್ಮದ ಸಾಮಾಜಿಕ ವಿಪತ್ತಿಗೆ ಬ್ರಾಹ್ಮಣೀಕರಣ ಕಾರಣವೆಂದು ವಿಶ್ಲೇಷಿಸಿದ ಅವರು ಬ್ರಾಹ್ಮಣ್ಯವನ್ನು ಈ ಕೆಳಗಿನಂತೆ ಗುರ್ತಿಸಿದರು :

೧) ಅಸಮಾನತೆಯನ್ನು ನಿರಂತರವಾಗಿ ಪೋಷಿಸಿಕೊಂಡು ಬರುವುದು, ೨)ಅಸ್ಪೃಶ್ಯರನ್ನು ಮತ್ತು ಶೂದ್ರರನ್ನು ಸಂಪೂರ್ಣವಾಗಿ ನಿರಾಯುಧರನ್ನಾಗಿಸುವುದು, ೩) ಅಧಿಕಾರ ಸ್ಥಾನಗಳನ್ನು ಶೂದ್ರರು ಮತ್ತು ಅಸ್ಪೃಶ್ಯರು ಹೊಂದದಂತೆ ಷಡ್ಯಂತ್ರಗಳನ್ನು ರಚಿಸುವುದು. ೪) ಶೂದ್ರರು ಮತ್ತು ಅಸ್ಪೃಶ್ಯರಿಗೆ ಶಿಕ್ಷಣ ದೊರೆಯದಂತೆ ನಿಷೇಧ ಹೇರುವುದು. ೫) ಶೂದ್ರರಿಗೆ ಮತ್ತು ಅಸ್ಪೃಶ್ಯರಿಗೆ ಆಸ್ತಿ ನಿರಾಕರಣೆ ಮಾಡುವುದು. ಮತ್ತು ೬) ಮಹಿಳೆಯರಿಗೆ ಸ್ವಾತಂತ್ರ್ಯ ನಿರಾಕರಿಸುವುದು.

ಅಂಬೇಡ್ಕರರ ಪ್ರಕಾರ ಎಲ್ಲ ವಿಧಗಳಿಂದಲೂ ಅಸಮಾನತೆಯನ್ನು ಸಾಂಸ್ಥಿಕರಿಸುವುದೇ 'ಬ್ರಾಹ್ಮನಿಸಂ'ನ ಅಧಿಕೃತ ತತ್ವವಾಗಿದೆ. ಇದನ್ನು ತಲಸ್ಪರ್ಶಿಯಾಗಿ ವಿರೋಧಿಸಿದ ಅವರು ದಲಿತರ ಏಳಿಗೆಗಾಗಿ ಸ್ವ-ಸುಧಾರಣೆ, ಸ್ವ-ಪ್ರಗತಿ, ಸ್ವಾವಲಂಬನೆ, ಸ್ವಾಭಿಮಾನ, ಸ್ವ-ಪ್ರತ್ಯಯ – ಇವನ್ನು ಬಲವಾಗಿ ಪ್ರತಿಪಾದಿಸಿದರು. "[೯]

೧೯೬೯ ರಿಂದೀಚೆಗೆ ಚಳುವಳಿಗಳು, ಕೆಲವು ಘಟನೆಗಳು ದಲಿತ ಬಂಡಾಯದ ಮೇಲೆ ಪರಿಣಾಮವನ್ನು ಬೀರಿದ್ದುಂಟು. ಅವುಗಳನ್ನು ಚಾರಿತ್ರಿಕ ಮಹತ್ವದ ದೃಷ್ಟಿಯಿಂದ ಗಮನಿಸಲೇಬೇಕಾಗಿದೆ. ಸ್ವಾತಂತ್ರ್ಯ ಬರುವ ಪೂರ್ವದಲ್ಲಿ ಗಾಂಧಿ ಅನುಯಾಯಿಗಳಾದ ಗೋಪಾಲಸ್ವಾಮಿ ಅಯ್ಯರ್, ತಗಡೂರು ರಾಮಚಂದ್ರರಾಯರು. ರಂಗರಾಯರು, ಹರ್ಡೇಕರ್ ಮಂಜಪ್ಪ. ಕಾರ್ನಾಡ್ ಸದಾಶಿವರಾಯ್ ಮೊದಲಾದವರು ದಲಿತರನ್ನು ಉದ್ಧರಿಸುವ ಕೆಲವು ಪ್ರಗತಿಪರ ಕೆಲಸಗಳಲ್ಲಿ

ತೊಡಗಿದ್ದು ಮಹತ್ವದ ಸಂಗತಿ. ಇವರ ಈ ರೀತಿಯ ಕ್ರಿಯಾಶೀಲತೆ ದಲಿತರಲ್ಲಿ ಸ್ವಾಭಿಮಾನ ಮೂಡಿಬರಲು ಕಾರಣವಾಯಿತು. ಇಂಥ ಚಟುವಟಿಕೆಗಳಿಗೆ ಬಲಬರುವ ವಾತಾವರಣ ಕರ್ನಾಟಕದಲ್ಲಿ ಉಂಟಾಗತೊಡಗಿತು. ೧೯೬೯ ರಲ್ಲಿ ದೇವರಾಜ ಅರಸರ ಮುಖಂಡತ್ವದಲ್ಲಿ ಎಲ್. ಜಿ. ಹಾವನೂರ ಆಯೋಗದ ವರದಿ ಮಂಡಿಸಲ್ಪಟ್ಟಿತು. ಆ ಹಿನ್ನೆಲೆ, ಹಿಂದುಳಿದವರೆಲ್ಲ ಒಂದುಗೂಡಲು ಕಾರಣವಾಯಿತು. ೧೯೭೩ ರಲ್ಲಿ ಬಸವಲಿಂಗಪ್ಪನವರು ಕನ್ನಡ ಸಾಹಿತ್ಯವನ್ನು 'ಬೂಸಾ' ಎಂದು ಕರೆದರೆಂದು ದೊಡ್ಡ ದಾಂಧಲೆಯೇ ನಡೆಯಿತು. 'ಬೂಸಾ ಪ್ರಕರಣ' ದಿಂದಾಗಿ ಬುದ್ಧಿಜೀವಿಗಳು ಸಂಘಟಿತರಾದರು. ನಂತರದಲ್ಲಿ ಹುಟ್ಟಿಕೊಂಡ ದಲಿತ ಸಂಘಟನೆಗಳು ರಾಜಕೀಯವಾಗಿ ಸಾಮಾಜಿಕವಾಗಿ ಖಚಿತವಾದ ಸೈದ್ಧಾಂತಿಕ ಸ್ವರೂಪ ಪಡೆದುಕೊಂಡವು. ಇದೇ ಬೂಸಾ ಪ್ರಕರಣದಲ್ಲಿ ಸುದ್ದಿಯಾದ ಬಸವಲಿಂಗಪ್ಪನವರು ದಲಿತರು ಮಲಹೊರುವ ಅಮಾನುಷ ಪದ್ಧತಿಯನ್ನು ನಿಲ್ಲಿಸಬೇಕೆಂದು ದನಿ ಎತ್ತಿದ್ದರು; ಜೊತೆಗೆ ವೈಚಾರಿಕತೆಯ ಬಗೆಗೂ ಹೋರಾಟ ಸಾಧಿಸಿದರು. ಇದರ ಪರಿಣಾಮವಾಗಿ ೧೯೭೩ ಆಗಸ್ಟ್ ೨೫-೨೬ ರಂದು ಮೈಸೂರಿನಲ್ಲಿ 'ಜಾತಿ ವಿನಾಶ ಸಮ್ಮೇಳನ' ಜರುಗಿತು. ಲೋಹಿಯಾವಾದಿಗಳು ಇದರ ಹಿನ್ನೆಲೆಯಲ್ಲಿ ಕಾರ್ಯೋನ್ಮುಖರಾದರು. ೧೯೭೪ ಏಪ್ರಿಲ್ ೨೦, ೨೧ ರಂದು ಮೈಸೂರಿನಲ್ಲಿ 'ಬರಹಗಾರರ ಮತ್ತು ಕಲಾವಿದರ ಒಕ್ಕೂಟ' ರಚನೆಯಾಯಿತು. ಆಗಲೂ ಜಾತಿ ವಿನಾಶ ಸಮ್ಮೇಳನದಲ್ಲಿ ಭಾಗವಹಿಸಿದವರೇ ಇದರಲ್ಲೂ ಭಾಗವಹಿಸಿದ್ದರು. ಆದರೆ ಕುವೆಂಪು ಮಾಡಿದ ಉದ್ಘಾಟನಾ ಭಾಷಣದಿಂದಾಗಿ ಶೂದ್ರ ಪ್ರಜ್ಞೆ ಜಾಗೃತವಾಯಿತು. ಅದುವರೆಗೆ ಜಡವಾಗಿದ್ದ ಬರಹಗಾರರೆಲ್ಲ ಎಚ್ಚರಗೊಂಡರು. ಕಾಲಕ್ರಮದಲ್ಲಿ ದಲಿತರಲ್ಲೂ ಜಾಗೃತಿ ಮೂಡಿತು. ತಮ್ಮ ಸಮಸ್ಯೆಗಳನ್ನು ನಿವಾರಿಸಿಕೊಳ್ಳಲು ಮತ್ತು ಹೋರಾಡಲು ಅವರಿಗೆ ಸಂಘಟನೆಯ ಆವಶ್ಯಕತೆ ಇದೆ ಎನಿಸಿತು. ಇದರ ಪರಿಣಾಮವಾಗಿ ೧೯೭೪ ರಲ್ಲಿ ಭದ್ರಾವತಿಯಲ್ಲಿ 'ದಲಿತ ಸಂಘರ್ಷ ಸಮಿತಿ' ಹುಟ್ಟಿಕೊಂಡಿತು. ಮುಂದೆ ಇದು 'ಕರ್ನಾಟಕ ದಲಿತ ಸಂಘರ್ಷ ಸಮಿತಿ' ಎನಿಸಿಕೊಂಡು ದಲಿತ ಪರವಾದ ದನಿ ಎತ್ತಿತು. ಇದರ ಪ್ರಭಾವದಿಂದಾಗಿ 'ದಲಿತ ವಿದ್ಯಾರ್ಥಿ ಒಕ್ಕೂಟ', 'ದಲಿತ ಮಹಿಳಾ ಒಕ್ಕೂಟ', 'ದಲಿತ ಕಲಾ ಮಂಡಳಿ', 'ದಲಿತ ನೌಕರರ ಒಕ್ಕೂಟ', 'ದಲಿತ ವೈದ್ಯರ ಒಕ್ಕೂಟ' —ಮೊದಲಾದ ಸಂಘಟನೆಗಳು ಜನ್ಮತಾಳಿದುವು. ಮಹಾರಾಷ್ಟ್ರದಲ್ಲಿ ದಲಿತ ಚಳುವಳಿಯಲ್ಲಿ ಪ್ಯಾಂಥರ್ಸ್ ವಹಿಸಿದ ಪಾತ್ರವನ್ನು ನಮ್ಮಲ್ಲಿ ದಲಿತ ಸಂಘರ್ಷ ಸಮಿತಿ ನಿರ್ವಹಿಸಿತು. ದಲಿತ ಸಾಹಿತ್ಯ ವ್ಯಾಪಕವಾಗಿ ಬೆಳೆಯಲು, ಅದು ಜನಪ್ರಿಯತೆ ಹೊಂದಲು ದಲಿತ ಸಂಘರ್ಷ ಸಮಿತಿಯೇ ಮುಖ್ಯ ಕಾರಣವಾಯಿತು. ದೇವರಾಜ ಅರಸರ ಕಾಲದ 'ಭೂ ಸುಧಾರಣೆಯ' ಕಾನೂನುಗಳಿಂದ ಭೂಮಿ ಇಲ್ಲದವರು ಭೂಮಿಯನ್ನು ಪಡೆಯುವಂತಾಯಿತು. ಅರಸರ ಸರ್ಕಾರ ಜಾರಿಗೆ ತಂದ ಮೀಸಲಾತಿಯಿಂದಲೂ ದಲಿತ ನೌಕರರು ಶಿಕ್ಷಣ ಪಡೆಯಲು ಅನುಕೂಲವಾಯಿತು. ಕತ್ತಲ ಜಗತ್ತಿನಲ್ಲಿದ್ದ ದಲಿತರು ಅಕ್ಷರ ಕಲಿತದ್ದಲ್ಲದೆ ಪ್ರಪ್ರಥಮ ಬಾರಿಗೆ ಸಾಹಿತ್ಯಲೋಕವನ್ನು ಪ್ರವೇಶಿಸಿದ್ದು

ಮಹತ್ವದ ಸಂಗತಿ. ಹಳ್ಳಿಗಾಡಿನಿಂದ ಬಂದವರಿಗೆ ಗಾಢ ಅನುಭವಗಳಿದ್ದದ್ದರಿಂದ ಅವರು ಅಲ್ಲಿಯ ಜಾನಪದ ಲೋಕವನ್ನು ತೆರೆದಿಡುವ ಅವಕಾಶ ಪಡೆದುಕೊಂಡರು. ಅಲ್ಲಿಯ ಜಾತಿ-ಜನಾಂಗಗಳನ್ನು ಕುರಿತು ಅಧ್ಯಯನಗಳು ಆರಂಭವಾದವು. ಈ ರೀತಿಯ ಚಿಂತನೆಗಳು ದಲಿತ ಸಾಹಿತ್ಯಕ್ಕೆ ಹೊಸ ಆಯಾಮ ನೀಡಿದವು. ಇವುಗಳ ಪ್ರಭಾವ ಸಾಹಿತ್ಯ ಕ್ಷೇತ್ರದಲ್ಲಿ ಉಂಟಾಗಿ ೧೯೭೬ ರಲ್ಲಿ ಭದ್ರಾವತಿಯಲ್ಲಿ 'ದಲಿತ ಬರಹಗಾರರ ಯುವ ಸಂಘಟನೆ' ಹುಟ್ಟಿಕೊಳ್ಳಲು ಕಾರಣವಾಯಿತು (ದಲಿತ, ಬಂಡಾಯದಲ್ಲಿ ಯಾವುದು ಮೊದಲು ಎಂದು ಕೇಳುವವರಿಗೆ ಇಲ್ಲಿ ಉತ್ತರ ದೊರೆಯಬಹುದು).

ಭೀಮಸೇನೆಯ ಚಟುವಟಿಕೆ ಹಾಗೂ ಕಮ್ಯೂನಿಸ್ಟ್ ಪಕ್ಷದ ಚಟುವಟಿಕೆಗಳೂ ಸಹ ದಲಿತರ ಜಾಗೃತಿಗೆ ಕಾರಣವಾದವು. ೧೯೭೫ ಜೂನ್ ೨೫ ರಂದು ಹೇರಲ್ಪಟ್ಟ 'ತುರ್ತು ಪರಿಸ್ಥಿತಿ' ಯನ್ನು ವಿರೋಧಿಸಿದ ಸಾಹಿತ್ಯ ನಿರ್ಮಾಣವಾಯಿತು. ಸಿದ್ಧಲಿಂಗಯ್ಯ ಇಂದಿರಾ ಗಾಂಧಿಯನ್ನು ಕುರಿತು 'ಕರಾಳ ರಾಣಿಯ ಕತೆ' ಎಂಬ ಕವಿತೆಯನ್ನೇ ಬರೆದರು. ಈ ಸಂದರ್ಭದಲ್ಲಿ ರಾಜಕೀಯ ಪ್ರಜ್ಞೆ ಸಾಹಿತಿಗಳಿಗೆ ಅನಿವಾರ್ಯವಾಯಿತು.

೧೯೭೯ ಮಾರ್ಚ್ ೯ ರಿಂದ ೧೧ ರ ವರೆಗೆ ಧರ್ಮಸ್ಥಳದಲ್ಲಿ ಕನ್ನಡ ಸಾಹಿತ್ಯ ಪರಿಷತ್ತಿನ ವತಿಯಿಂದ ಅಖಿಲಭಾರತ ಕ. ಸಾ. ಸಮ್ಮೇಳನ ಜರುಗಿತು. ಅಡಿಗರು ಅದರ ಅಧ್ಯಕ್ಷರಾಗಿದ್ದರು. ಡಾ. ಹಂಪ ನಾಗರಾಜಯ್ಯ ಅವರು ಪರಿಷತ್ತಿನ ಅಧ್ಯಕ್ಷರಾಗಿದ್ದರು. ಸಮ್ಮೇಳನದಲ್ಲಿ ದಲಿತಗೋಷ್ಠಿಯನ್ನು ನಡೆಸಬೇಕೆಂದು ಒತ್ತಡಗಳು ಬಂದಾಗ ದಲಿತ, ಬಲಿತ ಎಂಬ ಪ್ರತ್ಯೇಕತೆ ಮಾಡಬಾರದು ಎಂದು ಹೇಳಿ ದಲಿತಗೋಷ್ಠಿ ಏರ್ಪಡಿಸುವುದನ್ನು ನಿರಾಕರಿಸಿದರು. ಆ ಕೋಪದಿಂದಾಗಿ ದಲಿತರ ಪರವಾದ ಬಂಡಾಯ ಲೇಖಕರೆಲ್ಲ ಸೇರಿ ಅದೇ ದಿನ ಪರ್ಯಾಯವಾಗಿ ಬೆಂಗಳೂರಿನಲ್ಲಿ ಬಂಡಾಯ ಸಾಹಿತ್ಯ ಸಮ್ಮೇಳನ ನಡೆಸಿದರು. ಪರಿಷತ್ತಿಗೂ ದಲಿತ ಕಾಳಜಿ ಇದೆ ಎಂಬುದನ್ನು ತೋರಿಸುವ ಸಲುವಾಗಿ ಅದು ೧೯೭೯ ಮೇ ೬ ರಂದು ಬೆಂಗಳೂರಿನಲ್ಲಿ 'ದಲಿತ ಸಾಹಿತ್ಯ' ಕುರಿತ ವಿಚಾರ ಸಂಕಿರಣ ಏರ್ಪಡಿಸಿತು. ೧೯೭೯ ರಲ್ಲಿ ಡಿಸೆಂಬರ್ ೧೬ ರಂದು 'ದಲಿತ ಮಕ್ಕಳು' ಕುರಿತ ವಿಚಾರ ಸಂಕಿರಣ ಜರುಗಿತು. ಕಲ್ಲೆ ಶಿವೋತ್ತಮರಾವ್ ಸಂಪಾದಕತ್ವದಲ್ಲಿ 'ದಲಿತ ಮಕ್ಕಳು' ಸ್ಮರಣ ಸಂಚಿಕೆಯನ್ನು ಬಿಡುಗಡೆ ಮಾಡಿತು. ಬಂಡಾಯ ಚಳುವಳಿಯ ಬಗ್ಗೆ ಭಿನ್ನಾಭಿಪ್ರಾಯವಿದ್ದವರೆಲ್ಲ ಪರಿಷತ್ತಿನ ದಲಿತ ಸಾಹಿತ್ಯ ಚಟುವಟಿಕೆಗಳಲ್ಲಿ ಭಾಗವಹಿಸತೊಡಗಿದರು. 'ಪರಿಷತ್ತು ಸಮಕಾಲೀನ ಆಶಯಗಳಿಗೆ ಸ್ಪಂದಿಸುತ್ತಿಲ್ಲ' —ಎಂಬ ಆರೋಪದಿಂದ ಪಾರಾಗಲು ಸಿ. ವೀರಣ್ಣನವರ ಸಂಪಾದಕತ್ವದಲ್ಲಿ 'ಕನ್ನಡ ಪ್ರತಿಭಟನೆ ಕಾವ್ಯ' ವನ್ನು ಹೊರತಂದಿತು. ಈ ಆಂಥಾಲಜಿಗೆ ಕವಿತೆಗಳನ್ನು ಕೊಡಬಾರದೆಂದು ಬಂಡಾಯ ಸಂಘಟನೆಯ ಆದೇಶವಿದ್ದರೂ. ಕೆಲವರು ಎಲ್ಲಿ ಅವಕಾಶ ತಪ್ಪಿ ಹೋಗುತ್ತದೋ ಎಂದು ಭಾವಿಸಿ ತಮ್ಮ ಕವಿತೆಗಳನ್ನು ಅದರಲ್ಲಿ ಸೇರಿಸಿಕೊಳ್ಳಲು ಅಪ್ಪಣೆ ನೀಡಿದರು. ಒಬ್ಬರಾದ ಮೇಲೆ

ಒಪ್ಪಿರಂತೆ ಪರಿಷತ್ತಿನ ಒಳ ಪ್ರವೇಶಿಸಿಯೇ ಬಿಟ್ಟರು. ಬರಗೂರರನ್ನು ಬಿಟ್ಟರೆ ದಲಿತಪರವಾದ ಲೇಖಕರನೇಕರು ಬದ್ಧತೆಯನ್ನೇ ಮೀರಿಬಿಟ್ಟರು. ಪರಿಷತ್ತಿನ ಲಾಭ ಪಡೆದರು. ಆಗಿನಿಂದ ಒಳಗೊಳಗೇ ಈ ಗುಂಪಿನ ಲೇಖಕರಲ್ಲಿ ಭಿನ್ನಾಭಿಪ್ರಾಯಗಳು ಮೂಡಿದವು.

೧೯೮೩ ಡಿಸೆಂಬರ್ ೧೦, ೧೧ ರಂದು ಬಂಡಾಯ ಚಳುವಳಿಯಿಂದ ಅಸಮಾಧಾನಗೊಂಡಿದ್ದ ದಲಿತ ಲೇಖಕರು ಬೇರ್ಪಟ್ಟರು. ಬಂಡಾಯಕ್ಕೆ ಪರ್ಯಾಯವಾದ ಚಳುವಳಿಯನ್ನು ಕಟ್ಟುವುದಕ್ಕೆ ಅಲ್ಲ. ಹೆಚ್ಚಿನ ಸಂಖ್ಯೆಯಲ್ಲಿ ನಾವೇ ಇರುವಾಗ ಪ್ರತ್ಯೇಕವಾದ ದಲಿತ ವೇದಿಕೆಯಲ್ಲಿ ಯಾಕೆ ತಮ್ಮ ಅಸ್ತಿತ್ವವನ್ನು ಕಂಡುಕೊಳ್ಳಬಾರದು ಎಂಬ ಉದ್ದೇಶದಿಂದ ಪ್ರತ್ಯೇಕ ಗುಂಪಾದರು. ಇದರ ಫಲವಾಗಿ ರೂಪುಗೊಂಡದ್ದೇ ಧಾರವಾಡದಲ್ಲಿ ಏರ್ಪಾಟಾದ ' ದಲಿತ ಲೇಖಕರ ಕಲಾವಿದರ ಬಳಗ. ' ಇದರ ರೂಪರೇಷೆಗಳನ್ನು ಅಲ್ಲಿ ನಿರ್ಧರಿಸಲಾಯಿತು : ೧) ದಲಿತ ಸಾಹಿತ್ಯದ ಸಮಸ್ಯೆಗಳನ್ನು ಕುರಿತು ವಿಚಾರ ಸಂಕಿರಣ ನಡೆಸುವುದು, ೨) ಕವಿ ಸಮ್ಮೇಳನಗಳನ್ನು ಸಂಘಟಿಸುವುದು, ೩) ಯುವ ಸಾಹಿತಿ ಕಲಾವಿದರನ್ನು ತರಬೇತುಗೊಳಿಸಲು ಶಿಬಿರಗಳನ್ನು ಏರ್ಪಡಿಸುವುದು, ೪) ದಲಿತ ಲೇಖಕರ ಕೃತಿಗಳನ್ನು ಪ್ರಕಟಿಸುವುದು – ಇತ್ಯಾದಿ ನಿರ್ಣಯ ಕೈಗೊಳ್ಳಲಾಯಿತು. ಈ ಯೋಜನೆಗಳನ್ನು ಕಾರ್ಯರೂಪಕ್ಕೆ ತರಲು ಒಂದು ಸಮಿತಿಯನ್ನು ರಚಿಸಲಾಯಿತು. ಅದರಲ್ಲಿ ಇಂದೂಧರ ಹೊನ್ನಾಪುರ, ವಿ. ಮುನಿವೆಂಕಟಪ್ಪ, ಸಿದ್ಧಲಿಂಗಯ್ಯ, ಬೋಳು ಬಂಡೆಪ್ಪ, ಡಾ. ಬಿ. ಕೃಷ್ಣಮೂರ್ತಿ ಇದ್ದರು. ಹಾಗೆಯೇ ದಲಿತ ಸಂಘರ್ಷ ಸಮಿತಿಯಲ್ಲೂ ಒಡಕುಂಟಾಗಿ ೧೯೮೬ ಡಿಸೆಂಬರ್ ೨೧ ರಂದು ಬೆಂಗಳೂರಿನಲ್ಲಿ ' ದಲಿತ ಸಾಹಿತಿಗಳ ಸಮಾವೇಶ ' ಜರುಗಿತು.

ಮೀಸಲಾತಿಯಿಂದ ದಲಿತರಲ್ಲಾದ ಸುಧಾರಣೆಗಳು, ಮತಾಂತರದ ಪ್ರಸಂಗಗಳು, ವ್ಯಾಪಕವಾಗಿ ಜರುಗುತ್ತಿರುವ ಜಾನಪದ ಅಧ್ಯಯನ, ದೇಸಿ ನೆಲೆಯಲ್ಲಿ ನಡೆಯುತ್ತಿರುವ ಉಪಸಂಸ್ಕೃತಿಗಳ ಅಧ್ಯಯನ– ಈ ಎಲ್ಲ ನೆಲೆಗಳಿಂದ ದಲಿತರಲ್ಲಿ ಜಾಗೃತಿ ಪ್ರಜ್ಞೆ ನೆಲೆಯೂರಿ, ಪಟ್ಟಪಾಡುಗಳನ್ನು ಸಾಹಿತ್ಯವಾಗಿಸುವ ದಿಸೆಯಲ್ಲಿ ದಲಿತ ಲೇಖಕರು ಕಾರ್ಯೋನ್ಮುಖರಾಗಿದ್ದಾರೆ. ಅಖಂಡವಾದ ದುಃಖದುಮ್ಮಾನಗಳೇ ಇವರ ಸಾಹಿತ್ಯದ ಮೂಲ ಸ್ರೋತವಾದವು. ಚಳುವಳಿಯನ್ನು ಸಂಘಟಿಸುತ್ತಲೇ ದಲಿತ ಸಾಹಿತ್ಯ ರಚನೆಗೂ ಕಾರಣರಾದರು.

ಜಾನಪದದಂತೆ, ಬದುಕು ಮತ್ತು ದಲಿತರ ಸಾಹಿತ್ಯ ರಚನೆ ಜೊತೆ ಜೊತೆಯಾಗಿ ಸಾಗಿದವು. ಭೂ ಆಕ್ರಮಣ ಹೋರಾಟಗಳು, ವೆಂಕಟಸ್ವಾಮಿ ಆಯೋಗದ ವರದಿ, ಮುನಿವೆಂಕಟಪ್ಪನವರ ' ಕೆಂಡದ ನಡುವೆ ' ಪ್ರಕರಣ, ಗಾಂಧಿ ಚಲನಚಿತ್ರದ ಬಹಿಷ್ಕಾರ, ಖೋಟಾ ಜಾತಿ ಪತ್ರಗಳ ಹಂಚಿಕೆ ವಿರುದ್ಧದ ಹೋರಾಟ, ಬೆತ್ತಲೆ ಸೇವೆ, ದೇವದಾಸಿ ಪದ್ಧತಿ ವಿರುದ್ಧದ ಹೋರಾಟ, ಮಲ ತಿನ್ನಿಸಿದ ಪ್ರಕರಣ, ಬೆಲ್ಚಿ, ಕುದುರೆ ಮೋತಿ

ಪ್ರಕರಣ. ಬೆಂಡಿಗೇರಿ ಪ್ರಕರಣ. ಚುನಾವಣಾ ಬಹಿಷ್ಕಾರ— ಮುಂತಾದ ಘಟನೆಗಳು ದಲಿತ ಚಳುವಳಿಗೆ ಹೆಚ್ಚು ಚಾಲನೆ ಬರುವಂತೆ ಮಾಡಿದವಲ್ಲದೆ, ದಲಿತ ಸಾಹಿತ್ಯ ರಚನೆಯ ಸಂದರ್ಭದಲ್ಲೂ ಪರಿಣಾಮಕಾರಿಯಾದ ಕೆಲಸ ಮಾಡಿದವು.

ಶ್ರೀನಿವಾಸರ 'ಶೂದ್ರ', ಕೋಟಿ ಅವರ 'ಆಂದೋಲನ', ವಿ. ಟಿ. ರಾಜಶೇಖರರ 'ದಲಿತ ವಾಯ್ಸ್', ಚಂದ್ರಶೇಖರ ಪಾಟೀಲರ 'ಸಂಕ್ರಮಣ' (ಮಾಸಿಕ), ಆರ್. ಜಿ. ಹಳ್ಳಿ ನಾಗರಾಜರ 'ಅನ್ವೇಷಣೆ' (ದ್ವೈಮಾಸಿಕ), ವಡ್ಡರ್ಸೆ ರಘುರಾಮ ಶೆಟ್ಟರ 'ಮುಂಗಾರು' (ದೈನಿಕ) —ಇವೆಲ್ಲ ದಲಿತ-ಬಂಡಾಯದ ಲೇಖಕರ ಬೆನ್ನು ತಟ್ಟಿದ ಪತ್ರಿಕೆಗಳು. ಬಂಡಾಯ ಸಾಹಿತ್ಯ ಸಂಘಟನೆಯ ವತಿಯಿಂದ ಬರುತ್ತಿದ್ದ 'ಬಂಡಾಯ', ದಲಿತರ ಮುಖವಾಣಿಯಾದ 'ಅಂಬೇಡ್ಕರ್ ವಾಹಿನಿ', 'ಶೋಷಿತ', 'ಹೊಸದಿಕ್ಕು' ಪತ್ರಿಕೆಗಳು. ಸಮುದಾಯ ವಾರ್ತಾಪತ್ರ, 'ಪಂಚಮ', ಕಮ್ಯುನಿಸಂ ಪಕ್ಷಗಳ 'ಕೆಂಬಾವುಟ', 'ಐಕ್ಯರಂಗ' ಪತ್ರಿಕೆಗಳು ದಲಿತ-ಬಂಡಾಯ ಚಳುವಳಿಗೆ ಪ್ರೇರಣೆಯಾಗಿವೆ. ಸಿದ್ಧಾಂತಗಳು ಮತ್ತು ತಾವು ಬಂದ ಪರಿಸರ —ಈ ಎರಡೂ ಸ್ಥಿತಿಗಳ ನಡುವೆ ನಿಂತ ಎಡಪಂಥೀಯ ಬರಹಗಾರರು ತಮ್ಮ ಅಭದ್ರತೆಯನ್ನು ಮರೆಯಲು ಹೊಸ ಪತ್ರಿಕೆಗಳನ್ನು ಸೃಷ್ಟಿಸಿಕೊಂಡರು. ಹೊಸ ಹೊಸ ವೇದಿಕೆಗಳನ್ನು ನಿರ್ಮಾಣ ಮಾಡಿಕೊಂಡರು. ಆಗ ಹಲವರಿಗೆ ಸೃಜನಶೀಲ ರಚನೆಗಳಿಗೆ ಸಿದ್ಧಾಂತಗಳೇ ಬಂಡವಾಳವಾಗಿ ಬಿಟ್ಟವು. ಹೊಸದನ್ನು ಕೊಡುತ್ತೇವೆ ಎಂಬ ಭರಾಟೆಯಲ್ಲಿ ಅವರು ಪರಿಸರಕ್ಕೆ ಪರಕೀಯವಾಗಿ ಬಿಟ್ಟರು. " ಈ ಮಾತಿಗೆ ಸರಳವಾದ ನಿದರ್ಶನವೆಂದರೆ ವಿದ್ಯಾವಂತ ಉದ್ಯೋಗಸ್ಥ ದಲಿತರು ಮತ್ತು ಶ್ರೀಮಂತಿಕೆಯ ನೆಲೆಯ ಪ್ರತಿಷ್ಠಿತವಾದಿ ದಲಿತರಿಗೆ ಅಂಬೇಡ್ಕರ್ ಸಿದ್ಧಾಂತವೇ ಜೀವಾಳವಾಗಿದೆಯೇ ವಿನಾ, ಸಿದ್ಧಾಂತದಾಚೆಗಣ ಕ್ರೂರ ಬದುಕಲ್ಲ. ಅಂದರೆ ಜೀವನಾನುಭವದಿಂದ ಹೇಳಬೇಕಾದುದನ್ನು ಸಿದ್ಧಾಂತಗಳ ಸಹಾಯದಿಂದ ಹೇಳಬೇಕಾಯಿತು. ಬಂಡಾಯ, ದಲಿತರಲ್ಲಿ ಅನೇಕರಿಗೆ ಸಾಹಿತ್ಯ ನಿರ್ಮಿತಿಗೆ ಅಗತ್ಯವಾದ ಒಂದು ಸಾಮಾಜಿಕ ಹಿನ್ನೆಲೆಯೇ ತಪ್ಪಿಹೋಯಿತು. 'ಹೊಸ ಎಚ್ಚರ' ದಿಂದುಂಟಾದ ಸೈದ್ಧಾಂತಿಕತೆಗೂ, ಹೊಸ ಎಚ್ಚರವಿಲ್ಲದ ಸಾಮಾನ್ಯ ಜನರ ಸೈದ್ಧಾಂತಿಕತೆಗೂ ಬಲವಾದ ಬಿರುಕು ಗೋಚರಿಸಿತು. ಈ ಬಿರುಕಿನಿಂದಾಗಿ ಅಕ್ಷರಸ್ಥ ಕ್ರಾಂತಿಕಾರೀ ಬರಹಗಾರ ವರ್ಗಕ್ಕೂ, ಅನಕ್ಷರಸ್ಥ ಸಾಮಾನ್ಯ ಜನತೆಗೂ ಮಧ್ಯೆ ಯಾವೊಂದು ಗಂಭೀರ ಸಂವಾದವೂ ನಡೆಯದೇ ಹೋಯಿತು. ಬರಹಗಾರರಲ್ಲಿ ಹಲವರು ತಾವು ಇತರರನ್ನು ಮೇಲೆತ್ತಲಿರುವ ಶಕ್ತಿಗಳೆಂದು ಭಾವಿಸಿದರು. ಈ ಭಾವನೆಯ ಹುಟ್ಟಿನೊಂದಿಗೇ 'ಮೇಲೆ - ಕೆಳಗೆ' ಎಂಬ ವರ್ಗ ವ್ಯತ್ಯಾಸ ಹುಟ್ಟಿ ಸಿದ್ಧಾಂತಗಳನ್ನು ಅಣಕಿಸತೊಡಗಿತು. ಈ ವೈರುಧ್ಯಗಳಿಂದಾಗಿ ಬಹುಮಂದಿಗೆ 'ಕೆಳಗೆ' ಇರುವ ಜನರನ್ನು ಮುಟ್ಟಲಾಗಲೇ ಇಲ್ಲ. ಬಂಡಾಯ – ದಲಿತವರ್ಗಕ್ಕೆ ಸೇರದವರು ಹೇಳಿದ ಮಾತುಗಳಿಗೆ ಪ್ರತಿಕ್ರಿಯಿಸುವುದರಲ್ಲಿಯೇ ಅನೇಕರು ಶಕ್ತಿಯನ್ನು

ವ್ಯಯಿಸಿದರು. ಇಂಥವರ ಸೃಜನಶೀಲತೆಯ ನೆಲೆಗಳಿರುವುದೇ ಅವರ ವಿರೋಧಿಗಳಲ್ಲಿ..... ಬೆರಳೆಣಿಕೆಯ ಕೆಲವರು ಮಾತ್ರ ಚಳುವಳಿಯ ದೌರ್ಬಲ್ಯಗಳನ್ನು ಮೀರಿ ಮಹತ್ವದ ಕೃತಿಗಳನ್ನು ನೀಡಲು ಶಕ್ತರಾದರು. "೧೦

## ಲಕ್ಷಣಗಳು :

ಸ್ವಾತಂತ್ರ್ಯಪೂರ್ವದಲ್ಲಿ ದಲಿತರು ಹೀನಾಯ ಸ್ಥಿತಿಯಲ್ಲಿದ್ದರು. ಸಂಪೂರ್ಣ ಅನಕ್ಷರಸ್ಥರಾಗಿದ್ದ ಇವರು ಬೇರೆಯವರ ಕೈಕೆಳಗೆ ದುಡಿದೂ ದುಡಿದು ಕಂಗಾಲಾಗಿದ್ದರು. ಗುಲಾಮಗಿರಿಯನ್ನು ಮಾನಸಿಕವಾಗಿ ಒಪ್ಪಿಕೊಂಡೇ ಬಿಟ್ಟಿದ್ದರು. ಇವರಿಗೆ ತಮ್ಮ ಬದುಕಿನ ಬಗೆಗೆ ತಿಳಿವಳಿಕೆ ಇರಲಿಲ್ಲ. ಸ್ವಾತಂತ್ರ್ಯಾನಂತರದ ತಲೆಮಾರಿನವರಲ್ಲಿ ವ್ಯವಸ್ಥೆಯ ಜೊತೆ ಹೊಂದಿಕೊಳ್ಳುವುದನ್ನು ರೂಢಿಸಿಕೊಂಡದ್ದನ್ನು ಗಮನಿಸಬಹುದು. ಇವರು ಅಕ್ಷರಾಭ್ಯಾಸದಲ್ಲಿ ತೊಡಗಿಸಿಕೊಂಡಿದ್ದರೂ ಅನ್ಯಾಯ, ಅಸಮಾನತೆಗಳಲ್ಲಿ ಸಿಲುಕಿಕೊಂಡಿದ್ದರೂ, ಪ್ರತಿಭಟಿಸಬೇಕೆಂದು ಗೊತ್ತಿದ್ದರೂ ಪ್ರತಿಭಟಿಸಲಾಗದ ಸ್ಥಿತಿಯಲ್ಲಿದ್ದವರು. ಇಂಥ ಸಮೂಹದ ನಡುವೆ ಅಲ್ಪ ಸ್ವಲ್ಪ ಶ್ರಮವಹಿಸಿ ಸಣ್ಣ ಪುಟ್ಟ ಕೆಲಸಗಳನ್ನು ಬೆರಳೆಣಿಕೆಯ ಮಂದಿ ಹುಡುಕಿಕೊಂಡದ್ದುಂಟು. ಆಧುನಿಕ ವಿದ್ಯಮಾನಗಳ ಫಲಿತದಿಂದಾಗಿ ಈ ವರ್ಗದಲ್ಲಿ ಅಕ್ಷರ ಕಲಿಯುವವರ ಸಂಖ್ಯೆ ಜಾಸ್ತಿಯಾಗುತ್ತಾ ಬಂತು. ವ್ಯವಸ್ಥೆಯ ಬಗೆಗೆ ಅರಿವು ಮೂಡಿತು. ಅನ್ಯಾಯಗಳನ್ನು ಕಂಡು ಪ್ರತಿಭಟಿಸಬೇಕೆಂಬ ಪ್ರಜ್ಞೆ ಬೆಳೆಯಿತು. ತಮ್ಮ ಅನುಭವಗಳಿಗೆ ಅಭಿವ್ಯಕ್ತಿ ನೀಡುವ ಪ್ರಯತ್ನದಲ್ಲೂ ತೊಡಗಿದರು. ಇವರು ಬರೆದ ಸಾಹಿತ್ಯ ಅಭಿವ್ಯಕ್ತಿ ಸ್ವಾತಂತ್ರ್ಯದಿಂದ, ಸೈದ್ಧಾಂತಿಕ ನಿಲುವಿನಿಂದ ವಿಶಿಷ್ಟವೆನಿಸಿತು. ಸಮಾನತೆಯನ್ನು ಬಯಸುವ ಈ ಸಾಹಿತ್ಯ ಶ್ರಮಜೀವಿಗಳ ಬದುಕಿನ ಸ್ಪಂದನವಾಯಿತು.

ಸ್ವಾತಂತ್ರ್ಯಾನಂತರದ ದಿನಗಳಲ್ಲಿ ರೂಢಿಗೆ ಬಂದ ಶಿಕ್ಷಣ ಕ್ರಮ, ಅಂಬೇಡ್ಕರ್ ಚಳುವಳಿಯ ಪ್ರಭಾವ ಮತ್ತು ಆಧುನಿಕ ವಿದ್ಯಮಾನಗಳಿಂದಾದ ದೃಷ್ಟಿಕೋನಗಳಿಂದ ದಲಿತರಲ್ಲಿ ಜಾಗೃತಿ ಮೂಡಿತು. ಒಟ್ಟಾರೆಯಾಗಿ ದಲಿತ ಸಾಹಿತ್ಯ ಎಂಬುದು ದಲಿತ ಪ್ರಪಂಚದ ಒಳ-ಹೊರಗನ್ನು ಒಳಗೊಂಡಿರಬೇಕು. ಹಾಗೆಯೇ ಶತಮಾನಗಳಿಂದ ಅವರನ್ನು ಕಾಡುತ್ತ ಬಂದಿರುವ ಅಸ್ಪೃಶ್ಯತೆ, ಧಾರ್ಮಿಕ - ಸಾಮಾಜಿಕ ಅಮಾನುಷ ಪದ್ಧತಿಗಳು, ಅಪಮಾನದ ಸಂಗತಿಗಳು ಸಾಹಿತ್ಯದಲ್ಲಿ ಅನಾವರಣಗೊಳ್ಳತೊಡಗಿದವು. ದಲಿತನೊಬ್ಬ ತನ್ನ ಸಂಕಷ್ಟಗಳನ್ನು ತನ್ನದೇ ಆದ ರೀತಿಯಲ್ಲಿ ನಿರೂಪಿಸುವಂತಾಗಬೇಕು, ಆ ಮೂಲಕ ಆತನ ಸಾಹಿತ್ಯ ಸಾಮಾಜಿಕ ಸಂಘರ್ಷವೊಂದಕ್ಕೆ ಪ್ರೇರಣೆಯಾಗಬೇಕು– ಇದು ಸಾಹಿತ್ಯದ ಮುಖ್ಯ ಲಕ್ಷಣವೆನಿಸಿತು. ಪೂರ್ಣವಾಗಿ ದಲಿತ ಲೋಕವನ್ನು, ದಲಿತ ಸಂಸ್ಕೃತಿಯ ಸೂಕ್ಷ್ಮಗಳನ್ನು ತೆರೆದಿಡುವುದೇ ಇಲ್ಲಿ ಪ್ರಮುಖ ವಿಷಯವಾಯಿತು. ದೇವನೂರರ ಕಥಾಸಾಹಿತ್ಯ ಈ ಮಾತಿಗೆ ಉದಾಹರಣೆಯಾಗಿದೆ. ಸಾಮಾನ್ಯವಾಗಿ ದೇವನೂರು ಮಹಾದೇವರ ಕಥೆಗಳಲ್ಲಿ ಬರುವ ದಲಿತರ ವಾಸಸ್ಥಾನ, ಹಟ್ಟಿ, ಹರಿದಿರುವ ಬಟ್ಟೆ, ಊರಿನ ದಾರಿಯ ವಿವರಗಳು, ಕುವೆಂಪು ಅವರ 'ಕಾನೂರು ಹೆಗ್ಗಡಿತಿ',

' ಮಲೆಗಳಲ್ಲಿ ಮದುಮಗಳು ' ಕಾದಂಬರಿಗಳಲ್ಲಿನ ಕಾಡಿನ ವಿವರಗಳಿಗಿಂತಲೂ ದಟ್ಟವಾಗಿರುವುದನ್ನು ಕಾಣಬಹುದು. ' ಒಂದು ದಹನದ ಕತೆ ' ಯಲ್ಲಿ ನಾಯಕ ಕಾಣುವ ತನ್ನ ಹಟ್ಟಿಯ ವರ್ಣನೆ ಹೀಗಿದೆ– " ಹನ್ನೆರಡು ವರ್ಷದಿಂದ ಕೊಳೆತು ಮುಗ್ಗಲು ಬಿಟ್ಟಿರುವ ಹಟ್ಟಿ. ತನ್ನೊಳಗೇ ಒಂದು ಕಾಡನ್ನು ಸೃಷ್ಟಿಸಿಕೊಂಡು ಅಲ್ಲಿಂದ ಇಲ್ಲಿಯವರೆಗೆ ಪೂರ್ವಿಕರು ಮಾಡಿದ ಪಾಪದ ಹಾಗೆ ಮೂಟೆಯಲ್ಲಿ ಒಂದೆರಡು ನನ್ನುದ್ದದ ಎಕ್ಕದ ಗಿಡಗಳು. ಅದರ ಪಕ್ಕದಲ್ಲಿ ಮಂಡಿ ಉದ್ದದ ಉತ್ತ. ಮನೆತುಂಬಾ ಬಲೆ ನೇದಿರುವ ಜೇಡಗಳು. ಮೇಲಿನಿಂದ ಕೆಳಕ್ಕೆ ಕಪ್ಪಗೆ ಇಳಿಬಿಟ್ಟಿರುವ ಎಂಥದೋ ದಾರದ ಥರ ತೊಟ್ಟಿಯ ಪಕ್ಕ ಉದುರಿ ಉದುರಿ ಚಿಂದಿ ಹಿಡಿದು ನೆಲಕ್ಕಂಟಿದ ತೊಂಬಗಳ ಅವಶೇಷ. ಸುತ್ತಮುತ್ತ ಸಕತ್ತು ಚೂರು ಪಾರು ಹೆಂಚು. ಅದರ ಮೇಲೆ ಕವಿದ ಅಂಗೈಮಂದದ ಬೂದು ಧೂಳು. ಕುಟ್ಟು ಹಿಡಿದು ಹಳದಿಪುಡಿ ಉದುರಿಸುತ್ತ. ಒಟ್ಟಿನಲ್ಲಿ ನಿಂತ ಮುಂಡಿಗೆ ಕಂಬಗಳು. ಮನೆ ತುಂಬಾ ಚದುರಿಕೊಂಡು ಹೊರಕ್ಕೆ ಕೆಡವಿದ ರಾಶೀಮಣ್ಣು. ಚಿಕ್ಕಂದಿನ ನಾನು, ಹುಟ್ಟಿ ಬೆಳೆದ ಹಟ್ಟಿ ಕಣ್ಣಲ್ಲಿ ಇಳಿದು ಇದು ಹೌದೇ ? ಅಂತ ಅನುಮಾನ ಹುಟ್ಟಿಸುತ್ತದೆ. " ೧೧

ಈ ಬರವಣಿಗೆಯ ಮೂಲಕ ಪ್ರಥಮಬಾರಿಗೆ ದಲಿತರ ಊರು-ಕೇರಿಗಳ ವಿಷಯ ಕಣ್ಣಿಗೆ ಕಟ್ಟುವಂತೆ ಚಿತ್ರಿತವಾಯಿತು. ಸಾಮಾನ್ಯವಾಗಿ ಆಧುನಿಕ ಕನ್ನಡದ ಮೊಟ್ಟ ಮೊದಲ ದಲಿತ ಲೇಖಕ ಜಿ. ವೆಂಕಟಯ್ಯನವರಿಂದ ಹಿಡಿದು ಇಲ್ಲಿಯವರೆಗಿನ ಬಹುತೇಕ ದಲಿತ ಲೇಖಕರ ಕೃತಿಗಳು ಈ ಮಾತನ್ನು ಸಮರ್ಥಿಸುತ್ತವೆ. ಇನ್ನೊಂದು ಮುಖ್ಯ ಅಂಶವೇನೆಂದರೆ ದಲಿತರ ಮೇಲೆ ಆಕ್ರಮಣ ಮಾಡುತ್ತಿರುವ ಪರಂಪರಾಗತವಾಗಿ ಬಂದ ಸ್ಥಗಿತ ಮೌಲ್ಯಗಳನ್ನು ಪ್ರಶ್ನಿಸುವುದು, ತಾತ್ಸಾರದಿಂದ ಕಾಣುವುದು ಮತ್ತು ಸಾಹಿತ್ಯದಲ್ಲಿ ಅದನ್ನು ವಿಡಂಬಿಸುವುದು ಸಹ ದಲಿತ ಸಾಹಿತ್ಯದ ಮುಖ್ಯ ಉದ್ದೇಶವಾಯಿತು. ಕೋಪ, ರೊಚ್ಚು, ಆವೇಶ, ಅಬ್ಬರ ಇವೆಲ್ಲ ದಲಿತ ಸಾಹಿತ್ಯದ ಆರಂಭದಲ್ಲಿ ಮನೆಮಾತಾಗಿದ್ದವು. ಎಪ್ಪತ್ತರ ದಶಕದಲ್ಲಿ ಇಂತಹ ಬರವಣಿಗೆ ಅನಿವಾರ್ಯವಾಗಿತ್ತು. ಹಾಗಾಗಿ ಇದೂ ಸಹ ದಲಿತ ಸಾಹಿತ್ಯದ ಒಂದು ಲಕ್ಷಣವೇ ಆಗಿದೆ. ಜೋರಾಗಿ ಹಾಡಿಕೊಂಡಾಗ ಮಾತ್ರ ಕವಿಯ ಭಾವನೆಗಳು ಮನದಟ್ಟಾಗುತ್ತವೆ ಎಂಬ ಆಶಯವನ್ನು ವ್ಯಕ್ತಪಡಿಸುವುದರ ಮೂಲಕ ಗೇಯತೆಯ ಗುಣಗಳನ್ನು ಒಳಗೊಂಡು ದಲಿತ ಕಾವ್ಯ ರಚನೆಯಾಯಿತು. ಈ ಗುಣಗಳು ಕನ್ನಡ ಸಾಹಿತ್ಯಕ್ಕೆ ಹೊಸ ಸೇರ್ಪಡೆಗಳಾಗಿವೆ. ಇದರಿಂದಾಗಿಯೂ ಕನ್ನಡ ಕಾವ್ಯಕ್ಕೆ ದಲಿತ ಕಾವ್ಯ ಒಂದು ಶಕ್ತಿಯನ್ನು ನೀಡಿತು. ' ಬ್ಲೇಕ್ ' ಎಂಬ ಕವಿಯ ಅಭಿಪ್ರಾಯದಲ್ಲಿ ದಲಿತ ಕಾವ್ಯದ ಲಕ್ಷಣಗಳನ್ನು ಕಾಣಲು ಸಾಧ್ಯವಿದೆ; " ಸಾಮಾಜಿಕ ಶಕ್ತಿಗಳ, ಪ್ರವೃತ್ತಿಗಳ ಅಭಿವ್ಯಕ್ತಿ ಕಾವ್ಯ. ಅದರ ಜೊತೆಗೆ ವರ್ತಮಾನದಲ್ಲಿಲ್ಲದ ಇನ್ನೊಂದು ಸಮಾಜದ ಆವಾಹನೆ. ಕಾವ್ಯ ಬರೀ ಲೋಲುಪತೆಯಾಗದೆ, ನವಸಮಾಜಕ್ಕೆ ಆವಾಹಿಸಬೇಕಾದ ಸಾಮಾಜಿಕ ವೈರುಧ್ಯಗಳಿಗೆ ತೀವ್ರವಾಗಿ ಪ್ರತಿಸ್ಪಂದಿಸಬೇಕಾಗುತ್ತದೆ ". ದಲಿತ – ಬಂಡಾಯ ಕಾವ್ಯ ಶೋಷಣೆ ಮತ್ತು ರಾಜಕೀಯವನ್ನು ಪ್ರಮುಖ ಆಶಯಗಳನ್ನಾಗಿ ಸ್ವೀಕರಿಸಿದೆ. ಇದು

ಒಂದು ರೀತಿಯಲ್ಲಿ ಒಳ್ಳೆಯ ಬೆಳವಣಿಗೆಯೇ ಆಗಿದೆ. ಆತ್ಮಗೌರವಕ್ಕಾಗಿ, ಮಾನವ ಘನತೆಗಾಗಿ ನಿರಂತರ ಪ್ರಯತ್ನದಲ್ಲಿ ತೊಡಗುವಿಕೆಯೂ ಇಲ್ಲಿ ಗೋಚರವಾಗುವ ಅಂಶವೇ ಆಗಿದೆ. ಜಮಿನ್ದಾರಿ ಪದ್ಧತಿ. ಅದರಿಂದಾದ ಆರ್ಥಿಕ ಅನ್ಯಾಯ, ಅದರ ವಿರುದ್ಧ ಬಂಡೆದ್ದ ವಿವರಗಳೂ ಸಹ ಈ ಸಂದರ್ಭದಲ್ಲಿ ಮುಖ್ಯವಾಗುತ್ತವೆ. ಕಲಾತ್ಮಕ ಅಭಿವ್ಯಕ್ತಿ ಅನಂತರದ ಪ್ರಶ್ನೆಯಾಗಿರುತ್ತದೆ. ಸಿಟ್ಟು, ಆಕ್ರೋಶಗಳ ನಡುವೆಯೂ ಪ್ರೇಮ, ಅನುರಾಗ, ಪ್ರಣಯ ಇತ್ಯಾದಿ ಶೃಂಗಾರ ಭಾವಗಳೂ ಬರುತ್ತವೆ. ಸಹೃದಯರ ಗುಂಡಿಗೆಯನ್ನು ತಂಪು-ತಲ್ಲಣಗೊಳಿಸುವ, ಚಿಂತನೆ ಜಾಗೃತಗೊಳ್ಳುವ ಸುಂದರ ರಚನೆಗಳಂತೆ ಕಾವ್ಯ ಕಂಡುಬರುತ್ತದೆ. – ಈ ಎಲ್ಲ ಅಂಶಗಳೂ ಪ್ರಧಾನವೇ. ಸಿದ್ಧಲಿಂಗಯ್ಯನವರ 'ಕಪ್ಪು ಕಾಡಿನ ಹಾಡು', ಪಾತ್ರೋಟರ 'ನಿನಗಲ್ಲ ಜ್ವಾಕಿ ಗೆಳತಿ' ಕವಿತೆಗಳು ಇದಕ್ಕೆ ಉದಾಹರಣೆಯಾಗಿವೆ. ನಮ್ಮ ಬದುಕಿನ ಬದಲಾವಣೆಗಳನ್ನು ದಲಿತ ಸಾಹಿತ್ಯ ಹಿಡಿದಿಟ್ಟಿತು. ತಮ್ಮ ಭಾವನೆಗಳನ್ನು ಹೇಳಲು ತಾವು ಬಂದ ಪರಿಸರದ ಗ್ರಾಮೀಣ ನೆಲೆಯ ಭಾಷೆಯನ್ನು ಬಳಸಿದ್ದು ಸಹ ದಲಿತಸಾಹಿತ್ಯದ ವೈಶಿಷ್ಟ್ಯವೆನ್ನಬಹುದು. ದಲಿತ ಸಾಹಿತಿ ಅಂಬೇಡ್ಕರರ ತತ್ತ್ವವನ್ನು ಒಪ್ಪಿದರೂ ಅದನ್ನು ಆರಾಧಿಸುವುದಿಲ್ಲ. ಹಾಗೆಯೇ ಬೌದ್ಧಧರ್ಮವನ್ನು ಒಪ್ಪಿದರೂ ಅದರ ಆರಾಧನೆಯಿಲ್ಲ. ಮಾರ್ಕ್ಸ್‌ವಾದ ವರ್ಗಸಂಘರ್ಷಣೆಯತ್ತ ಮುಖಮಾಡಿದೆ. ಆದರೆ ದಲಿತವಾದ, ವರ್ಗ ಮತ್ತು ವರ್ಣ – ಎರಡನ್ನೂ ಕುರಿತು ಮಾತನಾಡುತ್ತದೆ. ಇದು ಒಟ್ಟಾರೆ ಶೋಷಿತರ ಮನಸ್ಸಿನಲ್ಲಿರುವ ಕ್ರೋಧವನ್ನು ವ್ಯಕ್ತಪಡಿಸುವ ಸಿಟ್ಟಿನ ಸಾಹಿತ್ಯವಾಗಿರುತ್ತದೆ. ದಲಿತ ಸಾಹಿತ್ಯ ಏಕಕಾಲಕ್ಕೆ ದಲಿತರ ಜೀವನದ ಸ್ಥಿತಿಗತಿಗಳನ್ನು ಹೇಳುತ್ತಲೇ ಆ ಸಮೂಹದ ಆಶಯಗಳನ್ನೂ ಪ್ರಕಟಪಡಿಸುತ್ತದೆ. ಸಮಾಜ ವ್ಯವಸ್ಥೆಯಲ್ಲಿ ಜಿಡ್ಡುಗಟ್ಟಿದ ನಂಬಿಕೆಗಳನ್ನು ಸುಳ್ಳು ಮಾಡುತ್ತಾ ಹೊಸ ಸಂಸ್ಕೃತಿಯ ನೇತಾರನಾಗಬೇಕಾಗಿರುವ ಜವಾಬ್ದಾರಿಯೂ ದಲಿತ ಲೇಖಕರಿಗಿರುತ್ತದೆ. ಮುಖ್ಯವಾಗಿ ದಲಿತ ಸಾಹಿತಿ ಮೌಢ್ಯವನ್ನು ಮೀರುತ್ತಾನೆ. ಆರಾಧನೆ – ಆಚರಣೆಗಳನ್ನು ವಿರೋಧಿಸುತ್ತಾನೆ. ಆದರೆ ಸಿದ್ಧಲಿಂಗಯ್ಯನವರ 'ಕತ್ತೆ ಮತ್ತು ಧರ್ಮ' ಕವಿತೆ ಇದಕ್ಕೆ ಅಪವಾದದಂತಿದೆ.

## ದಲಿತ – ಬಂಡಾಯದ ಸಂಬಂಧ :

ದಲಿತ – ಬಂಡಾಯ ಸಾಹಿತ್ಯದಲ್ಲಿ ಹೇಳಿಕೊಳ್ಳುವಂಥ ವ್ಯತ್ಯಾಸಗಳಿಲ್ಲ. ಕೆಳಸ್ತರದ ಬರಹಗಾರರಿಂದ ರಚಿತವಾದುದು ದಲಿತ ಸಾಹಿತ್ಯ. ಎಲ್ಲ ಜಾತಿ, ವರ್ಗಗಳಿಂದ ಬಂದ ಬರಹಗಾರರಿಂದ ಶೋಷಿತರ ಪರವಾಗಿ ರಚಿತವಾದದ್ದು ಬಂಡಾಯ ಸಾಹಿತ್ಯ. ಬಂಡಾಯ ಚಳುವಳಿ ಎಲ್ಲಾ ಎಡಪಂಥೀಯ ಧೋರಣೆಯುಳ್ಳವರು ಮತ್ತು ಪ್ರಜಾಪ್ರಭುತ್ವ ಶಕ್ತಿಗಳನ್ನು ಸೇರಿ ಒಳಗೊಂಡದ್ದು. ಎರಡೂ ಸಾಹಿತ್ಯ ಪರಂಪರೆಗಳು ಎಡಪಂಥೀಯ ಧೋರಣೆಯುಳ್ಳವು. ಅವು ಹುಟ್ಟಿಕೊಂಡ ನೆಲೆಗಳು ಬೇರೆಯಾಗಿದ್ದರೂ ಅವು ತಲುಪುವ ಗುರಿಯಲ್ಲಿ ಮಾತ್ರ ವ್ಯತ್ಯಾಸವಿಲ್ಲ. 'ಪ್ರತಿಭಟನೆ' ಎಂಬುದು

ಎರಡರಲ್ಲೂ ಕಾಣುವ ಸಾಮಾನ್ಯ ಅಂಶ. ಸಮಾನತೆಯ ಸಮಾಜವನ್ನು ನಿರ್ಮಾಣ ಮಾಡಬೇಕೆಂಬುದು ಎರಡೂ ಪರಂಪರೆಗಳ ವಾದ.

ಆರಂಭದಲ್ಲಿ ದಲಿತ ಬಂಡಾಯದ ಸಂಬಂಧವನ್ನು ಕುರಿತಂತೆ ಸಾಕಷ್ಟು ಚರ್ಚೆಯೇ ನಡೆಯಿತು. ಬಂಡಾಯದ ವ್ಯಾಪ್ತಿಯಲ್ಲಿ ದಲಿತರನ್ನು ಗುರುತಿಸುವ ಪ್ರಯತ್ನ ನಡೆಯಿತು. " ಪ್ರಗತಿಗಾಮಿ ದಲಿತ ಸಾಹಿತಿಗಳೆಲ್ಲ ಬಂಡಾಯ ಸಾಹಿತಿಗಳು – ಬಂಡಾಯ ಸಾಹಿತಿಗಳೆಲ್ಲರೂ ದಲಿತ ಸಾಹಿತಿಗಳಲ್ಲ." ಎಂಬ ಬರಗೂರರ ಅಭಿಪ್ರಾಯವನ್ನು ಈ ಸಂದರ್ಭದಲ್ಲಿ ಗಮನಿಸಬೇಕು. ನಂತರ ದಲಿತರು ಪ್ರತ್ಯೇಕ ಅಸ್ತಿತ್ವವನ್ನು ಹೊಂದಲು ದನಿ ಎತ್ತಿದರು. ಬಂಡಾಯ ಚಳುವಳಿಯ ಆರಂಭದಲ್ಲಿ ಅದರೊಂದಿಗೆ ಇದ್ದ ದಲಿತರು ಹೊರಬಂದು ದಲಿತೇತರ ಬರಹಗಾರರನ್ನು ಅನುಮಾನದ ನೆಲೆಯಿಂದ ಕಾಣತೊಡಗಿದರು. ಇದರ ಪರಿಣಾಮವಾಗಿ ೧೯೮೩ ಡಿಸೆಂಬರ್ ೧೦, ೧೧ ರಂದು ಧಾರವಾಡದಲ್ಲಿ ' ದಲಿತ ಲೇಖಕರ ಕಲಾವಿದರ ಬಳಗ ' ಹುಟ್ಟಿಕೊಂಡಿತು. ಬೆಂಗಳೂರಿನಲ್ಲಿ ೧೯೮೭ ಡಿಸೆಂಬರ್ ೨೧ ರಂದು ರಾಜ್ಯಮಟ್ಟದ ' ದಲಿತ ಸಮಾವೇಶ ' ವೂ ಜರುಗಿತು. ಅದರಲ್ಲಿ ಬಂಡಾಯದ ಬಗ್ಗೆ ಅಪಸ್ವರಗಳನ್ನು ಎತ್ತಿದ್ದೂ ಉಂಟು. ಇದೇ ಸಂದರ್ಭದಲ್ಲಿ ಕೆಲವರು " ಬಂಡಾಯ ಸಾಹಿತ್ಯದ ಒಂದು ಭಾಗ ದಲಿತ ಸಾಹಿತ್ಯ ಏಕಾಗಬೇಕು ? ಯಾಕೆ ದಲಿತ ಸಾಹಿತ್ಯದ ಒಂದು ಭಾಗ ಬಂಡಾಯವಾಗಬಾರದು ? " ಎಂದು ಪ್ರಶ್ನಿಸಿದರು. ಅಸ್ಪಷ್ಟ ಗ್ರಹಿಕೆಯ ನೆಲೆಯಿಂದ ಹುಟ್ಟಿಕೊಂಡ ಇಂತಹ ಪ್ರಶ್ನೆಗಳಿಗೆ ಪುರುಷೋತ್ತಮ ಬಿಳಿಮಲೆ ಸರಿಯಾದ ಉತ್ತರ ನೀಡಿದ್ದಾರೆ. " ಬಂಡಾಯ ನಿರ್ಜೀವವಾಗಿದೆ ಎಂದಾದರೆ ಪರೋಕ್ಷವಾಗಿ ದಲಿತರು ನಿರ್ಜೀವವಾಗಿದ್ದಾರೆ ಎಂದು ಅರ್ಥವೇ ಹೊರಡುತ್ತದೆ. ಏನಿದ್ದರೂ ದಲಿತರು ಬಂಡಾಯದವರಿಗಿಂತ ಬೇರೆಯೇ ಆಗಿ ಬೆಳೆಯಲು ಪ್ರಯತ್ನಿಸುತ್ತಿದ್ದಾರೆ ಎಂಬುದು ಮೇಲ್ನೋಟಕ್ಕೆ ವೇದ್ಯವಾಗುವ ವಿಚಾರ. ಹಾಗೆಂದಾಗ ದಲಿತರಲ್ಲಿ ಬಂಡಾಯ ಪ್ರವೃತ್ತಿಯೇ ಇಲ್ಲವೆಂದು ಭಾವಿಸುವಂತಿಲ್ಲ. ಜೊತೆಗೆ ದಲಿತ ವಿಮರ್ಶಕರು ತಾವು ಬಂಡಾಯಕ್ಕಿಂತ ಹೇಗೆ ಮತ್ತು ಏಕೆ ಭಿನ್ನ ಎಂದು ಎಲ್ಲಿಯೂ ಹೇಳಿದಂತಿಲ್ಲ. ' ದಲಿತರೆಂದರೆ ಅಸ್ಪೃಶ್ಯರು ' ಎಂದು ತೀರ್ಮಾನಿಸಿದ ಮೇಲೆಯೂ ' ಯಾಕಾಗಿ ಬಂಡಾಯ ಸಾಹಿತಿಗಳೆಲ್ಲ ದಲಿತ ಸಾಹಿತಿಗಳಾಗುವುದಿಲ್ಲ ? ' ಎಂಬ ಕುಚೋದ್ಯದ ಪ್ರಶ್ನೆ ಎತ್ತಿದರೆ ಅದಕ್ಕೆ ಉತ್ತರಿಸುವುದಾದರೂ ಹೇಗೆ ? ಏನಿದ್ದರೂ ದಲಿತ ಬರಹಗಾರರ ಇಂಥಹ ನಿಲುವಿನಿಂದ ಬಂಡಾಯ – ದಲಿತವನ್ನು ಪ್ರತ್ಯೇಕವಾಗಿ ಗುರುತಿಸುವ ಪರಿಪಾಠ ಬೆಳೆದುಬಂತು. ಇಂತಹ ಗುರುತಿಸುವಿಕೆಯಿಂದ ಕನಿಷ್ಠ. ದಲಿತ ಬರಹಗಾರರ ' ಅಹಂ ' ತೃಪ್ತಿಗೊಂಡಿದೆ. ಆದರೆ ಬಲಿಷ್ಠವಾಗಿದ್ದ ಸಾಹಿತ್ಯ ಸಂಘಟನೆ ಶಿಥಿಲಗೊಂಡಿದೆ. "

ಇದೇ ಸಂದರ್ಭದಲ್ಲಿ ಇನ್ನೊಂದು ಅಂಶವನ್ನು ಗಮನಿಸಬೇಕು. ದಲಿತರಿಗೆ ಪೂರ್ವಸಿದ್ಧವಾದ ವಿಚಾರವಾದದ ಪರಂಪರೆ ಇಲ್ಲ. ದಲಿತೇತರ ಬರಹಗಾರರಿಗೆ ಈ

ಪರಂಪರೆ ಇದೆ. ಹಾಗಾಗಿ ಇವರ ಬದುಕಿನ ಅನುಭವಗಳನ್ನು ವೈಚಾರಿಕ ನೆಲೆಯಲ್ಲಿ ಆಲೋಚಿಸಲು. ಚರ್ಚಿಸಲು ಸಾಧ್ಯವಾಗುತ್ತಿದೆ. ಈ ವಿಚಾರವನ್ನು ದಲಿತ ಲೇಖಕರೂ ಅರ್ಥಮಾಡಿಕೊಂಡಿದ್ದಾರೆ. ಅಲ್ಲದೇ ಆರ್ಥಿಕ ನೆಲೆಯಲ್ಲಿ ಅಂತರಾಷ್ಟ್ರೀಯ ಸಮಸ್ಯೆಗಳ ಬಗೆಗಿನ ಚರ್ಚೆಯಲ್ಲಿ ಭಾಗಿಗಳಾಗುತ್ತಿದ್ದಾರೆ. ಈಗ ದಲಿತ – ಬಂಡಾಯದ ವೇದಿಕೆಯ ಮೇಲಿನ ಚಟುವಟಿಕೆಗಳು ಸ್ಥಗಿತಗೊಂಡಿವೆಯಾದರೂ ಬರವಣಿಗೆಯಂತೂ ಮುಂದುವರಿದಿದೆ. ಅದರ ಶ್ರೇಷ್ಠತೆಯನ್ನು ಗುರುತಿಸುವ ಹಾದಿಯಲ್ಲಿ ದಲಿತ ವಿಮರ್ಶೆ ಪ್ರಯತ್ನಿಸುತ್ತಿದೆ.

## ದಲಿತ ಸಾಹಿತ್ಯದ ಕೊಡುಗೆ :

ದಲಿತ – ಬಂಡಾಯ ಸಾಹಿತ್ಯ ಹುಟ್ಟಿಕೊಂಡ ಸಂದರ್ಭದಲ್ಲಿ ಲೇಖಕರು ರೂಢಿಗತವಾಗಿ ಶಿಷ್ಟಸಾಹಿತ್ಯದಲ್ಲಿ ಬರುತ್ತಿದ್ದ ಪ್ರತಿಮೆಗಳನ್ನು, ಪರಿಕಲ್ಪನೆಗಳನ್ನು ಹುಸಿಗೊಳಿಸತೊಡಗಿದರು. ಜೊತೆಗೆ ದಲಿತ ಮಕ್ಕಳಿಗೆ ದನಿಯೆತ್ತುವ ಶಕ್ತಿಯನ್ನು ದಲಿತ ಚಳುವಳಿ ನೀಡಿತು. ಅಲ್ಲದೇ ದಲಿತ ಸಂಸ್ಕೃತಿಯ ಪ್ರತಿಮೆಗಳನ್ನು ಸಾಹಿತ್ಯದಲ್ಲಿ ಬಳಸಿ 'ಶ್ರೇಷ್ಠ ಸಾಹಿತ್ಯ'. 'ಶುದ್ಧ ಸಾಹಿತ್ಯ' ಎಂದು ಅಭ್ಯಸಿಸುತ್ತಿದ್ದವರ ಮಾತಿಗೆ ತೊಡರುಗಾಲು ಹಾಕಿದ್ದು ಒಂದು ವೈಶಿಷ್ಟ್ಯವೇ ಸರಿ. ಈ ಸಾಹಿತ್ಯಕ್ಕೆ ಪ್ರೇರಣೆ ನೀಡಿದ ಆಫ್ರಿಕಾ ಮತ್ತು ಅಮೇರಿಕ ಬರಹಗಾರರು ಕಪ್ಪಾಗಿರುವುದನ್ನು ವೈಭವೀಕರಿಸುವಲ್ಲಿ, ಬಿಳಿಯರನ್ನು ಸಂಪೂರ್ಣವಾಗಿ ತಿರಸ್ಕರಿಸಲಿಲ್ಲ. ಎರಡೂ ಅತಿಗಳಿಗೆ ಹೋಗದೆ ಆರೋಗ್ಯಪೂರ್ಣ ಸಾಹಿತ್ಯ ರಚನೆಯಲ್ಲಿ ತೊಡಗಿದರು. ಅವರ ಪ್ರಭಾವ ದಲಿತ ಸಾಹಿತ್ಯದ ಮೇಲೂ ಆಗಿರುವುದರಿಂದ ಅಪರಿಚಿತ ಅನುಭವವೊಂದು ಕನ್ನಡ ಸಾಹಿತ್ಯವನ್ನು ಪ್ರವೇಶಿಸಲು ಕಾರಣವಾಯಿತು. ಆ ಮುಖಾಂತರ ಕನ್ನಡ ಸಾಹಿತ್ಯದ ದಿಕ್ಕು ಅಸ್ಪೃಶ್ಯನ ಕಡೆಗೆ ತಿರುಗಿತು. ಇದು ಅತ್ಯಂತ ಮಹತ್ವದ ಸಂಗತಿ.

ತಮ್ಮನ್ನು ಶೋಷಣೆಗೆ ಒಳಪಡಿಸುವ ಮೇಲುಸಂಸ್ಕೃತಿಯ ಪ್ರತಿಗಾಮಿ ಧೋರಣೆಗಳನ್ನು ದಲಿತ ಸಾಹಿತ್ಯ ಖಡಾಖಂಡಿತವಾಗಿ ತಿರಸ್ಕರಿಸುತ್ತಾ ಜನಪರ ಮೌಲ್ಯಗಳತ್ತ ತನ್ನ ಗಮನವನ್ನು ಕೇಂದ್ರೀಕರಿಸಿತು. ಹೊಸ ಮೌಲ್ಯಗಳ ಹುಡುಕಾಟದ ಸಂದರ್ಭದಲ್ಲಿ ಅದು ಸಕ್ರಿಯ ಸೃಜನಶೀಲತೆಯಲ್ಲಿ ತೊಡಗುವಂತಾಯಿತು. ಸಾಹಿತಿಯೊಬ್ಬ ಜನ್ಮತಃ ಅಸ್ಪೃಶ್ಯನೇ ಆಗಿದ್ದರೂ ಮೇಲ್ ಸಂಸ್ಕೃತಿಯ ಮೌಲ್ಯಗಳನ್ನು ಅಳವಡಿಸಿಕೊಂಡಿದ್ದರೆ ಅಂಥ ಸಮುದಾಯದಿಂದ ಬಂದ ಬರಹಗಾರರು ದಲಿತ ಸಾಹಿತ್ಯಕ್ಕೆ ಯಾವ ಕೊಡುಗೆಯನ್ನೂ ನೀಡಲು ಸಾಧ್ಯವಾಗುವುದಿಲ್ಲ. ದಲಿತ ಸಾಹಿತಿಗಳು ಒಬ್ಬ ನಾಯಕನಲ್ಲಿ ವಿಶ್ವಾಸವಿರಿಸದೆ ಜನರಲ್ಲಿ ವಿಶ್ವಾಸವಿರಿಸಿದವರು. ಆದ್ದರಿಂದ ಹೊಸ ಪೀಳಿಗೆಯ ಸಾಹಿತ್ಯ ವೈಯಕ್ತಿಕ ಪಾತಳಿಯನ್ನು ಮೀರಿ ಹೊರಬರಬೇಕು ಮತ್ತು ಸಮುದಾಯದ ಬದುಕಿಗೆ ಅದು ಸ್ಪಂದಿಸುವಂತಾಗಬೇಕು ಎಂಬ ಧೋರಣೆ ತಾಳಿತು. ಪೂರ್ಣ ಪ್ರಮಾಣದಲ್ಲಿ ಇದು ಯಶಸ್ವಿಯಾದರೆ ಇದೇ ದಲಿತ ಸಾಹಿತ್ಯದ ಕೊಡುಗೆಯೂ ಆಗುತ್ತದೆ.

ದಲಿತ ಸಾಹಿತಿಗಳು ತಮ್ಮ ಬರವಣಿಗೆಯಲ್ಲಿ ದಲಿತ ಪ್ರಜ್ಞೆ, ಸಾಮಾಜಿಕ ಪ್ರಜ್ಞೆ, ಸಾಮಾಜಿಕ ನ್ಯಾಯಕ್ಕೆ ಸ್ಥಾನ ನೀಡಿದರು. ಸಾಹಿತ್ಯದ ಅವಿಭಾಜ್ಯ ಅಂಗವೇ ಅವಾಗಿವೆ ಎಂದರು. ಸಾಮಾಜಿಕ ಪ್ರಜ್ಞೆ ಇಲ್ಲದೆ ಸಾಹಿತ್ಯ ಕೃತಿಗಳು ಬರಲಾರದ ಸ್ಥಿತಿಯನ್ನು ಉಂಟುಮಾಡಲಾಯಿತು. ತರ್ಕಬದ್ಧವಾದ ವೈಚಾರಿಕ ಸಾಹಿತ್ಯ ನಿರ್ಮಾಣಕ್ಕೆ ಇದರ ಕೊಡುಗೆ ಇದೆ ಎನ್ನುವಂತಾಯಿತು. ತರ್ಕದ ಹಿನ್ನೆಲೆಯಲ್ಲಿ ಪ್ರತಿಭಟನೆಯ ಎಳೆಗಳನ್ನು ಬಿಡಿಸುತ್ತಿದ್ದ ಕನ್ನಡ ಸಾಹಿತ್ಯಕ್ಕೆ ಪ್ರತಿಭಟನೆ ಒಂದು ಮೌಲ್ಯವಾಗುವಂತೆ ದಲಿತ ಸಾಹಿತ್ಯ ಕೆಲಸ ಮಾಡಿತು. ಅಸಲೀ ಅನುಭವಗಳಿಂದ ಕೂಡಿದ ದಲಿತ ಬದುಕು ಭಾರತೀಯ ಸಾಹಿತ್ಯಕ್ಕೆ ಒಂದು ವಿಶಿಷ್ಟ ಕೊಡುಗೆ ಎನಿಸಿತು. ಎಲ್ಲದಕ್ಕಿಂತ ಮುಖ್ಯವಾಗಿ ದಲಿತ ಸಂಸ್ಕೃತಿಯ ಅನ್ವೇಷಣೆಗೆ ಇದು ಅನುವು ಮಾಡಿಕೊಟ್ಟಿತು. ಇದರ ಪರಿಣಾಮವಾಗಿ ದಲಿತ ಗ್ರಾಮಗಳ ಅಧ್ಯಯನವೇ ಆರಂಭವಾಯಿತು. ಇತ್ತೀಚೆಗೆ ಹೊರಬಂದ ಶಿವರಾಮು ಕಾಡನಕುಪ್ಪೆಯವರ 'ಕುಕ್ಕರಹಳ್ಳಿ ದಲಿತ ಗ್ರಾಮ' ಇದಕ್ಕೆ ತಕ್ಕ ಉದಾಹರಣೆಯಾಗಿದೆ. 'ನೆಲದ ಜೋಗುಳ' ಮಹಾಕಾವ್ಯ ಮೂಡಿಬರಲು ದಲಿತ ಸಾಹಿತ್ಯ ಕಾರಣವಾಗಿದೆ ಎಂದು ಹೇಳುವುದೇ ಹೆಮ್ಮೆಯ ಸಂಗತಿ. ಈ ಸಾಹಿತ್ಯದ ಕೊಡುಗೆಯಿಂದಾಗಿ ಕನ್ನಡ ಸಾಹಿತ್ಯದ ಪುನರ್‌ಮೌಲ್ಯೀಕರಣ ಪ್ರಕ್ರಿಯೆಯೇ ಜರುಗುವಂತಾಗಿದೆ. –ಅಂದರೆ ಅದೊಂದು ಕ್ರಾಂತಿಕಾರಕ ಬದಲಾವಣೆಯೇ ಸರಿ. ಜಿ. ವೆಂಕಟಯ್ಯ. ದೇವನೂರು ಮಹಾದೇವ. ಸಿದ್ಧಲಿಂಗಯ್ಯ. ಚನ್ನಣ್ಣ ವಾಲೀಕಾರ, ವಿ. ಮುನಿವೆಂಕಟಪ್ಪ. ಸತ್ಯಾನಂದ ಪಾತ್ರೋಟ, ಗಂಗಾರಾಂ ಚಂಡಾಳ, ಅರವಿಂದ ಮಾಲಗತ್ತಿ, ಕೆ. ಬಿ. ಸಿದ್ಧಯ್ಯ, ಮನಜ, ಬಿ. ವೆಂಕಟಸ್ವಾಮಿ, ಮುಳ್ಳೂರು ನಾಗರಾಜ, ಜಂಬಣ್ಣ ಅಮರಚಿಂತ, ಸುಕನ್ಯಾ ಮಾರುತಿ, ಮೊಗಳ್ಳಿ ಗಣೇಶ್, ಕೆ. ಗೋವಿಂದರಾಜು, ಲಲಿತಾ ನಾಯಕ, ಶಿವರುದ್ರ ಕಲ್ಲೋಳಿಕರ್. ಗೀತಾ ನಾಗಭೂಷಣ. ಕೆ. ರಾಮಯ್ಯ –ಮೊದಲಾದ ದಲಿತ ಲೇಖಕರು ಈ ಸಂದರ್ಭದಲ್ಲಿ ವಿಶೇಷ ಚರ್ಚೆಗೊಳಗಾದರು.

## ಕಾವ್ಯ :

'ಹೊಲೆ ಮಾದಿಗರ ಹಾಡು' ಕವನ ಸಂಕಲನವನ್ನು ಕೊಡುವುದರ ಮೂಲಕ ಕನ್ನಡ ಕಾವ್ಯಕ್ಕೆ ಚುರುಕು ಮುಟ್ಟಿಸಿದ ಸಿದ್ಧಲಿಂಗಯ್ಯನವರು ನೊಂದವರನ್ನು ಕಾವ್ಯದ ವಸ್ತುವಾಗಿಸುವ ಜನಪರ ಆಶಯದಿಂದ ಜನಪದ ಛಂದಸ್ಸಿನಲ್ಲಿ ಕಾವ್ಯ ಕಟ್ಟಿದ್ದು ಗಮನಾರ್ಹ ಸಂಗತಿ. ('ಕಪ್ಪು ಕಾಡಿನ ಹಾಡು' ಕಲಾತ್ಮಕತೆಯ ಜೊತೆಗೆ ಪ್ರಯೋಗಶೀಲತೆಯನ್ನು ಎತ್ತಿ ಹಿಡಿಯುವ ಕವನ ಸಂಕಲನ). ಇವು ನವ್ಯ ಸಾಹಿತ್ಯದ ಕೊನೆಯಲ್ಲಿ ಹೊಸ ತಿರುವಿನ ಸೂಚನೆಗಳಾಗಿಯೂ ಕಂಡು ಬಂದವು. ದಲಿತ-ಬಂಡಾಯ ಕಾವ್ಯ ಚಿಗುರೊಡೆಯುವ ಸಂದರ್ಭದಲ್ಲಿ ಹೊರಬಂದ ಸಿದ್ಧಲಿಂಗಯ್ಯನವರ ಕವನಸಂಕಲನಗಳು ದಲಿತ ಬಂಡಾಯ ಕಾವ್ಯದ ಲಕ್ಷಣಗಳನ್ನು ಪಡೆದುಕೊಂಡೇ ಸ್ಫೋಟವಾದವು. ಕಾವ್ಯ ಮೂಡುವಾಗ ವಸ್ತುವಿಗೆ ತಕ್ಕಂತೆ ಸಹಜವಾಗಿ ಬರುವ ಆಡುನುಡಿ. ಲಯಬದ್ಧ ಪ್ರಾಸ ಇವೂ ಸಹ ದಲಿತ ಬಂಡಾಯ ಕಾವ್ಯದ ವಿಶಿಷ್ಟ ಲಕ್ಷಣಗಳಲ್ಲಿ ಸೇರ್ಪಡೆಯಾಗಿವೆ. ಬಂಡಾಯ ಸಾಹಿತ್ಯ ಚಳುವಳಿ ಇಂಥ ಅನೇಕ

ಅಂಶಗಳನ್ನು ಒಳಗೊಂಡು ತನ್ನ ಗುರಿಯನ್ನು ಮುಟ್ಟಲು ಹಾತೊರೆಯುತ್ತ, ತನ್ನ ಗೆರೆಗಳನ್ನು ವಿಸ್ತರಿಸಿಕೊಳ್ಳುತ್ತಿದೆ. '' ಇದು ಕನ್ನಡ ಸಾಂಸ್ಕೃತಿಕ ಕ್ಷೇತ್ರದ ಮಹತ್ವದ ಘಟನೆ. ನವೋದಯ ಮತ್ತು ನವ್ಯದಲ್ಲಿ ಇಲ್ಲದ ಸಾಮಾಜಿಕ, ರಾಜಕೀಯ ಪ್ರಜ್ಞೆಯ ಪ್ರಾಧಾನ್ಯತೆ ಅನಂತರದ ಲೇಖಕರಲ್ಲಿ ಇರುವುದರಿಂದ ಬಂಡಾಯ ಸಾಹಿತ್ಯ ಚಳುವಳಿಯ ಹುಟ್ಟು ಅನಿವಾರ್ಯವಾಯಿತು. ಕ್ರೂರ ವ್ಯವಸ್ಥೆಯ ಸರ್ವ ಸೂತ್ರಗಳ ವಿರುದ್ಧ ಬಂಡೆದ್ದ ಮನೋಧರ್ಮವೇ ಬಂಡಾಯ ಸಾಹಿತ್ಯ ಚಳುವಳಿಯ ಮೂಲಸತ್ವ. ಮನುಷ್ಯ ಮನುಷ್ಯರ ನಡುವೆ ಕಲ್ಲಿನಕೋಟೆ ಕಟ್ಟುವ ಅಮಾನವೀಯ ಬದುಕನ್ನು ಹಸನುಗೊಳಿಸುವ ಆಕಾಂಕ್ಷೆ ಬಂಡಾಯ ಸಾಹಿತ್ಯದ ಬೆನ್ನೆಲುಬು. ಈ ಆಕಾಂಕ್ಷೆ ಹೊತ್ತ ವ್ಯವಸ್ಥೆ ವಿರೋಧಿ ಆಶಯಗಳ ಅಭಿವ್ಯಕ್ತಿಯೇ ನಮ್ಮ ಸೃಜನಶೀಲತೆಯ ಮುಖ್ಯ ಕಾಳಜಿ. ಇದು ಪ್ರತಿಭಟನೆಯ ರೂಪದಲ್ಲಿರಬಹುದು. ವ್ಯಂಗ್ಯ ವಿಡಂಬನೆಯಾಗಿರಬಹುದು. ಭೀಕರ ಬದುಕಿನ ಅಸಹಾಯಕ ಚಿತ್ರವಾಗಬಹುದು. ಕ್ರೂರ ಸ್ಥಿತಿಯೊಂದರ ದಾಖಲೆಯಾಗಬಹುದು. ಸಾಹಿತ್ಯದ ಮುಖಾಂತರ ಏಕಾಏಕಿ ಕ್ರಾಂತಿಯಾಗಿ ಬಿಡುತ್ತದೆಂಬ ಭ್ರಮೆ ಏನೂ ನಮಗಿಲ್ಲ. ಆದರೆ ನಾವು ಲೇಖಕರಾಗಿ ನಮ್ಮೆದುರಿನ ಈ ಕೆಟ್ಟ ಬದುಕಿನ ವೈಷಮ್ಯಗಳನ್ನು ಗುರುತಿಸುವುದು, ಹೊಸದಾದ ಬದುಕಿಗೆ ಆಶಿಸುವುದು, ಈ ಕಾಲದಲ್ಲಿ ಬದುಕುತ್ತಿರುವ ನಮ್ಮ ಸಾಮಾಜಿಕ ಜವಾಬ್ದಾರಿ. '' (ಬರಗೂರು ರಾಮಚಂದ್ರಪ್ಪ : ಸಾಹಿತ್ಯ ಮತ್ತು ರಾಜಕಾರಣ) ' ಸಾವಿರಾರು ನದಿಗಳು ', ಇಂಥ ಸಾಮಾಜಿಕ ಜವಾಬ್ದಾರಿಯುಳ್ಳ ಬಂಡಾಯ ಕೃತಿ. ಜಿಡ್ಡುಗಟ್ಟಿದ ಸಮಾಜದ ಮೇಲೆ ಈ ಸಂಕಲನದ ಎಲ್ಲಾ ಕವನಗಳೂ ಕೋಪಿಸಿಕೊಂಡಿವೆ. ವೈಯಕ್ತಿಕ ಕೋಪಕ್ಕಿಂತ ಸಾರ್ವತ್ರಿಕ ಸ್ವರೂಪದ ಕೋಪವೇ ಇಲ್ಲಿ ಗಾಢವಾಗಿದೆ. ' ಹೊಲೆ ಮಾದಿಗರ ಹಾಡು ' ವಿನಲ್ಲಿ ವ್ಯಕ್ತವಾಗುವ ರೊಚ್ಚಿಗಿಂತ ಹರಿತವಾದ ಶೈಲಿ ಈ ಸಂಕಲನದ ಪದ್ಯಗಳಲ್ಲೂ ಕಂಡುಬರುತ್ತದೆ.

ಪ್ರಜಾಪ್ರಭುತ್ವ ರಾಷ್ಟ್ರದಲ್ಲಿರುವ ನಾವು ನಮ್ಮ ಸುತ್ತಮುತ್ತ ಹಗಲು ರಾತ್ರಿ ಕಾಣುವುದು ಕಣ್ಣೀರಿನ ಹೊಳೆ. ನೋವಿಗೇನೂ ಈ ದೇಶದಲ್ಲಿ ಕೊರತೆಯಿಲ್ಲ. ನೊಂದ ಜೀವಕ್ಕೆ ನೀರು ಚಿಮುಕಿಸುವ ಮನುಷ್ಯರ ಸಂಖ್ಯೆ ತೀರಾ ಕಡಿಮೆ. ಅಂಥ ನಿರಾಶ್ರಿತರಿಗೆ, ಮೂಕ ಜನತೆಗೆ ದನಿಕೊಡುವ ಆಶಯವನ್ನು ಒಳಗೊಂಡ ಕೃತಿ ' ಸಾವಿರಾರು ನದಿಗಳು '. ವಿಶಿಷ್ಟ ರೂಪವೊಂದನ್ನು ಪಡೆದು ಪ್ರಾರಂಭವಾಗುವ ' ಸಾವಿರಾರು ನದಿಗಳು ' ಪದ್ಯ ಕೊನೆಯವರೆಗೂ ಅದೇ ಬಿಗಿ ಮತ್ತು ಲಯವನ್ನು ಉಳಿಸಿಕೊಂಡ ಸಾರ್ಥಕ ರಚನೆ ಎನಿಸಿದೆ.

ಕಪ್ಪುಮುಖ ಬೆಳ್ಳಿಗಡ್ಡ ಉರಿಯುತ್ತಿರುವ ಕಣ್ಣುಗಳು
ಹಗಲು ರಾತ್ರಿಗಳನ್ನು ಸೀಳಿ ನಿದ್ದೆಯನ್ನು ಒದ್ದರು
ಕಂಬಳಿಗಳು ಕೊರಗಿದವು ಎದ್ದೇಳುವ ರೊಚ್ಚಿಗೆ
ಇರುವೆಯಂತೆ ಹರಿವ ಸಾಲು ಹುಲಿಸಿಂಹದ ದನಿಗಳು

'ದಿಕ್ಕಾರ ದಿಕ್ಕಾರ ಅಸಮಾನತೆಗೆ
ಎಂದೆಂದಿಗು ದಿಕ್ಕಾರ ಶ್ರೀಮಂತರ ಸೊಕ್ಕಿಗೆ...

ಕವಿ ಶಕ್ತನಾದಾಗ ಅನ್ಯಾಯದ ವಿರುದ್ಧ ಪ್ರತಿಭಟಿಸುವ, ಕೆಂಡ ಕಾರುವ ಕವನಗಳೂ ಹೆಚ್ಚು ಕಲಾತ್ಮಕವಾಗುತ್ತವೆಂಬುದಕ್ಕೆ ಈ ಪದ್ಯ ಒಂದು ಉದಾಹರಣೆ. ಕೆಲವು ಕವನಗಳ ವಸ್ತು ಒಂದೇ ಆದರೂ ಹೇಳುವ ರೀತಿ, ಕ್ರಮಗಳು ಹೊಸ ವಿಚಾರದತ್ತ ಕೈ ಚಾಚುವ ಪ್ರತ್ಯೇಕ ಕವನಗಳಾಗಿ ಕಾಣುವುದು ಇಲ್ಲಿಯ ವೈಶಿಷ್ಟ್ಯ. ಶೋಷಣೆಗೊಳಗಾದ ಜನರ ನಿಷ್ಕ್ರಿಯತೆಯನ್ನು ಮನಸ್ಸಿಗೆ ನಾಟುವಂತೆ ಹೇಳುವ 'ಚೋಮನ ಮಕ್ಕಳ ಹಾಡು' ಮೇಲಿನ ಮಾತಿಗೆ ಉದಾಹರಣೆಯಾಗಿದೆ. ನಾಲ್ಕು ಸಾಲುಗಳ ನಾಲ್ಕು ಪದ್ಯಗಳಿರುವ 'ಬೆಲ್ಚಿಯ ಹಾಡು' ಕವನದ ವಸ್ತು ಬೆಲ್ಚಿಯಲ್ಲಿ ನಡೆದ ಘಟನೆಯನ್ನು ಕುರಿತದ್ದು.

ಪಟ್ಟಭದ್ರರ ವಿರುದ್ಧ ಹೋರಾಡಲು ಸಂಘಟಿತರಾದ ದಲಿತರ ಆಕ್ರೋಶ 'ದಲಿತರು ಬರುವರು' ಕವನದಲ್ಲಿ ದಾಖಲಾಗಿದೆ. ಡೊಗ್ಗು ಸಲಾಮು ಮಾಡುವ ಗೋಜಿಗೆ ಹೋಗದೆ ಹೋರಾಟಕ್ಕೆ ಸಿದ್ಧರಾಗಬೇಕೆಂಬ ಎಚ್ಚರಿಕೆಯನ್ನು ಕೊಡುವುದೇ ಈ ಹಾಡಿನ ಧ್ವನಿ. ಹಳೆಯದರ ನಾಶ ಮತ್ತು ಹೊಸ ಜಗತ್ತಿನ ಸೃಷ್ಟಿಯ ಸಂಕೇತಗಳಾಗಿ 'ಹತ್ತಿ ಉರಿಯುವ ಮನಸ್ಸುಗಳು', 'ಗುಡುಗು ಮಿಂಚು', 'ಭೂಕಂಪಗಳು' ಕಂಡುಬರುತ್ತವೆ. ಕ್ರೂರ ವ್ಯವಸ್ಥೆಯ ಪ್ರತಿನಿಧಿಗಳನ್ನು ನಾಶಮಾಡುತ್ತ ಸಾಗುವ ಚಿತ್ರಣವೂ ಇಲ್ಲಿದೆ. ಜೊತೆಗೆ ಅಂಥವ್ದರ ವಿರುದ್ಧ ಹೋರಾಟವೂ ಇದೆ.

ಜಾತಿಮತಗಳ ಮುಳ್ಳಿನ ಮಳೆಗೆ
ಮುಳ್ಳಾದರು ಇವರು
ತಮ್ಮನು ನುಂಗಿದ ಏಳು ಸಮುದ್ರಕೆ
ಮುಗಿಲಾದರು ಇವರು
ಹಿಂದೂ ಧರ್ಮವ ಕೊಂದರು ದಲಿತರು
ಜಮೀನುದಾರರ ಬಿಡಲಿಲ್ಲ

ಕೊನೆಗೆ ಅವರ ಹೋರಾಟ ಅರಳಿದ ಮೊಗ್ಗಿನ ರೂಪದಲ್ಲಿ. ಕ್ರಾಂತಿಯ ಸಂಕೇತವಾಗಿ ಕೆಂಪುಬಣ್ಣದ ರೂಪದಲ್ಲಿ ಅಂತ್ಯವಾಗುತ್ತದೆ. "ದಲಿತರು ಬರುವರು ರಾಜ್ಯ ಕೊಡಿ" ಎಂಬ ಒತ್ತಾಯದೊಂದಿಗೆ ಕಾವ್ಯ ಕೊನೆಗೊಂಡಿದೆ. ತುರ್ತುಸ್ಥಿತಿಯ ಸಂದರ್ಭದಲ್ಲಿ ಅಧಿಕಾರಿಗಳ ಕಪಿಮುಷ್ಟಿಗೆ ಸಿಕ್ಕಿ ನರಳಿದ ನಮ್ಮ ಜನತೆಯ ಚಿತ್ರಣವೇ 'ಕರಾಳ ರಾಣಿಯ ಕಥೆ.' ವ್ಯವಸ್ಥೆಯ ಹಿಂದಿನ ವ್ಯವಸ್ಥಿತ ಕೈವಾಡಗಳನ್ನು ಕುರಿತ ವ್ಯಂಗ್ಯ ವಿಡಂಬನೆಗಳೂ ಈ ಕವನದಲ್ಲಿವೆ. 'ಕಂಡೆ ನನ್ನವಳ ಒಂದು ದಿವಸ' ಕವನ. ಘಟನೆಗಳ ಹಿಂಬದಿಯಲ್ಲಿ ಅಡಗಿರುವ ಅಖಂಡ ಕ್ರೌರ್ಯದ ಮೂಲಕ ಹುಟ್ಟುವ ಅನೇಕ ರೀತಿಯ ಗುಮಾನಿಗಳಿಗೆ ಆಸ್ಪದವಾಗುವ ವಿಷಯಗಳನ್ನು ಒದಗಿಸುತ್ತದೆ. ಇಲ್ಲಿ ಬರುವ ರೂಪಕಗಳು ಕವನದ ಮಹತ್ವವನ್ನು ಹೆಚ್ಚಿಸಿವೆ.

ಕೊಲೆಯ ಹಿಂದಿನ ರಾತ್ರಿ ಸೂರ್ಯ ಚಂದ್ರರ ಹಿಡಿದು
ಹಣದ ಪೆಟ್ಟಿಗೆಯಲ್ಲಿ ಕೂಡಿಟ್ಟರು
ಭಾರತದ ಬಾವುಟವ ಸುತ್ತಿ ಬಾಯಿಗೆ ತುರುಕಿ
ಕಿತ್ತುಕೊಂಡರು ಅವಳ ಮಾತುಗಳನು

ಅಸಾಧ್ಯವಾದುದನ್ನು ಸಾಧ್ಯವಾಗಿಸಿಕೊಂಡ, ಈ ಕವನದ ಕೊನೆಯಲ್ಲಿ ದಬ್ಬಾಳಿಕೆಯ ವಿರುದ್ಧ ಗುಡುಗಿದೆ. ಕಾವ್ಯದ ನಾಯಕಿಯ ಸ್ಪಷ್ಟ ಚಿತ್ರಣ ಮೂಡಿದಂತೆಯೇ ಆಕೆಯ ಅತ್ಯಾಚಾರಕ್ಕೆ ತೊಡಗುವ ಕರಾಳ ಕೈಗಳ ಚಿತ್ರಣವೂ ಮೂಡುತ್ತದೆ. ಮುಂದಿನ ಪದ್ಯಗಳಲ್ಲಿ " ಮುಖಕ್ಕೆ ತುಬಕನೆ ಉಗಿಯಬೇಕನಿಸಿತವಳಿಗೆ ಮುಖಗಳಿರಲಿಲ್ಲ ಬಂದವರಿಗೆ " ಎಂಬ ಮಾತಿನಲ್ಲಿ ವ್ಯಕ್ತಿತ್ವವನ್ನು ಕಳೆದುಕೊಂಡವರ ಚಿತ್ರಣ ವ್ಯಕ್ತವಾಗುತ್ತದೆ.

ಜನಸಾಮಾನ್ಯರ ಕನಸುಗಳು ಮತ್ತು ನೊಂದವರ ನೋವುಗಳು ಹೋರಾಟವಾಗಿ ರೂಪುಗೊಳ್ಳಲು ಬಿಡದ ವಿಜೃಂಭಿತ ಪ್ರಭುತ್ವದ ಹಿಂಸಾಚಾರದ ಸ್ವರೂಪವನ್ನು ' ಮೆರವಣಿಗೆ ' ವರ್ಣಿಸುತ್ತದೆ. ಶೋಷಿತರ ರೊಚ್ಚು ಧಿಕ್ಕಾರವಾಗಿ ಉಕ್ಕಿ, ಹೋರಾಡುವ ಸಿದ್ಧತೆಗಳು ನಡೆದರೂ ಹೋರಾಟಗಾರರ ಬಾಂಧವ್ಯಗಳಿಗೆ, ಹೃದಯಗಳಿಗೆ ಪ್ರಭುತ್ವ ಕಿಚ್ಚಿಕ್ಕಿ ರಾಕ್ಷಸ ನಗು ನಗುತ್ತದೆ. ದಲಿತರ ಮೈ ಮನಗಳ ಮೇಲೆ ಬರೆಯೆಳೆಯುವ ಪ್ರಭುತ್ವದ ಕ್ರೂರತೃಪ್ತಿಯ ನಿರೂಪಣೆ ಹಿಂಸಾಚಾರದ ಭೀಕರತೆಯನ್ನು ಕಣ್ಣಿಗೆ ಕಟ್ಟುತ್ತದೆ.

ನಾಲ್ಕು ಸಾಲುಗಳ ಮೂರು ಪದ್ಯಗಳಿರುವ ' ಬಂದಿರುವರು ಹುಲಿಗಳಾಗಿ ' ಕವನ ಸಿಡಿದೆದ್ದ ದಲಿತರ ರೊಚ್ಚನ್ನು ಲಯಬದ್ಧವಾಗಿ ಹೊರ ಹಾಕುತ್ತದೆ. ಅಧಿಕಾರದಲ್ಲಿ ಮೆರೆಯುವವರು ಕೊಡುವ ಹುಸಿ ಭರವಸೆಗಳನ್ನು, ಅಂದರೆ ತಮ್ಮ ಉಳಿವಿಗೆ ಕಂಟಕವಾಗುವ ಸತ್ಯವನ್ನೇ ಮುಚ್ಚಿಹಾಕುವ ಪ್ರವೃತ್ತಿಯನ್ನು, ಭಾಷಣ – ಘೋಷಣೆಗಳ ರೂಪದಲ್ಲೇ ಜನರಿಗೆ ಹೊಟ್ಟೆ ತುಂಬಿಸಲೆಳೆಸುವ ಹೇಯ ಬುದ್ಧಿಯನ್ನು ವ್ಯಂಗ್ಯದ ಮೊನೆಯಿಂದ ಚುಚ್ಚುತ್ತದೆ. ನಾಯಕರ ಎಲ್ಲಾ ಬಗೆಯ ಶೋಷಣೆಗಳಿಗೆ, ಕೋಟಲೆಗಳಿಗೆ ಸಿಲುಕಿ ನಲುಗಿದವರು ಕೊನೆಗೂ ಎಚ್ಚತ್ತು ಶತಮಾನದ ನೋವುಗಳಿಗೆ ಪ್ರತೀಕಾರ ತೆಗೆದುಕೊಳ್ಳುವ ಛಲದಿಂದ ಹುಲಿಗಳಾಗಿ ಗರ್ಜಿಸುತ್ತಾ ಬರುತ್ತಿದ್ದಾರೆನ್ನುವ ಆಶಯವನ್ನು ಈ ಕವನ ನೇರ ಮಾತುಗಳಲ್ಲಿ ಘೋಷಿಸುತ್ತದೆ.

ಹೊಸ ಕಾವ್ಯದಲ್ಲಿ ಮತ್ತೊಂದು ' ಎಪಿಕ್ ' ಲಕ್ಷಣಗಳನ್ನು ಅಳವಡಿಸಿದ ಹಿರಿಮೆ ' ಅಲ್ಲೆ ಕುಂತವರೆ ' ಖಂಡ ಕಾವ್ಯಕ್ಕೆ ಸಲ್ಲುತ್ತದೆ ಎನ್ನುವ ಅಭಿಪ್ರಾಯ ಕೆಲವರಿಂದ ಬಂದಿದೆ. ರಸ, ಧ್ವನಿ ಶಬ್ದಾರ್ಥ ಇತ್ಯಾದಿಗಳ ದೃಷ್ಟಿಯಿಂದ ಈ ನೀಳ್ಗವಿತೆಯಲ್ಲಿ ಕಾವ್ಯ ಲಕ್ಷಣಗಳನ್ನು ಗುರುತಿಸಬಹುದಾದರೂ ಅದರ ಹಿರಿಮೆ ಇಷ್ಟಕ್ಕೇ ಸೀಮಿತವಾದುದಲ್ಲ. ಈ ನೋವಿನ ಹಾಡಿನಲ್ಲಿ ದಲಿತರ ಕರುಣ ಕಥೆ ಮತ್ತು ತಣ್ಣನೆಯ ಹಿಂಸಾಚಾರದ ಅನುಭವ ಹರಳುಗಟ್ಟಿರುವುದರಿಂದ ಇದೊಂದು ಯಶಸ್ವೀ

ಕವಿತೆಯಾಗಿದೆ. ಮಳೆಯಿಲ್ಲದ ಹಳ್ಳಿಯೊಂದರಲ್ಲಿ ಕಂಡು ಬರುವ ಜನರ ದಯನೀಯ ಬದುಕಿನ ಲಕ್ಷಣಗಳನ್ನು ಮಿಡಿಯುವುದರೊಂದಿಗೆ ಈ ಕವನದ ಸಾಲುಗಳು ಪ್ರಭುತ್ವದ ಅಡ್ಡಾದಿಡ್ಡಿತನವನ್ನು ಮತ್ತು ಹಿಂಸಾಕ್ರಿಯತೆಯನ್ನು ಅಷ್ಟೇ ಸಮರ್ಥವಾಗಿ ವರ್ಣಿಸುತ್ತವೆ. ದಲಿತರ ಪ್ರಾಣಸಂಕಟ ಮತ್ತು ಪ್ರಭುತ್ವದ ಚೆಲ್ಲಾಟವನ್ನು ನವಿರಾಗಿ ನಿರೂಪಿಸುವ ಸಿದ್ಧಲಿಂಗಯ್ಯನವರ ಧಾಟಿ ಅವರು ಕಾವ್ಯದಲ್ಲಿ ತರುವ ವ್ಯಂಗ್ಯಕ್ಕೆ ಉದಾಹರಣೆಯಾಗಿದೆ. ಪದ್ಯಗಳ ನಡುನಡುವೆ ಕಾಣಿಸಿಕೊಳ್ಳುವ 'ಮಾತು'ಗಳು ದಲಿತರ ನೋವಿನ ನೂರು ಗಳಿಗೆಯನ್ನು, ಪ್ರಜಾಪ್ರಭುತ್ವದ ಹೆಸರಲ್ಲಿ ಇಲ್ಲಿ ನಡೆಯುತ್ತಿರುವ ಸರ್ವಾಧಿಕಾರದ ದಬ್ಬಾಳಿಕೆಯನ್ನು, ಕ್ರೌರ್ಯಕ್ಕೆ ತುತ್ತಾದವರ ಸಂಕಟಗಳನ್ನು, ಹಿಂಸಾಚಾರದ ವಿಶ್ವರೂಪವನ್ನು ಮನಕ್ಕೆ ಮುಟ್ಟಿಸುತ್ತವೆ. ಇವತ್ತಿನ ಸಂದರ್ಭದಲ್ಲಿ 'ಅಲ್ಲೆ ಕುಂತವರೆ'ನಂಥ ಕವಿತೆಗಳು ಮುಖ್ಯವಾಗುವುದು ಶೋಷಿತರ ನೋವಿಗೆ ದನಿಕೊಡುತ್ತಿವೆಯೆಂಬ ಕಾರಣಕ್ಕೆ ಮಾತ್ರವಲ್ಲ; ಕಾಲಾನುಕಾಲದಿಂದ ತುಳಿಸಿಕೊಂಡವರ ಬದುಕನ್ನು, ಆಸೆಗಳನ್ನು, ಕನಸುಗಳನ್ನು ಅವರವರ ಮಾತುಗಳಲ್ಲೇ ಇದ್ದಂತೆಯೇ ಹೇಳುವುದರಿಂದ. ಇಂಥ ಅನಿಷ್ಟ ಬಂಧನದಿಂದ ಬಿಡುಗಡೆ ಪಡೆದುಕೊಳ್ಳುವ ಹುಮ್ಮಸ್ಸನ್ನು ಈ ಕವಿತೆಗಳು ಪ್ರಚೋದಿಸುತ್ತವೆ. ಹೋರಾಟದ ಕೆಚ್ಚನ್ನು ತುಂಬುತ್ತವೆ. ಅಸಂಗತ ಅಧಿಕಾರದೆದುರು ಎದೆ ಸೆಟೆಸಿ ನಿಲ್ಲುವ ಹೋರಾಟದ ಹಾಡುಗಳನ್ನು ಕೊಟ್ಟ ಕವಿ ಸಿದ್ಧಲಿಂಗಯ್ಯನವರು. ಶೋಷಿತ ಸ್ಥಿತಿಯ ಇತರ ಸೂಕ್ಷ್ಮಗಳ ಶೋಧನೆಗೆ ತೊಡಗಿದರೆ ಮತ್ತಷ್ಟು ಮಹತ್ವದ ಕಾವ್ಯ ಕೊಡಬಹುದೆಂಬ ಮಾತನ್ನು ಈ ಸಂದರ್ಭದಲ್ಲಿ ಹೇಳಬೇಕಾಗಿದೆ. ಆಗ ಕಾವ್ಯದ ಶಕ್ತ ಸಾಲುಗಳು ದೊಡ್ಡದನಿ ಮಾತ್ರವಾಗದೆ ಒಳತರಂಗಗಳನ್ನು ತೆರೆಯಬಹುದು, ಗೆರೆಗಳನ್ನು ವಿಸ್ತರಿಸುತ್ತ ಹೋಗಬಹುದು. " ಏನೇ ಆದರೂ' ಹೊಲೆ ಮಾದಿಗರ ಹಾಡುಗಳ 'ಕವಿ,' ಸಾವಿರಾರು ನದಿಗಳು' ಸಂಕಲನದಲ್ಲಿ ಸಾಕಷ್ಟು ಬೆಳೆದಿದ್ದಾರೆ. "೧೨

ಡಾ. ವಿ. ಮುನಿವೆಂಕಟಪ್ಪ ಅವರು ವಿದ್ಯಾರ್ಥಿ ದೆಸೆಯಿಂದಲೇ ಸಾಹಿತ್ಯದ ಗೀಳು ಹಚ್ಚಿಸಿಕೊಂಡವರು. ಪೆರಿಯಾರ್, ಅಂಬೇಡ್ಕರ್ ದಿನಾಚರಣೆಗಳಲ್ಲಿ ಭಾಗವಹಿಸುವ ಮೂಲಕ ಅವರ ವಿಚಾರಧಾರೆಯನ್ನು ತಲೆಯಲ್ಲಿ ತುಂಬಿಕೊಳ್ಳತೊಡಗಿದವರು. ಕಾಲಕ್ರಮದಲ್ಲಿ ಕುವೆಂಪು, ಬೇಂದ್ರೆ ಸಾಹಿತ್ಯದ ಜೊತೆಗೆ ಆಂಧ್ರದ ದಿಗಂಬರ ಕವಿಗಳು, ನಿಖಿಲೇಶ್ವರ, ಶ್ರೀ ಶ್ರೀ, ಗದ್ದರ್ ಮೊದಲಾದ ಕ್ರಾಂತಿಕಾರಿ ಲೇಖಕರು ಮತ್ತು ಕಲಾವಿದರ ಬದುಕು – ಬರಹಗಳನ್ನು ಅಭ್ಯಾಸ ಮಾಡಿದವರು. ಕರ್ನಾಟಕದಲ್ಲಿ ಹುಟ್ಟಿಕೊಂಡ ದಲಿತ ಚಳುವಳಿಯ ಜೊತೆಯಲ್ಲಿದ್ದುಕೊಂಡೇ ಹೋರಾಟದ ಹಾಡುಗಳನ್ನು ರಚಿಸುವುದರ ಮೂಲಕ ಸೃಜನಶೀಲ ಚಟುವಟಿಕೆಯಲ್ಲಿ ತಮ್ಮನ್ನು ತೊಡಗಿಸಿಕೊಳ್ಳತೊಡಗಿದರು. ಅವರು ಸೃಜನಶೀಲವಾಗಿ ಬೆಳೆಯಲು ಇದೂ ಕಾರಣವಾಯಿತು. ಚಳುವಳಿಯ ಕಾರ್ಯ ಕಲಾಪಗಳಲ್ಲಿದ್ದುಕೊಂಡೇ ಹೆಚ್ಚಿನ ಸಮಯವನ್ನು ಕಾವ್ಯ ರಚನೆಗೆ ಮುಡಿಪಿಟ್ಟರು. ಇದರ ಫಲವಾಗಿ ಬಂದ ಮೊದಲನೇ ಕವನ ಸಂಕಲನವೇ 'ಕೆಂಡದ ನಡುವೆ'. ಕವಿಯ ಹುಟ್ಟೂರಾದ ಕೋಲಾರ ಜಿಲ್ಲೆಯ

ಅನುಭವಗಳು. ದಲಿತರ ದುಃಖ ದಮ್ಮಾನಗಳು ಇದರಲ್ಲಿ ಮಡುಗಟ್ಟಿವೆ. ಅಲ್ಲದೆ ಅತ್ಯಂತ ವಿವಾದಕ್ಕೊಳಗಾದ ಕೃತಿ ಇದು.

ಈ ಸಂಕಲನ ಬಂದಾಗ ಮುನಿವೆಂಕಟಪ್ಪ ಅವರು ಕ್ಷೇತ್ರಾಭಿವೃದ್ಧಿ ಅಧಿಕಾರಿಗಳಾಗಿದ್ದರು. ಆಗ ತಮ್ಮ ಅಧಿಕಾರ ವ್ಯಾಪ್ತಿಯಲ್ಲಿ ಬಳಕೆಗೆ ತಂದ ಆಡಳಿತಾತ್ಮಕ ಬದಲಾವಣೆಗಳಿಗೂ 'ಕೆಂಡದ ನಡುವೆ' ಸಂಕಲನದ ವಿವಾದಕ್ಕೂ ಒಂದು ರೀತಿಯ ಸಂಬಂಧವಿದೆ. ಅದೇನೆಂದರೆ ಫಲಾನುಭವಿಗಳಿಗೆ ಸಲ್ಲಿಸಬೇಕಾಗಿದ್ದ ಸರ್ಕಾರದ ಸವಲತ್ತುಗಳನ್ನು ಸಂಬಂಧಿಸಿದವರಿಗೆ ತಲುಪಿಸಲು ಚೆಕ್ ವ್ಯವಸ್ಥೆಯನ್ನು ಜಾರಿಗೆ ತಂದದ್ದು. ಮಧ್ಯವರ್ತಿಗಳಿಗೆ ಇದು ನುಂಗಲಾರದ ತುತ್ತಾಯಿತು. ಫಲಾನುಭವಿಗಳ ಜೊತೆಯಲ್ಲಿ ಸಂಪರ್ಕ ಇಟ್ಟುಕೊಂಡವರೆಲ್ಲರಿಗೂ ಇದರಿಂದ ಬೇಸರವಾಗಿರಬೇಕು. ಹೀಗಾಗಿ ಅತೃಪ್ತರೆಲ್ಲ ಸಂಘಟಿತರಾಗಿ ಮುನಿವೆಂಕಟಪ್ಪ ಅವರ ವಿರುದ್ಧ ಪಿತೂರಿ ಮಾಡತೊಡಗಿದರು. 'ಕೆಂಡದ ನುಡುವೆ'ಯನ್ನು ತಮ್ಮ ಗಲಾಟೆಯ ವಸ್ತುವನ್ನಾಗಿ ಮಾಡಿಕೊಂಡರು. ಇಂದಿರಾ ಗಾಂಧಿ. ಗುಂಡೂರಾವ್ ಕಾಲದಲ್ಲಿ ಬಂದ ಈ ಸಂಕಲನದಲ್ಲಿ ವಿಧಾನ ಸೌಧದ ಸುತ್ತ ಬೇಲಿ ಹಾಕಿಸಿದ್ದನ್ನು. ಜಿಲ್ಲಾ ಕೇಂದ್ರಗಳಲ್ಲಿ ಸಂಪುಟ ಸಭೆ ನಡೆಸಿ ಆಳುವವರು ದುಂದು ವೆಚ್ಚ ಮಾಡಿದ್ದನ್ನು ಕವಿತೆಯೊಂದರಲ್ಲಿ ವಿಡಂಬಿಸಿದ್ದರು.

'ಗಾಂಧಿ' ಪದ್ಯದಲ್ಲಿ ಮಹಾತ್ಮಾ ಗಾಂಧಿ. ಇಂದಿರಾ ಗಾಂಧಿ. ಸಂಜಯ ಗಾಂಧಿ, ರಾಜೀವ ಗಾಂಧಿ – ಹೀಗೆ ಎಲ್ಲಾ ಗಾಂಧಿಗಳ ಪ್ರಸ್ತಾಪ ಮಾಡುತ್ತಾ ಇಂದಿರಾ ಗಾಂಧಿಯನ್ನು ಟೀಕಿಸಿದ್ದರು. ಮುನಿವೆಂಕಟಪ್ಪನವರ ಜನಪ್ರಿಯತೆಯನ್ನು ಸಹಿಸಲಾರದೆ ಪಿತೂರಿ ಮಾಡಿದ ಜನ ಅವರ ವಿರುದ್ಧವಾಗಿ ಕುತಂತ್ರ ನಡೆಸಲು 'ಕೆಂಡದ ನಡುವೆ' ಕವನ ಸಂಕಲನದ ಈ ಪ್ರಸಂಗಗಳನ್ನು ಬಳಸಿಕೊಂಡರು. ಭೂಮಾಲೀಕರ ಶೋಷಣೆ, ರಾಜಕಾರಣಿಗಳ ಶೋಷಣೆ. ಅಧಿಕಾರಶಾಹಿಯ ಶೋಷಣೆ – ಇವುಗಳನ್ನು ಬಹಿರಂಗಗೊಳಿಸಿದ 'ಕೆಂಡದ ನಡುವೆ' ಸಂಕಲನ ಈ ದೃಷ್ಟಿಯಿಂದ ಒಂದು ಚಾರಿತ್ರಿಕ ದಾಖಲೆಯೇ ಆಯಿತು. ಇದರಲ್ಲಿ ನೋವಿನ. ಸಂಕಟದ. ಅಸಹಾಯಕತೆಯ. ನಿರಾಶೆಯ. ಪ್ರತಿಭಟನೆಯ ಕವನಗಳೇ ಹೆಚ್ಚು. ಇಷ್ಟೆಲ್ಲಾ ಆದರೂ ಈ ಸಂಕಲನದ ಬಗ್ಗೆ. ಇದರ ಆಶಯದ ಬಗ್ಗೆ, ಸಾಹಿತ್ಯ ವಲಯದಲ್ಲಿ ಗಂಭೀರ ಚರ್ಚೆ ನಡೆಯಲೇ ಇಲ್ಲ. ಒಟ್ಟಾರೆ ಸಂಕಲನದ ಮೂಲಕ ಮುನಿವೆಂಕಟಪ್ಪ ದೊಡ್ಡ ಸುದ್ದಿಯಾಗಿಬಿಟ್ಟಿದ್ದರು.

ಮುನಿವೆಂಕಟಪ್ಪನವರು ತುಂಬಾ ಸ್ವಾಭಿಮಾನಿ. ಪ್ರತಿಯೊಬ್ಬರಿಗೂ ಈ ಗುಣ ಇರಬೇಕಾದದ್ದೆ. ವೈಯಕ್ತಿಕವಾಗಿ ನೋವಾದಾಗ. ಧಕ್ಕೆಯುಂಟಾದಾಗ ತಮ್ಮ ಸ್ವಾಭಿಮಾನವನ್ನು ಕಾಪಾಡಿಕೊಳ್ಳಲು ಪ್ರಯತ್ನಿಸುವುದಂತೂ ಸಾಮಾನ್ಯ ಸಂಗತಿ. ಇನ್ನೂ ಕೆಲವರು ವೈಯಕ್ತಿಕತೆಗಿಂತಲೂ ಇಡೀ ಸಮುದಾಯಕ್ಕೆ ಧಕ್ಕೆ ಬಂದಾಗ ಆ ಸಮೂಹ ನಿಷ್ಠೆಯನ್ನು, ಸ್ವಾಭಿಮಾನವನ್ನು ಎತ್ತಿಹಿಡಿಯಲು ಪ್ರಯತ್ನಿಸುತ್ತಾರೆ. ಇದು ಅದಕ್ಕಿಂತಲೂ ಮುಖ್ಯವಾದದ್ದು. ಮುನಿವೆಂಕಟಪ್ಪನವರು ಎರಡನೆಯ ಗುಂಪಿಗೆ ಸೇರುವಂಥವರು. ಒಂದು ಸಮುದಾಯದ ಘನತೆಯನ್ನು ಎತ್ತಿಹಿಡಿಯಲು

ಜನಪರವಾದ ಆಶಯವನ್ನು ಒಳಗೊಂಡ ' ಸ್ವಾಭಿಮಾನದ ಬೀಡಿಗೆ ' ಎಂಬ ಇನ್ನೊಂದು ಕವನ ಸಂಕಲನವನ್ನು ಮುನಿವೆಂಕಟಪ್ಪ ಹೊರತಂದರು. " ಬಾರಣ್ಣಾ ಹೋಗೋಣ ಹೊಸ ನಾಡಿಗೆ, ಸ್ವಾಭಿಮಾನದ ಬೀಡಿಗೆ, ಬಾರಕ್ಕ ಬಾತಂಗಿ ಭೀಮ ಬಯಸಿದ ಜಾಡಿಗೆ ಸ್ವಾಭಿಮಾನದ ಬೀಡಿಗೆ, ಬಾರಕ್ಕ ಬಾತಂಗಿ ಭೀಮ ಬಯಸಿದ ಜಾಡಿಗೆ, ಸ್ವಾಭಿಮಾನದ ಬೀಡಿಗೆ " —ಎಂದು ಕವಿ ಎಲ್ಲರನ್ನೂ ಕೂಗಿ ಕರೆಯುತ್ತಾರೆ. ಯಾರು ತಾವು ಬಂದ ಜನಾಂಗಕ್ಕೆ ಸ್ವಾಭಿಮಾನ, ಸ್ವಾತಂತ್ರ್ಯ ಇವನ್ನೆಲ್ಲ ಗಳಿಸಿಕೊಡಲು ತನ್ನ ಬುದ್ಧಿಬಲ, ದೇಹಬಲವನ್ನು ಮುಡಿಪಾಗಿಡುತ್ತಾರೊ, ವ್ಯಯಿಸುತ್ತಾರೊ ಅಂಥವರು ಧನ್ಯರು ಎನ್ನುತ್ತಾರೆ ಅಂಬೇಡ್ಕರ್. ಈ ಮಾತು ಹೆಚ್ಚು ಕೆಳಜಾತಿಗಳಿಗೆ ಅನ್ವಯವಾಗುತ್ತದೆ. ಈ ರೀತಿಯ ಗುಣಗಳನ್ನು ಪ್ರತಿಯೊಬ್ಬರಲ್ಲಿ ಕಾಣುವಂತಾಗಬೇಕು. ಅಂಬೇಡ್ಕರ್ ಅವರ ಆಶಯಗಳೇ ' ಸ್ವಾಭಿಮಾನದ ಬೀಡಿಗೆ ' ಸಂಕಲನದ ಕವಿತೆಗಳಿಗೆ ಪ್ರೇರಣೆಗಳಾಗಿವೆ. ದಲಿತ ಲೇಖಕರಿಗೆ ಮುಖ್ಯವೆನಿಸಿದ್ದು ಕೇವಲ ಆರ್ಥಿಕ ಸಮಾನತೆಯನ್ನು ಕುರಿತು ಮಾತಾಡಿದ ಮಾರ್ಕ್ಸ್‌ವಾದಕ್ಕಿಂತ, ನಾಡಿನ ಜಾತಿ ಪ್ರಶ್ನೆಯನ್ನು ಮುಖ್ಯವಾಗಿಸಿಕೊಂಡ ಲೋಹಿಯಾವಾದಕ್ಕಿಂತ, ಬಂಡವಾಳಶಾಹಿ, ಪುರೋಹಿತಶಾಹಿ ಭೂಮಾಲೀಕಶಾಹಿ, ಅಧಿಕಾರಶಾಹಿ, ರಾಜಕಾರಣಿಶಾಹಿ —ಈ ಎಲ್ಲದರಿಂದ ನಲುಗಿದ ದಲಿತರ ಶೋಷಣೆಯನ್ನು ಕುರಿತು ಮಾತನಾಡಿದ ಅಂಬೇಡ್ಕರ್‌ವಾದ. ಉಳಿದೆಲ್ಲ ಇಸಂಗಳಿಗಿಂತ ಭಿನ್ನವಾಗಿ ಕೆಲಸ ಮಾಡಿದ ಅಂಬೇಡ್ಕರಿಸಂ ದಲಿತರನ್ನು ಆಕರ್ಷಿಸಿತು. ದಲಿತ ಲೇಖಕರು ಸಹಜವಾಗಿ ಇದರ ಆಕರ್ಷಣೆಗೊಳಗಾದರು. ಅಂಬೇಡ್ಕರರಲ್ಲಿರುವ ಶಿಸ್ತು, ಗುರಿಯನ್ನು ತಲುಪುವ ನಿರ್ಧಾರ, ಅರ್ಪಣಾ ಮನೋಭಾವ —ಈ ಗುಣಗಳು ಪ್ರತಿಯೊಬ್ಬರಲ್ಲೂ ಮೂಡಿ ಬರಬೇಕಾದ ಅಗತ್ಯವಿದೆ. ಮುನಿವೆಂಕಟಪ್ಪನವರ ಕಾವ್ಯವೂ ಸಹ ಇಂಥದೇ ಆಶಯವನ್ನು ಒಳಗೊಂಡು ಮೂಡಿ ಬಂದದ್ದು. ದಲಿತ ಕಾವ್ಯ ಮಾಡಬೇಕಾಗಿರುವುದೂ ಇಂಥದ್ದೇ ಕೆಲಸವನ್ನು. ಈಗ ತಾನೆ ಹೊರ ಬಂದಿರುವ ' ಕಾಡು ಕಣಿವೆಯ ಹಕ್ಕಿ ' ಗೂ ಈ ಮಾತುಗಳು ಅನ್ವಯವಾಗುತ್ತವೆ. ಜೀವನದ ಹಲವಾರು ಸಂಗತಿಗಳು ಕವಿತೆಯ ವಸ್ತುಗಳಾಗಿವೆ. ಸಮಷ್ಟಿಯ ಹಿತವೇ ಮುಖ್ಯವೆಂದು ಭಾವಿಸಿ ತಮ್ಮ ಬದುಕಿನುದ್ದಕ್ಕೂ ಅಂಥ ತತ್ತ್ವವನ್ನು ಅಳವಡಿಸಿಕೊಂಡು ಆದರ್ಶವಾಗಿ ಬದುಕಿ ಬಾಳಿದವರೂ ಇಲ್ಲಿಯ ಕವಿತೆಗಳಲ್ಲಿ ಅರಳಿದ್ದಾರೆ. ವಿಶ್ವಮಾತೆ ಥೆರೆಸಾ, ಬುದ್ಧ, ಬಿ. ಕೃಷ್ಣಪ್ಪ ಈ ಹೆಸರಿನ ಕವಿತೆಗಳು ಉದಾಹರಣೆಗಳಾಗಿವೆ. ಸಾಕ್ಷರತೆ, ಪರಿಸರ, ಯುಗಾದಿ, ಹಸಿವು, ದಲಿತರ ಬದುಕು —ಇವೆಲ್ಲ ಕವಿತೆಗಳ ಅಂತರ್ಯದಲ್ಲಿ ಅವರ ದಲಿತ ಪ್ರಜ್ಞೆ ತನ್ನದೇ ಆದ ರೀತಿಯಲ್ಲಿ ಕೆಲಸ ಮಾಡಿದೆ. ಹಗಲುಗನಸಿನ ಕೂಸು, ಹಡೆದವ್ವ, ಅಪ್ಪ ನಾನು ಮತ್ತು ಸತ್ತ ನಾಯಿ —ಇಲ್ಲೆಲ್ಲ ಕವಿಯ ಭಾವನಾವಲಯವೇ ಕೆಲಸ ಮಾಡಿದೆ. ಇಂಡಿಯಾದಂಥ ಜಾತ್ಯತೀತ ದೇಶದಲ್ಲಾಗುವ ವೈರುಧ್ಯಗಳನ್ನು ಕವಿ ದಾಖಲಿಸದೆ ಬಿಟ್ಟಿಲ್ಲ. ಹಾಗೆ ನೋಡಿದರೆ ದಲಿತ ಲೇಖಕನೊಬ್ಬ ಕಾಣುವ ಸಮಾಜದ ಸರ್ವಮುಖಗಳೂ ಇಲ್ಲಿ ಜಾಗ ಗಿಟ್ಟಿಸಿಕೊಂಡಿವೆ.

" ಹೊಟ್ಟೆಗೆ ಹಿಟ್ಟಿಲ್ಲ ಜುಟ್ಟಿಗೆ ಮಲ್ಲಿಗೆ, ಉಡಿಯಲ್ಲಿ ಬಾಂಬ್ ಮನದಲ್ಲಿ ಜಾತಿಯ ಭೂತ ಜಾತ್ಯತೀತ ದೇಶದಲ್ಲಿ." ವಿಡಂಬನೆ ಎಷ್ಟು ಮೊನಚಾಗಿದೆ ಎಂಬುದಕ್ಕೆ ಇದು ಸಾಕ್ಷಿಯಾಗಿದೆ. ಇಲ್ಲಿಯ ಬಹಳಷ್ಟು ಕವಿತೆಗಳು ಸಂದರ್ಭೋಚಿತವಾಗಿ ರಚನೆಗೊಂಡವು. ' ಇದು ಕವಿತೆ ಅಲ್ಲ '. ಹೋರಾಟದ ರಥ, ' ದಸಂಸ ಹಾಡು ' ಇವೆಲ್ಲಾ ಕ್ರಮವಾಗಿ ಪೂಲನ್‌ದೇವಿಯ ಬದುಕನ್ನು, ಅಂಬೇಡ್ಕರ್ ಹೆಸರಿನಲ್ಲಿ ಗದ್ದುಗೆ ಏರಿದವರನ್ನು, ದಲಿತ ಸಂಘರ್ಷ ಸಮಿತಿಗೆ ಒದಗಿ ಬಂದಿರುವ ಸ್ಥಿತಿಯನ್ನು ಕುರಿತು ಹೇಳುವಂಥವು. ಭೂತಕಾಲದ ಸಂಗತಿಗಳನ್ನು ಅವಲೋಕಿಸುವ ಗುಣವನ್ನು ಇವು ಹೊಂದಿವೆ.

ಮುನಿವೆಂಕಟಪ್ಪ ಅವರು ಹನಿಗವನಗಳನ್ನು ಇತ್ತೀಚೆಗೆ ಬರೆಯಲು ಆರಂಭಿಸಿದ್ದಾರೆ. ಇದು ಮೊದಲ ಪ್ರಯತ್ನವಾದರೂ ಬಹಳಷ್ಟು ಹನಿಗವನಗಳು ಕಲಾತ್ಮಕವಾಗಿ ಮೂಡಿ ಬಂದಿವೆ. ಸಂಕಲನಕ್ಕೆ ಇವುಗಳಿಂದ ಮಹತ್ವ ಹೆಚ್ಚಿದೆ. ದೀರ್ಘ ಕವಿತೆಗಳಲ್ಲಿ ಕೆಲವು ಕಡೆ ಶೀರ್ಷಿಕೆಗಳು ಉದ್ದುದ್ದವಾಗಿವೆ. ಕೆಲವಂತೂ ಬರೀ ಹೇಳಿಕೆಗಳಾಗಿಬಿಟ್ಟಿವೆ. ಇವನ್ನೆಲ್ಲ ಕಲಾತ್ಮಕಗೊಳಿಸುವ ಪ್ರಯತ್ನದಲ್ಲಿ ತೊಡಗಿದ್ದರೆ ಸಂಕಲನಕ್ಕೆ ಇನ್ನಷ್ಟು ಮಹತ್ವ ಬರುತ್ತಿತ್ತು. ಮುನಿವೆಂಕಟಪ್ಪನವರೇ ಸಂಕಲನದ ಒಂದು ಕವಿತೆಯಲ್ಲಿ ಹೀಗೆ ಹೇಳಿದ್ದಾರೆ. " ಬಿತ್ತಿದ್ದೆಲ್ಲ ಹುಟ್ಟುವುದಿಲ್ಲ, ಹುಟ್ಟಿದ್ದೆಲ್ಲಾ ಬೆಳೆಯುವುದಿಲ್ಲ, ಬೆಳೆದದ್ದೆಲ್ಲ ಕಾಳಾಗುವುದಿಲ್ಲ, ಬರೆದದ್ದೆಲ್ಲ ಕವಿತೆಯಾಗುವುದಿಲ್ಲ " – ಈ ಮಾತುಗಳನ್ನು ಹೇಳುವಾಗ ಕವಿಗೆ ಎಚ್ಚರವಿದೆ. ಆದರೆ ಉಳಿದ ಕವಿತೆಗಳನ್ನು ಬರೆಯುವಾಗ ಈ ಅಂಶವನ್ನು ಅವರು ಯಾಕೆ ಮರೆತರು ಎಂಬುದು ಪ್ರಶ್ನೆಯಾಗಿಯೇ ಉಳಿಯುತ್ತದೆ.

ಇಂಥ ಸಣ್ಣ ಪುಟ್ಟ ಕೊರತೆಗಳು ಇದ್ದಾಗ್ಯೂ ಕಾವ್ಯ ಕ್ಷೇತ್ರದಲ್ಲಿ ' ಕಾಡು ಕಣಿವೆಯ ಹಕ್ಕಿಗೆ ' ತನ್ನದೇ ಆದ ಸ್ಥಳವುಂಟು. ಯಾಕೆಂದರೆ, ಕಾವ್ಯ ಎನ್ನುವಂಥದ್ದು ಒಂದು ಕನಸು ಇದ್ದಂತೆ. ಅಂದರೆ ಅದು ಸದಾ ಮುಂದಿನದನ್ನು ಕಾಣುತ್ತಿರುತ್ತದೆ. ಆದರಲ್ಲಿ ವಾಸ್ತವ ಜೀವನ ಮತ್ತು ಕಾವ್ಯದ ಪರಿಶುದ್ಧತೆ ಇರಬೇಕೆಂದು ನಾವು ಬಯಸುತ್ತೇವೆ. ಆ ರೀತಿ ನೋಡಿದಾಗ ಇಲ್ಲಿ ವ್ಯಕ್ತಿಯ ಅಂತರಂಗದ ಶೋಧನೆಗಳನ್ನು ಕುರಿತ ಕಾವ್ಯವೂ ಇದೆ. ಜಾತಿ, ಧರ್ಮ, ಬದುಕು, ಅಸಮಾನತೆ ಇತ್ಯಾದಿಗಳನ್ನು ಕುರಿತ ವೈರುಧ್ಯಗಳ ವಿರುದ್ಧದ ಸಿಟ್ಟೂ ಇದೆ. ಒಟ್ಟಿಗೆ ಒಂದು ಸಿದ್ಧಾಂತಕ್ಕೆ ಒಳಪಟ್ಟು ಹೋರಾಟದ ಹಿನ್ನೆಲೆಯಲ್ಲಿ ರೂಪುಗೊಂಡ ಕಾವ್ಯ ಇದು.

ವೃತ್ತಿ ಬೇರೆಯಾಗಿದ್ದರೂ ಕಾವ್ಯ ಬರೆಯುವುದನ್ನೇ ಪ್ರವೃತ್ತಿಯನ್ನಾಗಿ ಮಾಡಿಕೊಂಡ ಡಾ. ಮುನಿವೆಂಕಟಪ್ಪ ಅವರು ಇಂಥ ಜನಪರ ಆಶಯವುಳ್ಳ ಸಂಕಲನವನ್ನು ಕೊಟ್ಟರೆಂಬುದು ಸಂತೋಷದ ವಿಷಯ. ' ನಾನ್ ಅಕಾಡೆಮಿಕ್ ' ಎನಿಸಿಕೊಂಡೇ ' ಅಕಾಡೆಮಿಕ್ ' ಆಗಿ ಸಾಹಿತ್ಯ ಕ್ಷೇತ್ರದಲ್ಲಿ, ಅದರಲ್ಲೂ ದಲಿತ ಕಾವ್ಯ ಕ್ಷೇತ್ರದಲ್ಲಿ ಪ್ರಸಿದ್ಧರಾಗಿದ್ದಾರೆ.

ಕನ್ನಡ ದಲಿತ ಲೇಖಕರಲ್ಲಿ ಗದ್ಯಪದ್ಯಗಳೆರಡರಲ್ಲೂ ತಮ್ಮ ಸ್ವಂತಿಕೆಯನ್ನು ಕಾಪಾಡಿಕೊಂಡು ಬಂದವರೆಂದರೆ ಡಾ. ಮ. ನ. ಜವರಯ್ಯ. ಸಾಹಿತ್ಯ ಅಕಾಡೆಮಿ ಪ್ರಶಸ್ತಿ, ವಿಶ್ವಮಾನವ ಪ್ರಶಸ್ತಿ ವಿಜೇತರಾದ ಮನಜ ಕವಿ, ಕಾದಂಬರಿಕಾರ, ಕತೆಗಾರ. ಎಲ್ಲದಕ್ಕಿಂತ ಮಿಗಿಲಾಗಿ ಅಂಬೇಡ್ಕರ್ ವಿಚಾರಸಾಹಿತ್ಯವನ್ನು ಕುರಿತಂತೆ ಕನ್ನಡದಲ್ಲಿ ಅಧಿಕೃತವಾಗಿ ಮಾತನಾಡುವವರು. ದೇಶದ ಆಂತರಿಕ ಗುಲಾಮಗಿರಿಯ ವಿರುದ್ಧ ಹೋರಾಟ ಮಾಡಿದ ಬಾಬಾಸಾಹೇಬ್ ಅಂಬೇಡ್ಕರ್ ಅವರ ವಿಚಾರಧಾರೆಯನ್ನು, ಜನಪರ ಚಿಂತನೆಯನ್ನು ಕನ್ನಡಕ್ಕೆ ತುಂಬ ಸಮರ್ಥವಾಗಿ ಪರಿಚಯಿಸಿದ ಕೀರ್ತಿ ಮನಜ ಅವರಿಗೆ ಸಲ್ಲುತ್ತದೆ. ಯಾವ ಮುಲಾಜುಗಳಿಗೂ ಕಟ್ಟುಬೀಳದೆ ತಮಗನಿಸಿದ್ದನ್ನು ಹೇಳುವ ಮತ್ತು ಬರೆಯುವ ಸ್ವಭಾವದವರು ಇವರು.

೧೯೮೧ ರಲ್ಲಿ 'ಕೇಳು ಜಗಮಾದಿಗ ಹೊಲೆಯ' ಸಂಕಲನವನ್ನು ಪ್ರಕಟಿಸುವುದರ ಮೂಲಕ ಮನಜ ಕಾವ್ಯ ಕ್ಷೇತ್ರವನ್ನು ಪ್ರವೇಶಿಸಿದರು. ದಲಿತ ಸಂಘಟನೆಯ ಜೊತೆ ಜೊತೆಯಲ್ಲೇ ರಚನೆಗೊಂಡ ಹತ್ತೊಂಬತ್ತು ಕವಿತೆಗಳು ಇದರಲ್ಲಿವೆ. ದಲಿತರ ದುಃಖ ದುಮ್ಮಾನಗಳು ಇಲ್ಲಿ ಅಭಿವ್ಯಕ್ತಗೊಂಡಿವೆ.

ಮೂಲವ ಕಡಿಯುವೆ
ನೆಲೆಯಿಲ್ಲದಲೆದ ಅವಮಾನದ
ಬೆವರಲ್ಲಿ ಬದುಕು ಮೆತ್ತಿಕೊಂಡಿದೆ
ಇವರ ತದಗು –
ಪುಳ್ಳೆ ಸೌದೆಗಳನ್ನೆಲ್ಲಾ ಗುಡಿಸಿ
ಬಿಸಿನೀರು ಕಾಸಿ
ಕಬ್ಬಿಣದ ಕಡಿಮೈಯ ಬೆವರ
ತೊಳೆಯುತ್ತೇನೆ
ಉಜ್ಜುತ್ತೇನೆ
ಹಳೆಯ ಕೊಳೆಯನೆಲ್ಲಾ.

ಮೂಲದ ಈ ಸಾಲುಗಳು ಕವಿಯ ಸಂಕಲ್ಪವನ್ನು ಸಾರುವುದರ ಜೊತೆಗೆ ಬಂಡಾಯ ಸಾಹಿತ್ಯದ ಆಶಯವನ್ನು ಯಾವುದೇ ಮುಚ್ಚು ಮರೆಯಿಲ್ಲದೆ ಅಭಿವ್ಯಕ್ತಿಸುತ್ತವೆ. ಮುಂದುವರಿದು ಕವಿ ಹೀಗೆ ನುಡಿಯುತ್ತಾನೆ : " ತಾತನ ಕಾಲದ ಹಳೆಯ ಮರವ / ಬುಡಮಟ್ಟ ಉರುಳಿಸಿ / ಘನವಾದ ಕಟ್ಟಡವ ಕಟ್ಟಿ / ಸರಿಕರೆದುರಿಗೆ / ಹೊಸ ಸಂಸಾರವ ಹೂಡುತ್ತೇನೆ. " ಯಾವ ಮೂಲಗಳು ನಮಗೆ ಅಪಾಯಕಾರಿಯೋ ಅಂಥವುಗಳ ಬೇರನ್ನೇ ಕಿತ್ತು ಅಲುಗಾಡಿಸಿ ಹೊಸ ಬದುಕನ್ನು ಆರಂಭಿಸುವೆನೆಂಬ ಅದಮ್ಯ ಉತ್ಸಾಹ ಇಲ್ಲಿ ಪ್ರಕಟವಾಗಿದೆ. ದಲಿತ ಬಂಡಾಯ ಕಾವ್ಯದ ಗುರಿಯೂ ಇದೇ ಆಗಿದೆ.

ಶ್ರಮವಹಿಸಿ ಬೆಳೆದ ಸಂಪತ್ತನ್ನೆಲ್ಲ ಸ್ವಾಹಾ ಮಾಡಿ. ಒಡೆಯರ ಉನ್ನತ ಸ್ಥಿತಿಗೆ ಮೆಟ್ಟಿಲಾಗಿ ಮುಗ್ಧತೆಯ ಬದುಕು ಸಾಗಿಸಿದ್ದಾಯಿತು. ಇದೇ ರೀತಿ ಇನ್ನುಮುಂದೆ

ಮುಗ್ಧತೆಯಿಂದ ಬದುಕು ಸಾಗಿಸುವುದರಲ್ಲಿ ಅರ್ಥವಿಲ್ಲವೆಂದು ತೀರ್ಮಾನಿಸಿ ಅಜ್ಞಾನದಿಂದ ಜ್ಞಾನದ ಕಡೆಗೆ ತಿರುಗಿ ಶೋಷಿತರ ವಿರುದ್ಧ ಸಿಡಿದೇಳುವ ಪ್ರತಿಭಟನಾತ್ಮಕ ಧ್ವನಿ ಈ ಸಂಕಲನದ ಅಂತರ್ಯವೆನ್ನಬಹುದು. ಹಾಗಾಗಿ ಇಲ್ಲಿಯ ಕಾವ್ಯ ಯಾವುದೇ ಮುಲಾಜಿಗೆ ಒಳಪಟ್ಟಿಲ್ಲ. 'ಉರಿಗಣ್ಣಿನವರು', 'ಆಗಸ್ಟ್ ಹದಿನೈದು', 'ನೀವು ಕಾಣಿರಿ' – ಮೊದಲಾದ ಕವಿತೆಗಳು ಇದಕ್ಕೆ ಸಾಕ್ಷಿಯಾಗಿವೆ. ದಲಿತ ಸಂಘಟನೆಯ ಆರಂಭದ ಕವಿತೆಗಳಲ್ಲಿ ಗೋಚರವಾದ ಆವೇಶ, ಕೋಪ – ಇತ್ಯಾದಿ ಮಿತಿಗಳು ಈ ಸಂಕಲನದ ಕವಿತೆಗಳಲ್ಲಿ ಗೋಚರವಾಗಿದ್ದರೂ, ಅವನ್ನು ಮೀರುವ ಸಾಮಾಜಿಕ – ಸಮಾನತೆಯ ಆಶಯಗಳು ಇಲ್ಲಿ ಮೈದುಂಬಿ ಬಂದಿವೆ. ಕೋಲಾರ ಜಿಲ್ಲೆಯ ಮಾಲೂರಿನಲ್ಲಿ ಒಂದು ಹೆಣ್ಣುಮಗುವಿನ ಮೇಲಾದ ಭಯಂಕರ ಕ್ರೌರ್ಯವನ್ನು ಕುರಿತದ್ದು 'ಕಮಲವ್ವ'. ಇದು ಸಂಕಲನದಲ್ಲಿಯೇ ಭಿನ್ನವಾದ ಕವಿತೆ. ಜೊತೆಗೆ 'ನೂಲು ಬೇಲಿ', 'ಯಲ್ಲವ್ವನ ಬಗುತಿ' ಮೊದಲಾದ ಕವಿತೆಗಳನ್ನು ಗಮನಿಸಿದಾಗಲಂತೂ ಕವಿ ಕಾವ್ಯಕ್ಕಾಗಿ ಕಾವ್ಯ ಬರೆಯಲು ಹೊರಟವರಲ್ಲವೆಂತಲೂ, ಜೊತೆಗೆ ತನ್ನ ಆಶಯವನ್ನು ಅಭಿವ್ಯಕ್ತಿಸುವಾಗ ಸಂಯಮ ಮೀರದೇ ಇರುವುದನ್ನೂ ಇಲ್ಲಿ ಗಮನಿಸುತ್ತೇವೆ.

'ಅತ್ತೆ ಸೊಸೆ ಆತ್ಮಕತೆ' ಮನಜ ಅವರ ಎರಡನೆಯ ಕವಿತಾ ಸಂಕಲನ (೧೯೮೮). ಇದರಲ್ಲಿ ಮನಜ ಅವರ ಕಾವ್ಯ ಕ್ಷೇತ್ರದ ಬೆಳವಣಿಗೆಯನ್ನು ಕಾಣುತ್ತೇವೆ. ಪ್ರೊ. ಎಚ್. ಎಂ. ಚನ್ನಯ್ಯ ಅವರು ಹೇಳುವಂತೆ ಉಚ್ಚ ಸಂಸ್ಕೃತಿ ಮತ್ತು ಆ ಸಂಸ್ಕೃತಿಯ ಅಂಗವೇ ಆದ, ಆದರೆ ಆ ಉಚ್ಚ ಸಂಸ್ಕೃತಿಯ ಎಲ್ಲ ರೀತಿಯ ಸೌಲಭ್ಯಗಳಿಂದ, ಸೂಕ್ಷ್ಮಗಳಿಂದ ವಂಚಿತವಾದ 'ಕೀಳ್ ಸಂಸ್ಕೃತಿ' – ಇವುಗಳ ಮಧ್ಯದ ವೈರುಧ್ಯಗಳಿಂದುಂಟಾದ ವಿಷಮತೆ ಈ ಸಂಕಲನದ ಮುಖ್ಯ ಕಾಳಜಿಯಾಗಿದೆ. ಭಾರತೀಯ ಸಂದರ್ಭದ ಕುಟುಂಬದೊಳಗಿನ ಅತ್ತೆ – ಸೊಸೆಯರ ಸಂಬಂಧವೂ ಈ ಮಾತಿಗೆ ಹೊರತಾಗಿಲ್ಲ. ಇಬ್ಬರೂ ಒಂದಾದಾಗ ಮಾತ್ರ ಹೊಂದಾಣಿಕೆ ಸಾಧ್ಯವಾಗುತ್ತದೆ. ಇಲ್ಲವಾದರೆ ಸಂಬಂಧಕ್ಕೆ ಬದಲಾಗಿ ವಿಷಮತೆಯೇ ಕಟ್ಟಿಟ್ಟ ಬುತ್ತಿಯಾಗಿಬಿಡಬಹುದು. ಇದು ಇಲ್ಲಿಯ ಬಹುತೇಕ ಕವಿತೆಗಳಿಗೆ ಅನ್ವಯವಾಗುವ ಮಾತು.

"ಕುಲಕಾಂಡವ ಕಲಾಪದಗ್ನಿ ಭೈರನ ಕಾಲ / ಹದಗೆಟ್ಟ ಬದುಕಿನ ಅತ್ತೆ ಕಾಲ / ಆತ್ಮ ಸೋಸಲು ಸೊಸೆಗಿದು ಸೂಕ್ತ ಕಾಲ / ಕಮ್ಮಾರ ಕಾರ್ಯ ಚಿತ್ತ ಮುಗಿಲಲ್ಲಿ / ಇನ್ನಾದರೂ ಮಾಡಬೇಕಿದೆ / ಅಕಲಂಕತಾರಾಮಂಡಲದ ಬೆಳಕು." ಒಂದು ಕಾಲದಲ್ಲಿ ಯಜಮಾನಿಕೆ ನಡೆಸಿದ ಅತ್ತೆಯನ್ನು ಪರೀಕ್ಷಿಸುವ, ಅಧಿಕಾರವನ್ನು ಕಿತ್ತುಕೊಳ್ಳುವ ಸರದಿ ಈಗ ಸೊಸೆಗೆ ಬಂದಿದೆ. ಶತಮಾನಗಳಿಂದ ಅತಿಕ್ರಮಿಸುತ್ತ ಬಂದಿರುವ ಹಳೆಯ ಕಳೆಯನ್ನು ಕಿತ್ತುಹಾಕಿ ಹೊಸತನವನ್ನು ಕಸಿ ಮಾಡುವ ಉತ್ಕಟ ಅಭೀಪ್ಸೆಯೂ ಇಲ್ಲಿ ಕಂಗೊಳಿಸಿದೆ.

ಹಳೆಪುಟಗಳು ತೆರೆದುಕೊಂಡಿವೆ
ಹೊಸಭಾಷೆಗೆ ಕಾತರಗೊಂಡಿವೆ. (ಪುಟಗಳು)

ಅಂದರೆ ಪ್ರಸ್ತುತ ಸಮಾಜದ ಬದಲಾವಣೆಯ ಕಾರಣಗಳನ್ನು ಪುರಾಣ ಇತಿಹಾಸಗಳಲ್ಲಿ ಹುಡುಕುವ ಪ್ರಯತ್ನವಿದೆ. ಶತಮಾನಗಳ ಸಂದುಗೊಂದುಗಳನೆಲ್ಲ ತಡಕಬೇಕು, ಬೆದಕಬೇಕು ಎಂದು ಹೇಳುವಲ್ಲಿ ಕವಿಯ ಸಂಶೋಧನಾ ಪ್ರವೃತ್ತಿ ಕೆಲಸ ಮಾಡಿದೆ. ಸಂಕಲನದ ಆಶಯವೇ ಇದಾಗಿದ್ದು ಇಡೀ ಬದುಕಿನ ಶೋಧನೆಯಲ್ಲಿ ತೊಡಗುವಂಥದ್ದಾಗಿದೆ. " ಹಳೆಯದನೆಲ್ಲ ಒದರಿ ವಂದರಿಯಾಡಿ ಸೋಸಿ ಆರಿಸುವ " ಕೆಲಸದಲ್ಲಿ ಕವಿಯ ಮನಸ್ಸು ಗಾಢವಾಗಿ ನಿಂತಿದೆ. ಈ ಉದ್ದೇಶ ನಿಜಕ್ಕೂ ಮೆಚ್ಚತಕ್ಕದ್ದೇ. ಇಲ್ಲಿಯ ಎಲ್ಲ ಕವಿತೆಗಳಲ್ಲಿಯೂ ಶೋಧನಾತ್ಮಕ ಪ್ರವೃತ್ತಿಯೇ ತಳಹದಿಯಾಗಿರುವುದನ್ನು ಕಾಣುತ್ತೇವೆ. ಭಾಷೆ ಮತ್ತು ಶೈಲಿಗಳೆರಡರಲ್ಲಿಯೂ ಈ ಚಿಂತನೆ ಅಭಿವ್ಯಕ್ತಗೊಂಡಿರುವುದು ಇಲ್ಲಿಯ ಗಮನಾರ್ಹ ಅಂಶ. ಈ ಕಾರಣದಿಂದಾಗಿಯೇ ಎಲ್ಲ ಕವಿತೆಗಳೂ ಒಂದಲ್ಲ ಒಂದು ವಿಧದಲ್ಲಿ ಆಕರ್ಷಕವಾಗಿವೆ. ತಲಾಂತರದಿಂದ ಬಂದ ವ್ಯವಸ್ಥೆಗೆ ಬೇಕಾಗಿರುವ ಹೊಸ ಟ್ರೀಟ್‌ಮೆಂಟಿನ ಆವಶ್ಯಕತೆಯನ್ನು ಹೇಳುವಲ್ಲಿನ ವ್ಯವಸ್ಥೆಯ ಗಂಭೀರ ಚಿತ್ರ ' ತಲಾಂತರ ' ದಲ್ಲಿ ಕಂಡುಬಂದಿದೆ. ಸ್ವತಂತ್ರಭಾರತದ ರಾಜಕೀಯ ಏರುಪೇರುಗಳನ್ನು ಸಮರ್ಪಕ ಚಿತ್ರಗಳ ಮೂಲಕ ಬಿಡಿಸುತ್ತ ಸಾಗುವ ' ಧರ್ಮಚಕ್ರ ', " ಚಕ್ರ ಚಾಲಕ ಚಕ್ರವರ್ತಿಗೆ ಮೇಲಾಗಿ ಇರಲುಂಟೆ ಧರ್ಮವೊಂದು ಚಕ್ರವೊಂದು ?" – ಎಂಬಲ್ಲಿನ ರಾಜಶಾಹಿಯ ಅಹಂಕಾರದ ಜೊತೆಗೆ " ವೇದಘೋಷಣದ ಸಲಹೆಯೂ ಸೇರಿಕೊಳ್ಳುತ್ತದೆ." ಕವಿ ಅದನ್ನು ಸಮರ್ಪಕವಾಗಿ ವಿಡಂಬಿಸುತ್ತಾನೆ (ಅತ್ತೆ ಸೊಸೆ ಆತ್ಮಕತೆ, ಪುಟ ೬೨). ಸಂಸ್ಕೃತವಂತೂ ವ್ಯಂಗ್ಯಕ್ಕಾಗಿ ಸೊಗಸಾಗಿ ಬಳಕೆಯಾಗಿದೆ.

' ಅಪ್ಪ ಹೇಳಿದ ಆತ್ಮಕತೆ ', ' ಮೆರಿಟ್ ಪಾಪದ ಪಾಂಚಜನ್ಯ ', ' ಕೋಗಿಲೆ ಮತ್ತು ಇಂಡಿಯಾ ', ' ಆ ಮುಗಿಲು ಈ ನೆಲ ', ' ವರ್ಣಾವರ್ಣಕ್ಕೆ ವ್ಯಾಕರಣ ', ' ಹೊಲೆ ಮಾದರ ಮನೆಯ ಮಗ ' – ಕುಲದ ಬಗೆಗಿನ ಅಹಂಕಾರ ಮತ್ತು ಅದರಿಂದಾದ ಸಾಮಾಜಿಕ ವಿಷಮತೆಯನ್ನು ಸಾದರಪಡಿಸುವ ಈ ಕವಿತೆಗಳು ದಲಿತ ಬಂಡಾಯ ಕಾವ್ಯದ ದಿಕ್ಕನ್ನು ಸೂಚಿಸುವಂಥವಾಗಿವೆ. ಸಮಾನತೆಯ ವಿಷಯದಲ್ಲಿ ಬಸವಣ್ಣನ ಜೊತೆ ಸಹಕರಿಸಿದ ಅಲ್ಲಮ, ಚನ್ನಬಸವರನ್ನು ಗೌರವದಿಂದ ಸ್ಮರಿಸಿ, ಮಹಾಮನೆಯ ಮಹತ್ವವನ್ನು ಹೇಳಿ, ವರ್ತಮಾನದಲ್ಲಿ ಆ ' ಮಹಾಮನೆ ' ಗಾದ ದುಃಸ್ಥಿತಿಯನ್ನು ' ಹೊಲೆ ಮಾದರ ಮನೆಯ ಮಗ ' ನಲ್ಲಿ ಚಿತ್ರಿಸಲಾಗಿದೆ.

ನೀನೇ ಕಂಡಂತೆ ಚೆನ್ನ ಕಕ್ಕರೆ ಮನೆಯಾಚೆ ಬಿಸುಟರಂತೆ
ಅದು ಬೇರೇನೂ ಆಗಿರದೆ ನಿನ್ನಾತ್ಮ ಚೇತನವಂತೆ.

ಇಲ್ಲಿ ಚೆನ್ನ ಕಕ್ಕರ ಮನೆಯ ಮಗ ಎಂದು ಕರೆದುಕೊಂಡ ಬಸವನನ್ನು ಆತನ ಹಿಂಬಾಲಕರು ಮಹಾಮನೆಯಿಂದ ಹೊರದಬ್ಬಿದ ಸಂಗತಿಯನ್ನು ಕವಿ ಹೇಳದೆ ಬಿಟ್ಟಿಲ್ಲ. " ಈಗಿರುವುದೊಂದೆ ತತ್ವ ಚೆನ್ನಯ್ಯ, ಕಕ್ಕಯ್ಯ / ಬಸವಾತ್ಮ ಚೇತನವೆ ಹೊಲೆ ಮಾದರ ಬಂಡಾಯ " – ಹೀಗೆ ಅಂತ್ಯಗೊಳ್ಳುವುದರ ಮೂಲಕ ಕವಿತೆಯ ಆಶಯ ಮುಗಿಲು

ಮುಟ್ಟುತ್ತದೆ. ಸಾಂಸ್ಥಿಕ ರೂಪ ಪಡೆದಿದ್ದ ವೀರಶೈವ ಹೇಗೆ ಗತಿಶೀಲತೆಯನ್ನು ಪಡೆದುಕೊಂಡಿತು ಎಂಬುದನ್ನು ಸೂಚಿಸುತ್ತದೆ.

' ಶಿವೈಕ್ಯ ಹೊಲೇರ ಶಿವನಂಜು '. ಇಂದಿನ ವಿಷಮತೆಯನ್ನು, ಆ ವಿಷಮತೆ ನಿರ್ಮೂಲವಾಗುವುದು ಅಂಬೇಡ್ಕರರ ಆಲೋಚನೆಗಳು ಕಾರ್ಯರೂಪಕ್ಕಿಳಿದಾಗ ಮಾತ್ರ ಎಂಬ ಆಶಯವನ್ನು ಒಳಗೊಂಡಿದೆ. ಚಂಪೂ ಶೈಲಿಯಲ್ಲಿ ಮೂಡಿಬಂದಿರುವ ' ಗೋವಿಂದಪುರ ' ದೀರ್ಘ ಕವಿತೆಯಲ್ಲಂತೂ ಹೊಸ ಪೌರಾಣಿಕ ಸಂಗತಿಯೇ ಮೂಡಿ ಬಂದಂತಿದೆ. ಹಾಗೆ ನೋಡಿದರೆ ಅಡಿಗರ ' ಗೊಂದಲಪುರ ' ಕ್ಕೆ ಇದು ಉತ್ತರವಾಗಿದೆಯೇನೋ ಎನ್ನಿಸಿ ಬಿಡುತ್ತದೆ.

೯೮ ರಲ್ಲಿ ಪ್ರಕಟಗೊಂಡ ' ಗುಲಾಮಿ ' ೩೧ ಕವಿತೆಗಳನ್ನು ಒಳಗೊಂಡ ಸಂಕಲನ. ಗುಲಾಮಿ ಸಂಸ್ಕೃತಿಯ ಬಗ್ಗೆ ಈ ಮುಂಚೆಯೇ ಬಂದ ಬರಗೂರರ ' ಗುಲಾಮಗೀತೆಯ ' ನಂತರ ಪ್ರಕಟವಾದ ಅದೇ ಹೆಸರಿನ ಸಂಕಲನವಿದು. ಕಾವ್ಯಾಭಿವ್ಯಕ್ತಿಯ ಮೂಲಕ ಮಾನವನ ಸಾಂಸ್ಕೃತಿಕ ಬದುಕಿನ ಸ್ಥಿತ್ಯಂತರಗಳನ್ನು ಪರಿಭಾವಿಸುವ ಬಗೆಯನ್ನು ಇಲ್ಲಿಯ ಕವಿತೆಗಳಲ್ಲಿ ಕಾಣಬಹುದು. ಗುಲಾಮಿ ಸಂಸ್ಕೃತಿಯ ಆಶಯವೇ ಎದ್ದು ಕಾಣಿಸುವ ' ಮನೆಯಿಂದ ಮನೆಗೆ ', ' ನಾನು ನನ್ನಾತ್ಮನೂ ', ' ೨೧ ನೇ ಶತಮಾನಕ್ಕೆ ನನ್ನದೊಂದು ಪ್ರಾರ್ಥನೆ ' – ಮೊದಲಾದ ಕವಿತೆಗಳಲ್ಲಿ ಸಮಾಜದ ವಿಷಮತೆಯೇ ಸ್ಥಾಯಿಯಾಗಿದೆ. ಉಳಿದ ಕೆಲವು ಕವಿತೆಗಳಲ್ಲಿ ವ್ಯಂಗ್ಯವೇ ಪ್ರಧಾನವಾಗಿದೆ.

ಒಟ್ಟಾರೆ ಮನಜ ಅವರ ಕಾವ್ಯ, ವ್ಯವಸ್ಥೆ ಬದಲಾಗಬೇಕೆಂದು ಹಾತೊರೆಯುಫಂಥದ್ದು. ಅದು ಬದಲಾಗಲು ಅದಕ್ಕೊಂದು ತಾತ್ವಿಕತೆಯೇ ಬೇಕು. ಅಂಥ ತಾತ್ವಿಕತೆ ಇರುವುದೂ ಸಹ ಅಂಬೇಡ್ಕರ್ ಅವರ ವಿಚಾರಧಾರೆಯಲ್ಲೇ. ಇವರ ಒಟ್ಟು ಕಾವ್ಯ ಸಮರ್ಥಿಸುವುದೂ ಇದನ್ನೆ. ಮೊದಲ ಸಂಕಲನದಲ್ಲಿದ್ದ ಆಕ್ರೋಶ ನಂತರದ ಸಂಕಲನಗಳಲ್ಲಿ ಕಡಿಮೆಯಾಗಿ ಕ್ರಮೇಣ ಅಸಮಾಧಾನ, ವ್ಯಂಗ್ಯ, ವಿಡಂಬನೆಗಳು ವಿಜೃಂಭಿಸಿವೆ. ಆದರೆ ಆಕ್ರೋಶದ ಭಾರವನ್ನು ಕಲೆಯಾಗಿಸುವ ಕಲೆಗಾರಿಕೆ ಮಾತ್ರ ಮನಜ ಅವರಿಗೆ ಸಿದ್ಧಿಸಿದೆ. ದಟ್ಟವಾದ ದಲಿತಾನುಭವವನ್ನು ಕಟ್ಟಿಕೊಡುವ ಇವರ ಕಾವ್ಯದಲ್ಲಿ ಪುರಾಣವನ್ನು ಒಡೆದು ಹೊಸ ಪುರಾಣವೊಂದನ್ನು ಕಟ್ಟಿಕೊಡುವ ಕ್ರಿಯೆ ಇದೆ. ಭೂತಕಾಲದ ಸಂಗತಿಗಳನ್ನು ವರ್ತಮಾನದಲ್ಲಿಟ್ಟು ಬೆಲೆ ಕಟ್ಟುವ ಕ್ರಿಯೆ ಪ್ರಧಾನವಾಗಿರುವಂತೆಯೇ ಸಮಾಜದ ತಳರಚನೆಯ ವಾಸ್ತವಿಕತೆಯನ್ನು ಕಲಾತ್ಮಕಗೊಳಿಸುವ ಕುಸುರಿ ಕೆಲಸವೂ ಇಲ್ಲಿ ನಡೆದಿದೆ. ಇವರ ಕಾವ್ಯದ ಪ್ಲಸ್ ಪಾಯಿಂಟ್ ಇರುವುದೂ ಈ ನೆಲೆಯಲ್ಲಿಯೇ.

ಮುಳ್ಳೂರು ನಾಗರಾಜ್ ಅವರ ' ನೆಲದ ಜೋಗುಳ ' ದಲ್ಲಿ ಗತಕಾಲದ ಜೀವನದೊಂದಿಗೆ ವರ್ತಮಾನದ ಒಳನೋಟಗಳು ಬೆಸೆದುಕೊಂಡಿರುವುದನ್ನು ಗಮನಿಸಬಹುದು. ಮೂಲ ರಾಮಾಯಣದಲ್ಲಿ ಬರುವ ' ಶಂಬೂಕವಧೆ ' ಪ್ರಸಂಗವನ್ನು ಅವರು ಈ ಕಾವ್ಯದ ವಸ್ತುವನ್ನಾಗಿ ಆಯ್ಕೆ ಮಾಡಿಕೊಂಡಿದ್ದಾರೆ. ಇಲ್ಲಿಯ ರಾಮ ಸರ್ವಾಧಿಕಾರಿಯ ಪ್ರತೀಕವಾಗಿದ್ದಾನೆ. ಶೋಷಿತ ವ್ಯವಸ್ಥೆಯನ್ನು

ಬಲಪಡಿಸುವ ಅಕೃತ್ಯಗಳಲ್ಲಿ ತೊಡಗುತ್ತಾನೆ. ಶಂಬೂಕ ತಪಸ್ಸನ್ನು ಆಚರಿಸುವ ಮೂಲಕ ಪ್ರತಿಸ್ಪರ್ಧಿಯಾಗಿ ಬೆಳೆಯುತ್ತಿರುವುದನ್ನು ಕಂಡು ಬ್ರಾಹ್ಮಣವರ್ಗ ಅಸಹನೆಯಿಂದ ಮಿಡಿಯುತ್ತದೆ. ಹಾಗೆಯೇ ಇವತ್ತು ಎಲ್ಲ ಕ್ಷೇತ್ರಗಳಲ್ಲೂ ಸರಿಸಮಾನವಾಗಿ ಮೇಲೆ ಬರುತ್ತಿರುವ ದುರ್ಬಲ ವರ್ಗದವರನ್ನು ಕಂಡರೆ ಪ್ರಬಲ ಕೋಮಿನವರಿಗೆ ಸಹನೆ ಇಲ್ಲವಾಗಿದೆ. ಪ್ರಜಾಸತ್ತಾತ್ಮಕ ಮಾತುಗಳಿಗೆ ಬೆಲೆ ಇಲ್ಲವಾಗಿದೆ. ಇಂಥ ಗ್ರಹಿಕೆಯನ್ನು 'ನೆಲದ ಜೋಗುಳ' ಮಹಾಕಾವ್ಯ ನಮ್ಮ ಮುಂದಿಡುತ್ತದೆ. ಶಂಬೂಕನ ವಿಪತ್‌ಪರಂಪರೆಗೆ ಪುರೋಹಿತ ವರ್ಗವೇ ಕಾರಣವಾಗಿಬಿಡುತ್ತದೆ. ಸವರ್ಣೀಯರ ಸರೋವರದಲ್ಲಿ ಶಂಬೂಕ ನೀರು ಕುಡಿದ ಎಂಬ ಕಾರಣಕ್ಕೆ ಹಾರುವರ ಮುದುಕ ಥಳಿಸುವುದು, ಶಿಕ್ಷಣ ಕೊಡಲು ನಿರಾಕರಿಸುವುದು, ತಪಸ್ಸು ನಿಮ್ಮಂಥವರಿಗಲ್ಲ ಎಂದು ಅವನ ತಾಯಿ ತಡೆಯುವುದು, ತಪಸ್ಸಿಗೆ ಕೂಡುವ ಹಾರುವರ ಗುಂಪು ರಾಮನಿಗೆ ದೂರು ಸಲ್ಲಿಸಿದ್ದು, ಹಾರುವರ ಹುಡುಗನ ಸಾವಿಗೆ ಶಂಬೂಕನ ತಪಸ್ಸೇ ಕಾರಣ ಎಂದು ರಾಮ ಆತನನ್ನು ಕೊಂದದ್ದು –ಇತ್ಯಾದಿ ಶಂಬೂಕನ ಜೀವನಕ್ಕೆ ಸಂಬಂಧಿಸಿದ ಸಂಗತಿಗಳು ಅಂಬೇಡ್ಕರ್ ಬದುಕಿನ ಸಂದರ್ಭಗಳೊಂದಿಗೆ ಹೋಲಿಕೆಯನ್ನು ಪಡೆದುಕೊಂಡಿವೆ. ಈ ರೀತಿ ಮಾಡುವುದರ ಮೂಲಕ ಪುರಾಣ ಕಾವ್ಯದಲ್ಲಿ ವರ್ತಮಾನದ ಚಾರಿತ್ರಿಕ ಸಂಗತಿಯನ್ನು ವ್ಯಂಗಿಸಲಾಗಿದೆ. ಒಟ್ಟಾರೆ ಶಂಬೂಕನ ಜೀವನ ವಿವರಗಳೊಂದಿಗೆ ಸಮಕಾಲೀನ ದಲಿತ ವರ್ಗದ ಚಿತ್ರವನ್ನು ಹೊಂದಿಸಿ ನೋಡಲಾಗಿದೆ. ನೆಲದ ಜೋಗುಳ ಕಾವ್ಯದಲ್ಲಿ ನೆಪಮಾತ್ರಕ್ಕೆ ಪುರಾಣದ ಚೌಕಟ್ಟು ಇದ್ದರೆ, ಒಳಗಿರುವ ಚಿತ್ರವೆಲ್ಲ ಸಮಕಾಲೀನ ಚರಿತ್ರೆಯ ಸಂದರ್ಭವೇ ಆಗಿದೆ. ಆದ್ದರಿಂದ ಇದನ್ನು ಪುರಾಣಧ್ವನಿ ಕಾವ್ಯವೆಂದು ಹೇಳಬಹುದಾಗಿದೆ. ಮಾನವ ಜನಾಂಗದ ದ್ವೇಷ ಕರಗಿ ನೀರಾಗಿ ಹರಿಯಲಿ, ಸ್ನೇಹ ಒಡಮೂಡಲಿ, ದಿನೇ ದಿನೇ ಅದು ವೃದ್ಧಿಸಲಿ ಎಂಬುದೇ ಈ ಮಹಾಕಾವ್ಯದ ಆಶಯವಾಗಿದೆ.

ಪ್ರೊ. ಸಿ. ಪಿ. ಸಿದ್ಧಾಶ್ರಮ ಸಾಮಾಜಿಕ ಅರಿವಿನ ಬದ್ಧತೆಯುಳ್ಳ ಲೇಖಕರು. ದಲಿತ ಬಂಡಾಯ ಸಂಘಟನೆ ಹುಟ್ಟುವ ಮುಂಚೆಯೇ ದಲಿತ ಬಂಡಾಯದ ಸಂವೇದನೆಯುಳ್ಳ 'ಹೊಸ ಅಲೆ' (೧೯೭೮) ಎಂಬ ವಿಮರ್ಶಾತ್ಮಕ ಕೃತಿಯನ್ನು ಹೊರತಂದವರು. ಇವರ ಸಾಹಿತ್ಯಿಕ ಕೃಷಿಯ ಮತ್ತೊಂದು ಹಂತ 'ಮುಗಿಲ ಮರೆಯ ನೇಸರ.' ಈ ಕವನ ಸಂಕಲನ ಹೊರತಂದು ಅವರು ವಿಮರ್ಶಕ ಕವಿಯಾಗಿದ್ದಾರೆ. ಇದು ಅವರ ಸೃಜನಶೀಲತೆಯ ಹೆಗ್ಗುರುತು.

ಇಲ್ಲಿ ಕವಿತೆಯನ್ನು ಕಟ್ಟಿಕೊಡುವಾಗ ಅದರ ಒಳಪದರಲ್ಲಿ ಶಬ್ದಸಂಪತ್ತನ್ನು ಮಿತಿಯಾಗಿ ಬಳಸಿರುವುದೂ ಒಂದು ಕಲಾತ್ಮಕ ತಂತ್ರವೇ ಆಗಿದೆ. ಉಪಮೆಗಳನ್ನು ಬಳಕೆ ಮಾಡುವಾಗ ಸಂಯೋಜನಾ ತಂತ್ರದ ಕೌಶಲ್ಯವನ್ನು ಸಮಕಾಲೀನ ಸಂದರ್ಭದ ದ್ವಂದ್ವಗಳಿಗೆ ಹೋಲಿಸುತ್ತ ಕವಿ ಓದುಗನ ಮನ ಗೆಲ್ಲುತ್ತಾರೆ. ಅದರಿಂದಾಗಿಯೇ ಇಲ್ಲಿಯ ಕವಿತೆಗಳು ಭಾವುಕತೆಗೊಳಗಾಗಿಲ್ಲ. ರಸಾವೇಷದ ಕಲ್ಪನೆಯನ್ನು

ಅನುಸರಿಸವೆ. ಆಧುನಿಕ ಕನ್ನಡ ಕಾವ್ಯಕ್ಕೆ ಯಾವುದನ್ನು ಕೊಡಬೇಕಾಗಿದೆಯೋ ಅಂಥದ್ದನ್ನು ಕಾವ್ಯಭಾಷೆಯಲ್ಲಿ ಸಾರ್ಥಕವಾಗಿ ದುಡಿಸಿಕೊಂಡಿವೆ. ಕವಿತೆಯ ಯಶಸ್ಸು ಇರುವುದೂ ಇಂಥ ಗಂಭೀರ ನೆಲೆಯಲ್ಲಿಯೇ. ಹಾಗಾಗಿ ಕವಿ ನಮ್ಮೆಲ್ಲರ ಗ್ರಹಿಕೆಯ ಕೇಂದ್ರ ಪ್ರಜ್ಞೆಯಾಗಿ ಗೋಚರವಾಗುತ್ತಾರೆ. ಒಂದು ಕಾವ್ಯಕ್ಕೆ ಕಲಾತ್ಮಕತೆ ಮತ್ತು ಅರ್ಥಪೂರ್ಣತೆಯೇ ಬಂಡವಾಳವೆನ್ನುವಂತೆ ಸಮಕಾಲೀನ ಸವಾಲನ್ನು ಧೈರ್ಯವಾಗಿ ಎದುರಿಸಿ ಕವಿ ಸಿದ್ಧಾಶ್ರಮ ಕನ್ನಡ ಕಾವ್ಯಲೋಕದಲ್ಲಿ ಮಹತ್ವದ ಸ್ಥಾನ ಪಡೆಯುತ್ತಾರೆಂದು ಭಾವಿಸಬಹುದು.

ನಮ್ಮ ಸುತ್ತಲಿನ ಸಮಾಜದ ಅನುಭವಗಳನ್ನು ಸೃಜನಶೀಲ ಕಲೆಗೆ ಒಳಪಡಿಸುವ ಜಾಣ್ಮೆ ಎಲ್. ಹನುಮಂತಯ್ಯನವರಿಗೆ ಸಿದ್ಧಿಸಿದೆ. ಭೂತದ ಘಟನೆಗಳಿಗೆ ವೈಚಾರಿಕ ದೃಷ್ಟಿಕೋನ ನೀಡಬಲ್ಲವರು. ಹಾಗೆಯೇ ತಮ್ಮ ಕಾವ್ಯ ಕ್ಷಿತಿಜದಲ್ಲಿ ವೈಚಾರಿಕ ಒಳನೋಟಗಳನ್ನು ಬಿಂಬಿಸಬಲ್ಲವರಾಗಿದ್ದಾರೆ. ' ಕಪ್ಪು ಕಣ್ಣಿನ ಹುಡುಗಿ ', ' ಅವ್ವ ' ಸಂಕಲನದ ಕವಿತೆಗಳನ್ನು ಓದಿದವರಿಗೆ ಈ ಮಾತು ಸತ್ಯವೆನಿಸುತ್ತದೆ. ಜನಪರ ಹೋರಾಟಗಳ ಹಿನ್ನೆಲೆಯಿಂದ ಬಂದ ಹನುಮಂತಯ್ಯನವರ ಕಾವ್ಯದಲ್ಲಿ ಸಾಮಾಜಿಕ ಕಳಕಳಿಯೇ ಸ್ಥಾಯಿಯಾಗಿದೆ. ಈಗಾಗಲೇ ಕನ್ನಡ ಕಾವ್ಯ ಪ್ರಪಂಚದಲ್ಲಿ ಬಳಸಿ ತೀರಾ ಸವಕಲಾಗಿರುವ ರೂಪಕಗಳನ್ನು ಬಿಟ್ಟು, ತಮ್ಮ ಕಾವ್ಯ ಕನ್ನಿಕೆಯನ್ನು ' ಕಪ್ಪು ಕಣ್ಣಿನ ಹುಡುಗಿ ' ಎಂದು ಬಣ್ಣಿಸಿರುವುದೇ ಅವರ ಧೋರಣೆಗೆ ಖಚಿತ ನಿದರ್ಶನವಾಗಿದೆ. ' ಅಪ್ಪ ', ' ಮೆರವಣಿಗೆ ' ಯಂಥ ಕವಿತೆಗಳಲ್ಲಿನ ಪ್ರತಿಮಾತ್ಮಕ ರೀತಿ ಅವುಗಳಲ್ಲಿಯ ಯಶಸ್ಸಿಗೆ ಕಾರಣವಾಗಿದೆ. ಆದರೆ ಕೆಲವು ಕಡೆ ಕವಿತೆ ವಾಚಾಳಿತನದಿಂದಾಗಿ ತುಂಬ ತೆಳುವಾಗಿ ತೀವ್ರತೆಯನ್ನು ಕಳೆದುಕೊಂಡಿದೆ. " ಬಟ್ಟ ಬಯಲಿಗೆ ಬೀಜ ಚೆಲ್ಲುವುದು ಬೇಡ, ಇರುವಲ್ಲೆ ಬೆಳೆಯೋಣ ಪ್ರೀತಿ ಹಸುರಿನ ಬೆಳೆಯ " ಎಂಬ ಪ್ರಜ್ಞಾಪೂರ್ವಕ ನಿಲುವಿನಿಂದಲೇ ನಂತರದ ' ಅವ್ವ ' ಸಂಕಲನ ಹೊರಬಂದಿದೆ. ಇದರಲ್ಲಿ ' ಅವ್ವ ' ಕವಿತೆ ಅತ್ಯಂತ ಗಮನ ಸೆಳೆಯುವಂಥದ್ದು. ಮಗನನ್ನು ಅಕ್ಷರ ಸಂಸ್ಕೃತಿಯ ತೆಕ್ಕೆಯೊಳಗೆ ತರಲು ಅವ್ವ ಪಟ್ಟ ಪಾಡುಗಳು ಕಲಾತ್ಮಕವಾಗಿ ಮೂಡಿವೆ. ಅಲ್ಲದೆ ಇದು ಎಷ್ಟೋ ದಲಿತ ತಾಯಂದಿರ ಕಥನ ಕಾವ್ಯದಂತಿದೆ. ' ಬೇರಾದ ಕುಂಡ ' ಎಂಬ ನೀಳ್ಗವನವಂತೂ ಸೋಮನ ಕುಣಿತದ ಕಲೆಯ ಹಿನ್ನೆಲೆಯನ್ನು ಹೊಂದಿದ ಪ್ರತಿಮಾತ್ಮಕ ಕವಿತೆ. ಕವಿಯ ಸ್ತ್ರೀಪರ ದೃಷ್ಟಿ, ಚಿಂತನೆ, ಮಾತೃಪ್ರಧಾನ ಸಂಸ್ಕೃತಿಯ ಅರಿವು ಎಲ್ಲವೂ ಇಲ್ಲಿ ರೂಪಕವಾಗಿ ಕಾವ್ಯಲೋಕವನ್ನು ಅಲಂಕರಿಸುತ್ತಿವೆ. ಸಾಂಸ್ಕೃತಿಕವಾಗಿ ಪ್ರಧಾನವಾಗುವ ಈ ರೀತಿಯ ಕಾವ್ಯದ ಕಲಾತ್ಮಕತೆಯ ಬಗೆಗೂ ಪ್ರಶ್ನೆಗಳು ಉದ್ಭವಿಸುತ್ತವೆ. ಕಲಾತ್ಮಕತೆಯ ಬಗೆಗಿನ ಪರಿಕಲ್ಪನೆಗಳೇ ಬದಲಾಗುತ್ತಿರುವ ಸಂದರ್ಭದಲ್ಲಿ ಹನುಮಂತಯ್ಯನವರ ಕಾವ್ಯದಿಂದಲೂ ಗ್ರಹಿಸಬಹುದಾದದ್ದು ಬಹಳಷ್ಟು ಇದೆ.

ಸತ್ಯಾನಂದ ಪಾತ್ರೋಟರು ' ಜಾಜಿಮಲ್ಲಿಗೆ ' ಯ ಕವಿ ಎಂದೇ ಹೆಸರಾದವರು. ಅವರ ' ಕರಿ ನೆಲದ ಕಲೆಗಳು ', ' ನನ್ನ ಕನಸಿನ ಹುಡುಗಿ ', ' ಕಲ್ಲಿಗೂ ಗೊತ್ತಿರುವ

ಕತೆ', 'ಕರಿಯ ಕಟ್ಟಿದ ಕವನ' –ಮೊದಲಾದ ಸಂಕಲನಗಳು ದಲಿತಲೋಕದ ದಾರುಣತೆಯನ್ನು ಪರಿಚಯಿಸುತ್ತವೆ. ಇವರ ಕಾವ್ಯದ ಉದ್ದೇಶವೂ ಇದೇ ಆಗಿದೆ. ಭೂತದ ಬಗ್ಗೆ ವಿಷಾದ ವ್ಯಕ್ತಪಡಿಸುತ್ತ ಚಲಿಸುವ ಇವರ ಕವಿತೆಗಳಲ್ಲಿ ಪ್ರತಿಭಟನೆಯ ಅಂಶ ಇಲ್ಲದೆ ಇಲ್ಲ. ದುಃಖ-ದುಮ್ಮಾನಗಳನ್ನು ಪ್ರಾಕೃತಿಕ ವಸ್ತುಗಳ ಮುಖೇನ ಸಾದರಪಡಿಸುವುದು, ಹಂಚಿಕೊಳ್ಳುವುದು ಇವರ ಕಾವ್ಯದ ವಿಶೇಷವೆನ್ನಬಹುದು. ಮೊದಲಿನ ಕವಿತೆಗಳಲ್ಲಿ ದಲಿತ ಸಂಸ್ಕೃತಿಯ ಅಪಾರ ನೋವು ಅಭಿವ್ಯಕ್ತಗೊಂಡಿದ್ದರೆ, ನಂತರದಲ್ಲಿ ಪ್ರೇಮವೇ ವಿಜೃಂಭಿಸಿಬಿಟ್ಟಿದೆ. ಈ ಪ್ರೇಮ ಕವನಗಳಲ್ಲಿ ಕವಿಯ ಜೀವನ ಪ್ರೀತಿ ಪ್ರಕಟಗೊಂಡಿರುವುದನ್ನು ಗ್ರಹಿಸಬಹುದು. ಕಾವ್ಯಾಭಿವ್ಯಕ್ತಿಗೆ ತಮ್ಮ ಪರಿಸರದ ಭಾಷೆಯನ್ನು ಬಳಸಿದ್ದರೆ ಕವಿತೆಗಳಿಗೆ ಇನ್ನಷ್ಟು ಬಲ ಬಂದಂತಾಗುತ್ತಿತ್ತು.

ಅರವಿಂದ ಮಾಲಗತ್ತಿಯವರು ನಾಲ್ಕು ಕವನಸಂಕಲನಗಳನ್ನು ಪ್ರಕಟಿಸಿದ್ದಾರೆ. 'ಮೂಕನಿಗೆ ಬಾಯಿ ಬಂದಾಗ' ಇವರ ಪ್ರಥಮ ಕವನ ಸಂಕಲನ. ನೊಂದವರ ಬದುಕನ್ನು ತೆರೆದ ಕಣ್ಣಿನಿಂದ ನೋಡುವ ಪ್ರಯತ್ನವಿದು. ಉತ್ತರ ಕರ್ನಾಟಕ ಭಾಗದಿಂದ ಬಂದ ಈ ಕವನ ಸಂಕಲನ ಸಿದ್ಧಲಿಂಗಯ್ಯನವರ 'ಹೊಲೆ ಮಾದಿಗರ ಹಾಡು' ಸಂಕಲನವನ್ನು ನೆನಪಿಸುತ್ತದೆ. ಅವರ ಕಾವ್ಯದಷ್ಟೇ ಸಿಟ್ಟಿದೆ. ಹಾಗೆ ನೋಡಿದರೆ ಇಬ್ಬರ ಕವಿತೆಗಳಲ್ಲೂ ವಾಚ್ಯ ಅತಿಯಾಗಿದ್ದರೂ ಅನುಭವದ ಕಾವು ದಟ್ಟವಾಗಿದೆ. ಕಾವ್ಯ ಇಲ್ಲಿ ಕೇವಲ ಕಾವ್ಯವಾಗಿಲ್ಲ, ವೈಚಾರಿಕ ಮನೋಧರ್ಮದ ಮೂಲ ಮಾಧ್ಯವಾಗಿಯೂ ರೂಪಿತವಾಗಿದೆ. ಅಮಾನವೀಯವಾಗಿ ನಡೆಸಿಕೊಳ್ಳುವ ಸ್ಥಗಿತ ಮೌಲ್ಯಗಳನ್ನು, ಮತ್ತು ಇವನ್ನೇ ಆರಾಧಿಸಿಕೊಂಡು ಬಂದಿರುವ ವಿವಿಧ ಸಾಹಿತಿಗಳ ಹೀನಸ್ಥಿತಿಯನ್ನು, ಜಾತಿದ್ವೇಷವನ್ನು ಖಡಾಖಂಡಿತವಾಗಿ ಪ್ರತಿಭಟಿಸಿರುವ ರೀತಿ ಇಲ್ಲಿ ಎದ್ದು ಕಾಣಿಸುತ್ತದೆ. 'ಕಪ್ಪು ಕಾವ್ಯ'ದಲ್ಲಿ ಆಕ್ರೋಶಕ್ಕಿಂತ ವಿಷಾದದ ಧ್ವನಿಯೇ ಪ್ರಧಾನವಾಗಿದ್ದು ಹಾಡಲು ಯೋಗ್ಯ.

'ಮೂರನೆಯ ಕಣ್ಣು' ನಮ್ಮ ಸಂದರ್ಭದ ಅಭಿವ್ಯಕ್ತಿಯಲ್ಲಿನ ಹೊಸ ಸಾಧ್ಯತೆಗಳ ಕಡೆಗೆ ಮುಖ ಮಾಡುವ ಕವನ ಸಂಕಲನ. ತಮ್ಮ ಅಭಿವ್ಯಕ್ತಿಯ ಸಮರ್ಥನೆಗೆ ಇಲ್ಲಿ ರೂಪಕ ಪ್ರತಿಮೆಗಳನ್ನು ಬಳಸಲಾಗಿದೆ. ನೇರ ಅಭಿವ್ಯಕ್ತಿಯಲ್ಲಿ ಹೊರಹೊಮ್ಮಬೇಕಾಗಿದ್ದ ಅನಿಸಿಕೆಗಳು ರೂಪಕ ಪ್ರತಿಮೆಗಳಲ್ಲಿ ಸಿಲುಕಿ ನೀಳ್ಗತೆಗಳು ಪ್ರತಿಭಟನೆಯ ಕಾವನ್ನು ಕಳೆದುಕೊಂಡಿವೆ. ಇದನ್ನು ಕೂಡ ನಮ್ಮ ಕೆಲವು ವಿಮರ್ಶಕರು "ಹೊಸ ಕಾವ್ಯದ ಸಾಧ್ಯತೆಗಳನ್ನು ಪ್ರಕಟಿಸುವ ಸಂಕಲನ" ಎಂದುಬಿಟ್ಟರು! ತಮ್ಮ ಅಭಿವ್ಯಕ್ತಿ ವಿಧಾನದ ಸಮರ್ಥನೆಗೆ ನವೋದಯ ಕಾವ್ಯದ ಜಾಡನ್ನು ಹಿಡಿದದ್ದರ ದ್ಯೋತಕವಾಗಿ 'ನಾದ ನಿನಾದ' ಮೂಡಿ ಬಂದಿದೆ. ಇದರ ಮುಖಾಂತರ, ಮಾಲಗತ್ತಿಯವರ ಕಾವ್ಯದ ಆಶಯಗಳು ದಲಿತ ಪ್ರಜ್ಞೆಯವಾಗಿದ್ದರೂ ಅವುಗಳಿಗೆ ನವೋದಯ ಕಾವ್ಯದ ಲೇಪ ಹಚ್ಚಿರುವುದರಿಂದ ಅವರ ಕಾವ್ಯಚಕ್ರ ನವೋದಯ ಕಾವ್ಯದ ಕಡೆಗೆ ತಿರುಗಿರುವುದನ್ನು ಗಮನಿಸಬಹುದು.

ಚೆನ್ನಣ್ಣ ವಾಲೀಕಾರ ದಲಿತ ಸಾಹಿತ್ಯದ ಎಲ್ಲಾ ಪ್ರಕಾರಗಳಲ್ಲೂ ಸಾಹಿತ್ಯ ಕೃಷಿ ನಡೆಸಿದವರು. ' ಮರದ ಮೇಲಿನ ಗಾಳಿ ', ' ಕರಿ ತಲೆ ಮಾನವನ ಜೀಪದ ', ' ಪ್ಯಾಂಥರ್ ಪದ್ಯಗಳು ', ' ಬಂಡೆದ್ದ ದಲಿತರ ಬೀದಿ ಹಾಡುಗಳು ', ' ಧಿಕ್ಕಾರದ ಹಾಡುಗಳು ' ಕವನ ಸಂಕಲನಗಳನ್ನು ಹೊರತಂದಿರುವ ಚೆನ್ನಣ್ಣ, ದಲಿತ ಬಂಡಾಯ ಕಾವ್ಯದ ಮುಂಚೂಣಿಯಲ್ಲಿರುವ ಕವಿ. ಮೊದಲ ಸಂಕಲನ ಬಂದಾಗ ಇನ್ನೂ ದಲಿತ ಪ್ರಜ್ಞೆಯ ಕಾವು ಮೂಡಿರಲಿಲ್ಲ. ಎರಡನೇ ಸಂಕಲನದ ವೇಳೆಗಾಗಲೇ ಹಾವು, ಟಗರು, ಕೋಣಗಳ ಪ್ರತಿಮೆಯನ್ನು ಕಾವ್ಯದಲ್ಲಿ ಬಳಸಿ ಅವನ್ನು ದಲಿತರು ಯಾವ ರೀತಿ ದಾಟಿ ಮುಂದೆ ಹೋಗಬೇಕು ಎಂಬುದನ್ನು ಕಲಾತ್ಮಕವಾಗಿ ಸೂಚಿಸಿದರು. ದಲಿತರ ಸಮಸ್ಯೆಗಳು, ಅವುಗಳಿಂದ ಪಾರಾಗಬೇಕಾದ ರೀತಿ, ಅಭಿವೃದ್ಧಿ ಹೊಂದಬೇಕಾದ ದಾರಿಗಳು –ಇತ್ಯಾದಿಗಳನ್ನು ಅವರು ಬೇರೆ ಬೇರೆ ಸಂಕಲನಗಳ ಕವಿತೆಗಳಲ್ಲಿ ವ್ಯಕ್ತಪಡಿಸಿದ್ದಾರೆ. ನವ್ಯಕಾವ್ಯ ಪ್ರಬುದ್ಧಾವಸ್ಥೆಯಲ್ಲಿದ್ದಾಗ ಕಾವ್ಯ ಬರೆಯಲು ತೊಡಗಿದ್ದ ಚೆನ್ನಣ್ಣ, ಅದರಿಂದ ಬಿಡಿಸಿಕೊಂಡು ದಲಿತ ಪ್ರಜ್ಞೆ, ಹೋರಾಟದ ಆಶಯದ ಕಾವ್ಯವನ್ನು ಕೊಡತೊಡಗಿದರು. ಅವರ ಕಾವ್ಯ ಜಾನಪದ ಸತ್ವದಿಂದ ಕೂಡಿರುವುದು ಒಂದು ವೈಶಿಷ್ಟ್ಯವೇ ಸರಿ.

ಟಿ. ಎಂ. ಭಾಸ್ಕರ್ ' ಹೊಸ ದಾರಿ ' ಕವನ ಸಂಕಲನದ ಮೂಲಕ ಕಾವ್ಯ ಕ್ಷೇತ್ರವನ್ನು ಪ್ರವೇಶಿಸಿದವರು. ಸಮಕಾಲೀನ ರಾಜಕೀಯ ವ್ಯವಸ್ಥೆಯನ್ನು, ಅದನ್ನು ಹುಟ್ಟು ಹಾಕಿದ ನಾಯಕರನ್ನು ' ಈಗಿನ ನಾಯಕ ' ಕವಿತೆಯಲ್ಲಿ ವಿಡಂಬಿಸಿದ್ದಾರೆ.

> ಹೊಟ್ಟೆಬಾಕ ಕೋಳಿ ಪಾಕ ಎಲ್ಲ ಮುಗಿಸುವ
> ಕತ್ತಲಾದ ಮೇಲೆ ಮನೆಯ ದಾರಿ ಹಿಡಿಯುವ
> ಅವರ ಇವರ ಮನೆಯಲಿ ತಿಂದು
> ಮನೆಗೆ ಹೊರಳುವ ಮುದುಡಿಕೊಳ್ಳುವ

–ಇಂಥ ಜನರಿಂದ ಸಮಾಜ ಅಭಿವೃದ್ಧಿ, ಶುದ್ಧಿ ಹೇಗೆ ಆಗಲು ಸಾಧ್ಯ ಎಂಬ ಕವಿಯ ಆತಂಕ ಇಲ್ಲಿ ವ್ಯಕ್ತವಾಗುತ್ತದೆ. ದೇವರು ದೆವ್ವಗಳ ಹೆಸರಿನಲ್ಲಿ ಮುಗ್ಧ ಜನತೆಯ ಮೇಲೆ ನಡೆಯುತ್ತಿರುವ ಕ್ರೌರ್ಯವನ್ನು, ಮಠಾಧೀಶರ ಡೋಂಗೀತನವನ್ನು ವಿಡಂಬಿಸಿರುವ ಕವಿತೆಗಳೂ ಇಲ್ಲಿವೆ.

ಕೆ. ಬಿ. ಸಿದ್ಧಯ್ಯ ದಲಿತ ಬರಹಗಾರರಲ್ಲಿ ಗಮನ ಸೆಳೆದವರು. ' ಬಕಾಲ ' ಮತ್ತು ' ದಕ್ಲ ಕಥಾ ದೇವಿ ಕಾವ್ಯ ' –ಎಂಬೆರಡು ಕಾವ್ಯಗಳನ್ನು ಇವರು ಪ್ರಕಟಿಸಿದ್ದಾರೆ. ಮೊದಲನೆಯದು ನೀಳ್ಗವನವಾದರೆ ಕೊನೆಯದು ಖಂಡಕಾವ್ಯವಾಗಿದೆ. ಆದಿಜಾಂಬವ ಗುರುಗಳ ಐತಿಹ್ಯದೊಳಗೆ ತಳುಕು ಹಾಕಿಕೊಂಡಿರುವ ಬಕಾಲ ಮುನಿಯು ಭೂಮಿ, ಸ್ವರ್ಗ, ಪಾತಾಳಗಳೆಂಬ ಕಲ್ಪನೆಗಳೇ ಮೂಡಿರದಿದ್ದ ಕಾಲದಲ್ಲಿ ಇದ್ದಂಥವರು. ಈ ಮುನಿಯ ಪುರಾಣ ಎಲ್ಲಾ ಪುರಾಣಗಳಂತಲ್ಲ. ಅದು ಭೂಮಿಯ ಪುರಾಣ, ಅದರ ಹುಟ್ಟಿನ ಪುರಾಣ. ಅದರಲ್ಲಿ ತಿಕ್ಕಾಟಕ್ಕೆ ಬದಲಾಗಿ ಬಲಿದಾನವಿದೆ. ನಿಸ್ವಾರ್ಥ, ಪರಸ್ಪರ ಸಹಕಾರ ಮತ್ತು ಕೂಡುವಿಕೆ ಇವೆ.

ಭೂ ಸೂತಕದಲಿ ಮಹಾಭಾರತವು
ಸ್ತ್ರೀ ಸೂತಕದಲಿ ರಾಮಾಯಣವು
ಅಕಾರಾತ್ರಿಯಲಿ ಹಗಲೆಚ್ಚರವು

ಎಂದು ನುಡಿದ ಒಕಾಲ ಮುನಿಯ ಪುರಾಣ ತ್ಯಾಗ ಬಲಿದಾನದ್ದಾದುದರಿಂದ ಸೂತಕವಲ್ಲ ಎಂಬ ಭಾವ ಪ್ರಕಟಿಸುತ್ತಾರೆ. ಯಾಕೆಂದರೆ " ಜಾಂಬುತಾತನ ಇನ್ನೊಬ್ಬ ಮಗ ಬೆಪ್ಪುಮುನಿಯ ಮೈಯ ಅಂಗಾಂಗಗಳಿಂದ ಅಕ್ಕಸಾಲಿಗರು ಬಳಸುವ ಅಡಿಗಲ್ಲು, ಚಮ್ಮಟಿಗೆ, ಇಕ್ಕಳ, ಊದುಕೊಳವೆ, ತಿದಿ ಉಂಟಾಗಿವೆ. ಶಿವನ ಮದುವೆಗೆ ಬೇಕಾದ ಒಡವೆಗಳನ್ನು ಮಾಡಲು ವಿಶ್ವಕರ್ಮ ಏನು ಮಾಡಬೇಕೆಂದು ಜಾಂಬುತಾತನ ಬಳಿ ಬಂದು ಕೇಳಿದಾಗ, ಜಾಂಬುತಾತ ತನ್ನ ಇನ್ನೊಬ್ಬ ಮಗ ಬೆಪ್ಪು ಮುನಿಯನ್ನು ಕೊಂದು ಈ ವಸ್ತುಗಳನ್ನು ಮಾಡಿಕೊಟ್ಟನಂತೆ. ಆ ಹೆಪ್ಪುಮುನಿ ಒಕಾಲನಿಂದ ಭೂಮಿ ಸೃಷ್ಟಿಯಾದರೆ ಭೂಮಿಯ ಮೇಲೆ ಬಾಳ್ವೆ ಮಾಡಲು ಬೇಕಾದ ದುಡಿಮೆಯ ಸಲಕರಣೆಗಳನ್ನು ಬೆಪ್ಪು ಮುನಿಯು ತನ್ನ ಜೀವ ತ್ಯಾಗದಿಂದ ಒದಗಿಸಿಕೊಡುತ್ತಾನೆ. "

ಇಲ್ಲಿಯ ಒಕಾಲ ಅಲೌಕಿಕ ವ್ಯಕ್ತಿಯಾಗಿ ಕೈಗೆ ಸಿಗದೆ ದೂರವೇ ಇದ್ದಾನೆಂಬ ವಿಷಾದದಿಂದಲೇ ಕಾವ್ಯ ಆರಂಭವಾಗಿ ಮುಂದೆ ಸಾಗಿದಂತೆಲ್ಲಾ ಒಕಾಲನೇ ಕಾವ್ಯದ ನಾಯಕನಾಗಿ ತನ್ನ ತನು-ಮನಗಳನ್ನು ಇಡೀ ಮಾನವ ಜನಾಂಗದ ಸಮೃದ್ಧಿಗೆ ಧಾರೆ ಎರೆಯುತ್ತಿರುವುದರ ಚಿತ್ರ ರೂಪಕಗಳ ಮೂಲಕ ನಮ್ಮ ಅನುಭವಕ್ಕೆ ಬರುತ್ತದೆ. ಕಾವ್ಯದಲ್ಲಿ ಗೋಚರವಾದ " ಗಿಡ ಬಾಲೆಯು ಅಜ್ಜಿಯಾಗಿ, ತಾಯಿಯಾಗಿ, ಪ್ರೇಮಿಯಾಗಿ ಅಗಲುವಿಕೆಯಲ್ಲಿ ಬಳಲಿ ಚಿಗುರುತ್ತ, ಅರಳುತ್ತ ಬೆಳೆಯತೊಡಗುತ್ತಾಳೆ. ಕಾವ್ಯನಾಯಕನು ಪ್ರೇಮಿಯಾಗಿ, ತಂದೆಯಾಗಿ, ದುಃಖಿದ ಸೃಷ್ಟಿಕರ್ತನಾಗಿ ನಡೆದಾಡತೊಡಗುತ್ತಾನೆ. ತದನಂತರ ಜೀವನದ ನಗೆ, ಕಣ್ಣೀರು, ಹುಟ್ಟು-ಸಾವು ದುಃಖಗಳ ಕಂಡುಂಡು ಒಕಾಲನಾಗಿ, ಪಾತಾಳ ಲೋಕಕ್ಕೆ ಪಲಾಯನವಾಗದೆ ಉಳಿದು ಭೂಮಿಯ ಮೇಲೆ ಹರಿದಾಡುವ ಇರುವೆಯಾಗಿ, ಇರುಳು ಇರುವೆ ಸಾಲೇ ಆಗಿ ಕತ್ತಲೆಯಿಂದ ಕತ್ತಲೆಗೆ, ದುಃಖದಿಂದ ದುಃಖಕ್ಕೆ, ಪಂಜರವ ಬಿಟ್ಟು ಪಂಜರಕ್ಕೆ ಹಾರಾಡುವ ಸಜೀವ ಹಕ್ಕಿಯಾಗಿ ಬಿಡುತ್ತಾನೆ. " [೧೩]

ಒಂದು ಐತಿಹ್ಯದ ಮೂಲಕವಾಗಿ ನೋವು-ಸಂಕಟಗಳಲ್ಲಿ ಆರಂಭವಾಗಿದ್ದು ಮುಂದೆ ಮುಂದೆ ಅವೆಲ್ಲಾ ಕಾವ್ಯ ನಾಯಕ ಒಕಾಲನ ಸಮಸ್ಯೆಗಳಾಗಿ ಮನುಕುಲದ ಶೋಕಗೀತೆಯಾಗಿ ಮಾರ್ಪಟ್ಟಿವೆ. ಇಂಥ ಸಹಜ ಬೆಳವಣಿಗೆಯನ್ನು ' ದಕ್ಲ ಕಥಾದೇವಿ ಕಾವ್ಯ ' ದಲ್ಲಿ ಕಾಣಲು ಸಾಧ್ಯವಿಲ್ಲ. ನಿರೂಪಣಾ ತಂತ್ರದಲ್ಲಿ ಒಕಾಲವನ್ನು ಇದು ಮೀರಿಸಿದ್ದರೂ ಸಹ, ದೇವಿಯ ಸಂಕಟಗಳನ್ನು ಮಡುಗಟ್ಟುವಂತೆ ಚಿತ್ರಿಸಲಾಗಿಲ್ಲ. ಇಡೀ ಕತೆಗಿಂತ ಬಿಡಿ ಬಿಡಿಯಾಗಿ ಚಿತ್ರಗಳನ್ನು ಕೊಡುತ್ತಿದ್ದಾರೇನೋ ಎಂಬ ಅನುಮಾನ ಹುಟ್ಟಿಸಿಬಿಡುತ್ತದೆ.

ಬರಗೂರು ರಾಮಚಂದ್ರಪ್ಪನವರು ಆರಂಭದಲ್ಲಿ ನವ್ಯ ಕಾವ್ಯದ ಪ್ರಭಾವದಡಿ ಕಾವ್ಯ ರಚಿಸಿದ್ದರೂ. ತಮ್ಮದೇ ಆದ ಸ್ವಂತ ಆಲೋಚನಾ ದಾಟಿಯನ್ನು ಬಿಟ್ಟುಕೊಡದೆ ' ಮರಕುಟಿಗ ' ಕವನ ಸಂಕಲನವನ್ನು ಪ್ರಕಟಿಸಿದರು. ಕವಿತೆಯ ವಸ್ತು ವೈಯಕ್ತಿಕ ನೆಲೆಯಲ್ಲಿ ಮಾತ್ರ ಇರದೆ, ಸಾಮಾಜಿಕ. ರಾಜಕೀಯ ಸ್ಥಿತಿಗಳ ವಿಶ್ಲೇಷಣೆಗೆ ತೊಡಗಿರುವುದೂ ಉಂಟು. ' ನೆತ್ತರದಲ್ಲಿ ನೆಂದ ಹೂವು ' ಸಂಕಲನ (೧೯೮೩) ಬರುವ ಹೊತ್ತಿಗಾಗಲೇ ನವ್ಯರಿಗೆ ತದ್ವಿರುದ್ಧವಾಗಿ ದಲಿತ ಬಂಡಾಯ ಸಾಹಿತ್ಯ ಜನಮುಖಿಯಾಯಿತು, ಸಮಾಜನಿಷ್ಠವಾಯಿತು. ಇಡೀ ಸಮೂಹವೇ ಮಾತನಾಡತೊಡಗಿತು. ಒಂದು ರೀತಿಯ ಭೀತಿರಹಿತ ವಾತಾವರಣದಲ್ಲಿ ದಲಿತ ಬಂಡಾಯ ಸಾಹಿತ್ಯ ಹುಟ್ಟಿಕೊಂಡಿತು. ಹೂವು ಮತ್ತು ನೋವು ಒಂದೇ ಆಗಿ ಒಡಮೂಡಿದ ಒತ್ತಡದ ಫಲವಾಗಿ ಈ ಸಂಕಲನ ಹೊರಬಂತು. ಅಮಾನವೀಯ ಸಂಪ್ರದಾಯಗಳ ಮೊಸಳೆ ಹಿಡಿತದಲ್ಲಿ ನಲುಗುತ್ತಿರುವ ಹರಿಜನರ ಅಸಹನೀಯ ಬದುಕಿನ ವಾಸ್ತವ ದುರಂತ ಚಿತ್ರವನ್ನು, ಮೇಲ್ಜಾತಿಯವರ ಕ್ರೂರ ದಬ್ಬಾಳಿಕೆಗೆ ಅನ್ಯಾಯವಾಗಿ ಬಲಿಯಾಗುವ ಹರಿಜನರ ಮನದ ತುಡಿತಗಳನ್ನು ' ಮಾದಿಗರ ಹುಡುಗಿ ' ಕವನ ಅನನ್ಯ ರೀತಿಯಲ್ಲಿ ಸೆರೆ ಹಿಡಿದಿದೆ. ಇಲ್ಲಿಯ ಪುಟ್ಟಕ್ಕ ಫ್ಯೂಡಲ್ ವ್ಯವಸ್ಥೆಯೊಳಗಿನ ಪೊಳ್ಳುತನಗಳನ್ನು ಬಯಲು ಮಾಡುತ್ತಾ ವಾಸ್ತವ ಸತ್ಯವನ್ನು ಕಂಡುಕೊಳ್ಳುತ್ತಾಳೆ. ಆಕೆಯ ಮೂಲಕ ವ್ಯಕ್ತಗೊಂಡ ಬಂಡಾಯ ಹಾಗೂ ಸತ್ಯಾನ್ವೇಷಣೆಯ ಕಡೆಗೆ ಹೆಜ್ಜೆ ಇಟ್ಟ ರೀತಿ – ಇವು ಬದುಕಿನ ಬದಲಾವಣೆಯ ಸಂಕೇತಗಳಾಗಿವೆ. ಇಂಥ ಸ್ಥಿತ್ಯಂತರಗಳಲ್ಲಿ ಮಹಿಳೆಯ ಪಾತ್ರವೂ ಇದೆ ಎಂಬುದಕ್ಕೆ ದಲಿತರ ಪುಟ್ಟಕ್ಕ ಸಾಕ್ಷಿಯಾಗಿದ್ದಾಳೆ. ಪುಟ್ಟಕ್ಕನ ಹುಡುಕಾಟ, ಅದರ ಪರಿಣಾಮವಾಗಿ ಕಂಡುಕೊಂಡ ಬದುಕಿನ ಸತ್ಯ ' ದಲಿತ ಬಂಡಾಯ ಕಾವ್ಯದ ಮೌಲಿಕತೆಯನ್ನು ಸಾಬೀತುಪಡಿಸುತ್ತದೆ. ಜಾನಪದ ವಸ್ತು ಮತ್ತು ಭಾಷೆಯನ್ನು ಬಳಸಿಕೊಂಡು ಯಥಾಸ್ಥಿತಿಯೊಂದನ್ನು ಹೇಳಲು ತೊಡಗಿದ್ದರೂ ಅದೇ ಸಂದರ್ಭದಲ್ಲಿ ಅಂಥ ಯಥಾಸ್ಥಿತಿಯ ಪ್ರತಿಧ್ವನಿಯಾಗಿ ಉಳಿದುಬಿಡುವ ಅಪಾಯದಿಂದ ಕವಿಯಾದವನು ಪಾರಾಗಬೇಕು. ಇಂಥ ಪಾರಾಗುವಿಕೆ ಈ ಕಥನ ಕವನದಲ್ಲಿ ಕಂಡುಬರುವುದು ಬರಗೂರರ ಕವಿತಾಶಕ್ತಿಯ ಗ್ರೇಟ್‌ನೆಸ್ ಆಗಿದೆ. ಇವರ ' ಗುಲಾಮಗೀತೆ ' ಮತ್ತು ' ಮಗುವಿನ ಹಾಡು ' ಸಂಕಲನಗಳಲ್ಲಿ ಕವನಗಳ ಬಂಧಕ್ಕಿಂತ ಸಂವಹನದ ಕಡೆಗೆ ವಿಶೇಷ ಗಮನ ಕೊಡಲಾಗಿದೆ. ಗುಲಾಮಿ ಸಂಸ್ಕೃತಿಯನ್ನು ಆಶಯವಾಗುಳ್ಳ ಕಾವ್ಯ ಶೀರ್ಷಿಕೆಯನ್ನು ಹೊತ್ತ ಕವನ ಸಂಕಲನ ನಮ್ಮಲ್ಲಿ ಬಂದಿರಲಿಲ್ಲ. ಈ ಮೂಲಕ ಹೊಸ ಪರಿಕಲ್ಪನೆಯೊಂದು ಕನ್ನಡ ಕಾವ್ಯವನ್ನು ಪ್ರವೇಶಿಸುವಂತಾಯಿತು.

ಅನಸೂಯ ಕಾಂಬಳೆ ' ಮುಳ್ಳು ಕಂಟಿಯ ನಡುವೆ ' ಕವನ ಸಂಕಲನವನ್ನು ಹೊರತರುವ ಮುಖೇನ ದಲಿತ ಕಾವ್ಯಕ್ಷೇತ್ರವನ್ನು ಪ್ರವೇಶಿಸಿದ್ದಾರೆ. ಶ್ರೇಣೀಕೃತ ಸಮಾಜದ ತಾರತಮ್ಯಗಳ ದಳ್ಳುರಿಯಲ್ಲಿ ಸ್ಫೋಟಗೊಂಡ ಧ್ವನಿ ಇದಾಗಿದೆ. ಇದರಲ್ಲಿ ಸಹಜವಾದ ಅಸಹಾಯಕತೆಯ ಆಕ್ರೋಶವಿದೆ. ಎಲ್ಲಕ್ಕಿಂತ ಮಿಗಿಲಾಗಿ ಅನುಭವದ ಗ್ರಹಿಕೆಗೆ ಕಲಾತ್ಮಕ ರೂಪ ಕೊಡುವ, ರಸಸ್ಪರ್ಶವಾಗುವಂತೆ ಮೂಡಿಸುವ

ಸೃಜನಶೀಲತೆಯ ಕುಸುರಿ ಕೆಲಸ ಮೆಚ್ಚುವಂತಹುದು. ' ಮಹಾದೇವಿಯಕ್ಕನಿಗೆ ' ಕವಿತೆಯಲ್ಲಿ ಸ್ತ್ರೀ ಸಂವೇದನೆಗೆ ಹೆಸರಾದ ಅಕ್ಕನ ಮಾನಸಿಕ ಸ್ಥಿತಿಯನ್ನು ಹಿಡಿದಿಡಲಾಗಿದೆ. ' ಹೇಗಿದ್ದವನು ನಮ್ಮಣ್ಣ ಹೇಂಗಾದನು ' ಕವಿತೆಯಲ್ಲಿ, ಕವಿ ಸಿದ್ಧಲಿಂಗಯ್ಯ ಮಾಡಿರುವ ಕೆಲಸಗಳಿಗಾಗಿ ವಿಧಾನಸೌಧಕ್ಕೋಗಿ ಈಗ ಬಲೆಯಲ್ಲಿ ಸಿಕ್ಕಿ ಹಾಕಿಕೊಂಡಿದ್ದಾರೆ. ಈಗ ಅವರು ಕಟ್ಟಿಕೊಂಡಿರುವ ಸುಖದ ಬಲೆಯನ್ನು ಹರಿದಾಕಿದರೆ ಬೀದಿಗೆ ಬೀಳುವುದು ಖಚಿತ. " ಬೀದಿಗೇಕೆ ಬರಲೊಲ್ಲ ಬಲೆಯನೇಕೆ ಹರಿಯಲೊಲ್ಲ ?" ಎಂದು ವ್ಯಂಗ್ಯವಾಗಿ ಪ್ರಶ್ನಿಸುತ್ತಾರೆ (ಪುಟ ೧೩). ಸಾಮಾಜಿಕ ಎಚ್ಚರದ ಕಡೆಗೆ ಮುಖ ಮಾಡಿರುವ ಅನಸೂಯ ಕಾಂಬಳೆ ಅವರು ಅಂಬೇಡ್ಕರ್‌ವಾದಿ ಪರಂಪರೆಯನ್ನು ಕವಿತೆಗಳಲ್ಲಿ ಮುಂದುವರಿಸುವ ಪ್ರಯತ್ನದಲ್ಲಿ ತೊಡಗಿರುವುದು ಸಂತಸದ ವಿಷಯ.

ಜಂಬಣ್ಣ ಅಮರಚಿಂತ ನಮ್ಮ ಪ್ರಮುಖ ದಲಿತ ಕವಿಗಳಲ್ಲಿ ಒಬ್ಬರಾಗಿದ್ದಾರೆ. ಪ್ರಾಮಾಣಿಕ ಅನಿಸಿಕೆಗಳಿಗೆ ಕಾವ್ಯದ ರೂಪ ಕೊಡುವ ಅಮರಚಿಂತ ಜನಪರ ಧೋರಣೆಯುಳ್ಳವರು. ತುಳಿತಕ್ಕೊಳಗಾದವರ ಪರವಾಗಿಯೇ ಅವರ ಕಾವ್ಯವಿದ್ದರೂ ಆರಂಭದಲ್ಲಿ ಬಂದ ಅವರ ' ಮುಂಜಾವಿನ ಕೊರಳು ' ಅಷ್ಟೊಂದು ಸಲೀಸಲ್ಲದ, ನವ್ಯ ಕಾವ್ಯದ ಲಕ್ಷಣಗಳಿಗೆ ತೀರಾ ಹತ್ತಿರವಾಗಿರುವ ಸಂಕಲನವೆನಿಸಿಬಿಟ್ಟಿತು. ವ್ಯಷ್ಟಿ ನೆಲೆಯಲ್ಲಿ ಸುತ್ತಾಡಿದ ನವ್ಯಕಾವ್ಯದ ಪ್ರಭಾವದಡಿಯಲ್ಲಿದ್ದ ಅಮರಚಿಂತರು ಅನಂತರ ಹೇಗೋ ಬಿಡಿಸಿಕೊಂಡು ಸಮಷ್ಟಿ ವಲಯದ ದುಃಖ ದುಮ್ಮಾನಗಳನ್ನು ಕಾವ್ಯದಲ್ಲಿ ಸೆರೆ ಹಿಡಿಯುವ ಪ್ರಯತ್ನದಿಂದ ಸಮಾಜಮುಖಿ ಕಾವ್ಯವನ್ನು ಕೊಟ್ಟರು. ' ಮಣ್ಣಲ್ಲಿ ಬಿರಿದ ಅಕ್ಷರ ' ಸಂಕಲನದ ಕವಿತೆಗಳು ಈ ಮಾತಿಗೆ ಸಾಕ್ಷಿಯಾಗಿವೆ. " ಅಮರಚಿಂತರ ಕಾವ್ಯ ಸ್ಫಟಿಕದಂತೆ ಸ್ವಚ್ಛವಾಗಿದೆ. ಅವರ ಕಾವ್ಯದ ನೇರಗುಣವು ಮಿತಿಯಾಗುವುದು. ಹೇಳಿಕೆಯಾಗುವಾಗ, ವಾಚಾಳಿಯಾಗುವಾಗ ಒಮ್ಮೊಂದೊಮ್ಮೆ ಮಿತಭಾಷಿಯಾಗಿ ಧ್ವನಿಪೂರ್ಣವಾಗಿ ತಮ್ಮ ಕಾವ್ಯವನ್ನು ಅವರು ಬೆಳೆಯಿಸಿಕೊಂಡಿದ್ದಾರೆ. ಮಾತನ್ನು ಚಿತ್ರವಾಗಿಸುವ ಅಥವಾ ಚಿತ್ರಗಳನ್ನು ಮಾತಾಗಿಸುವ ಅವರ ಕಾವ್ಯ ಕುಶಲದಿಂದ ಚಿಂತನೆ, ವಿಚಾರವನ್ನು ಭಾರ ಮಾಡದೆ ಓದುಗನೊಂದಿಗೆ ಸಂವಾದ ನಡೆಸಲು ಅವರಿಗೆ ಸಾಧ್ಯವಾಗಿದೆ. "

ಸುಕನ್ಯಾ ಮಾರುತಿ ದಲಿತ ಬಂಡಾಯ ಚಳುವಳಿಯಲ್ಲಿ ಪರಿಚಿತವಾದ ಹೆಸರು. ಈಗಾಗಲೇ ನಾಲ್ಕು ಕವನ ಸಂಕಲನಗಳನ್ನು ಪ್ರಕಟಿಸಿದ್ದಾರೆ. ಅವರ ಕವಿತೆಗಳಲ್ಲಿ ಅಪಾರವಾದ ಕೋಪವಿದೆ. ದಲಿತ ಪ್ರಜ್ಞೆಯ ಜೊತೆಗೆ ಸ್ತ್ರೀ ಸಂಕಟಗಳಿಗೆ ಅಭಿವ್ಯಕ್ತಿ ನೀಡುವ ಸುಕನ್ಯಾ ಅವರ ಕಾವ್ಯದಲ್ಲಿ, ಪುರುಷ ಪ್ರಧಾನ ವ್ಯವಸ್ಥೆಯಲ್ಲಿ ಹೆಣ್ಣಿನ ಮೇಲೆ ನಡೆಯುವ ದೌರ್ಜನ್ಯಗಳನ್ನು ಖಡಾಖಂಡಿತವಾಗಿ ವಿರೋಧಿಸುವ ಎತ್ತರದ ಧ್ವನಿ ಇದೆ.

ಹೊಸೂರು ಮುನಿಶಾಮಪ್ಪ ಎಷ್ಟೇ ಅನ್ಯಾಯವಾಗಿದ್ದರೂ. ಕೋಪೋದ್ರಿಕ್ತ ಸ್ಥಿತಿಯಲ್ಲಿದ್ದರೂ ಕಾವ್ಯದಲ್ಲಿ ಮಾತ್ರ ಅದರ ಪ್ರಖರತೆಯನ್ನು ಮೆರೆಸುವುದಿಲ್ಲ. ' ದಲಿತ ಜನರ ಕಿರಣ ' ದ ಕವಿತೆಗಳು ವಿಶಿಷ್ಟವಾಗಿ ಕಾಣುವುದು ಇದರಿಂದ. ಇವರ ಪ್ರತಿ ಕವಿತೆಯಲ್ಲಿ ಅನ್ಯಾಯದ ವಿರುದ್ಧ ಅಸಹನೆ, ಶೋಷಕರ ಬಗ್ಗೆ ಜಿಗುಪ್ಸೆ,

ಮನುಷ್ಯತ್ವದ ಬಗೆಗೆ ಪ್ರೀತಿಯನ್ನು ಕಾಣಬಹುದಾಗಿದೆ. ದಲಿತರ ಸಮಸ್ಯೆಗಳ ಜೊತೆಗೆ ಸಮಕಾಲೀನ ಸಂದರ್ಭದ ಇತರೇ ಸಂಗತಿಗಳನ್ನು ಕವಿತೆಗಳಲ್ಲಿ ಸಾಕಾರಗೊಳಿಸುವ ಕವಿಗಳಲ್ಲಿ ತೇಜಸ್ವಿ ಕಟ್ಟಿಮನಿ ಒಬ್ಬರು. ' ಮುಂಗಾರು ಮಳೆ ', ' ಹುಡುಗಿ ಪ್ರೀತಿಸುವುದೇ ಹೀಗೆ ' ಸಂಕಲನಗಳಲ್ಲಿ ಜಗತ್ತಿನ ವಿಚಿತ್ರಗಳನ್ನು ಅವರು ಸೆರೆಹಿಡಿದಿದ್ದಾರೆ. ನಾವಿಲ್ಲಿ ಭಾರತದಲ್ಲಿ / ಬಲಿಷ್ಠರಲ್ಲದ ನರಪೇತಲು / ಅವರಲ್ಲಿ ಆಫ್ರಿಕಾದಲ್ಲಿ / ಗಟ್ಟಿಯಾದ ಗುಲಾಮರು. ಇತ್ಯಾದಿಯಾಗಿ ಎರಡು ನೆಲದ ಗುಲಾಮರ ಬಗ್ಗೆ ಅತ್ಯಂತ ಕಡಿಮೆ ಮಾತುಗಳಲ್ಲಿ ಸಮಾನ ಅಭಿಪ್ರಾಯ ಹೊಂದಿದ್ದಾರೆ. ಇದು ಅವರ ಕುಶಲತೆಯ ಸಂಕೇತ. ಹಾಗೆಯೇ ಕಗ್ಗೆರೆ ಪ್ರಕಾಶ್ (ಕನ್ನಡಮ್ಮನಿಗೆ ಕಿರುಕಾಣಿಕೆ, ಹೊನಲು) ಮೋಹನ ನಾಗಮ್ಮನವರ (ವಿಧಾನ ಸೌಧ), ಸಿ. ಎಂ. ಚನ್ನಬಸಪ್ಪ (ಚೈತ್ರ ಬಂದಿದೆ ಮತ್ತೆ), ಬಿ. ಟಿ. ಲಲಿತಾ ನಾಯಕ (ನಂ ರೂಪ್ಲಿ), ಎ. ಕೆ. ಹಂಪಣ್ಣ (ದನಿಗಳು), ಜಿ. ಎಸ್. ವೀರಯ್ಯ (ಗೆರೆಗಳು), ಲಕ್ಷ್ಮಣ್ (ಮೂಕವೇದನೆ), ಎಸ್. ಆರ್. ಗುರುನಾಥ್ (ಹಾಡಿದ್ದೇ ಹಾಡು) – ಮೊದಲಾದವರು ಕವಿತೆ ರಚಿಸುವುದರ ಮೂಲಕ ದಲಿತ ಕಾವ್ಯಕ್ಕೆ ಶಕ್ತಿ ನೀಡಿದ್ದಾರೆ.

' ಮುಂದಾರಿ ', ' ಹೂ ಮುಡಿಗಳ ಖಡ್ಗಗಳ ಮೇಲೆ ', ' ಎದೆ ತುಂಬಾ ಗಾಯಗಳ ನೀಲಿ ಗುರುತು ' – ಕವನ ಸಂಕಲನಗಳನ್ನು ಹೊರತಂದಿರುವ ಕೆ. ಗೋವಿಂದರಾಜು ಅವರು ಬದುಕಿನ ಅನ್ವೇಷಣೆಗಾಗಿ ಕಾವ್ಯವನ್ನು ಮಾಧ್ಯಮವನ್ನಾಗಿ ಮಾಡಿಕೊಂಡವರು. ಮೌಲ್ಯಗಳು ಕುಸಿಯುತ್ತಿರುವ ಸಂದರ್ಭದಲ್ಲಿ ಇವರ ಕಾವ್ಯ ಅವನ್ನು ಮೆಟ್ಟಿ ನಿಲ್ಲುವ ಆತ್ಮವಿಶ್ವಾಸವನ್ನು ನೀಡಿದೆ. ಕಾವ್ಯದಲ್ಲಿ ನೋವು ಸ್ಥಾಯಿಯಾಗಿದ್ದರೂ ಸಮಚಿತ್ತವನ್ನು ಕಾಪಾಡಿಕೊಳ್ಳುವ ಮನೋಭಾವವಿದೆ. ಇತ್ತೀಚೆಗೆ ಹೊರಬಂದಿರುವ ' ಅನಾಥನ ಭೇಟಿ ಅನಾದಿಯ ಜೊತೆ ' ಸಂಕಲನದಲ್ಲಿ ಯಾತನಾಮಯವಾದ ಮನಸ್ಸಿಗೆ ಕವಿತೆಯ ರೂಪಕೊಡುವ ಕೆಲಸ ನಡೆದಿದೆ. ಬದುಕೇ ಎದುರಾದಂತೆ ಚಿತ್ರಿಸುವ ಕವಿತೆಗಳಲ್ಲಿಯೂ ಪ್ರಮುಖವಾಗಿ ಎರಡು ನೆಲೆಗಳಿವೆ. ನಮ್ಮ ಬಹುಪಾಲು ನವ್ಯರನ್ನು ಕಾಡಿದ ಅನಾಥಪ್ರಜ್ಞೆ ಹಾಗೂ ದಲಿತ ಕಾವ್ಯದ ಮುಖ್ಯ ಲಕ್ಷಣಗಳಲ್ಲಿ ಒಂದಾದ ದುಃಖದ ಭಾವ, ಈ ಎರಡೂ ಗೋಚರವಾಗುತ್ತವೆ. ಬದುಕಿಗೆ ಮುಖ ಮಾಡುವ ಇವರ ಕಾವ್ಯದಲ್ಲಿ ಭಾವುಕತೆಯ ಮನಸ್ಸೊಂದು ಹರಿದಾಡುತ್ತಿದ್ದರೂ, ಎಲ್ಲವನ್ನು ವೈಚಾರಿಕವಾಗಿ ಆಲೋಚಿಸುವ ಚಿಂತನಾಲಹರಿಯಲ್ಲಿ ಮುಳುಗುವ ಮನುಷ್ಯ ಕೇಂದ್ರವಾಗಿರುವುದನ್ನು ಗುರ್ತಿಸಬಹುದು.

> ಮೂಕರಾಜ್ಯದಲ್ಲಿ ಮೊದಲ ಬಾರಿಗೆ ಮಾತನಾಡುವ
> ಸಂದರ್ಭದಲ್ಲಿ ಮಾನವ ಸಂಬಂಧಗಳು ಅರಳುತ್ತವೆ
> ಅನಿಸಿಕೆಗಳಲ್ಲಿ ಅಭಿವ್ಯಕ್ತಿಯಲ್ಲಿ ಧ್ವನಿಸುತ್ತವೆ.

ಕವಿಗೆ ಮಾನವೀಯ ಸಂಬಂಧಗಳು ಮುಖ್ಯ. ಅವು ಕ್ಷಣದಲ್ಲಿ ಅರಳುವುದೇ ಮುಖ್ಯವಾಗುತ್ತದೆ. ಅಂಥ ಪ್ರಕ್ರಿಯೆಯನ್ನು ಗೋವಿಂದರಾಜು ಅವರ ಕಾವ್ಯ ಒಳಗೊಂಡಿರುವುದು ದಲಿತ ಕಾವ್ಯದ ಮೌಲಿಕತೆಗೆ ಸಾಕ್ಷಿಯಾಗಿದೆ.

ದಲಿತ ಸಂಘರ್ಷ ಸಮಿತಿಗೆ, ಹೋರಾಟ ಮೊದಲು ನಂತರ ಬರವಣಿಗೆ. ಹೋರಾಟದ ಜೊತೆ ಜೊತೆಯಲ್ಲಿಯೇ ಬರವಣಿಗೆಯ ಕೆಲಸ ಮಾಡಿದ ಕವಿಗಳಲ್ಲಿ ಸಿದ್ಧಲಿಂಗಯ್ಯ, ಮುನಿವೆಂಕಟಪ್ಪ, ಮುಳ್ಳೂರು ನಾಗರಾಜ, ಕೆ. ರಾಮಯ್ಯ, ಗಂಗಾರಾಂ ಚಂಡಾಳ ಮುಖ್ಯರು. ಗಂಗಾರಾಂ ಅವರ ಮೊದಲ ಕವನ ಸಂಕಲನ 'ಚಂಡಾಲರ ಕೂಗು' ಹೊರಬಂದಾಗಲೇ ಸುದ್ದಿ ಮಾಡಿದ್ದರು. ಜಾತಿ ಸಂಘರ್ಷದ ದುಳ್ಳುರಿಯಲ್ಲಿ ಕತ್ತುರಿವ ಅಸಮಾನತೆಯ ಕಂದರದಿಂದ ಎದ್ದು ಬಂದ ಧ್ವನಿಯಾಗಿತ್ತು. ಅವರ ಕೂಗು ದಲಿತಕಾವ್ಯ ಆರಂಭದ ದಿನಗಳಲ್ಲಿ ಕಂಡ ಎಲ್ಲಾ ಲಕ್ಷಣಗಳನ್ನು ಇಲ್ಲಿ ಕಾಣಬಹುದು. ಹಾಡಲು ಯೋಗ್ಯವಾದ ಎಲ್ಲಾ ಕವಿತೆಗಳಲ್ಲೂ ಶೋಷಣೆಗೊಳಗಾದ ದಲಿತ ಜಗತ್ತಿನ ದರ್ಶನವನ್ನು ಪಡೆಯಬಹುದಾಗಿದೆ. ಜಿ. ಎಸ್. ಅವಧಾನಿ ಹೇಳುವಂತೆ "ಗಂಗಾರಾಂ ಅವರ ಕಾವ್ಯದ ಕೂಗಿನ ಹಿಂದೆ ಸಾವಿರ ವರ್ಷಗಳ ನೋವು, ಅಪಮಾನ, ಶೋಷಣೆಗಳಲ್ಲಿ ಕೂಡಿದ ಇತಿಹಾಸವಿದೆ. ಅಂತೆಯೇ ಅವರ ಕವಿತೆಗಳಲ್ಲಿ ಅದೆಲ್ಲಾ ಹುಬೇಹುಬಾಗಿ ಮೈದುಂಬಿಕೊಂಡಿದೆ. ಸ್ವತಃ ಈ ಎಲ್ಲಾ ಸಂಕಟಗಳ ಸುಡು ಬೆಂಕಿಯಲ್ಲಿ ಉರಿದು ಅರಳಿ ಬೆಳೆದ ಅವರ ಬದುಕಿನಿಂದ ಅವರ ಕಾವ್ಯವನ್ನು ಕತ್ತರಿಸಿ ಇಡುವ ಹಾಗಿಲ್ಲ. ಇದೇ ಅವರ ಕವಿತೆಗಳ ವೈಶಿಷ್ಟ್ಯವೂ ಹೌದು" ('ಚಂಡಾಲರ ಕೂಗು' ಪುಟ ೫). ನಂತರ ಬಂದ ಇವರ 'ಜೀವಸೆಲೆ' ದಲಿತ ಪ್ರಜ್ಞೆಯನ್ನು ಒಳಗೊಂಡು, ಬಂಡಾಯ ಮೀಮಾಂಸೆಯ ಎಲ್ಲಾ ಲಕ್ಷಣಗಳನ್ನು ಒಳಗೊಂಡು ಬಂದಿದೆ. ಇಲ್ಲಿಯ ಬಹುತೇಕ ಕವಿತೆಗಳು ಗಂಗಾರಾಂ ಕಾವ್ಯ ಕ್ಷೇತ್ರದಲ್ಲಿ ಇನ್ನುಮುಂದೆಯೂ ಸಮರ್ಥ ಕಾವ್ಯ ನೀಡುವರೆಂಬ ಭರವಸೆ ನೀಡುತ್ತವೆ.

ಕನ್ನಡ ದಲಿತ ಕಾವ್ಯ ಇಷ್ಟೆಲ್ಲ ತೀವ್ರತೆ ಪಡೆದದ್ದು ನಿಜ. ಆದರೆ ವಚನಕಾರರಷ್ಟು ಪರಿಣಾಮಕಾರಿಯಾಗಿ ಕನ್ನಡದ ಆಧುನಿಕ ದಲಿತ ಕಾವ್ಯ ಬರಲಿಲ್ಲವೆಂದೇ ಹೇಳಬೇಕಾಗುತ್ತದೆ. ಉದಾಹರಣೆಗೆ ಅಂಬಿಗರ ಚೌಡಯ್ಯನ ವಚನ :

ಕುರಿ ಕೋಳಿ ಕಿರು ಮೀನು ತಿಂಬವರ
ಊರೊಳಗೆ ಇರು ಎಂಬರು
ಅಮೃತಾನ್ನವ ಕರೆವ ಗೋವ ತಿಂಬವರ
ಊರಿಂದ ಹೊರಗಿರು ಎಂಬರು
ಆ ತನು ಹರುಗೋಲಾಯಿತ್ತು
ಬೊಕ್ಕಣ ಸಿದಿಕೆ ಬಾರುಕೋಲು ಪಾದರಕ್ಷೆ
ದೇವರ ಮುಂದೆ ಬಾರಿಸುವುದಕ್ಕೆ ಮದ್ದಳಿಯಾಯಿತ್ತು
ಈ ಬುದ್ದಲಿಕೆಯೊಳಗಣ ತುಪ್ಪವ ಶುದ್ಧ ಮಾಡಿ
ತಿಂಬ ಗುಜ್ಜ ಹೊಲೆಯರ ಕಂಡಡೆ
ಉದ್ದನ ಚಮ್ಮಾಳಿಗೆಯ ತೆಕ್ಕೊಂಡು
ಬಾಯ ಕೊಲುವೆನು ಎಂದಾತ ನಮ್ಮ ಅಂಬಿಗರ ಚೌಡಯ್ಯ.

ಇದಕ್ಕೆ ಸಂವಾದಿಯಾಗಿ ಸಿದ್ಧಲಿಂಗಯ್ಯನವರ ಕವಿತೆಯನ್ನು ಗಮನಿಸಬಹುದು :

> ಇಕ್ರಾಲಾ ವದೀರ್ಲಾ
> ಈ ನನ್ ಮಕ್ಕಳ ಚರ್ಮ ಎಬ್ರಲಾ
> ಹೊಲೇರ್ನ ಕಂಡ್ರೆ ಹಾವ್ ಕಂಡಂಗಾಡ್ತಾರೆ
> ಹೋಟ್ಲು ಬಾವಿ ಮನೆ ಯಾವುದನ್ನು ಸೇರ್ಸಲ್ವಲ್ರೋ
> ನಮ್ ಹೇಲ್ ತಿನ್ನೊ ನಾಯ್ನ ಕ್ವಾಣೆವಳೀಕ್ ಬುಟ್ಕತ್ತಾರೆ
> ನಾವ್ ಬೆಳೆದಿದ್ ತಿಂತಾರೆ ನಾವ್ ದುಡಿದಿದ್ ತಗಾತಾರೆ
> ನಾವ್ ಮಾತ್ರ ಬ್ಯಾಡ
> ನಾವ್ ಮಾತ್ರ ಇಸ್ಕೂಲ್‌ಗೋಗಾಂಗಿಲ್ಲ
> ಜೀತಕ್ಕೋಗ್ಬೇಕು
> ತಲೆ ಎತ್ತಾಂಗಿಲ್ಲ – ಬಗ್ಗುಸ್ಬೇಕು

ಅಂಬಿಗರ ಚೌಡಯ್ಯನಲ್ಲಿ ಕಾವ್ಯ, ನೈತಿಕ ತಾರ್ಕಿಕ ವಿವೇಚನೆಯ ಆಕ್ರೋಶವಾಗಿ ಮೂಡಿ ಬಂದಿದೆ. ಕನ್ನಡ ಕಾವ್ಯದಲ್ಲಿ ಪ್ರಪ್ರಥಮ ಬಾರಿಗೆ ಕೇಳಿ ಬಂದ ಆಕ್ರೋಶದ ನುಡಿಗಳಿವು. ಸಿದ್ಧಲಿಂಗಯ್ಯನವರ ಕಾವ್ಯದಲ್ಲಿ ದಲಿತ ಸಂವೇದನೆ ಇದ್ದರೂ ವಚನದಷ್ಟು ಪರಿಣಾಮಕಾರಿಯಾಗಿ ಮೂಡಿಬಂದಿಲ್ಲ.

ಸಾಮಾನ್ಯವಾಗಿ ದಲಿತ ಕವಿಗಳು ಸ್ಥಳೀಯ ಸಮಸ್ಯೆಗಳಿಗೆ ತಮ್ಮ ಕವಿತೆಗಳಲ್ಲಿ ಪ್ರಾತಿನಿಧ್ಯ ನೀಡಿದ್ದಾರೆ. ದಲಿತರ ಮೇಲೆ ನಡೆದ ಹಲ್ಲೆಗಳು, ಕ್ರೌರ್ಯಗಳು ದಲಿತ ಕವಿಗಳಲ್ಲಿ ಹಾಡಾಗಿ ಪರಿಣಮಿಸಲ್ಪಟ್ಟಿವೆ. ಆದರೆ ಮರಾಠಿ ದಲಿತ ಕವಿಗಳಲ್ಲಿ ಇಂಥ ಪ್ರಸಂಗಗಳು ಹಾಡುಗಳಾಗದೆ ಕೇವಲ ಕಾವ್ಯವಾಗಿವೆ. ನೋವು, ಅವಮಾನ ಎರಡೂ ಭಾಷೆಗಳಲ್ಲಿ ಸ್ಥಾಯಿಯಾಗಿವೆ. ಶ್ರೀಮಂತರನ್ನು, ಬಡ್ಡಿ ಸಾಲ ವಸೂಲಿಗಾರರನ್ನು ಕಾವ್ಯದಲ್ಲಿ ತರಾಟೆಗೆ ತೆಗೆದುಕೊಳ್ಳಲಾಗಿದೆ. ಆಕ್ರೋಶ ವ್ಯಕ್ತಪಡಿಸುತ್ತಲೇ ಹೊಸ ಸಮಾಜದ ಕನಸುಗಾರಿಕೆಯನ್ನು ಅಭಿವ್ಯಕ್ತಿಸಲಾಗಿದೆ. ದಲಿತರಿಗೆ ಶಕ್ತಿ ನೀಡಿದ ಅಂಬೇಡ್ಕರ್, ದಲಿತ ಕಾವ್ಯದ ಕೇಂದ್ರ ಶಕ್ತಿಯಾಗಿರುವುದನ್ನು, ತಾವು ಬೆಳಕಿಗೆ ಬರಲು ಕಾರಣರಾದ ಅಂಬೇಡ್ಕರ್ ಬಗ್ಗೆ ಕಾವ್ಯ ಹೊನಲಾಗಿ ಹರಿಸಿರುವುದನ್ನು ಕಾಣಬಹುದು. ಈ ಪ್ರಮಾಣದಲ್ಲಿ ಮರಾಠಿಯಲ್ಲಿ ಮಹಾತ್ಮ ಫುಲೆಯವರ ಬಗ್ಗೆ ಮೂಡಿಬಂದಿರುವುದನ್ನು ಗಮನಿಸಬಹುದು. ಆದರೆ ಕರ್ನಾಟಕೇತರ ರಾಜ್ಯಗಳ ಎಷ್ಟೋ ಘಟನೆಗಳು ಕನ್ನಡ ದಲಿತ ಕಾವ್ಯವನ್ನು ಪ್ರವೇಶಿಸಲಾಗಲಿಲ್ಲ !

ಅನ್ಯ ರಾಷ್ಟ್ರೀಕರು ಇಲ್ಲಿಯ ದುಃಖದುಮ್ಮಾನಗಳಿಗೆ, ಇಲ್ಲಿಯವರು ಅನ್ಯ ರಾಷ್ಟ್ರೀಕರ ದುಃಖದುಮ್ಮಾನಗಳಿಗೆ ಸ್ಪಂದಿಸುವಂತಾಗಬೇಕು. ಆ ಸಂದರ್ಭಗಳು ಕಾವ್ಯಸೃಷ್ಟಿಗೆ ಪ್ರೇರಣೆಗೊಳಗಾಗಬೇಕು. ಕನ್ನಡ ಮತ್ತು ಮರಾಠಿ ಭಾಷೆಯ ಬರಹಗಾರರು ರಾಷ್ಟ್ರೀಯ ಮತ್ತು ಅಂತರರಾಷ್ಟ್ರೀಯ ಸಮಸ್ಯೆಗಳಿಗೆ ಸ್ಪಂದಿಸುವ ಮನಸ್ಸು ಮಾಡಿದರೆ ಆಗ ಎರಡೂ ಭಾಷೆಗಳಲ್ಲಿ ಇನ್ನೂ ಸಮರ್ಥವಾದ ದಲಿತ ಕಾವ್ಯ

ಮೂಡುವುದರಲ್ಲಿ ಸಂದೇಹವಿಲ್ಲ. ನಾಮದೇವ ಢಸಾಳ, ದಯಾ ಪವಾರ, ನಾರಾಯಣ ಸುರ್ವೆ, ವಾಮನ ನಿಂಬಾಳ್ಕರ್, ಅರ್ಜುನ ಡಾಂಗಳೆ ಮೊದಲಾದ ಮರಾಠಿ ದಲಿತ ಕವಿಗಳ ರೀತಿಯಲ್ಲಿ ಕನ್ನಡದ ದಲಿತ ಕವಿಗಳು ಕಾವ್ಯ ಬರೆಯುವುದನ್ನು ರೂಢಿಸಿಕೊಳ್ಳಬೇಕಾಗಿದೆ. ಧರ್ಮ ಮತ್ತು ಮನುಸ್ಮೃತಿಗಳ ಬಗೆಗೆ ಆಕ್ರೋಶ ವ್ಯಕ್ತಪಡಿಸಲು ಇವರು ಕಾವ್ಯವನ್ನು ಮಾಧ್ಯಮವನ್ನಾಗಿ ಮಾಡಿಕೊಂಡರು. ವರ್ತಮಾನದ ಸಮಸ್ಯೆಗಳನ್ನು ಕಾವ್ಯದ ಆಂತರ್ಯಕ್ಕೆ ಕೊಂಡೊಯ್ದರು. ಬಂಡಾಯ ಹಾಗೂ ನಕಾರಾತ್ಮಕ ನೆಲೆಗಳನ್ನು ನೋಡುವಾಗ ಒಬ್ಬರ ಮುಖವಾಣಿಯಂತೆ ಮತ್ತೊಬ್ಬರು ಕಾಣಿಸುವುದಿಲ್ಲ, ಎಲ್ಲವೂ ವೈವಿಧ್ಯಮಯವಾಗಿವೆ. ಕನ್ನಡ ದಲಿತ ಕವಿಗಳ ಕಾವ್ಯ ಯಾಕೆ ಈ ರೀತಿ ಕಾಣಿಸುವುದಿಲ್ಲ, ಮೂಡಿ ಬರಲಿಲ್ಲ ಎಂಬುದು ಚರ್ಚೆಯಾಗಬೇಕಾಗಿದೆ. ಸರಜೂ ಕಾಟ್ಕರ್ ' ಮರಾಠಿ ದಲಿತ ಕಾವ್ಯ 'ವನ್ನು ಕನ್ನಡಕ್ಕೆ ಪರಿಚಯಿಸುವುದರ ಮೂಲಕ ಕನ್ನಡ ದಲಿತ ಕವಿಗಳನ್ನೆಲ್ಲ Expose ಮಾಡಿಬಿಟ್ಟಿದ್ದಾರೆ ಎನಿಸದಿರದು.

## ಗದ್ಯ :

ದಲಿತ, ಬಂಡಾಯದ ಸಂದರ್ಭದಲ್ಲಿ ಬಂದ ದಲಿತ ಕಥೆಗಳು ಕನ್ನಡ ಕಥಾ ಸಾಹಿತ್ಯದಲ್ಲಿ ಹೊಸ ಅಲೆಯನ್ನುಂಟು ಮಾಡಿದವು. ಹಸಿವು, ದುಃಖದುಮ್ಮಾನ, ಶೋಷಣೆ ಕಥೆಯ ವಸ್ತುಗಳಾದವು. ದಲಿತರ ಮೇಲಿನ ಕ್ರೌರ್ಯ ಹಲ್ಲೆಗಳು, ಅವಮಾನದ ಪ್ರಸಂಗಗಳು ಕಥೆಯ ಒಳಪ್ರವೇಶಿಸಿದವು. ಈ ರೀತಿಯ ಘಟನೆಗಳನ್ನು ಅತ್ಯಂತ ಕಲಾತ್ಮಕವಾಗಿ ಸೆರೆಹಿಡಿದವರೂ ಇದ್ದಾರೆ. ದೇವನೂರರ ' ದ್ಯಾವನೂರು ', ಚೆನ್ನಣ್ಣ ವಾಲೀಕಾರರ ' ಕಪ್ಪು ಕಲೆಗಳು ', ' ಕುತ್ತದಲ್ಲಿ ಕುದ್ದವರ ಕತೆಗಳು ', ಬರಗೂರು ರಾಮಚಂದ್ರಪ್ಪನವರ ' ಕಪ್ಪು ನೆಲದ ಕೆಂಪು ಕಾಲು ', ' ಬಯಲಾಟದ ಭೀಮಣ್ಣ ', ಮೊಗಳ್ಳಿ ಗಣೇಶರ ' ಬುಗುರಿ ', ' ಕಥನ ' – ಇವೆಲ್ಲ ದಲಿತ ಪ್ರಜ್ಞೆಯನ್ನು ಉಳಿಸಿಕೊಂಡ ಕಲಾತ್ಮಕ ಕೃತಿಗಳಾಗಿವೆ. ದಲಿತರ ಬದುಕನ್ನು ಸ್ಥಳೀಯ ಭಾಷೆಯಲ್ಲಿ ಅಭಿವ್ಯಕ್ತಿಸಿರುವ ರೀತಿಯನ್ನು ಇಲ್ಲಿ ಕಾಣಬಹುದು.

ಬರಗೂರರು ' ಕ್ಷಾಮ ', ' ಸತ್ತವನು ', ' ಸ್ಫೋಟ ', ' ಕಪ್ಪು ನೆಲದ ಕೆಂಪುಕಾಲು ' – ಮೊದಲಾದ ಕತೆಗಳ ಮೂಲಕ ಶ್ರೀಮಂತರ ಮತ್ತು ಭೂಮಾಲೀಕರ ದಬ್ಬಾಳಿಕೆಯನ್ನು, ದಲಿತರ ದುಃಖವನ್ನು ಸಮರ್ಥವಾಗಿ ನಿರೂಪಿಸಿದರು. ಲಲಿತಾ ನಾಯಕರು ಲಂಬಾಣಿ ಜನಾಂಗದ ಬಡತನ, ಆ ಬದುಕಿನ ಅಭದ್ರಸ್ಥಿತಿ, ಅಜ್ಞಾನ – ಇವೆಲ್ಲವನ್ನು ತಮ್ಮ ಕತೆಗಳಲ್ಲಿ ಚಿತ್ರಿಸಲು ಪ್ರಯತ್ನಿಸಿದರು. ಇವರಿಂದ ದಲಿತ ಸಾಹಿತ್ಯಕ್ಕೆ ಲಂಬಾಣಿ ಸಂಸ್ಕೃತಿಯ ವಿವರಗಳ ಹೊಸ ಸೇರ್ಪಡೆಯಾದಂತಾಯಿತು. ಇಂಥ ಹೊಸ ಸೇರ್ಪಡೆಗೆ ದಲಿತ ಬಂಡಾಯ ಚಳುವಳಿಯೂ ಕಾರಣವೆನ್ನಬಹುದು. ವಾಲೀಕಾರರು ತಮ್ಮ ಅನುಭವದ ಗ್ರಹಿಕೆಯ ಅಭಿವ್ಯಕ್ತಿಗಾಗಿ ಉತ್ತರ ಕರ್ನಾಟಕದ ಜನಪದ ಭಾಷೆಯನ್ನು ಬಳಸಿಕೊಂಡು ಕಥೆಗಳಿಗೆ ಜೀವ ತುಂಬಿದರು. ಅವರ

ಕಥಾಸಂಕಲನಗಳು ಗ್ರಾಮಾಂತರ ಪ್ರದೇಶದ ದೀನದಲಿತರ ಬವಣೆಗಳನ್ನು ಕುರಿತವಾಗಿವೆ. ಅಲ್ಲಿಯ ಸಂಪರ್ಕ, ದುಃಖ, ಸಂಘರ್ಷ, ಮಾನಸಿಕ ತಳಮಳ ಇತ್ಯಾದಿಗಳನ್ನು ಒಳಗೊಂಡಿರುವ ಅವರ ಕಥೆಗಳು ದಲಿತ ಸಂವೇದನೆಯ ಜೊತೆಗೆ ದಲಿತ ಸಮುದಾಯಗಳಿಗೆ ಸಮಾನತೆ ಮತ್ತು ಸ್ವಾತಂತ್ರ್ಯ ಲಭಿಸಬೇಕೆಂಬ ಆಶಯವನ್ನು ಎತ್ತಿಹಿಡಿದವು. ಮನಜ 'ಬುರುಡೆಗೆ ಸ್ವರ್ಗ' ಕಥಾಸಂಕಲನದಲ್ಲಿ ತಾವೊಬ್ಬ ಸಮರ್ಥ ಕತೆಗಾರರೆಂಬುದನ್ನು ಸಾಬೀತುಪಡಿಸಿದರು. ದಲಿತ ಬದುಕು ಇದರ ಅಂತರ್ಯವಾಗಿದೆ. ಇತ್ತೀಚಿನ ದಿನಗಳಲ್ಲಿ ಮೊಗಳ್ಳಿ ಗಣೇಶ್ ಉತ್ತಮ ಕತೆಗಾರರೆನಿಸಿದ್ದಾರೆ. ಇವರ ಪ್ರಥಮ ಕಥಾ ಸಂಕಲನ 'ಬುಗುರಿ'ಯಲ್ಲಿನ ಬಹಳಷ್ಟು ಕಥೆಗಳು ಒಮ್ಮೆಗೇ ಆಕರ್ಷಿಸಿಬಿಡುತ್ತವೆ. ದಲಿತ ಪರಿಸರವೇ ಇಲ್ಲಿದ್ದು, ಈ ಸಮುದಾಯದ ಸಂಕಷ್ಟಗಳು ಇಲ್ಲಿ ಅನಾವರಣಗೊಂಡಿವೆ. ಸೃಜನಶೀಲತೆ ಇವರಿಗೆ ಸಿದ್ಧಿಸಿದೆ ಎಂಬುದಕ್ಕೆ 'ಭತ್ತ', 'ಬುಗುರಿ', 'ಒಂದು ಹಳೇ ಚಡ್ಡಿ', 'ಈ ಮೇಳಕ್ಕುಂಟೇನಯ್ಯ ಕೊನೆ' ಕಥೆಗಳನ್ನು ಹೆಸರಿಸಬಹುದು. ಹಾಗೆಯೇ ಅರವಿಂದ ಮಾಲಗತ್ತಿ, ಈರಣ್ಣ ಕೋಸಗಿ, ಬಿ. ಚಿನ್ನಸ್ವಾಮಿ, ಜನಾರ್ಧನ ಎರ್ಪಕಟ್ಟೆ, ಬಿ. ಟಿ. ಜಾಹ್ನವಿ, ಬಸವಲಿಂಗಯ್ಯ, ಬಾನಂದೂರು ಕೆಂಪಯ್ಯ, ಮೋಹನ ನಾಗಮ್ಮನವರ, ಎಸ್. ಆರ್. ಗುರುನಾಥ, ರಾಮಕೃಷ್ಣ ಗುಂದಿ, ಲಕ್ಷ್ಮಣ್, ಸುಬ್ಬುಹೊಲೆಯಾರ್, ಸೋಮಣ್ಣ ಹೊಂಗಳ್ಳಿ, ವೀರಯ್ಯ ಕಾಡುಕೊತ್ತನಹಳ್ಳಿ, ಬಸವರಾಜ ಕುಕ್ಕರಹಳ್ಳಿ, ಚಂದ್ರಕಾಂತ ವಡ್ಡು, ಭದ್ರಯ್ಯ ತಿಮ್ಮಸಂದ್ರ –ಮೊದಲಾದವರು ತಮ್ಮ ಜೀವನಾನುಭವಗಳನ್ನು ಕಥೆಯಾಗಿಸಲು ಪ್ರಯತ್ನಿಸುತ್ತಿದ್ದಾರೆ. ಕೆಲವರು ದಲಿತ ಬದುಕಿನ ಸಾಂಸ್ಕೃತಿಕ ವಿವರಗಳನ್ನು ಕಥಾಹಂದರದಲ್ಲಿ ನೀಡುವಲ್ಲಿ ಸಫಲರಾಗಿದ್ದಾರೆ. ದಲಿತ ಸಂವೇದನೆ ಕಥಾ ಸಾಹಿತ್ಯದಲ್ಲಿ ಸ್ಪಷ್ಟರೂಪ ಪಡೆಯುವಲ್ಲಿ ಇವರು ಕಾರಣರಾಗಿದ್ದಾರೆ.

ಕಾದಂಬರಿಯ ಮೂಲಕವೂ ನಮ್ಮ ದಲಿತ ಲೇಖಕರು ತಮ್ಮ ಭಾವನೆಗಳನ್ನು, ಸಿದ್ಧಾಂತಗಳನ್ನು, ತಾವು ತಲುಪಬೇಕಾದ ಗುರಿಯ ಬಗೆಗಿನ ಚಿಂತನೆಗಳನ್ನು ಹಂಚಿಕೊಂಡಿದ್ದಾರೆ. ಒಂದೊಂದು ಚಳುವಳಿಯ ಸಂದರ್ಭದಲ್ಲೂ ಕಾದಂಬರಿಗಳು ಬಿಟ್ಟುಕೊಟ್ಟ ಧೋರಣೆಗಳು ವಿಶಿಷ್ಟವಾದವು. ದಲಿತ ಚಳುವಳಿಯ ಕಾಲದಲ್ಲೂ ಕಾದಂಬರಿ ಗ್ರಾಮಾಂತರ ನೆಲೆಗಳ ದಲಿತ ಕುಟುಂಬಗಳ ಸಮಸ್ಯೆಗಳನ್ನು, ಅವರ ಸಾಂಸ್ಕೃತಿಕ ಸಂಪನ್ನತೆಯನ್ನು, ಸ್ಥಿತ್ಯಂತರಗೊಳ್ಳುತ್ತಿರುವ ಮೌಲ್ಯಗಳೊಂದಿಗಿನ ಹೋರಾಟವನ್ನು, ತಮ್ಮ ಸಮಸ್ಯೆಗಳ ಬಗೆಗಿನ ತಿಳಿವಳಿಕೆಗಳನ್ನು ನಿರೂಪಿಸುವಲ್ಲಿ ಯಶಸ್ಸನ್ನು ಪಡೆದಿದೆ. ಜಿ. ವೆಂಕಟಯ್ಯ, ದೇವನೂರು ಮಹಾದೇವ, ಮ. ನ. ಜವರಯ್ಯ, ಮಾಲಗತ್ತಿ, ಮುಳ್ಳೂರು ನಾಗರಾಜ, ಶಿವರುದ್ರ ಕಲ್ಲೋಳಿಕರ್ ಮೊದಲಾದವರ ಕಾದಂಬರಿಗಳು ಆ ಕೆಲಸವನ್ನು ಅತ್ಯಂತ ಸಮರ್ಥ ರೀತಿಯಲ್ಲಿ ನೆರವೇರಿಸಿದವು. ಮೀಸಲಾತಿ, ರಾಜಕೀಯ ಪ್ರಜ್ಞೆ, ಆರ್ಥಿಕ ಸಮಸ್ಯೆಗಳು, ಸಾಮಾಜಿಕ ಸಮಸ್ಯೆಗಳು ಇತ್ಯಾದಿಗಳ ಬಗೆಗೂ ಅವು ಚರ್ಚಿಸದೇ ಬಿಟ್ಟಿಲ್ಲ.

ಜಿ. ವೆಂಕಟಯ್ಯನವರ ' ನೊಂದಜೀವ ' ಹರಿಜನ ಕುಟುಂಬವೊಂದರ ಬದುಕಿನ ಚಿತ್ರ ನೀಡುವ ಕಾದಂಬರಿ. " ಈ ಕಾದಂಬರಿಯ ವಸ್ತು ಮೈಸೂರು ಪ್ರದೇಶದ ಹೊಲೆಯರ ಜೀವನ ಸಮುದ್ರದಲ್ಲಿನ ಒಂದು ಹನಿ ಮಾತ್ರ. ಅದಕ್ಕೂ ಕಮ್ಮಿ ಎಂದರೂ ಒಪ್ಪುತ್ತದೆ. ಅವರ ಸಮಾಜದ ರೀತಿ ನೀತಿಗಳು, ಸಂಸ್ಕೃತಿಯ ಮಟ್ಟ, ವ್ಯವಹಾರಜ್ಞಾನ ಶೂನ್ಯತೆ, ಮದುವೆ ಮುಂಜಿಗಳಲ್ಲಿನ ಸಂಪ್ರದಾಯ ಇಂಥ ಒಂದು ಮುಖವನ್ನು ಮಾತ್ರ ಚಿತ್ರಿಸಲು ಕೈ ಹಾಕಿದ್ದೇನೆ " ಎಂದು ಪುಸ್ತಕದ ಅರಿಕೆಯಲ್ಲಿ ಕಾದಂಬರಿಕಾರ ಜಿ. ವೆಂಕಟಯ್ಯ ಹೇಳಿಕೊಂಡಿದ್ದಾರೆ. ಇನ್ನೂರ ಹತ್ತು ಪುಟಗಳಿರುವ ಈ ಕೃತಿ ಹರಿಜನ ಕುಟುಂಬವೊಂದರ ಬದುಕಿನ ಅಧೋಗತಿಯನ್ನು ಚಿತ್ರಿಸುತ್ತದೆ. ಚೌಡೇಶ್ವರಿ ಹಬ್ಬದ ಸಂಭ್ರಮ ಸಡಗರವನ್ನು ನೋಡುತ್ತ ಅದರಲ್ಲಿ ತಾವೂ ಒಂದಾಗುವ ಉದ್ದೇಶದಿಂದ ಬಂದ ಮುದ್ದಣ್ಣ, ಹೆಂಡತಿಯನ್ನು ಕಳೆದುಕೊಂಡು ಮತ್ತೆ ಮದುವೆಯಾಗಬೇಕೆಂದು. ನನಗೆ ಯಾರೂ ಹೆಣ್ಣನ್ನು ಕೊಡಲಾರರು ಎಂದು ಆತಂಕ ಪಡುತ್ತಿದ್ದವನು. ಹಾಗೆಯೇ ಕುಳ್ಳವೆಂಕಟಣ್ಣ ಮತ್ತು ಕೆಂಪಮ್ಮ ತಮ್ಮ ಮಗಳು ಚೆನ್ನಮ್ಮನ ಮದುವೆಯ ಬಗ್ಗೆ ಆಲೋಚಿಸುತ್ತಿದ್ದರು. ಕೊನೆಗೆ ಊರ ಮುಖಂಡರ ನೇತೃತ್ವದಲ್ಲಿ ಮುದ್ದಣ್ಣ ಚೆನ್ನಮ್ಮನನ್ನು ಮದುವೆಯಾಗುತ್ತಾನೆ. ಹೆಣ್ಣಿನ ತಂದೆ-ತಾಯಿಗಳು ಸಾಹುಕಾರ ಮಾದಪ್ಪನ ಬಳಿ ಸಾಲ ಮಾಡಿ ಮಗಳ ಮದುವೆ ಮಾಡುತ್ತಾರೆ. ಮುದ್ದಣ್ಣನ ಸಂಸಾರದಲ್ಲಿದ್ದ ಲವಲವಿಕೆ ಬರಬರುತ್ತ ಕಡಿಮೆಯಾಗುತ್ತದೆ. ಸಾಲ ಕೊಟ್ಟವನ ಕಾಟಕ್ಕೆ ತಾಳಿಕೊಳ್ಳಲಾರದೆ ಕುಳ್ಳವೆಂಕಟಣ್ಣ ಕಾಫಿ ತೋಟದಲ್ಲಿ ಕೂಲಿ ಕೆಲಸಕ್ಕೆ ಸೇರುತ್ತಾನೆ. ಹೆಂಡತಿ ಕೆಂಪಮ್ಮ ಸಾಹುಕಾರನ ಹೆಂಡತಿ ಹೇಳಿದ ಕೆಲಸ ಮಾಡಿಕೊಂಡು ಉದರ ಪೋಷಣೆ ಮಾಡುತ್ತಾಳೆ. ಸಾಲ ಕೊಟ್ಟ ದಾಸಪ್ಪನ ಕಿರುಕುಳದಿಂದ ಮುದ್ದಣ್ಣನೂ ಊರುಬಿಟ್ಟು ಬೆಂಗಳೂರಿನ ಮಿಲ್ಲಿನಲ್ಲಿ ಕೂಲಿ ಕೆಲಸ ಮಾಡುತ್ತಾನೆ. ಕುಳ್ಳವೆಂಕಟಣ್ಣ ಕಾಫಿ ತೋಟದಲ್ಲಿ ಕೂಲಿ ಮಾಡುತ್ತ ಸ್ವಲ್ಪ ಸ್ವಲ್ಪವೆ ಹಣ ಕಳಿಸುತ್ತ ಮಾದಪ್ಪನ ಸಾಲವನ್ನು ತೀರಿಸುತ್ತಿರುತ್ತಾನೆ. ಆದರೆ ಅಳಿಯ ಮುದ್ದಣ್ಣ ಮನೆಗೆ ಹಣ ಕಳಿಸುವುದನ್ನೇ ನಿಲ್ಲಿಸಿ ಕುಡಿತಕ್ಕೆ ಹಣವನ್ನು ಪೋಲು ಮಾಡುತ್ತಾನೆ. ಒಂದು ದಿನ ಮಿಲ್ಲಿನಲ್ಲಿ ಮುದ್ದಣ್ಣ ಕೆಲಸ ಮಾಡುತ್ತಿರಬೇಕಾದರೆ ಯಂತ್ರದ ಗಾಲಿಗೆ ಆತನ ಕೈ ಸಿಕ್ಕಿ ಕತ್ತರಿಸಿ ಹೋಗುತ್ತದೆ, ಆತ ಆಸ್ಪತ್ರೆಯನ್ನು ಸೇರುತ್ತಾನೆ.

ಮಗಳ ಮದುವೆ ಮಾಡಿದ ಸಾಲ ತೀರಿಸಲು ಕುಳ್ಳವೆಂಕಟಣ್ಣ ಊರು ಬಿಡಬೇಕಾಗುತ್ತದೆ. ಕಾಫಿತೋಟ ಸೇರಿ ಅಲ್ಲಿಯ ದೊರೆಗಳಿಗೆ, ಮೇಸ್ತ್ರಿಗಳಿಗೆ ನಿಷ್ಠಾವಂತನಾಗಿದ್ದು ದುಡಿದು ತನ್ನ ಉದ್ದೇಶವನ್ನು ಪ್ರಾಮಾಣಿಕವಾಗಿದ್ದುಕೊಂಡೇ ಈಡೇರಿಸುತ್ತಾನೆ. ಆತನ ಹೆಂಡತಿ ಕೆಂಪಮ್ಮ ಸಾಹುಕಾರರ ಕಿರುಕುಳವನ್ನು ಅನುಭವಿಸಿಯೂ ತಾನು ತನ್ನ ಮಗಳು, ಮೊಮ್ಮಗನನ್ನು ಸಾಕುತ್ತಾಳೆ. ಮಗಳು ಜೀವನ ಪರ್ಯಂತ ಸಾಲದ ತೆಕ್ಕೆಯಲ್ಲಿ ಸಿಲುಕಿ ನರಳಬೇಕಾದ ಸಂದರ್ಭವೊದಗುತ್ತದೆ. ಆರಂಭದಲ್ಲಿ ಅನ್ಯೋನ್ಯವಾಗಿದ್ದ ಮುದ್ದಣ್ಣ–ಚೆನ್ನಮ್ಮರ ಬದುಕಿನಲ್ಲಿ ಚಾಡಿಯ ಮಾತುಗಳು ಭಿನ್ನಾಭಿಪ್ರಾಯಕ್ಕೆ ಎಡೆ ಮಾಡುತ್ತವೆ. ಪರಸ್ತ್ರೀ ವ್ಯಾಮೋಹ, ಕುಡಿತ

ಇವುಗಳಿಂದಾಗಿ ಸಾಲವನ್ನು ಮೈಮೇಲೆಳೆದುಕೊಂಡು ಸಂಸಾರವನ್ನು ಕಷ್ಟಕ್ಕೆ ಗುರಿಪಡಿಸುವಲ್ಲಿ ಮುದ್ದಣ್ಣ ಕಾರಣನಾಗುತ್ತಾನೆ. ಸಾಲದಿಂದ ತಪ್ಪಿಸಿಕೊಳ್ಳಬೇಕೆಂದೇ ಮಿಲ್ಲಿಗೆ ಸೇರಿ ಅನಿವಾರ್ಯವಾಗಿ ಅಂಗವಿಕಲನಾಗಿ ಬಿಡುತ್ತಾನೆ. ಪ್ರಧಾನವಾಗಿ ಚೆನ್ನಮ್ಮನ ಮದುವೆಯ ಸುತ್ತ ಹರಡಿಕೊಂಡಿರುವ ಈ ವಿವರಗಳನ್ನು ಕಾದಂಬರಿ ಒಳಗೊಂಡಿದೆ.

ನಮ್ಮ ನಾಡಿನ ಹರಿಜನರಲ್ಲಿ ಕಾಣುವ ಎಲ್ಲಾ ರೀತಿಯ ಸಮಸ್ಯೆಗಳೂ ಇದರಲ್ಲಿವೆ. ಒದಗಿರುವ ಸಮಸ್ಯೆಗಳಿಂದ ಬಿಡುಗಡೆ ಹೊಂದಲು ಸಾಲ ಮಾಡಿ ತೊಂದರೆಗೊಳಗಾದ ವೆಂಕಟಣ್ಣ ದಂಪತಿಗಳು. ಅನಾವಶ್ಯಕವಾಗಿ ಸಾಲಕ್ಕೆ ಬಲಿಯಾಗುವ ಮುದ್ದಣ್ಣ ಹರಿಜನರ ಪ್ರಾತಿನಿಧಿಕ ರೂಪಗಳಾಗಿದ್ದಾರೆ. ಪರಿಸರ ಇವರನ್ನು ಸಾಲ, ಕೂಲಿ, ಯಂತ್ರಗಳಲ್ಲಿ ತೊಡಗುವಂತೆ ಮಾಡಿಬಿಡುತ್ತದೆ. ಚೆನ್ನಮ್ಮನ ಅಭಿವೃದ್ಧಿಗೆ ತೊಡಗುವ ತಂದೆ ತಾಯಿಗಳಿಂದ ಹಿಡಿದು ಎಲ್ಲಾ ದಲಿತ ಪಾತ್ರಗಳೂ ನೊಂದ ಜೀವಿಗಳೇ ಆಗಿಬಿಡುತ್ತಾರೆ. ಕುಳ್ಳವೆಂಕಟಣ್ಣನನ್ನು ಬಿಟ್ಟರೆ ಇಲ್ಲಿಯ ಪುರುಷರೆಲ್ಲ ಮದ್ಯಪಾನ ಮತ್ತರು. ಸ್ತ್ರೀಯರು ಅವರಿಂದಾಗುವ ಅನಾಹುತವನ್ನು ಬಲ್ಲವರು. ಪುರುಷ ಪುರುಷರಲ್ಲಿ ಸಂಘರ್ಷಗಳಿರುವಂತೆ ಸ್ತ್ರೀಯರಲ್ಲೂ ಸಂಘರ್ಷಗಳಿವೆ. (ರಾಮಿ – ನರಸಮ್ಮ, ನರಸಮ್ಮ – ಚೆನ್ನಮ್ಮ) ಈ ಸಂಘರ್ಷಣೆಗಳೇನೇ ಇದ್ದರೂ ತಪ್ಪನ್ನು ಅರಿತುಕೊಂಡು ಪರಿವರ್ತನೆಯ ಕಡೆಗೆ ತಿರುಗುವ ಪಾತ್ರಗಳು ಕಾದಂಬರಿಯ ಒಡಲಲ್ಲಿ ಇವೆ. ಹೆಂಡದ ಸಾಲ ತೀರಿಸಲು ಹಸು ಮಾರಿದ ಮುದ್ದಣ್ಣ, ರಾಮಿಯ ಸಲುವಾಗಿ ಸಾಲ ಜಾಸ್ತಿಯಾಯಿತು ಎಂದು ತಿಳಿದು ಅವಳನ್ನು ಮರೆಯಲು ಪ್ರಯತ್ನಿಸುತ್ತಾನೆ. ನಿರಪರಾಧಿಯಾದ ತನ್ನ ಹೆಂಡತಿಯನ್ನು ರಾಮಿಯ ಚಪಲದಲ್ಲಿ ಹಿಂಸಿಸಿದೆನಲ್ಲಾ ಎಂದು ನೆನೆದು ತನ್ನನ್ನು ತಾನು ಹಳಿದುಕೊಂಡ. ದಾಸಪ್ಪನಿಗೆ ಕೊಡಬೇಕಾದ ಎರಡು ವರ್ಷಗಳ ಗುತ್ತಿಗೆ ಹಣದ ಬಗ್ಗೆಯೂ ಆತನಿಗೆ ಅರಿವಿದೆ. ಕುಟುಂಬದಲ್ಲಿನ ಎಲ್ಲಾ ರೀತಿಯ ಭಿನ್ನಾಭಿಪ್ರಾಯಗಳು ಮುದ್ದಣ್ಣ ಅಂಗವಿಕಲನಾದಾಗ ಮರೆಯಾಗಿಬಿಡುತ್ತವೆ. ಮದುವೆಯ ವಿಚಾರದಿಂದ ಆರಂಭವಾಗುವ ಕಾದಂಬರಿ ಶ್ರೀಮಂತರ ದಾಹವನ್ನು, ಹರಿಜನರ ಅಸ್ಪೃಶ್ಯತಾ ಸಮಸ್ಯೆಯನ್ನು, ಕೂಲಿಕಾರರ ಸಮಸ್ಯೆಗಳನ್ನು, ಇವರುಗಳ ಮೇಲೆ ಪ್ರಭಾವ ಬೀರಿದ ಜನಪದ ಪ್ರದರ್ಶಕ ಕಲೆಗಳನ್ನು, ಗಾಂಧೀಜಿಯವರ ಭಾಷಣವನ್ನು, ಹಬ್ಬದ ಸಂದರ್ಭದ ನಂಬಿಕೆ, ಆಚರಣೆ ಸಂಪ್ರದಾಯಗಳನ್ನು – ಈ ಎಲ್ಲವನ್ನು ಸಜೀವವಾಗಿ ಚಿತ್ರಿಸುತ್ತ ಬಂದಿರುವುದು ಗಮನಾರ್ಹ ಸಂಗತಿ. ವಸ್ತು, ಭಾಷೆ, ನಿರೂಪಣೆ ಈ ಎಲ್ಲದರಲ್ಲೂ 'ನೊಂದ ಜೀವ' ಕನ್ನಡ ಕಾದಂಬರಿಗಳಲ್ಲಿ ಮಹತ್ವದ ಪಾತ್ರ ವಹಿಸುತ್ತದೆ. ಒಂದು ಪ್ರದೇಶದ, ಒಂದು ಜಾತಿಯ, ಒಂದು ಕುಟುಂಬದ ಜೀವನದ ಸರ್ವ ಸಂಗತಿಗಳನ್ನೂ ಈ ಕಾದಂಬರಿ ಕಲಾತ್ಮಕವಾಗಿ ದಾಖಲಿಸುತ್ತದೆ. ಹರಿಜನರ ಸಾಂಸ್ಕೃತಿಕ ವಿವರಗಳನ್ನು ದಟ್ಟವಾಗಿ ಹಿಡಿದಿಡುವ 'ನೊಂದಜೀವ' ವಿಮರ್ಶಕರ ಅಸಡ್ಡೆಗೆ ಏಕೆ ಗುರಿಯಾಯಿತು ಎಂಬುದೇ ಮುಖ್ಯ ಪ್ರಶ್ನೆಯಾಗುಳಿಯುತ್ತದೆ. ಕನ್ನಡದಲ್ಲಿ ದಲಿತ ಸಾಹಿತ್ಯದ ಚರ್ಚೆಯೇ ಆರಂಭವಾಗದಿದ್ದ ಸಂದರ್ಭದಲ್ಲಿ, ದಲಿತರ

ಬದುಕನ್ನು ಅದೇ ವರ್ಗದಿಂದ ಬಂದವರು ಚಿತ್ರಿಸಲು ಪ್ರಯತ್ನಿಸಿದ್ದು ಮಹತ್ವದ ಸಂಗತಿ. ಇದು ನಮ್ಮ ವಿಮರ್ಶಕರಿಗೆ ಏಕೆ ಮುಖ್ಯವಾಗಲಿಲ್ಲ ? ಒಟ್ಟಾರೆ ಜಿ. ವೆಂಕಟಯ್ಯನವರಿಗೆ ಸಲ್ಲಬೇಕಾಗಿದ್ದ ಮಾನ್ಯತೆ ನಿಜವಾಗಿಯೂ ಸಂದಿಲ್ಲದಿರುವುದು ವ್ಯಸನದ ಸಂಗತಿ.

' ದ್ಯಾವನೂರು ', ' ಒಡಲಾಳ ' ದ ನಂತರ ಹೊರಬಂದ ' ಕುಸುಮಬಾಲೆ ' ದೇವನೂರು ಮಹಾದೇವ ಅವರ ಮೂರನೇ ಕೃತಿ. ಲೇಖಕರು ಬಾಲೆಯ ಕಥೆಯನ್ನು ಆರಂಭದಲ್ಲಿ ಹೀಗೆ ಸಂಗ್ರಹಿಸಿ ಕೊಟ್ಟಿದ್ದಾರೆ. " ಅಕ್ಕಮಹಾದೇವಿಯಮ್ಮನು ಗಂಡನ ತಿಥಿಯಾದ ಮಾರನೆಗೇ ತನ್ನ ತೌರಿಗೆ ಹೋದವಳು, ಆರು ವರ್ಷದ ಬಳಿಕ ಅಪ್ಪ ಸತ್ತ ಹನ್ನೆರಡು ತಿಂಗಳಿಗೆ ಹಟ್ಟಿ ಜೀತಗಾರರಿಗೆ ಹುಟ್ಟಿದವರೆಂಬ ಅಪವಾದದ ತನ್ನ ಕುಡಿ ಯಾಡನೊಡನೆ ಗಂಡನ ಮನೆಗೆ ಪಾಲಿಗಾಗಿ ಬರುವಳು. ಆಗ ಭಾವ ಬಸಪ್ಪಸೊಮಿ, ಮೈದುನ ಸಿದ್ಧೂರರು ಕುಪಿತರಾಗಿ ಅವಳನ್ನು ಗೋಮಾಳದಲ್ಲಿ ಬಿಸುಡುವರು. ಬಿಸುಟಲ್ಲೇ ನೆಲೆಯಾದ ಅಕ್ಕಮಹಾದೇವಿಯ ಮೈನ ಸುತ್ತ ಒಂದು ಜೋಪಡಿ ಎದ್ದು ಮುಂದೆ ಯಾಡ ಬೆಳೆದಂತೆ ಅವನ ಸಾಮರ್ಥ್ಯವೂ ಸೇರಿ ಆ ಜೋಪಡಿಯು ನಿಧಾನವಾಗಿ ಒಂದು ದೊಡ್ಡ ಮನೆಯಾಗಿ, ಆ ದೊಡ್ಡ ಮನೆಗೆ ಕಾಲಾನುಕ್ರಮದಲ್ಲಿ ಬಸಪ್ಪಸೋಮಿ ಸಿದ್ಧೂರರ ಹಟ್ಟಿಯೇ ದನದ ಕೊಟ್ಟಿಗೆ ಆಗುವುದು. ಈ ಯಾಡೆಗೌಡನ ಮಗ ಸೋಮಪ್ಪ ಊರಿಗೆ ದೊಡ್ಡವರು. ಈ ಊರಿಗೆ ದೊಡ್ಡವರ ಮಗಳು ಕುಸುಮಬಾಲೆ. ಕುಸುಮ ಮತ್ತು ಹೊಲಾರ ಚನ್ನರ ನಡುವಿನ ಗುಪ್ತ ಸಂಬಂಧವು ಕುಸುಮಳಿಗಾದ ಮಗುವಿನಿಂದಾಗಿ ಬಯಲಾಗಿ ಅರಿವಾಗದೋಪಾದಿಯಲ್ಲಿ ಚೆನ್ನನ ಕೊಲೆಯಾಗುವುದು. ಇತ್ತ ಇಡೀ ಊರಿಗೆ ಊರೇ ಕಿಚ್ಚು ಹಾಯಿಸೋ ಹಬ್ಬಕ್ಕೆ ಸಿದ್ಧವಾಗುತ್ತಿದ್ದರೆ ಚನ್ನನ ಬಳಗಕ್ಕೆ ಸೇರಿದ ಕೆಂಪಿಗೆ ಹುಟ್ಟಿದ ಕಂದನನ್ನು ಬದುಕಿಸಲು ತಾಯಿ ತೂರಮ್ಮ ವಿಧಿಯೊಡನೆ ಸೆಣಸುತ್ತ ಅಲ್ಲೇ ತೂರಮ್ಮನ ಅಕ್ಕನ ಮಗಳು ಈರಿಯು ತನ್ನ ಸವೆಯುತ್ತಿದ್ದ ಕಂದನನ್ನು ಉಳಿಸಿಕೊಳ್ಳಲು ವಿಫಲಳಾಗಿ ಹಾಗೂ ಚನ್ನನ ಕೊಲೆ ಅರಿಯದ ಬಳಗವು ಕಾಯುವುದು ಚನ್ನನ ಬರುವಿಗಾಗಿ. "

ಕುಸುಮಬಾಲೆ ಕೃತಿಯ ಕತೆಯನ್ನು ಮೇಲೆ ಸಂಗ್ರಹಿಸಿ ಕೊಟ್ಟಿರುವ ರೀತಿಯಲ್ಲಿ ಕೃತಿಯ ಕಥೆ ನಿರೂಪಿತಗೊಂಡಿಲ್ಲ. ನಿರ್ದಿಷ್ಟ ಕಾಲದಲ್ಲಿ ಕತೆಯನ್ನು ಹೇಳದೆ ಭೂತ, ವರ್ತಮಾನ ಮತ್ತು ಭವಿಷ್ಯತ್ ಕಾಲಗಳಲ್ಲಿ ಹೇಳತೊಡಗಿರುವುದು ಕಂಡುಬರುತ್ತದೆ. ಹೊಲೆಯರ ಕೇರಿಯಲ್ಲಿ ಜರುಗುವ ಕಾರ್ಯಾಚರಣೆಗಳೆಲ್ಲ ವರ್ತಮಾನಕ್ಕೂ ಅಕ್ಕಮಹಾದೇವಿಯಮ್ಮ ಮತ್ತು ಯಾಡರ ವಿವರಗಳು ಭೂತಕಾಲಕ್ಕೂ. ಪರ್ಯಾದ (ಕುಸುಮಳ ತಮ್ಮ) ಈರಿಯ ಮಗು ಕೆಂಪಿಯ ಗರ್ಭದಲ್ಲಿರುವ ಶಿಶು – ಇವು ಭವಿಷ್ಯತ್ ಕಾಲಕ್ಕೂ ಸಂಬಂಧಿಸಿದವುಗಳಾಗಿವೆ. ಜೀವಾತ್ಮಕ್ಕೂ ಮಂಚಕ್ಕೂ ನಡೆಯುತ್ತಿದ್ದ ಸಂಭಾಷಣೆ, ಜೋತಮ್ಮಗಳ ನಡುವೆ ನಡೆಯುತ್ತಿದ್ದ ಚರ್ಚೆ, ಜನನ ಮರಣಗಳಿಗೆ ಸಂಬಂಧಿಸಿದ ಜಾನಪದಗಳು – ಇತ್ಯಾದಿಗಳೆಲ್ಲ ಮತ್ತೊಂದು ಹಂತವನ್ನು ತಲುಪುವಂಥವು – ಅಲ್ಲಲ್ಲಿ ಕಲಸು ಮೇಲೋಗರವಾಗಿರುವ. ಎಲ್ಲೆಲ್ಲೋ

ಹರಡಿಕೊಂಡಿರುವ ವಿವರಗಳನ್ನು ತುಂಬ ಎಚ್ಚರಿಕೆಯಿಂದ ಗಂಭೀರವಾಗಿ ಗಮನಿಸುತ್ತ, ಕ್ರೋಢೀಕರಿಸುತ್ತಾ ಹೋದರೆ ಕಾದಂಬರಿಯು ಆರಂಭದಲ್ಲಿ ಲೇಖಕರು ಸಂಗ್ರಹಿಸಿಕೊಂಡಿರುವ ಕಥೆಯನ್ನು ಅದರ ವಸ್ತುವನ್ನು ಅರ್ಥಮಾಡಿಕೊಳ್ಳುವ ಸಾಧ್ಯತೆ ಇದೆ. ಹೀಗಾಗಿ ದೇವನೂರರ ಉಳಿದೆರಡು ಕೃತಿಗಳಿಗಿಂತ ಇದು ಭಿನ್ನಸ್ವರೂಪ ಉಳ್ಳದ್ದು.

ಇತ್ತೀಚೆಗೆ ವಿಪುಲ ಸಂಖ್ಯೆಯಲ್ಲಿ ಹೊರಬೀಳುತ್ತಿರುವ ಕಾದಂಬರಿಗಳ ರಚನಾ ಸ್ವರೂಪಕ್ಕಿಂತ ಇದು ಬೇರೆಯಾದುದು. ಲೇಖಕ ತಾನು ಬೆಳೆದು ಬಂದ ಪರಿಸರದ, ತನ್ನ ಜನಾಂಗದವರ ವಿವರಗಳನ್ನು ದಾಖಲಿಸುವುದಷ್ಟೇ ಇಲ್ಲಿಯ ಉದ್ದೇಶವಲ್ಲ. ಯಾಕೆಂದರೆ ಸದಾಕಾಲ ತನ್ನ ಶ್ರಮವನ್ನು. ಶ್ರಮದಿಂದ ಬಂದ ಫಲವನ್ನು ಅನ್ಯರಿಗೆ ಒಪ್ಪಿಸುತ್ತ ತನ್ನ ಬದುಕನ್ನು ಬರ್ಬರಗೊಳಿಸಿಕೊಳ್ಳುತ್ತಾ ಬಂದ ಕೆಳಜಾತಿಯವರ ಬದುಕಿನ ಪರಂಪರೆ ಒಂದು ವಿಶಿಷ್ಟ ಭೂಮಿಕೆಯ ಮೇಲೆ ಹರಿದು ಬಂದದ್ದಾಗಿದೆ. ಉಳ್ಳವರ ಕನಿಕರತೆಗಳಿಂದ ವಂಚಿತರಾದಂತೆ ಪರಂಪರೆಯನ್ನು ಬೆನ್ನಮೇಲೆ ಹೊತ್ತು ಬಂದ ಕೆಳಜಾತಿಯವರಿಗೆ ತಾವು ಅನುಭವಿಸುತ್ತಿರುವ ಬದುಕು ಎಂಥದ್ದು ಎಂಬ ಅರಿವಿದೆ. ಅಂಥ ತುರ್ತು ಪರಿಸ್ಥಿತಿಯ ಸಂಕೋಲೆಯಿಂದ ಬಿಡಿಸಿಕೊಳ್ಳಬೇಕೆಂಬ ಆಸೆಗಳೂ ಅವರಲ್ಲಿ ಇವೆ. ಇದುವರೆಗೆ ಸಂಭವಿಸುತ್ತ ಬಂದಿರುವ ತೊಂದರೆಗಳಿಗೆ ಪರಿಹಾರ ಕಂಡುಕೊಳ್ಳಬೇಕೆಂದು ಹೊರಟಿರುವ ಕೆಳಜಾತಿಯವರ ಗುಂಪಿಗೆ ಶಕ್ತಿ ಮತ್ತು ಧೈರ್ಯದ ಅಗತ್ಯವಿದೆ –ಎಂಬುದೂ ಅವರಿಗೆ ತಿಳಿದಿದೆ. ಪರಂಪರಾಗತವಾಗಿ ನೋಯುತ್ತ ಬಂದಿರುವ ಒಂದು ವರ್ಗದ ಇಂಥ ಅನೇಕ ಸಂಗತಿಗಳನ್ನು ಒಂದು ತೆಕ್ಕೆಗೆ ಅಳವಡಿಸಿಕೊಳ್ಳಬೇಕೆಂಬ ಪ್ರಶ್ನೆಯೂ ಇಂದಿನ ಅನೇಕ ಬರಹಗಾರರ ಮುಂದಿದೆ. ಮೇಲೆ ಹೇಳಿದ ಎಲ್ಲವುಗಳನ್ನೂ ಕುಸುಮಬಾಲೆಯಲ್ಲಿ ದೇವನೂರು ಮಹಾದೇವ ಅವರು ಸೂಕ್ಷ್ಮದೃಷ್ಟಿಯಿಂದ ಗುರುತಿಸುವ ಪ್ರಯತ್ನಕ್ಕೆ ಕೈಹಾಕಿದ್ದಾರೆಂದು ಹೇಳಬಹುದು. ಬೇರೆ ದಲಿತ ಬರಹಗಾರರಿಗಿಂತ ಭಿನ್ನವಾದ ವಿವರಗಳನ್ನು ದೇವನೂರು ಅವರು ಹೇಳಲು ಹೊರಟಿದ್ದಾರೆಂದು ಅನ್ನಿಸುವುದು ಈ ಕಾರಣಕ್ಕಾಗಿಯೇ. ಕಾದಂಬರಿಯಲ್ಲಿ ಪ್ರಮುಖವಾಗಿ ಕಾಣಿಸುವ ಅಂಶವೆಂದರೆ ಮಾನವೀಯತೆ. ನಿರ್ಗತಿಕರ ಬಗ್ಗೆ –ನಿಮ್ನ ವರ್ಗದವರ ಬಗ್ಗೆ ಲೇಖಕರು ತೋರುವ ಹೃದಯಪೂರ್ವಕವಾದ ಪ್ರೀತಿ, ಅಂಥವರ ಬದುಕಿಗೆ ಸ್ಪಂದಿಸುತ್ತ ಸಾಗಿದೆ. ಇದೇ ಕಾದಂಬರಿಯ ಆಂತರ್ಯವೂ ಆಗಿದೆ. ಏನೂ ಅರಿಯದ ಪರ್ಯಾಡರಂಥವರು ಪಡುವ ಸಂತೋಷ, ಕುಸುಮ, ಈರಿಯಂಥವರು ಅನುಭವಿಸುವ ಯಾತನೆ, ತಮ್ಮ ಮಿತಿಯಲ್ಲಿಯೇ ಗಾರಸಿದ್ದಮಾವ, ಯಾಡ, ಅಮಾಸ –ಮೊದಲಾದವರು ಪಡುವ ಶ್ರಮ, ಸಂದಿಗ್ಧತೆಯ ಸಂದರ್ಭಗಳು ಬಂದೊದಗಿದರೂ ತಮ್ಮ ಜೀವನದಲ್ಲಿನ ಸುಖ-ಸಂತೋಷಗಳಿಗೆ ಧಕ್ಕೆಯನ್ನುಂಟು ಮಾಡಿಕೊಳ್ಳಲಾರದ ಚೆನ್ನನ ಅಪ್ಪನಂಥವರ ಲವಲವಿಕೆಯ ಬದುಕು –ಇತ್ಯಾದಿಗಳೆಲ್ಲ ಒಂದು ರೀತಿಯ ಸಂವೇದನಾಶೀಲ ಚೌಕಟ್ಟಿನೊಳಗೆ ಜರುಗುತ್ತವೆ. ಹೀಗಾಗಿ ಇಲ್ಲಿಯವರ ಬದುಕಿನಲ್ಲಿ ವೈವಿಧ್ಯತೆಯಿದೆ. ಈ ವೈವಿಧ್ಯತೆಗೆ ಪ್ರೇರಕವಾಗಿರುವ ಪರಿಸರದ ಸಾಂಸ್ಕೃತಿಕ ವಿವರಗಳನ್ನು ಕೇವಲ ಚರ್ಚೆಗೆ, ಪರಿಶೀಲನೆಯ ಹಂತಕ್ಕೆ ಸೀಮಿತಗೊಳಿಸದೆ, ಮೌಖಿಕ

ಅಂಶಗಳನ್ನೆಲ್ಲ ಒಟ್ಟಾರೆಯಾಗಿ ಸಂಗ್ರಹಿಸಿ ಸುಂದರ ಕಥಾ ಚೌಕಟ್ಟಿನಲ್ಲಿ ಅಳವಡಿಸುವ ಕುಶಲಗಾರಿಕೆಯನ್ನು ಲೇಖಕರು ಪ್ರದರ್ಶಿಸಿರುವುದು ಕಂಡುಬರುತ್ತದೆ. ಗದ್ದಲ-ಗರ್ಜನೆಗಳಿಲ್ಲದ ಭಾಷೆಯ ಬಳಕೆಯಿದೆ. ಜನಪದ ನಂಬಿಕೆ, ಆಚರಣೆ, ಆಶಯಗಳಿವೆ. ಪೊಯಟಿಕ್ ಆದ ಭಾಷಾ ನಿರೂಪಣೆಯಿದೆ. ಕುಸುಮ ಬಾಲೆ ಒಳ್ಳೆಯ ಕೃತಿ ಎನಿಸುವುದು ಈ ಎಲ್ಲ ಕಾರಣಗಳಿಂದ. ಆದರೆ ಅದೇ ಸಂದರ್ಭದಲ್ಲಿ ಕ್ರಮಬದ್ಧತೆ ಇಲ್ಲದಿರುವುದರಿಂದ ಅಷ್ಟು ಸುಲಭವಾಗಿ ಕಥೆಯನ್ನು ಬಿಟ್ಟುಕೊಡುವದಿಲ್ಲ. ಅಂಥ ಸಂದರ್ಭದಲ್ಲಿ ಕುಸುಮಬಾಲೆಯ ಬಗೆಗೆ ಓದುಗನಿಗೆ ಬೇಸರವೂ ಆಗುತ್ತದೆ.

ಮನಜ ಅವರ ' ಮಾಗಿ ' ಕಾದಂಬರಿ ದಲಿತರ ಬದುಕಿನ ದಟ್ಟ ಅನುಭವಗಳನ್ನು ಚಿತ್ರಿಸುವ ಕೃತಿ. ದಲಿತ ಹೆಣ್ಣನ್ನು ಕೇಂದ್ರವಾಗಿರಿಸಿಕೊಂಡು ರಚನೆಗೊಂಡ ಕಾದಂಬರಿ ಇದು. ದಲಿತ ಸಂವೇದನೆ ಮತ್ತು ಸ್ತ್ರೀ ಸಂವೇದನೆಗಳು ಜೊತೆ ಜೊತೆಯಲ್ಲಿ ವಿನ್ಯಾಸಗೊಂಡು ರಚಿತವಾಗಿರುವಂಥದ್ದು. ದಲಿತ ಸಮಾಜದ ಹೆಣ್ಣೊಬ್ಬಳು ಆ ಸಮಾಜದ ಇತರರೊಂದಿಗೆ ವ್ಯವಹರಿಸುವ ಬೇರೆ ಬೇರೆ ಸಂದರ್ಭಗಳ ಚಿತ್ರ ಇಲ್ಲಿ ವಿಸ್ತೃತಗೊಂಡಿದೆ. ಇಲ್ಲಿಯ ಮಾಗಿ ತನ್ನ ಕುಟುಂಬದ ಗಂಡಿಗಿಂತ ಹಾಗೂ ಮೇಲ್ವರ್ಗದ ಹೆಣ್ಣಿಗಿಂತ ಹೆಚ್ಚು ತುಳಿತಕ್ಕೆ ಒಳಗಾದವಳು. ಈಕೆಯ ಮೂಲಕ ದಲಿತ ಜೀವನದ ನೋವಿನ ಸಂಗತಿಗಳನ್ನು ಕಾದಂಬರಿಕಾರರು ಹಿಡಿದಿಡಲು ಪ್ರಯತ್ನಿಸಿದ್ದಾರೆ. ಯಾವುದನ್ನು ಹೇಳಲಿ, ಯಾವುದನ್ನು ಬಿಡಲಿ ಎಂಬಷ್ಟರ ಮಟ್ಟಿಗೆ ಗಾಢ ಅನುಭವಗಳು ಇಲ್ಲಿ ಮೇಳೈಸಿವೆ. ದಲಿತರ ಅನುಭವವನ್ನು ದಲಿತನೇ ಬರೆದಾಗ ಆಗುವ ಪರಿಣಾಮವನ್ನು ಅವು ಸೂಚಿಸದೆ ಬಿಡುವುದಿಲ್ಲ. ಈ ದೃಷ್ಟಿಯಿಂದಲೂ ಇದಕ್ಕೆ ಮಾನ್ಯತೆ ಇದೆ. " ಮನಜ ಪಡೆದಿರುವ ದಟ್ಟ ವಿವರಾನುಭವ, ವ್ಯಂಗ್ಯ, ಕೆಲವೊಮ್ಮೆ ಬೆರಗುಗೊಳಿಸುವ ಸಂಯಮ, ಮಾತಿನ ಮೊನಚು, ಚಿತ್ರಕಲೆ, ಬೈಗುಳದಲ್ಲಿ ಪಲುಕುಗೊಳ್ಳುವ ಭಂಗಿ ಸಹಿತವಾದ, ಅಚ್ಚರಿಗೊಳಿಸುವ ತಣ್ಣನೆ ನಿರೂಪಣೆ ಕೆಲವೆಡೆ ತಂಪಾಗಿದ್ದರೂ ಈ ಎಲ್ಲವೂ ಈ ಕಾದಂಬರಿಯನ್ನು ಹೇರಾಸೆಯ ಕೃತಿಯನ್ನಾಗಿ ಮಾಡಿವೆ. ನಾಳೆ ಕೆಲವೊಂದು ಅಧ್ಯಯನಕ್ಕೂ ಆಹ್ವಾನ ನೀಡುವಂತಿದೆ " (ಸುಜನಾ).

ಮುಳ್ಳೂರು ನಾಗರಾಜರ ' ಮರಣ ಮಂಡಲ ಮಧ್ಯದೊಳಗೆ ' ದಲಿತ ಚಳುವಳಿಯ ಹಿನ್ನೆಲೆಯಲ್ಲಿ ರೂಪುಗೊಂಡ ಕಾದಂಬರಿ. ಶ್ರೇಣೀಕೃತ ಸಮಾಜದ ಜಾತಿ ವ್ಯವಸ್ಥೆಯನ್ನು ಮತ್ತು ಇದನ್ನು ಅತ್ಯಂತ ಗಟ್ಟಿಯಾಗಿ ವಿರೋಧಿಸುವ ಮನೋಸ್ಥಿತಿಗಳನ್ನು ಇಲ್ಲಿ ದಾಖಲಿಸಲಾಗಿದೆ. ಬಸವರಾಜ ಇಲ್ಲಿಯ ನಾಯಕ. ಹೊಲ್ಯಾರ ಸಿದ್ದಿ ಹಾಗೂ ಗೌಡರ ಚಿಕ್ಕ ಮಗ ಚಂದ್ರಪ್ಪ ಇವರ ಸಂಬಂಧ, ಹೊಟೇಲಿನ ನಿಂಗವ್ವ ದಲಿತರನ್ನು ಕಾಣುವ ರೀತಿ, ಹೊಲ್ಯಾರ ರಂಗ – ರಂಗಿಯರ ಪ್ರಕರಣ – ಇತ್ಯಾದಿ ಜೀವನದ ಹಲವು ಮುಖಗಳು ಇಲ್ಲಿ ಪ್ರಕಟಗೊಳ್ಳುತ್ತವೆ. ದಲಿತ ಪರವಾಗಿ ನಿಂತ ದ. ಸಂ. ಸ. ಕಾರ್ಯ ಚಟುವಟಿಕೆಗಳ ಇತಿಮಿತಿಗಳು ಕಾದಂಬರಿಯಲ್ಲಿ ಮೈದಾಳಿವೆ. ಕಾದಂಬರಿ ಮುಕ್ತಾಯವಾದರೂ ದಲಿತರ ಹೋರಾಟ ಮಾತ್ರ ಅಂತ್ಯ ಕಾಣುವದಿಲ್ಲ.

ಇದೂ ಸಹ ಕಾದಂಬರಿಯ ಒಳ್ಳೆಯ ಬೆಳವಣಿಗೆಯೇ. ಹೋರಾಟ ಗಟ್ಟಿಗೊಳ್ಳಬೇಕೆಂಬ ನಿಲುವನ್ನು. ಇನ್ನೂ ಮುಂದುವರಿಯಬೇಕಾದ ರೀತಿಯನ್ನು ಸೂಚಿಸುವಲ್ಲಿ ಅದು ಸಮರ್ಥವಾಗುತ್ತದೆ.

' ಬೆಳ್ಳ ', ' ಹುಲಿಗೆಮ್ಮ ', ' ಕೋಟೆ ಬಾಗಿಲು ', ' ಒಂದು ಹೆಣ್ಣಿನ ಒಳ ಜಗತ್ತು ' ಕಾದಂಬರಿಗಳನ್ನು ನೀಡಿದ್ದ ಚೆನ್ನಣ್ಣ ವಾಲೀಕಾರರು ಮುಖ್ಯ ಲೇಖಕರು. ಹೈದ್ರಾಬಾದ್ ಕರ್ನಾಟಕದ ಗ್ರಾಮೀಣ ಭಾಷೆಯನ್ನು ಕಾದಂಬರಿಗಳಲ್ಲಿ ಪರಿಚಯಿಸಿದವರು. ಮೇಲ್ಜಾತಿಯವರ ಕಾಮಪಿಪಾಸೆಗೆ ಬಲಿಯಾದ ಹೆಣ್ಣಿನ ಚಿತ್ರವನ್ನು ಇವರ ' ಹುಲಿಗೆಮ್ಮ ' ನೀಡುತ್ತದೆ. ಸವರ್ಣೀಯರ ಹೆಣ್ಣೊಬ್ಬಳ ಅಂತರಂಗವನ್ನು ಕುರಿತದ್ದು ' ಒಂದು ಹೆಣ್ಣಿನ ಒಳಜಗತ್ತು '. " ವಾಲೀಕಾರರು ದಲಿತ ಪ್ರಜ್ಞೆಯ ಹಿನ್ನೆಲೆಯಲ್ಲಿ ಪಾತ್ರಗಳನ್ನು ನೋಡದೆ ಅತೀ ಹಿಂದಿನ ಸಂಸ್ಕಾರದ ಹಿನ್ನೆಲೆಯಲ್ಲಿಯೇ ಅವುಗಳನ್ನು ಚಿತ್ರಿಸುತ್ತಾರೆ. ಹೀಗಾಗಿ ದಲಿತ ಪಾತ್ರಗಳು ದುರಂತವನ್ನು ಕಾಣುವುದು ಇವರ ಕಾದಂಬರಿಗಳ ಸಾಮಾನ್ಯ ಅಂಶ. ಇದು ಮೊದಲ ತಲೆಮಾರಿನ ದಲಿತ ಬರಹಗಾರರ ಯಥಾರ್ಥ ದರ್ಶನವೆನ್ನಬೇಕು. "[೧೪]

ಶಿವರುದ್ರ ಕಲ್ಲೋಳಿಕರ್ ದಲಿತ ಚಳುವಳಿಯಿಂದ ಬಂದವರು. ' ಹೊಲಗೇರಿಯ ರಾಜಕುಮಾರ ' ಪ್ರಥಮ ಕಾದಂಬರಿಯ ಮೂಲಕ ಸಾಕಷ್ಟು ಸುದ್ದಿಯಾದವರು. ಹೋರಾಟವೇ ಈ ಕೃತಿಯ ಪ್ರಧಾನ ಕೇಂದ್ರವಾಗಿದೆ. ನಾಯಕ ನಡೆಸುವ ಹೋರಾಟ ಆತನ ಸ್ವಂತಿಕೆಯನ್ನು ಗುರ್ತಿಸಿಕೊಳ್ಳುವಿಕೆಯ ಹೋರಾಟವೂ ಆಗಿರುವುದನ್ನು ಇಲ್ಲಿ ಗಮನಿಸಬೇಕಾಗುತ್ತದೆ. ನಿಜ ಎನ್ನಬಹುದಾದ ಘಟನೆಯೊಂದನ್ನು ಆಧರಿಸಿ ಬರೆದ ಕಾದಂಬರಿ ಇದು. ದಲಿತ ಲೇಖಕರು ಇದುವರೆಗೆ ಬರೆದ ಕಾದಂಬರಿಗಳಿಗಿಂತ ಇದು ಭಿನ್ನವಾದುದು. ಇದರ ಅನುಭವವೇ ಬೇರೆ; ಕಲ್ಪನೆ, ಸತ್ಯೇತಿಹಾಸಗಳು ಮಿಶ್ರಣಗೊಂಡು ಹೊಸ ಲೋಕವೊಂದನ್ನು ತೆರೆದಿಡುವಂಥದ್ದು. ಈ ಕಾದಂಬರಿಯಲ್ಲಿ ದಲಿತ-ದಲಿತರ ನಡುವಿನ ಸಾಂಸ್ಕೃತಿಕ ಸಂಘರ್ಷವಿರುವಂತೆ ಪರಕೀಯರ ಪ್ರವೇಶದ ಸಂಗತಿಗಳೂ ಇವೆ. ಹೊಲೆಯರ ಜಾತಿಯ ಮಹಾದೇವ ಕ್ಷತ್ರಿಯನಾಗಲು ಹವಣಿಸಿ ವಿಫಲನಾಗುತ್ತಾನೆ. ಈ ಪ್ರಸಂಗ ಇಂದು ದಲಿತರು ಸಂಸ್ಕೃತೀಕರಣ ಹೊಂದುತ್ತಿರುವುದರ ದುರಂತವನ್ನು ಸೂಚಿಸುವಂತಿದೆ. ಮಾದೇವ ಅನ್ಯ ಸಂಸ್ಕೃತಿಯನ್ನು ಆರಂಭದಲ್ಲಿ ಹೊಕ್ಕರೂ ಆತ ಮತ್ತೆ ತನ್ನ ಸಂಸ್ಕೃತಿಗೆ ಹಿಂದಿರುಗುವಲ್ಲಿ ವಿಫಲನಾಗುತ್ತಾನೆ. ಈ ನಾಯಕನ ಬೆಳವಣಿಗೆ ಮತ್ತು ದುರಂತವನ್ನು ಕಾದಂಬರಿಕಾರರು ಸೊಗಸಾಗಿ ಚಿತ್ರಿಸಿದ್ದಾರೆ. ಮಾದೇವ ಪಡುವ ಯಾತನೆಯ ಸ್ಥಿತಿಯನ್ನು ಕಾದಂಬರಿ ಸರಿಯಾಗಿಯೇ ಸೆರೆ ಹಿಡಿದಿದೆ.

ಬಿ. ಟಿ. ಲಲಿತಾನಾಯಕರು ದಲಿತ ಬಂಡಾಯದ ಚಳುವಳಿಯ ಜೊತೆಯಲ್ಲಿಯೇ ಬಂದವರಾದುದರಿಂದ ಅವರ ಕಾದಂಬರಿಗಳಲ್ಲಿ ಹೋರಾಟದ ಚಿತ್ರಣ ಸಹಜವಾಗಿಯೇ ಬರುತ್ತದೆ. ಆರಂಭದಲ್ಲಿ ಬಂದ ಅವರ ' ನೆಲೆ ಬೆಲೆ ' ಯಲ್ಲಿ ಹೆಣ್ಣಿನ ಮೇಲಾಗುತ್ತಿರುವ

ನಿರಂತರ ಶೋಷಣೆಯ ಚಿತ್ರವಿದೆ. ನಂತರ ಬಂದ ' ಗತಿ ' ಕಾದಂಬರಿಯಲ್ಲಿ ಗ್ರಾಮಾಂತರ ಪರಿಸರದ ಹೆಣ್ಣು ಅನುಭವಿಸುವ ನೋವಿನ ವಿವಿಧ ಮುಖಗಳನ್ನು ವರ್ಣಿಸಲಾಗಿದೆ. " ಗೊಡ್ಡು ಸಂಪ್ರದಾಯಗಳು, ಕಂದಾಚಾರ ಪದ್ಧತಿಗಳು, ಜೀವ ವಿರೋಧಿ ಮೂಢನಂಬಿಕೆಗಳು, ದೇವರು ಧರ್ಮದ ಹೆಸರಿನಲ್ಲಿ ಶೋಷಿಸುವ ಪುರೋಹಿತ ಶಾಹಿ, ಅನಕ್ಷರತೆ, ಬಡತನ, ದಾರಿದ್ರ್ಯ – ಇವೆಲ್ಲವುಗಳನ್ನು ಲಲಿತಾನಾಯಕ ಹೃದಯಂಗಮವಾಗಿ ನಿರೂಪಿಸಿದ್ದಾರೆ. "

ದಲಿತರ ಮುಗ್ಧತೆಯ ಬಗೆಗೆ ಸಾಕಷ್ಟು ಕತೆಗಳನ್ನು ರಚಿಸಿದ ಗೀತಾ ನಾಗಭೂಷಣ ಅವರು ಕಾದಂಬರಿ ರಚನೆಯಲ್ಲೂ ಹೆಸರು ಮಾಡಿದವರು. ಮಹಿಳೆಯರ ಹಲವಾರು ಸಮಸ್ಯೆಗಳು ' ಮಾಪುರ ತಾಯಿಯ ಮಕ್ಕಳು ', ' ಜೋಗಿಣಿ ', ' ಕ್ಷಿತಿಜ ', ' ದುಮ್ಮಸ್ಸು , ' ಆಸರೆಗಳು ', ' ನೋವು ', ' ಬದುಕು ' – ಈ ಕೃತಿಗಳಲ್ಲಿ ಕಾಣಿಸಿಕೊಂಡಿವೆ. ಹಸಿವು ಮತ್ತು ಕಾಮದ ಸಂಗತಿಗಳು ಇವರ ಕಾದಂಬರಿಗಳಲ್ಲಿ ಹೆಚ್ಚು ಚರ್ಚೆಗೊಳಪಟ್ಟಿವೆ. ' ಹಸಿ ಮಾಂಸ ಮತ್ತು ಹದ್ದುಗಳು ' ಕಾದಂಬರಿ ಈ ಮಾತಿಗೆ ಹೊರತಾಗಿಲ್ಲ.

ಹೀಗೆ ದಲಿತ ಕಾದಂಬರಿಗಳು ದಲಿತ ಸಮಾಜದ ವಿವಿಧ ಆಯಾಮಗಳನ್ನು ಗ್ರಹಿಸಿದ್ದಲ್ಲದೆ ಪ್ರಾದೇಶಿಕ ಭಾಷೆಯಲ್ಲಿ ಅದನ್ನು ಅಭಿವ್ಯಕ್ತಿಸಲು ಪ್ರಯತ್ನಿಸಿದವು. ಸಾಂಸ್ಕೃತಿಕ ಸಂಘರ್ಷದ ವಿಶ್ಲೇಷಣೆಯಲ್ಲಿಯೂ ಅವು ತೊಡಗುತ್ತಾ ಬಂದಿವೆ. ದಲಿತರ ಜಾಗೃತಿಯನ್ನು, ಸ್ಥಿತ್ಯಂತರಗೊಳ್ಳುತ್ತಿರುವ ಸಂದರ್ಭದಲ್ಲಿ ಸಮಾಜದ ಸಮಸ್ಯಾತ್ಮಕ ನೆಲೆಗಳನ್ನು ಈ ಕಾದಂಬರಿಗಳು ಅತ್ಯಂತ ಪರಿಣಾಮಕಾರಿಯಾಗಿಯೇ ಚಿತ್ರಿಸಿವೆ. ಗ್ರಾಮ್ಯ ಭಾಷೆಯನ್ನಂತೂ ಬಹುತೇಕ ಲೇಖಕರು ಬಳಸಿಕೊಂಡಿದ್ದಾರೆ. ಆದರೆ ನಮ್ಮ ವಿಮರ್ಶಕರು ದೇವನೂರರ ಭಾಷಾ ಪ್ರಯೋಗದ ಬಗ್ಗೆ ಪ್ರೀತಿ, ಮಮತೆ ವ್ಯಕ್ತಪಡಿಸಿದಂತೆ ಬೇರೆ ಲೇಖಕರ ಬಗೆಗೆ ವ್ಯಕ್ತಪಡಿಸದಿರುವುದು ಆಶ್ಚರ್ಯಕರ ಸಂಗತಿ !

**ನಾಟಕ :**

ಮರಾಠಿ ದಲಿತ ರಂಗಭೂಮಿಯ ಸಾಧನೆಗಳನ್ನು ಗಮನಿಸಿ ಕನ್ನಡ ದಲಿತ ರಂಗಭೂಮಿಗೆ ಬಂದರೆ ಓದುಗರಿಗೆ ಭಾರೀ ನಿರಾಶೆ ಕಾದಿರುತ್ತದೆ. ದಲಿತ ವಸ್ತುವನ್ನಾಧರಿಸಿದ ' ಶೂದ್ರ ತಪಸ್ವಿ ', ' ಜಲಗಾರ ', ' ಬೆರಳ್ಗೆ ಕೊರಳ್ ' (ಕುವೆಂಪು), ಏಕಲವ್ಯ (ಕೈಲಾಸಂ) – ಈ ನಾಟಕಗಳನ್ನು ಬಿಟ್ಟರೆ ನಮ್ಮಲ್ಲಿ ದಲಿತ ಪ್ರಜ್ಞೆಯ ನಾಟಕಗಳು ಬಂದಿರುವುದು ತೀರಾ ಕಡಿಮೆ. ೭೦ ರ ದಶಕದಲ್ಲಿ ದಲಿತ ಪ್ರಜ್ಞೆಯ ನಾಟಕಗಳು ರಂಗಭೂಮಿಯನ್ನು ಪ್ರವೇಶಿಸಿದವು ನಿಜ. ' ಪತ್ರೆ ಸಂಗಪ್ಪನ ಕೊಲೆ ', ' ಶೇಷಗಿರಿಯಪ್ಪನ ಕೊಲೆ ' ಘಟನೆಗಳನ್ನು ಆಧರಿಸಿದ ಬೀದಿ ನಾಟಕಗಳು ಹುಟ್ಟಿಕೊಂಡವು. ಇವು ಆ ಸಂದರ್ಭದಲ್ಲಿ ದಲಿತ ಲೋಕದ ಪ್ರಮುಖ ನಾಟಕಗಳು. ದಲಿತ ಜನಾಂಗವನ್ನು ಜಾಗೃತಗೊಳಿಸಲು ಅವರ ಭಾಷೆ, ಸಮಸ್ಯೆಯಲ್ಲಿ ಮಾಡಿದ ಕಾರ್ಯ ಇದಾಗಿತ್ತು. ಸಿದ್ಧಲಿಂಗಯ್ಯನವರ ' ಏಕಲವ್ಯ ', ' ಪಂಚಮ – ನೆಲಸಮ '

ನಾಟಕಗಳು ದಲಿತರ ಬಾಳಿನ ಆಧುನಿಕ ಸಮಸ್ಯೆಗಳನ್ನು ಹೇಳುತ್ತವೆ. ' ಕತ್ತೆ ಮತ್ತು ಧರ್ಮ '. ' ಅಲ್ಲೆ ಕುಂತವರೆ ', ' ಕೊಲೆಯ ಹಿಂದಿನ ರಾತ್ರಿಗಳು ' – ಮೊದಲಾದ ಕವಿತೆಗಳು ಬೀದಿ ನಾಟಕಗಳಾಗಿ ಜನಪ್ರಿಯವಾದವು. ವರ್ಣ ಹೋರಾಟದಿಂದ ಆರಂಭವಾಗುವ ದಲಿತ ಸಾಹಿತ್ಯ, ವರ್ಗ ಹೋರಾಟಕ್ಕೆ ಬಂದು ನಿಲ್ಲಬೇಕೆಂಬುದನ್ನು ತಿಳಿಸುವ ಸಿದ್ಧಲಿಂಗಯ್ಯನವರ ಕೃತಿಗಳು ದಲಿತ ರಂಗಭೂಮಿಯ ಮಹತ್ವದ ಕೊಡುಗೆಗಳಾಗಿವೆ. ದೇವನೂರ ಮಹಾದೇವ ಅವರ ' ಒಡಲಾಳ ', ' ಕುಸುಮಬಾಲೆ '. ' ಒಂದು ದಹನದ ಕತೆ ' ಇತ್ಯಾದಿಗಳು ರಂಗರೂಪಗಳಾಗಿ ಹಲವಾರು ಕಡೆ ಪ್ರದರ್ಶನಗೊಂಡಿವೆ. ಸತ್ಯಾನಂದ ಪಾತ್ರೋಟರ ' ಮತ್ತೊಬ್ಬ ಏಕಲವ್ಯ ' ಮತ್ತು ' ಯಾರೂ ಇಲ್ಲೋಯಪ್ಪಾ ನಮಗ ಸಾಕ್ಷಿ ' – ಇವೂ ಸಹ ಗಮನಿಸಬೇಕಾದ ನಾಟಕಗಳು. ಸಮಾಜದ ಏರು ಪೇರುಗಳನ್ನು ಹಾಗೂ ದಲಿತ ಲೋಕದ ಸಮಸ್ಯೆಗಳನ್ನು ತೆಗೆದುಕೊಂಡು ಜಾನಪದೀಯ ಲೇಪದಿಂದ ನಾಟಕ ರಚಿಸಿದವರಲ್ಲಿ ಚೆನ್ನಣ್ಣ ವಾಲೀಕಾರರು ಪ್ರಮುಖರು. ವೇಶ್ಯಾ ಸಮಸ್ಯೆಯ ' ಟೊಂಕದ ಕೆಳಗಿನ ಜನ '. ದೇವದಾಸಿ ಪದ್ಧತಿಯ ' ಜೋಗತಿ '. ಭೂಮಿ ವಿವಾದದ ' ಜನವಂಬ ಆಸ್ತಿ ' ಮೊದಲಾದ ನಾಟಕಗಳು ಗಮನಾರ್ಹ. ಜಾತಿಯ ಕ್ರೂರ ಸಂಕೋಲೆಗಳಿಂದಾಗುವ ಪರಿಣಾಮಗಳನ್ನು ಬಿ. ಚಿನ್ನಸ್ವಾಮಿಯವರು ' ಕೆಂಡಮಂಡಲ ' ದಲ್ಲಿ ಅಭಿವ್ಯಕ್ತಿಸಿದ್ದಾರೆ. ಜಮೀನ್ದಾರಿ ಪದ್ಧತಿ ಹಾಗೂ ಜಾತಿ ವ್ಯವಸ್ಥೆಯ ವಿರುದ್ಧ ಬಂಡೇಳುವ ' ಚಾಜ ' ಎಂಬ ನಾಟಕವನ್ನು ಮಲ್ಲಿಕಾ ಘಂಟಿಯವರು ರಚಿಸಿದ್ದಾರೆ. ಸಿದ್ಧನಗೌಡ ಪಾಟೀಲರು ಇದರ ಬೆನ್ನುಡಿಯಲ್ಲಿ ಹೀಗೆ ಬರೆದಿದ್ದಾರೆ : " ದಲಿತರು ಸೇಡು ತೀರಿಸಿಕೊಳ್ಳಬೇಕಾಗಿದ್ದು ಮೇಲ್ಜಾತಿ ಜನರ ಮೇಲಲ್ಲ. ಜಾತಿ ವ್ಯವಸ್ಥೆಯ ವಿರುದ್ಧ, ' ಚಾಜ ' ದ ಹೆಸರಿನಲ್ಲಿ ದಬ್ಬಾಳಿಕೆ ವಿರುದ್ಧ. – ಎಂದು ಹೇಳುವ ಈ ನಾಟಕ, ಮೇಲ್ಜಾತಿಯ ಬಡವರೂ ದಲಿತರೂ, ಪುರುಷ ವ್ಯವಸ್ಥೆಯಲ್ಲಿ ನರಳುತ್ತಿರುವ ಎಲ್ಲಾ ಜಾತಿಯ ಮಹಿಳೆಯರೂ, ಈ ವರ್ಗ ವ್ಯವಸ್ಥೆಯ ವಿರುದ್ಧ ಸಂಘಟಿತ ಹೋರಾಟಕ್ಕಿಳಿಯಬೇಕೆಂಬ ಭವಿಷ್ಯತ್ತಿನ ಕರೆ, ಆಶಯವನ್ನು ಹೊಂದಿ ಮುಕ್ತಾಯಗೊಳ್ಳುತ್ತದೆ. " ಇತ್ತೀಚೆಗೆ ಅರವಿಂದ ಮಾಲಗತ್ತಿಯವರಿಂದ ' ಸಮುದ್ರದೊಳಗಣ ಉಪ್ಪು ' ನಾಟಕ ಹೊರಬಂದಿದೆ. ಮೀಸಲಾತಿಯನ್ನು ಕುರಿತ ವೈಚಾರಿಕ ನಾಟಕವಿದು. ವಸ್ತುವಿನ ವಿಭಿನ್ನ ಮುಖಗಳನ್ನು ತೆರೆದಿಡುವ ಈ ನಾಟಕದಲ್ಲಿ ಪಾತ್ರಗಳು ಪ್ರಧಾನವಲ್ಲ, ವಿಚಾರವೇ ಪ್ರಧಾನವಾಗಿದೆ. " ಅಸ್ಪೃಶ್ಯತೆ, ನಗರ ಮತ್ತು ಗ್ರಾಮದ ಪರಿಕಲ್ಪನೆಗಳು, ಪ್ರೀತಿ-ಪ್ರೇಮಗಳ ಮಧುರ ಬಾಂಧವ್ಯಗಳನ್ನು ಒಂದೆಡೆ ತೋರಿಸಿದರೆ, ಸಾಮಾಜಿಕ ವಿಘಟನೆಯನ್ನು ಮತ್ತೊಂದೆಡೆಗೆ ತೋರಿಸುತ್ತದೆ. ಇದಲ್ಲದೆ ಇದು ರಾಜಕೀಯ ಕುತಂತ್ರಗಳು, ಧರ್ಮದ ಒಳ ಸಂಘರ್ಷಗಳು, ಕೌಟುಂಬಿಕ ಬಿಕ್ಕಟ್ಟುಗಳು ಮುಖಕ್ಕೆ ರಾಚುವಂತೆ ಮುಂದಿಡುವ ಸಂಪೂರ್ಣ ಹೊಸ ಆವಿಷ್ಕಾರದ ನಾಟಕವಾಗಿದೆ. "

ಮನಜ ಅವರು ' ಜಲ ' ನಾಟಕದ ಮೂಲಕ ೨೦೦೦ ವರ್ಷಗಳಷ್ಟು ಹಳೆಯದಾದ, ಬುದ್ಧನಿಗೆ ಸಂಬಂಧಿಸಿದ ಅಜ್ಞಾತವಾದೊಂದು ಕತೆಯನ್ನು ಬೆಳಕಿಗೆ

ತಂದಿದ್ದಾರೆ. ನೀರಿಗೆ ಸಂಬಂಧಿಸಿದ ವಿಚಾರ ಸರಣಿಯನ್ನು ಪ್ರಸ್ತುತ ನಾಟಕ ಒಳಗೊಂಡಿದೆ. ದೊರೆ ಶುದ್ಧೋದನನ ಶಾಕ್ಯ ಸಾಮ್ರಾಜ್ಯ ಮತ್ತು ಅನ್ಯ ನೆರೆ ರಾಜ್ಯವಾದ ಕೊಲಿಯ ಸಾಮ್ರಾಜ್ಯ – ಈ ಎರಡರ ಗಡಿಯಲ್ಲಿ ರೋಹಿಣಿ ನದಿ ಹರಿಯುತ್ತಿರುತ್ತದೆ. ಇದರ ನೀರಿನ ಭಾಗದ ವಿಚಾರದಲ್ಲಿ ಎರಡೂ ಸಾಮ್ರಾಜ್ಯಗಳ ನಡುವೆ ಯುದ್ಧವೇ ಏರ್ಪಡುತ್ತದೆ. ಈ ವಿಷಯ ಗೌತಮನಿಗೂ ತಿಳಿದಿರುತ್ತದೆ. ಆ ವೇಳೆಗೆ ಆತನಿಗೆ ಶಾಕ್ಯ ಸಂಘದ ಬೋಧನೆಯಾಗಿರುತ್ತದೆ. ಆದರೂ ನೀರಿನ ವಿಷಯದಲ್ಲಿ ಮುಂದೆಂದೂ ಜಗಳವಾಗಬಾರದು, ಅದನ್ನು ತಡೆಹಿಡಿಯಬೇಕು ಎಂಬ ನಿರ್ಧಾರವನ್ನು ಗೌತಮ ತಾಳುತ್ತಾನೆ. ಆದರೆ ಯುದ್ಧ ಆರಂಭವಾಗೇ ಬಿಡುತ್ತದೆ. ಅದಕ್ಕೆ ಮುಂಚೆ ನಡೆಯುವ ತುರ್ತು ಸಭೆಯಲ್ಲಿ ಈತ ಸಮರವನ್ನು ವಿರೋಧಿಸುವುದರ ಜೊತೆಗೆ ಜಲ ವಿವಾದವನ್ನು ಮಾತುಕತೆಯ ಮೂಲಕವೇ ಬಗೆಹರಿಸಿಕೊಳ್ಳಬೇಕು ಎಂಬ ಸಲಹೆ ನೀಡುತ್ತಾನೆ. ಆದರೆ ಶಾಕ್ಯ ಮಹಾಮಂತ್ರಿ ಉದಯನ್, ಕಪಿಲವಸ್ತುವಿನ ಆಡಳಿತಾಧಿಕಾರಿ ನೀತಿಚಂದ್ರ, ಸೇನಾಪತಿ ಯೋಧನೇತ – ಈ ಮೂವರಿಂದ ಗೌತಮನ ಸಲಹೆಗಳು ಕಾರ್ಯರೂಪಕ್ಕೆ ಬಾರದಂತೆ ಪಿತೂರಿ ನಡೆಯುತ್ತದೆ. ಗೌತಮನ ಮೇಲೆ ದೇಶದ್ರೋಹ ಮತ್ತು ಸ್ವಜನ ಪಕ್ಷಪಾತದ ಆರೋಪ ಹೊರಿಸುತ್ತಾರೆ. ಯಾಕೆಂದರೆ ಶಾಕ್ಯರ ನೀತಿ ಸಂಹಿತೆ ಪ್ರಕಾರ ಜೀವ, ಜಲ, ನೆಲ ರಕ್ಷಣೆ ಪ್ರತಿಯೊಬ್ಬ ಶಾಕ್ಯನ ಕರ್ತವ್ಯವಾಗಿರುತ್ತದೆ. ಗೌತಮ ಇವುಗಳ ವಿರುದ್ಧವಾಗಿದ್ದಾನೆಂದು ಆರೋಪ ಮಾಡುತ್ತಾರೆ. ಇದರ ಫಲವಾಗಿ ಗೌತಮನಿಗೆ ಒದಗುವುದು ಗಡೀಪಾರು ಶಿಕ್ಷೆ. ಎಲ್ಲಿ ತಮಗೆ ತೊಂದರೆಯಾಗುತ್ತದೋ ಎಂಬ ಭಯದಿಂದ ಆ ಶಿಕ್ಷೆಯನ್ನು ಶಾಕ್ಯ ಪಾರ್ಲಿಮೆಂಟ್ ತಕ್ಷಣ ವಿಧಿಸುವುದಿಲ್ಲ. ಕೆಲಕಾಲ ಅವರು ಮುಂದೂಡಿದರೂ ಗೌತಮನೇ ' ಭಿಕ್ಷಾಟನಾ ಸನ್ಯಾಸವನ್ನು ' ಸ್ವೀಕರಿಸುತ್ತಾನೆ. ತದನಂತರ ಈ ಸಮಸ್ಯೆ ಬೇರೆ ಬೇರೆ ತಿರುವುಗಳನ್ನು ಪಡೆದುಕೊಳ್ಳುತ್ತದೆ.

ಬುದ್ಧನನ್ನು ಕುರಿತಂತೆ ಹಲವು ರೀತಿಯ ಸಾಹಿತ್ಯ ಪ್ರಕಟವಾಗಿದೆ. ಅದಾವುದೂ ಕೊಡದೆ ಇರುವಂಥ ಸಂಗತಿಯನ್ನು, ಚಿಂತನೆಯನ್ನು ಪ್ರಸ್ತುತ ನಾಟಕ ಕೊಡುತ್ತಿರುವುದೇ ' ಜಲ ' ನಾಟಕದ ಗ್ರೇಟ್‌ನೆಸ್. ಯಾಕೆಂದರೆ ಇದುವರೆಗೆ ಗೌತಮನಿಗೆ ವೈರಾಗ್ಯ ಬರಲು ಸಾವು, ಮುಪ್ಪು ಮತ್ತು ರೋಗ ರುಜಿನ – ಈ ಮೂರೇ ಕಾರಣಗಳೆಂದು ಹೇಳುತ್ತಾ ಬಂದಿದ್ದಾರೆ. ತನ್ನ ೨೧ ನೇ ವಯಸ್ಸಿನಲ್ಲಿಯೇ ವೈರಾಗ್ಯ ತಾಳಿ, ಹೆಂಡತಿ, ಮಕ್ಕಳನ್ನು ಬಿಟ್ಟು ಕಾಡಿಗೆ ತೆರಳಿದನೆಂಬ ವಿಷಯವನ್ನು ಬಹುತೇಕ ಎಲ್ಲಾ ಭಾಷೆಯಲ್ಲೂ ಕಾಣುತ್ತೇವೆ. " ಬುದ್ಧನು ಒಬ್ಬ ಮೃತ ವ್ಯಕ್ತಿಯನ್ನು, ಒಬ್ಬ ರೋಗಿಷ್ಠನನ್ನು, ಮತ್ತೊಬ್ಬ ವೃದ್ಧನನ್ನು ನೋಡಿದ್ದರಿಂದಲೇ ಆತನಲ್ಲಿ ವೈರಾಗ್ಯ ಉಂಟಾಯಿತೆಂದು ಸಾಂಪ್ರದಾಯಿಕ ಚರಿತ್ರೆಯ ಉದ್ದಕ್ಕೂ ಹೇಳಲಾಗಿದೆ. ತನ್ನ ೨೧ ನೆಯ ವಯಸ್ಸಿನವರೆಗೂ ಆತ ಸತ್ತವರನ್ನು, ರೋಗಿಗಳನ್ನು, ವೃದ್ಧರನ್ನು ನೋಡಿಯೇ ಇರಲಿಲ್ಲವೆನ್ನುವ ಈ ಚರಿತ್ರೆಯನ್ನು ನಂಬುವುದಾದರೂ ಹೇಗೆ ? ಎಂಬ ಅಂಬೇಡ್ಕರರ ಪ್ರಶ್ನೆ ಸಮಂಜಸವಾದದ್ದೆ." ಗೌತಮನ ಜೀವನ, ತಿಳಿದಷ್ಟು ಸರಳವಾದುದಲ್ಲ. ಅದು ಹಲವಾರು ಸಾಂಸ್ಕೃತಿಕ ಸಂಗತಿಗಳಿಂದ ಕೂಡಿರುವಂಥದ್ದು. ಜೊತೆಗೆ ಜೀವನದ ಗಂಭೀರ

ಸವಾಲುಗಳನ್ನು ಗರ್ಭೀಕರಿಸಿಕೊಂಡಿರುವಂಥದ್ದು. ಇದೆಲ್ಲ 'ಜಲ' ನಾಟಕದಲ್ಲಿ ಅಡಕವಾಗಿದೆ ಎಂದೇ ಹೇಳಬಹುದು.

ಅಂಬೇಡ್ಕರ್ ಅವರನ್ನು ಕುರಿತಂತೆ ಹಲವರು ಕವಿತೆಗಳನ್ನು ಬರೆದಿದ್ದಾರೆ. ನಾಟಕಗಳು ಬಂದಿರುವುದು ಕಡಿಮೆ. ಟಿ. ಎಂ. ಭಾಸ್ಕರ್ ನೀರಿಗಾಗಿ ಅಂಬೇಡ್ಕರ್ ನಡೆಸಿದ ಹೋರಾಟವನ್ನು ಕುರಿತಂತೆ 'ನೀರು ಬೇಕು ನೀರು' ಎಂಬ ನಾಟಕವನ್ನು ರಚಿಸಿದ್ದಾರೆ. ಭಾಷೆ ಶಿಷ್ಟವೆನಿಸಿದರೂ ಶೈಲಿ, ತಂತ್ರ, ನಿರೂಪಣೆ ಸಮರ್ಥವಾಗಿ ಮೂಡಿಬಂದಿವೆ.

## ವಿಚಾರ ಸಾಹಿತ್ಯ :

ದಲಿತ ಚಳುವಳಿಯ ಸಂದರ್ಭದಲ್ಲಿ ಮತ್ತು ಅದರ ಪ್ರತ್ಯುತ್ಪನ್ನವಾಗಿ ಬಂದ ದಲಿತ ಸಾಹಿತ್ಯದ ಸಂದರ್ಭದಲ್ಲಿ ಚಿಂತನಾಲಹರಿಯೇ ಹರಿದುಬಂತು. ದೇಸಿ ನೆಲೆಯ ಹೊಸ ಹೊಸ ವಿಷಯಗಳು ಚರ್ಚೆಗೊಳಪಟ್ಟವು. ಜಾತಿನೆಲೆಯಲ್ಲಿ, ಸೈದ್ಧಾಂತಿಕ ನೆಲೆಯಲ್ಲಿ ಸಮಕಾಲೀನ ಸಂದರ್ಭಕ್ಕೆ ಅನ್ವಯಿಸಿ ಹೇಳುವ ವಿಚಾರವಾದ ಕಂಗೊಳಿಸಿತು. ಶೂದ್ರ, ದಲಿತ, ಮಹಿಳಾ ಪ್ರಜ್ಞೆಗಳು ಕೆಲಸ ಮಾಡಿದವು. ದಲಿತ ಚಳುವಳಿಯ ಮೇಲೆ ಲೋಹಿಯಾ, ಮಾರ್ಕ್ಸ್, ಅಂಬೇಡ್ಕರ್ ವಾದಗಳ ಪ್ರಭಾವವಾಗಿದ್ದರೂ ಅಂಬೇಡ್ಕರ್ ವಿಚಾರಧಾರೆ ದಲಿತ ಲೇಖಕರಲ್ಲಿ ಬಹಳ ಪ್ರಮುಖವಾಗಿ ಕೆಲಸ ಮಾಡಿತು. ಪರಂಪರಾಗತ ಮೌಲ್ಯಗಳ ಪುನರ್ ವಿಮರ್ಶೆಯೇ ನಡೆಯಿತು. ಬಹುಮುಖೀ ನೆಲೆಯಲ್ಲಾದ ಬದಲಾವಣೆಯ ಫಲವಾಗಿ, ಆ ಮೂಲಕ ಮೂಡಿದ ವಿಚಾರಕ್ರಾಂತಿಯ ಫಲವಾಗಿ ಹಲವಾರು ವೈಚಾರಿಕ ಕೃತಿಗಳು ಹೊರಬಂದವು. 'ಮತಾಂತರ ಮತ್ತು ಇತರ ಲೇಖನಗಳು' (ವಿ. ಮುನಿವೆಂಕಟಪ್ಪ), 'ದಲಿತ ಯುಗ ಮತ್ತು ಕನ್ನಡ ಸಾಹಿತ್ಯ', 'ದಲಿತ ಸಾಹಿತ್ಯ ಚಳುವಳಿಯ ತಾತ್ವಿಕ ಚಿಂತನೆ' (ಅರವಿಂದ ಮಾಲಗತ್ತಿ), 'ಹೊಸ ಅಲೆ' (ಸಿ. ಪಿ. ಸಿದ್ಧಾಶ್ರಮ), 'ಕರ್ನಾಟಕ ದಲಿತ ಚಳುವಳಿ ಮತ್ತು ಅಂಬೇಡ್ಕರ್', 'ಸಾಂಕೇತಿಕ' (ಚಾಂಡಾಳ), 'ದಲಿತ ಲೋಕದೊಳಗೆ' (ಎಲ್. ಹನುಮಂತಯ್ಯ), 'ದಲಿತ ವರ್ಗದ ಶರಣರು ಮತ್ತು ಶರಣೆಯರು : ಒಂದು ಅಧ್ಯಯನ' (ಮನಜ), 'ಅಧ್ಯಯನ' (ರಾಜೇಂದ್ರ ಚೆನ್ನಿ), 'ದಲಿತ ಜಗತ್ತು' (ಪುರುಷೋತ್ತಮ ಬಿಳಿಮಲೆ), 'ದಲಿತ ಸಾಹಿತ್ಯ ಮತ್ತು ಇತರ ಲೇಖನಗಳು' (ದೇವಯ್ಯ ಹರವೆ), 'ಹಕ್ಕಿನೋಟ' (ಸಿದ್ಧಲಿಂಗಯ್ಯ) – ಇನ್ನೂ ಮುಂತಾದ ಕೃತಿಗಳನ್ನು ಇಲ್ಲಿ ಹೆಸರಿಸಬಹುದು.

## ಆತ್ಮಕಥೆ :

ಮರಾಠಿ ಸಾಹಿತ್ಯದಲ್ಲಿ ಬಂದಿರುವಷ್ಟು ದಲಿತ ಲೇಖಕರ ಆತ್ಮಕಥೆಗಳು ಕನ್ನಡದಲ್ಲಿ ಬಂದಿಲ್ಲ. ಗಿರಡ್ಡಿಯವರ "ನಮ್ಮ ದಲಿತರಿಗೆ ಇಂಥ ದಾರುಣ ಅನುಭವಗಳು ಇಲ್ಲವೇ ? ತಮ್ಮ ಅವಮಾನಗಳನ್ನು ಅವರು ಮುಚ್ಚಿಟ್ಟುಕೊಂಡಿದ್ದಾರೆಯೇ ? ಅವುಗಳನ್ನು ಹೇಳಿಕೊಂಡರೆ ತಮ್ಮ ಪ್ರತಿಷ್ಠೆಗೆ ಕುಂದಾದೀತೆಂಬ ಭಯವೇ ? ಅವರಲ್ಲಿ ಸಿಟ್ಟೇನೋ ಸಾಕಷ್ಟಿದೆ. ಆದರೆ ಆ ಸಿಟ್ಟಿನ ಕಾರಣ ಸಾಮಾನ್ಯೀಕರಿಸಿದ್ದೇ ಹೊರತು ವೈಯಕ್ತಿಕ ಅನುಭವದಲ್ಲಿ ಕುದ್ದು

ಗಟ್ಟಿಯಾದುದಲ್ಲ. ಅವರು ತಮ್ಮ ಸಿಟ್ಟಿನ ಅಭಿವ್ಯಕ್ತಿಗಾಗಿ ಇನ್ನೂ ಸಾಂಪ್ರದಾಯಿಕ ಸಾಹಿತ್ಯ ಪ್ರಕಾರಗಳಲ್ಲಿಯೇ ತಡಕಾಡುತ್ತಿದ್ದಾರೆ. ಮರಾಠಿ ದಲಿತ ಲೇಖಕರಂತೆ ತಮ್ಮ ವಿಶಿಷ್ಟ ನೋವಿನ ಅಭಿವ್ಯಕ್ತಿಗಾಗಿ ವಿಶಿಷ್ಟ ಸಾಹಿತ್ಯ ಪ್ರಕಾರವೊಂದನ್ನು ರೂಪಿಸಿಕೊಳ್ಳಲು ಯತ್ನಿಸುತ್ತಿಲ್ಲ''. – (ಪ್ರಜಾವಾಣಿ ೧೦-೦೧-೯೩, ಪುಟ ೫) ಎಂಬ ಮಾತು ನಿಜ.

ಅಲ್ಲಲ್ಲಿ ತಮ್ಮ ಬರಹಗಳಲ್ಲಿ ದಲಿತ ಲೇಖಕರು ವೈಯಕ್ತಿಕ ವಿಚಾರಗಳನ್ನು ಹೇಳಿಕೊಂಡಿದ್ದಾರೆ. 'ಮತಾಂತರ ಮತ್ತು ಇತರ ಲೇಖನಗಳು' ಕೃತಿಯಲ್ಲಿ ಮುನಿವೆಂಕಟಪ್ಪ ಅವರು 'ಅಂತ್ಯಜನ ಆತ್ಮಕಥೆ' ಎಂಬ ಶೀರ್ಷಿಕೆಯಡಿಯಲ್ಲಿ ಹಲವಾರು ವಿಚಾರಗಳನ್ನು ಪ್ರಸ್ತಾಪಿಸುತ್ತಾರೆ. 'ಕಾಡು ಕಣಿವೆಯ ಹಕ್ಕಿ' ಕವನ ಸಂಕಲನದ 'ಸತ್ತ ನಾಯಿ ಅಪ್ಪ ನಾನು', 'ಹಸಿವು ಮತ್ತು ಅವಮಾನ' ಕವಿತೆಗಳಲ್ಲಿ ಮುನಿವೆಂಕಟಪ್ಪನವರ ಬಾಲ್ಯದ ಕೆಲವು ಘಟನೆಗಳಿವೆ. ಇವೆಲ್ಲ ಪುಸ್ತಕದ ರೂಪ ಹೊಂದಬೇಕಾಗಿದೆ.

ಸಿದ್ಧಲಿಂಗಯ್ಯನವರು 'ಅವತಾರಗಳು' ಕೃತಿಯಲ್ಲಿ ತಮ್ಮ ವೈಯಕ್ತಿಕ ವಿಚಾರಗಳನ್ನು ಹಾಸ್ಯದ ಲೇಪದೊಂದಿಗೆ ಹರಿಯಬಿಟ್ಟಿದ್ದಾರೆ. ಪೂರ್ಣ ಪ್ರಮಾಣದಲ್ಲಿ ಬಂದಿರುವ ಆತ್ಮಚರಿತ್ರೆಗಳು ಎಂದು ಕರೆಸಿಕೊಳ್ಳುವ ಕೃತಿಗಳೆಂದರೆ ಅರವಿಂದ ಮಾಲಗತ್ತಿಯವರ 'ಗೌರ್ಮೆಂಟ್ ಬ್ರಾಹ್ಮಣ'. ಸಿದ್ಧಲಿಂಗಯ್ಯನವರ 'ಊರುಕೇರಿ', ರಾಮಯ್ಯನವರ 'ಮಣೇಗಾರ'. ಗೋವಿಂದರಾಜು ಅವರ 'ಮನವಿಲ್ಲದವರ ಮಧ್ಯೆ.' ಅರವಿಂದ ಮಾಲಗತ್ತಿಯವರ ಆತ್ಮಕಥೆಯಲ್ಲಿ ಒಂದು ವಯೋಮಾನದ ಪ್ರೀತಿ-ಪ್ರೇಮದ ವಿವರಗಳೇ ವಿಜೃಂಭಿಸಿಬಿಟ್ಟಿವೆ. ಆತ್ಮಚರಿತ್ರೆ ಯಾರದ್ದೇ ಆಗಲಿ ಅದರಲ್ಲಿ ಯಾವಾಗಲೂ ವೈಯಕ್ತಿಕ ವಿಷಯಗಳ ಜೊತೆಜೊತೆಯಲ್ಲಿಯೇ ಸಾಮುದಾಯಿಕ, ಸಾಂಸ್ಕೃತಿಕ ವಿವರಗಳೂ ಚಿತ್ರಗೊಳ್ಳುತ್ತಿರಬೇಕು. ಹೀಗೆ ಜೊತೆಗೂಡಿ ಬಂದಾಗಲೇ ಅದಕ್ಕೆ ಬೆಲೆ ಸಿಗುವುದು. ಕುವೆಂಪು ಅವರ 'ನೆನಪಿನ ದೋಣಿ'ಯಲ್ಲಿ ಕೇವಲ ಅವರ ಸ್ವಂತ ವಿಚಾರಗಳಿಲ್ಲ. ಅದೊಂದು ಶೂದ್ರಾಂದೋಲನ ಚರಿತ್ರೆ ಎಂಬಂತಿದೆ. ಅದರಂತೆ ದಲಿತರ ಆತ್ಮಕಥೆಗಳು ದಲಿತಾಂದೋಲನದ ಚರಿತ್ರೆಯಾಗಬೇಕಿತ್ತು. ಅಂಥ ಕೆಲಸವನ್ನು ಈಗ ಬಂದಿರುವ ಆತ್ಮಚರಿತ್ರೆಗಳು ಮಾಡಲಿಲ್ಲ. ಅನುಭವಗಳು ಮಾಗುವ ಮುನ್ನವೇ ದಲಿತರು ಆತ್ಮಕಥೆ ಬರೆಯಲು ಹೊರಟರು. ಈ ರೀತಿ ಬರೆಯಲು ತೊಡಗಿದ್ದೇ ತುಂಬ ಆತುರ. ಈಗ ಬಂದಿರುವ ದಲಿತ ಲೇಖಕರ ಆತ್ಮಚರಿತ್ರೆಗಳು ಜೀವನದ 'ಒಡ್ಡು'ಗಳಿದ್ದಂತೆ. ಟಾಲ್‌ಸ್ಟಾಯ್, ಮಾಕ್ಸಿಂಗಾರ್ಕಿ, ಕುವೆಂಪು ಮೊದಲಾದವರ ಆತ್ಮಚರಿತ್ರೆಗಳು ಬೃಹತ್ 'ಅಣೆಕಟ್ಟು'ಗಳಿದ್ದಂತೆ. ಅವರ ಜೀವನಾನುಭವಗಳು ಮಹಾನದಿ ಇದ್ದಂತೆ. ಅದಕ್ಕಾಗಿ ಇವಕ್ಕೆ ಭಾರೀ ಅಣೆಕಟ್ಟುಗಳೇ ಬೇಕಾಯಿತು. ಆದರೆ ಈ ದಲಿತ ಲೇಖಕರ ಅನುಭವಗಳಿಗೆ ಮಿತಿ ಇದೆ. ಆದ್ದರಿಂದ ಸಣ್ಣ ಅಣೆಕಟ್ಟುಗಳು ಬೇಕಾಯಿತು. ಮಿತಿಯನ್ನು ಲೇಖಕರು ಎಷ್ಟೆಷ್ಟು ಮೀರುತ್ತಾರೊ, ಅಷ್ಟಷ್ಟು ಉತ್ತಮ ಆತ್ಮಚರಿತ್ರೆಗಳು ಬರಲು ಸಾಧ್ಯವಾಗುತ್ತದೆ. ಒಟ್ಟು ಜೀವನದಿಯನ್ನು ಪರಿಭಾವಿಸುವ ಸಾಮರ್ಥ್ಯವನ್ನು ಆತ್ಮಚರಿತ್ರೆ ಬರೆಯಲು ಹೊರಡುವ ಲೇಖಕರು ಹೊಂದಿರಬೇಕು.

ತನ್ನದಷ್ಟನ್ನೇ ನೋಡಿಕೊಂಡರೆ ಏನೇನೂ ಪ್ರಯೋಜನವಿಲ್ಲ. ಸಮಗ್ರ ಬದುಕು ದಾಖಲಾದಾಗ ಮಾತ್ರ ಆತ್ಮಚರಿತ್ರೆಗಳಿಗೆ ಪರಿಪೂರ್ಣತೆ ಬರುತ್ತದೆ. ಆದ್ದರಿಂದಲೇ ಮರಾಠಿ ಲೇಖಕರ ಆತ್ಮಚರಿತ್ರೆಗಳು ಪರಿಣಾಮಕಾರಿಯಾಗಿ ಬಂದಂತೆ, ಕನ್ನಡದಲ್ಲಿ ಬರಲಿಲ್ಲ. ದಯಾ ಪವಾರ (ಬಲೂತ), ಸೋನ ಕಾಂಬಳೆ (ಅಠವಣೀಚಿ ಪಕ್ಷಿ), ಮಾಧವಿ ಕೊಂಡವಿಲಕರ್ (ಮುಕ್ಕಾಂ ಪೋಸ್ಟ ದೇವಾಚೆ ಗೋಠಣೆ), ಲಕ್ಷ್ಮಣ ಮಾನೆ (ಉಪರಾ), ತುಪೆ (ಕಾಟ್ಯಾವರಚಿ ಪೋಟ), ಶಂಕರರಾವ ಖರಾತ್ (ತರಾಳ ಅಂತರಾಳ) – ಮೊದಲಾದ ಮರಾಠಿ ಲೇಖಕರು ತಮ್ಮ ಆತ್ಮಚರಿತ್ರೆಗಳಲ್ಲಿ ವಾಸ್ತವವನ್ನು ಬಿಡಿಸಿಟ್ಟರು. ಯಾವ ವಿಚಾರವನ್ನೂ ಮರೆಮಾಚಲಿಲ್ಲ. ಕೊಳಚೆ ಪ್ರದೇಶದ ವಿವರಗಳನ್ನ, ಹಸಿವಿನ ತೀವ್ರತೆಯನ್ನ, ಲೈಂಗಿಕ ವಿಚಾರಗಳನ್ನ, ಚರ್ಮ ಹದಮಾಡುವವರ ಬದುಕನ್ನ, ಕೈಗಾಡಿ ಜನರು ಮತ್ತು ಕೂಲಿಕಾರರ ಬದುಕನ್ನ, ರೋಗದಿಂದ ಸತ್ತ ದನಗಳನ್ನು ಪಡೆಯುವಲ್ಲಿ ದಲಿತರಲ್ಲಿ ನಡೆಯುತ್ತಿದ್ದ ಪೈಪೋಟಿ ಮತ್ತು ಘರ್ಷಣೆಗಳನ್ನ – ಈ ಲೇಖಕರು ಯಾವುದೇ ಎಗ್ಗಿಲ್ಲದೆ ಚಿತ್ರಿಸುವಲ್ಲಿ ಸ್ವಾತಂತ್ರ್ಯ ವಹಿಸಿದರು. ದಯಾ ಪವಾರರಿಂದ ಆರಂಭವಾದ ಇಂಥ ಬರವಣಿಗೆ ಒಂದು ಪ್ರಕಾರವಾಗಿಯೇ ಬೆಳೆಯತೊಡಗಿತು. ಈ ಬಗೆಯ ಮುಕ್ತ ಬರವಣಿಗೆಗೆ ಅವರಲ್ಲಿರುವ ವಾಸ್ತವವಾದೀ ಪರಂಪರೆಯ ಬರವಣಿಗೆ ಕಾರಣವಾಗಿರಬಹುದು. ಆದರೆ ಕನ್ನಡ ದಲಿತ ಲೇಖಕರ ಆತ್ಮಚರಿತ್ರೆಗಳಲ್ಲಿ ಇಂಥ ವಾತಾವರಣವಿಲ್ಲದಿರುವುದು ಸೋಜಿಗದ ಸಂಗತಿ ! ಇದಕ್ಕಿಂತಲೂ ರೋಚಕವಾದ ವಾತಾವರಣ ಕರ್ನಾಟಕದಲ್ಲಿ ಇದ್ದರೂ. ಕಠೋರ ಸತ್ಯಗಳನ್ನ ಇಲ್ಲಿಯ ಆತ್ಮಚರಿತ್ರೆಗಳು ದಾಖಲಿಸಲು ಮುಂದಾಗದಿದ್ದುದು ಆಶ್ಚರ್ಯದ ಸಂಗತಿ. ಹಾಗಾಗಿ ಬರಹಗಳಲ್ಲಿ ವಾಸ್ತವತೆ ಗೌಣವಾಗಿ ಕಲ್ಪನಾ ಜಗತ್ತೇ ವಿಜೃಂಭಿಸಿ ಬಿಟ್ಟಿದೆ. ಮರಾಠಿ ಲೇಖಕರು ಸಂಕಟದ ನೆಲೆಯಲ್ಲಿದ್ದು ಸಂಕಟಗಳನ್ನು ತೋಡಿಕೊಂಡರೆ, ಕನ್ನಡದವರು ಸುಖದ ನೆಲೆಯಲ್ಲಿದ್ದು ಸಂಕಟದ ಸ್ಥಿತಿಗಳನ್ನು ತಮ್ಮ ಆತ್ಮಚರಿತ್ರೆಯಲ್ಲಿ ಮೆಲುಕು ಹಾಕತೊಡಗಿದರು. ಇದು ವಿಪರ್ಯಾಸ.

## ವಿಮರ್ಶೆ :

ನವ್ಯ ಸಾಹಿತ್ಯದ ಸಂದರ್ಭದಲ್ಲಿ ವಿಮರ್ಶಕರ ಪಾತ್ರ ಅನಿವಾರ್ಯವಾಗಿತ್ತು. ನವ್ಯ ಸಾಹಿತ್ಯಕ್ಕೂ ಓದುಗರಿಗೂ ಅಂತರವಿತ್ತು. ಈ ಅಂತರವನ್ನು ಸರಿಪಡಿಸಬೇಕಾದರೆ ವಿಮರ್ಶಕರ ಸಹಾಯ ಬೇಕಿತ್ತು. ಹಾಗಾಗಿ ನವ್ಯಸಾಹಿತ್ಯದ ಲೇಖಕರಿಗಿಂತ ವಿಮರ್ಶಕರಿಗೆ ಹೆಚ್ಚಿನ ಪ್ರಾಧಾನ್ಯತೆ ದೊರಕಿತು. ಆದರೆ ಈ ಮಾತನ್ನು ನಂತರದ ದಲಿತ, ಬಂಡಾಯ ಸಾಹಿತ್ಯಕ್ಕೆ ಅನ್ವಯಿಸಿ ಹೇಳಲಾಗುವುದಿಲ್ಲ. ಯಾಕೆಂದರೆ ಇದರ ಅಭಿವ್ಯಕ್ತಿ ವಿಧಾನದಲ್ಲಿ ಸರಳ ಸೂತ್ರಗಳನ್ನು ಅನ್ವಯಿಸಿಕೊಂಡದ್ದರಿಂದ, ಸಾಹಿತ್ಯ ವಾಚ್ಯವಾಗಿದ್ದರಿಂದೆ, ಲೇಖಕರಿಗೂ ಸಾಮಾನ್ಯ ಓದುಗರಿಗೂ ನೇರ ಸಂಪರ್ಕ ಉಂಟಾಯಿತು. ಹಾಗಾಗಿ ವಿಮರ್ಶಕ ಮುಖ್ಯವಾಗಲಿಲ್ಲ. ಇದರಿಂದ ದೂರ ಸರಿದ ವಿಮರ್ಶಕರು ದಲಿತ ಕೃತಿಗಳನ್ನು ಗಂಭೀರವಾಗಿ ಪರಿಗಣಿಸಲಿಲ್ಲ. ಉಳಿದ ಲೇಖಕರ ಕೃತಿಗಳನ್ನು ವಿಮರ್ಶಿಸಲು ತೊಡಗಿದರು. ಹಾಗಾಗಿ ಚಳುವಳಿಯ ಉತ್ತಮ ಕೃತಿಗಳ

ಚರ್ಚೆಯು ಸಮರ್ಪಕವಾಗಿ ನಡೆಯಲಿಲ್ಲ. ಹಾಗೊಮ್ಮೆ ನಡೆದಿದ್ದರೂ ವಿಮರ್ಶಕರು ನವ್ಯವಿಮರ್ಶೆಯ ಮಾನದಂಡಗಳನ್ನೇ ದಲಿತ ಬಂಡಾಯದ ಕೃತಿಗಳಿಗೆ ಬಳಸತೊಡಗಿದರು. ಇದರ ಪರಿಣಾಮವಾಗಿ ಕೃತಿಯ ಮೌಲ್ಯಮಾಪನಕ್ಕಿಂತ ಅದನ್ನು ಸಾರಾಸಗಟಾಗಿ ತಳ್ಳಿ ಹಾಕುವ ವಿಮರ್ಶೆ ಆರಂಭವಾಯಿತು. ಆಕ್ರೋಶ, ಅಬ್ಬರ. ಸರಳತೆ, ಘೋಷಿತ ಬಂಡಾಯ ಇವೆಲ್ಲಾ ಸಾಹಿತ್ಯಿಕ ಮೌಲ್ಯಗಳೇ ಅಲ್ಲ ಎಂದು ಹೇಳಿದರು. ನಂತರ ಬಂದ ವಿಮರ್ಶಕರು ಇವುಗಳನ್ನೇ ನಿಜವಾದ ಸಾಹಿತ್ಯಿಕ ಮೌಲ್ಯಗಳೆಂದು ಪರಿಗಣಿಸತೊಡಗಿದರು. ಕನ್ನಡ ಸಾಹಿತ್ಯಕ್ಕೆ ದಲಿತರಿಂದ ಮಾತ್ರ ಮಹತ್ವದ ಕೊಡುಗೆ ಸಾಧ್ಯ ಎಂಬ ಮಾತುಗಳು ಕೇಳಿ ಬಂದವು. ದಲಿತರು ಬರೆದದ್ದು ಮಹತ್ವದ್ದೇ ಆಗಿರುತ್ತದೆ ಎಂಬ ಅಭಿಪ್ರಾಯಗಳು ವಿಮರ್ಶಕರಲ್ಲಿ ಮೂಡಿದವು. ಹೊಸದಾಗಿ ಬರೆಯುವ ದಲಿತ ಲೇಖಕರನ್ನು ಇದೇ ದೃಷ್ಟಿಯಿಂದ ಕಾಣಲು ತೊಡಗಿ ದಲಿತತನವೇ ಇಲ್ಲವೆಂದು ಕೃತಿಯನ್ನು ಹೀಯಾಳಿಸುವ ಸ್ಥಿತಿ ಜರುಗಿತು. ಹೀಗಾಗಿ ಯುವ ಬರಹಗಾರರಿಗೆ ಬರವಣಿಗೆ ಮಾಡಲು ಉತ್ಸಾಹವಿಲ್ಲದೆ ಸೃಜನಶೀಲ ಕ್ರಿಯೆ ನಿಲ್ಲುವಂತೆ ವಿಮರ್ಶೆ ಕೆಲಸ ಮಾಡಿತು. ಇನ್ನೊಂದು ಕಡೆಗೆ ದಲಿತರ ಶ್ರೇಷ್ಠ ಕೃತಿಗಳು ಎಂದು ಹೇಳುವ ಕೃತಿಗಳ ಬಗೆಗೂ ಸರಿಯಾದ ವಿಮರ್ಶೆ ನಡೆಯಲಿಲ್ಲ. ಏಕಮುಖವಾಗಿ ಹೊಗಳುವ ಇಲ್ಲವೆ ತೆಗಳುವ ವಿಮರ್ಶೆ ಮಾತ್ರ ಬರತೊಡಗಿತು. ಈ ಬೆಳವಣಿಗೆ ತುಂಬಾ ಆತಂಕಕಾರಿಯಾದದ್ದು.

## ಸಮಾರೋಪ :

ಕನ್ನಡ ದಲಿತ ಸಾಹಿತ್ಯಕ್ಕೆ ಎರಡು ದಶಕಗಳ ಇತಿಹಾಸವಿದೆ. ಈ ಅವಧಿಯಲ್ಲಿ ಸಾಕಷ್ಟು ಬೆಳವಣಿಗೆಯೂ ಆಗಿದೆ. ಸ್ವಾತಂತ್ರ್ಯಾನಂತರ ಭಾರತದಲ್ಲಿ ಇದು ಒಂದು ಸಾಂಸ್ಕೃತಿಕ ಚಳುವಳಿಯಾಗಿ ರೂಪ ಪಡೆಯಿತು. ಹನ್ನೆರಡನೇ ಶತಮಾನದವರೆಗೂ ಇದರ ಇತಿಹಾಸವಿರುವುದನ್ನೂ ಗಮನಿಸಿದ್ದೇವೆ. ಆದರೆ ಅದಕ್ಕೆ ಹೆಚ್ಚಿನ ಮಹತ್ವ ದೊರೆತದ್ದು ಮಾತ್ರ ಇತ್ತೀಚೆಗೆ. ಇದು ದಲಿತರು ದಲಿತರಿಗಾಗಿ ದಲಿತರೇ ಪ್ರಾರಂಭಿಸಿದ ಚಳುವಳಿಯಾದ್ದರಿಂದ ಇದಕ್ಕೆ ಇನ್ನೂ ಮಹತ್ವ ಹೆಚ್ಚಾಯಿತು. ಇದರ ಆತ್ಮವಿಮರ್ಶೆ ಮಾಡಿಕೊಳ್ಳಬೇಕಾದ ಸಂದರ್ಭದಲ್ಲಿ ನಾವಿದ್ದೇವೆ. ಸಿದ್ಧಲಿಂಗಯ್ಯನವರ ಕಾವ್ಯ 'ಹೊಲೆ ಮಾದಿಗರ ಹಾಡು' ಬಂದಾಗಲಂತೂ ಕನ್ನಡ ಕಾವ್ಯಕ್ಕೆ ಬಿಸಿ ಮುಟ್ಟಿದಂತಾಯಿತು. ಇದಕ್ಕೆ ಸಾಕಷ್ಟು ಪ್ರಚಾರವೂ ಸಿಕ್ಕಿತು. ಇದನ್ನು ಗಮನಿಸಿದ ಅನೇಕರು ಆ ಮಾದರಿಯನ್ನು ಅನುಕರಿಸಲಿಕ್ಕೆ ಪ್ರಯತ್ನಿಸಿದರು. ಅರವಿಂದ ಮಾಲಗತ್ತಿಯವರನ್ನು ಒಳಗೊಂಡಂತೆ ಅನೇಕರ ಮೇಲೆ ಸಿದ್ಧಲಿಂಗಯ್ಯನವರ ಕಾವ್ಯದ ಪ್ರಭಾವವಿದೆ. ಅವರ ಕಾವ್ಯವನ್ನು ಅನುಕರಿಸಲು ಹೋಗಿ ಕಾವ್ಯತ್ವವನ್ನು ಕಳೆದುಕೊಂಡವರಿದ್ದಾರೆ. ದಲಿತರ ಸಾಚಾ ಅನುಭವಗಳನ್ನು ಕಾವ್ಯವಾಗಿಸುವಲ್ಲಿ ತುಂಬಾ ಆದರ್ಶವಾಗಿದ್ದ ಸಿದ್ಧಲಿಂಗಯ್ಯನವರು ಸಾಮಾಜಿಕವಾಗಿ – ರಾಜಕೀಯವಾಗಿ ಪಥ ಬದಲಿಸಿದಾಗ ಅವರ ಬಗೆಗೆ ತೀಕ್ಷ್ಣ ಪ್ರತಿಕ್ರಿಯೆಗಳೂ ಹೊರಬಿದ್ದವು. ಆ ಪ್ರತಿಕ್ರಿಯೆಗಳನ್ನೇ ಸುಂದರ ಕಾವ್ಯ ಮಾಡಿದವರೂ ಇದ್ದಾರೆ. ಅನಸೂಯ

ಕಾಂಬಳೆಯವರಂತೂ ತಮ್ಮ ಕವಿತೆಯಲ್ಲಿ ಸಿದ್ಧಲಿಂಗಯ್ಯನವರನ್ನು ' ಎಕ್ಸ್‌ಪೋಸ್ ' ಮಾಡಿಬಿಟ್ಟಿದ್ದಾರೆ.

ಕ್ರಾಂತಿಯ ಬಿರುಗಾಳಿಯಲಿ ಕೈಬೀಸಿ ಕರೆದವನು
ಬಂಡಾಯದ ಭಾಷಣದಲಿ ವಿಧಾನಸೌಧಕ್ಕೋದವನು
ಬೀದಿಗೇಕೆ ಬರಲೊಲ್ಲ ಬಲೆಯನೇಕೆ ಹರಿಯಲೊಲ್ಲ
ಕಪ್ಪು ಕಾಡು ಕ್ರಾಂತಿಗೀತೆ ಉರಿಯುತಿರುವ ಕವನಗಳು
ಪಠ್ಯವಾಗಿ, ಪದವಿ ಪಡೆದು ಪುಸ್ತಕದಲೆ ಮಲಗಿರಲು
ಹೇಗಿದ್ದವನು ನಮ್ಮಣ್ಣ ಹೆಂಗಾದನು ?

(ಮುಳ್ಳು ಕಂಟಿಯ ನಡುವೆ, ಪುಟ-೧೨)

ಒಂದೆಡೆ ಒಳ್ಳೆಯ ಕಾವ್ಯ ಬರೆದು ಹಳಿ ತಪ್ಪಿದವರ ಬಗೆಗಿನ ಪ್ರತಿಕ್ರಿಯೆಗಳು ನಂತರದವರ ಕಾವ್ಯಕ್ಕೆ ವಸ್ತುವಾದರೆ, ಇನ್ನೊಂದೆಡೆ ವ್ಯವಸ್ಥೆಯ ವಿರುದ್ಧ, ಸರ್ಕಾರದ ವಿರುದ್ಧ ಪದ್ಯಗಳನ್ನು ಬರೆದು ಸಂಕಲನವನ್ನು ಹೊರತಂದುದಕ್ಕೆ ಸರ್ಕಾರದಿಂದ ಸಸ್ಪೆಂಡ್ ಆದವರೂ ಇದ್ದಾರೆ. ' ಕೆಂಡದ ನಡುವೆ ' ಸಂಕಲನ ಹೊರತಂದು ಸಸ್ಪೆಂಡಾದ ಕನ್ನಡದ ಮೊಟ್ಟ ಮೊದಲ ದಲಿತಕವಿ ಡಾ. ವಿ. ಮುನಿವೆಂಕಟಪ್ಪ. ಇವರು ಅಧಿಕಾರಿಯಾಗಿದ್ದರಿಂದ ಈ ರೀತಿಯ ಪರಿಣಾಮಕ್ಕೆ ಆಸ್ಪದವಾಯಿತು. ವ್ಯವಸ್ಥೆಯ ವಿರುದ್ಧ ಪದ್ಯ ಬರೆಯಲು ತೊಡಗಿ ತಾವು ಎಲ್ಲಿ ಈ ರೀತಿ ಬಲಿಯಾಗಿಬಿಡುತ್ತೇವೋ ಎಂಬ ಭಯದಿಂದ ಬೇರೆ ಕಾವ್ಯನಾಮದಲ್ಲಿ ದಲಿತ ಕವಿಯೊಬ್ಬರು ಕಾವ್ಯ ಬರೆಯಲು ತೊಡಗಿದ್ದು ಐತಿಹಾಸಿಕ ಸತ್ಯ. ಕೆಲವರಂತೂ ಮುದ್ರಣವಾಗಬೇಕಿದ್ದ ಕವನ ಸಂಕಲನಗಳನ್ನು ಅಚ್ಚಿನ ಮನೆಯಿಂದ ವಾಪಸ್ ತಂದದ್ದೂ ಉಂಟು. ಇನ್ನು ಕೆಲವರು ಅಚ್ಚಿನ ಮನೆಯಲ್ಲಿಯೇ ಸರ್ಕಾರದ ವಿರುದ್ಧದ ಆಶಯವಿರುವ ಕವಿತೆಗಳನ್ನು ರಿಪೇರಿ ಮಾಡತೊಡಗಿದರು. ' ಕೆಂಡದ ನಡುವೆ ' ಘಟನೆಯ ನಂತರ ಹೆಸರು ಬದಲಾಯಿಸಿಕೊಂಡು ಬರೆದ ಇಂಥ ' ಅದುರುದೊಮ್ಮೆ 'ಯ ಲೇಖಕರಿಂದ ಇನ್ನಾವ ಸೃಜನಶೀಲ ಕೃತಿ ಹೊರಬರಬಹುದೆಂದು ಯೋಚಿಸಬಹುದು. ಆರ್. ವಿ. ಭಂಡಾರಿಯವರು ಇದೇ ಪ್ರಸಂಗವನ್ನು ಬಳಸಿಕೊಂಡು ' ಬೆಂಕಿಯ ಮಧ್ಯೆ ' ಎಂಬ ಕಾದಂಬರಿಯನ್ನು ಅತ್ಯಂತ ಸಮರ್ಥವಾಗಿ ಹೊರತಂದರು. ಅದರಲ್ಲಿ ಬರುವ ನಾಯಕ ಪಾತ್ರ ಮುನಿಯಪ್ಪ, ಕೆಂಡದ ನಡುವೆಯ ಮುನಿವೆಂಕಟಪ್ಪನವರನ್ನು ಪ್ರತಿನಿಧಿಸುತ್ತಾನೆಂಬುದು ಮುಖ್ಯ.

" ದಲಿತ ಸಾಹಿತ್ಯದಲ್ಲಿ ಆಕ್ರೋಶವೇ ತುಂಬಿ ತುಳುಕಾಡಿದೆ, ಸಾಹಿತ್ಯ ಕಡಿಮೆ " ಎಂಬ ಟೀಕೆ ಇದೆ. ಇದರಲ್ಲಿ ಸ್ವಲ್ಪ ಭಾಗ ಸತ್ಯವಿದ್ದರೂ ಇದು ಸಹಾನುಭೂತಿ ಇಲ್ಲದೆ ಮಾಡಿದ ವಿಮರ್ಶೆ ಎನ್ನಬಹುದು. ಶತಮಾನಗಳಿಂದಲೂ ನೋವನ್ನು ಅನುಭವಿಸಿದವರು ಯಾವ ಬಗೆಯಲ್ಲಿ ಮಾತನಾಡುತ್ತಾರೆಂದು ಹೇಳಲು ಬರುವುದಿಲ್ಲ. ಅವರು ಶೋಷಕರಂತೆ ಮೃದುವಾಗಿ ತಣ್ಣಗೆ ಮಾತನಾಡಲಾರರು. ದಲಿತರ ಸಿಟ್ಟಿಗೆ

ಸಾಮಾಜಿಕ. ಸಾಂಸ್ಕೃತಿಕ ಸ್ಥಿತಿಯೇ ಕಾರಣವೆನ್ನಬಹುದು. ಆದ್ದರಿಂದ ದಲಿತ ಸಾಹಿತ್ಯದಲ್ಲಿ ಯಾರಾದರೂ ನಯ ನಾಜೂಕಿನ ಕೆಲಸವನ್ನು ನಿರೀಕ್ಷಿಸುವುದಾದರೆ ಅಂಥವರಿಂದ ದಲಿತ ಸಾಹಿತ್ಯಕ್ಕೆ ಅನ್ಯಾಯವಾಗುತ್ತದೆಂದೇ ಅರ್ಥ. ಅಂದರೆ ದಲಿತ ಸಾಹಿತ್ಯವನ್ನು ಸಾಮಾಜಿಕ ಸಂದರ್ಭದಲ್ಲಿಯೇ ಅರ್ಥೈಸಿಕೊಳ್ಳುವುದು ಉಚಿತವೆಂದು ತೋರುತ್ತದೆ.

" ದಲಿತ ಸಾಹಿತ್ಯ ಚಳುವಳಿಯೂ ನಿಂತು ಹೋಗಿದೆ " ಎಂಬ ಮಾತಿದೆ. ಇದು ಹುಟ್ಟಲಿಕ್ಕೆ ಏನು ಕಾರಣವಿತ್ತೋ, ಸಂಘರ್ಷಕ್ಕೆ ಕಾರಣಗಳಿದ್ದವೋ ಅವು ಈಗ ಇಲ್ಲ. ರಾಜಕೀಯವಾದ, ಸಾಮಾಜಿಕವಾದ ಸವಲತ್ತುಗಳು ಲಭ್ಯವಾಗುತ್ತಿವೆ: ಹಾಗಾಗಿ ಬರಹದ ಒತ್ತಡ ಆ ಪ್ರಮಾಣದಲ್ಲಿ ಇಲ್ಲದಂತಾಯಿತು. ಪ್ರೆಷರ್ ಇದ್ದಾಗ. ಕಾವು ಇದ್ದಾಗ ಮಾತ್ರ ಕಾವ್ಯ ಇರುತ್ತದೆ. ಸಾಹಿತ್ಯದ ವಿಷಯದಲ್ಲಿ ಮಾತ್ರವಲ್ಲ, ಒಟ್ಟಾರೆಯಾಗಿ ನೋಡಿದರೆ ನಮ್ಮಲ್ಲಿ ಸೃಜನಶೀಲತೆಯೇ ಬತ್ತಿಹೋಗುತ್ತಿದೆ; ಗಮನ ಇನ್ನೆತ್ತಲೋ ಹೋಗಿದೆ. ಜಾಗತೀಕರಣ, ಮುಕ್ತಮಾರುಕಟ್ಟೆ, ಆರ್ಥಿಕ ಉದಾರೀಕರಣ, ಬಹುರಾಷ್ಟ್ರೀಯ ಕಂಪನಿಗಳು –ಇವೆಲ್ಲದರ ಆಗಮನದಿಂದಾಗಿ ಇವುಗಳ ಗಾಢ ಪ್ರಭಾವ ನಮ್ಮ ಜೀವನದ ರೀತಿ-ನೀತಿಗಳ ಮೇಲಾಯಿತು. ನಮ್ಮ ಆಲೋಚನಾ ವಿಧಾನವೇ ಕುಂಠಿತವಾಯಿತು. ಇವುಗಳಿಂದ ಸಾಮಾಜಿಕ–ಆರ್ಥಿಕ ಕ್ಷೇತ್ರದ ಸಮಸ್ಯೆಗಳು ಹುಟ್ಟಿಕೊಂಡವು. ಕಂಬಾಲಪಲ್ಲಿ, ಹಂಗರವಳ್ಳಿ ಪ್ರಕರಣಗಳು ಜರುಗಿದ್ದರೂ ದಲಿತ ಲೇಖಕರು ಇವುಗಳ ಬಗ್ಗೆ ಚಕಾರ ಎತ್ತಿಲ್ಲ. ಇದಕ್ಕೆ ಮುಂಚೆ ಬೆಲ್ಚಿ, ಕುದುರೆಮೋತಿ ಪ್ರಕರಣ ಜರುಗಿದಾಗ ಕಾವ್ಯ, ಕತೆ, ನಾಟಕಗಳೇ ಹುಟ್ಟಿಕೊಂಡಿದ್ದವು. ಮೊದಲಿನ ಹಾಗೆ ಸೃಜನಾತ್ಮಕ ಪ್ರತಿಕ್ರಿಯೆ ದಲಿತ ಲೇಖಕರಲ್ಲಿ ಯಾಕೆ ಸಾಧ್ಯವಾಗುತ್ತಿಲ್ಲ ಎಂಬ ಪ್ರಶ್ನೆ ಕಾಡುತ್ತಿದೆ.

ಇನ್ನು ವಿಮರ್ಶಾ ವಲಯದಲ್ಲಿ ಬರೆಯುವವರೆಲ್ಲ ಶೈಕ್ಷಣಿಕ ವಲಯದಲ್ಲಿರುವ ದಲಿತ ಲೇಖಕರನ್ನು, ಅವರ ಕೃತಿಗಳನ್ನು ಸಾಕಷ್ಟು ವೈಭವೀಕರಿಸಿಯೇ ವಿಮರ್ಶೆ ಮಾಡಿದರು. ಇನ್ನುಳಿದಂತೆ, ಚೆನ್ನಾಗಿಯೇ ಬರೆಯುತ್ತಿರುವ ' ನಾನ್ ಅಕಾಡೆಮಿಕ್ ' ವಲಯದ ದಲಿತ ಲೇಖಕರ ಬಗ್ಗೆ ಬರೆಯುವ ಆಸಕ್ತಿಯನ್ನು ಅವರು ತೋರಲಿಲ್ಲ. ಮುನಿವೆಂಕಟಪ್ಪ, ಸತ್ಯಾನಂದ ಪಾತ್ರೋಟ, ಮುಳ್ಳೂರು ನಾಗರಾಜ, ಸರಜೂ ಕಾಟ್ಕರ್ –ಮೊದಲಾದವರ ಬಗ್ಗೆ ವಿಮರ್ಶೆ ಕಡೆಗಣ್ಣಿನಿಂದ ನೋಡಿತು. ಅಕಸ್ಮಾತ್ ಬರೆದರೂ ' ಈ ಸಾಲು ಸಪ್ಪೆಯಾಗಿದೆ. ಈ ಪಂಕ್ತಿ ಖಾರವಾಗಿದೆ ' ಎಂದು ಊಟದ ಪರಿಭಾಷೆಯಲ್ಲಿ ವಿಮರ್ಶೆ ನಡೆದದ್ದು ವಿಷಾದನೀಯ. ಅವಕಾಶವಾದಿ ಲೇಖಕರು, ಅವಕಾಶವಾದಿ ವಿಮರ್ಶಕರು ಯಥೇಚ್ಛವಾಗುತ್ತಿರುವ ಇಂಥ ಕಾಲಸಂದರ್ಭದಲ್ಲಿ ನಿಜವಾದ ಸೃಜನಶೀಲ ಲೇಖಕರನ್ನಾಗಲೀ, ನಿಷ್ಪಕ್ಷಪಾತ ವಿಮರ್ಶಕರನ್ನಾಗಲೀ ನಾವು ಕಾಣುವುದು ದುರ್ಲಭವಾಗುತ್ತಿದೆ. ವಿಮರ್ಶೆಯಲ್ಲಿ ಸಾಮಾಜಿಕ ಪರಿಭಾಷೆ ರೂಪುಗೊಳ್ಳುವವರೆಗೆ ದಲಿತ ಸಾಹಿತ್ಯಕ್ಕೆ ನ್ಯಾಯ ದೊರಕುವುದಿಲ್ಲವೆಂಬುದು ಸುಸ್ಪಷ್ಟ. ಪಾಶ್ಚಾತ್ಯ ಸಾಹಿತ್ಯದ

ಮಾನದಂಡಗಳನ್ನಿಟ್ಟುಕೊಂಡು ವಿಮರ್ಶಿಸುವವರಿಂದಾಗಲೀ. ಕಾವ್ಯಕ್ಕೆ ರಸವೇ ಪ್ರಧಾನ ಎಂಬುವವರಿಂದಾಗಲೀ. ವ್ಯಾಕರಣವೇ ಪ್ರಧಾನ ಎನ್ನುವವರಿಂದಾಗಲೀ ದಲಿತ ಸಾಹಿತ್ಯದ ವಿಮರ್ಶೆ ಸಾಧ್ಯವಾಗದು. ದಲಿತ ಪ್ರಜ್ಞೆಯ ಅಂತರ್ಯಕ್ಕೆ ಸ್ಪಂದಿಸುವವರಿಂದ ಮಾತ್ರ ಇದರ ವಸ್ತುನಿಷ್ಠ ವಿಮರ್ಶೆ ಸಾಧ್ಯ. ವಿಮರ್ಶೆಯಲ್ಲಿ ಕಾವ್ಯಾಂಶವನ್ನು ಬಿಟ್ಟು ಕಾವ್ಯವಲ್ಲದ್ದನ್ನು ಹೊಗಳಿದ್ದರಿಂದಾಗಿ ಅನೇಕ ಕವಿಗಳು ಇದನ್ನೇ ನಂಬಿ ಅನುಸರಿಸಲು ಹೋದರು. ಯುವ ದಲಿತ ಬರಹಗಾರರನ್ನು ದಿಕ್ಕು ತಪ್ಪಿಸಿದರು. ಅನುಕರಣಮೂಲವಾದ ತಗಡು ಪದ್ಯಗಳು ಬಂದವು. ಹೀಗಾಗಿ ದಲಿತ ಕಾವ್ಯದಲ್ಲಿ ಕಳಪೆ ಪದ್ಯಗಳು ಬರಲು ವಿಮರ್ಶೆಯೂ ಕಾರಣವಾಯಿತು.

ದಲಿತ ಸಾಹಿತ್ಯದ ಇಂದಿನ ವಿಮರ್ಶೆಯಲ್ಲೂ 'ಒನ್‌ಮ್ಯಾನ್ ಷೋ' ನಡೆಯುತ್ತಿದೆ. ಇತ್ತೀಚೆಗೆ ಎಸ್. ಜಿ. ಸಿದ್ಧರಾಮಯ್ಯನವರು, (೨೦೦೦ ಆಗಸ್ಟ್ ೬ ರ ಪ್ರಜಾವಾಣಿಯ 'ಸಂವಾದ' ದಲ್ಲಿ) ಸಿದ್ಧಲಿಂಗಯ್ಯನವರ ಕಾವ್ಯದ ಬಗೆಗೆ ಮಾಡಿದ ಚರ್ಚೆ ಈ ಮಾತಿಗೆ ಒಂದು ಉದಾಹರಣೆಯಾಗಿದೆ. ಇದೇ ರೀತಿ ಮುಂದುವರಿದರೆ ನವ್ಯದವರ ಪರಿಸ್ಥಿತಿ ಏನಾಯಿತೋ ಅದೇ ಸ್ಥಿತಿ ದಲಿತ ಲೇಖಕರಲ್ಲೂ ಆಗುವುದರಲ್ಲಿ ಅನುಮಾನವಿಲ್ಲ. ಅಂದರೆ ನವ್ಯಸಾಹಿತ್ಯವನ್ನು 'ಬರೆದವರಷ್ಟೇ ಓದಬಲ್ಲರು' ಎಂಬ ಕುಖ್ಯಾತಿಗೆ ಒಳಗಾಗಿದ್ದನ್ನು ಇಲ್ಲಿ ಸ್ಮರಿಸಬಹುದು.

ಬಾಗಲಕೋಟೆಯಲ್ಲಿ ಜರುಗಿದ ಅಖಿಲಭಾರತ ೬೮ ನೆಯ ಕನ್ನಡ ಸಾಹಿತ್ಯ ಸಮ್ಮೇಳನದ ಸಮಾರೋಪ ಸಮಾರಂಭದಲ್ಲಿ ಭಾಷಣ ಮಾಡಿದ. ದಲಿತ ಕವಿ ಎಂದೇ ಹೆಸರಾಗಿದ್ದ ಸಿದ್ಧಲಿಂಗಯ್ಯ ಅವರು 'ನನ್ನನ್ನು ದಲಿತ ಕವಿ ಎಂದೇ ಕರೆಯುತ್ತಿದ್ದಾರೆ. ಈಗ ನಾನು ಕೇವಲ ದಲಿತ ಕವಿಯಲ್ಲ' ಎಂದು ಹೇಳಿದರು. 'ದಲಿತರು ಬರುವರು ದಾರಿಬಿಡಿ' –ಎಂದು ದಲಿತರ ಘೋಷಣೆ ಬರೆದ ಇವರು ಈಗ ಈ ರೀತಿ ಹೇಳುತ್ತಿರುವುದು ಆಶ್ಚರ್ಯದ ಸಂಗತಿ. 'ದಲಿತ ಸಾಹಿತ್ಯದಲ್ಲಿ ಏನು ವಿಶೇಷ. ದಲಿತ ಎನ್ನುವ ರಿಯಾಯಿತಿ ಸಾಹಿತ್ಯ ಬೇಕಿಲ್ಲ ಎಂಬ ವಾದ ಎದ್ದಿತು. ಸಾಹಿತ್ಯ ಮತ್ತು ಕಲೆಗಳಿಗೆ ರಿಯಾಯಿತಿ ಅನಗತ್ಯ. ಬಹುಶಃ ಇದೆಲ್ಲವನ್ನು ಮನಸ್ಸಿನಲ್ಲಿಟ್ಟುಕೊಂಡು ಸಿದ್ಧಲಿಂಗಯ್ಯನವರು ಈ ರೀತಿ ಹೇಳಿರಬೇಕು. ಸಿದ್ಧಲಿಂಗಯ್ಯನವರಲ್ಲಿ ಕಂಡುಬಂದ ಈ ಕೊರಗು ದೇವನೂರು ಮಹಾದೇವ ಅವರಲ್ಲಿ ಕಾಣಿಸಲಿಲ್ಲ. ಇದರ ಸೂಕ್ಷ್ಮ ಅಧ್ಯಯನ ಮುಂದೆ ನಡೆಯಬೇಕಾಗಿದೆ.

ವಾಸ್ತವ ಮತ್ತು ಸೈದ್ಧಾಂತಿಕವಾಗಿ ದಲಿತರನ್ನು ಅನುಕಂಪೆಯಿಂದ ನೋಡೋದೇ ಬೇರೆ – ಅವರೊಂದಿಗೆ ಬದುಕುವುದೇ ಬೇರೆ ವಿಚಾರವಾಗುತ್ತದೆ. ಶಿಕ್ಷಣ. ಶಾಲೆಗಳು, ಕಾರ್ಖಾನೆಗಳು. ಗ್ರಾಮಾಂತರ ಜೀವನದ ಕೃಷಿಸಂಬಂಧ ಕಾರ್ಯಗಳಿರಬಹುದು, ಒಟ್ಟೊಟ್ಟಾಗಿ ಬದುಕಬೇಕಾದ ಸಂದರ್ಭಗಳಿವು. ದಲಿತರಿಗೆ ಸವಲತ್ತುಗಳಿವೆ ಎಂದು ಮೇಲ್ವರ್ಗದವರಿಗೆ ಇನ್ನಿಲ್ಲದ ಅಸಮಾಧಾನವಿದ್ದರೆ, ಇತ್ತ ದಲಿತರಿಗೆ ತಮಗಿಂತ ಮೇಲ್ವರ್ಗದ ಜಾತಿಯೆ ಇವತ್ತಿನ ಎಲ್ಲ ದುಸ್ಥಿತಿಗೆ ಕಾರಣ ಎಂಬ ಧೋರಣೆ ಹುಟ್ಟಿಕೊಂಡಿದೆ. ಅವರಲ್ಲೂ ಸಹಾನುಭೂತಿ–ಅನುಕಂಪ

ಬತ್ತಿಹೋಗುತ್ತಿವೆ. ಇವರಲ್ಲೂ ಕೋಪ, ಆವೇಶಗಳು ಭುಗಿಲೇಳುತ್ತಿವೆ. ಹಾಗಾಗಿ ಈ ಎರಡೂ ಅತಿಯಾಗಿ ಹೋಗುವುದರಿಂದ ಜೀವನದ ಸಂದರ್ಭಗಳಲ್ಲಿ ಸೃಜನಶೀಲ ಲೇಖಕನಾದವನ ಜವಾಬ್ದಾರಿ ಇದೆ. ವಾಸ್ತವ ಮತ್ತು ಸೈದ್ಧಾಂತಿಕತೆಯನ್ನು ಬ್ಯಾಲೆನ್ಸ್ ಮಾಡುವುದರತ್ತ ಕೆಲಸ ಮಾಡಬೇಕಾಗಿದೆ. ಯಾವುದೇ ಜಾತಿಯ ಲೇಖಕನಾಗಿರಲಿ ಸಮತೋಲನ ಸಾಧಿಸುವ ವಿಶಾಲ ಭೂಮಿಕೆಯನ್ನು ಹೊಂದಿರಬೇಕಾಗುತ್ತದೆ. ಆದರೆ ಈಗ ಬರೆಯುವಂಥ ಲೇಖಕರಲ್ಲಿ ಇಂಥ ಒಂದು ಪರಂಪರೆ ಕಂಡುಬರುತ್ತಿಲ್ಲ. 'ಕುಸುಮಬಾಲೆ'ಯ ದೇವನೂರು ಮಹಾದೇವರಂಥ ಸಮಾಧಾನ ಚಿತ್ತದ ದಲಿತ ಲೇಖಕರು, 'ಚೋಮನದುಡಿ'ಯ ಶಿವರಾಮ ಕಾರಂತರಂಥ ದೊಡ್ಡ ಮನಸ್ಸಿನ ಲೇಖಕರು ಈಗ ಕಂಡುಬರುತ್ತಿಲ್ಲ. ಇಂಥ ಸನ್ನಿವೇಶ ಬದಲಾಗುವ ತುರ್ತು ಅಗತ್ಯವಿದೆ.

## ಅಡಿ ಟಿಪ್ಪಣಿಗಳು

೧. ಸಿ. ವೀರಣ್ಣ : ಸಾಹಿತ್ಯ ಮತ್ತು ಸಮುದಾಯ, ಪು. ೪೨-೪೩
೨. ಬರಗೂರು ರಾಮಚಂದ್ರಪ್ಪ : ಬಂಡಾಯ ಮೀಮಾಂಸೆ, ಪು. ೭೭
೩. ಸರಜೂ ಕಾಟ್ಕರ್ : ಕನ್ನಡ ಮರಾಠಿ ದಲಿತ ಸಾಹಿತ್ಯ, ಪು. ೨೫
೪. ಅದೇ
೫. ಅದೇ ಪು. ೨೬
೬. ಡಿ. ಆರ್. ನಾಗರಾಜ : ಅಮೃತ ಮತ್ತು ಗರುಡ, ಪು. ೭
೭. ಸರಜೂ ಕಾಟ್ಕರ್ : ಕನ್ನಡ ಮರಾಠಿ ದಲಿತ ಸಾಹಿತ್ಯ, ಪು. ೩೭-೩೮
೮. ಪುರುಷೋತ್ತಮ ಬಿಳಿಮಲೆ : ಬಂಡಾಯ ದಲಿತ ಸಾಹಿತ್ಯ, ಪು. ೨೬
೯. ಅದೇ ಪು. ೨೭-೨೮
೧೦. ಅದೇ ಪು. ೪೧-೪೨
೧೧. ದೇವನೂರು ಮಹಾದೇವ : ದ್ಯಾವನೂರು, ಪು. ೩೩
೧೨. ಜಿ. ಆರ್. ತಿಪ್ಪೇಸ್ವಾಮಿ : ಪ್ರಸ್ತಾಪ, ಪು. ೩೨
೧೩. ಕೆ. ಬಿ. ಸಿದ್ದಯ್ಯ : ಬಕಾಲ, ಪು. ೨೭
೧೪. ಸರಜೂ ಕಾಟ್ಕರ್ : ಕನ್ನಡ ಮರಾಠಿ ದಲಿತ ಸಾಹಿತ್ಯ, ಪು. ೧೫೫

• • •

# ಕನ್ನಡ ಬಂಡಾಯ ಸಾಹಿತ್ಯ ಘಟ್ಟ

ಡಾ. ಬಸವರಾಜ ಸಬರದ

## ಕನ್ನಡ ಬಂಡಾಯ ಸಾಹಿತ್ಯ ಘಟ್ಟ

### ಬಂಡಾಯ ಪದದ ವಿಶ್ಲೇಷಣೆ :

'ಬಂಡಾಯ'ವೆಂಬುದು ಸಂಸ್ಕೃತದ 'ಬಂಡು' ಪದದ ಮೂಲದಿಂದ ಬಂದಿದೆ. ಇದನ್ನು 'ಭಣ್ಣು' ಎಂದು ಕೂಡ ಬಳಸಲಾಗಿದೆ. ಇದರ ಮೂಲಾರ್ಥ 'ಯುದ್ಧ' ಎಂದಿದೆ. ಆದರೆ ಕನ್ನಡದಲ್ಲಿ ಇದರ ಪ್ರಧಾನಾರ್ಥ 'ರಿವೋಲ್ಟ್' ಎಂದಾಗುತ್ತದೆ. ಇಬ್ಬರು ಸ್ವತಂತ್ರ ರಾಜರು ಯುದ್ಧಮಾಡುವುದನ್ನು ಬಂಡಾಯವೆಂದು ಎಲ್ಲಿಯೂ ಕರೆದಿಲ್ಲ. ಆದರೆ ಒಂದು ರಾಜ್ಯದಲ್ಲಿ ಆ ರಾಜ್ಯವ್ಯವಸ್ಥೆಯ ವಿರುದ್ಧ, ರಾಜನ ವಿರುದ್ಧ ದನಿಯೆತ್ತುವುದನ್ನು ಬಂಡಾಯವೆಂದು ಕರೆಯಲಾಗಿದೆ. ಹೀಗಾಗಿ 'ಯುದ್ಧ' ಪದಕ್ಕೂ 'ಬಂಡಾಯ' ಪದಕ್ಕೂ ವ್ಯತ್ಯಾಸವಿದೆ. 'ಬಂಡಾಯ' ಪದಕ್ಕೆ 'ಬಂಡು' ಮೂಲಪದವಾಗಿದೆ. ಬಂಡು ಎಂದರೆ 'ಭಂಡ', 'ಹೀನ', 'ನಾಚಿಕೆಯಿಲ್ಲದವ' ಎಂದರ್ಥವಾಗುತ್ತದೆ. ರಾಜ್ಯವ್ಯವಸ್ಥೆಯ ವಿರುದ್ಧ ಬಂಡೆದ್ದವನು, ಅರಸನಿಗೆ ಆಳುವವರ್ಗಕ್ಕೆ ಬಂಡನಾಗಿ, ನಾಚಿಕೆಯಿಲ್ಲದವನಾಗಿ ಕಾಣಿಸುತ್ತಾನೆ. ಬಡವರು, ಶೋಷಣೆಗೊಳಗಾದವರು ಅನ್ಯಾಯದ ವಿರುದ್ಧ ಮಾತನಾಡಿದರೆ ಅಂಥವರನ್ನು 'ಭಂಡರು' ಎಂದು ಕರೆಯಲಾಗುತ್ತದೆ. ಕತ್ತೆಬಡವ, ಭಂಡಬಡವ ಪದಗಳು ಇಂದೂ ಚಾಲ್ತಿಯಲ್ಲಿವೆ. ಇದಕ್ಕೆ ಸಂಬಂಧಿಸಿದಂತೆ ಜೇಡರ ದಾಸಿಮಯ್ಯನ ವಚನವೊಂದು ಗಮನಾರ್ಹವಾಗಿದೆ :

" ಒಡಲುಗೊಂಡವ ಹಸಿವ, ಒಡಲುಗೊಂಡವ ಹುಸಿವ, ಒಡಲುಗೊಂಡವನೆಂದು ನೀನೆನ್ನ ಜಡಿದೊಮ್ಮೆ ನುಡಿಯದಿರಾ ! ನೀನೆನ್ನಂತೊಮ್ಮೆ ಒಡಲುಗೊಂಡು ನೋಡಾ ರಾಮನಾಥ ". ಬಡವ ಸುಳ್ಳು ಹೇಳುತ್ತಾನೆ, ಹಸಿದವ ಹಪಹಪಿಸುತ್ತಾನೆ- ಎಂದು ಜರಿದಾಡುವ ಮಾತೇ ಬಂಡಾಯಕ್ಕೆ ಕಾರಣವಾಗುತ್ತದೆ. ಅಂತೆಯೇ ದಾಸಿಮಯ್ಯ ತನ್ನ ಇಷ್ಟದೈವ ರಾಮನಾಥನನ್ನೇ ಪ್ರಶ್ನಿಸುತ್ತಾನೆ. ಬಡವ ಏಕೆ ಸುಳ್ಳಾಡುತ್ತಾನೆ, ಹಸಿದವ ತುತ್ತು ಅನ್ನಕ್ಕಾಗಿ ಏಕೆ ಹಪಹಪಿಸುತ್ತಾನೆಂದು ತಿಳಿಯಬೇಕಾದರೆ, ನೀನೂ " ಎನ್ನಂತೊಮ್ಮೆ ಒಡಲುಗೊಂಡು ನೋಡಾ " ಎಂದು ದಾಸಿಮಯ್ಯ ಹೇಳುವಲ್ಲಿ ಅರ್ಥಪೂರ್ಣವಾದ ಧ್ವನಿಯಿದೆ. ಇದರಲ್ಲಿಯೇ ಬಂಡಾಯದ ಬೀಜವಡಗಿದೆ.

ಬಿಳಿಯರ ದೌರ್ಜನ್ಯ-ದಬ್ಬಾಳಿಕೆಗಳಿಗೆ ತುತ್ತಾಗಿರುವ ಅಮೇರಿಕಾದ ಕಪ್ಪುಜನರು ತಮ್ಮನ್ನು ತಾವು 'ಬ್ಲ್ಯಾಕ್ಸ್' ಎಂದು ಹೆಮ್ಮೆಯಿಂದ ಕರೆದುಕೊಳ್ಳುತ್ತಾರೆ. ಕಪ್ಪೂ ಕೂಡ ಸುಂದರವಾದದ್ದೆಂಬುದನ್ನು ಅವರು ತೋರಿಸಿಕೊಟ್ಟಿದ್ದಾರೆ. ಅವರಲ್ಲಿನ ಉಗ್ರಗಾಮಿಗಳು ತಮ್ಮನ್ನು 'ಬ್ಲ್ಯಾಕ್‌ಪಂಥರ್ಸ್' ಎಂದೂ ತಮ್ಮದು 'ಬ್ಲ್ಯಾಕ್ ಲಿಟರೇಚರ್' ಎಂದೂ ಹೆಮ್ಮೆಯಿಂದ ಹೇಳಿಕೊಳ್ಳುತ್ತಾರೆ. ನಮ್ಮ ಪುರಾಣಕಾಲದಲ್ಲಿ, ಸಮಾನತೆ ಕೇಳಿದವರನ್ನು ರಾಕ್ಷಸರೆಂದು ಕರೆಯಲಾಗಿದೆ. ನಮ್ಮ ಇತಿಹಾಸದಲ್ಲಿ ಅಸಮಾನತೆಯ ವಿರುದ್ಧ ದನಿಯೆತ್ತಿದವರನ್ನು ಭಂಡರು, ಧೂರ್ತರು, ದ್ರೋಹಿಗಳೆಂದು ಕರೆಯಲಾಗಿದೆ.

'ಬಂಡಾಯ'ದ ಮೂಲಧಾತು ಸಿಟ್ಟು. ಆದರೆ ಈ ಸಿಟ್ಟು ವ್ಯಕ್ತಿಗತವಾದುದಲ್ಲ. ಸಮಾಜಮುಖಿಯಾದುದು. ಈ ಸಿಟ್ಟು ಸೇಡಿನ ಕಿಡಿಯಲ್ಲ, ತಾತ್ವಿಕ ನೆಲೆ ಪಡೆದದ್ದು. ಈ ಸಮಾಜವ್ಯವಸ್ಥೆಯಲ್ಲಿರುವ ಅಸಮಾನತೆಯನ್ನು ಕಂಡು ಸಿಟ್ಟಿಗೇಳಲಾರದವರು, ಅನ್ಯಾಯದ ವಿರುದ್ಧ ಪ್ರತಿಭಟಿಸಲಾರದವರು ಎಂದಿಗೂ ಬಂಡಾಯಗಾರರಾಗಲಾರರು. ಅಂತಸ್ತಿನ ಮೂಲಕ ಅಸಮಾನತೆಯನ್ನು ಹುಟ್ಟುಹಾಕುವ ಬಂಡವಾಳಶಾಹಿಗಳಿಗೆ, ಜಾತಿಯ ಮೂಲಕ ಆಳ್ವಿಕೆ ನಡೆಸುವ ಜಾತಿವಾದಿಗಳಿಗೆ 'ಭಂಡ'ರಾಗಿ ಕಂಡಾಗಲೇ ಇಲ್ಲಿ ಸಮಾನತೆಯ ಹೋರಾಟ ನಡೆಸಲು ಸಾಧ್ಯವಾಗುತ್ತದೆ. ಆದ್ದರಿಂದ ದಕ್ಷಿಣ ಆಫ್ರಿಕಾದ ಕಪ್ಪು ಜನರಿಗೆ 'ಬ್ಲ್ಯಾಕ್' ಹೇಗೆ ಹೆಮ್ಮೆಯ ಪದವೋ, ಅದೇ ರೀತಿ ಇಲ್ಲಿ ಅಸಮಾನತೆಯ ವ್ಯವಸ್ಥೆಯ ವಿರುದ್ಧ ಹೋರಾಡುವ ಹೋರಾಟಗಾರರಿಗೆ 'ಬಂಡಾಯ' ಪದವು ಆತ್ಮಗೌರವದ ಸಂಕೇತವಾಗಿದೆ.

**ಬಂಡಾಯ ಪರಂಪರೆ :**

'ಬಂಡಾಯ' ಕೇವಲ ಇಂದು, ನಿನ್ನೆಯದಲ್ಲ, ಅದಕ್ಕೊಂದು ದೀರ್ಘಪರಂಪರೆಯಿದೆ. ಜಾಗತಿಕ ಬಂಡಾಯ ಪರಂಪರೆಯಲ್ಲಿಯೇ ನಮ್ಮ ರಾಷ್ಟ್ರದ, ನಮ್ಮ ನಾಡಿನ ಬಂಡಾಯ ಪರಂಪರೆಯೂ ಕೂಡಿಕೊಂಡಿದೆ. ಹೀಗಾಗಿ ಬಂಡಾಯವೆಂಬುದು ಕೇವಲ ಒಂದು ಭಾಷೆ. ಒಂದು ಪ್ರದೇಶ, ಒಂದು ಕಾಲಘಟ್ಟಕ್ಕೆ

ಮಾತ್ರ ಸೀಮಿತವಾಗಿರದೆ, ಅದು ಭಾಷೆ-ದೇಶಗಳನ್ನು ಮೀರಿ ಹರಿಯುವ ನಿರಂತರ ನದಿಯಾಗಿದೆ. ಪ್ರಸಿದ್ಧ ನಾಟಕಕಾರ ಬ್ರೆಕ್ಟ್‌ನ ಹೇಳಿಕೆಯಂತೆ ಪರಂಪರೆಯ ಜತೆಗೆ ಸಂಬಂಧ ಮತ್ತು ಮುಂದುವರಿಕೆ ಬಂಡಾಯದವರ ಸ್ಪಷ್ಟನಿಲುವುಗಳಾಗಿವೆ.

ವಿವಿಧ ದೇಶ - ಭಾಷೆಗಳ ಸಾಹಿತ್ಯ ಘಟ್ಟಗಳಲ್ಲಿ ಬಂಡಾಯದ ಪರಂಪರೆಯಿರುವಂತೆ, ಕನ್ನಡ ಸಾಹಿತ್ಯದಲ್ಲಿಯೂ ಬಂಡಾಯ ಪರಂಪರೆಯೊಂದನ್ನು ಗುರುತಿಸಬಹುದಾಗಿದೆ. ಆದರೆ ಹಿಂದಿನ ಲೇಖಕರಲ್ಲಿ ಬಂಡಾಯವೆಂಬುದು ಒಂದು ಸಂದರ್ಭವಾಗಿ, ಒಂದು ಘಟನೆಯಾಗಿ ಪ್ರಕಟವಾಗುತ್ತಿತ್ತೇ ಹೊರತು ಅದೇ ಪ್ರಮುಖ ಮೌಲ್ಯವಾಗಿರಲಿಲ್ಲ. ಇಂದಿನ ಹಾಗೆ ಹಿಂದೆ ಬಂಡಾಯವು ಒಂದು ಮನೋಧರ್ಮವಾಗಿರಲಿಲ್ಲ. ಆದರೆ ಸಾಹಿತ್ಯ ಚರಿತ್ರೆಯ ಸಂದರ್ಭದಲ್ಲಿ ಅಲ್ಲಲ್ಲಿ ಎದ್ದು ಕಾಣುವ ಬಂಡಾಯ ಪರಂಪರೆಯನ್ನು ಅಲ್ಲಗಳೆಯುವಂತಿಲ್ಲ. ಈ ಪರಂಪರೆಯ ನೆಲೆಗಳನ್ನು ಆದಿಕವಿ ಪಂಪನಿಂದಲೇ ಕಾಣಬಹುದಾಗಿದೆ.

ರಾಜಾಶ್ರಯದಲ್ಲಿದ್ದ ಪಂಪ, ಆಶ್ರಯದಾತ ಅರಿಕೇಸರಿಯನ್ನೇ ಕಥಾನಾಯಕನನ್ನಾಗಿ ಮಾಡಿಕೊಂಡಿದ್ದರೂ, ಆ ಮೂಲಕ ಅರ್ಜುನನ ಪರಾಕ್ರಮವನ್ನು ಬಣ್ಣಿಸುತ್ತಿದ್ದರೂ, ಕರ್ಣನಿಗೆ ಪ್ರಾಮುಖ್ಯತೆ ಕೊಡುತ್ತಾನೆ. " ನೆನೆಯದಿರಣ್ಣ ಭಾರತದೊಳಿಂ ಪೆರರಾರುಮನೊಂದೆ ಚಿತ್ತದಿಂ, ನೆನೆವೊಡೆ ಕರ್ಣನಂ ನೆನೆಯ.... ಕರ್ಣ ರಸಾಯನಮಲ್ತೆ ಭಾರತಂ " ಎಂದು ಹೇಳುವ ಪಂಪನ ಈ ನುಡಿಯಲ್ಲಿ ಕರ್ಣನ ನನ್ನಿ, ತ್ಯಾಗ, ಪರಾಕ್ರಮ, ವಿಶಾಲ ಮನೋಭಾವವನ್ನು ವರ್ಣಿಸುತ್ತಾ, ಕಥಾನಾಯಕನಿಗಿಂತ ಕರ್ಣನಲ್ಲಿ ಕವಿ ಒಲವು ತೋರಿಸಿರುವುದನ್ನು ನೋಡಿದರೆ ಪಂಪನ ಈ ಧೋರಣೆ ಅಂದಿನ ಸಂದರ್ಭದಲ್ಲಿ ಪ್ರಗತಿಪರವಾಗಿಯೇ ಕಾಣಿಸುತ್ತದೆ. ಕವಿ ಪಂಪ, ಕರ್ಣನ ಮೂಲಕ ಹೇಳಿಸುವ " ಕುಲಂ ಕುಲಮಲ್ತು, ಗುಣಂ ಕುಲಂ, ಛಲಂ ಕುಲಂ, ಅಭಿಮಾನವೊಂದೆ ಕುಲಂ " ಎನ್ನುವ ನುಡಿಯಲ್ಲಿ ಜಾತಿವ್ಯವಸ್ಥೆಯನ್ನು ವಿರೋಧಿಸುವ ಬಂಡಾಯಗುಣವಿದೆ. ಪ್ರಭುತ್ವ ಮತ್ತು ಸೃಜನಶೀಲ ಸ್ವಾತಂತ್ರ್ಯ, ಧರ್ಮ ಮತ್ತು ಕಾವ್ಯಧರ್ಮ, ಮಾರ್ಗ ಮತ್ತು ದೇಸಿ – ಹೀಗೆ ವಿರುದ್ಧ ನೆಲೆಗಳ ಮೂಲಕ ಮುಖಾಮುಖಿಯಾಗುವ ಪಂಪಕವಿ, ವೈರುದ್ಧ್ಯಗಳನ್ನು ಮೀರುತ್ತ ಜನಪರ ನೆಲೆಗಳನ್ನು ಕಂಡುಕೊಳ್ಳಲೆತ್ನಿಸಿರುವುದು ಇಂದಿಗೂ ಮುಖ್ಯವಾಗುತ್ತದೆ. ಪಂಪನ ಸಮಕಾಲೀನ ಕವಿ ರನ್ನನ ಕಾವ್ಯದಲ್ಲಿಯೂ ವೈಚಾರಿಕ ಸೂಕ್ಷ್ಮತೆಗಳಿವೆ. ಎಲ್ಲರೂ ದುರ್ಯೋಧನನ್ನು ಖಳನಾಯಕನೆಂದೇ ಕರೆದರೆ ರನ್ನನು ದುರ್ಯೋಧನನ್ನು ಪ್ರತಿನಾಯಕನನ್ನಾಗಿ ಸೃಷ್ಟಿಸುತ್ತಾನೆ. " ನೆಲಕಿರಿವೆನೆಂದು ಬಗೆವಿರೆ ಆಂ ಛಲಕಿರಿವೆಂ " ಎನ್ನುವ ರನ್ನನ ದುರ್ಯೋಧನನಿಗೆ ಈ ನೆಲ ಕರ್ಣನನ್ನು ಕೊಲ್ಲಿಸಿದ ಹಾಳುನೆಲವಾಗಿ ಕಾಣುತ್ತದೆ. ದುರ್ಯೋಧನನ ಛಲ, ಮಾನವೀಯತೆ, ಸ್ನೇಹಗುಣಗಳನ್ನು ಎತ್ತಿಹಿಡಿಯುವ ರನ್ನಕವಿ, ತನ್ನ ಕಾವ್ಯದಲ್ಲಿ ಆತನಿಗೆ ವಿಶಿಷ್ಟಸ್ಥಾನವನ್ನು ನೀಡಿದ್ದಾನೆ. ಕರ್ಣ ಸತ್ತಾಗ ಕಣ್ಣೀರಿಡುವ ದುರ್ಯೋಧನನ ವಿಶಾಲತೆಯನ್ನು ಸಾಹಸಭೀಮವಿಜಯದಲ್ಲಿ ಕವಿ ಮನಮಿಡಿಯುವಂತೆ ಚಿತ್ರಿಸಿದ್ದಾನೆ. ದುರ್ಗಸಿಂಹನ

'ಪಂಚತಂತ್ರ' ಕೃತಿಯಲ್ಲಿ ಬರುವ ಅನೇಕ ಕತೆಗಳಲ್ಲಿ ರಾಜಪ್ರಭುತ್ವದ ವಿರೋಧಿ ಧ್ವನಿಗಳು ಕೇಳಿಸುತ್ತವೆ. ಭೇದ ಪ್ರಕರಣದಲ್ಲಿ ಸಂಜೀವಕನು ದವನಕನನ್ನು ಮೊದಲಸಲ ಭೇಟಿಯಾದಾಗ ಹೇಳುವ ರಾಜವಿರೋಧಿ ಮಾತುಗಳು, ಪ್ರಭುತ್ವದ ವಿರುದ್ಧದ ಪ್ರತಿಭಟನೆಯಾಗಿ ಕಾಣಿಸುತ್ತವೆ. ಈ ಕೃತಿಯಲ್ಲಿ ರಾಜಪ್ರಭುತ್ವದ ಪರ-ವಿರೋಧಿ ಅಂಶಗಳಿದ್ದರೂ, ಇದರಲ್ಲಿ ಬರುವ ಶಿವಭೂತಿಯ ಕತೆ, ಎರಡು ಗಿಳಿಗಳ ಕತೆ ಗಮನಾರ್ಹವಾಗಿವೆ. ಈ ಕೃತಿಯಲ್ಲಿ ರಾಜವ್ಯವಸ್ಥೆಯನ್ನು ಅಲ್ಲಗಳೆಯದಿದ್ದರೂ, ಕೆಟ್ಟ ರಾಜನನ್ನು ವಿರೋಧಿಸಿ, ಒಳ್ಳೆಯ ರಾಜನನ್ನು ಬಯಸುವ ರೀತಿಯು ಅಂದಿನ ಚಾರಿತ್ರಿಕ ಸಂದರ್ಭದ ಹಿನ್ನಲೆಯಲ್ಲಿ ಪ್ರಗತಿಪರವಾಗಿಯೇ ಕಾಣಿಸುತ್ತದೆ.

ಹನ್ನೆರಡನೆಯ ಶತಮಾನದಲ್ಲಿ ರಚನೆಯಾದ ವಚನಸಾಹಿತ್ಯದಲ್ಲಿ ಬಂಡಾಯ ಮನೋಭಾವದ ಪ್ರಮುಖ ನೆಲೆಗಳಿವೆ. ಕನ್ನಡ ಸಾಹಿತ್ಯ ಪರಂಪರೆಯಲ್ಲಿ ಧರ್ಮ-ಸಾಹಿತ್ಯ ಹಾಗೂ ಚಳುವಳಿಯನ್ನೊಳಗೊಂಡ ಏಕೈಕ ವಿಶಿಷ್ಟ ಘಟ್ಟವಿದು. ಕನ್ನಡದಲ್ಲಿ ಕೆಲವು ಸಾಹಿತ್ಯ ಘಟ್ಟಗಳಿವೆ, ಅನೇಕ ಕವಿ ಸಾಹಿತಿಗಳಿದ್ದಾರೆ. ಆದರೆ ಚಳುವಳಿಯ ಮೂಲಕ ಸಾಹಿತ್ಯಪ್ರಕಟವಾದದ್ದು ಮೂರೇ ಸಂದರ್ಭದಲ್ಲಿ ಒಂದು ವಚನ ಚಳುವಳಿ, ಮತ್ತೊಂದು ಪ್ರಗತಿಶೀಲ ಚಳುವಳಿ, ಈಗಿನದು ಬಂಡಾಯ ಚಳುವಳಿ.

ಹೀಗಾಗಿ ಚಳುವಳಿಸಾಹಿತ್ಯದ ಪ್ರಥಮ ಘಟ್ಟವೆಂದರೆ ವಚನಚಳುವಳಿಯೇ ಆಗಿದೆ. ಅಂತೆಯೇ ವಚನಕಾರರನ್ನು, ಪಂಪ-ರನ್ನರಂತೆ ಕೇವಲ ಕವಿಗಳ ಪರಂಪರೆಗೆ ಮಾತ್ರ ಸೀಮಿತಗೊಳಿಸುವಂತಿಲ್ಲ. ವಚನಕಾರರು ಕವಿಗಳೂ, ಹೋರಾಟಗಾರರೂ ಆಗಿರುವುದರ ಜತೆಗೆ ಮಾನವೀಯ ಧರ್ಮದ ಸಂಸ್ಥಾಪಕರೂ ಆಗಿದ್ದರು. ಬಂಡಾಯ ಚಳುವಳಿಯಲ್ಲಿ ಪ್ರಮುಖವಾಗಿರುವ ವರ್ಣಹೋರಾಟದ ಪ್ರಥಮ ನೆಲೆಗಳನ್ನು ವಚನ ಚಳುವಳಿಯಲ್ಲಿ ಕಾಣಬಹುದಾಗಿದೆ. ಹೀಗಾಗಿ ಚಳುವಳಿಸಾಹಿತ್ಯದ ಮೊದಲ ಹೆಜ್ಜೆಯಾಗಿ ವಚನಕಾರರು ಕಾಣಿಸುತ್ತಾರೆ. ಮೂಢನಂಬಿಕೆ, ಅಂಧಸಂಪ್ರದಾಯಗಳನ್ನು ವಿರೋಧಿಸಿದ ವಚನಕಾರರು, ಶತಮಾನಗಳಿಂದ ನಡೆದುಬಂದ ಸ್ಥಾಪಿತ ನಿಲುವುಗಳನ್ನು ತಿರಸ್ಕರಿಸುತ್ತಾರೆ. ಚಲನಶೀಲ ಜಂಗಮತ್ವವನ್ನು ಸ್ವೀಕರಿಸುತ್ತಾರೆ. ಜಾತಿ, ಮತ, ಅಂತಸ್ತು, ಅಧಿಕಾರಗಳನ್ನು ಮೀರಿದ ಶರಣರು ಲಿಂಗಭೇದವನ್ನೂ ನಿರಾಕರಿಸುತ್ತಾರೆ. ಕಾಯಕ-ದಾಸೋಹದಂತಹ ಮೌಲ್ಯಗಳನ್ನು ಸ್ಥಾಪಿಸುವುದರ ಮೂಲಕ ಹೊಸ ಸಮಾಜವ್ಯವಸ್ಥೆಯೊಂದು ಹುಟ್ಟಿಬರಲು ಕಾರಣರಾಗುತ್ತಾರೆ. ಮಾರ್ಗ – ದೇಶಿಯ ಮುಖಾಮುಖಿಯಲ್ಲಿ ವಚನಕಾರರು ಕಂಡುಕೊಂಡ ಮಾದರಿಗಳು ಬಹುಮುಖ್ಯವಾಗಿವೆ. ಆಂಡಯ್ಯನಂತಹ ಕವಿ ಬಣ ಭಾಷಾಭಿಮಾನದಿಂದ ಮಾಡಿದ ಪ್ರಯತ್ನಕ್ಕೂ, ವಚನಕಾರರು ಕನ್ನಡವನ್ನು ಸಮುದಾಯದ ಮೂಲಕ ಬೆಳಗಿಸಿದ ಹೋರಾಟಕ್ಕೂ ಬಹಳ ವ್ಯತ್ಯಾಸವಿದೆ. ಆಂಡಯ್ಯನ ಕನ್ನಡ ಭಾಷಾಪ್ರೇಮ, 'ಕಬ್ಬಿಗರಕಾವ'ದಲ್ಲಿ ಕೇವಲ ದಾಖಲೆಯಾಗಿ ಉಳಿದರೆ, ವಚನಕಾರರ ದೇಶಿಯತೆ, ಬದುಕಿನ ಬಂಡಾಯವಾಗಿ ಚಳುವಳಿಯ ಮೂಲಕ ವಿಸ್ತಾರಗೊಳ್ಳುತ್ತದೆ. ಹೀಗಾಗಿ ಏಕವ್ಯಕ್ತಿಯ ಪ್ರಯತ್ನಕ್ಕಿಂತ,

ಬಹುಜನಸಮುದಾಯದ ಹೋರಾಟ ಅರ್ಥಪೂರ್ಣವೆನಿಸುತ್ತದೆ. ಆದ್ದರಿಂದ ಸಾಮಾಜಿಕ ಪರಿವರ್ತನೆಯ ದೃಷ್ಟಿಯಿಂದ ಗಮನಿಸಿದಾಗ, ಸಾಹಿತ್ಯ ಘಟ್ಟಗಳಿಗಿಂತ, ಸಾಹಿತ್ಯ ಚಳುವಳಿಗಳು ಹೆಚ್ಚು ಮುಖ್ಯವಾಗುತ್ತವೆ. ವಚನಚಳುವಳಿಯ ಬೆನ್ನೆಲುಬಾಗಿ ದುಡಿವ ವರ್ಗದವರು, ದಲಿತರು, ಮಹಿಳೆಯರು ಇದ್ದರೆಂಬುದು ಇನ್ನೂ ಮಹತ್ವದ ಸಂಗತಿಯಾಗುತ್ತದೆ.

ವಚನಕಾರರ ನಂತರ ಬಂದ ಹರಿಹರ - ಕುಮಾರವ್ಯಾಸರಂತಹ ಕವಿಗಳಲ್ಲಿ ಜನಪರ ನಿಲುವುಗಳು ಪ್ರಧಾನವಾಗಿರುವುದನ್ನು ಗಮನಿಸಬಹುದಾಗಿದೆ. ರಳ-ಕುಳ-ಕ್ಷಳಗಳನ್ನು ತಿರಸ್ಕರಿಸಿದ ಮಾತ್ರಕ್ಕೆ ಹರಿಹರ ಕ್ರಾಂತಿಕಾರಿಯಾಗುವುದಿಲ್ಲ. ಆತನ ಕ್ರಾಂತಿಕಾರಿ ಗುಣ ಎದ್ದುಕಾಣುವುದು ಆತನ ರಗಳೆಗಳಲ್ಲಿ. ವರ್ಗಪ್ರತಿಷ್ಠೆ, ವರ್ಣಪ್ರತಿಷ್ಠೆ ಹಾಗೂ ಪಾಂಡಿತ್ಯ ಪ್ರತಿಷ್ಠೆಗಳನ್ನು ಕಿತ್ತೊಗೆಯುವ ಹರಿಹರ, ಜನಪರನಾಗುವುದು ದುಡಿವವರ್ಗದ, ದಲಿತವರ್ಗದ ಶರಣರನ್ನು ವಿಶ್ಲೇಷಿಸುವ ಸಂದರ್ಭದಲ್ಲಿ. ಮಾದಾರ ಚೆನ್ನಯ್ಯನ ರಗಳೆಯಲ್ಲಿ ಬರುವ ಅಂಬಲಿ ಪ್ರಸಂಗ, ಕರಿಕಾಲ ಚೋಳರಾಜನ ವರ್ಗ ಪ್ರತಿಷ್ಠೆಯನ್ನು ಪುಡಿಪುಡಿಮಾಡಿದರೆ, ಬೇಡರ ಕಣ್ಣಪ್ಪನ ರಗಳೆಯಲ್ಲಿ ಕಣ್ಣಪ್ಪನು ಕಣ್ಣುಕಿತ್ತು ಶಿವನಿಗರ್ಪಿಸುವ ಸಮರ್ಪಣಾ ಭಕ್ತಿಯ ಮುಂದೆ ಡಾಂಭಿಕ ಬ್ರಾಹ್ಮಣನ ವರ್ಣಪ್ರತಿಷ್ಠೆ ತಿರಸ್ಕೃತವಾಗುತ್ತದೆ. ಇದೇ ರೀತಿ ಶ್ವಪಚಯ್ಯನ ರಗಳೆಯಲ್ಲಿ ಬರುವ ಸಾಮವೇದಿಯ ಪ್ರಸಂಗ ಪಾಂಡಿತ್ಯ ಪ್ರತಿಷ್ಠೆಯನ್ನು ಅಲ್ಲಗಳೆಯುತ್ತದೆ. ಹೀಗೆ ಬೇಡರ ಕಣ್ಣಪ್ಪ, ಕುಂಬಾರ ಗುಂಡಯ್ಯ, ಬೆಸ್ತರ ಅತಿಭಕ್ತ, ಅಗಸರ ತಿರುಕುರುಂಪೆತೊಂಡ, ಕೂಲಿಯ ಅರಿವಾಳ್ತಾಂಡ, ಒಕ್ಕಲಿಗ ಇಳೆಯಾಂಡ, ಕಶ್ಯಪ ತಿರುನೀಲಕಂಠ, ಮಾದಾರ ಚೆನ್ನಯ್ಯ ಈ ಮೊದಲಾದ ದುಡಿವವರ್ಗದ ಶರಣರನ್ನು, ದಲಿತವರ್ಗದ ಶರಣರನ್ನು ಹರಿಹರ ಅರ್ಥೈಸುವ ರೀತಿ, ವ್ಯಾಖ್ಯಾನಿಸುವ ಪರಿ ಕ್ರಾಂತಿಕಾರಿಯಾಗಿ ಕಾಣಿಸುತ್ತದೆ. ಇದೇ ರೀತಿಯಾಗಿ ಕುಮಾರವ್ಯಾಸಕವಿ ದಾಖಲಿಸುವ ಮಾನವೀಯ ಸಂಬಂಧಗಳು, ಮನುಷ್ಯನ ಸ್ವಭಾವಗಳು ಜನಪರವಾಗಿವೆ. " ಅರಸು ರಾಕ್ಷಸ, ಮಂತ್ರಿಯೆಂಬುವ ಮೊರೆವ ಹುಲಿ, ಪರಿವಾರ ಹದ್ದಿನ ನೆರವಿ ಬಡವರ ಬಿನ್ನಪವನ್ನಿನ್ನಾರು ಕೇಳುವರು " ಎಂದು ಸಭಾಪರ್ವದಲ್ಲಿ ಕುಮಾರವ್ಯಾಸ ವ್ಯಾಖ್ಯಾನಿಸುವ ಈ ನುಡಿ ರಾಜಪ್ರಭುತ್ವದ ವಿರುದ್ಧ ಪ್ರಮುಖ ಪ್ರತಿಭಟನೆಯಾಗಿ ಕಾಣಿಸುತ್ತದೆ.

ಕನ್ನಡ ಸಾಹಿತ್ಯದ ಪರಂಪರೆಯ ಭಕ್ತಿವಾಹಿನಿಯಲ್ಲಿ ಕಾಣಿಸಿಕೊಳ್ಳುವ ಹರಿದಾಸರು– ತತ್ವಪದಕಾರರು ಮಾನವೀಯ ಮೌಲ್ಯಗಳ ಸ್ಥಾಪನೆಗೆ ಪ್ರಮುಖ ಕಾರಣರಾಗಿದ್ದಾರೆ. ಸಾಮಾಜಿಕ ಅವ್ಯವಸ್ಥೆಯ ವಿರುದ್ಧ ಇವರಲ್ಲಿ ನೇರವಾದ ಬಂಡಾಯವಿರದಿದ್ದರೂ ಅನೇಕ ಜನಪರ ಕಾಳಜಿಗಳು, ಅಂತಃಕರಣದ ನುಡಿಗಳು ಗಮನ ಸೆಳೆಯುತ್ತವೆ. ರಾಜಶಾಹಿ ಇದ್ದಾಗ್ಯೂ ರಾಜಾಶ್ರಯದಿಂದ ದೂರವಿದ್ದ ದಾಸರು –ತತ್ವಪದಕಾರರು ಮಡಿವಂತಿಕೆಯ ಬಗೆಗೆ ಕಟುವ್ಯಂಗ್ಯವನ್ನಾಡಿದ್ದಾರೆ. ಸಮಾಜವಿಡಂಬನೆ ಮಾಡಿದ್ದಾರೆ. " ಕುಲಕುಲಕುಲವೆಂದು ಹೊಡೆದಾಡದಿರಿ ನಿಮ್ಮ

ಕುಲದ ನೆಲೆಯನೇನಾದರೂ ನೀವು ಬಲ್ಲಿರಾ ? " ಎಂದು ಕೇಳುವ ಕನಕದಾಸ, " ಮಡಿಮಡಿ ಮಡಿಯೆಂದು ಮಾರುದ್ದ ಹಾರುತಿ, ಮಡಿಯೆಲ್ಲೈತೊ ಭಿಕನಾಶಿ " ಎಂದು ಕುಟುಕುವ ಪುರಂದರದಾಸ. " ಮುಡಚಟ್ಟಿನೊಳು ಬಂದು ಮುಟ್ಟೀ ತಟ್ಟೀ ಅಂತೀರಿ ಮುಡಚಟ್ಟ ಎಲ್ಲ್ಯಾದ್ಹೋಳಣ್ಣ ? " ಎಂದು ಕೇಳುವ ಕಡಕೋಳ ಮಡಿವಾಳಪ್ಪ – ಈ ಮೊದಲಾದ ಅನುಭಾವಿಗಳು ಮುಖ್ಯರಾಗುವುದು ಜಾತಿವ್ಯವಸ್ಥೆಯನ್ನು ತಿರಸ್ಕರಿಸಿ ಮಾನವೀಯ ಮೌಲ್ಯಗಳನ್ನು ಸ್ಥಾಪಿಸಿದುದಕ್ಕಾಗಿ. ವರ್ಣ ವ್ಯವಸ್ಥೆ ಪ್ರಬಲವಾಗಿದ್ದ ಅಂದಿನ ಸಂದರ್ಭದಲ್ಲಿ ಕನಕದಾಸನಂಥವರು, ರಾಮದಾಸನಂಥವರು ದಾಸವರೇಣ್ಯರಾಗಿ ಜಾತಿ-ಜಾತಿಗಳ ನಡುವೆ ಸೌಹಾರ್ದತೆಯನ್ನುಂಟು ಮಾಡುವ ಪ್ರಸಂಗಗಳು ಬಂಡಾಯ ಪರಂಪರೆಯಲ್ಲಿ ಬಹುಮುಖ್ಯ ನೆಲೆಗಳಾಗುತ್ತವೆ. ಇದೇ ರೀತಿ ತನಗೆ ಸರಿಯೆನಿಸಿದ್ದನ್ನು ನೇರವಾಗಿ ಹೇಳಿದ ಸರ್ವಜ್ಞನಂತಹ ಕವಿಗಳು ಚಳುವಳಿಯ ಸಾಹಿತ್ಯಪರಂಪರೆಗೆ ಸೇರದಿದ್ದರೂ ವ್ಯಕ್ತಿನೆಲೆಯಲ್ಲಿಯೇ ಜನಪರ ಆಶಯಗಳನ್ನು ಪ್ರಕಟಿಸಿದ್ದಾರೆ. ಸರ್ವಜ್ಞನ ತ್ರಿಪದಿಗಳಲ್ಲಿ ಕಾಣುವ ನೇರ ನುಡಿ, ತೀವ್ರ ವ್ಯಂಗ್ಯ, ಕಣ್ಣಿಗೆ ಕಾಣುವ ಕಟುಸತ್ಯ – ಗಮನಾರ್ಹವಾಗಿವೆ. ಇಂತಹ ಕವಿಗಳಲ್ಲಿ ಕಾವ್ಯದ ಅನನ್ಯತೆಯ ಪ್ರಶ್ನೆಗಿಂತ, ಕಾವ್ಯದ ಪ್ರಯೋಗಶೀಲತೆಯ ಪ್ರಶ್ನೆಗಿಂತ, ಸಾಮಾಜಿಕ ಕಳಕಳಿಯ ಕಾಳಜಿ ಮುಖ್ಯವಾಗುತ್ತದೆ.

ಹೀಗೆ ಹಳಗನ್ನಡ - ನಡುಗನ್ನಡ ಸಾಹಿತ್ಯದ ಸಂದರ್ಭದಲ್ಲಿ ಬೆಳೆದುಕೊಂಡುಬಂದ ಬಂಡಾಯ ಪರಂಪರೆ ಆಧುನಿಕ ಸಂದರ್ಭದ ನವೋದಯ ಪ್ರಗತಿಶೀಲ ಘಟ್ಟಗಳಲ್ಲಿಯೂ ಕಾಣಿಸಿಕೊಂಡಿತು. ನವೋದಯ ಘಟ್ಟದ ಕುವೆಂಪು, ಕಾರಂತ, ಬೇಂದ್ರೆಯವರಂತಹ ಕೆಲವು ಪ್ರಮುಖ ಸಾಹಿತಿಗಳಲ್ಲಿ ಸಾಮಾಜಿಕ ಪ್ರಜ್ಞೆ, ಪ್ರತಿಭಟನೆ, ಜನಪರ ಕಾಳಜಿಗಳನ್ನು ಕಾಣಬಹುದಾಗಿದೆ. ಅದೇ ರೀತಿ ಪ್ರಗತಿಶೀಲ ಲೇಖಕರಾದ ನಿರಂಜನ, ಬಸವರಾಜ ಕಟ್ಟೀಮನಿ, ಚದುರಂಗ, ಬಲ್ಲಾಳ ಈ ಮುಂತಾದವರಲ್ಲಿ ಬಂಡಾಯದ ಸ್ಫೋಟವನ್ನು ಗುರುತಿಸಬಹುದಾಗಿದೆ. ಹಾಗೆಯೇ ನವ್ಯದ ಲಂಕೇಶ, ಅನಂತಮೂರ್ತಿ, ತೇಜಸ್ವಿಯವರಲ್ಲಿ ಪ್ರಗತಿಪರ ನೆಲೆಗಟ್ಟನ್ನು ಕಾಣಬಹುದಾಗಿದೆ. ಹೀಗೆ ೧೦ ನೇ ಶತಮಾನದಿಂದ ಹಿಡಿದು ೨೦ ನೇ ಶತಮಾನದ ವರೆಗೆ ವ್ಯಾಪಿಸಿರುವ ಬಂಡಾಯದ ಗುಣ ಒಂದು ಪರಂಪರೆಯಾಗಿ ಕನ್ನಡ ಸಾಹಿತ್ಯದಲ್ಲಿ ಬೆಳೆದುಕೊಂಡು ಬಂದಿದೆ.

## ಬಂಡಾಯ ಸಾಹಿತ್ಯ ಚಳುವಳಿಯ ಮುಖ್ಯ ಪ್ರೇರಣೆಗಳು :

೧೯೭೯ ಮಾರ್ಚ ೧೦ ಹಾಗೂ ೧೧ ರಂದು ಬೆಂಗಳೂರಿನಲ್ಲಿ ನಡೆದ, ರಾಜ್ಯಮಟ್ಟದ ಪ್ರಥಮ ಬಂಡಾಯ ಸಾಹಿತ್ಯ ಸಮ್ಮೇಳನದ ಮೂಲಕ, ಕರ್ನಾಟಕದಲ್ಲಿ ಪ್ರಾರಂಭವಾದ ಬಂಡಾಯ ಸಾಹಿತ್ಯ ಚಳುವಳಿ ದಿಢೀರನೇ ಹುಟ್ಟಿಕೊಂಡದ್ದಲ್ಲ. ಸಾಮಾಜಿಕ ಅನಿವಾರ್ಯತೆಯಿಂದ ಹುಟ್ಟಿಕೊಂಡ ಕರ್ನಾಟಕ 'ರಾಜ್ಯ ಬಂಡಾಯ ಸಾಹಿತ್ಯ ಸಂಘಟನೆ'ಯ ಉಗಮಕ್ಕೆ ಅನೇಕ ಪ್ರೇರಣೆಗಳಿವೆ. ಈ ಪ್ರೇರಣೆಗಳಲ್ಲಿ ಸಾಹಿತ್ಯಕ ಪ್ರೇರಣೆಗಳು ಹಾಗೂ ಸಾಹಿತ್ಯೇತರ ಪ್ರೇರಣೆಗಳೆಂದು ಎರಡು ವಿಧ.

ಸಾಹಿತ್ಯೇತರ ಪ್ರೇರಣೆಗಳಲ್ಲಿ ಸಿದ್ಧಾಂತಗಳು ಮತ್ತು ಚಳುವಳಿಯ ವಿಷಯಗಳು ಮುಖ್ಯವಾದರೆ, ಸಾಹಿತ್ಯಕ ಪ್ರೇರಣೆಗಳಲ್ಲಿ ತೆಲುಗಿನ ದಿಗಂಬರ ಕಾವ್ಯ ಹಾಗೂ ಮರಾಠೀ ದಲಿತ ಪ್ಯಾಂಥರ್ಸ್ ಪ್ರಮುಖವಾಗಿವೆ. ಕನ್ನಡದಲ್ಲಿ ಆಗಿಹೋದ ಹಿಂದಿನ ಎರಡೂ ಚಳುವಳಿಗಳಿಗೂ ಸಾಹಿತ್ಯೇತರ ಪ್ರೇರಣೆಗಳು ಮುಖ್ಯವಾಗಿವೆ. ವಚನಚಳುವಳಿಗೆ ವೀರಶೈವ ಸಿದ್ಧಾಂತ ಸಾಹಿತ್ಯೇತರ ಪ್ರೇರಣೆಯಾದರೆ, ಪ್ರಗತಿಶೀಲ ಚಳುವಳಿಗೆ ಎಡಪಂಥೀಯ ಸಿದ್ಧಾಂತ ಪ್ರಮುಖ ಪ್ರೇರಣೆಯಾಗಿದೆ. ಕನ್ನಡದ ವಿವಿಧ ಸಾಹಿತ್ಯಘಟ್ಟಗಳಿಗೆ ಸಾಹಿತ್ಯಕ ಕಾರಣಗಳು ಮಾತ್ರ ಮುಖ್ಯವಾಗಿದ್ದರೆ, ಚಳುವಳಿಯ ಸಾಹಿತ್ಯಕ್ಕೆ ಸಾಹಿತ್ಯೇತರ ಪ್ರೇರಣೆಗಳೂ ಮುಖ್ಯವಾಗುತ್ತದೆ.

## ಸಾಹಿತ್ಯೇತರ ಪ್ರೇರಣೆಗಳು :

ಮುಖ್ಯವಾಗಿ ಎಡಪಂಥೀಯ ಸಿದ್ಧಾಂತಗಳು ಬಂಡಾಯ ಸಾಹಿತ್ಯ ಚಳುವಳಿಯ ಮೇಲೆ ಗಾಢಪ್ರಭಾವವನ್ನುಂಟುಮಾಡಿವೆ. ಪ್ರಗತಿಶೀಲ ಚಳುವಳಿಗೆ ಪ್ರೇರಣೆ ನೀಡಿದ ಮಾರ್ಕ್ಸ್‌ವಾದ, ಬಂಡಾಯ ಚಳುವಳಿಗೂ ಪ್ರಮುಖ ನೆಲೆಯಾಗಿದೆ. ಎಲ್ಲ ಜಾತಿಯ ಬಡವರನ್ನು ಒಗ್ಗೂಡಿಸುವ ಮಾರ್ಕ್ಸ್‌ವಾದ ಅತ್ಯಂತ ಜನಪರವಾದ ಸಿದ್ಧಾಂತವಾಗಿದೆ. ವರ್ಗ ಹೋರಾಟದ ಮೂಲಕ ಸಾಮಾಜಿಕ ರಾಜಕೀಯ ಆರ್ಥಿಕ ಸಮಾನತೆಯನ್ನು ಬಯಸುವ ಈ ಸಿದ್ಧಾಂತ ಇಲ್ಲಿ ಮುಖ್ಯ ಪ್ರೇರಣೆಯಾಗಿದೆ.

ಸಾಹಿತ್ಯವೆಂಬುದು ಸಮಾಜವನ್ನು ಬಿಟ್ಟಿಲ್ಲ. ಹೀಗಾಗಿ ಸಮಾಜವೆಂದರೆ ಕೇವಲ ಜನಸಮುದಾಯವಲ್ಲ. ಆ ಜನಸಮುದಾಯದ ರಾಜಕೀಯ ಆರ್ಥಿಕ ಬೆಳವಣಿಗೆಗಳು, ಸಾಮಾಜಿಕ ಸ್ಥಿತಿಗತಿಗಳು ಬದುಕನ್ನು ರೂಪಿಸುವುದರಿಂದ ರಾಜಕೀಯ ಸಿದ್ಧಾಂತವಿರದೆ ಭಾವುಕರಾಗಿ ಸಮಾಜವನ್ನು ಕಟ್ಟಲು ಸಾಧ್ಯವಿಲ್ಲ. ಆದುದರಿಂದ ಸಮಾಜದ ಜನತೆಗೆ ರಾಜಕೀಯ ಪ್ರಜ್ಞೆ ಅತ್ಯಗತ್ಯವೆಂದು ಮಾರ್ಕ್ಸ್‌ವಾದಿಗಳು ಹೇಳುತ್ತಾರೆ. ಕವಿ ಮತ್ತು ಕಾಲದ ಸಂಬಂಧ ಹೇಗಿರಬೇಕೆಂಬುದನ್ನು ಮ್ಯಾಕ್ಸಿಂ ಗಾರ್ಕಿ ಹೀಗೆ ಹೇಳುತ್ತಾನೆ : "The Artist is the sensitive recipient of all that affects his country and his class- its ear, eye and heart; he is the voice of his time" (on Literature by Maxim Gorki). ಕವಿಯು ತನ್ನ ಸಮಕಾಲೀನ ಸಂದರ್ಭದ ದನಿಯಾಗಬೇಕೆಂಬ ಗಾರ್ಕಿಯ ಮಾತು ಇಲ್ಲಿ ಬಹುಮುಖ್ಯವಾಗುತ್ತದೆ. ಸಾಹಿತಿಯಾದವನು ಸಮಾಜದ ಒಟ್ಟು ಉತ್ಪಾದನಾ ವ್ಯವಸ್ಥೆಯ ಒಂದು ಭಾಗವಾದಾಗ, ರಾಜಕೀಯ ಬದಲಾವಣೆಯನ್ನು ನಿರ್ಲಕ್ಷಿಸಿ, ಕೇವಲ ಭಾವುಕ ಪ್ರಪಂಚದಲ್ಲಿ ಬದುಕುವುದು ಸಾಧ್ಯವಾಗದ ಮಾತು. ಮಾರ್ಕ್ಸ್‌ವಾದದ ಇಂತಹ ಅನೇಕ ಪ್ರಗತಿಪರ ಚಿಂತನೆಗಳು ಬಂಡಾಯ ಲೇಖಕರ ಮೇಲೆ ಪ್ರಭಾವವನ್ನುಂಟುಮಾಡಿವೆ.

ಬಂಡಾಯ ಸಾಹಿತ್ಯ ಚಳುವಳಿಯ ಬೀಜಗಳು ತುರ್ತುಪರಿಸ್ಥಿತಿಯ ನಂತರ ಸ್ಪಷ್ಟವಾಗಿ ಕಾಣಿಸಿಕೊಂಡವು. ಎಪ್ಪತ್ತರ ದಶಕದ ಉತ್ತರಾರ್ಧದಲ್ಲಿ ನಡೆದ ಅನೇಕ ಘಟನಾವಳಿಗಳು, ಹೋರಾಟಗಳು ಬಂಡಾಯ ಚಳುವಳಿಯ ಮುಖ್ಯ ಪ್ರವೃತ್ತಿಗಳ

ಸ್ವರೂಪವನ್ನು ನಿರ್ಧರಿಸಲು ಕಾರಣವಾಗಿವೆ. ೧೯೭೩ ರಲ್ಲಿ ನಡೆದ ಬಸವಲಿಂಗಪ್ಪನವರ ಬೂಸಾ ಪ್ರಕರಣದ ಪರಿಣಾಮವಾಗಿ ಅಗಸ್ಟ್ ೨೫ ರಂದು ಮೈಸೂರಲ್ಲಿ ನಡೆದ 'ಜಾತಿವಿನಾಶ ಸಮ್ಮೇಳನ', ೧೯೭೪ ಎಪ್ರಿಲ್ ೨೦ ರಂದು ಹುಟ್ಟಿದ 'ಬರಹಗಾರರ ಮತ್ತು ಕಲಾವಿದರ ಒಕ್ಕೂಟ' ಬಂಡಾಯ ಚಳುವಳಿಯ ಉಗಮಕ್ಕೆ ಪ್ರಮುಖ ಪ್ರೇರಣೆಗಳಾಗಿವೆ. ಅದೇ ರೀತಿ ವಿದ್ಯಾವಂತ ದಲಿತರು ಎಚ್ಚತ್ತು ೧೯೭೪ ರಲ್ಲಿ ಭದ್ರಾವತಿಯಲ್ಲಿ ' ದಲಿತ ಸಂಘರ್ಷ ಸಮಿತಿ ' ಯನ್ನು ಹುಟ್ಟುಹಾಕಿದರು. ಮುಂದೆ ಇದು ದಲಿತ ವಿದ್ಯಾರ್ಥಿ ಒಕ್ಕೂಟ, ದಲಿತ ಮಹಿಳಾ ಒಕ್ಕೂಟ, ದಲಿತ ಕಲಾಮಂಡಳಿ ಎಂಬ ವಿವಿಧ ಸಂಘಟನೆಗಳ ಮೂಲಕ ಬೆಳೆದು ದಲಿತ ಸಂಘರ್ಷ ಸಮಿತಿಯ ಹೋರಾಟ ತೀವ್ರಗೊಳ್ಳಲು ಕಾರಣವಾಯಿತು. ೧೯೭೫ ಜೂನ್ ೨೫ ರಂದು ಜಾರಿಗೆ ಬಂದ ತುರ್ತು ಪರಿಸ್ಥಿತಿಯಿಂದಾಗಿ ಕರ್ನಾಟಕದ ಪ್ರಗತಿಪರ ಲೇಖಕರು - ಕಲಾವಿದರು ಬೀದಿಗಿಳಿದರು. ಕೆಲವರು ಭೂಗತರಾಗಿದ್ದುಕೊಂಡು ತುರ್ತುಪರಿಸ್ಥಿತಿಯನ್ನು ವಿರೋಧಿಸಿದರು. ಇನ್ನು ಕೆಲವರು ಜೇಲು ಸೇರಿದರು. ಇದೇ ಸಂದರ್ಭದಲ್ಲಿ ಹುಟ್ಟಿದ 'ಕರ್ನಾಟಕ ಸಮುದಾಯ ಸಂಘಟನೆ' ಸಾಂಸ್ಕೃತಿಕ ಜಾಗೃತಿಯನ್ನುಂಟುಮಾಡುವಲ್ಲಿ ಬಹುಮುಖ್ಯಪಾತ್ರವಹಿಸಿತು.

ಈ ಸಂದರ್ಭದಲ್ಲಿ ಪ್ರಕಟವಾಗುತ್ತಿದ್ದ ಕೆಂಬಾವುಟ, ಐಕ್ಯರಂಗ, ಮುಂಗಾರು, ಪಂಚಮ, ಅನ್ವೇಷಣೆ ಸಮುದಾಯವಾರ್ತಾಪತ್ರ, ಸಂಕ್ರಮಣದಂತಹ ಪತ್ರಿಕೆಗಳು ಪ್ರಗತಿಪರ ವಿಚಾರಗಳನ್ನು, ಜ್ವಲಂತ ಸಮಸ್ಯೆಯ ಲೇಖನಗಳನ್ನು ಪ್ರಕಟಿಸುವುದರ ಮೂಲಕ ಯುವ ಲೇಖಕರು ಜಾಗೃತರಾಗಲು ಕಾರಣವಾದವು. ೧೯೭೯ ರ ಮಾರ್ಚ ೧೦ ರಂದು ಧರ್ಮಸ್ಥಳದಲ್ಲಿ ಅಖಿಲಭಾರತ ಸಾಹಿತ್ಯ ಸಮ್ಮೇಳನ ನಡೆದು ಗೋಪಾಲಕೃಷ್ಣ ಅಡಿಗರು ಅಧ್ಯಕ್ಷರಾದರು. ಸಮ್ಮೇಳನದಲ್ಲಿ ದಲಿತಸಾಹಿತ್ಯದ ಬಗ್ಗೆ ಪ್ರತ್ಯೇಕ ಗೋಷ್ಠಿಯೊಂದನ್ನೇರ್ಪಡಿಸಬೇಕೆಂದು ಚೆನ್ನಣ್ಣ ವಾಲೀಕಾರವರು ಪರಿಷತ್ ಅಧ್ಯಕ್ಷರಿಗೆ ಪತ್ರಬರೆದರು. ಪರಿಷತ್ತು ವಾಲೀಕಾರ ಹಾಗೂ ಸಮಾನ ಮನಸ್ಕ ಗೆಳೆಯರ ಈ ಸಲಹೆಯನ್ನು ಒಪ್ಪದೇ ಹೋದುದರಿಂದ ಪ್ರಗತಿಪರ ಆಲೋಚನೆಯುಳ್ಳ ಬರಹಗಾರರೆಲ್ಲ ಸೇರಿ ಪ್ರತ್ಯೇಕ ಸಮ್ಮೇಳನ ನಡೆಸಲು ತೀರ್ಮಾನಿಸಿದರು. ಧರ್ಮಸ್ಥಳದಲ್ಲಿ ಸಾಹಿತ್ಯ ಸಮ್ಮೇಳನ ನಡೆಯುವ ಸಂದರ್ಭದಲ್ಲಿಯೇ, ಅಂದರೆ ೧೯೭೯ ಮಾರ್ಚ್ ೧೦, ೧೧ ರಂದು ಬೆಂಗಳೂರಿನಲ್ಲಿ ಪ್ರಥಮ ಬಂಡಾಯ ಸಾಹಿತ್ಯ ಸಮ್ಮೇಳನ ನಡೆಯಿತು.

ಹೀಗೆ ಬಂಡಾಯ ಚಳುವಳಿಗೆ, ಎಪ್ಪತ್ತರ ದಶಕದ ಉತ್ತರಾರ್ಧದಲ್ಲಿ ನಡೆದ ಈ ಜನಪರ ಚಿಂತನೆಗಳು ಮತ್ತು ಸಂಘಟನೆಗಳು ಮುಖ್ಯ ಪ್ರೇರಣೆಯನ್ನೊದಗಿಸಿದವು. ಮಾರ್ಕ್ಸ್‌ವಾದದ ಜತೆಗೆ ಲೋಹಿಯಾವಾದ ಹಾಗೂ ಅಂಬೇಡಕರ್‌ವಾದಗಳೂ ಪ್ರಭಾವ ಬೀರಿದವು. ಮಾರ್ಕ್ಸ್‌ವಾದ ಮತ್ತು ನೆಹರೂವಾದಗಳಿಗೆ ಪರ್ಯಾಯವಾಗಿ ಬೆಳೆದ ಲೋಹಿಯಾವಾದ, ಬಂಡಾಯ ಚಳುವಳಿಯ ಅನೇಕ ಲೇಖಕರಿಗೆ ಪ್ರಮುಖ ಪ್ರೇರಣೆ ಮಾಡಿತು. ಭಾರತೀಯ

ರಾಜಕಾರಣದ ಏಕೈಕ ಬುದ್ಧಿಜೀವಿಯೆಂಬ ಹೆಗ್ಗಳಿಕೆಗೆ ಕಾರಣರಾಗಿದ್ದ ರಾಮಮನೋಹರ ಲೋಹಿಯಾ ಅವರು ಯುವಬರಹಗಾರರಿಗೆ, ಅದರಲ್ಲೂ ಬ್ರಾಹ್ಮಣೇತರ ಬರಹಗಾರರಿಗೆ ಮುಖ್ಯ ಪ್ರೇರಣೆಯಾದರು. ಲೋಹಿಯಾ ಅವರು ಇಂಗ್ಲೀಷ ಭಾಷೆಯ ಬಗ್ಗೆ, ಜಾತಿಪದ್ಧತಿಯ ಬಗ್ಗೆ, ಅಸಮಾನತೆಯ ಬಗ್ಗೆ ವ್ಯಕ್ತಪಡಿಸಿದ ವಿಚಾರಧಾರೆ ಕನ್ನಡ ಬರಹಗಾರರಲ್ಲಿ ಉತ್ತೇಜನವನ್ನುಂಟುಮಾಡಿತು. ಇನ್ನು ಕನ್ನಡದ ದಲಿತ ಬರಹಗಾರರೆಲ್ಲ ಒಂದಲ್ಲ ಒಂದು ರೀತಿಯಿಂದ ಅಂಬೇಡಕರ್‌ವಾದದಿಂದ ಪ್ರೇರಣೆ ಪಡೆದವರಾಗಿದ್ದಾರೆ. ಹಿಂದೂ ಧರ್ಮದ ಸಾಮಾಜಿಕ ವಿಷಮತೆಗೆ ಬ್ರಾಹ್ಮಣೀಕರಣವೇ ಮುಖ್ಯ ಕಾರಣವೆಂದು ಹೇಳಿದ ಅಂಬೇಡಕರ್ ಅವರ ಸಿದ್ಧಾಂತ, ದಲಿತ ಲೇಖಕರನ್ನು ಬಹುಬೇಗ ಆಕರ್ಷಿಸಿತು. ದಲಿತರ ಏಳಿಗೆಗಾಗಿ ಶಿಕ್ಷಣ – ಸಂಘಟನೆ – ಹೋರಾಟ ಅಗತ್ಯವೆಂದು ಅಂಬೇಡಕರ್ ಪ್ರತಿಪಾದಿಸಿದರು. ಸ್ವಸುಧಾರಣೆ - ಸ್ವಾವಲಂಬನೆ - ಸ್ವಾಭಿಮಾನ ಬಹುಮುಖ್ಯವೆಂದು ಹೇಳಿದರು. ಜಾತಿಯ ಅಸಮಾನತೆಯಿಂದ, ಅಸ್ಪೃಶ್ಯತೆಯ ತೀವ್ರತೆಯಿಂದ ಶೋಷಣೆಗೊಳಗಾಗಿದ್ದ ದಲಿತ ಲೇಖಕರಿಗೆ ಸಹಜವಾಗಿಯೇ ಅಂಬೇಡಕರ್‌ವಾದ ಅನಿವಾರ್ಯವಾಯಿತು.

## ಸಾಹಿತ್ಯಕ ಪ್ರೇರಣೆಗಳು :

ಬಂಡಾಯ ಚಳುವಳಿಯ ಸಾಹಿತ್ಯಕ ಪ್ರೇರಣೆಗಳಲ್ಲಿ ಮುಖ್ಯವಾದದ್ದು ನವ್ಯದ ಸ್ಥಗಿತತೆ. ನವ್ಯಸಾಹಿತ್ಯ ಇಳಿಮುಖವಾಗುತ್ತಿರುವ ಸಂದರ್ಭದಲ್ಲಿ ಬಂದ ದ್ಯಾವನೂರು, ಹೊಲೆಮಾದಿಗರ ಹಾಡು, ಹೋರಾಟ, ಒಂದು ಊರಿನ ಕತೆ, ಮುಸ್ಸಂಜೆಯ ಕಥಾಪ್ರಸಂಗ, ಅಬಚೂರಿನ ಪೋಸ್ಟಾಫೀಸು, ಒಂದು ಹುಡುಗನಿಗೆ ಬಿದ್ದ ಕನಸು– ಈ ಮೊದಲಾದ ಕೃತಿಗಳಲ್ಲಿ ಹೊಸ ಸಾಹಿತ್ಯದ ಆಶಯಗಳು ಸ್ಪಷ್ಟವಾಗಿ ಕಾಣಿಸುತ್ತವೆ. ಕ್ರೂರ ವ್ಯವಸ್ಥೆಯ ವಿರುದ್ಧ, ಯಜಮಾನ ಸಂಸ್ಕೃತಿಯ ಎಲ್ಲ ಸಂಚುಗಳ ವಿರುದ್ಧ ಬಂಡೆದ್ದ ಪ್ರಗತಿಪರ ಮನೋಧರ್ಮವೇ ಬಂಡಾಯ ಚಳುವಳಿಯ ಮೂಲಸತ್ವವಾಯಿತು. ನವ್ಯಸಾಹಿತ್ಯದ ಮಿತಿಗಳೇ ಬಂಡಾಯ ಸಾಹಿತ್ಯದ ಹುಟ್ಟಿಗೆ ಕಾರಣವಾದವು. ಪೂರ್ಣಚಂದ್ರ ತೇಜಸ್ವಿಯವರು ತಮ್ಮ 'ಅಬಚೂರಿನ ಪೋಸ್ಟಾಫೀಸು' ಕಥಾಸಂಕಲನಕ್ಕೆ ಬರೆದ ಮುನ್ನುಡಿಯಲ್ಲಿ ಹೀಗೆ ಹೇಳುತ್ತಾರೆ.

" ನವ್ಯ ಸಾಹಿತ್ಯ ಸಂಪೂರ್ಣ ನಿಸ್ತೇಜಗೊಂಡಿದೆ. ಬದಲಾಗುತ್ತಿರುವ ಪರಿಸರದ ಹೊಸ ಜವಾಬ್ದಾರಿಗಳನ್ನು ಅದು ಹೊರಲಾರದು. ಏಕೆಂದರೆ ಮೊದಲನೆಯದಾಗಿ ಯಾಂತ್ರಿಕವಾಗಿರುವ ಅದರ ಸಾಂಕೇತಿಕ ಶೈಲಿ, ತಂತ್ರಗಳು, ಕೇವಲ ಇಂಗ್ಲೀಷ ಉಪಾಧ್ಯಾಯರೇ ಹೆಚ್ಚಾಗಿರುವ ಅದರ ಸಾಹಿತಿ ವರ್ಗ ಮತ್ತು ಕೇವಲ ಸಾಹಿತ್ಯದ ಮಟ್ಟಿಗೇ ಸೀಮಿತಗೊಂಡ ಅದರ ಕ್ರಾಂತಿಕಾರಿತನ. ಈ ಮೂರು ಕಾರಣಗಳಿಂದ ಈ ಸಾಹಿತ್ಯ ಸಂಪ್ರದಾಯ ಅವನತಿ ಹೊಂದಿದೆ. ಆದ್ದರಿಂದಲೇ ಈ ಮಾರ್ಗವನ್ನು ತ್ಯಜಿಸುವುದಷ್ಟೆ ಅಲ್ಲದೆ ಇದರ ಸ್ಫೂರ್ತಿಮೂಲಗಳು, ಇದರ ಅಭಿವ್ಯಕ್ತಿ ಪರಿಕರಗಳು, ಇದರ ಮೌಲ್ಯಗಳು ಎಲ್ಲವನ್ನೂ ತ್ಯಜಿಸಬೇಕಾಗಿದೆ. ಎಂದರೆ ರಾಜಕೀಯವಾಗಿ,

ಸಾಮಾಜಿಕವಾಗಿ, ತಾತ್ವಿಕವಾಗಿ ಸಮಗ್ರವಾಗಿ ಬದಲಾವಣೆಯಾಗುವುದರಿಂದ ಮಾತ್ರವೇ ನಿಜವಾದ ಹೊಸ ಸಾಹಿತ್ಯ ಹೊರಬರುತ್ತದೆ." (೧೯೮೩ : vii-x)

ನವ್ಯಸಾಹಿತ್ಯದ ಮಿತಿಗಳನ್ನು ತೇಜಸ್ವಿಯವರು ಬಹು ಖಚಿತವಾಗಿ ಗುರುತಿಸಿದ್ದಾರೆ. ನವ್ಯಕೃತಿಗಳು ಅತಿ ಎನ್ನುವ ಏಕಾಂಗಿತನವನ್ನು, ಸಮಾಜದಿಂದ ದೂರಸರಿಯುವ ವಿಕ್ಷಿಪ್ತತೆಯನ್ನು ಕೀರ್ತಿಸತೊಡಗಿದ್ದರಿಂದ ಅವು ಸಹಜವಾಗಿಯೇ ಅಂತರ್ಮುಖಿಯಾದವು, ಸಮಾಜದ ಪ್ರಚಲಿತ ಸಮಸ್ಯೆಗಳಿಂದ ದೂರವೇ ಉಳಿದವು. ಹೀಗೆ ನವ್ಯದ ಮೂಲಸಿದ್ಧಾಂತ, ಅದರ ಅಸಂಗತತೆ, ಅದರ ಅಭಿವ್ಯಕ್ತಿಕ್ರಮ ಜಗತ್ತಿನಲ್ಲಿ ನಿಲ್ಲದೇ ಹೋಯಿತು. ಹೊಸ ಸಾಹಿತ್ಯದ ಹುಟ್ಟಿಗೆ. ಹೊಸ ಆಕೃತಿಗಳ ಹುಡುಕಾಟಕ್ಕೆ ತಾನೇ ತಾನಾಗಿ ಎಡೆಮಾಡಿಕೊಟ್ಟಿತು. ಭಾಷೆಯೆಂಬುದು ಕೇವಲ ಪಂಡಿತರ ಕಸರತ್ತಾದಾಗ, ಅಭಿವ್ಯಕ್ತಿಯೆಂಬುದು ಬರೀ ಆತ್ಮರತಿಯಾದಾಗ ಅಂತಹ ಸಾಹಿತ್ಯ ಸಹಜವಾಗಿಯೇ ಜನಸಮುದಾಯದಿಂದ ದೂರ ಸರಿಯುತ್ತದೆ. ಹೀಗೆ ನವ್ಯಸಾಹಿತ್ಯ ಸ್ಥಗಿತಗೊಂಡ ಸಂದರ್ಭದಿಂದಲೇ ಹೊಸ ಚಿಂತನೆಯ ಸಾಹಿತ್ಯದ ಬೀಜಗಳು ಮೊಳಕೆಯೊಡೆಯತೊಡಗಿದವು. ಅದೇ ಮುಂದೆ ಬಂಡಾಯ ಸಾಹಿತ್ಯವೆಂದು ಹೆಸರಾಯಿತು.

ಸಾಹಿತ್ಯಕ ಪ್ರೇರಣೆಗಳಲ್ಲಿ ತೆಲುಗಿನ ದಿಗಂಬರ ಕಾವ್ಯವೂ ಒಂದು. ೧೯೬೫ ರಿಂದ ಆಂಧ್ರಪ್ರದೇಶದಲ್ಲಿ ಒಂದು ದೊಡ್ಡ ಪರಂಪರೆಯಾಗಿ ಬೆಳೆದುಬಂದ ದಿಗಂಬರಕಾವ್ಯವು ತೀವ್ರ ಪರಿಣಾಮವನ್ನುಂಟುಮಾಡಿತು. ಅಲ್ಲಿಯ ಪ್ರಮುಖ ಬರಹಗಾರರಾಗಿದ್ದ ಚೆರಬಂಡರಾಜು, ನಗ್ನಮುನಿ, ಭೈರವಯ್ಯ, ನಿಖಿಲೇಶ್ವರ್, ಮಹಾಸ್ವಪ್ನ, ಜ್ವಾಲಾಮುಖಿ– ಈ ಮೊದಲಾದ ಲೇಖಕರು ಕನ್ನಡ ಬಂಡಾಯ ಕಾವ್ಯಕ್ಕೆ ಪ್ರೇರಣೆ ನೀಡಿದರು. ಬೆಂಗಳೂರಲ್ಲಿ ನಡೆದ ರಾಜ್ಯಮಟ್ಟದ ಪ್ರಥಮ ಬಂಡಾಯ ಸಾಹಿತ್ಯ ಸಮ್ಮೇಳನವನ್ನು ತೆಲುಗಿನ ಪ್ರಖ್ಯಾತ ಕವಿ ಶ್ರೀ ಶ್ರೀ ಯವರು ಉದ್ಘಾಟಿಸಿದರು. ದಿಗಂಬರ ಕವಿಗಳು ತಮ್ಮ ಕೃತಿಗಳನ್ನು ಭಿಕ್ಷುಕರಿಂದ, ಹೋಟೆಲ್ ಕ್ಲೀನರ್‌ಗಳಿಂದ, ರಿಕ್ಷಾವಾಲಾಗಳಿಂದ ರಾತ್ರಿಹೊತ್ತಿನಲ್ಲಿ ಬೀದಿಯಲ್ಲಿ ಬಿಡುಗಡೆ ಮಾಡಿಸುತ್ತಿದ್ದರು. ರಾಯಚೂರು, ಕೋಲಾರ ಜಿಲ್ಲೆಗಳ ಬಂಡಾಯ ಲೇಖಕರ ಮೇಲೆ ದಿಗಂಬರಕಾವ್ಯ ಗಾಢ ಪ್ರಭಾವವನ್ನುಂಟುಮಾಡಿದೆ. ದಿಗಂಬರ ಕಾವ್ಯವನ್ನು ಜನಪ್ರಿಯಗೊಳಿಸಿ ಜನಮನವನ್ನು ಮುಟ್ಟಿದ ಪ್ರಸಿದ್ಧ ಕ್ರಾಂತಿಕಾರಿ ಗಾಯಕ ಗದ್ದಾರ ಅವರನ್ನು ಈ ಸಂದರ್ಭದಲ್ಲಿ ಗಮನಿಸಬಹುದು. ಜನನಾಟ್ಯಮಂಡಳಿಯ ಪ್ರಭಾವವನ್ನೂ ಇಲ್ಲಿ ಗುರುತಿಸಬಹುದು. ಕರ್ನಾಟಕದ ಸಂದರ್ಭದಲ್ಲಿ ಪಿಚ್ಚಳ್ಳಿ ಶ್ರೀನಿವಾಸರಂತಹ ಕಲಾವಿದರು, ಗದ್ದಾರ ಅವರ ಕಾರ್ಯವನ್ನು ಕೆಲವು ವರ್ಷ ಮುಂದುವರಿಸಿದ್ದನ್ನು; ದಲಿತಸಂಘರ್ಷ ಸಮಿತಿ ಹಾಗೂ ದಲಿತವಿದ್ಯಾರ್ಥಿ ಒಕ್ಕೂಟಗಳ ಮೇಲೆ ಈ ಗದ್ದಾರವರ ಹಾಡಿನ ಪ್ರಭಾವ ದಟ್ಟವಾದುದನ್ನು ಗಮನಿಸಬಹುದು.

೧೯೬೭ ರಿಂದ ಮಹಾರಾಷ್ಟ್ರದಲ್ಲಿ ಜನಮನ ತಲುಪಿದ ದಲಿತ ಪ್ಯಾಂಥರ್ಸ್, ಬಂಡಾಯಕ್ಕೆ ಮುಖ್ಯ ಪ್ರೇರಣೆಯಾಗಿದೆ. ದಯಾ ಪವಾರ್, ನಾಮದೇವ ಢಸಾಳ,

ಕೇಶವ ಮೇಶ್ರಾಮ್, ಅರುಣ್ ಕಾಂಬಳೆ, ವಾಮನ್ ನಿಂಬಾಳಕರ್ ಈ ಮೊದಲಾದ ಮರಾಠಿ ದಲಿತ ಲೇಖಕರು ಕರ್ನಾಟಕದ ಬಂಡಾಯ ಚಳುವಳಿ ಹಾಗೂ ದಲಿತ ಸಂಘರ್ಷ ಸಮಿತಿಗಳಿಗೆ ಸಾಕಷ್ಟು ಪ್ರೇರಣೆ ನೀಡಿದ್ದಾರೆ.

ಈ ಪ್ರೇರಣೆಗಳ ಜತೆಗೆ ಇನ್ನೂ ಹಲವು ಪ್ರೇರಣೆಗಳಿವೆ. ಹಿಂದಿಯಲ್ಲಿ ಮಾರ್ಕ್ಸ್‌ವಾದಿಗಳ ಪ್ರಭಾವದಿಂದ ಹುಟ್ಟಿದ ಜನವಾದೀ ಸಾಹಿತ್ಯ, ಕೇರಳದಲ್ಲಿ ಪೆರಿಯಾರ್‌ವರ ಪ್ರಭಾವದಿಂದ ಮೂಡಿಬಂದ ಪ್ರಗತಿಪರ ಸಾಹಿತ್ಯ, ಅಂತರ್‌ರಾಷ್ಟ್ರೀಯ ಮಟ್ಟದಲ್ಲಿ ಹೆಸರಾಗಿರುವ ಕಪ್ಪುಸಾಹಿತ್ಯ, ಮೂರನೇ ಜಗತ್ತಿನಲ್ಲಿ ನಡೆಯುತ್ತಿರುವ ಗೆರಿಲ್ಲಾ ಹೋರಾಟದ ಅಂಗವಾಗಿ ಹುಟ್ಟಿಬಂದ ಗೆರಿಲ್ಲಾ ಸಾಹಿತ್ಯ – ಹೀಗೆ ಕನ್ನಡದ ಬಂಡಾಯ ಸಾಹಿತ್ಯದ ಮೇಲೆ ಬೇರೆ ಬೇರೆ ಪ್ರಗತಿಪರ ಸಾಹಿತ್ಯ ಸಂದರ್ಭಗಳು, ಕವಿಗಳು ಪ್ರೇರಣೆ ನೀಡಿದ್ದಾರೆ. ಆದರೆ ಇದು ನವೋದಯ-ನವ್ಯದ ಹಾಗೆ ಶ್ರೀಮಂತ ಪಾಶ್ಚಾತ್ಯದೇಶಗಳ ಸಾಹಿತ್ಯಕ ಪ್ರಭಾವಕ್ಕೊಳಗಾಗದೆ; ಜನಸಮುದಾಯದ ಪ್ರೇರಣೆಯಿಂದಲೇ ಹುಟ್ಟಿಕೊಂಡಿದೆ.

## ತಾತ್ವಿಕ ನೆಲೆಗಳು :

ಬಂಡಾಯ ಚಳುವಳಿಯ ತಾತ್ವಿಕ ನೆಲೆಗಳು ಕುತೂಹಲಕಾರಿಯಾಗಿವೆ. ಇಲ್ಲಿ ಎಡಪಂಥೀಯ ಸಿದ್ಧಾಂತಗಳ ಜತೆಗೆ ಸುಧಾರಣಾವಾದೀ ನಿಲುವುಗಳೂ ಇವೆ. ಮಾರ್ಕ್ಸ್‌ವಾದ, ಲೋಹಿಯಾವಾದ ಮತ್ತು ಅಂಬೇಡಕರ್‌ವಾದಗಳು ಇಲ್ಲಿ ಜತೆಜತೆಯಾಗಿ ನಡೆದಿರುವುದು ಗಮನಿಸುವ ಸಂಗಾತಿಯಾಗಿದೆ. ಎಡಪಂಥೀಯ ರಾಜಕೀಯ ಪಕ್ಷಗಳಲ್ಲಿ, ಸಮಾಜವಾದೀ ಹೆಸರಿನ ರಾಜಕೀಯ ಪಕ್ಷಗಳಲ್ಲಿ, ದಲಿತ ಸಂಘಟನೆಗಳಲ್ಲಿ ಅನೇಕ ಗುಂಪುಗಳು– ಘರ್ಷಣೆಗಳು ಇರುವಾಗ ಅವೆಲ್ಲವುಗಳನ್ನು ತನ್ನೊಡಲೊಳಗಿಟ್ಟುಕೊಂಡು ಸಾಗಿರುವ ಬಂಡಾಯ ಚಳುವಳಿ ಈ ದೇಶ ಕಂಡ ವಿಸ್ಮಯವಾಗಿದೆ. ಅನೇಕ ತಾತ್ವಿಕ ಭಿನ್ನಾಭಿಪ್ರಾಯಗಳ ನಡುವೆಯೂ ಬಂಡಾಯ ಚಳುವಳಿ ಎರಡು ದಶಕಗಳನ್ನು ದಾಟಿಕೊಂಡು ಬಂದಿದೆ. ಮುಖ್ಯವಾಗಿ ಸಮಾನತೆಯ ವ್ಯವಸ್ಥೆಯನ್ನು ಬಯಸುವ ಈ ಚಳುವಳಿಯ ಲೇಖಕರು ಒಂದಾಗಿ ಸಾಗಿರುವುದು ಬಹುಮುಖ್ಯ ಸಂಗತಿಯಾಗುತ್ತದೆ. ಮಾರ್ಕ್ಸ್-ಲೋಹಿಯಾ-ಅಂಬೇಡಕರ್ ಸಿದ್ಧಾಂತಗಳ ಜತೆಗೆ ಜೆ. ಪಿ., ಕಿಷನ್ ಪಟ್ನಾಯಕ್, ಪೆರಿಯಾರ್‌ರಂಥವರ ವಿಚಾರಗಳಿಗೂ ಇಲ್ಲಿ ಅವಕಾಶವಿದೆ. ಲೆನಿನ್, ಏಂಗೆಲ್ಸ್, ಮ್ಯಾಲಿನೋವ್‌ಸ್ಕಿ, ಪ್ಲೆಖನೋವ್, ಲುಕಾಕ್ಸ್ ಈ ಮೊದಲಾದ ಸಮಾಜಶಾಸ್ತ್ರಜ್ಞರು, ಚಿಂತಕರು ಈ ಸಂಘಟನೆಯ ಚಾರಿತ್ರಿಕ ಪ್ರಜ್ಞೆಯನ್ನು ರೂಪಿಸಿದವರಾಗಿದ್ದಾರೆ. ಹನ್ನೆರಡನೇ ಶತಮಾನದ ವಚನ ಚಳುವಳಿಯಿಂದ ಪ್ರೇರಣೆ ಪಡೆದ ಲೇಖಕರೂ ಇಲ್ಲಿದ್ದಾರೆ. ರಾಜಕೀಯವಾಗಿ ನಮ್ಮ ಎಡಪಕ್ಷಗಳು ಇನ್ನೂ ದ್ವೀಪಗಳಾಗಿಯೇ ಉಳಿದಿರುವಾಗ ಬಂಡಾಯ ಚಳುವಳಿ, ಅಂಬೇಡಕರ್‌ರೊಂದಿಗೆ ಮಾರ್ಕ್ಸ್‌ನನ್ನು ಕರೆದುಕೊಂಡು ಹೋಗುತ್ತಿರುವುದು ಗಮನಾರ್ಹವಾಗಿದೆ.

ಬಂಡಾಯ ಕಾವ್ಯ ಎಡಪಂಥೀಯವಾದರೂ, ನೇರವಾಗಿ ಅದು ಮಾರ್ಕ್ಸ್‌ವಾದದ ಮ್ಯಾನಿಫೆಸ್ಟೋ ಅಲ್ಲ. ಮಾರ್ಕ್ಸಿಸಂ ಮತ್ತು ಮಾರ್ಕ್ಸಿಸ್ಟರನ್ನು ಸೈದ್ಧಾಂತಿಕವಾಗಿ ವಿರೋಧಿಸುತ್ತಿದ್ದ ಲೋಹಿಯಾ ಮತ್ತು ಅಂಬೇಡಕರ್‌ರೂ ಇವರೊಳಗಿದ್ದಾರೆ. "ಅಂಬೇಡಕರ್‌ವಾದವು ದಲಿತರ ಎಚ್ಚರಕ್ಕೆ ಕಾರಣವಾದರೂ, ಅದು ಸಮಗ್ರ ಸಮಾಜವನ್ನು ಕುರಿತಂತೆ ವ್ಯಾಪಕವಾಗಿರದೆ, ದಲಿತರ ವಾಸ್ತವ ಸಮಸ್ಯೆಗಳನ್ನು ಎದುರಿಗಿಟ್ಟುಕೊಂಡು ಹೋರಾಟ ಪ್ರೇರಿಸುತ್ತದೆ. ಹೀಗಾಗಿ ಇದೇ ಪರಿಪೂರ್ಣವಲ್ಲವೆಂಬ ಅನುಮಾನವು ದಲಿತ ಲೇಖಕರಲ್ಲಿಯೂ ಇದ್ದಂತಿದೆ." ಎನ್ನುವ ಡಾ. ರಹಮತ್ ತರೀಕೆರೆಯವರ ವಿಚಾರಗಳು ಗಮನಿಸುವಂತಿವೆ. (ನೋಡಿ– 'ಬಂಡಾಯ ಸಾಹಿತ್ಯದ ತಾತ್ವಿಕ ನೆಲೆಗಳು' ಪುಟ ೧೬೨, ೧೯೯೨, ಕ. ಸಾ. ಪ. ಪ್ರಕಟನೆ)

ಇದೇ ರೀತಿ ಸಮಾಜವ್ಯವಸ್ಥೆಯ ಆಮೂಲಾಗ್ರ ಬದಲಾವಣೆಗೆ ಲೋಹಿಯಾವಾದವೊಂದೇ ಸಾಕಾಗುವುದಿಲ್ಲವೆಂಬ ತಿಳಿವಳಿಕೆಯೂ ಬಂಡಾಯ ಲೇಖಕರಲ್ಲಿದೆ. ಹೀಗಾಗಿ ಮಾರ್ಕ್ಸ್-ಲೋಹಿಯಾ-ಅಂಬೇಡಕರ್ ಅವರ ಪ್ರಗತಿಪರ ವಿಚಾರಗಳು ಈ ಚಳುವಳಿಯಲ್ಲಿ ಸಮ್ಮಿಳಿತವಾಗಿವೆ. "ಬರೆಯಲಾರೆ ತಾರೆ-ಚಂದ್ರ-ಹೂವಿನ ಮೇಲೆ" ಎಂದು ಉಗ್ರವಾದಿ ಮಾರ್ಕ್ಸಿಸ್ಟ್ ಕವಿಗಳು ಕವಿತೆ ಬರೆದರೆ, "ಹೂವಿನ ಬಗ್ಗೆ, ಹೆಣ್ಣಿನ ಬಗ್ಗೆ, ತಾರೆಯರ ಬಗ್ಗೆ, ಹಾಡುವುದು ಬೇಡ ಎನ್ನುವುದು ಬೇಡ" ಎಂದು ಲೋಹಿಯಾವಾದಿ ಕವಿಗಳು ಉತ್ತರ ಕೊಡುತ್ತಾರೆ. "ಹೂ ತಾರೆಯಲ್ಲ ಹೆಣ್ಣು, ಅವಳು ಗೆಳತಿ, ಸಂಗಾತಿ, ಮನುಕುಲದ ಪೋಷಕಿ" ಎಂದು ಸಮಾಜವಾದೀ ಚಿಂತಕರು ಹೇಳುತ್ತಾರೆ. ಒಂದಕ್ಕೊಂದು ವಿರುದ್ಧವಾಗಿರುವ ಈ ಸಿದ್ಧಾಂತಗಳು ಸೃಜನಕ್ರಿಯೆಯಲ್ಲಿ ಮುಖಾಮುಖಿಯಾದಾಗ ತಮ್ಮ ಸಿಟ್ಟು-ಸೆಡುವುಗಳನ್ನು ಕಳೆದುಕೊಂಡು ಸಮನ್ವಯ ತತ್ವದ ಕಡೆ ಮುಖಮಾಡುತ್ತವೆ. ಇದು ಬಂಡಾಯ ಚಳುವಳಿಯ ದೊಡ್ಡ ಸಾಧನೆ, ಇದು ಈ ಚಳುವಳಿಯ ಪ್ರಮುಖ ತಾತ್ವಿಕನೆಲೆ. ಬಂಡಾಯ ಸಂಘಟನೆ, ತನ್ನ ತಾತ್ವಿಕ ನೆಲೆಯನ್ನು, ಬಂಡಾಯ ಪ್ರಣಾಳಿಕೆಯಲ್ಲಿ ಹೀಗೆ ಹೇಳಿದೆ;

"ನಮ್ಮ ಸಾಂಸ್ಕೃತಿಕ ಕ್ಷೇತ್ರದಲ್ಲಿ ಅನೇಕ ವರ್ಷಗಳಿಂದ ಕಂಡುಬರುತ್ತಿರುವ ಪ್ರಗತಿಪರ ಧೋರಣೆಗಳು, ತೆಗೆದುಕೊಂಡ ತಿರುವುಗಳು, ಎದುರಿಸಿದ ಸಮಸ್ಯೆಗಳು ಮತ್ತು ತಲುಪಿದ ಕ್ಷೀಣನೆಲೆಗಳನ್ನು ಗಮನಿಸಿದಾಗ ಅವುಗಳಿಂದ ಪಾಠ ಕಲಿತ ವ್ಯಾಪಕ ಸ್ವರೂಪದ ಸಂಘಟನೆಯ ಅಗತ್ಯ ಗೊತ್ತಾಗುತ್ತದೆ. ಒಕ್ಕೂಟ-ಪ್ರಗತಿಪಂಥಗಳ ಸಾಫಲ್ಯ - ವೈಫಲ್ಯಗಳ ದಾಖಲೆ ನಮಗೊಂದು ಎಚ್ಚರದ ಸಂಗತಿಯೂ ಆಗಿದೆ. ನಮ್ಮ ದೇಶದ ಚಾರಿತ್ರಿಕ, ರಾಜಕೀಯ ಬೆಳವಣಿಗೆಗಳ ಸ್ವರೂಪದಿಂದಾಗಿ ಉದ್ಭವಿಸಿದ ಇಂದಿನ ವಿಶಿಷ್ಟ ಸಂದರ್ಭದ ಹಿನ್ನೆಲೆಯಲ್ಲಿ ನಮ್ಮ ಹೋರಾಟದ ನೆಲೆಯನ್ನು ಕಂಡುಕೊಳ್ಳಬೇಕಾಗಿದೆ. ಜನವಿರೋಧಿ ನಿಲುವುಗಳು ವಿವಿಧ ಮುಖವಾಡಗಳ

ಮರೆಯಲ್ಲಿ ಒಂದಾಗಿ ವಿಜ್ರಂಭಿಸುತ್ತಿರುವ ಈ ಸಂದರ್ಭ, ಪ್ರಗತಿಪರ ಧೋರಣೆಯ ಎಲ್ಲರಿಗೂ ಒಂದು ಸವಾಲು. ಈ ಸವಾಲಿಗೆ ನಮ್ಮ ಉತ್ತರ; ಎಲ್ಲ ವಾಮಪಂಥೀಯರ ಸಂಘಟನೆ ಮತ್ತು ಸಾಂಸ್ಕೃತಿಕ ಒಗ್ಗಟ್ಟು. ಶೋಷಿತ ಜನತೆಯ ಪರವಾದ ನಿಲುವುಗಳನ್ನು ಸಾಂಸ್ಕೃತಿಕ ಕ್ಷೇತ್ರದಲ್ಲಿ ಭದ್ರವಾಗಿ ನೆಲೆಗೊಳಿಸುವುದು ನಮ್ಮ ಮುಖ್ಯಗುರಿಗಳಲ್ಲೊಂದಾಗಬೇಕು. ನಮ್ಮ ಹೋರಾಟ ಪ್ರಧಾನವಾಗಿ ಸಾಂಸ್ಕೃತಿಕ ಕ್ಷೇತ್ರಕ್ಕೆ ಸಂಬಂಧಿಸಿದ್ದು; ದೇಶದ ರಾಜಕೀಯ ಮತ್ತು ಸಾಂಸ್ಕೃತಿಕ ಸಂದರ್ಭಗಳು ಪರಸ್ಪರ ಸಂಬಂಧವುಳ್ಳವು ಎಂಬ ನಿಲುವಿನಿಂದ ಹೊರಟದ್ದು. ಸಾಹಿತಿಗೆ ಸಾಮಾಜಿಕ, ರಾಜಕೀಯ ಪ್ರಜ್ಞೆ ಇರಬೇಕೆಂಬ ಆಶಯ ಇಲ್ಲಿ ಮುಖ್ಯವಾದದ್ದು. ಅಸ್ಪೃಶ್ಯತೆ, ಜಾತಿಪದ್ಧತಿ, ಲಿಂಗಭೇದ ಮತ್ತು ವರ್ಗಭೇದ ನೀತಿಯವಿರುದ್ಧ ಹೋರಾಟವನ್ನು ಕಟ್ಟುವುದು ನಮ್ಮ ಮುಖ್ಯ ಉದ್ದೇಶಗಳಲ್ಲೊಂದಾಗಿದೆ. ಎಲ್ಲ ಜನಪರ ನಿಲವುಗಳಿಗೆ ನಮ್ಮ ಬೆಂಬಲ. ಜನಪರವಾದ ಸಾಂಸ್ಕೃತಿಕ ಹೋರಾಟ ನಮ್ಮ ಮುಖ್ಯ ನೆಲೆ. ಇಂಥ ಒಲವಿನ ಸಾಹಿತ್ಯ ಸೃಷ್ಟಿ ನಮ್ಮ ಹೋರಾಟದ ಮುಖ್ಯ ದಾಖಲೆ." (ಬಂಡಾಯ ಪ್ರಣಾಳಿಕೆ).

ಹೀಗೆ ಪ್ರಜಾಪ್ರಭುತ್ವದ ರಕ್ಷಣೆಗೆ ಮತ್ತು ಅದರ ವಿಸ್ತರಣೆಗೆ ಪಣತೊಟ್ಟ ಈ ಸಂಘಟನೆ, ಶೋಷಣೆಯನ್ನು ಸಮರ್ಥಿಸುವ ಯಜಮಾನ ಸಂಸ್ಕೃತಿಯ ವಿರುದ್ಧ ನೇರ ಹೋರಾಟಕ್ಕಿಳಿಯಿತು. "ಖಡ್ಗವಾಗಲಿ ಕಾವ್ಯ; ಜನರ ನೋವಿಗೆ ಮಿಡಿವ ಪ್ರಾಣಮಿತ್ರ" ಎನ್ನುವ ಘೋಷಣೆಯೊಂದಿಗೆ ಚಳುವಳಿಯನ್ನು ಪ್ರಾರಂಭಿಸಿತು.

ಬಂಡಾಯ ಸಾಹಿತ್ಯದ ತಾತ್ವಿಕ ಸ್ವರೂಪವನ್ನು ಕುರಿತಂತೆ ಪ್ರಸಿದ್ಧ ಬಂಡಾಯ ಸಾಹಿತಿ ಬರಗೂರು ರಾಮಚಂದ್ರಪ್ಪ ಹೀಗೆ ಹೇಳುತ್ತಾರೆ: "ಇಂಡಿಯಾದಲ್ಲಿರುವ ವರ್ಗಭೇದ ನೀತಿ, ವರ್ಣವೈಷಮ್ಯ ಮತ್ತು ವೈರುದ್ಧ್ಯಗಳ ಸ್ಥಿತಿ, ಲೇಖಕರು ಬೇಜವಾಬ್ದಾರಿತನ ತೋರದಂತೆ ಮಾಡಿವೆ. ಲೇಖಕನಿಗೆ ತನ್ನ ಕಾಲವೇ ಅನುಭವ ಮತ್ತು ಸ್ಫೂರ್ತಿಗಳ ಕೇಂದ್ರವಾದ್ದರಿಂದ ಕಾಲಾತೀತ ಆಸಕ್ತಿಗಳ ಅನ್ವೇಷಕನಾಗುವುದು ಪರಕಾಲೀನ ಪ್ರವೃತ್ತಿಯ ಪ್ರತೀಕ ಎನ್ನಬಹುದಷ್ಟೆ, ನಮಗೆ ಬೇಕಾದ್ದು ಸಮಕಾಲೀನ ಸತ್ವ. ಅಂದಮೇಲೆ ಲೇಖಕ ಮೊದಲ ಹಂತದಲ್ಲೇ ತನ್ನ ಕಾಲಕ್ಕೆ ಬದ್ಧನಾದವನು. ಈ ಮೂಲಕ ತನ್ನ ಕಾಲದ ದೃಷ್ಟಿಕೋನಗಳಲ್ಲಿ ಯಾವುದಾದರೊಂದು ಪಕ್ಷವನ್ನು ಹಿಡಿಯುವಂಥವನು. ತನ್ನ ಕಾಲದ ಅನುಭವ ಮತ್ತು ಆಲೋಚನೆಗಳಿಂದ ಧೋರಣೆಯೊಂದನ್ನು ರೂಪಿಸಿಕೊಳ್ಳುವಂಥವನು." (ಬರಗೂರು : 'ಬಂಡಾಯ ಸಾಹಿತ್ಯದ ತಾತ್ವಿಕ ನೆಲೆಗಳು' ಪುಟ ೧೫, ೧೯೯೨, ಕನ್ನಡ ಸಾಹಿತ್ಯ ಪರಿಷತ್ತು).

ಹೀಗೆ ಸಾರ್ವಕಾಲಿಕತೆಯ ಭ್ರಮೆಗಿಂತ ಸಮಕಾಲೀನ ಪ್ರಜ್ಞೆಯು ಅಗತ್ಯವಿರಬೇಕೆಂಬುದು ಬಂಡಾಯದ ನಿಲುವಾಗಿದೆ. ಸತ್ಯದ, ಸೌಂದರ್ಯದ ಮುಖಗಳು ಹಲವಾರು ಇರುವಾಗ, ಆಳುವ ವರ್ಗದ ಏಕಮುಖೀ ಸತ್ಯವನ್ನು, ಬಂಡವಾಳಶಾಹಿಗಳ ಸ್ವಾರ್ಥಮನಸ್ಸಿನ ಸೌಂದರ್ಯವನ್ನು ಬಂಡಾಯದ ತಾತ್ವಿಕತೆ

ಏಕಕಾಲಕ್ಕೆ ತಿರಸ್ಕರಿಸುತ್ತದೆ. ಇಲ್ಲಿಯ ಬಂಡಾಯ ಕವಿಗೆ ಮಹಾಕಾವ್ಯದ ಅಬ್ಬರಕ್ಕಿಂತ, ಚಿಂದಿ ಆರಿಸುವ ನೊಂದ ಹುಡುಗನ ಹಾಡು ಮುಖ್ಯವಾಗುತ್ತದೆ. ಕಲೆಗಾಗಿ ಕಲೆಯೆಂಬ ತತ್ವವನ್ನು ಬಂಡಾಯ ಸಾಹಿತಿ ಒಪ್ಪುವದಿಲ್ಲ. ಬದುಕಿಗಾಗಿ ಕಲೆಯೆಂಬುದೇ ಆತನ ಸ್ಪಷ್ಟ ಸಿದ್ಧಾಂತ. ಬದುಕನ್ನು ರೂಪಿಸದ ಕಲೆ, ಮಾನವೀಯತೆಯನ್ನು ಮೂಡಿಸದ ಕಾವ್ಯ ಆತನಿಗೆ ಬೇಕಾಗಿಲ್ಲ. ಸಾಹಿತ್ಯಕ ಹೀರೋಶಿಪ್‌ನ್ನು ಬಂಡಾಯ ಒಪ್ಪುವದಿಲ್ಲ. ಹೀಗಾಗಿ ಇಲ್ಲಿ ಮಹಾಕವಿ, ಯುಗ ಪ್ರವರ್ತಕ ಕವಿ ಎಂಬಂತಹ ಪದಗಳಿಗೆ ಅರ್ಥವಿಲ್ಲ. ಏಕವ್ಯಕ್ತಿಯ ವೈಭವೀಕರಣಕ್ಕಿಂತ, ಸಮುದಾಯದ ಶಕ್ತಿ ದೊಡ್ಡದೆಂಬುದು ಇಲ್ಲಿಯ ಸ್ಪಷ್ಟ ನಿಲುವು.

ಬಂಡಾಯದ ತಾತ್ವಿಕ ನೆಲೆಯನ್ನು ಕುರಿತು ಡಾ. ರಹಮತ್ ತರೀಕೆರೆ ಹೀಗೆ ಹೇಳುತ್ತಾರೆ: "ಬಂಡಾಯ ತಾತ್ವಿಕತೆಯು ಲೇಖಕನ ರಾಜಕೀಯ ಪ್ರಜ್ಞೆಯನ್ನು ಕುರಿತು ಹೆಚ್ಚು ಒತ್ತುಕೊಡುತ್ತದೆ. ರಾಜಕೀಯ ಪ್ರಜ್ಞೆಯೆಂದರೆ ಚಾರಿತ್ರಿಕ ತಿಳಿವಳಿಕೆ ಮತ್ತು ಸಾಹಿತ್ಯದ ಸಮಕಾಲೀನ ಪ್ರಜ್ಞೆಯೇ ಆಗಿದೆ. ಪ್ರಬುದ್ಧ ರಾಜಕೀಯ ಪ್ರಜ್ಞೆಯಿರದೆ ಬದಲಾಗಬೇಕೆಂದಿರುವ ವಸ್ತುಸ್ಥಿತಿ ಕುರಿತು ಸರಿಯಾದ ನಿಲುವು ತೆಗೆದುಕೊಳ್ಳುವುದು ಕಷ್ಟವೆಂದು ಅದು ನಂಬುತ್ತದೆ. ಸಾಹಿತ್ಯಕ್ಕೆ ರಾಜಕೀಯ ಪ್ರಜ್ಞೆಯನ್ನು ಪ್ರಗತಿಶೀಲರೇ ಸ್ವಾಗತಿಸಿದ್ದರೂ, ಅವರ ರಾಜಕೀಯ ಪ್ರಜ್ಞೆಯು ರಾಜಕೀಯ ಸ್ವಾತಂತ್ರ್ಯ, ಸಾಮ್ರಾಜ್ಯಶಾಹಿ ವಿರೋಧಗಳ ಆಶಯಗಳನ್ನು ತುಂಬಿಕೊಂಡಿತ್ತು. ಸಾಹಿತಿ ನೇರವಾಗಿ ರಾಜಕೀಯದಲ್ಲಿ ಭಾಗವಹಿಸಬೇಕೆಂಬ ಕಲ್ಪನೆಯೂ ಇದ್ದಂತಿತ್ತು. ಆದರೆ ತನ್ನೆದುರಿನ ಸಮಾಜವ್ಯವಸ್ಥೆಯನ್ನು ವೈಜ್ಞಾನಿಕವಾಗಿ ಅರಿಯುವ ಮತ್ತು ಅದರ ಪರಿವರ್ತನೆಗೆ ಚಿಂತಿಸುವ ಬಂಡಾಯದ ರಾಜಕೀಯ ಪ್ರಜ್ಞೆಯು, ಹೆಚ್ಚು ವೈಜ್ಞಾನಿಕವಾದುದು." ಎಂದು (ರಹಮತ್ ತರೀಕೆರೆ : ಬಂಡಾಯ ಸಾಹಿತ್ಯದ ತಾತ್ವಿಕ ನೆಲೆಗಳು, ಪುಟ ೧೬೫, ೧೯೯೨, ಕನ್ನಡ ಸಾಹಿತ್ಯ ಪರಿಷತ್ತು).

ಬಂಡಾಯ ಚಳುವಳಿಯಲ್ಲಿ ಬದ್ಧತೆಗೆ ಬಹಳ ಮಹತ್ವವಿದೆ. ಎಡಪಂಥೀಯ ವಿಚಾರಧಾರೆಗೆ, ದಲಿತ ಕಾಳಜಿಗಳಿಗೆ ಬದ್ಧವಾದ ಸಾಹಿತ್ಯವಿದು. ಒಂದು ನಿರ್ದಿಷ್ಟ ವಿಚಾರಧಾರೆಗೆ ಸಾಹಿತಿ ಕಮಿಟ್ ಆದರೆ, ಆತನ ಸಾಹಿತ್ಯ ಆ ವಿಚಾರಧಾರೆಯ ಅಥವಾ ಆ ರಾಜಕೀಯ ಪಕ್ಷದ ಪ್ರಣಾಳಿಕೆಯಾಗುತ್ತದೆಂಬ ನಿಲುವನ್ನು ಬಂಡಾಯ ಸಾಹಿತಿ ಒಪ್ಪುವದಿಲ್ಲ. ಒಂದು ಪ್ರಗತಿಪರ ವಿಚಾರಕ್ಕೆ ಬದ್ಧನಾದ ತಕ್ಷಣ ಆತನ ಸೃಜನಶೀಲತೆ ಹಾಳಾಗಲಾರದು. ಲೇಖಕನ ಸೃಜನಸ್ವಾತಂತ್ರ್ಯವು ಸಾಮಾಜಿಕ ಜವಾಬ್ದಾರಿಯ ವಿವೇಕದಿಂದ ಹೊರತಾದದ್ದಲ್ಲವೆಂಬುದು ಈ ಚಳುವಳಿಯ ತಾತ್ವಿಕ ನೆಲೆ. ಲೇಖಕರು ಯಾವುದೇ ವಿಚಾರಧಾರೆಗೆ ಬದ್ಧರಾಗದೆ ನಿರ್ಲಿಪ್ತರಾಗಿರಬೇಕೆಂದರೆ ಏನು ? ಯಾವುದನ್ನೂ ಒಪ್ಪದಿರುವುದೇ ನಿರ್ಲಿಪ್ತತೆಯೆ ? ಹಾಗೆಂದಮೇಲೆ ತಾಟಸ್ಥ್ಯವನ್ನೇ ನಿರ್ಲಿಪ್ತತೆಯೆಂದಂತಾಗುತ್ತದೆ. ಇಂಡಿಯಾದಂತಹ ದೇಶಗಳಲ್ಲಿ ತಾಟಸ್ಥ್ಯವೆಂದರೆ ಯಥಾಸ್ಥಿತಿಯ ಮುಂದುವರಿಕೆಯೇ ಆಗುತ್ತದೆ. ಒಬ್ಬ ಸೃಜನಶೀಲ

ಲೇಖಕ ಪ್ರಗತಿಪರ ವಿಚಾರಧಾರೆಗೆ ಬದ್ಧನಾಗದೆ, ತಟಸ್ಥಗೊಂಡು ಸಂಪ್ರದಾಯ ವ್ಯವಸ್ಥೆಯ ವಾರಸುದಾರನಾಗಬೇಕೆ ? ಎಂದು ಪ್ರಶ್ನಿಸುವಲ್ಲಿ ಬಂಡಾಯ ಚಳುವಳಿಯ ತಾತ್ವಿಕ ನಿಲುವಿದೆ. ಹೀಗೆ ಈ ಚಳುವಳಿ ಎಲ್ಲ ಪ್ರಗತಿಪರ ಸಿದ್ಧಾಂತಗಳನ್ನು ಅರಗಿಸಿಕೊಂಡು ತನ್ನದೇ ಆದ ತಾತ್ವಿಕ ನೆಲೆಯನ್ನು ರೂಪಿಸಿಕೊಂಡಿದೆ.

## ಪ್ರಮುಖ ಸಂವೇದನೆಗಳು :

ದಲಿತ ಸಂವೇದನೆ, ಮುಸ್ಲಿಂ ಸಂವೇದನೆ, ಮಹಿಳಾ ಸಂವೇದನೆ ಹಾಗೂ ಗ್ರಾಮೀಣ ಸಂವೇದನೆ– ಇವು ಬಂಡಾಯ ಸಾಹಿತ್ಯದ ಪ್ರಮುಖ ಸಂವೇದನೆಗಳಾಗಿವೆ. ಕನ್ನಡ ಸಾಹಿತ್ಯಕ್ಕೆ ಅಪರಿಚಿತವಾಗಿದ್ದ ಅನುಭವಗಳನ್ನು ಈ ಸಂವೇದನೆಗಳ ಮೂಲಕ ಬಂಡಾಯ ಸಾಹಿತ್ಯ ಕಟ್ಟಿಕೊಟ್ಟಿತು. ಬಂಡಾಯವೆಂಬುದು ಅಸಮಾನ ವ್ಯವಸ್ಥೆಯ ವಿರುದ್ಧದ ಹೋರಾಟವಾಗಿ, ಸಮಾಜವ್ಯವಸ್ಥೆಯ ಆಮೂಲಾಗ್ರ ಬದಲಾವಣೆಯ ಪ್ರಕ್ರಿಯೆಯಾಗಿ, ಅದೊಂದು ಮನೋಧರ್ಮವಾಗಿ, ಮೌಲ್ಯವಾಗಿ ಬೆಳೆದು ನಿಂತಿದೆ.

ಕನ್ನಡ ಸಾಹಿತ್ಯ ಕಾಣದೇ ಇದ್ದ ದಲಿತ ಬದುಕಿನ ಜಗತ್ತನ್ನು ಮೊಟ್ಟಮೊದಲು ತೆರೆದುತೋರಿಸಿದ್ದು ಬಂಡಾಯ ಸಾಹಿತ್ಯ. ಇಡೀ ಕನ್ನಡ ಸಾಹಿತ್ಯ ಪರಂಪರೆಯಲ್ಲಿ ಸಾಹಿತ್ಯದ ಮೂಲಕ ದಲಿತರು ಮಾತನಾಡಿದ್ದು ವಚನಚಳುವಳಿಯ ಸಂದರ್ಭದಲ್ಲಿ ಮಾತ್ರ. ಅಲ್ಲಿಯೂ ಕೂಡ ಅವರು ದಲಿತರಾಗಿ ಮಾತನಾಡಿಲ್ಲ, ಶರಣರಾಗಿ ಮಾತನಾಡಿದ್ದಾರೆ. ತಮ್ಮ ಪೂರ್ವಾಶ್ರಮವನ್ನು ಕಳೆದುಕೊಂಡು, ಲಿಂಗದೀಕ್ಷೆ ಪಡೆದುಕೊಂಡು ವಚನಚಳುವಳಿಯನ್ನು ಪ್ರತಿನಿಧಿಸುವ ದಲಿತರಿಗೂ, ಬಂಡಾಯ ಸಂಘಟನೆಯ ಕೇಂದ್ರ ಬಿಂದುವಾಗಿರುವ ದಲಿತ ಲೇಖಕರಿಗೂ ತುಂಬಾ ವ್ಯತ್ಯಾಸವಿದೆ. ದಲಿತ ಜನಾಂಗದ ಉದ್ಧಾರದ ಬಗೆಗಾಗಲಿ, ದಲಿತರ ಸಮಾನತೆಯ ಬಗೆಗಾಗಲಿ ಒಬ್ಬ ದಲಿತ ವಚನಕಾರನೂ ಮಾತನಾಡುವುದಿಲ್ಲ. ದಲಿತ ವಚನಕಾರರಿಗೆ ಕೇವಲ ದಲಿತರ ಏಳ್ಗೆಯೊಂದೇ ಮುಖ್ಯವಾಗಿರಲಿಲ್ಲ; ಇಡೀ ಸಮುದಾಯದ ಹಿತ ಮುಖ್ಯವಾಗಿತ್ತು. ಹೀಗಾಗಿ ಅವರು ಉಳಿದ ದಲಿತೇತರ ಶರಣರಂತೆ ಸಮುದಾಯದ ಸಮಸ್ಯೆಗಳಿಗೆ ದನಿ ಕೊಟ್ಟರು, ಅನುಭಾವದೆತ್ತರ ತಲುಪಲು ಪ್ರಯತ್ನಿಸಿದರು. ವಚನ ಚಳುವಳಿಯ ಸಂದರ್ಭದಲ್ಲಿ ದಲಿತರ ಉದ್ಧಾರ ಮಾಡಲೆತ್ನಿಸಿದವರು, ಜಾತೀಯತೆಯ ವಿರುದ್ಧ ನೇರ ಹೋರಾಟ ಕೈಕೊಂಡವರು ಬಸವಣ್ಣ ಮತ್ತಿತರ ಮೇಲು ಜಾತಿಯಿಂದ ಬಂದ ವಚನಕಾರರೆಂಬುದು ಬಹುಮುಖ್ಯವಾದ ಸಂಗತಿ. " ಅಪ್ಪನು ನಮ್ಮ ಮಾದಾರ ಚೆನ್ನಯ್ಯ, ಬೊಪ್ಪನು ನಮ್ಮ ಡೋಹರ ಕಕ್ಕಯ್ಯ " ನೆಂದು ದಲಿತರನ್ನು ಅಪ್ಪಿಕೊಂಡ ಬಸವಣ್ಣ, ಜಾತಿಹೋರಾಟದ ಕೇಂದ್ರಶಕ್ತಿಯಾದ. ಹೀಗಾಗಿ ದಲಿತ ವಚನಕಾರರಿಗೆ ಈ ಸಮಸ್ಯೆ ಮುಖ್ಯವಾಗಲಿಲ್ಲ.

ವಚನ ಚಳುವಳಿಯ ಹಾಗೆಯೇ, ಬಂಡಾಯ ಚಳುವಳಿಯ ದಲಿತೇತರ ಲೇಖಕರು ದಲಿತ ಲೇಖಕರನ್ನೇ ಮುಂಚೂಣಿಯಲ್ಲಿಟ್ಟುಕೊಂಡು ಜಾತಿ ಸಮಾನತೆಯ ವಿಷಯವನ್ನೇ ಪ್ರಮುಖ ಹೋರಾಟವನ್ನಾಗಿ ಮಾಡಿಕೊಂಡರು. ಆದರೆ ಈ ಸಂಬಂಧ–

ಸೌಹಾರ್ದತೆ ಬಹಳ ದಿನ ಉಳಿಯಲಿಲ್ಲ. ಪ್ರಾರಂಭದಲ್ಲಿ ಬಂಡಾಯದವರೊಂದಿಗೆ ಇದ್ದ ದಲಿತ ಲೇಖಕರು ನಂತರದಲ್ಲಿ ದಲಿತೇತರ ಲೇಖಕರನ್ನು ಗುಮಾನಿಯಿಂದ ಕಾಣತೊಡಗಿದರು. ಹೀಗಾಗಿ ಬಂಡಾಯ ಸಂಘಟನೆ ಹುಟ್ಟಿಕೊಂಡ ನಾಲ್ಕು ವರ್ಷಗಳ ನಂತರ ೧೯೮೩ ಡಿಸೆಂಬರ ೧೦, ೧೧ ರಂದು ಧಾರವಾಡದಲ್ಲಿ ದಲಿತ ಲೇಖಕರ ಬಳಗ ಹುಟ್ಟಿಕೊಂಡಿತು. ೧೯೮೬ ಡಿಸೆಂಬರ್ ೨೧ ರಂದು ಬೆಂಗಳೂರಿನಲ್ಲಿ ರಾಜ್ಯಮಟ್ಟದ ದಲಿತ ಸಾಹಿತ್ಯ ಸಮಾವೇಶವೂ ಜರುಗಿತು. "ಬಂಡಾಯ ಸಾಹಿತ್ಯ ಸತ್ತುಹೋಗಿದೆ" ಯೆಂದು ಈ ಸಮಾವೇಶದಲ್ಲಿ ಅಧಿಕೃತವಾಗಿ ಘೋಷಿಸಲಾಯಿತು. ದಲಿತ ಲೇಖಕರಾಗಿರುವ ಡಾ. ಅರವಿಂದ ಮಾಲಗತ್ತಿಯವರು "ಬಂಡಾಯ ಸಾಹಿತ್ಯದ ಒಂದು ಭಾಗ ದಲಿತ ಸಾಹಿತ್ಯ ಏಕಾಗಬೇಕು ? ಯಾಕೆ ದಲಿತ ಸಾಹಿತ್ಯದ ಒಂದು ಭಾಗ ಬಂಡಾಯವಾಗಬಾರದು ?" ಎಂದು ಪ್ರಶ್ನಿಸಿದರು. ಮುಂದೆ ದಲಿತರು ಬಂಡಾಯದವರಿಗಿಂತ ಬೇರೆಯಾಗಿಯೇ ಬೆಳೆಯತೊಡಗಿದರು. ಈಗಂತೂ ಪ್ರತಿಜಿಲ್ಲೆಗೂ 'ದಲಿತಸಾಹಿತ್ಯ ಪರಿಷತ್' ನಂತಹ ಪ್ರತ್ಯೇಕ ಸಂಘಟನೆಗಳೇ ಹುಟ್ಟಿಕೊಂಡಿವೆ.

ಅಸ್ಪೃಶ್ಯತೆ ಭಾರತದ ವಿಶಿಷ್ಟ ಸಮಸ್ಯೆಯಾದ್ದರಿಂದ ದಲಿತರು ಭಾರತದ ಚೌಕಟ್ಟಿನೊಳಗೇ ಕೆಲಸ ಮಾಡುವುದು ಅನಿವಾರ್ಯವಾಯಿತೆಂದೆನಿಸುತ್ತದೆ. ಆರ್ಥಿಕ ಸಮಾನತೆಯ ಬಗೆಗೆ ಹೆಚ್ಚು ಮಾತನಾಡುವ ದಲಿತೇತರ ಲೇಖಕರು ಅದನ್ನು ವಿಶ್ವ ಸಮಸ್ಯೆಯೆಂದು ಭಾವಿಸಿದರು. "ದಲಿತರಿಗೆ ಪೂರ್ವಸಿದ್ಧವಾದ ವಿಚಾರವಾದದ ಹಿನ್ನೆಲೆಯಿಲ್ಲ. ಅವರ ಹೋರಾಟದ ತಂತ್ರ ಮತ್ತು ಕಾರ್ಯಕ್ರಮಗಳು ಇನ್ನೂ ರೂಪಗೊಳ್ಳಬೇಕಾದವು" ಎನ್ನುವ ಡಾ. ಜಿ. ಎಚ್. ನಾಯಕ ಅವರ ಮಾತುಗಳು ಗಮನಾರ್ಹವಾಗಿವೆ.

ದಲಿತ-ಬಂಡಾಯದ ಸಂಬಂಧ ಒಂದು ನಾಣ್ಯದ ಎರಡು ಮುಖಗಳಿದ್ದಂತೆ ಒಂದಕ್ಕೊಂದು ಪೂರಕ. ದಲಿತನಾಗಿ ಹುಟ್ಟಿ ಸಂಪ್ರದಾಯವನ್ನು ಎತ್ತಿಹಿಡಿದು ಬರೆದರೆ ಆತ ದಲಿತ ಸಾಹಿತಿಯಾಗುವುದಿಲ್ಲ. ಆತನಲ್ಲಿ ಬಂಡಾಯ ಮನೋಭಾವ ಇದ್ದಾಗ ಮಾತ್ರ ಆತ ದಲಿತ ಸಾಹಿತಿಯೂ ಆಗುತ್ತಾನೆ. ಬಂಡಾಯ ಸಾಹಿತಿಯೂ ಆಗುತ್ತಾನೆ. ಹುಟ್ಟಿನಿಂದ ದಲಿತನಲ್ಲದ ಲೇಖಕ ದಲಿತರನ್ನೇ ಕುರಿತು ಬರೆದರೂ ಆತ ದಲಿತ ಸಾಹಿತಿಯಾಗುವುದಿಲ್ಲ, ಬಂಡಾಯ ಸಾಹಿತಿಯಾಗುತ್ತಾನೆ. ಪ್ರತಿಯೊಬ್ಬ ದಲಿತ ಸಾಹಿತಿಯೂ ಬಂಡಾಯ ಸಾಹಿತಿಯಾಗುತ್ತಾನೆ, ಆದರೆ ಪ್ರತಿಯೊಬ್ಬ ಬಂಡಾಯಸಾಹಿತಿ ದಲಿತ ಸಾಹಿತಿಯಾಗಲಾರ. ಶ್ರೇಣೀಕೃತ ವ್ಯವಸ್ಥೆಯ ಹುಟ್ಟೇ ಇದಕ್ಕೆ ಮುಖ್ಯ ಕಾರಣವಾಗಿದೆ.

ದಲಿತ-ಬಂಡಾಯದ ಪ್ರೇರಣೆ-ಧೋರಣೆಗಳೇನೇ ಇರಲಿ, ಆಧುನಿಕ ಸಾಹಿತ್ಯ ಸಂದರ್ಭದಲ್ಲಿ ಬಂಡಾಯ ಸಂಘಟನೆಯ ಮೂಲಕ ಮೊದಲಬಾರಿಗೆ ಅನೇಕ ಮಹತ್ವದ ದಲಿತಸಾಹಿತಿಗಳು ಬೆಳೆದು ನಿಂತರು. ದಲಿತ ಲೋಕದ ನೋವು-

ನಲಿವುಗಳನ್ನು ವಸ್ತುನಿಷ್ಠವಾಗಿ ಬಿಚ್ಚಿಟ್ಟರು. ದೇವನೂರ ಮಹಾದೇವ, ಸಿದ್ಧಲಿಂಗಯ್ಯ, ಮನಜ, ಮುನಿವೆಂಕಟಪ್ಪ, ಗೋವಿಂದಯ್ಯ, ಮಾಲಗತ್ತಿ, ಕೆ. ಬಿ. ಸಿದ್ಧಯ್ಯ, ಕೆ. ರಾಮಯ್ಯ, ಇಂದೂಧರ ಹೊನ್ನಾಪುರ, ಬಿ. ಟಿ. ಲಲಿತಾ ನಾಯಕ, ಗಂಗಾರಾಂ ಚಂಡಾಳ, ಮುಳ್ಳೂರು ನಾಗರಾಜ್, ಮೊಗಳ್ಳಿ ಗಣೇಶ, ಲಕ್ಷ್ಮೀಪತಿ ಕೋಲಾರ, ಜಾಣಗೆರೆ ವೆಂಕಟರಾಮಯ್ಯ, ಮೋಹನ ನಾಗಮ್ಮನವರ, ಶಿವರುದ್ರ ಕಲ್ಲೋಳಿಕರ, ಎಂ. ಲಕ್ಷ್ಮಣ, ಟಿ. ಎಂ. ಭಾಸ್ಕರ್, ಬಿ. ಟಿ. ಜಾಹ್ನವಿ, ಎಸ್. ಪಿ. ಸುಳ್ಳದ –ಈ ಮೊದಲಾದ ದಲಿತ ಲೇಖಕರು ಶತಮಾನಗಳ ನೋವಿನ ಚರಿತ್ರೆಯನ್ನು ತಮ್ಮ ಕೃತಿಗಳ ಮೂಲಕ ಬಿಡಿಸಿಟ್ಟರು.

ಬಂಡಾಯ ಚಳುವಳಿಯ ಇನ್ನೊಂದು ಮಹತ್ವದ ಸಂವೇದನೆಯೆಂದರೆ ಮುಸ್ಲಿಂ ಸಂವೇದನೆ. ಮುಸ್ಲಿಂ ಜನಾಂಗದ ಜೀವನ ಸ್ವರಗಳನ್ನು, ದುಃಖದುಮ್ಮಾನಗಳನ್ನು, ಆ ಸಂಸ್ಕೃತಿಯ ಒಳನೋಟಗಳನ್ನು ಬಂಡಾಯ ಚಳುವಳಿ ಮೊದಲಬಾರಿಗೆ ತೆರೆದು ತೋರಿಸಿತು. ಹದಿನೆಂಟು-ಹತ್ತೊಂಬತ್ತನೇ ಶತಮಾನಗಳ ಸಂದರ್ಭದಲ್ಲಿ ಕೆಲವು ಮುಸ್ಲೀಮರು ತತ್ವಪದಕಾರರಾಗಿ ಬೆಳೆದರು. ಅವರುಗಳಲ್ಲಿ ಶಿಶುನಾಳ ಶರೀಫ್, ಪಿಂಜಾರ್ ರಾಮದಾಸ್, ಮೋಟನಹಳ್ಳಿ ಹಸನಸಾಬ, ಚೆನ್ನೂರ ಜಲಾಲಸಾಬ, ಕೊಳ್ಳೂರ ಹಸನಸಾಬ, ಮಂಜಲರ್ಾ ಖಾದರಸಾಬ ಈ ಮೊದಲಾದವರು ಪ್ರಮುಖರು. ಇವರು ಮುಸ್ಲಿಂ ಜನಾಂಗದಲ್ಲಿ ಹುಟ್ಟಿ ಬಂದರೂ ಮುಸ್ಲಿಂ ಸಂಸ್ಕೃತಿಯ ಸಂವೇದನೆಗಳನ್ನು ಬಿಡಿಸಿ ತೋರಿಸಲಿಲ್ಲ. ಇವರೆಲ್ಲಾ ಹಿಂದೂ ಜನಾಂಗದ ಗುರುಗಳಿಂದ ದೀಕ್ಷೆಪಡೆದು, ಮುಸ್ಲೀಮೇತರ ಲೇಖಕರಂತೆ ಬರೆದರು. ಮುಸ್ಲಿಂರಾಗಿ ಹುಟ್ಟಿದರೂ, ಮುಸ್ಲೀಮೇತರ ಸಂಸ್ಕೃತಿಯಲ್ಲಿ ಬೆಳೆದುದರಿಂದ ಇವರಿಗೆ ಮುಸ್ಲಿಂ ಸಂವೇದನೆಗಳನ್ನು ತಮ್ಮ ಕೃತಿಗಳಲ್ಲಿ ವ್ಯಕ್ತಪಡಿಸುವುದು ಮುಖ್ಯವಾಗಲಿಲ್ಲ. ಗುರುಗೋವಿಂದ ಭಟ್ಟ ಶರೀಫನ ಗುರುವಾದರೆ, ಬಿಜನಕೇರಾದ ಸಿದ್ಧರಾಮಸ್ವಾಮಿ, ಮಂಜಲರ್ಾ ಖಾದರಸಾಬನ ಗುರುವಾದ. ಶಿಶುನಾಳಧೀಶ ಶರೀಫನ ಅಂಕಿತವಾದರೆ, ಇಟಪುರೀಶ (ವೀರಭದ್ರ) ಮೋಟನಳ್ಳಿ ಹಸನಸಾಬನ ಅಂಕಿತವಾಯಿತು. ಹೀಗೆ ಮುಸ್ಲಿಂರಾಗಿ ಹುಟ್ಟಿದರೂ, ಈ ಅನುಭಾವಿ ಕವಿಗಳು ಮುಸ್ಲಿಂರ ಬಗೆಗೆ ಬರೆಯಲಿಲ್ಲ. ಮುಂದೆ ಆಧುನಿಕ ಸಾಹಿತ್ಯ ಸಂದರ್ಭದಲ್ಲಿ ಬೆಳೆದುಬಂದ ಎಂ. ಜೀವನ, ಎಂ. ಅಕಬರಅಲಿ, ಬಿ. ಎ. ಸನದಿ, ನಿಸಾರ ಅಹಮ್ಮದ್ ಇವರೂ ಕೂಡ ಮುಸ್ಲಿಂ ಜನಾಂಗದಲ್ಲಿ ಹುಟ್ಟಿಬಂದರೂ ಇವರ ಕೃತಿಗಳಲ್ಲಿ ಮುಸ್ಲಿಂ ಜಗತ್ತು ಅನಾವರಣಗೊಳ್ಳಲಿಲ್ಲ. ಇಂತಹ ಅಪರಿಚಿತ ಜಗತ್ತಿನ ಒಳನೋಟಗಳನ್ನು ಮೊದಲು ಬಿಚ್ಚಿಟ್ಟವರು ಬಂಡಾಯ ಚಳುವಳಿಯ ಮೂಲಕ ಬೆಳೆದುಬಂದ ಮುಸ್ಲಿಂ ಲೇಖಕರು.

ದಲಿತನಾಗಿದ್ದುಕೊಂಡೇ ಭಾರತೀಯ ಪರಂಪರೆಗೆ ಸೇರಬಯಸುವ ದಲಿತ ಲೇಖಕನಂತೆ, ಮುಸ್ಲಿಂನಾಗಿದ್ದುಕೊಂಡೇ ಭಾರತೀಯ ಸಂಸ್ಕೃತಿಯ ಸಾಧ್ಯತೆಗಳನ್ನು ವಿಸ್ತರಿಸುವುದು ಬಂಡಾಯದ ಮುಸ್ಲಿಂ ಲೇಖಕರ ಧೋರಣೆಯಾಗಿದೆ. ದಲಿತ

ವಚನಕಾರರಂತೆ ಇಂದಿನ ದಲಿತ ಲೇಖಕರು ದಲಿತತ್ವವನ್ನು ಬಿಟ್ಟು ಬರಲಾರರು. ದಲಿತತ್ವವನ್ನು ಗೌರವಿಸುವುದರ ಮೂಲಕವೇ ಅವರು ಭಾರತೀಯರಾಗಲು ಇಚ್ಛಿಸುತ್ತಾರೆ. ಅದೇ ರೀತಿ ಮುಸ್ಲೀಂ ಅನುಭಾವಿ ಕವಿಗಳಂತೆ ಇಂದಿನ ಮುಸ್ಲೀಂ ಲೇಖಕರು ಮುಸ್ಲೀಂ ಸಂಸ್ಕೃತಿಯಿಂದ ಹೊರಗೆ ಬರಲಾರರು. ಮುಸ್ಲೀಂ ಜನಾಂಗದಲ್ಲಿದ್ದುಕೊಂಡೇ, ಭಾರತೀಯ ಸಂಸ್ಕೃತಿಯನ್ನು ವಿಸ್ತರಿಸಲು ಬಯಸುತ್ತಾರೆ. ಹೀಗಾಗಿ ಮುಸ್ಲೀಂ ಅನುಭಾವಿ ಕವಿಗಳಲ್ಲಿ ಕಾಣದ ಮುಸ್ಲೀಂ ಬದುಕಿನ ಒಳನೋಟಗಳು, ಬಂಡಾಯ ಚಳುವಳಿಯ ಮುಸ್ಲೀಂ ಲೇಖಕರಲ್ಲಿ ಸ್ಪಷ್ಟವಾಗಿ ಕಾಣಿಸಿಕೊಳ್ಳುತ್ತವೆ.

ಸಾರಾ ಅಬೂಬಕರ್, ಫಕೀರ ಮಹಮ್ಮದ ಕಟ್ಪಾಡಿ, ರಹಮತ್ ತರಿಕೆರೆ, ಬೋಳುವಾರು ಮುಹಮ್ಮದ ಕುಂಞ, ಬಾನು ಮುಸ್ತಾಕ್, ರಂಜಾನ ದರ್ಗಾ, ನಜೀರ ಚಂದಾವರ, ಸೈಯ್ಯದ್ ಜಮೀರುಲ್ಲಾ ಷರೀಫ್, ಕಲೀಂ ಭಾಷ, ಅಬ್ದುಲ್ ರಶೀದ್, ಕೆ. ಶರೀಫಾ– ಈ ಮೊದಲಾದ ಬಂಡಾಯ ಲೇಖಕರು ಮುಸ್ಲೀಂ ಜನಾಂಗದ ನೋವು ನಲಿವುಗಳಿಗೆ ದನಿಕೊಟ್ಟಿದ್ದಾರೆ. ಇವರೆಲ್ಲಾ ತಮ್ಮ ಸಂಸ್ಕೃತಿಯನ್ನು ಗೌರವಿಸುತ್ತಲೇ ಸಮುದಾಯದ ಮುಖ್ಯ ಪ್ರವಾಹಿನಿಯಲ್ಲಿ ಸೇರಿಕೊಂಡಿದ್ದಾರೆ.

ಬಂಡಾಯ ಚಳುವಳಿಯ ಮತ್ತೊಂದು ಮುಖ್ಯವಾದ ಸಂವೇದನೆಯೆಂದರೆ ಮಹಿಳಾ ಸಂವೇದನೆ. ಇದನ್ನು ಮಹಿಳಾ ಸಂವೇದನೆಯೆನ್ನುವುದಕ್ಕಿಂತ ಸ್ತ್ರೀವಾದಿ ಸಂವೇದನೆಯೆನ್ನುವುದೇ ಹೆಚ್ಚು ಸೂಕ್ತವೆನಿಸುತ್ತದೆ. ಕನ್ನಡ ಸಾಹಿತ್ಯದಲ್ಲಿ ಅಕ್ಕಮಹಾದೇವಿ ಹಾಗೂ ಇತರ ವಚನಕಾರ್ತಿಯರಿಂದಲೇ ಮಹಿಳಾ ಸಂವೇದನೆ ಪ್ರಾರಂಭವಾಗುತ್ತದೆ. ಆದರೆ ಬಂಡಾಯದ ಮಹಿಳಾ ಸಂವೇದನೆ ಸ್ತ್ರೀವಾದಿ ನೆಲೆಯಲ್ಲಿ ಹುಟ್ಟಿಬಂದುದಾಗಿದೆ. ಪಾಶ್ಚಾತ್ಯ ಲೇಖಕಿಯರಿಂದ ಬೆಳೆದುಬಂದ ಸ್ತ್ರೀವಾದ, ತೀರಾ ಇತ್ತೀಚಿನ ಪರಿಕಲ್ಪನೆ. ಕನ್ನಡದಲ್ಲಿ ಮೊದಲು ಬೇರೆ ಬೇರೆ ಘಟ್ಟಗಳಲ್ಲಿ ಮಹಿಳೆಯರು ಸಾಹಿತ್ಯ ರಚಿಸಿದ್ದಾರೆ, ತಮ್ಮ ಸಂವೇದನೆಗಳಿಗೆ ಅಭಿವ್ಯಕ್ತಿರೂಪ ಕೊಟ್ಟಿದ್ದಾರೆ. ಆದರೆ ಸ್ತ್ರೀವಾದದ ಮಾದರಿಗಳು ಮೊಟ್ಟಮೊದಲು ಕಾಣಿಸಿಕೊಳ್ಳುವುದು ಬಂಡಾಯ ಚಳುವಳಿಯ ಸಂದರ್ಭದ ಲೇಖಕಿಯರಲ್ಲಿ; ಹೀಗಾಗಿ ಬಂಡಾಯ ಚಳುವಳಿಗೂ ಸ್ತ್ರೀವಾದಕ್ಕೂ ನೇರವಾದ ಸಂಬಂಧವಿದೆ. ಬಂಡಾಯ ಚಳುವಳಿ ಉಂಟುಮಾಡಿದ ಜಾಗೃತಿ ಮತ್ತು ಸಂಘಟನೆಯು ಇಂದು ಕನ್ನಡದಲ್ಲಿ ಸ್ತ್ರೀವಾದಿ ಚಳುವಳಿ ಸ್ವತಂತ್ರವಾಗಿ ಬೆಳೆಯಲು ಕಾರಣವಾಗಿದೆ.

ಸ್ತ್ರೀ-ಪುರುಷರ ನಡುವಿನ ಅಸಮಾನತೆ ಕೇವಲ ಜೈವಿಕವಲ್ಲ. ಅದು ನಮ್ಮ ಸಾಂಸ್ಕೃತಿಕ ಹಿನ್ನಲೆಯಲ್ಲಿ ಪುರಾಣಕಾಲದಿಂದಲೇ ಬೆಳೆದುಕೊಂಡು ಬಂದಿದೆ. ಚಾತುರ್ವರ್ಣ ವ್ಯವಸ್ಥೆಯಲ್ಲಂತೂ ಸ್ತ್ರೀಯ ಅಸ್ತಿತ್ವ ಅವಹೇಳನಕಾರಿಯಾಗಿದೆ. ಪುರುಷ ಪ್ರಧಾನ ಸಂಸ್ಕೃತಿಯಲ್ಲಿ ಅಲ್ಲಲ್ಲಿ ದನಿಯೆತ್ತಿದ ಮಹಿಳಾಧ್ವನಿಗಳು ಕೇಳದಂತಾಗಿವೆ. ದಲಿತರಷ್ಟೇ ಶೋಷಣೆಗೊಳಗಾದ ಮಹಿಳೆ, ಬಂಡಾಯ ಚಳುವಳಿಯ ಮುಖ್ಯ ಕಾಳಜಿಯಾಗಿದ್ದಾಳೆ. ಹೀಗಾಗಿ ಬಂಡಾಯ ಸಂಘಟನೆಯಲ್ಲಿ ಮಹಿಳಾ ಲೇಖಕರಿಗೆ

ಮಹತ್ವದ ಸ್ಥಾನ ದೊರಕಿತು. ಪುರುಷನ ಧಾರ್ಷ್ಟ್ಯವನ್ನು, ಯಜಮಾನ ಸಂಸ್ಕೃತಿಯ ಸೋಗಲಾಡಿತನವನ್ನು ನೇರವಾಗಿ ತಿರಸ್ಕರಿಸಿದ ಬಂಡಾಯ ಲೇಖಕರು, ಮಹಿಳೆ, ಪುರುಷನಿಗೆ ಸಮಾನವೆಂದು ಸಾರಿದರು. ಹಿಂದೂ ಸಂಸ್ಕೃತಿಯಲ್ಲಿ ಮಹಿಳೆ ದೇವತೆಯಾಗಿ ಇಲ್ಲವೆ ರಾಕ್ಷಸಿಯಾಗಿ ಎರಡು ರೀತಿಯ ಅತಿಗಳನ್ನು (ಎಕ್ಸ್‌ಟ್ರೀಮ್ಸ್) ಹೊಂದಿದ್ದರೆ, ಬಂಡಾಯ ಲೇಖಕರು ಮಹಿಳೆಯನ್ನು ಮಹಿಳೆಯಾಗಿ, ಸ್ನೇಹಿತೆಯಾಗಿ, ಸಂಗಾತಿಯಾಗಿ ಕಂಡರು. ಜಾತಿಭೇದವನ್ನು ತಿರಸ್ಕರಿಸಿದಂತೆ ಲಿಂಗಭೇದವನ್ನೂ ಅವರು ನಿರಾಕರಿಸಿದರು. ಹೀಗಾಗಿ ಬಂಡಾಯ ಚಳುವಳಿಯಲ್ಲಿ ಅನೇಕ ಲೇಖಕಿಯರು ಭಾಗವಹಿಸಿ ಮುಕ್ತ ಚರ್ಚೆಯನ್ನು ಹುಟ್ಟುಹಾಕಿದರು. ಹೀಗೆ ಬಂಡಾಯ ಚಳುವಳಿ ಹುಟ್ಟಿ ಒಂದು ದಶಕವನ್ನು ದಾಟುವ ಸಂದರ್ಭದಲ್ಲಿಯೇ ಕನ್ನಡದಲ್ಲಿ ಸ್ತ್ರೀವಾದಿ ಚಳುವಳಿ ತೀವ್ರಗೊಳ್ಳತೊಡಗಿತು. ಈ ತೀವ್ರತೆ ಸಾಹಿತ್ಯದಲ್ಲಿಯೂ ಅಭಿವ್ಯಕ್ತವಾಯಿತು.

ಪಾಶ್ಚಾತ್ಯ ಸಾಹಿತ್ಯದ ನವ್ಯವಿಮರ್ಶೆ (New Criticism) ಸ್ತ್ರೀವಾದಿ ವಿಮರ್ಶೆಯ ದಾರಿಯನ್ನು ಸ್ಪಷ್ಟಪಡಿಸಿತು. ೧೯೪೯ ರಲ್ಲಿ ಪ್ರಕಟವಾದ 'ಸಿಮೋನ್ ದ ಬುವಾ' ಅವರ ಕೃತಿಯಿಂದ ಹಿಡಿದು ಇಂದಿನ ವರೆಗೆ ಇಂಗ್ಲಿಷ ಸಾಹಿತ್ಯದಲ್ಲಿ ಮಹತ್ವದ ಸ್ತ್ರೀವಾದಿ ಚಿಂತನೆಗಳು ಪ್ರಕಟವಾಗಿವೆ. ಎಲೆನ್ ಮೋರ್ಸ್, ಇಲಾನೆ ಶವಾಲ್ಟರ್, ಸಾಂಡ್ರಾ ಗಿಲ್ಬರ್ಟ್ ಮತ್ತು ಸೂಸನ್ ಗುಬರ್– ಈ ಮೊದಲಾದವರಿಂದ ಸ್ತ್ರೀವಾದಿ ವಿಮರ್ಶೆ ಬೆಳೆದುಬಂದಿದೆ. ೧೯೮೦ ರಿಂದೀಚೆಗೆ ಸ್ತ್ರೀವಾದಿ ಚಳುವಳಿ ಕನ್ನಡ ಸಾಹಿತ್ಯದಲ್ಲಿ ಹೊಸ ಹೆಜ್ಜೆಗಳನ್ನು ಮೂಡಿಸಿದೆ. ಆ್ಯನೆಟ್ ಕೊಲೋಡ್ನಿ ತೌಲನಿಕ ಸ್ತ್ರೀವಾದಿ ನೆಲೆಯ ಅಗತ್ಯವನ್ನು ತಿಳಿಸುತ್ತಾರೆ. ಮಿರಾ ಜೆಹ್ಲೆನ್ ಕೂಡಾ ಸ್ತ್ರೀವಾದಿ ಚಳುವಳಿಯ ಮಹತ್ವ ಹೇಳುತ್ತಾರೆ.

ಬಂಡಾಯ ಚಳುವಳಿಯಲ್ಲಿ ಗುರುತಿಸಿಕೊಂಡು ಸ್ತ್ರೀವಾದವನ್ನು ಅಭಿವ್ಯಕ್ತಿಸುವ ಲೇಖಕಿಯರಲ್ಲಿ ವಿಜಯಾ ದಬ್ಬೆ, ಆರ್. ಪೂರ್ಣಿಮಾ, ಸಾರಾ ಅಬೂಬಕರ್, ಲಲಿತಾ ನಾಯಕ, ಬಾನು ಮುಸ್ತಾಕ್, ವೈದೇಹಿ, ಮಾಲತಿ ಪಟ್ಟಣಶೆಟ್ಟಿ, ಹೇಮಾ ಪಟ್ಟಣಶೆಟ್ಟಿ, ಶಶಿಕಲಾ ವೀರಯ್ಯಸ್ವಾಮಿ, ಸುಕನ್ಯಾ ಮಾರುತಿ, ಎಚ್. ಎಸ್. ಮುಕ್ತಾಯಕ್ಕ, ವಿಜಯಶ್ರೀ ಸಬರದ, ಸವಿತಾ ನಾಗಭೂಷಣ, ಶೈಲಜಾ ಉಡಚಣ, ಸ. ಉಷಾ, ಪ್ರತಿಭಾ ನಂದಕುಮಾರ, ಕಮಲಾ ಹೆಮ್ಮಿಗೆ, ಗೀತಾ ನಾಗಭೂಷಣ, ಧರಣಿ ಮಾಲಗತ್ತಿ, ತೇಜಸ್ವಿನಿ ನಿರಂಜನ, ನೇಮಿಚಂದ್ರ, ಎಂ. ಆರ್. ಕಮಲ– ಈ ಮೊದಲಾದವರು ಗಮನಸೆಳೆಯುತ್ತಾರೆ.

ಗ್ರಾಮೀಣ ಸಂವೇದನೆ ಬಂಡಾಯ ಚಳುವಳಿಯ ಮಹತ್ವದ ಅಭಿವ್ಯಕ್ತಿಯಾಗಿದೆ. ಇದನ್ನು ಶೂದ್ರ ಸಂವೇದನೆಯೆಂದು ಕರೆಯುವುದು ಹೆಚ್ಚು ಸೂಕ್ತವೆನಿಸುತ್ತದೆ. ದೇವರಾಜ ಅರಸು ಅವರು, ಹಿಂದುಳಿದ ವರ್ಗದ ಶೋಷಿತ ಸಮುದಾಯಕ್ಕೆ ರಾಜಕೀಯ ದನಿ ಕೊಟ್ಟರು. ಅಲ್ಲಿಂದ ಹಿಂದುಳಿದ ವರ್ಗದ ಗ್ರಾಮೀಣ ಯುವಕರು ರಾಜಕೀಯ – ಆರ್ಥಿಕ ಕ್ಷೇತ್ರದಲ್ಲಿ ಬೆಳೆದಂತೆ, ಸಾಹಿತ್ಯಕ

ಕ್ಷೇತ್ರದಲ್ಲೂ ಅನಿವಾರ್ಯವಾದರು. ಆಧುನಿಕ ಸಾಹಿತ್ಯದ ಸಂದರ್ಭದಲ್ಲಿ ನವ್ಯೋದಯ, ಪ್ರಗತಿಶೀಲ ಘಟ್ಟಗಳಲ್ಲಿ ಅರ್ಥಪೂರ್ಣ ಗ್ರಾಮೀಣ ಸಂವೇದನೆಗಳನ್ನು ಕಾಣಬಹುದು. ಕುವೆಂಪು, ಕಾರಂತ, ಕಟ್ಟೀಮನಿ, ಚದುರಂಗ ಈ ಮೊದಲಾದ ಲೇಖಕರು ಗ್ರಾಮೀಣ ಬದುಕನ್ನು ಕೇಂದ್ರವಾಗಿಟ್ಟುಕೊಂಡೇ ಬರೆದರು. ಆದರೆ ಬಂಡಾಯ ಚಳುವಳಿಯ ಸಂದರ್ಭದಲ್ಲಿ ಬೆಳೆದುಬಂದ ಲೇಖಕರು ಹಿಂದುಳಿದ ವರ್ಗಗಳಿಗೆ ಸೇರಿದವರು; ಅಕ್ಷರ ಜಗತ್ತಿನಿಂದ ದೂರವಾಗಿದ್ದವರು. ಇಂಥವರು ಮೊದಲಬಾರಿಗೆ ಸಾಹಿತ್ಯದ ಮೂಲಕ ಮಾತನಾಡತೊಡಗಿದರು. ಆಗ ಅನೇಕ ಹೊಸಬಗೆಯ ಅನುಭವಗಳು ಪ್ರಕಟವಾದವು. ಮುಖ್ಯವಾಗಿ ಊಳಿಗಮಾನ್ಯ ಪದ್ಧತಿಯ ವಿರುದ್ಧ ನೇರ ಹೋರಾಟವನ್ನು ಪ್ರಾರಂಭಿಸಿದ ಈ ಲೇಖಕರು ಈ ವ್ಯವಸ್ಥೆಯ ಶೋಷಕ ಶಕ್ತಿಗಳಾದ ಗೌಡ-ಕುಲಕರ್ಣಿಯರ ಶೋಷಣೆಯ ವಿರುದ್ಧ ಗಟ್ಟಿದನಿಯೆತ್ತಿದರು. ಇತ್ತ ಮೇಲ್‌ವರ್ಗಕ್ಕೆ ಸೇರದ, ಅತ್ತ ದಲಿತವರ್ಗಕ್ಕೆ ಸೇರದ ಬಹುಸಂಖ್ಯೆಯ ಈ ಹಿಂದುಳಿದ ವರ್ಗದ ಬಂಡಾಯ ಲೇಖಕರು ಸಂಕೀರ್ಣ ಅನುಭವಗಳನ್ನು ಕನ್ನಡಕ್ಕೆ ಕಟ್ಟಿಕೊಟ್ಟರು. ದುಡಿವ ವರ್ಗದಿಂದ ಬಂದ ಈ ಲೇಖಕರು ಬಂಡಾಯ ಚಳುವಳಿಯ ಬೆನ್ನೆಲುಬಾಗಿ ನಿಂತರು.

ಬರಗೂರು ರಾಮಚಂದ್ರಪ್ಪ, ಚೆನ್ನಣ್ಣ ವಾಲೀಕಾರ, ಜಂಬಣ್ಣ ಅಮರಚಿಂತ, ಕುಂ. ವೀರಭದ್ರಪ್ಪ, ತೇಜಸ್ವಿ ಕಟ್ಟೀಮನಿ, ಪ್ರಹ್ಲಾದ ಬೆಟಗೇರಿ, ಸರಜೂ ಕಾಟಕರ್, ಆರ್. ವಿ. ಭಂಡಾರಿ, ಸಿದ್ಧನಗೌಡ ಪಾಟೀಲ, ವಿಠ್ಠಪ್ಪ ಗೋರಂಟ್ಲಿ, ಬಿ. ಕೃಷ್ಣಮೂರ್ತಿ, ಭಗತ್‌ರಾಜ ನಿಜಾಮಕರ್, ಶಂಕರ ಕಟಗಿ, ಸತ್ಯಾನಂದ ಪಾತ್ರೋಟ, ಚಿಕ್ಕಣ್ಣ, ಸಿದ್ಧರಾಮಯ್ಯ ಈ ಮೊದಲಾದ ಲೇಖಕರು ಹಿಂದುಳಿದ ವರ್ಗಗಳ ನೋವಿನ ಕತೆಯನ್ನು ತಮ್ಮ ಕೃತಿಗಳಲ್ಲಿ ಪರಿಣಾಮಕಾರಿಯಾಗಿ ಅಭಿವ್ಯಕ್ತಿಸಿದ್ದಾರೆ.

ಮಧ್ಯಮ ವರ್ಗದಲ್ಲಿ ಹುಟ್ಟಿಬಂದರೂ ಬಂಡಾಯವನ್ನು ಒಂದು ಮೌಲ್ಯವನ್ನಾಗಿ ಸ್ವೀಕರಿಸಿ ಜಾತೀಯತೆಯ ವಿರುದ್ಧ, ಅಸಮಾನತೆಯ ವಿರುದ್ಧ ದನಿಯೆತ್ತಿದ ಚಂಪಾ, ಕಾಳೇಗೌಡ ನಾಗವಾರ, ಬೆಸಗರಹಳ್ಳಿ ರಾಮಣ್ಣ, ಅಲ್ಲಮಪ್ರಭು ಬೆಟ್ಟದೂರ, ಬಸವರಾಜ ಸಬರದ, ಗವಿಸಿದ್ಧ ಬಳ್ಳಾರಿ, ಆರ್. ಜಿ. ಹಳ್ಳಿ ನಾಗರಾಜ, ಸಿ. ವಿ. ಪಾಟೀಲ, ಪುರುಷೋತ್ತಮ ಬಿಳಿಮಲೆ, ರಂಗಾರೆಡ್ಡಿ ಕೋಡಿರಾಂಪುರ, ಎಚ್. ಎಸ್. ಶಿವಪ್ರಕಾಶ, ಲಿಂಗದೇವರು ಹಳೆಮನೆ, ಸತೀಶ ಕುಲಕರ್ಣಿ, ಎಸ್. ಎಸ್. ಹಿರೇಮಠ, ಪ್ರಹ್ಲಾದ ಅಗಸನಕಟ್ಟೆ, ರವಿತೇಜ ಅಬ್ಬಿಗೇರಿ, ಕಾಶೀನಾಥ ಅಂಬಲಗೆ, ಪ್ರಭು ಖಾನಾಪುರೆ, – ಹೀಗೆ ಅನೇಕ ಪ್ರಗತಿಪರ ಲೇಖಕರು ಬಂಡಾಯ ಚಳುವಳಿಯನ್ನು ಕಟ್ಟಿದ್ದಾರೆ.

## ಸಾಹಿತ್ಯ ರೂಪಗಳು :

ಬಂಡಾಯ ಸಾಹಿತ್ಯ ವಿವಿಧ ರೂಪಗಳಲ್ಲಿ ಬೆಳೆದುಕೊಂಡು ಬಂದಿದೆ. ಕಾವ್ಯ, ಸಣ್ಣಕತೆ, ಕಾದಂಬರಿ, ನಾಟಕದಂತಹ ಸೃಜನಶೀಲ ಸಾಹಿತ್ಯರೂಪಗಳನ್ನು

ದುಡಿಸಿಕೊಂಡ ಬಂಡಾಯ ಲೇಖಕರು ಆಯಾ ರೂಪಗಳಲ್ಲಿ ಹೊಸ ಸಾಧ್ಯತೆಗಳನ್ನು ವಿಸ್ತರಿಸಿದ್ದಾರೆ. ಸೃಜನೇತರವೆಂದು ಕರೆಯುವ ಸಾಹಿತ್ಯ ರೂಪಗಳಲ್ಲಿಯೂ ಇವರು ಗಮನಾರ್ಹ ಕೃಷಿಮಾಡಿದ್ದಾರೆ. ತಮ್ಮ ಚಳುವಳಿಯ ಆಶಯಗಳಿಗೆ ತಕ್ಕಂತೆ ಇವರು ಸಾಹಿತ್ಯ ರೂಪಗಳನ್ನು ಬಳಸಿಕೊಂಡಿದ್ದಾರೆ. ಅವುಗಳಲ್ಲಿ ಕೆಲವು ಮುಖ್ಯ ರೂಪಗಳನ್ನು ಹಾಗೂ ಕೆಲವು ಪ್ರಮುಖ ಕೃತಿಗಳನ್ನು ಗಮನಿಸಬಹುದಾಗಿದೆ.

**ಕಾವ್ಯ :**

ಕಾವ್ಯಕ್ಕೆ ಕನ್ನಡದಲ್ಲಿ ಸುದೀರ್ಘವಾದ ಪರಂಪರೆಯಿದೆ. ಪಂಪನಿಂದ ಆಧುನಿಕ ಸಂದರ್ಭದ ವರೆಗಿನ ಕಾವ್ಯಪರಂಪರೆ ಒಂದು ರೀತಿಯದಾದರೆ, ಆಧುನಿಕ ಸಂದರ್ಭದಲ್ಲಿ ಬೆಳೆದುಕೊಂಡುಬಂದ ನವೋದಯ, ನವ್ಯ ಘಟ್ಟಗಳ ಕಾವ್ಯಪರಂಪರೆ ಮತ್ತೊಂದು ರೀತಿಯದಾಗಿದೆ. ಈ ಪರಂಪರೆಯಲ್ಲಿ ಬಂಡಾಯ ಚಳುವಳಿಯ ಕಾವ್ಯ ವಿಶಿಷ್ಟರೀತಿಯದ್ದಾಗಿದೆ. ಹಳಗನ್ನಡ ಕಾವ್ಯ, ಮಾರ್ಗಪರಂಪರೆಯನ್ನು ವಿಸ್ತರಿಸಿದರೆ, ನಡುಗನ್ನಡ ಕಾವ್ಯ ದೇಶೀ ಸಾಧ್ಯತೆಗಳನ್ನು ಹುಡುಕಿಕೊಂಡಿತು. ಹೀಗೆ ದೇಶೀ ನೆಲೆಯಲ್ಲರಳಿದ ನಡುಗನ್ನಡ ಕಾವ್ಯ ಹೆಚ್ಚು ಜನಪ್ರಿಯವಾಗಲು ಅದರ ಭಕ್ತಿ ಮೌಲ್ಯ ಕಾರಣವಾಯಿತು. ಭಕ್ತಿ ಪಂಥಗಳು ಹಾಗೂ ಭಕ್ತಿ ಕವಿಗಳು ಇಲ್ಲಿ ಕನ್ನಡದ ಸತ್ವ-ಸಾಧ್ಯತೆಗಳನ್ನು ಸ್ಪಷ್ಟಪಡಿಸಿದರು. ಆಧುನಿಕ ಸಂದರ್ಭದಲ್ಲಿ ನವೋದಯ ಹಾಗೂ ನವ್ಯ ಪಂಥಗಳು ಪಾಶ್ಚಾತ್ಯ ಕಾವ್ಯರೂಪದಿಂದ ಪ್ರೇರಣೆ ಪಡೆದವು. ನವೋದಯವು ಪಾಶ್ಚಾತ್ಯರ ರೋಮ್ಯಾಂಟಿಸಿಮ್‌ನ್ನು ಕಸಿಮಾಡಿ ಪಡೆದುಕೊಂಡರೆ, ನವ್ಯವು ಪಾಶ್ಚಾತ್ಯರ ಇಡಿಯಾದ ರೂಪಕ್ಕೆ ಮಾರುಹೋಗಿ ದಿಕ್ಕಿಲ್ಲದ ಪರದೇಶಿಯಾಯಿತು. ಆದರೆ ಬಂಡಾಯಕ್ಕೆ ಮಾರ್ಗ, ದೇಶಿಯ ಸಂಘರ್ಷವಾಗಲಿ, ಪಾಶ್ಚಾತ್ಯ, ಭಾರತೀಯ ಘರ್ಷಣೆಯಾಗಲಿ ಮುಖ್ಯವಾಗಲಿಲ್ಲ. ಈ ಕಾವ್ಯ, ಚಳುವಳಿಯ ಉಪಉತ್ಪನ್ನವಾಗಿ ಹೊರಟದ್ದರಿಂದ ಇದು ತನ್ನ ಆಶಯಗಳಿಗೆ ತಕ್ಕುದಾದ ಕಾವ್ಯರೂಪಗಳನ್ನು ತಾನೇ ಸಿದ್ಧಪಡಿಸಿಕೊಂಡಿತು. ಜನಪದದ ಲಯಗಾರಿಕೆಯನ್ನು, ವಚನದ ಸ್ಪಷ್ಟತೆಯನ್ನು, ನವೋದಯದ ಗೀತಾತ್ಮಕ ಗುಣವನ್ನು ಏಕಕಾಲಕ್ಕೆ ರೂಢಿಸಿಕೊಂಡ ಬಂಡಾಯ ಕಾವ್ಯವು ಹಾಡುಗಳಲ್ಲಿ, ಕಥನ ಕವನಗಳಲ್ಲಿ, ಖಂಡಕಾವ್ಯದಲ್ಲಿ, ಮುಕ್ತಛಂದಸ್ಸಿನ ಕವಿತೆಗಳಲ್ಲಿ, ಹನಿಗವಿತೆಗಳಲ್ಲಿ ತನ್ನ ಅನುಭವಗಳನ್ನು ಅಭಿವ್ಯಕ್ತಿಸುತ್ತಾ ಹೋಯಿತು.

ಬಂಡಾಯ ಕಾವ್ಯದ ಪ್ರಣಾಳಿಕೆಯಂತಿರುವ ಸಿದ್ಧಲಿಂಗಯ್ಯನವರ 'ಹೊಲೆಮಾದಿಗರ ಹಾಡು', ಹಾಡಿನ ಪರಂಪರೆಯ ಹೊಸರೂಪವಾಗಿದೆ. ಈ ಸಂಕಲನದ ಕವಿತೆಗಳನ್ನು 'ಹಾಡುಗಳು' ಎಂದೇ ಸಿದ್ಧಲಿಂಗಯ್ಯ ಕರೆದುಕೊಂಡಿದ್ದಾರೆ. ಇವನ್ನು ಗಟ್ಟಿಯಾಗಿ, ಲಯಬದ್ಧವಾಗಿ ಹಾಡಿದಾಗ ಮಾತ್ರ ಈ ರಚನೆಯ ಉದ್ದೇಶ ಸ್ಪಷ್ಟವಾಗುತ್ತದೆಂದು ತಿಳಿಸಿದ್ದಾರೆ. ಇಲ್ಲಿಯ ಹಾಡುಗಳಲ್ಲಿ ಜನಪದದ ಲಯವಿದೆ, ಆದರೆ ಆಶಯ ಬಂಡಾಯದ್ದಾಗಿದೆ. ಭಾವಗೀತಾತ್ಮಕ ರೂಪದಲ್ಲಿಯೇ

ಬೆಂಕಿಯುಗುಳುವ ಪ್ರಖರತೆ ಇದೆ. ಇಂತಹ ಹಾಡಿನ ಪರಂಪರೆಯನ್ನೇ ಬಂಡಾಯ ಕವಿಗಳು ಬೆಳೆಸಿದರು.

ಸಿದ್ಧಲಿಂಗಯ್ಯನವರ 'ಹೊಲೆಮಾದಿಗರ ಹಾಡು', 'ಸಾವಿರಾರು ನದಿಗಳು', 'ಕಪ್ಪುಕಾಡಿನ ಹಾಡು' ಇವೆಲ್ಲಾ ಹಾಡಿನ ಸಂಕಲನಗಳೇ ಆಗಿವೆ. ಈ ಹಾಡಿನ ಪರಂಪರೆಯನ್ನೇ ಕೆಲವು ಬಂಡಾಯ ಕವಿಗಳು ಮುಂದುವರಿಸಿದರು. ಇವುಗಳಲ್ಲಿ ಚೆನ್ನಣ್ಣ ವಾಲೀಕಾರ ಅವರ 'ಹಾಡಕ್ಕಿ ಹಾಗೂ ಇತರ ಪದ್ಯಗಳು', 'ಪ್ಯಾಂಥರ್ ಪದ್ಯಗಳು', 'ಬಂಡೆದ್ದ ದಲಿತರ ಬೀದಿಹಾಡುಗಳು', 'ಧಿಕ್ಕಾರದ ಹಾಡುಗಳು', 'ಐದು ಸಮಾಜವಾದಿ ಕಾವ್ಯಗಳು' –ದಂತಹ ಹಾಡಿನ ಸಂಕಲನಗಳು ಮುಖ್ಯವಾಗುತ್ತವೆ. ಬಸವರಾಜ ಸಬರದ ಅವರ 'ನನ್ನವರ ಹಾಡು' 'ದನಿಯೆತ್ತಿ ಹಾಡೇನ', 'ಪದಕಟ್ಟಿ ಹಾಡೇನ' ಹಾಗೂ ಚಂಪಾ ಅವರ 'ಗುಂಡಮ್ಮನ ಹಾಡು' ಇವೂ ಕೂಡ ಹಾಡಿನ ಸಂಕಲನಗಳಾಗಿವೆ. ಬರಗೂರ ಅವರ 'ಗುಲಾಮಗೀತೆ', ಮಾಲಗತ್ತಿಯವರ 'ಮೂಕನಿಗೆ ಬಾಯಿ ಬಂದಾಗ', ಎಚ್. ಎಸ್. ಶಿವಪ್ರಕಾಶ ಅವರ 'ಸಮಗಾರ ಭೀಮವ್ವ', ಶಂಕರ ಕಟಗಿಯವರ 'ಮುಸ್ಸಂಜೆ ನೆರಳಲ್ಲಿ', ಜಂಬಣ್ಣ ಅಮರಚಿಂತರ 'ಅಮರಚಿಂತ ಕವಿತೆಗಳು', ಸತ್ಯಾನಂದ ಪಾತ್ರೋಟರ 'ಜಾಜಿಮಲ್ಲಿಗೆ', ಕಮಲ ಹೆಮ್ಮಿಗೆಯವರ 'ಮುಂಜಾನೆ ಬಂದವನು' ಈ ಮೊದಲಾದ ಕವನಸಂಕಲನಗಳಲ್ಲಿ ಅನೇಕ ಹಾಡುಗಳು ಪ್ರಕಟವಾಗಿವೆ. ಇದಲ್ಲದೆ ಬಂಡಾಯ ಕವಿಗಳ ಹೆಚ್ಚು ಸಂಖ್ಯೆಯ ಕವನಸಂಕಲನಗಳಲ್ಲಿ ಒಂದೆರಡಾದರೂ ಹಾಡುಗಳಿರುತ್ತವೆ. ನವೋದಯದವರು ಭಾವಗೀತೆಯನ್ನು ಕೊಟ್ಟಂತೆ, ನವ್ಯದವರು ಮುಕ್ತಛಂದಸ್ಸಿನ ಕವಿತೆಯನ್ನು ಕೊಟ್ಟಂತೆ, ಕನ್ನಡ ಕಾವ್ಯ ಪರಂಪರೆಗೆ ಬಂಡಾಯದವರು 'ಹಾಡುಗಳನ್ನು' ಕೊಟ್ಟಿದ್ದಾರೆ. ಈ ಹಾಡುಗಳು ಈಗಾಗಲೇ ಜನಪ್ರಿಯವಾಗಿವೆ. ದಲಿತ ಸಂಘರ್ಷ ಸಮಿತಿಯ ಜಾತಾಗಳಲ್ಲಿ, ಸಮುದಾಯದ ಸಾಂಸ್ಕೃತಿಕ ಕಾರ್ಯಕ್ರಮಗಳಲ್ಲಿ, ಬಂಡಾಯದ ಸಮ್ಮೇಳನಗಳಲ್ಲಿ ಹೀಗೆ ಹಾಡುಹಾಡುವ ಸಂದರ್ಭ ಬರುವ ಎಲ್ಲ ಹಂತಗಳಲ್ಲೂ ಬಂಡಾಯದ ಹಾಡುಗಳು ಪ್ರಕಟವಾಗಿ ಪರಿಣಾಮವನ್ನುಂಟುಮಾಡಿವೆ. ಇದರಲ್ಲಿಯ ಕೆಲವು ಹಾಡುಗಳು ಚಲನಚಿತ್ರ-ಧ್ವನಿಸುರಳಿಗಳ ಮೂಲಕವೂ ಪ್ರಸಾರಗೊಂಡಿವೆ.

'ಖಂಡಕಾವ್ಯ'ದ ರೂಪವನ್ನು ಸಿದ್ಧಲಿಂಗಯ್ಯನವರ 'ಅಲ್ಲೆ ಕುಂತವರೆ' ಹಾಗೂ ಕೆ. ಬಿ. ಸಿದ್ಧಯ್ಯನವರ 'ಬಕಾಲ' ಕೃತಿಗಳಲ್ಲಿ ಕಾಣಬಹುದಾಗಿದೆ. ಹಾಡಿನ ರೂಪ ಬೆಳೆದಂತೆ 'ಖಂಡಕಾವ್ಯ' ರೂಪ ಅಷ್ಟಾಗಿ ಬೆಳೆಯಲಿಲ್ಲ. ಬಂಡಾಯ ಕವಿಗಳಿಂದ ಇಡಿಯಾದ 'ಕಥನ-ಕವನ ಸಂಕಲನ'ಗಳು ಬಾರದಿದ್ದರೂ, ಅಲ್ಲಲ್ಲಿ ಬಿಡಿಬಿಡಿಯಾದ ಅನೇಕ ಕಥನಕವನಗಳು ಪ್ರಕಟವಾಗಿವೆ. ಇತ್ತೀಚೆಗೆ ಜನಪ್ರಿಯವಾದ 'ಹನಿಗವಿತೆ' ಪ್ರಕಾರದಲ್ಲಿಯೂ ಬಂಡಾಯ ಕವಿಗಳು ಕೃಷಿಮಾಡಿದ್ದಾರೆ. ಸಂಕ್ರಮಣ ಪ್ರಕಾಶನದಿಂದ ಪ್ರಕಟವಾದ 'ಹನಿ ಹನಿ' ಈ ದೃಷ್ಟಿಯಿಂದ ಗಮನಿಸಬೇಕಾದ ಪ್ರಮುಖ ಹನಿಗವನಗಳ ಸಂಕಲನವಾಗಿದೆ. ಇದರಲ್ಲಿ ಅನೇಕ ಬಂಡಾಯ ಕವಿಗಳ ಹನಿಗವಿತೆಗಳಿವೆ. ಬಂಡಾಯ ಕವಿಗಳಿಂದ ಕೆಲವು ಇಡಿಯಾದ ಹನಿಗವಿತೆಗಳ ಸಂಕಲನಗಳೇ ಬಂದಿವೆ. ಅವುಗಳಲ್ಲಿ

ಶೈಲಜಾ ಉಡಚಣವರ 'ತುಂತುರು ಹನಿಗಳು', ಕಾಶೀನಾಥ ಅಂಬಲಗೆಯವರ 'ಹುಲ್ಲ ಮೇಲಿನ ಹನಿಗಳು' ಸಬರದರ 'ನೂರುಹನಿಗಳು' ಮತ್ತು 'ಜೇನಹನಿಗಳು' — ಈ ಮೊದಲಾದವುಗಳನ್ನು ಹೆಸರಿಸಬಹುದು.

ಬಂಡಾಯ ಚಳುವಳಿಯ ಬಹುಸಂಖ್ಯೆಯ ಕವಿಗಳು ಕಾವ್ಯ ರಚನೆಮಾಡಿದ್ದು ಮುಕ್ತ ಛಂದಸ್ಸಿನ 'ಕವಿತೆ'ಗಳ ಮೂಲಕವೆಂದು ಹೇಳಬಹುದು. ನವ್ಯದವರ ಮುಕ್ತಛಂದಸ್ಸಿನ ಕವಿತೆಗೂ, ಬಂಡಾಯದವರ ಕವಿತೆಗೂ ವಸ್ತು, ಆಶಯ, ವಿನ್ಯಾಸ, ಅಭಿವ್ಯಕ್ತಿ ಕ್ರಮಗಳಲ್ಲಿ ವ್ಯತ್ಯಾಸವಿದೆ. ಬಂಡಾಯದ ಬಹಳಷ್ಟು ಕವಿಗಳು 'ಕವಿತೆ'ಗಳನ್ನು ತಮ್ಮ ಕಾವ್ಯಮಾಧ್ಯಮವನ್ನಾಗಿಸಿಕೊಂಡರು. ದಲಿತ ಸಂವೇದನೆಯ, ಮುಸ್ಲಿಂ ಸಂವೇದನೆಯ, ಮಹಿಳಾ ಸಂವೇದನೆಯ ಹಾಗೂ ಗ್ರಾಮೀಣ ಸಂವೇದನೆಯ ಎಲ್ಲ ಸ್ತರದ ಬಂಡಾಯ ಕವಿಗಳು 'ಕವಿತೆ' ರೂಪದ ಮೂಲಕ ಕಾವ್ಯಕೃಷಿ ಮಾಡಿದ್ದಾರೆ. ಈ ಕವಿತೆಗಳು ವಿವಿಧ ಬಗೆಯ ವಸ್ತು — ಆಶಯಗಳನ್ನು ಒಳಗೊಂಡಿವೆ.

ಬಂಡಾಯ ಚಳುವಳಿಯ ಸಂದರ್ಭದಲ್ಲಿ ಕಾವ್ಯಕ್ಕೆ ಸಂಬಂಧಿಸಿದ ಕೆಲವು ಪ್ರಮುಖ ಅಂಥಾಲಜಿಗಳು ಪ್ರಕಟವಾದವು. ಅವುಗಳಲ್ಲಿ ಕನ್ನಡ ಸಾಹಿತ್ಯ ಪರಿಷತ್ತು ಸಿ. ವೀರಣ್ಣನವರ ಸಂಪಾದಕತ್ವದಲ್ಲಿ ಪ್ರಕಟಿಸಿದ 'ಕನ್ನಡ ಪ್ರತಿಭಟನೆ ಕಾವ್ಯ', ಸಂಕ್ರಮಣ ಪ್ರಕಾಶನದಿಂದ ಚಂಪಾ ಅವರ ಸಂಪಾದಕತ್ವದಲ್ಲಿ ಪ್ರಕಟವಾದ 'ಜೂನ, ೭೫, ಮಾಚ್ ೭೭'; ಮೂರ್ತಿೇಶ್ವರಯ್ಯ ಮತ್ತು ರಂಗಾನಾಥರು ಜಂಟಿಯಾಗಿ ಸಂಪಾದಿಸಿ ಪ್ರಕಟಿಸಿದ 'ಬಂಡಾಯದ ಬಿಸಿಯುಸಿರು', ವಿಜಯ ಪಾಟೀಲ ಹಾಗೂ ಮಂಗಳೂರ ವಿಜಯ ಕೂಡಿ ಸಂಪಾದಿಸಿರುವ 'ಕಪ್ಪು ಜನರ ಕೆಂಪು ಕಾವ್ಯ', ನರಹಳ್ಳಿ ಬಾಲಸುಬ್ರಹ್ಮಣ್ಯ ಹಾಗೂ ವೀಣಾ ಶಾಂತೇಶ್ವರ ಅವರು ಸಂಪಾದಿಸಿ ಪರಿಷತ್ತಿನಿಂದ ಪ್ರಕಟವಾದ 'ಹೊಸಹೆಜ್ಜೆ', ಜಿ. ಆರ್. ತಿಪ್ಪೇಸ್ವಾಮಿಯವರ ಸಂಪಾದಕತ್ವದಲ್ಲಿ ಬಂದ 'ಅಗ್ನಿಸಾಕ್ಷಿ', ಚೆನ್ನಣ್ಣ ವಾಲೀಕಾರ ಮತ್ತು ಬಸವರಾಜ ಸಬರದವರ ಸಂಪಾದಕತ್ವದಲ್ಲಿ ಪ್ರಕಟವಾದ 'ಕಲ್ಯಾಣ ನಾಡಿನ ಕೆಂಪು ಕವಿತೆಗಳು', ಶ್ರೀನಿವಾಸರಾಜು, ರಮಜಾನ ದರ್ಗಾ, ರಘುನಂದನ ಇವರು ಕೂಡಿ ಸಂಪಾದಿಸಿದ ಯುದ್ಧವಿರೋಧಿ ಹಾಡುಗಳ ಸಂಕಲನ 'ಶತಮಾನಗಳ ಬಾಯಾರಿಕೆ', ಕನ್ನಡ ಸಂಸ್ಕೃತಿ ಇಲಾಖೆಯಿಂದ ಪ್ರಕಟವಾದ, ಬರಗೂರು ರಾಮಚಂದ್ರಪ್ಪನವರು ಸಂಪಾದಿಸಿರುವ 'ಬಂಡಾಯ ಕಾವ್ಯ' — ಈ ಮೊದಲಾದ ಅಂಥಾಲಜಿಗಳು ಬಂಡಾಯ ಕಾವ್ಯದ ವಿವಿಧ ಮಾದರಿಗಳನ್ನೊಳಗೊಂಡಿವೆ. ಗಾಂಧಿಯನ್ನು ಕುರಿತು ಬರೆದ ಬಂಡಾಯ ಕವಿತೆಗಳ ಸಂಕಲನ 'ಗಾಂಧಿ' ಸಂಕ್ರಮಣ ಪ್ರಕಾಶನದಿಂದ ಚಂಪಾ ಅವರ ಸಂಪಾದಕತ್ವದಲ್ಲಿ ಪ್ರಕಟವಾದರೆ, ಬೆಂಜಮಿನ್ ಮೊಲಾಯಿಸ್ ಕುರಿತಾದ 'ಕಪ್ಪು ನಾಡಿನ ಕೆಂಪು ಸೂರ್ಯ' ಕವನಸಂಕಲನ ಹಿ. ಮ. ಗುರುಬಸವರಾಜ್ ಅವರ ಸಂಪಾದಕತ್ವದಲ್ಲಿ ಹೊರಬಂದಿದೆ. ಅದೇ ರೀತಿ ಅಂಬೇಡಕರ್ ಅವರನ್ನು ಕುರಿತಂತೆ ಬಸವರಾಜ ಸಬರದ ಅವರ ಸಂಪಾದಕತ್ವದಲ್ಲಿ ಪ್ರಕಟವಾದ 'ದಲಿತ ಸೂರ್ಯ' ಹಾಗೂ ಎಲ್. ಹನುಮಂತಯ್ಯನವರ ಸಂಪಾದಕತ್ವದಲ್ಲಿ ಸಾಹಿತ್ಯ ಅಕಾಡೆಮಿ

ಪ್ರಕಟಿಸಿದ 'ಅಂಬೇಡಕರ್ ಕವಿತೆಗಳು' —ಪ್ರಮುಖ ಸಂಪಾದಿತ ಕೃತಿಗಳಾಗಿವೆ. ಬೇರೆ ಬೇರೆ ಭಾಷೆಯಿಂದ ಅನುವಾದಗೊಂಡ ಪ್ರತಿಭಟನಾಕಾವ್ಯದ ಅನೇಕ ಕವನ ಸಂಕಲನಗಳೂ ಪ್ರಕಟವಾಗಿವೆ.

ಬಂಡಾಯದಲ್ಲಿ ಮಹಾಕಾವ್ಯವೇ ಇಲ್ಲವಲ್ಲ ? ಎಂಬ ಪ್ರಶ್ನೆ ಕೇಳುತ್ತಲಿದೆ. ಮಹಾಕವಿ ಪರಂಪರೆಯನ್ನು ದೂರಸರಿಸುವುದೇ ಬಂಡಾಯದ ಆಶಯವಾಗಿದೆಯೆಂದು ಬಂಡಾಯ ಕವಿಗಳು ಉತ್ತರಿಸುತ್ತಾರೆ. ನಾಯಕ ಪ್ರಧಾನ ಸಂಸ್ಕೃತಿಯನ್ನು ಒಪ್ಪದ ಬಂಡಾಯ ಚಳುವಳಿ ಮಹಾಕಾವ್ಯ– ಮಹಾಕವಿಯೆಂಬ ಭ್ರಮೆಗಳನ್ನೂ ಒಪ್ಪಲಾರದು. ಪಂಡಿತ ಸಮ್ಮುಖವಾದ ಮಹಾಕಾವ್ಯ ಪರಂಪರೆಯನ್ನು ದೂರವಿರಿಸಿ, ಜನಸಮ್ಮುಖವಾದ ಹಾಡುಗಬ್ಬದ ಕಾವ್ಯವನ್ನು ಸಮುದಾಯದ ನಡುವೆ ಬೆಳೆಸಿದ್ದು ಬಂಡಾಯ ಚಳುವಳಿಯ ಮುಖ್ಯ ಸಾಧನೆಯಾಗಿದೆ. ಹನ್ನೆರಡನೇ ಶತಮಾನದ ವಚನಕಾರರಲ್ಲಿ ಒಬ್ಬ ಮಹಾವಚನಕಾರ, ಮತ್ತೊಬ್ಬ ಚಿಕ್ಕವಚನಕಾರನೆಂಬ ಭೇದಭಾವವಿಲ್ಲ. ವಸ್ತು, ಆಶಯ, ದೋರಣೆ, ಅಭಿವ್ಯಕ್ತಿ ಹೀಗೆ ಬೇರೆ ಬೇರೆ ನೆಲೆಗಳಿಂದ ನೋಡಿದಾಗ ಒಬ್ಬೊಬ್ಬ ವಚನಕಾರನೂ ಮಹಾಕವಿಯಂತೆಯೇ ಕಾಣುತ್ತಾನೆ. ಅದರಂತೆ ಬಂಡಾಯ ಕವಿಗಳಲ್ಲಿ ಪ್ರತಿಯೊಬ್ಬರ ಸಂವೇದನೆಯೂ ಅಷ್ಟೇ ಮುಖ್ಯವಾಗಿರುತ್ತದೆ. ಒಂದೇ ಸಂವೇದನೆಯನ್ನು, ಒಂದೇ ಸಂಸ್ಕೃತಿಯನ್ನು, ಒಬ್ಬನೇ ಕಥಾನಾಯಕನನ್ನು 'ಮಹಾ' ಎಂದು ವರ್ಣಿಸುವುದಕ್ಕಿಂತ, ಅನೇಕ ಸಂವೇದನೆಗಳ, ಬಹುಮುಖಿ ಸಂಸ್ಕೃತಿಯ, ಜನಸಾಮಾನ್ಯರ ಬದುಕು, ಬಂಡಾಯ ಕವಿಗಳಿಗೆ ಮಹತ್ವದ್ದಾಗಿ ಕಂಡಿದೆ. ಹೀಗಾಗಿ ಅವರಲ್ಲಿ ಮಹಾಕವಿಗಳ ಮಹಾಪೂರಕ್ಕಿಂತ; ಹಲವಾರು ಸಂವೇದನೆಗಳ ಬಹುಮುಖಿ ಸಂಸ್ಕೃತಿಯಿದೆ.

ಎದೆ ಹಾಲ ಕುದಿಕುದಿಸಿ ನಿಟ್ಟುಸಿರ ಬಿಟ್ಟವರೆ
ಹೊಟ್ಟೇ ಕಟ್ಟಿ ನನಗೆ ಮುಡುಪು ಕೊಟ್ಟವರೆ
ಕಣ್ಣೀರ ಹೊಳಿನುಂಗಿ ತುಟಿಮ್ಯಾಲೆ ನಕ್ಕವರೆ
ರಕ್ತಾ ಬೆವರು ಬೆರಸಿ ಪನ್ನೀರುಗ್ಗಿದ ಜನರೆ
ಮೂಕನ ಈ ಮಾತು ಕೇಳೀರೇನೋ
ಕೇಳಿ ಕೆಪ್ಪನ ನೆತ್ತರ ಕುದ್ದೀತೇನೊ ।
ನಿಮ್ಮ ಬಾಹುಗಳಿಗೆ ಬಲಿ ಬೇಡಿರೊ
ನಿಮ್ಮ ಕಲ್ಲು ಮಾಡಿದ ಜನರ ಮಣ್ ಮಾಡೀರೋ

(ಚಂಪಾ : ವಿಪ್ರಲಾಪ, ೧೯೮೨ ರ ಕವಿತೆ, ಸಾಹಿತ್ಯ ಅಕಾಡೆಮಿ)

ಚಂದ್ರಶೇಖರ ಪಾಟೀಲರು, 'ವಿಪ್ರಲಾಪ' ಎಂಬ ಈ ಕವಿತೆಯಲ್ಲಿ ತೀವ್ರ ಪರಿಣಾಮವನ್ನುಂಟುಮಾಡಿದ್ದಾರೆ. ಬಾಹುಬಲಿಯೇ ವಿಪ್ರಲಾಪ ಮಾಡುವ ಈ ಸನ್ನಿವೇಶ ಸಾಮಾನ್ಯ ಜನತೆಯ ಮೌಢ್ಯತೆಯನ್ನು ಪ್ರಶ್ನಿಸುತ್ತದೆ. ರಕ್ತ, ಬೆವರು ಸುರಿಸಿ ಕಲ್ಲು ಮೂರ್ತಿಗಳಿಗೆ ಪನ್ನೀರುಣಿಸುತ್ತ ಶತಮಾನಗಳಿಂದ ಕತ್ತಲಲ್ಲುಳಿದ

ಜನತೆಗೆ ಇಂತಹ ಕವಿತೆಗಳು ಹೊಸತನ ಮೂಡಿಸುತ್ತವೆ. ನವ್ಯದಲ್ಲಿ ಬರೆಯುತ್ತಿದ್ದ ಪಾಟೀಲರು ಬಂಡಾಯ ಚಳುವಳಿಯ ಸಂಸ್ಥಾಪಕರಲ್ಲಿ ಒಬ್ಬರು. ಅವರ 'ಓ ಎನ್ನ ದೇಶ ಬಾಂಧವರೇ' ಕವನ ಸಂಲಕಲನವು ಆಗಿನ ಕಾಲದ ತುರ್ತು ಪರಿಸ್ಥಿತಿಗೆ ನೀಡಿದ ಪ್ರತಿಕ್ರಿಯೆಯಾಗಿದೆ. ಇವರಿಂದ ಅನೇಕ ಮಹತ್ವದ ಕವನ ಸಂಕಲನಗಳು ಪ್ರಕಟವಾಗಿವೆ.

ಕಪ್ಪು ಮುಖ ಬೆಳ್ಳಿಗಡ್ಡ ಉರಿಯುತಿರುವ ಕಣ್ಣುಗಳು
ಹಗಲು ರಾತ್ರಿಗಳನು ಸೀಳಿ ನಿದ್ದೆಯನ್ನು ಒದ್ದರು
ಕಂಬಳಿಗಳು ಕೊರಗಿದವು ಎದ್ದೇಳುವ ರೊಚ್ಚಿಗೆ
ಭೂಕಂಪನವಾಯಿತು ಅವರು ಕುಣಿದ ಹುಚ್ಚಿಗೆ
(ಸಿದ್ಧಲಿಂಗಯ್ಯ : ಸಾವಿರಾರು ನದಿಗಳು)

ಬಂಡಾಯ ಸಂಘಟನೆಯ ಸ್ಥಾಪಕರಲ್ಲೊಬ್ಬರಾದ ಸಿದ್ಧಲಿಂಗಯ್ಯ ಬಂಡಾಯ ಕಾವ್ಯದ ಮುಖ್ಯ ಸೆಲೆ. 'ಇಕ್ರಲಾ ವದಿರ್ಲಾ, ಈ ನನ್ ಮಕ್ಕಳ ಚರ್ಮ ಎಬ್ರಲಾ' ಎಂದು ಕರೆಕೊಟ್ಟ ಸಿದ್ಧಲಿಂಗಯ್ಯ 'ಹೊಲೆಮಾದಿಗರ ಹಾಡು' ಕವನ ಸಂಕಲನದ ಮೂಲಕ ಬಂಡಾಯದ ಕಾವ್ಯಮಾದರಿಯನ್ನು ಪ್ರಾರಂಭಿಸಿದವರು. ನಂತರದಲ್ಲಿ ಪ್ರಕಟವಾದ ಅವರ 'ಸಾವಿರಾರು ನದಿಗಳು', 'ಕಪ್ಪುಕಾಡಿನ ಹಾಡು' ಬಂಡಾಯ ಕಾವ್ಯದ ಮತ್ತೊಂದು ಮಜಲನ್ನು ತೆರೆದುತೋರುತ್ತವೆ.

ಹರಿವ ನೀರಳೆದೆ ಮರದ ನೆರಳಳೆದೆ
ಎಲ್ಲೂ ಮೈತಳೆದು ನೀ ಮೂಡಲಿಲ್ಲ....
ನಗುವ ಗಿಡಗಳ ನಡುವೆ ಕೊನೆಗೊಮ್ಮೆ ಕಂಡೆ
ಉರಿವ ಕಣ್ಣೂ ಇಲ್ಲ, ಸುಳಿವ ನಗೆಯೂ ಇಲ್ಲ
(ಕಾಳೇಗೌಡ ನಾಗವಾರ : ಕರಾವಳಿಯಲ್ಲಿ ಗಂಗಾಲಗ್ನ)

ಬಂಡಾಯದ ಮತ್ತೊಬ್ಬ ಪ್ರಮುಖ ಕವಿ ಕಾಳೇಗೌಡ ನಾಗವಾರರು ನವ್ಯದಲ್ಲಿ ಬರೆಯಲು ಪ್ರಾರಂಭಿಸಿದವರು. ಪ್ರೇಮ-ಪ್ರೀತಿಯ ಅಗತ್ಯವನ್ನು, ಮಧ್ಯಮವರ್ಗದ ದ್ವಂದ್ವಗಳನ್ನು ಸಾಮಾಜಿಕ ಕಟ್ಟುಪಾಡುಗಳ ನಡುವೆ ಇಟ್ಟು ಚರ್ಚಿಸುವುದು ನಾಗವಾರ ಕಾವ್ಯದ ವಿಶಿಷ್ಟಗುಣ. ಕಾಮ್ರೇಡನಿಗೆ ಯಾವ ನಿಂದನೆಯನ್ನು ಮಾಡದೆ ಅವನ ತಪ್ಪುಗಳನ್ನು ಎತ್ತಿತೋರಿಸುವ ಕಲೆಗಾರಿಕೆಯನ್ನು ಈ ಕವನದಲ್ಲಿ ಕಾಣಬಹುದಾಗಿದೆ.

ಯಾವ ಅಕ್ಷರದಿಂದ ಬರೆದು ಹೇಳಲಿ ನಾನು
ನಮ್ಮ ಜನರಿಗಾದ ಎದೆಯ ಬ್ಯಾನಿ
ಲೂಟೀಗಾರರೆ ಇಲ್ಲಿ ಲೀಡರ್ ಆಗುವ ಹೊತ್ತು
ನಿಲ್ಲಲಾರವು ನಿತ್ಯನಡೆವ ಖೂನಿ
(ಚೆನ್ನಣ್ಣ ವಾಲೀಕಾರ : ಪ್ಯಾಂಥರ ಪದ್ಯಗಳು)

ಬಂಡಾಯದ ಮುಖ್ಯ ಕವಿಗಳಲ್ಲೊಬ್ಬರಾದ ಚೆನ್ನಣ್ಣ ವಾಲೀಕಾರ ಹಾಡುಗಳನ್ನೇ ತಮ್ಮ ಕಾವ್ಯಮಾಧ್ಯಮವನ್ನಾಗಿ ದುಡಿಸಿಕೊಂಡವರು. ಅನ್ಯಾಯ-ಶೋಷಣೆಯನ್ನು ನೇರವಾಗಿ ತಮ್ಮ ಕಾವ್ಯದಲ್ಲಿ ಪ್ರತಿಭಟಿಸುವ ವಾಲೀಕಾರರು, ಜನಪದ ಲಯಗಳನ್ನು, ಅದರ ಗೇಯಗುಣವನ್ನು ವೈವಿಧ್ಯಮಯ ರೀತಿಯಲ್ಲಿ ತಮ್ಮ ಕಾವ್ಯದ ಮೂಲಕ ತೋರಿದ್ದಾರೆ.

ಇದ್ದವರು ಕದ್ದವರು
ಚುನಾವಣೆ ಗೆದ್ದವರು
ಇವರು ಹೊತ್ತ ಬೆಳಕಿನಲ್ಲಿ
ಲಕ-ಲಕ ಹೊಳೆದರು !
ಯಾರಯ್ಯ ಯಾರಿವರು
ಕಣ್ಣಿಗಂತೂ ಕಾಣರು, ಪೆಟ್ರೋಮ್ಯಾಕ್ಸ್ ಹೊತ್ತವರು

(ಜಂಬಣ್ಣ ಅಮರಚಿಂತ : ಪೆಟ್ರೋಮ್ಯಾಕ್ಸ್ ಹೊತ್ತವರು)

ಜಂಬಣ್ಣ ಅಮರಚಿಂತ ಅವರು ಈ ಕವಿತೆಯಲ್ಲಿ ಪೆಟ್ರೋಮ್ಯಾಕ್ಸ್ ಹೊತ್ತ ಕೊರವರ ದರಂತಕತೆಯನ್ನು ಹೇಳುತ್ತಾರೆ. ಅವರು 'ಅಮರಚಿಂತ ಕವಿತೆಗಳು' ಸಂಕಲನದ ಮೂಲಕ ಗಮನಸೆಳೆಯುತ್ತಾರೆ.

ಕಲ್ಲು ಮಣ್ಣು ಕಟ್ಟಿಗೆಗಳಿಗೆಲ್ಲ ಆಕಾರ ಕೊರೆದು
ಬಣ್ಣಬಣ್ಣದ ಚಿತ್ತಾರ ಬಿಡಿಸಿದಿರಿ
ರತ್ನವಜ್ರವ ತೊಡಿಸಿ ಪಟ್ಟೆ ಪೀತಾಂಬರ ಉಡಿಸಿ ಚೆಲುವ
ಚೆಲುವೆಯರ ಕೈಗೆ ಗದಾಪದ್ಮಗಳ ಹಿಡಿಸಿದಿರಿ !
ಹತ್ತಾರು ಕೈಗಳನು ಹಲವಾರು ಮುಖಗಳನು
ಹಂದಿ ಆಮೆಗಳಂಥ ಅವತಾರ ಕತೆಗಳನು
ಬೆಚ್ಚಿ ಬೀಳಿಸುವಂತೆ ಹೆಣೆದುಹಾಡಿದಿರಿ

(ಬಿ. ಟಿ. ಲಲಿತಾ ನಾಯಕ : ೧೯೮೨ ರ ಕವಿತೆ ಸಾಹಿತ್ಯ ಅಕಾಡೆಮಿ)

ಬಂಡಾಯ ಚಳುವಳಿಯ ಮುಂಚೂಣಿಯಲ್ಲಿದ್ದ ಬಿ. ಟಿ. ಲಲಿತಾ ನಾಯಕ ಅನೇಕ ಲವಲವಿಕೆಯ ಕವಿತೆಗಳನ್ನು ಕೊಟ್ಟಿದ್ದಾರೆ. ಇತ್ತೀಚೆಗೆ ಪ್ರಕಟವಾಗಿರುವ ಅವರ ಸಮಗ್ರ ಕವಿತೆಗಳ ಸಂಕಲನ ಅವರ ಒಟ್ಟು ಆಶಯಗಳ ಪ್ರತೀಕದಂತಿದೆ.

ನಾವು ದುಡಿಯುವ ಜನ
ನಮ್ಮ ಅಧಿಕಾರ ಬಂದಾಗ
ಪೋಲಿಸರನ್ನು, ನ್ಯಾಯಾಧೀಶರನ್ನು
ಮನುಷ್ಯರನ್ನಾಗಿ ಮಾಡುತ್ತೇವೆ

(ರಮಜಾನ ದರ್ಗಾ : ಕಾವ್ಯ ಬಂತು ಬೀದಿಗೆ)

'ಪ್ರಣಾಳಿಕೆ' ಕವನದ ಮೂಲಕ ಕಾವ್ಯಕ್ಷೇತ್ರ ಪ್ರವೇಶ ಮಾಡಿದ ದರ್ಗಾ ಅವರು ಈ ಕವಿತೆಯ ಮುಂದಿನ ಸಾಲುಗಳನ್ನು ಹೇಳುತ್ತಾ "ಬಂದೂಕಿನ ಬಾಯಲ್ಲಿ ಗುಬ್ಬಿ ಗೂಡು ಕಟ್ಟುತ್ತವೆ" ಎಂಬ ಸರಳ ನುಡಿಯಲ್ಲಿಯೇ ಅರ್ಥವಂತಿಕೆಯನ್ನು ತುಂಬಿಡುತ್ತಾರೆ.

ಎಣ್ಣೆ ಬೆಣ್ಣೆಗಳಲಿ ಮುಳುಗೇಳುವಣ್ಣಗಳಿರಾ
ಜಿಡ್ಡುಗಟ್ಟಿದೆ ನಿಮ್ಮ ಹೃದಯ ದೀಪ
ಎಣ್ಣೆಯಿಲ್ಲದ. ಎಣೆಯಿಲ್ಲದ ಎದೆದೀಪ ಬೆಳಗಿಸಿರಿ
ರಂಗಮಾದನಿಗೊಂದಿಷ್ಟು ಎಣ್ಣೆ ಸೋವಿಮಾಡಿಸಿರಿ
(ಅಲ್ಲಮಪ್ರಭು ಬೆಟ್ಟದೂರ : ಕಾರ್ತೀಕ , ಕಾವ್ಯಕಾರಂಜಿ ೧೯೮೨)

ಎಂದು ಕೇಳುವ ಅಲ್ಲಮಪ್ರಭು ಬೆಟ್ಟದೂರ ಅವರು ಹೈದ್ರಾಬಾದ ಕರ್ನಾಟಕ ಪ್ರದೇಶದಲ್ಲಿ ಬಂಡಾಯ ಚಳುವಳಿ ನಿರಂತರವಾಗಿರುವಂತೆ ನೋಡಿಕೊಂಡವರು. ನೇರನುಡಿಯ ಅಲ್ಲಮಪ್ರಭು ಬೆಟ್ಟದೂರ ಸರಳವಾದ ಸಾಲುಗಳಲ್ಲಿಯೇ ಜ್ವಲಂತ ಸಮಸ್ಯೆಗಳನ್ನು ತೆರೆದಿಟ್ಟವರು.

ಬರೆಯುವದಕ್ಕಾಗಿ ಹುಟ್ಟಲಿಲ್ಲ ನಾನು
ನಾನು ಬದುಕಿದೆ ಹೋರಾಟ, ಹಸಿವು, ಅನ್ಯಾಯದ ಜತೆ
ನುಗ್ಗಿ ನಿಲ್ಲುತ್ತಿರುವ
ನನ್ನ ಜನರ ಮಧ್ಯ ಬದುಕಿದ್ದೆ ನಾನು
ಅವರ ಹೋದ ಉಸಿರುಗಳು ಹಾಡಾಗಿದ್ದವು
ಬಿತ್ತಲಿಕ್ಕೆ ಕಾಳಾಗಿದ್ದವು
(ಎಸ್. ಎಸ್. ಹಿರೇಮಠ : ಉಸಿರುಗಳ ಹಾಡು)

ಎನ್ನುವ ಎಸ್. ಎಸ್. ಹಿರೇಮಠರು ಬಂಡಾಯ ಕಾವ್ಯದ ಗತಿಶೀಲತೆಗೆ, ಕಾರ್ಮಿಕರ ನೋವಿನ ಸ್ಪರ್ಶನೀಡಿದವರು. ಹಲವಾರು ಕವನ ಸಂಕಲನಗಳನ್ನು ಪ್ರಕಟಿಸಿರುವ ಇವರು ಬಂಡಾಯದ ಚಿಂತಕರೂ ಆಗಿದ್ದಾರೆ.

ಹೊಡಿಯ ಬ್ಯಾಡೆ ಯವ್ವ ನನ್ನ
ಕಡಿಯಲಾರೆ ಯಾರನ್ನ,
ಬೆಳ್ಳಿಯುಡದಾರ ಬೇಡಲಾರೆ
ಜರದ ಅಂಗಿ ಕೇಳಲಾರೆ
ಚೊಣ್ಣಯೊಂದು ತಂದುಕೊಟ್ಟರೆ
ಗೆಣ್ಣನಾಗಿ ತೊಟ್ಟು ಬರುವೆ
(ಅರವಿಂದ ಮಾಲಗತ್ತಿ : ಮೂಕನಿಗೆ ಬಾಯಿಬಂದಾಗ)

ಎಂದು ಅಭಿವ್ಯಕ್ತಿಸಿರುವ ಅರವಿಂದ ಮಾಲಗತ್ತಿಯವರು, ಬಂಡಾಯ ಚಳುವಳಿಯನ್ನು ಅನುಮಾನದಿಂದಲೇ ಕಂಡು ಅದರ ಅರ್ಥವಂತಿಕೆಯನ್ನು ಹೆಚ್ಚಿಸಿದವರು. ಜನಪದ ಸೊಗಡಿನ ಇವರ ಕೆಲವು ತ್ರಿಪದಿಗಳು ಕುತೂಹಲಕಾರಿಯಾಗಿವೆ.

ಚುಕ್ಕಿಗಳ ತರಲೆಂದು
ಹಕ್ಕಿಗಳ ತೂರಿ ಬಿಟ್ಟವರು
ಹಾರಿಬರುತ್ತಾರೆ ನಾಳೆ !
ದಿಕ್ಕುತಪ್ಪಿಸಿದ ದಿಕ್ಪಾಲಕರ
ಗತಿಕಾಣಿಸುವ ಹರಿಕಾರರು ಹರಿದುಬರುತ್ತಾರೆ ನಾಳೆ

(ಗವಿಸಿದ್ಧ ಬಳ್ಳಾರಿ : ನಾಳೆ ಬರುತ್ತಾರೆ)

ಎನ್ನುವ ಗವಿಸಿದ್ಧ ಬಳ್ಳಾರಿ ವಿಶಿಷ್ಟ ಅಭಿವ್ಯಕ್ತಿಯ ಕವಿ. ಮೆಲ್ಲಗೆ ಕಿರುಧ್ವನಿಯಲ್ಲಿ ಮಾತನಾಡುವ ಇವರ ಕವಿತೆಗಳೊಳಗೆ ಬೆಂಕಿಯುಂಡೆಗಳು ಅಡಗಿರುತ್ತವೆಂಬುದು ಗಮನಾರ್ಹ.

ನೊಂದವರ ನೋವಿನ
ಕೆನೆಗಟ್ಟಿರುವ ಅಳಲುಗಳನ್ನು
ಚಿಮ್ಮಿಸುವ ಹಾಡಿನ
ಹೊಸರಾಗ ನುಡಿಸಿದಾಗ
ಅರಳುವ ನೋವು ನನ್ನ ಕವಿತೆ

(ಮುನಿವೆಂಕಟಪ್ಪ)

ಎಂದು ತಮ್ಮ ಕವಿತೆಯ ಆಶಯವನ್ನು ಸ್ಪಷ್ಟಪಡಿಸುವ ಮುನಿವೆಂಕಟಪ್ಪ ಅವರು ದಲಿತ ಲೋಕದ ನೋವು – ಅವಮಾನಗಳನ್ನು ತಮ್ಮ ಕವಿತೆಗಳಲ್ಲಿ ನಿಖರವಾಗಿ ಕಟ್ಟಿಕೊಟ್ಟಿದ್ದಾರೆ.

ತುಂಬಿದ ನ್ಯಾಯಾಲಯದಲ್ಲಿ
ಬಿಳಿ ಕೂದಲಿನ ನ್ಯಾಯಾಧೀಶ
ಸತ್ಯಕ್ಕೆ ಗಲ್ಲು ವಿಧಿಸಿದ
ಸತ್ಯ ದಿಲ್ಲಿಗೆ ಅಪೀಲು ಹೋಗಲಿಲ್ಲ

(ಸರಜೂ ಕಾಟಕರ : ಗಲ್ಲು)

ಎನ್ನುವ ಸರಜೂ ಕಾಟಕರ ತಮ್ಮ ಕವಿತೆಗಳಲ್ಲಿ ಅರಳು ಹುರಿದಂತೆ ಮಾತನಾಡುತ್ತಾರೆ. ಆ ಮಾತುಗಳಲ್ಲಿ ಕಾವ್ಯದ ಅರ್ಥಗಳಡಗಿರುತ್ತವೆ.

ನನಗೂ ನನ್ನ ಕಾವ್ಯಕ್ಕೂ
ಹಬ್ಬ ಹುಣ್ಣಿಮೆಗಳಿಲ್ಲ
ದಿಬ್ಬಣದ ಜಾತ್ರೆಗಳಿಲ್ಲ

ಟ್ರಿಮ್ಮಾಗಿ ಕಾಣುವ ಹುಡುಗಿಯರ
ಬೆಡಗಿನ ಸೊಗಸುಗಾರಿಕೆಯಿಲ್ಲ
(ಸತ್ಯಾನಂದ ಪಾತ್ರೋಟ : ಕರಿನೆಲದ ಕಲೆಗಳು)

ಎಂದು ತಳಮಳಗೊಳ್ಳುವ ಸತ್ಯಾನಂದ ಪಾತ್ರೋಟ ಬಂಡಾಯದ ಎರಡನೇ ಘಟ್ಟದಲ್ಲಿ ಬೆಳೆದ ಪ್ರಮುಖ ಕವಿ. ಇವರ 'ಜಾಜಿಮಲ್ಲಿಗೆ' ಗಮನ ಸೆಳೆಯುತ್ತದೆ.

ನನಗೆ ಗೊತ್ತು ಗೌತಮನ ಸರ್ಪ ಮತ್ತೆ
ಹೆಡೆಯೆತ್ತಲಾರದು,
ನನ್ನೊಳಗೆ ಏನನ್ನೂ ಬಿತ್ತಲಾರದು
ರಾಮ ಸ್ಪರ್ಶಕ್ಕೆ ಶಿಲೆ ಸ್ಫೋಟವಾಗಿದೆ ಅಷ್ಟೆ ಹೆಣ್ಣಾಗಲಿಲ್ಲ
(ಸುಕನ್ಯಾ ಮಾರುತಿ : ಅಹಲ್ಯೆ)

ಎನ್ನುವ ಸುಕನ್ಯಾ ಮಾರುತಿಯವರ ಅಹಲ್ಯೆ ಕವನದಲ್ಲಿ ಪುರಾಣ-ವಾಸ್ತವಗಳ ಮುಖಾಮುಖಿಯನ್ನು ಕಂಡರೆ, ಶಶಿಕಲಾ ವೀರಯ್ಯಸ್ವಾಮಿಯವರು ಈ ದೇಶದ ನಿಷ್ಠುರ ಕ್ರೌರ್ಯಗಳನ್ನು ದಾಖಲಿಸುತ್ತಾರೆ.

ದಾಹಕ್ಕೆ ಸೆಣಸಿದ ಮನುಷ್ಯರ
ರಕ್ತದಲ್ಲಿ ಪದ್ಯದ ಪಕಳೆಗಳು ತೊಯ್ದುತೊಪ್ಪೆಯಾದವು
ಅದಕ್ಕೇ ಈ ಹಾಡುಗಳಿಂದ ಈಗ ಏನೇನೂ
ಆಗುವುದಿಲ್ಲವಾದ್ದರಿಂದ ನಾನು ಖಾಲಿಯಾಗುತ್ತಿದ್ದೇನೆ
(ಶಶಿಕಲಾ ವಸ್ತ್ರದ : ೧೯೮೨ ರ ಕವಿತೆಗಳು)

ಎಂದು ನಿರ್ಲಿಪ್ತಭಾವವನ್ನೂ ವ್ಯಕ್ತಪಡಿಸುತ್ತಾರೆ. "ಮುಳ್ಳು ನೆಟ್ಟಿದ್ದರೆ ನೋವಾಗಬಹುದಿತ್ತು, ಹೂವು ನೆಟ್ಟಿವೆ ನನಗೆ" ಎಂದು ಧ್ವನಿಪೂರ್ಣವಾಗಿ ನೋವಿನ ಪರಿಗಳನ್ನು ಬಿಚ್ಚಿಟ್ಟಿರುವ ಮಾಲತಿ ಪಟ್ಟಣಶೆಟ್ಟಿಯವರಂತಹ ಅನೇಕ ಕವಯತ್ರಿಯರ-ಕವಿಗಳ ಕಾವ್ಯದ ಆನ್ವಯಿಕ ವಿಮರ್ಶೆ ನಡೆಯಬೇಕಾಗಿದೆ.

ಬಂಡಾಯದ ಹಾಡುಗಳಲ್ಲಿರುವ ಲಯಗಾರಿಕೆಯ ಜಾಣ್ಮೆಯನ್ನು, ಧ್ವನಿಪೂರ್ಣ ಅರ್ಥವನ್ನು ಗುರುತಿಸುವುದರ ಸಲುವಾಗಿ ಈ ಕೆಳಗಿನ ಹಾಡಿನ ಸಾಲುಗಳನ್ನು ಗಮನಿಸಬಹುದಾಗಿದೆ :

ನನ್ನ ಸೀರೆಯ ಸೆರಗ ಮರೆಮಾಡಿಕೊಂಡಿರುವ
ಜೋಪಡಿಯ ಲೋಕವನು ತೋರಲೇನು
ಹೊಟ್ಟೆಯೊಳಗಿನ ಬೆಂಕಿಯುಂಡೆಯೆಲ್ಲವನೆತ್ತಿ
ಮೆರೆವ ಜನಗಳ ಮೇಲೆ ಚೆಲ್ಲಲೇನು
(ಸಿದ್ಧಲಿಂಗಯ್ಯ : ಕಪ್ಪುಕಾಡಿನ ಹಾಡು)

ಶ್ರಾವಣದ ತುಂತುರಿಗೆ ಚಿಗಿಯಲೊಲ್ಲದ ನೆಲದಿ
ಗುಂಗಾಡಿ ಹುಳುತವರು ಬಿರುಕಾದರೋ
ಬಯಲ ಹ್ಯಾದಿಯ ತುಂಬ ಮರಳು ಬೆಟ್ಟಗಳಾಗಿ
ಲಕ್ಷ ರೆಕ್ಕೆಯ ಬಿಚ್ಚಿ ಮುಗಿಲಾದರೋ

(ಕುಂ. ವೀರಭದ್ರಪ್ಪ : ೧೯೮೭ ರ ಕವಿತೆ, ಅಕಾಡೆಮಿ)

ಮಾಮರದ ಎಳೆಕಳಲು ಹೊಡೆಮುರಿದ ಕ್ಯಾದಿಗೆಯ
ಹುಡಿಹಾರಿ ಹೋದಾವೊ ಮಳೆರಾಯ ॥
ಎಳೆ ಎಸಳು ದಾಸಾಳ ಕಂದ ಕರುಗಳ ಕಣ್ಣ
ಚಂದಾಳವು ಮುಚ್ಯಾವೊ ಮಳೆರಾಯ ॥
ಬಣ್ಣsದ ಗರಿಗಳು ಬೈತಲೆಯ ಕೆರಕೊಂಡು
ಹದ್ದುಗಳ ಕರೆದಾವೊ ಮಳೆರಾಯ ॥
ನಾಡೀನ ಉಡಿಯೊಳಗ ಕಿಚ್ಚೀನ ಹೊಂಡವು
ಕಮಲವು ಕುದ್ದಾವೊ ಮಳೆರಾಯ

(ಶಂಕರ ಕಟಗಿ : ಮುಸ್ಸಂಜೆ ನೆರಳಲ್ಲಿ)

ನನ್ನ ಈ ನಾಡಿನಲ್ಲಿ
ಭವ್ಯನಾಮ ಬೀಡಿನಲ್ಲಿ
ಬೇಗೆಯೇ ಬೆಟ್ಟವಾಗಿ
ಉತ್ತರಕ್ಕೆ ಕಾವಲು
ಬೆವರೆಲ್ಲ ನದಿಗಳಾಗಿ
ಮೂರು ದಿಕ್ಕು ಕಡಲು

(ಬರಗೂರು : ನೆತ್ತರಲ್ಲಿ ನೆಂದ ಹೂವು)

ನೆಲವನ್ನು ನೋಡಿ ಮುಗಿಲೋಡಿ ಬಂದು ಮುತ್ತಿಟ್ಟು ಹೋಗಲಿಲ್ಲ
ಮನಸಿನ ಖುಷಿಯು ಕನಸಲ್ಲಿ ಬೆಳೆದು ಕಡೆತನಕ ಉಳಿಯಲಿಲ್ಲ ॥
ಹೂಮುಡಿದು ನಿಂತ ಮರವೆಲ್ಲs ಒಣಗಿ ಬೆಳದಿಂಗಳೆಲ್ಲs ಬಿಸಿಲು
ಹಸಿರುಟ್ಟ ನೆಲವು ಬಿರಿದಂತೆ ಕೆಳಗೆ ಮೇಲೆಲ್ಲs ಹರಿದ ಮುಗಿಲು ॥

(ಬಸವರಾಜ ಸಬರದ : ಅಂತರಂಗದ ಹಾಡು)

ಇಂತಹ ಅನೇಕ ಹಾಡುಗಳನ್ನು ಬಂಡಾಯ ಕವಿಗಳು ರಚಿಸಿದ್ದಾರೆ. ಈ ಹಾಡುಗಳು ಜಾನಪದ, ನವೋದಯುಗಳಿಂದ ಭಿನ್ನವಾಗಿ ಒಂದು ಹೊಸ ರೂಪವಾಗಿ ನಿಲ್ಲುವುದನ್ನು ಓದುಗರು ಗಮನಿಸಬಹುದಾಗಿದೆ.

ಬಂಡಾಯ ಕವಿ ತನ್ನ ಕಾವ್ಯಕ್ಕೆ ಆಯ್ದುಕೊಂಡ ವಸ್ತು, ವೈವಿಧ್ಯಮಯವಾಗಿದೆ. ಆತ ಪುರಾಣ-ಚರಿತ್ರೆಯನ್ನೇ ಕುರಿತು ಬರೆದರೂ ಅದನ್ನು ಸಮಕಾಲೀನ ನೆಲೆಯಲ್ಲಿಯೇ

ನೋಡುತ್ತಾನೆ. ಪ್ರಕೃತಿ – ಹೂವಿನ ಸೌಂದರ್ಯವನ್ನು ಕುರಿತು ಬರೆಯುತ್ತಲೇ, ಹೂಗಿಡಗಳನ್ನು ಬೆಳೆಸಿದ ಹೂಮಾಲಿಯ ವ್ಯಥೆಯ ಕಥೆಯನ್ನೂ ಚಿತ್ರಿಸುತ್ತಾನೆ. ವರ್ಗೀಕೃತ ಸಮಾಜವ್ಯವಸ್ಥೆಯಲ್ಲಿ ಬದುಕುತ್ತಲೇ ಕೆಳವರ್ಗದ ಜನತೆಯ ನೋವು ಯಾತನೆಗಳನ್ನು ಕಂಡು ಸಿಟ್ಟಿಗೇಳುತ್ತಾನೆ. ಜಾತಿವ್ಯವಸ್ಥೆಯಲ್ಲಿದ್ದುಕೊಂಡೇ ಅದನ್ನು ಮೀರಲು ಪ್ರಯತ್ನಿಸುತ್ತಾನೆ. ಬುದ್ಧ-ಬಸವ-ಅಂಬೇಡಕರ್ ಅವರನ್ನು ಕುರಿತು ಧ್ಯಾನಿಸುವಂತೆ ಮಂಡೆಲಾ, ಮೊಲಾಯಿಸ್‌ರನ್ನು ಕುರಿತೂ ಕವಿತೆ ಬರೆಯುತ್ತಾನೆ.

ನಿಸರ್ಗದ ಭಾಗಗಳಾದ ನದಿ, ಹೊಳೆ, ಹಳ್ಳ, ಸೂರ್ಯ, ಗದ್ದೆ, ನವಿಲು, ನಕ್ಷತ್ರ ಹೀಗೆ ವಿವಿಧ ವಿಷಯಗಳ ಬಗೆಗೆ ಕಾವ್ಯ ಕಟ್ಟಿದರೂ ಆ ಕಟ್ಟುವ ಕ್ರಿಯೆಯಲ್ಲಿ ವೈಭವೀಕರಣವನ್ನು ಮೀರಿದ ವಾಸ್ತವ ಪ್ರಜ್ಞೆ ಕಾಡುತ್ತಿರುತ್ತದೆ. ಸೂರ್ಯನನ್ನು ಕುರಿತೇ ಒಂದು ಕವನ ಸಂಕಲನ ತರುವಷ್ಟು ಬಂಡಾಯ ಕವಿತೆಗಳಿವೆ. ಅಸ್ಪೃಶ್ಯರು, ಗಿರಿಜನರು, ಕೊರವರು, ಹೆಳವರು, ಸನಾದಿಗಳು, ಬುರ್ಖಾಗಳು, ಬೆಸ್ತರು ಹೀಗೆ ಬುಡಕಟ್ಟು ಬದುಕಿನ ಅನೇಕ ಅನುಭವಗಳು ಬಂಡಾಯ ಕವಿತೆಗಳಲ್ಲಿ ವ್ಯಕ್ತವಾಗಿವೆ. ವಿವಿಧ ಊರು – ವ್ಯಕ್ತಿಗಳನ್ನು ಕುರಿತು ಕವಿತೆಗಳಿರುವಂತೆ, ವಿವಿಧ ಜೀವನ ವಿಧಾನವನ್ನು ಹೇಳುವ ಕವಿತೆಗಳೂ ಇವೆ. ಆಳುವ ವರ್ಗದ ದೌರ್ಜನ್ಯಗಳು, ಬಡವರ ಯಾತನೆಗಳು, ಸ್ತ್ರೀಯರ ಶೋಷಣೆಗಳು ಹೆಚ್ಚು ಕವಿತೆಗಳಿಗೆ ವಸ್ತುಗಳಾಗಿವೆ.

ಇಂತಹ ವೈವಿಧ್ಯಮಯವಾದ ಕಾವ್ಯಪರಂಪರೆಯನ್ನು ಕುರಿತು ಬರಗೂರು ರಾಮಚಂದ್ರಪ್ಪ ಹೀಗೆ ಹೇಳುತ್ತಾರೆ. "ಹಾಗೆ ನೋಡಿದರೆ ಬಂಡಾಯ ಕಾವ್ಯದ ಸವಾಲಿರುವುದು ವೈರುಧ್ಯಗಳನ್ನು ಒಗ್ಗಿಸಿಕೊಳ್ಳುವ ಅಭಿವ್ಯಕ್ತಿ ವಿಧಾನದಲ್ಲಿ. ಈ ಅವಭಿವ್ಯಕ್ತಿ ವಿಧಾನ ವ್ಯಷ್ಟಿ-ಸಮಷ್ಟಿಗಳ ಅಂತರ್ಗತ ಆಶಯಗಳನ್ನು ಒಂದಾಗಿಸುವ ಸೃಜನಶೀಲ ಸಂಕಟದಲ್ಲಿ ಸೃಷ್ಟಿಯಾಗುತ್ತದೆ. ಬಂಡಾಯಕಾವ್ಯ ಕೇವಲ ಮೆರವಣಿಗೆಯ ಮಾತಲ್ಲ; ಅಬ್ಬರದ ಮೆರವಣಿಗೆಯ ಮಧ್ಯೆ ಮಿಡಿಯುವ ಮನಸ್ಸಿನ ಮಾತು. ಬಂಡಾಯವೆಂದರೆ ಕೇವಲ ಸಿಟ್ಟಿನ ಸ್ಫೋಟವಲ್ಲ; ಸಂಕಟ-ಸಿಟ್ಟುಗಳೊಂದಾಗಿ ಸ್ಫೋಟಗೊಳ್ಳುವ ಮಾನವೀಯ ಮಿಡಿತ. ಬಂಡಾಯ ಕಾವ್ಯವೆಂದರೆ ಸಮಾಜ ಬದಲಾವಣೆಗಾಗಿ ಕರೆಕೊಡುವ ಬರಡು ಭಾಷಣವಲ್ಲ; ಬದಲಾವಣೆಯ ಪ್ರಕ್ರಿಯೆಯನ್ನು ಹಿನ್ನೋಟ-ಮುನ್ನೋಟಗಳುಳ್ಳ ಒಳನೋಟದ ಉರಿಯಲ್ಲಿ ಬೇಯಿಸುತ್ತ ಬಹಿರಂಗಗೊಳ್ಳುವ ಭಾಷೆ" (ಬಂಡಾಯ ಕಾವ್ಯ ೧೯೯೦, ಪುಟ xiii) ಬರಗೂರು ಅವರು ಹೇಳುವಂತೆ ಬಂಡಾಯ ಕಾವ್ಯದಲ್ಲಿ ಒಳನೋಟಗಳಿವೆಯೆ? ಸಪ್ಪಳಕ್ಕೆ ಬದಲಾಗಿ ಸೂಕ್ಷ್ಮತೆ ಕಾಣಿಸುತ್ತದೆಯೆ? ಬಂಡಾಯದವರು ಆತ್ಮಾವಲೋಕನ ಮಾಡಿಕೊಳ್ಳಬೇಕಾಗಿದೆ.

## ಸಣ್ಣ ಕತೆಗಳು :

ಬಂಡಾಯ ಚಳುವಳಿಯ ಸಂದರ್ಭದಲ್ಲಿ ಅನೇಕ ಸಣ್ಣಕತೆಗಳು ಪ್ರಕಟವಾಗಿವೆ. ಅವುಗಳಲ್ಲಿ ಹೆಚ್ಚಿನ ಕತೆಗಳ ಆಶಯ ಜನಪರವೇ ಆಗಿದೆ. ನವೋದಯ ಸಂದರ್ಭದಲ್ಲಿ

ಯದ ಕತೆಗಳಲ್ಲಿ ದೇಶಪ್ರೇಮ, ಆದರ್ಶ ಪ್ರಧಾನವಾಗಿದ್ದರೆ, ನವ್ಯ ಸಂದರ್ಭದ ಕತೆಗಳಲ್ಲಿ ಆತ್ಮಶೋಧ, ಬದುಕಿನ ಹುಡುಕಾಟಗಳು ಮುಖ್ಯವಾಗಿವೆ. ಬಂಡಾಯ ಸಂದರ್ಭದ ಕತೆಗಳಲ್ಲಿ ಸಾಮಾಜಿಕ ಕಾಳಜಿ ಹಾಗೂ ಸಮಾನತೆಯ ಆಶಯ ಎದ್ದು ಕಾಣುತ್ತವೆ.

ಸಮಾಜದ ವಿವಿಧ ಸ್ತರಗಳಿಂದ ಬಂದ ಇಲ್ಲಿಯ ಲೇಖಕರ ಒಟ್ಟು ಆಶಯವೇ ಜನಪರವಾಗಿದೆ. ನೋವು, ನಿರಾಶೆ, ಶೋಷಣೆಯಂತಹ ವಸ್ತುವೇ ಇಲ್ಲಿ ಪ್ರಧಾನ ಸ್ಥಾನ ಪಡೆದಿದೆ. ಶತಮಾನಗಳ ಶೋಷಣೆಯನ್ನು, ಅಸಮಾನತೆಯನ್ನು ಕಂಡ ಇಲ್ಲಿಯ ಲೇಖಕನ ಮನಸ್ಸು ಹತಾಶಗೊಳ್ಳದೆ, ಹೋರಾಟದ ಹೊಸ ಆಶಯಗಳನ್ನು ಹೊಂದಿರುವುದು ಬಂಡಾಯ ಕತೆಗಳ ಪ್ರಮುಖ ಸಾಧನೆಯಾಗಿದೆ. ತಂತ್ರ ಶಿಲ್ಪಗಳಿಗಾಗಿಯೇ ಕತೆ ಹೆಣೆಯುವ ಕೆಲವು ನವ್ಯ ಲೇಖಕರಂತೆ ಇವರು ಆಗದೆ, ತಾವು ಬೆಳೆದು ಬಂದ ಸಂಸ್ಕೃತಿಯ ಹಿನ್ನೆಲೆಯಲ್ಲಿ ತಮ್ಮ ಪ್ರಾಮಾಣಿಕ ಅನುಭವದ ಮೂಲಕ ಸರಳವಾಗಿ, ನೇರವಾಗಿ ಕತೆ ಹೇಳಿದ್ದಾರೆ. ಬದುಕಿನ ಅನೇಕ ದುರಂತ ಘಟನೆಗಳನ್ನು ಸಾಹಿತ್ಯದಂತಹ ಮಾಧ್ಯಮದ ಮೂಲಕ ಪರಿಣಾಮಕಾರಿಯಾಗಿ ಚಿತ್ರಿಸಿದ್ದಾರೆ.

ದೇವನೂರು ಮಹಾದೇವ, ಬರಗೂರು ರಾಮಚಂದ್ರಪ್ಪ, ಕುಂ. ವೀರಭದ್ರಪ್ಪ, ಬೆಸಗರಹಳ್ಳಿ ರಾಮಣ್ಣ, ಕಾಳೇಗೌಡ ನಾಗವಾರ, ಚೆನ್ನಣ್ಣ ವಾಲೀಕಾರ, ಬೋಳವಾರು ಮಹಮ್ಮದ ಕುಂಞ, ಫಕೀರ್ ಮಹಮ್ಮದ ಕಟ್ಪಾಡಿ, ಸಾರಾ ಅಬೂಬಕರ್, ಬಾನು ಮುಸ್ತಾಕ್, ಬಿ. ಟಿ. ಲಲಿತಾ ನಾಯಕ್, ಜಾಣಗೆರೆ ವೆಂಕಟರಾಮಯ್ಯ, ರಾಜಶೇಖರ ನೀರಮಾನ್ವಿ, ಅಬ್ದುಲ್ ರಶೀದ್, ಕೇಶವ ಮಳಗಿ, ಕರೀಗೌಡ ಬೀಚನಹಳ್ಳಿ, ಕಾ. ತ. ಚಿಕ್ಕಣ್ಣ, ಆರ್. ಜಿ. ಹಳ್ಳಿ ನಾಗರಾಜ, ಗಿರಿಜಮ್ಮ, ಗೀತಾ ನಾಗಭೂಷಣ ಈ ಮೊದಲಾದ ಬಂಡಾಯ ಲೇಖಕರ ಕತೆಗಳಲ್ಲಿ ಜನಪರ ನಿಲುವುಗಳೇ ಪ್ರಧಾನವಾಗಿವೆ. ಲಂಕೇಶ್, ಯಶವಂತ ಚಿತ್ತಾಲ, ತೇಜಸ್ವಿ, ಶಾಂತರಸ, ತಿರುಮಲೇಶ್, ವೈದೇಹಿ ಈ ಮೊದಲಾದ ಲೇಖಕರ ಕತೆಗಳಲ್ಲಿಯೂ ಜನಪರ ಆಶಯಗಳು ಅರ್ಥಪೂರ್ಣವಾಗಿ ಮೂಡಿ ಬಂದಿವೆ.

ಒಂದು ಸಮಸ್ಯೆಯನ್ನು ನೋಡುವ ದೃಷ್ಟಿಕೋನ ನವೋದಯ-ನವ್ಯದವರಿಂದ, ಬಂಡಾಯದವರ ವರೆಗೆ ಹೇಗೆ ಭಿನ್ನವಾಗಿದೆಯೆಂಬುದನ್ನು ಕೆಲವು ಸಣ್ಣ ಕತೆಗಳನ್ನು ಉದಾಹರಿಸುವುದರ - ಮೂಲಕ ತಿಳಿದುಕೊಳ್ಳಬಹುದು. ಮಾಸ್ತಿಯವರ 'ಕಾಮನ ಹಬ್ಬದ ಕತೆ', ಆನಂದರ 'ನಾ ಕೊಂದ ಹುಡುಗಿ', ಅನಂತಮೂರ್ತಿಯವರ 'ಘಟಶ್ರಾದ್ಧ', ಶಾಂತರಸರ 'ಮಲ್ಕಮ್ಮ', ಚೆನ್ನಣ್ಣ ವಾಲೀಕಾರರ 'ಮಗು ಮತ್ತು ಪ್ರಿಯಕರನ ಮಧ್ಯದಲ್ಲಿ' —ಈ ಐದೂ ಕತೆಗಳಲ್ಲಿ ಸ್ವಲ್ಪ ಹೆಚ್ಚು ಕಡಿಮೆ ಒಂದೇ ಸಮಸ್ಯೆಯಡಗಿದೆ. ಮಾಸ್ತಿಯವರ 'ಸಾವಿತ್ರಮ್ಮ', ಆನಂದರ 'ದೇವರಿಗೆ ಬಿಟ್ಟಹುಡುಗಿ', ಅನಂತಮೂರ್ತಿಯವರ 'ಯಮುನಕ್ಕ' ಶಾಂತರಸರ 'ಮಲ್ಕಮ್ಮ', ವಾಲೀಕಾರರ

'ತಾಯಮ್ಮ' –ಈ ಐದೂ ಪಾತ್ರಗಳ ನೋವು, ಯಾತನೆ, ನಿರಾಶೆ ಒಂದೇ ಯಾದರೂ ಅವುಗಳನ್ನು ನೋಡುವ ದೃಷ್ಟಿಕೋನದಲ್ಲಿ ಬಹಳ ವ್ಯತ್ಯಾಸವಿದೆ. ಈ ಐದೂ ಕತೆಗಳು ಬೇರೆ ಬೇರೆ ಸಂದರ್ಭದ ಬೇರೆ ಬೇರೆ ಕಾಲಘಟ್ಟದ ಸೃಷ್ಟಿಗಳಾಗಿವೆ.

ಮಾಸ್ತಿಯವರಿಗೆ ಸಾವಿತ್ರಮ್ಮನ ಬಗೆಗೆ, ಆನಂದರಿಗೆ ದೇವರಿಗೆ ಬಿಟ್ಟ ಹುಡುಗಿಯ ಬಗೆಗೆ ಅಗಾಧವಾದ ಅನುಕಂಪವಿದೆ. ಆ ಪಾತ್ರಗಳು ಮೂಕವಾಗಿ ಅನುಭವಿಸುವ ಯಾತನೆಯ ಕಡೆಗೆ ಇಲ್ಲಿ ಲೇಖಕರ ಲಕ್ಷ್ಯವಿಲ್ಲ. ಈ ಯಮಯಾತನೆಗೆ ಕಾರಣವಾದವರ ಮೇಲೆ ಕೋಪವೂ ಇಲ್ಲ. ಅನಂತಮೂರ್ತಿಯವರ ಘಟಶ್ರಾದ್ಧದ ಯಮುನಕ್ಕ ಬಾಲವಿಧವೆಯಾಗಿ ಅನುಭವಿಸುವ ಯಾತನೆಯನ್ನು ಲೇಖಕರು ಪರಿಣಾಮಕಾರಿಯಾಗಿ ಚಿತ್ರಿಸಿದ್ದರೂ ಈ ಯಾತನೆಗೆ ಕಾರಣವಾದ ಸಮಾಜ ವ್ಯವಸ್ಥೆಯ ಬಗೆಗೆ ಅವರ ಪ್ರತಿಭಟನೆ ಇಲ್ಲ. ಆದರೆ ಬಂಡಾಯದ ಸಂದರ್ಭದಲ್ಲಿ ಬರೆಯುತ್ತಿರುವ ಶಾಂತರಸ ಹಾಗೂ ವಾಲೀಕಾರ ತೀವ್ರವಾದ ಸಾಮಾಜಿಕ ಕಾಳಜಿಗಳನ್ನು ಪ್ರಕಟಿಸುತ್ತಾರೆ. ಶಾಂತರಸರ 'ಮಲ್ಕಮ್ಮ' ಹಾಗೂ ವಾಲೀಕಾರರ 'ತಾಯವ್ವ' ಶತಮಾನಗಳ ಮೌನವೊಡೆದು ಮಾತನಾಡುತ್ತಾರೆ. ಸಂಪ್ರದಾಯವನ್ನು ಕಿತ್ತೊಗೆದು ಜಿಡ್ಡುಗಟ್ಟಿದ ಕೊಳಕು ವ್ಯವಸ್ಥೆಯಿಂದ ಹೊರಬರುತ್ತಾರೆ. ತಮ್ಮ ಯಾತನೆಗೆ ಕಾರಣವನ್ನು ತಿಳಿದುಕೊಂಡು ಹೊಸದಾರಿಯಲ್ಲಿ ಮುನ್ನಡೆಯುತ್ತಾರೆ. ಯಜಮಾನ ಸಂಸ್ಕೃತಿ ನಿರ್ಮಿಸಿದ ಸಾಮಾಜಿಕ ನೀತಿಯ ವಿರುದ್ಧ ಬಂಡೆದ್ದು ಹೊಸ ನೀತಿಯೊಂದನ್ನೇ ಸೃಷ್ಟಿಸುತ್ತಾರೆ. ಆದ್ದರಿಂದ ನವೋದಯ, ಪ್ರಗತಿಶೀಲ, ನವ್ಯ ಲೇಖಕರಿಗಿಂತ ಬಂಡಾಯದ ಲೇಖಕರು ಹೆಚ್ಚು ಗಾಢವಾದ ಜನಪರ ಕಾಳಜಿಗಳನ್ನು ಪ್ರಕಟಿಸಿದ್ದಾರೆ.

ಮಾಸ್ತಿಯವರ ಪ್ರಭಾವ ಆ ಸಂದರ್ಭದ ಅನೇಕ ಕಥೆಗಾರರ ಮೇಲಾಗಿದೆ. ಅದೇ ರೀತಿ ಅನಂತಮೂರ್ತಿಯವರನ್ನು ನವ್ಯ ಲೇಖಕರನೇಕರು ಅನುಕರಿಸಿದ್ದಾರೆ. ಈ ರೀತಿಯ ಅನುಕರಣೆ, ಏಕತಾನತೆ, ಹೀರೊವರ್ಶಿಪ್ ಬಂಡಾಯದ ಕತೆಗಳಲ್ಲಿ ಕಾಣುವುದಿಲ್ಲ. ಬಂಡಾಯದ ಲೇಖಕರು ದುಡಿವ ವರ್ಗದ ವಿವಿಧ ಕ್ಷೇತ್ರಗಳಿಂದ ಬಂದಿರುವುದರಿಂದ, ನೋವಿನನುಭವದ ಹಿನ್ನೆಲೆಯಲ್ಲಿ ಬರೆಯುವುದರಿಂದ ಅವರಲ್ಲಿ ಸಹಜವಾಗಿಯೇ ಜನಪರ ನಿಲುವುಗಳು ಮಹತ್ವ ಪಡೆಯುತ್ತವೆ.

ಮಹಾದೇವ ಅವರ 'ದ್ಯಾವನೂರು' ಕಥಾಸಂಕಲನದ ಎಲ್ಲ ಕತೆಗಳಲ್ಲಿಯೂ ಜನಪರ ನಿಲುವುಗಳೇ ಪ್ರಮುಖವಾಗಿವೆ. ದಲಿತರ, ನೊಂದವರ ಶತಮಾನದ ನೋವು, ನಿರಾಶೆ, ಹತಾಶೆಗಳನ್ನು ಅತ್ಯಂತ ಪರಿಣಾಮಕಾರಿಯಾಗಿ ಲೇಖಕರು ಇಲ್ಲಿ ಅಭಿವ್ಯಕ್ತಿಸಿದ್ದಾರೆ. 'ಮೂಡಲ ಸೀಮೇಲಿ ಕೊಲೆಗಿಲೆ' ಮುಂತಾಗಿ, 'ಅಮಾಸ'ದಂತಹ ಕತೆಗಳು ಈ ನಿಟ್ಟಿನಲ್ಲಿ ಗಮನ ಸೆಳೆಯುತ್ತವೆ.

ಬರಗೂರು ರಾಮಚಂದ್ರಪ್ಪನವರ ಕತೆಗಳು ಗ್ರಾಮೀಣ ಬದುಕಿನ ವಸ್ತುಸ್ಥಿತಿಯನ್ನು ಕಟ್ಟಿಕೊಡುವುದರ ಜತೆಗೆ, ಎಲ್ಲ ಬಡವರ ಪರವಾದ ಆಶಯಗಳನ್ನು

ಪ್ರಕಟಿಸುತ್ತ ವಸ್ತುವಿನ ಹರವನ್ನು ಹೆಚ್ಚಿಸಿಕೊಳ್ಳುತ್ತವೆ. 'ಕ್ಷಾಮ' ಅವರ ಜನಪ್ರಿಯ ಕತೆ. ಹಳ್ಳಿಗಾಡಿನ ಜಾತಿ ರಾಜಕೀಯಕ್ಕೆ ಬಲಿಯಾಗಿ ತತ್ತರಿಸುವ ಬಡವರಲ್ಲಿ ನಡೆವ ಸಂಘರ್ಷ ಇಲ್ಲಿ ಹೊಸತನ ಪಡೆದುಕೊಂಡಿದೆ. 'ಸಾವಕಾರ್' ಕತೆಯಲ್ಲಿ ಶೋಷಣೆ ಅನ್ಯಾಯಗಳ ವಿರುದ್ಧ ರೊಚ್ಚಿದೆ. 'ಕಪ್ಪು ನೆಲದ ಕೆಂಪು ಕಾಲು' ಕಥಾಸಂಕಲನದ ಅನೇಕ ಕತೆಗಳು ಜನಪರ ಆಶಯಗಳನ್ನು ಹೊತ್ತುಕೊಂಡು ತೀವ್ರವಾದ ಪರಿಣಾಮವನ್ನುಂಟು ಮಾಡುತ್ತವೆ.

ಒಬ್ಬ ವೈದ್ಯರಾಗಿ ಸಣ್ಣಕತೆಗಳ ಮೂಲಕ ಜೀವತುಂಬಿದ ಬೆಸಗರಹಳ್ಳಿ ರಾಮಣ್ಣ, ಗ್ರಾಮೀಣ ಜಮೀನ್ದಾರಿ ಶಕ್ತಿಗಳ ವಿರುದ್ಧ, ಅಧಿಕಾರಶಾಹಿ ಸಂಸ್ಕೃತಿಯ ವಿರುದ್ಧ ತೀವ್ರ ಪ್ರತಿಭಟನೆ ವ್ಯಕ್ತಪಡಿಸಿದ್ದಾರೆ. 'ಒಂದು ಹುಡುಗನಿಗೆ ಬಿದ್ದ ಕನಸು', 'ಪ್ರಜಾಪ್ರಭುತ್ವ ಮತ್ತು ಮೂರು ಮಂಗಗಳು ' ಈ ಮುಂತಾದ ಕತೆಗಳು ಪ್ರಾಮಾಣಿಕ ಬರಹಗಳಾಗಿವೆ.

ಬೋಳವಾರು ಮಹಮ್ಮದ್ ಕುಂಞ, ಫಕೀರ್ ಮಹ್ಮದ್ ಕಟ್ಪಾಡಿ, ಅಬ್ದುಲ್ ರಶೀದ್, ಸಾರಾ ಅಬೂಬಕರ್, ಬಾನು ಮುಷ್ತಾಕ್ ಈ ಮೊದಲಾದ ಬಂಡಾಯ ಲೇಖಕರು ಕನ್ನಡ ಕಥಾ ಕ್ಷೇತ್ರಕ್ಕೆ ಹೊಸ ತಿರುವು ತಂದುಕೊಟ್ಟವರು. ಇದುವರೆಗೂ ಕನ್ನಡ ಸಾಹಿತ್ಯಕ್ಕೆ ಅಪರಿಚಿತವಾಗಿದ್ದ ಮುಸ್ಲಿಂ ಬದುಕಿನ ನೋವು-ನಿರಾಶೆಗಳನ್ನು, ಸುಖ-ದುಃಖಗಳನ್ನು ಮೊದಲಬಾರಿಗೆ ತೆರೆದು ತೋರಿಸಿದವರು. ಮುಸ್ಲಿಂ ಜನತೆಗಾಗಿರುವ ನೋವು ಅಪಮಾನ ದುಃಖದ ಜೊತೆಗೆ ಅವರಲ್ಲಿರುವ ಸಣ್ಣತನ ಅಜ್ಞಾನ ಮೂಢನಂಬಿಕೆ ಅಶಿಸ್ತು ಹುಂಬತನ ಹಟಮಾರಿತನದಂತಹ ಅನೇಕ ವಿಷಯಗಳನ್ನು ಈ ಲೇಖಕರು ಅಧಿಕೃತವಾಗಿ ತಮ್ಮ ಕತೆಗಳ ಮೂಲಕ ದಾಖಲುಗೊಳಿಸಿದ್ದಾರೆ. ಬೋಳುವಾರರ 'ಅತ್ತ ಇತ್ತಗಳ ಸುತ್ತಮುತ್ತ', 'ದೇವರುಗಳ ರಾಜ್ಯದಲ್ಲಿ', 'ಅಂಕ' ಕಥಾಸಂಕಲನಗಳು, ಫಕೀರ ಮಹ್ಮದ ಕಟ್ಪಾಡಿಯವರ 'ಹತ್ಯೆ', ಸಾರಾ ಅಬೂಬಕರ್ ಅವರ 'ಚಪ್ಪಲಿಗಳು', ಬಾನು ಮುಷ್ತಾಕ್‌ರ 'ರಾಹಿಲ ಎಂಬ ಕನ್ಯೆಯ ಕತೆ', ಅಬ್ದುಲ್ ರಶೀದ್ ಅವರ 'ಕಪ್ಪು ಹುಡುಗನ ಹಾಡು' ಈ ಮೊದಲಾದ ಕತೆಗಳು ಗಮನಾರ್ಹವಾಗಿವೆ.

ಊಳಿಗಮಾನ್ಯ ಪದ್ಧತಿಯ ವಿರುದ್ಧ ಪುಟಿದೇಳುವ ತುಂಬಾ ಸಶಕ್ತ ಬರಹಗಾರರಾದ ಕುಂ. ವೀರಭದ್ರಪ್ಪ, ಶಾಂತರಸ, ರಾಜಶೇಖರ ನೀರಮಾನ್ವಿ, ಚೆನ್ನಣ್ಣ ವಾಲೀಕಾರರ ಕತೆಗಳು ಹೆಚ್ಚುಗಮನ ಸೆಳೆಯುತ್ತವೆ. ಕುಂ. ವೀ. ಅವರ 'ಡೋಮ ಮತ್ತು ಇತರ ಕತೆಗಳು', 'ಕುಂ. ವೀ. ಕತೆಗಳು' ಕಥಾಸಂಕಲನಗಳಲ್ಲಿ ಬರುವ 'ಕಪ್ಪು ನೆಲದಲ್ಲೊಂದು ಕೆಂಪು ಕಥೆ', 'ಕತ್ತಲನು ತ್ರಿಶೂಲ ಹಿಡಿದ ಕಥೆ', 'ಕಿವುಡ ನಾಯಿಯಾದ ಪ್ರಸಂಗ', 'ಎಲುಗನೆಂಬ ಕೊರಚನೂ ಚವುಡನೆಂಬ ಹಂದಿಯೂ' ಈ ಮೊದಲಾದ ಕತೆಗಳು ಕನ್ನಡದ ಮಹತ್ವದ ಕತೆಗಳಾಗಿವೆ. ಶಾಂತರಸರ 'ಬಡೆಸಾಬು ಪುರಾಣ', 'ನಾಯಿ ಮತ್ತು ಪಿಂಚಣಿ' ಕಥಾ ಸಂಕಲನಗಳು, ನೀರಮಾನ್ವಿಯವರ

'ಹಂಗಿನರಮನೆಯ ಹೊರಗೆ', ನೀರಮಾನ್ನಿಕತೆಗಳು', ವಾಲೀಕಾರರ 'ಕಪ್ಪು ಕತೆಗಳು', 'ಕುತ್ತದಲ್ಲಿ ಕುದ್ದವರ ಕತೆಗಳು' ಈ ಮುಂತಾದ ಕಥಾಸಂಕಲನಗಳಲ್ಲಿ ಬರುವ ಅನೇಕ ಕತೆಗಳು ಗಮನಾರ್ಹವಾಗಿವೆ.

ಗಿರಿಜಮ್ಮನವರ 'ಬೆಟ್ಟ', ಗೀತಾ ನಾಗಭೂಷಣ ಅವರ 'ಹುಲಿಗ್ಯಾ', ಆರ್. ಜಿ. ಹಳ್ಳಿ ನಾಗರಾಜರ 'ಸಿಡಿದವರು', ಕಾಳೇಗೌಡ ನಾಗವಾರರ 'ಪರಸ್ಪರ' ಮತ್ತು 'ಮಾಯೆ', 'ಮೀನುಗಳು' ಈ ಮುಂತಾದ ಕತೆಗಳು; ಲಲಿತಾನಾಯಕರ 'ಹಬ್ಬ ಮತ್ತು ಬಲಿ' ಸಂಕಲನದ ಕತೆಗಳು, ಆರ್. ಪೂರ್ಣಿಮಾ ಅವರ 'ಕೀಲುಗೊಂಬೆ', ವೈದೇಹಿಯವರ 'ಪುಟ್ಟಮ್ಮತ್ತೆ' ಮತ್ತು 'ಮೊಮ್ಮಗಳು', ಜಾಣಗೆರೆಯವರ 'ತುತ್ತು', ಚಿಕ್ಕಣ್ಣ ಅವರು 'ಒಡಲುರಿ', ಕೇಶವ ಮಳಗಿಯವರ 'ಪತ್ರೊಳಿ', 'ಕೇಶವ ರೆಡ್ಡಿ ಹಂದ್ರಾಳರ 'ಪಂಚರಂಗಿ', ಕರೀಗೌಡ ಬೀಚನಹಳ್ಳಿಯವರ 'ಒಂದು ಅಪೂರ್ವ ಸಂಸಾರ' ಈ ಮುಂತಾದ ಕತೆಗಳಲ್ಲಿ ಜನಸಾಮಾನ್ಯರ ನೋವು ನಿರಾಶೆಯ ಚಿತ್ರದ ಜತೆಗೆ ಶತಮಾನಗಳ ಶೋಷಣೆಯನ್ನು ಪ್ರತಿಭಟಿಸಿ ನಿಲ್ಲುವ ಧ್ವನಿಯಿದೆ. ಹೋರಾಟಕ್ಕಾಗಿ ಹಾತೊರೆಯುವ ಮನಸ್ಸಿದೆ, ಸಮಾನತೆಗಾಗಿ ಹಂಬಲಿಸುವ ಆಶಯವಿದೆ.

ನವ್ಯದ ಸಂದರ್ಭದಲ್ಲಿಯೇ ತೀರ ಭಿನ್ನವಾಗಿ ಬರೆಯತೊಡಗಿದ್ದ ಲಂಕೇಶ್, ಪೂರ್ಣಚಂದ್ರ ತೇಜಸ್ವಿ, ಯಶವಂತ ಚಿತ್ತಾಲ, ವೀಣಾ ಶಾಂತೇಶ್ವರ, ಈ ಮುಂತಾದವರ ಇತ್ತೀಚಿನ ಕತೆಗಳಲ್ಲಿ ಬಂಡಾಯದ ಪ್ರಭಾವದೊಂದಿಗೆ ಜನಪರ ನಿಲುವೇ ಮುಖ್ಯವಾಗಿದೆ.

'ರೊಟ್ಟಿ'ಯಂತಹ ಪರಿಣಾಮಕಾರಿ ಕತೆಯನ್ನು ಕೊಟ್ಟ ಲಂಕೇಶರು ಇತ್ತೀಚೆಗೆ 'ಕಲ್ಲು ಕರಗುವ ಸಮಯ ಮತ್ತು ಇತರ ಕತೆ'ಗಳನ್ನು ಪ್ರಕಟಿಸಿದ್ದಾರೆ. 'ಕತೆಯಾದಳು ಹುಡುಗಿ', 'ಆಬೋಲಿನ' ದಂತಹ ಮಹತ್ವದ ಕತೆಗಳನ್ನು ನೀಡಿದ ಚಿತ್ತಾಲರ 'ಸಿದ್ಧಾರ್ಥ' ಕಥಾ ಸಂಕಲನ ಬಂದಿದೆ. 'ಮುಳ್ಳುಗಳು' ದಂತಹ ಕಥಾಸಂಕಲನ ತಂದ ವೀಣಾ ಶಾಂತೇಶ್ವರರ 'ತಿರುಗಿ ಹೋದವಳು'ದಂತಹ ಕಥೆಗಳು ಮತ್ತೆ ಮತ್ತೆ ಗಮನ ಸೆಳೆಯುತ್ತವೆ. 'ಅಬಚೂರಿನ ಪೋಸ್ಟಾಫೀಸು', 'ಕುಬಿ ಮತ್ತು ಇಯಾಲ' ದಂತಹ ಕತೆಗಳನ್ನು ಬರೆದು ಗಮನಸೆಳೆದ ತೇಜಸ್ವಿಯವರ 'ತಬರನ ಕತೆ' ನಿಜವಾದ ಜನಪರ ಆಶಯದ ಸೃಷ್ಟಿಯಾಗಿದೆ.' ತನ್ನ ಪಿಂಚಣಿ ಹಣಕ್ಕಾಗಿ ಕಾಯುತ್ತಿರುವ ತಬರ ಈ ಭ್ರಷ್ಟ ವ್ಯವಸ್ಥೆಯ ಸುಳಿವಿಗೆ ಸಿಕ್ಕು ತತ್ತರಿಸಿ ಹೋಗುವುದನ್ನು ಲೇಖಕರು ಮನಮಿಡಿಯುವಂತೆ ಚಿತ್ರಿಸಿದ್ದಾರೆ. ಹಲವಾರು ಹೃದಯ ಹಿಂಡುವ ದೃಶ್ಯಗಳು, ತಬರನ ತುಮುಲ, ನೋವನ್ನು ಪರಿಣಾಮಕಾರಿಯಾಗಿ ಪ್ರಕಟಿಸುತ್ತವೆ. ತೇಜಸ್ವಿಯವರ ಎಲ್ಲ ಕತೆಗಳು ಜನಸಾಮಾನ್ಯರ ನೋವು ನಿರಾಶೆಯ ಬದುಕಿಗೆ ಹಿಡಿದ ಕನ್ನಡಿಯಂತಿವೆ. ತೇಜಸ್ವಿ ಗ್ರಾಮೀಣ ಬದುಕನ್ನು ಚಿತ್ರಿಸಿದರೆ, ಚಿತ್ತಾಲರು ನಗರದ ಸಮಸ್ಯೆಗಳನ್ನು ಸೂಕ್ಷ್ಮವಾಗಿ ಹೇಳುತ್ತಾರೆ. 'ಬೇಸ್ತ್ಯಾ' ದಂತಹ ಕತೆ ಚಿತ್ತಾಲರ ಪ್ರಖರ ಜನಪರತೆಗೆ ಸಾಕ್ಷಿಯಾಗಿದೆ.

ಸಣ್ಣಕತೆಯ ಪ್ರಕಾರದಲ್ಲಿ ಬಂಡಾಯ ಚಳುವಳಿಯ ಎರಡನೇ ಘಟ್ಟದಲ್ಲಿ ಪ್ರಕಟವಾದ ಪ್ರತಿಭೆಗಳು ಗಮನಾರ್ಹವಾಗಿವೆ. ಮೊಗಳ್ಳಿ ಗಣೇಶ, ಅಬ್ದುಲ್ ರಶೀದ್, ಜಿ. ಪಿ. ಬಸವರಾಜು, ಕೇಶವರೆಡ್ಡಿ ಹಂದ್ರಾಳ, ನೇಮಿಚಂದ್ರ ಈ ಮೊದಲಾದ ಲೇಖಕರು ಮಹತ್ವದ ಕೃತಿಗಳನ್ನು ನೀಡಿದ್ದಾರೆ. ಹೈದ್ರಾಬಾದ ಕರ್ನಾಟಕ ಪ್ರದೇಶದಲ್ಲಿ ಇತ್ತೀಚಿನ ವರ್ಷಗಳಲ್ಲಿ ಸಣ್ಣಕತೆಗಳ ಸುಗ್ಗಿಯೇ ನಡೆದಿದೆ. ಶಾಂತರಸ, ನೀರಮಾನ್ವಿ, ವಾಲೀಕಾರ, ಕುಂ. ವೀ. ಅವರ ಮಾದರಿಗಳಿಗಿಂತ ಭಿನ್ನವಾಗಿ ಬರೆಯುತ್ತಿರುವ ಅಮರೇಶ ನುಗಡೋಣಿ, ಕಲಿಗಣನಾಥ ಗುಡದೂರ, ರಾಜಶೇಖರ ಹತಗುಂದಿ, ಶಿವಕುಮಾರ ನಾಗವಾರ, ಶ್ರೀಕಾಂತ ಪಾಟೀಲ ಹೆಚ್ಚಿನ ಭರವಸೆಯನ್ನು ಮೂಡಿಸಿದ್ದಾರೆ.

ಸಣ್ಣ ಕಥೆಗಳಿಗೆ ಸಂಬಂಧಿಸಿದಂತೆ ಅನೇಕ ಅಂಥಾಲಜಿಗಳು ಬಂದಿವೆ. ಇವುಗಳಲ್ಲೆಲ್ಲಾ ಕೆಲವು ಬಂಡಾಯ ಲೇಖಕರ ಕತೆಗಳು ಪ್ರಕಟವಾಗಿವೆ. ಬಂಡಾಯ ಕಥೆಗಳ ಅಂಥಾಲಜಿಗಳೂ ಕೆಲವು ಪ್ರಕಟವಾಗಿವೆ. ಅವುಗಳಲ್ಲಿ ಆರ್ಕೆ ಮಣಿಪಾಲ, ಮತ್ತು ಸಿ. ವಿ. ಪಾಟೀಲರು ಕೂಡಿ ಸಂಪಾದಿಸಿರುವ 'ಬಂಡಾಯ ಕತೆಗಳು', ರಂಜಾನ ದರ್ಗಾ, ಚಂದ್ರಶೇಖರ ಆಲೂರ ಜತೆಗೂಡಿ ಸಂಪಾದಿಸಿರುವ, ಕನ್ನಡ ಸಂಸ್ಕೃತಿ ಇಲಾಖೆ ಪ್ರಕಟಿಸಿರುವ 'ಬಂಡಾಯ ಕತೆಗಳು', ಸಾಹಿತ್ಯ ಅಕಾಡೆಮಿಯಿಂದ ಪ್ರಕಟವಾದ ಎಲ್. ಹನುಮಂತಯ್ಯ ಹಾಗೂ ಬಿ. ಚಿನ್ನಸ್ವಾಮಿ ಸಂಪಾದಿಸಿರುವ 'ದಲಿತ ಕಥೆಗಳು' ಪ್ರಮುಖವಾಗಿವೆ. ಹೈದ್ರಾಬಾದ ಕರ್ನಾಟಕ ಪ್ರದೇಶದ ಸಂದರ್ಭದಲ್ಲಿ ಅಮರೇಶ ನುಗಡೋಣಿಯವರ ಸಂಪಾದಕತ್ವದಲ್ಲಿ ರಾಯಚೂರ ಜಿಲ್ಲಾ ಸಾಹಿತ್ಯ ಪರಿಷತ್ತು ಪ್ರಕಟಿಸಿರುವ 'ಬಿಸಿಲ ಹನಿಗಳು' ಕಥಾ ಸಂಕಲನ ಗಮನಾರ್ಹವಾಗಿದೆ.

ಬಂಡಾಯದ ಕತೆಗಳನ್ನು ಗಮನಿಸಿದಾಗ ಲೇಖಕರ ಒಲವು ಸ್ಪಷ್ಟವಾಗಿ ಶೋಷಿತ ವರ್ಗದ ಕಡೆಗಿರುವುದು ಸಹಜವೇ ಆಗಿದೆ. ಶೋಷಿತರ ಹೋರಾಟ, ವರ್ಗ ಮತ್ತು ವರ್ಣ ಸಂಘರ್ಷಗಳ ನೆಲೆಯಲ್ಲಿ ನಡೆಯುತ್ತದೆ. ಬಂಡಾಯದ ಕತೆಗಳಲ್ಲಿ ಶಕ್ತಿ ಸಾಧ್ಯತೆಯಿರುವಂತೆ ಮಿತಿಗಳೂ ಇವೆ. ಶ್ರೀಮಂತ – ಬಡವ, ಮೇಲುಜಾತಿ - ಕೆಳಜಾತಿ ಮುಖಾಮುಖಿಯಾಗುವ ಸಂದರ್ಭದಲ್ಲಿ ಅನೇಕ ಲೇಖಕರು ಕಪ್ಪು ಬಿಳಿಪಿನ ಚಿತ್ರವನ್ನೇ ಮುಂದಿಡುತ್ತಾರೆಯೇ ಹೊರತು ಅನುಭಾವದಾಳಕ್ಕಿಳಿಯುವುದಿಲ್ಲ. ಬದುಕಿನ ಸೂಕ್ಷ್ಮತೆಗಳನ್ನು ಗಮನಿಸುವುದಿಲ್ಲ. ಬಂಡಾಯದ ಕಥೆಗಳ ಮೇಲೆ ನವೋದಯ, ಪ್ರಗತಿಶೀಲ, ನವ್ಯ ಕಥಾ ಪರಂಪರೆಯ ಪ್ರಭಾವವನ್ನೂ ಅಲ್ಲಗಳೆಯುವಂತಿಲ್ಲ.

ಬಂಡಾಯದ ಕತೆಗಳಲ್ಲಿ ಶತಮಾನಗಳ ನೋವು ಮಾತಿನ ಅಭಿವ್ಯಕ್ತಿ ಪಡೆದು ಪಾತ್ರಗಳ ಮೂಲಕ ಕಾಣಿಸಿಕೊಂಡಿದೆ. ಸಾವಿರಾರು ವರ್ಷಗಳಿಂದ ಮೂಲೆಗೆ ತಳ್ಳಲ್ಪಟ್ಟಿದ್ದ ಸಾಮಾನ್ಯ ಮನುಷ್ಯರೇ ಇಲ್ಲಿಯ ಕಥಾನಾಯಕರಾಗಿದ್ದಾರೆ. ಯಜಮಾನ ಸಂಸ್ಕೃತಿಯ ಕಪಿಮುಷ್ಟಿಯಲ್ಲಿ ಕರಗಿಹೋದ ಸ್ತ್ರೀಯರು ಇಲ್ಲಿನ

ಕತೆಗಳಲ್ಲಿ ಎದ್ದು ನಿಂತು ಸ್ಫೋಟಿಸಿದ್ದಾರೆ. ಅನೇಕ ಮಹಿಳಾ ದನಿಗಳು ಮೊದಲಬಾರಿಗೆ ಇಲ್ಲಿ ಕೇಳಿಸಿವೆ. ಸಂಪ್ರದಾಯ, ಮೌಢ್ಯವನ್ನು ತಿರಸ್ಕರಿಸುವ, ಶೋಷಣೆ ಅತ್ಯಾಚಾರಗಳನ್ನು ಪ್ರತಿಭಟಿಸುವ, ಸಮಾನತೆಗಾಗಿ ಹಂಬಲಿಸುವ, ಜೀವನ ಪ್ರೀತಿಗಾಗಿ ತುಡಿಯುವ ಬಂಡಾಯದ ಕತೆಗಳು ನಿಜಕ್ಕೂ ಜನಪರವಾಗಿವೆ. ಅನೇಕ ಕತೆಗಳಲ್ಲಿ ರೊಚ್ಚು ಆವೇಶ ಹಸಿ ಹಸಿಯಾಗಿಯೇ ಪ್ರಕಟವಾಗಿದ್ದರೂ, ಕೆಲವೊಮ್ಮೆ ಸಮಸ್ಯೆಗಳ ಪುನರಾವರ್ತನೆಯೆನಿಸಿದರೂ ಈ ಕತೆಗಳಿಗೆ ಕನ್ನಡದಲ್ಲಿ ಮಹತ್ವದ ಸ್ಥಾನವಿದೆ.

**ಕಾದಂಬರಿ :**

ಜನಪರ ಧೋರಣೆಗಳನ್ನೊಳಗೊಂಡ ಅನೇಕ ಬಂಡಾಯ ಕಾದಂಬರಿಗಳು ಕನ್ನಡದಲ್ಲಿ ದೊರೆಯುತ್ತವೆ. ಕೆಲವು ಕಾದಂಬರಿಗಳು ಬಂಡಾಯದ ಹೊರನೋಟವನ್ನು ತೋರಿಸಿದರೆ, ಕೆಲವು ಕಾದಂಬರಿಗಳು ಬಂಡಾಯದ ಒಳನೋಟಗಳನ್ನು ತೋರಿಸುತ್ತವೆ. ದೇವನೂರು ಮಹಾದೇವ, ಅರವಿಂದ ಮಾಲಗತ್ತಿ, ಮ. ನ. ಜವರಯ್ಯ ಈ ಮುಂತಾದ ಬಂಡಾಯದ ಲೇಖಕರು ತಮ್ಮ ಕಾದಂಬರಿಗಳಲ್ಲಿ ದಲಿತ ಬದುಕಿನ ವಿವಿಧ ಮಜಲುಗಳನ್ನು ಪ್ರಾಮಾಣಿಕವಾಗಿ ದಾಖಲಿಸುತ್ತ ಕಲಾತ್ಮಕವಾಗಿ ಚಿತ್ರಿಸಿದ್ದಾರೆ. ಮಹಾದೇವ ಅವರ 'ಒಡಲಾಳ', 'ಕುಸುಮಬಾಲೆ' ಮ. ನ. ಜ. ಅವರ 'ಮಾಗಿ', ಮಾಲಗತ್ತಿಯವರ 'ಕಾರ್ಯ' ದಲಿತ ಬದುಕಿನ ಪ್ರಾಮಾಣಿಕವಾದ ದಾಖಲೆಗಳಾಗಿವೆ.

ಒಡಲಾಳದ ಸಾಕವ್ವ, ಮಾಗಿಯ ಮಾಗವ್ವ ಮತ್ತು ಕಾರ್ಯದ ಬಂಗಾರವ್ವ ಈ ಪಾತ್ರಗಳು ಕನ್ನಡದ ಮಹತ್ವದ ಕೊಡುಗೆಗಳಾಗಿವೆ. ಸಾಕವ್ವ ಮಾಗವ್ವನಂಥವರ ವರ್ತಮಾನದ ಬದುಕಿನಲ್ಲಿ ನೋವು ಶೋಷಣೆ ಇದ್ದರೆ, ಬಂಗಾರವ್ವ ಬದುಕಿ ಸತ್ತ ನಂತರದಲ್ಲೂ ದಲಿತರ ಬದುಕಿನಲ್ಲಿ ಅನೇಕ ನೋವು ಶೋಷಣೆ ಕಾಣಿಸುತ್ತವೆ. ಸಾಕವ್ವ, ಮಾಗವ್ವ, ಬದುಕುವುದರ ಮೂಲಕ ಈ ಕರಾಳ ವ್ಯವಸ್ಥೆಯನ್ನು ಪ್ರಶ್ನಿಸಿದರೆ, ಬಂಗಾರವ್ವ ಸಾಯುವುದರ ಮೂಲಕ ಈ ಕ್ರೂರವ್ಯವಸ್ಥೆಗೆ ಸವಾಲಾಗುತ್ತಾಳೆ. ಈ ಮೂರು ಕಾದಂಬರಿಗಳಲ್ಲಿ ಘೋಷಿತ ನಿಲುವುಗಳಿಲ್ಲ, ಬದುಕಿನ ಸತ್ಯಗಳಿವೆ. ಕೇವಲ ಸಪ್ಪಳವಿರದೆ, ಸತ್ವವಿದೆ. ಆದರ್ಶ-ಸಂದೇಶ ಸಾರುವ ಗೊಂದಲವಿರದೆ, ವರ್ತಮಾನದ ವಾಸ್ತವತೆಯಿದೆ. ಸಾಹಿತ್ಯಕೃತಿಯೊಂದರ ಮೂಲಕ ಸಿಗಬಹುದಾದ ಸಂತೋಷ, ಕುತೂಹಲಗಳನ್ನುಳಿಸಿಕೊಂಡೇ ಈ ಕೃತಿಗಳು ಕ್ರೂರವ್ಯವಸ್ಥೆಗೆ ಸವಾಲಾಗಿ ನಿಲ್ಲುವ ಶಕ್ತಿಯನ್ನು ಪಡೆದಿವೆ.

ದಲಿತ ಬದುಕಿನ ಅನೇಕ ಸೂಕ್ಷ್ಮಸಂಗತಿಗಳನ್ನು ಕಟ್ಟಿಕೊಟ್ಟ ಬಂಡಾಯ ಲೇಖಕರು ಮುಸ್ಲಿಂ ಬದುಕಿನ ಅನೇಕ ಗೂಢತೆಗಳನ್ನು ಮೊದಲ ಬಾರಿಗೆ ಪ್ರಕಟಿಸಿದ್ದಾರೆ. ಸಾರಾ ಅಬೂಬಕರ್, ಬೋಳವಾರು ಮಹ್ಮದ ಕುಂಞ, ಫಕೀರ ಮಹ್ಮದ ಕಟ್ಪಾಡಿ, ಅಬ್ದುಲ್ ಮಜೀದಖಾನ್, ಅಸಫ್‌ಅಲಿ ಮುಜಾವರ್, ಬಾನು

ಮುಷ್ತಾಕ್ ಈ ಮೊದಲಾದ ಬಂಡಾಯದ ಲೇಖಕರು ತಮ್ಮ ಅನುಭವಗಳನ್ನು ಸಾಮಾಜಿಕ ಕಾಳಜಿಗಳ ನೆಲೆಯಲ್ಲಿ ಗುರುತಿಸಿದ್ದಾರೆ.

ಕನ್ನಡ ಕಾದಂಬರಿ ಸಾಹಿತ್ಯಕ್ಕೆ ಮುಸ್ಲಿಂ ಬದುಕಿನ ಸಂವೇದನೆಗಳನ್ನು ಮೂಡಿಸುವ ಈ ಲೇಖಕರ ಕೃತಿಗಳು ಬಹಳಷ್ಟು ಗಮನ ಸೆಳೆಯುತ್ತವೆ. ಸಾರಾ ಹಾಗೂ ಕಟ್ಪಾಡಿಯವರು ಮುಸ್ಲಿಂ ಜನಾಂಗದ ಬದುಕನ್ನು ತಮ್ಮ ಕಾದಂಬರಿಗಳಲ್ಲಿ ವಿಶ್ಲೇಷಿಸಿದರೆ, ಬೋಳುವಾರರು ಮಾತ್ರ ಮುಸ್ಲಿಂ ಬದುಕಿನ ಸಂಬಂಧಗಳನ್ನು ಬೇರೆ ಸಂಸ್ಕೃತಿಗಳ ನೆಲೆಯಲ್ಲಿ ತೌಲನಿಕವಾಗಿ ಗುರುತಿಸಲು ಪ್ರಯತ್ನಿಸುತ್ತಾರೆ. ಸಾರಾ, ಕಟ್ಪಾಡಿ ಇವರ ಕಾದಂಬರಿಗಳಲ್ಲಿ ಮುಸ್ಲಿಂ ಜನಾಂಗದ ನೋವು, ನಲಿವು ಮೌಢ್ಯತೆ, ಸಣ್ಣತನಗಳ ಪ್ರಾಮಾಣಿಕ ವಿವರಣೆಯಿದ್ದರೆ, ಬೋಳುವಾರರ ಕಾದಂಬರಿಗಳಲ್ಲಿ ಮುಸ್ಲಿಂ-ಕ್ರಿಶ್ಚಿಯನ್ ಜನಾಂಗದ ಬದುಕಿನ ಸಂಘರ್ಷವಿದೆ.

ಸಾರಾ ಅವರು ಆ ಜನಾಂಗದ ಮೌಢ್ಯತೆ-ಸಣ್ಣತನಗಳನ್ನು ಹೇಳುತ್ತಲೇ ನಸೀಮಳಂತಹ ಪಾತ್ರಗಳ ಮೂಲಕ ಬಂಡಾಯ ಗುಣವನ್ನು ಹುಟ್ಟಿಸಿ ಜನಪರ ಆಶಯ ಪ್ರಕಟಿಸಿದರೆ, ಕಟ್ಪಾಡಿಯವರು ಯಾವುದೇ ತೀರ್ಪನ್ನು ಕೊಡದೆ ಯಥಾಸ್ಥಿತಿಯನ್ನು ತೆರೆದು ತೋರಿಸುವುದರ ಮೂಲಕ ತೀವ್ರತರವಾದ ಪರಿಣಾಮವನ್ನುಂಟು ಮಾಡುತ್ತಾರೆ. ಅನಂತಮೂರ್ತಿಯವರ 'ಸಂಸ್ಕಾರ', 'ಘಟಶ್ರಾದ್ಧ'ಗಳಂತೆ ಇವರ ಕೃತಿಗಳು ಮುಸ್ಲಿಂ ಜನಾಂಗದ ಒಳನೋಟಗಳನ್ನು ಯಥಾವತ್ತಾಗಿ ಹಿಡಿದಿಟ್ಟಿವೆ. ಬೋಳುವಾರು ಇದಕ್ಕಿಂತ ಸ್ವಲ್ಪ ಭಿನ್ನವಾಗಿ ಬರೆಯುತ್ತ ತಮ್ಮ ವಿನೋದದ ಶೈಲಿಯಲ್ಲಿಯೇ ಈ ಸಮಾಜ ವ್ಯವಸ್ಥೆಯ ಕ್ರೌರ್ಯವನ್ನು ಬಿಡಿಸಿ ಹೇಳುತ್ತಾರೆ. ವಿಭಿನ್ನ ಸಾಂಸ್ಕೃತಿಕ ವ್ಯಕ್ತಿಗಳ ಸಂಘರ್ಷದೊಂದಿಗೆ ಮನುಷ್ಯ ಚೇತನದ ಸಾಧ್ಯತೆಗಳನ್ನು ತೆರೆದಿಡುತ್ತಾರೆ.

ಗ್ರಾಮೀಣ ಬದುಕಿನ ಅನೇಕ ಅಪರಿಚಿತ ಮಜಲುಗಳನ್ನು ಮೊದಲಬಾರಿಗೆ ಪ್ರಕಟಿಸುವುದರ ಮೂಲಕ ಬಂಡಾಯ ಕಾದಂಬರಿಕಾರರು ಜನಪರ ಆಶಯಗಳ ಬೆಳವಣಿಗೆಗಾಗಿ ಪ್ರಯತ್ನಿಸಿದ್ದಾರೆ. ಬರಗೂರು ರಾಮಚಂದ್ರಪ್ಪನವರ 'ಒಂದು ಊರಿನ ಕಥೆ', 'ಬೆಂಕಿ', 'ಉಕ್ಕಿನ ಕೋಟೆ', 'ಭರತ ನಗರಿ', 'ಸೂರ್ಯ' ಕಾದಂಬರಿಗಳು, ಕುಂ. ವೀರಭದ್ರಪ್ಪನವರ 'ಕಪ್ಪು', 'ಕೆಂಡದ ಮಳೆ', 'ಬೇಲಿ ಮತ್ತು ಹೊಲ' ಕಾದಂಬರಿಗಳು; ಚೆನ್ನಣ್ಣ ವಾಲೀಕಾರರ 'ಕೋಟೆ ಬಾಗಿಲು', 'ಒಂದು ಹೆಣ್ಣಿನ ಒಳಗಜಗತ್ತು', 'ಹುಲಿಗೆಮ್ಮ' ಕೃತಿಗಳು; ಹೊರೆಯಾಲ ದೊರೆಸ್ವಾಮಿಯವರ 'ಕೊಳೆ', ಕಾ. ತ. ಚಿಕ್ಕಣ್ಣನವರ 'ಮುಂಜಾವು', ಬೆನಕನಹಳ್ಳಿ ನಾಯಕ್ ಅವರ 'ತಾಂಡಾಯಣ', 'ದೆವ್ವ ಮತ್ತು ಕಾಮ', 'ಬುಡಕ್ಕಾ ಮತ್ತು ಸಂತ್ರಿ', ಶಿಕಾರಿಹಟ್ಟಿ ಈ ಮುಂತಾದ ಕಾದಂಬರಿಗಳಲ್ಲಿ ಗ್ರಾಮೀಣ ಬದುಕಿನ ವಾಸ್ತವಗಳು. ಊಳಿಗಮಾನ್ಯ ಸಂಸ್ಕೃತಿಯ ಜನವಿರೋಧಿ ನಿಲುವುಗಳು ಏಕಕಾಲಕ್ಕೆ ಪ್ರಕಟಗೊಂಡು, ಓದುಗರ ಅರಿವನ್ನು, ಆಲೋಚನೆಯನ್ನು ಹೆಚ್ಚಿಸುವುದರ ಮೂಲಕ ಜನಪರ ನಿಲುವುಗಳನ್ನು ಸ್ಥಾಪಿಸುತ್ತವೆ.

'ಒಂದು ಊರಿನ ಕಥೆ', 'ಬೆಂಕಿ' ಮತ್ತು 'ಸೂರ್ಯ' ಕಾದಂಬರಿಗಳಲ್ಲಿ ಬರಗೂರು ರಾಮಚಂದ್ರಪ್ಪನವರು ಗ್ರಾಮೀಣ ಬದುಕಿನ ವಿವಿಧ ಸ್ತರಗಳನ್ನು ವಾಸ್ತವವಾಗಿ ದಾಖಲಿಸುತ್ತ ಹೊಸ ಆಲೋಚನಾ ಕ್ರಮವೊಂದನ್ನು ರೂಪಿಸುತ್ತಾರೆ. ಬೆಂಕಿ ಮತ್ತು ಸೂರ್ಯ ಕಾದಂಬರಿಯ ನಾಯಕಿಯರು ಶತಮಾನಗಳಿಂದ ತಮ್ಮ ಮೇಲಾಗುತ್ತಿರುವ ಶೋಷಣೆಯ ವಿರುದ್ಧ, ಪುರುಷಪ್ರಧಾನ ಸಂಸ್ಕೃತಿಯ ಅಸಮಾನತೆಯ ವಿರುದ್ಧ ಬಂಡೇಳುತ್ತಾರೆ. ಬರಗೂರ ಅವರ ಕಾದಂಬರಿಗಳಲ್ಲಿ ಬರುವ 'ಗೌಡ' ನಪುಂಸಕನಾಗಿ ಹೆಣ್ಣುಗಳನ್ನು ಹಿಂಸಿಸಿದರೆ, ಕುಂ. ವೀರಭದ್ರಪ್ಪನವರ ಕಾದಂಬರಿಗಳಲ್ಲಿ ಬರುವ 'ಗೌಡ' ಕಾಮುಕನಾಗಿ ಕಾಡುತ್ತಾನೆ. ಊಳಿಗಮಾನ್ಯ ಸಂಸ್ಕೃತಿಯ ಪ್ರತೀಕವಾಗಿರುವ 'ಗೌಡ' ಬರಗೂರ, ಕುಂ. ವೀ., ವಾಲೀಕಾರ ಅವರ ಕಾದಂಬರಿಗಳಲ್ಲಿ ಶತಮಾನಗಳ ಶೋಷಣೆಯ ವಾರಸುದಾರನಂತೆ ಕಾಣುತ್ತಾನೆ. ಗ್ರಾಮೀಣ ಬದುಕಿನ ಅಸಮಾನತೆಯ ಬದುಕಿಗೆ, ಅಲ್ಲಿಯ ಕ್ರೌರ್ಯ, ಹತಾಶೆಗಳಿಗೆ, ದರ್ಪ-ಅಹಂಕಾರಗಳಿಗೆ, ಜಾತೀಯತೆ-ಸಣ್ಣತನಗಳಿಗೆ ಈ 'ಗೌಡ' ಕಾರಣನಾಗುತ್ತಾನೆ.

ಕುಂ. ವೀರಭದ್ರಪ್ಪನವರ 'ಕಪ್ಪು' ಕಾದಂಬರಿ ಜನಪರ ಆಶಯಗಳನ್ನು ದಾಖಲಿಸುವ ಮಹತ್ವದ ಕೃತಿ. ಕುಂ. ವೀ. ಅವರ ಮೊದಲ ಕಾದಂಬರಿ ಇದಾದರೂ, ಊಳಿಗಮಾನ್ಯ ಸಂಸ್ಕೃತಿಯ ನೈಜ ದಾಖಲೆಗೆ ಇಂದಿಗೂ ಕೂಡ ಇದನ್ನೇ ಹೆಸರಿಸಬಹುದಾಗಿದೆ. ಬಂಡಾಯದ ಪ್ರಖರತೆಯಲ್ಲಿಯೇ ಇಲ್ಲಿ ಮುಗ್ಧತೆಯ ಕನಸುಗಳು ಅರಳಿವೆ. ಉರಿವ ಕೆಂಡದ ನಡುವೆ ಪಲ್ಲವಿಸಬಹುದಾದ ಆಶಯವೂ ಇಲ್ಲಿದೆ. ಕಾಗೆ ಗೂಬೆಗಳ ನಡುವೆ ಕೋಗಿಲೆಯ ಸ್ವರಕ್ಕಾಗಿ ಹುಡುಕಾಟ ನಡೆದಿದೆ. ಬಂಡಾಯದ ಅನೇಕ ಸಂಗತಿಗಳನ್ನು, ಜನಪರ ನಿಲುವಿನ ಅನೇಕ ಮಗ್ಗಲುಗಳನ್ನು ಕುಂ. ವೀ. ಇಲ್ಲಿ ಕಲಾತ್ಮಕವಾಗಿ ದಾಖಲಿಸಿದ್ದಾರೆ. ಇಲ್ಲಿನ ಕಥಾನಾಯಕಿ ಗೌರಿಯ ಅಸಹಾಯಕ ಸ್ಥಿತಿ ಇಡೀ ಸಮಾಜ ವ್ಯವಸ್ಥೆಯಲ್ಲಿರುವ ಮುಗ್ಧ ಜನತೆಯ ಅಸಹಾಯಕ ಸ್ಥಿತಿಯ ಪ್ರತೀಕವಾಗಿದೆ. ಕರೀಗೌಡ ಮತ್ತು ಸಣ್ಣುದ್ರರಂತಹ ಶೋಷಕ ಶಕ್ತಿಗಳ ವಿರುದ್ಧ ಇಲ್ಲಿ ಕೇವಲ ಘೋಷಣಾತ್ಮಕ ಬಂಡಾಯವಿರದೆ, ಓದುಗರ ಆಲೋಚನೆಯನ್ನು ತಿಕ್ಕಿ ಝಳಪಿಸಿಸುವ ಅರಿವಿನ ಸ್ಫೋಟವಿದೆ. ಇತ್ತೀಚೆಗೆ ಪ್ರಕಟವಾದ ಇವರ 'ಶಾಮಣ್ಣ' ಕಾದಂಬರಿ ಗಮನಾರ್ಹವಾಗಿದೆ.

ಹಳ್ಳಿಗಾಡಿನ ಗಾಢ ಅನುಭವಗಳನ್ನು, ಅಲ್ಲಿಯ ಮೌಢ್ಯತೆ-ಅಂಧ ಸಂಪ್ರದಾಯಗಳನ್ನು, ಭಯ-ಭೀತಿಗಳನ್ನು, ಉತ್ಸಾಹ-ಪ್ರೀತಿಗಳನ್ನು ನೈಜವಾಗಿ ಕಟ್ಟಿಕೊಡುತ್ತ ಬಂಡಾಯದ ಲೇಖಕರು ಸಮಾನತೆಗಾಗಿ, ಹೊಸ ವ್ಯವಸ್ಥೆಗಾಗಿ ತುಡಿಯುತ್ತಿರುವ ಕಾಳಜಿ ಗಮನಾರ್ಹವಾಗಿದೆ. ಬಂಡಾಯ ಚಳುವಳಿ ಪ್ರಾರಂಭವಾಗುವುದಕ್ಕಿಂತ ಮೊದಲು ಗ್ರಾಮೀಣ ಬದುಕಿನ ಅನುಭವಗಳು ಇತರ ಕಾದಂಬರಿಗಳಲ್ಲಿ ಬಂದಿಲ್ಲವೆಂದಲ್ಲ, ಆದರೆ ಒಂದು ಹಳ್ಳಿಯ ಬದುಕನ್ನು, ಅಲ್ಲಿಯ ನಂಬುಗೆಗಳನ್ನು ಆಚರಣೆಗಳನ್ನು ವ್ಯವಹಾರವನ್ನು ಸಂಬಂಧಗಳನ್ನು ನೋಡುವ

ದೃಷ್ಟಿಕೋನವೇ ತುಂಬಾ ಭಿನ್ನವಾಗಿದೆ. ಹಳ್ಳಿಗಾಡಿನ ಚಿತ್ರಣ ಕೇವಲ ವರ್ಣನಾತ್ಮಕ ನೆಲೆಯಲ್ಲಿ ಕರಗಿ ಹೋಗದೆ, ಜ್ವಲಂತ ಸಮಸ್ಯೆಗಳ ಕೆಂಡವಾಗಿ ಈ ಕೃತಿಗಳಲ್ಲಿ ಧಿಮಿಗುಡುತ್ತದೆ.

ಈ ದಶಕದಲ್ಲಿ ಪ್ರಕಟವಾದ ಪೂರ್ಣಚಂದ್ರ ತೇಜಸ್ವಿಯವರ 'ಕರ್ವಾಲೊ', 'ಚಿದಂಬರ ರಹಸ್ಯ', ವೀಣಾ ಶಾಂತೇಶ್ವರ ಅವರ 'ಶೋಷಣೆ, ಬಂಡಾಯ ಇತ್ಯಾದಿ', ವ್ಯಾಸರಾಯ ಬಲ್ಲಾಳರ 'ಬಂಡಾಯ', ಶ್ರೀ ಕೃಷ್ಣ ಆಲನಹಳ್ಳಿಯವರ 'ಭುಜಂಗಯ್ಯನ ದಶಾವತಾರಗಳು', ಅನುಪಮಾ ನಿರಂಜನರ 'ಆಳ' ಈ ಮೊದಲಾದ ಕಾದಂಬರಿಗಳಲ್ಲಿ ಜನಪರ ಆಶಯ ಸಮರ್ಥವಾಗಿ ಪ್ರಕಟವಾಗಿದೆ. ಪತ್ತೇದಾರಿ ತಂತ್ರವನ್ನು ಬಳಸಿಕೊಂಡು ವಿನೋದದ ಶೈಲಿಯಲ್ಲಿ ತೇಜಸ್ವಿಯವರು 'ಚಿದಂಬರ ರಹಸ್ಯ' ಕಾದಂಬರಿಯಲ್ಲಿ ಜನಸಮೂಹದ ಪರವಾದ ನಿಲುವುಗಳನ್ನು ಪ್ರಕಟಿಸಿದರೆ, ಬಲ್ಲಾಳರ 'ಬಂಡಾಯ' ಕಾರ್ಮಿಕ ಬದುಕಿನ ಒಳನೋಟಗಳನ್ನು ದಾಖಲಿಸುತ್ತದೆ. ಚಿತ್ತಾಲರ 'ಪುರುಷೋತ್ತಮ' ಇದಕ್ಕೆ ಭಿನ್ನವಾದ ಆಲೋಚನಾ ಕ್ರಮವನ್ನು ಕೊಡುವುದರ ಮೂಲಕ ಜನಪರತೆಯ ಸೂಕ್ಷ್ಮ ಸಂಗತಿಗಳನ್ನು ಸೂಚಿಸುತ್ತದೆ. ಶಾಂತರಸರ 'ಸಣ್ಣಗೌಡಸಾನಿ', ಚಂದ್ರಕಾಂತ ಕುಸನೂರ ಅವರ 'ನೂರಜಹಾನ್', ಆಲನಹಳ್ಳಿಯವರ 'ದಶಾವತಾರಗಳು' ಗ್ರಾಮೀಣ ಬದುಕಿನ ಜೀವಂತ ದಾಖಲೆಗಳಾಗಿವೆ. ಅನುಪಮಾ ನಿರಂಜನ ಅವರ 'ಆಳ' ಮಹಿಳಾ ವಿಮೋಚನೆಯ ಮತ್ತೊಂದು ಹಂತವನ್ನು ಹೇಳುತ್ತದೆ. ಚದುರಂಗರ 'ಹೆಜ್ಜಾಲ' ಮತ್ತು ಕುಂ. ವೀರಭದ್ರಪ್ಪನವರ 'ಶಾಮಣ್ಣ' ಇತ್ತೀಚೆಗೆ ಪ್ರಕಟವಾದ ಮಹತ್ವದ ಕಾದಂಬರಿಗಳಾಗಿವೆ.

ಇದೇ ಸಂದರ್ಭದಲ್ಲಿ ಪ್ರಕಟವಾದ ಬಂಡಾಯ ಲೇಖಕಿಯರ ಸಂವೇದನೆಗಳನ್ನು ಇಲ್ಲಿ ಮರೆಯುವಂತಿಲ್ಲ. ಲಲಿತಾ ನಾಯಕ ಅವರ 'ನೆಲೆ ಬೆಲೆ', 'ಗತಿ' ಕಾದಂಬರಿಗಳು, ಗೀತಾ ನಾಗಭೂಷಣ ಅವರ 'ಚಿಕ್ಕಿಯ ಹರೆಯದ ದಿನಗಳು', 'ಹಸಿಮಾಂಸ ಮತ್ತು ಹದ್ದುಗಳು', 'ನೀಲಗಂಗಾ' ಕೃತಿಗಳು, ವೀಣಾ ಶಾಂತೇಶ್ವರರ 'ಶೋಷಣೆ ಬಂಡಾಯ ಇತ್ಯಾದಿ' ಕಾದಂಬರಿ, ಸಾರಾ ಅಬೂಬಕರ್ ಅವರ 'ಚಂದ್ರಗಿರಿಯ ತೀರದಲ್ಲಿ', 'ಸಹನಾ' ಕೃತಿಗಳು ಮಹಿಳಾ ಸಂವೇದನೆಗಳನ್ನು ಸತ್ವಯುತವಾಗಿ ವಿಶ್ಲೇಷಿಸುತ್ತವೆ. ದೇವನೂರರ 'ಸಾಕವ್ವ', ಮನಜ ಅವರ 'ಮಾಗವ್ವ' ದಂತಹ ಸ್ತ್ರೀ ಪಾತ್ರಗಳು ಸೃಷ್ಟಿಯಾದಂತೆ ಸಾರಾ ಅವರ 'ನಸೀಮಾ', ಗೀತಾ ನಾಗಭೂಷಣರ 'ಲಚ್ಚಿ' ಯಂತಹ ಪಾತ್ರಗಳು ಹಸಿರಾಗಿ ಉಳಿಯುತ್ತವೆ. ಇವತ್ತಿನ ಲೇಖಕಿಯರು ಸಾಹಿತ್ಯ, ಸಮಾಜ, ಸಂಘಟನೆಗಳಲ್ಲಿ ಏಕಕಾಲಕ್ಕೆ ತಮ್ಮನ್ನು ತೊಡಗಿಸಿಕೊಂಡು ಬೆಳೆಯುತ್ತಿರುವದು ನಿಜವಾದ ಬೆಳವಣಿಗೆಯೆನಿಸುತ್ತದೆ.

ಮಹಿಳೆಯರ ಇತ್ತೀಚಿನ ಪ್ರಮುಖ ಕಾದಂಬರಿಗಳಲ್ಲಿ ಎಸ್. ವಿ. ಪ್ರಭಾವತಿಯವರ 'ಕುಂತಿ', ಗೀತಾ ನಾಗಭೂಷಣರ 'ದಂಗೆ', ಎಚ್. ನಾಗವೇಣಿಯವರ 'ಗಾಂಧಿ ಬಂದ' ಹಾಗೂ ಕುಸುಮ ಅವರ 'ಜಗುಲಿ' ಕಾದಂಬರಿಗಳನ್ನು ಹೆಸರಿಸಬಹುದಾಗಿದೆ.

**ನಾಟಕ :**

ಬಂಡಾಯ ಚಳುವಳಿ ಕಾವ್ಯ, ಸಣ್ಣಕತೆ, ಕಾದಂಬರಿ ಕ್ಷೇತ್ರಗಳಲ್ಲಿ ನಡೆಸಿದ ಕೃಷಿಗೆ ಹೋಲಿಸಿದರೆ ನಾಟಕ ಕ್ಷೇತ್ರ ಅಷ್ಟೊಂದು ದೊಡ್ಡದಾಗಿ ಬೆಳೆಯಲಿಲ್ಲ. ನಾಟಕ ಕ್ಷೇತ್ರದಲ್ಲಿ ನವ್ಯ ನಾಟಕಕಾರರ ಕೊಡುಗೆ ದೊಡ್ಡದು. ಹಾಗೆ ನೋಡಿದರೆ ಬಂಡಾಯ ಲೇಖಕರು ಮಹತ್ವದ ನಾಟಕಗಳನ್ನು ಕೊಡಬಹುದಾಗಿತ್ತು. ಏಕೆಂದರೆ ಸಮುದಾಯದಂತಹ ಸಾಂಸ್ಕೃತಿಕ ಸಂಘಟನೆ ಇದರೊಂದಿಗಿತ್ತು. ದೆಹಲಿಯ ರಾಷ್ಟ್ರೀಯ ನಾಟಕ ಶಾಲೆಯಿಂದ ಪದವಿ ಪಡೆದ ಅನೇಕ ಪ್ರತಿಭಾವಂತ ನಿರ್ದೇಶಕರು ಕರ್ನಾಟಕದಲ್ಲಿ ಮೊದಲಬಾರಿಗೆ ಲಭ್ಯವಾದರು. ಬಿ. ವಿ. ಕಾರಂತ, ಪ್ರೇಮಾ ಕಾರಂತ, ಪ್ರಸನ್ನ, ಮಾಲತಿ, ಬಸವಲಿಂಗಯ್ಯ, ರಘುನಂದನ, ಜನಾರ್ದನ, ಜಯಶ್ರೀ, ಜಯತೀರ್ಥ ಜೋಷಿ, ಸುರೇಶ ಆನಗಳ್ಳಿ, ಅಶೋಕ ಬಾದರದಿನ್ನಿ, ಸಿ. ಜಿ. ಕೆ., ನಾಗೇಶ ಹೀಗೆ ನಿರ್ದೇಶಕರ ತಂಡವೇ ನಮ್ಮಲ್ಲಿ ಲಭ್ಯವಿದ್ದರೂ ಮಹತ್ವದ ನಾಟಕಗಳು ಬರಲಿಲ್ಲ. ಎಚ್. ಎಸ್. ಶಿವಪ್ರಕಾಶ, ಪ್ರಸನ್ನ, ಲಿಂಗದೇವರು ಹಳೆಮನೆ ಈ ಕೆಲವು ನಾಟಕಕಾರರನ್ನು ಬಿಟ್ಟರೆ, ಉಳಿದವರು ಮಹತ್ತರವಾದುದನ್ನು ಕೊಡಲಿಲ್ಲ.

ಸಾಹಿತ್ಯ ತನ್ನ ಆಶಯಕ್ಕೆ ತಕ್ಕ ರೂಪವನ್ನು ತಾನೇ ಕಟ್ಟಿಕೊಳ್ಳುತ್ತದೆಯೆಂಬ ಮಾತನ್ನು ಇಲ್ಲಿ ಗಮನಿಸಬಹುದಾಗಿದೆ. ಪ್ರಖರ ವೈಚಾರಿಕತೆಯನ್ನು ತುಂಬಿಕೊಂಡಿದ್ದ ಚಳುವಳಿಯು ಬೀದಿನಾಟಕದಂತಹ ರೂಪವನ್ನು ಜನಪ್ರಿಯಗೊಳಿಸಿತು. ಅನೇಕ ಬೀದಿನಾಟಕಗಳು ಬಂಡಾಯ ಚಳುವಳಿಯ ಸಂದರ್ಭದಲ್ಲಿ ಬೇರೆ ಬೇರೆ ಊರುಗಳಲ್ಲಿ, ಕೇರಿಗಳಲ್ಲಿ, ಜಾತಾಗಳಲ್ಲಿ ನೂರಾರು ವೈವಿಧ್ಯಮಯ ಪ್ರಯೋಗಗಳನ್ನು ಕಂಡಿವೆ. ಹೀಗಾಗಿ ನಾಟಕ ಕ್ಷೇತ್ರಕ್ಕೆ ಬಂಡಾಯ ನೀಡಿದ ಕೊಡುಗೆಯೆಂದರೆ ಬೀದಿ ನಾಟಕವೇ ಆಗಿದೆ.

ರೂಪಾಂತರಗಳು, ಅನುವಾದಗಳೇ ಹೆಚ್ಚು ಪ್ರಯೋಗಗೊಂಡ ಈ ಸಂದರ್ಭದಲ್ಲಿ ಸ್ವತಂತ್ರ ನಾಟಕಗಳು ವಿರಳವಾದವು. ಪ್ರಸನ್ನ ಅವರ 'ದಂಗೆಯ ಮುಂಚಿನ ದಿನಗಳು', 'ಒಂದು ಲೋಕಕತೆ', 'ಮಹಿಮಾಪುರ', 'ತದ್ರೂಪಿ', ಶಿವಪ್ರಕಾಶ ಅವರ 'ಮಹಾಚೈತ್ರ', 'ಸುಲ್ತಾನ್ ಟಿಪ್ಪೂ', ಸಿದ್ಧಲಿಂಗಯ್ಯನವರ 'ಏಕಲವ್ಯ', ಲಿಂಗದೇವರು ಹಳೆಮನೆಯವರ 'ಚಿಕ್ಕದೇವಭೂಪ', 'ಹೈದರ್', ಕೆ. ವಿ. ನಾರಾಯಣರ 'ಹುತ್ತವ ಬಡಿದರೆ', ಡಿ. ಆರ್. ನಾಗರಾಜರ 'ಕತ್ತಲೆದಾರಿ ದೂರ', ವಾಲೀಕಾರರ 'ಜೋಗುತಿ', 'ಸೋಮ್ರ್ಯಾಯ ಭೀಮ್ರ್ಯಾಯ್ನ ಡಪ್ಪಿನಾಟ', ಸಬರದರ 'ರೆಕ್ಕೆ ಮೂಡಿದಾಗ', 'ನರಬಲಿ', 'ಬೆಳ್ಳಕ್ಕಿಸಾಲು', ವೈಕುಂಠರಾಜು ಅವರ 'ಸನ್ನಿವೇಶ', 'ಸಂದರ್ಭ', ಕಿ. ರಂ. ನಾಗರಾಜರ 'ಸೀಗಿಕೊಂಡ ಸಂಸ', 'ಕಾಲಜ್ಞಾನಿ ಕನಕ', ರಾಮದಾಸರ 'ಸಾಕ್ಷಾತ್ಕಾರ', ಕ್ಯಾತನಳ್ಳಿ ರಾಮಣ್ಣನವರ 'ಹಲಗಲಿಯ ಬೇಡರು' ಈ ಮೊದಲಾದ ನಾಟಕಗಳನ್ನು ಹೆಸರಿಸಬಹುದು.

ಬಂಡಾಯ ಚಳುವಳಿಯ ಪ್ರಭಾವಕ್ಕೆ ಒಳಗಾದ ಕೆಲವು ನವ್ಯನಾಟಕಕಾರರು ತಮ್ಮ ಪ್ರಮುಖ ನಾಟಕಗಳನ್ನು ಬಂಡಾಯದ ಸಂದರ್ಭದಲ್ಲಿಯೂ ಬರೆದರು. ಲಂಕೇಶರ 'ಗುಣಮುಖ', ಕಾರ್ನಾಡರ 'ಅಗ್ನಿ ಮತ್ತು ಮಳೆ', ಕಂಬಾರರ 'ಸಿರಿಸಂಪಿಗೆ', ಟಿ. ಎನ್. ಸೀತಾರಾಮ್ ಅವರ 'ನಮ್ಮೊಳಗೊಬ್ಬ ನಾಜೂಕಯ್ಯಾ'ದಂತಹ ನಾಟಕಗಳನ್ನಿಲ್ಲಿ ಉಲ್ಲೇಖಿಸಬಹುದಾಗಿದೆ.

ಬಂಡಾಯ ಲೇಖಕರ ಕೆಲವು ಕಥೆ-ಕಾದಂಬರಿಗಳನ್ನು ಇದೇ ಸಂದರ್ಭದಲ್ಲಿ ರೂಪಾಂತರ ಮಾಡಿಸಿ ಪ್ರಯೋಗಿಸಲಾಯಿತು. ಇವುಗಳಲ್ಲಿ ದೇವನೂರ ಮಹದೇವರ 'ಒಡಲಾಳ', 'ಕುಸುಮ ಬಾಲೆ', ತೇಜಸ್ವಿಯವರ 'ತಬರನ ಕತೆ', ಕುಂ. ವೀರಭದ್ರಪ್ಪನವರ 'ಬೇಲಿ ಮತ್ತು ಹೊಲ' ಕೃತಿಗಳನ್ನು ಹೆಸರಿಸಬಹುದಾಗಿದೆ.

ಸಮುದಾಯ, ಗೆಳೆಯರ ಗುಂಪು, ಚಿತ್ರಾ ಸಂಸ್ಥೆಗಳು ಬೀದಿನಾಟಕಗಳನ್ನು ಹೆಚ್ಚು ಸಂಖ್ಯೆಯಲ್ಲಿ ಪ್ರಯೋಗಿಸಿದವು. ಎ. ಎಸ್. ಮೂರ್ತಿಯವರ ಚಿತ್ರಾ ಸಂಸ್ಥೆ ಅನೇಕ ಬೀದಿನಾಟಕಗಳನ್ನು ಪ್ರಯೋಗಿಸಿತು. ಶ್ರೀಮತಿ ವಿಜಯಾ ಅವರು ರಚಿಸಿದ್ದ ಏಳು ಬೀದಿನಾಟಕಗಳು ಇದೇ ಸಂದರ್ಭದಲ್ಲಿ ಪ್ರಯೋಗಗೊಂಡವು. ಪ್ರಮುಖ ಬೀದಿನಾಟಕಗಳನ್ನು ಕೊಟ್ಟ ಬಂಡಾಯ ಲೇಖಕರಲ್ಲಿ ಚಂಪಾ ಅವರದು ಮುಖ್ಯ ಹೆಸರು. ಅವರ 'ನಳಕವಿಯ ಮಸ್ತಕಾಭೀಷೇಕ', 'ಬುರುಡಿ ಬಾಬಾನ ಪವಾಡ'ದಂತಹ ಬೀದಿನಾಟಕಗಳು ತಮ್ಮ ವ್ಯಂಗ್ಯ-ವಿಡಂಬನೆಯ ಗುಣದಿಂದ ತೀವ್ರ ಪರಿಣಾಮವನ್ನುಂಟು ಮಾಡಿದವು. ಈ ಬೀದಿನಾಟಕಗಳೇ ಬಂಡಾಯದ ಪ್ರಮುಖ ಕೊಡುಗೆಯಾದವು. ಸಿದ್ಧಲಿಂಗಯ್ಯನವರ 'ಕತ್ತೆ ಮತ್ತು ಧರ್ಮ', 'ಅಲ್ಲೆಕುಂತವರೆ', 'ಕೊಲೆಯ ಹಿಂದಿನ ರಾತ್ರಿ' ಕವನಗಳು ಬೀದಿನಾಟಕಗಳಾಗಿ ಜನಪ್ರಿಯವಾದವು. ಎಸ್. ಎಸ್. ಹಿರೇಮಠ ಅವರ 'ಹಷ್ಮಿ ಅಮರ', ಸಬರದ ಅವರ 'ಮೂರು ಬೀದಿನಾಟಕಗಳು', ಆರ್. ಕೆ. ಹುಡುಗಿಯವರ 'ಅಕ್ಷರ ಮತ್ತು ಒರೆಗಲ್ಲು' ಈ ಸಂದರ್ಭದಲ್ಲಿ ಹೆಸರಿಸಬಹುದಾದ ಬೀದಿನಾಟಕಗಳಾಗಿವೆ.

'ಬೆಲ್ಚಿ', 'ನರಗುಂದ ಬಂಡಾಯ', 'ಅಲ್ಲೇ ಇದ್ದವರು', 'ಕತ್ತಲೆ ರಾಜ್ಯ', 'ಪತ್ರೆ ಸಂಗಪ್ಪನ ಕೊಲೆ', 'ಬಂದರೋ ಬಂದರು', 'ಮುಖವಿಲ್ಲದವರು', 'ಮಾರಿಕೊಂಡವರು', 'ಪಂಚಮ ನೆಲಸಮ', 'ಕುದುರೆಮೋತಿ', 'ಬೇನೆ', 'ನಾಳೆ ಯಾರಿಗೂ ಇಲ್ಲ', 'ಏ ನನ್ನ ಜನರೇ' ಈ ಮೊದಲಾದ ಬೀದಿನಾಟಕಗಳು ಬೇರೆ ಬೇರೆ ನಗರ-ಹಳ್ಳಿಗಳಲ್ಲಿ ಹೆಚ್ಚು ಪ್ರಯೋಗಗಳನ್ನು ಕಂಡವು. ಕೆಲವು ಬೀದಿ ನಾಟಕಗಳು ಮಾತ್ರ ಉತ್ತಮ ಪರಿಣಾಮವನ್ನುಂಟು ಮಾಡಿದರೆ, ಅನೇಕ ಬೀದಿನಾಟಕಗಳು ಕೇಸ್ ಹಿಸ್ಟರಿ ತರಹ, ರಿಪೋರ್ಟ್ ತರಹ ವಾಚ್ಯವಾದವು. ಬೀದಿನಾಟಕಗಳ ಬಗೆಗೆ ಹೆಚ್ಚಿನ ವಿಮರ್ಶೆಯೂ ಬರಲಿಲ್ಲ.

ಬಂಡಾಯದ ಸಂದರ್ಭದಲ್ಲಿ ಸ್ವತಂತ್ರ ನಾಟಕಗಳು ರಚನೆಯಾದ ಸಂಖ್ಯೆಗಿಂತ, ಅಧಿಕ ಸಂಖ್ಯೆಯಲ್ಲಿ ಅನುವಾದ ನಾಟಕಗಳು, ರೂಪಾಂತರ ನಾಟಕಗಳೇ ಪ್ರಯೋಗಗೊಂಡವು. ಬ್ರೆಕ್ಟ್‌ನ 'ಗೆಲಿಲಿಯೊ', 'ತಾಯಿ', 'ಕಕೇಸಿಯನ್ ಚಾರ್ಕ್‌ಸರ್ಕಲ್',

'ತ್ರೀಪೆನ್ನಿ ಅಪೇರ'ದಂತಹ ಪ್ರಮುಖ ಅನುವಾದಿತ ನಾಟಕಗಳನ್ನಿಲ್ಲಿ ಹೆಸರಿಸಬಹುದು. ಇದರ ಜತೆಗೆ ಶೇಕ್ಸಪಿಯರ್, ಆಲ್ಬರ್ಟ್, ಇಬ್ಸನ್, ಬರ್ನಾಡ್ ಷಾ, ಬೆಕೆಟ್– ಈ ಮುಂತಾದ ಪಾಶ್ಚಾತ್ಯ ನಾಟಕಕಾರರ ನಾಟಕಗಳು ಕನ್ನಡದಲ್ಲಿ ದೊರೆತವು. ಕೆ. ವಿ. ಸುಬ್ಬಣ್ಣ, ಅಕ್ಷರ, ಎಸ್. ಮಾಲತಿ, ಹೇಮಾ ಪಟ್ಟಣಶೆಟ್ಟಿ, ಸಿದ್ಧಲಿಂಗ ಪಟ್ಟಣಶೆಟ್ಟಿ, ಲೋಹಿತಾಶ್ವ, ಗೋಪಾಲ ವಾಜಪೇಯಿ– ಈ ಮುಂತಾದ ಲೇಖಕರು ಅನೇಕ ಮಹತ್ವದ ನಾಟಕಗಳನ್ನು ಬೇರೆ ಭಾಷೆಗಳಿಂದ ಕನ್ನಡಕ್ಕೆ ಅನುವಾದಿಸಿದರು. ಅನೇಕ ನಾಟಕಗಳು ಬಂಗಾಲಿ, ಮರಾಠಿ, ಹಿಂದಿಯಿಂದಲೂ ಅನುವಾದಗೊಂಡವು. ಎಂ. ಪಿ. ಪ್ರಕಾಶ ಅವರು ಅನುವಾದಿಸಿದ 'ಸೂರ್ಯಶಿಕಾರಿ' ಗಮನ ಸೆಳೆಯಿತು. 'ಕುರಿ', 'ಮುಖ್ಯಮಂತ್ರಿ', 'ತಾಮ್ರಪತ್ರ' ದಂತಹ ಇತರ ಭಾಷೆಯ ನಾಟಕಗಳು ರಾಜಕೀಯ ಪ್ರಜ್ಞೆಯನ್ನು ಮೂಡಿಸಿದವು.

ಕನ್ನಡದ ಸಣ್ಣಕತೆ-ಕಾದಂಬರಿಗಳ ಜತೆಗೆ, ಭಾರತೀಯ ಇತರ ಭಾಷೆಯ ಸಣ್ಣಕತೆ-ಕಾದಂಬರಿಗಳನ್ನು ರೂಪಾಂತರಿಸಿ ಪ್ರಯೋಗಗೊಳಿಸಿದ ಶ್ರೇಯಸ್ಸು ಬೆಂಗಳೂರಿನ ರಂಗನಿರಂತರ ತಂಡದವರದು. 'ಕಣಿವೆಯಲ್ಲಿ ಕೆಂಪುಹೂವು', 'ಕೊಂಬಿನವರು', 'ಪುಟ್ಟಕ್ಕನ ಮೆಡಿಕಲ್ ಕಾಲೇಜು', 'ಊನ', 'ಸುರಂಗ', 'ಬೇಸ್ತು', 'ಡಾಂಬರ ಬಂದುದು', 'ಮೌನಿ', 'ದೇವರ ಹೆಣ', 'ಕಪ್ಪೆ-ಬಾವಿ-ನಕ್ಷತ್ರ' ಈ ಮುಂತಾದ ರೂಪಾಂತರಗಳು ರಂಗನಿರಂತರ ತಂಡದಿಂದ ಬಂದವುಗಳಾಗಿವೆ.

ಬಂಡಾಯ ನಾಟಕ, ಸಮಕಾಲೀನ ಅವನತಮುಖೀ ಸಮಾಜವನ್ನು ಚಿತ್ರಿಸುವುದರೊಂದಿಗೆ, ಅದಕ್ಕೆ ಪರ್ಯಾಯವಾಗಿ ಪ್ರಗತಿಪರ ಸಾಮಾಜಿಕ ಸೈದ್ಧಾಂತಿಕತೆಯನ್ನು ಮುಂದಿಟ್ಟಿತು. ಮತ್ತು ಆ ಸೈದ್ಧಾಂತಿಕತೆಯ ಪ್ರಚಾರಕ್ಕಾಗಿ ಟೊಂಕಕಟ್ಟಿ ನಿಲ್ಲುವ ಎಡಪಂಥೀಯ ಒಲವುಳ್ಳ ರಂಗಚಳುವಳಿಯನ್ನು ಹುಟ್ಟುಹಾಕಿತು. (ಪುರುಷೋತ್ತಮ ಬಿಳಿಮಲೆ : 'ಬಂಡಾಯ ದಲಿತ ಸಾಹಿತ್ಯ' ಪುಟ ೯೩, ೧೯೯೦) ಎನ್ನುವ ಪುರುಷೋತ್ತಮ ಬಿಳಿಮಲೆಯವರ ಈ ಮಾತನ್ನು ರಂಗಚಟುವಟಿಕೆಗಳು ಸ್ಥಗಿತಗೊಂಡಿರುವ ಈ ಸಂದರ್ಭದಲ್ಲಿ ಹೇಗೆ ಸ್ವೀಕರಿಸುವುದು ? ಅಸಂಖ್ಯ ಚಾನಲ್‌ಗಳ ಹಾವಳಿಯಲ್ಲಿ ಒಟ್ಟು ರಂಗಭೂಮಿಯೇ ಲವಲವಿಕೆಯನ್ನು ಕಳೆದುಕೊಳ್ಳುತ್ತಿರುವ ಈ ಸಂದರ್ಭದಲ್ಲಿ, ಬಂಡಾಯದ ಕೊಡುಗೆಯನ್ನು ಲೆಕ್ಕಹಾಕುವುದು ಎಷ್ಟು ಸಮರ್ಪಕ ? ಕಾಲವೇ ನಿರ್ಧರಿಸಬೇಕಾಗಿದೆ.

ಬಂಡಾಯ ಚಳುವಳಿಯ ಸಂದರ್ಭದಲ್ಲಿ ಇದುವರೆಗೆ ಗಮನಿಸಿದಂತೆ ಕಾವ್ಯ, ಸಣ್ಣಕತೆ, ಕಾದಂಬರಿ ಹಾಗೂ ನಾಟಕದಂತಹ ಸೃಜನಶೀಲ ಪ್ರಕಾರಗಳು ಬೆಳೆದುಕೊಂಡು ಬಂದವು. ಈ ಸಂದರ್ಭದಲ್ಲಿ ಲಲಿತ ಪ್ರಬಂಧಗಳಿಗಿಂತ, ವೈಚಾರಿಕ ಪ್ರಬಂಧಗಳೇ ಹೆಚ್ಚು ಸಂಖ್ಯೆಯಲ್ಲಿ ಪ್ರಕಟವಾದವು. ಇಂತಹ ಹಲವಾರು ಪ್ರಬಂಧಗಳನ್ನು ಸಂಕಲಿಸಿದ ಅನೇಕ ವೈಚಾರಿಕ ಕೃತಿಗಳು ಬಂಡಾಯ ಲೇಖಕರಿಂದ ಪ್ರಕಟವಾದವು. ನವೋದಯ-ಪ್ರಗತಿಶೀಲ-ನವ್ಯ ಸಂದರ್ಭದಲ್ಲಿ ಅಷ್ಟಾಗಿ ಗಮನ ಸೆಳೆಯದ ವಿಚಾರಸಾಹಿತ್ಯ ಬಂಡಾಯ ಸಂದರ್ಭದಲ್ಲಿ ವೈವಿಧ್ಯಮಯವಾಗಿ

ಬೆಳೆದುನಿಂತಿತು. ಪವಾಡ ಪರೀಕ್ಷೆ (ಬಿ. ವಿ. ವೀರಭದ್ರಪ್ಪ), ಆ ಕ್ಷಣದ ಸತ್ಯ (ಚಂದ್ರಶೇಖರ ಆಲೂರ), ತೆರೆದ ಮನ (ಡಾ. ಎಚ್. ನರಸಿಂಹಯ್ಯ), ಲೇಖನ ಗುಚ್ಛ (ಸಾರಾ ಅಬೂಬಕರ್), ರಾಷ್ಟ್ರೀಯತೆ ಮತ್ತು ಮುಸ್ಲೀಮರು (ಫಕೀರ್ ಮುಹಮ್ಮದ ಕಟ್ಪಾಡಿ). ಗೋರಾ (ಎಚ್. ಎಸ್. ದೊರೆಸ್ವಾಮಿ), ರಾಮ ಅಳುತ್ತಿದ್ದಾನೆ. (ಪಿ. ಶಿ. ರಾಮಚಂದ್ರೇಗೌಡ), ಗಮನ (ಡಿ. ಎಸ್. ನಾಗಭೂಷಣ), ಬಾನಾಮತಿ. ದೆವ್ವ, ಮಾಟಮಂತ್ರ ಇವೆಲ್ಲಾ ನಿಜವೆ ? (ಡಾ. ಸಿ. ಆರ್. ಚಂದ್ರಶೇಖರ). ಪವಾಡಗಳ ರಹಸ್ಯ ಬಯಲು (ನರೇಂದ್ರ ನಾಯಕ), ವೇದಾಂತ ರೆಜಿಮೆಂಟ್ ಮತ್ತು ಇತರ ವೈಚಾರಿಕ ಬರಹಗಳು (ಬಿ. ವಿ. ವೀರಭದ್ರಪ್ಪ), ಕೋಮುವಾದ ಮತ್ತು ಜನಸಂಸ್ಕೃತಿ (ಪುರುಷೋತ್ತಮ ಬಿಳಿಮಲೆ), ದಲಿತಲೋಕದ ಒಳಗೆ (ಎಲ್. ಹನುಮಂತಯ್ಯ), ದಲಿತ ಚಳುವಳಿ ಒಂದು ಅವಲೋಕನ (ಮುನಿವೆಂಕಟಪ್ಪ), ಭಾರತೀಯ ಸ್ತ್ರೀವಾದ (ಮನು ಚಕ್ರವರ್ತಿ), ಮಹಿಳೆ ಬಿಡುಗಡೆಯ ಹಾದಿಯಲ್ಲಿ (ಎನ್. ಗಾಯತ್ರಿ), ವಿಚಾರ ಸಂಪದ (ಬಸವರಾಜ ಸಬರದ), ಸೀತಾಯಣ (ಪೋಲಂಕಿ ರಾಮಮೂರ್ತಿ), ಅವತಾರಗಳು (ಸಿದ್ದಲಿಂಗಯ್ಯ), ಪ್ರತಿ ಸಂಸ್ಕೃತಿ (ರಹಮತ್ ತರಿಕೆರೆ), ಸೊಲ್ಲು (ಮೊಗಳ್ಳಿ ಗಣೇಶ) –ಈ ಮುಂತಾದ ಅನೇಕ ಕೃತಿಗಳು ವಿಚಾರ ಸಾಹಿತ್ಯಕ್ಕೆ ನೀಡಿದ ಬಂಡಾಯ ಲೇಖಕರ ಕೊಡುಗೆಗಳಾಗಿವೆ. 'ಉಚಲ್ಯಾ', 'ಅಕ್ರಮ ಸಂತಾನ'ದಂತಹ ಆತ್ಮಕಥನಗಳು ಕನ್ನಡದ ಅನುಭವವನ್ನು ಹೆಚ್ಚಿಸಿವೆ. ಸಿದ್ಧಲಿಂಗಯ್ಯನವರ 'ಊರುಕೇರಿ', ಮಾಲಗತ್ತಿಯವರ 'ಗವರ್ನ್‌ಮೆಂಟ್ ಬ್ರಾಹ್ಮಣ', ಮುನಿವೆಂಕಟಪ್ಪನವರ 'ಅಂತ್ಯಜನ ಆತ್ಮಕತೆ' –ಈ ಮೊದಲಾದ ಆತ್ಮಕಥನಗಳು ಬಂಡಾಯ ಲೇಖಕರ ವಿನೂತನ ಅಭಿವ್ಯಕ್ತಿಯಾಗಿವೆ. ಈ ಸಂದರ್ಭದಲ್ಲಿ ಬಂಡಾಯದ ಸಾಹಿತ್ಯ ವಿಮರ್ಶೆಯೂ ಬೆಳೆದುನಿಂತಿದೆ.

ಬಂಡಾಯದ ಸೃಜನಶೀಲ ಪ್ರಕಾರಗಳಲ್ಲಿ ಸಣ್ಣಕತೆ, ಹಾಡುಗಳು ಮೊದಲನೆಯ ಸ್ಥಾನದಲ್ಲಿದ್ದರೆ, ಕಾದಂಬರಿ, ನಾಟಕ ಕ್ರಮವಾಗಿ ಎರಡು ಮೂರನೇ ಸ್ಥಾನದಲ್ಲಿವೆ. ಬಂಡಾಯದ ಪ್ರಖರ ವೈಚಾರಿಕತೆಗೆ ಸಣ್ಣಕತೆ, ಕಾದಂಬರಿ ಸರಿಯಾದ ಹೊಂದಾಣಿಕೆಗಳಾಗಿವೆ. ಕಾವ್ಯದಲ್ಲಿ 'ಹಾಡುಗಳು' ಕುತೂಹಲ ಹುಟ್ಟಿಸುತ್ತವೆ ಬಂಡಾಯ ಕವಿತೆಗಳು ಮಾತ್ರ ಬಹಳಷ್ಟು ವಾಚ್ಯವಾಗಿವೆ. ಬಂಡಾಯದ ಪ್ರಮುಖ ಕೊಡುಗೆಯಾಗಿ ಬೀದಿನಾಟಕ ಮತ್ತು ವಿಚಾರಸಾಹಿತ್ಯ ಗಮನ ಸೆಳೆಯುತ್ತವೆ.

## ಸಮಾರೋಪ :

ತುರ್ತು ಪರಿಸ್ಥಿತಿಯ ಕರಾಳ ಛಾಯೆ ಕಳೆದು ಇಪ್ಪತ್ಮೂರು ವರ್ಷಗಳಾಗುತ್ತ ಬಂದವು. ಅದೇ ಸಂದರ್ಭದಲ್ಲಿ ಮೊಳೆಕೆಯೊಡೆದ ಬಂಡಾಯದ ಬೀಜ, ನಂತರದ ಮೂರು ವರ್ಷಗಳಲ್ಲಿ ಅಂದರೆ ೧೯೭೯ರಲ್ಲಿ ನಡೆದ ಬಂಡಾಯ ಸಾಹಿತ್ಯ ಸಮ್ಮೇಳನದಲ್ಲಿ ಸಸಿಯಾಗಿ ಕಾಣಿಸಿಕೊಂಡಿತು. ಅಂದರೆ ಬಂಡಾಯ ಚಳುವಳಿಗೆ ಈಗ ಬೆಳ್ಳಿಹಬ್ಬ ಆಚರಿಸುವ ದಿನಗಳು ಸಮೀಪಿಸಿವೆ. ಈ ಎರಡೂವರೆ ದಶಕಗಳ ಅವಧಿಯಲ್ಲಿ ಬಂಡಾಯ ಚಳುವಳಿಯ ಒಳಗಡೆಯಿದ್ದ ಲೇಖಕರು ಬಂಡಾಯದ

ವಕ್ತಾರರಂತೆ ಮಾತನಾಡಿದ್ದೇವೆ. ಬಂಡಾಯ ಬೆಳೆಯುವ ಹಂತದಲ್ಲಿರುವುದರಿಂದ ಈಗಲೇ ಅದರ ಬಗೆಗೆ ಕಟುಟೀಕೆಗಳು ಬೇಡವೆಂದು ಹೇಳುತ್ತಲೇ ಬಂದಿದ್ದೇವೆ. ಈಗ ಬಂಡಾಯ ಸಸಿಯಲ್ಲ; ಎರಡೂವರೆ ದಶಕಗಳಲ್ಲಿ ಮರವಾಗಿ ಬೆಳೆದುನಿಂತಿದೆ. ಈ ಸಂದರ್ಭದಲ್ಲಿ ನಾವು ಸಂಘಟನೆ, ಸಾಹಿತ್ಯ ಕುರಿತಂತೆ ನಿಷ್ಠುರವಾಗಿ ಮಾತನಾಡದಿದ್ದರೆ, ಆತ್ಮವಿಮರ್ಶೆ ಮಾಡಿಕೊಳ್ಳದಿದ್ದರೆ ಕಾಲದ ದವಡೆಯಲ್ಲಿ ಕಳೆದುಹೋಗುತ್ತೇವೆ. ಬಂಡಾಯ ಸಂಘಟನೆಯ ಹಾಗೂ ಅದರಿಂದ ಉತ್ಪತ್ತಿಯಾದ ಸಾಹಿತ್ಯದ ಸೋಲು-ಗೆಲವುಗಳನ್ನು ಗಮನಿಸದಿದ್ದರೆ, ವಿಮರ್ಶೆಗೊಳಪಡಿಸದಿದ್ದರೆ ಆತ್ಮವಂಚನೆ ಮಾಡಿಕೊಂಡಂತಾಗುತ್ತದೆ. ಆದುದರಿಂದ ಈಗ ಆತ್ಮವಿಮರ್ಶೆಯ ಜತೆಗೆ ಸಾಹಿತ್ಯ – ಸಂಘಟನೆಗಳ ವಿಮರ್ಶೆಯನ್ನೂ ಮಾಡಬೇಕಾಗಿದೆ.

## ಬಂಡಾಯ ಸಾಹಿತ್ಯದ ಮಿತಿಗಳು :

ಬಂಡಾಯ ಚಳುವಳಿಯ ಮೂಲಕ ಹುಟ್ಟಿದ ಬಂಡಾಯ ಸಾಹಿತ್ಯ ಇಂದು ಬೇರೆ ಬೇರೆ ಪ್ರಕಾರಗಳಲ್ಲಿ ವೈವಿಧ್ಯಮಯವಾಗಿ ಬೆಳೆದುನಿಂತಿದೆ. ಆದರೆ ಅದರಲ್ಲಿ ಕಾಳೆಷ್ಟು-ಜೊಳ್ಳೆಷ್ಟು ಎಂದು ಪರಿಶೀಲಿಸಿದರೆ ಬಹಳ ನಿರಾಶೆಯಾಗುತ್ತದೆ. ಎರಡು ದಶಕ ಕಳೆದುಹೋದರೂ 'ಇಕ್ರಲಾ ಒದಿರ್ಲಾ' ಕಾವ್ಯಮಾದರಿಯ ಪರಂಪರೆಗಳು ಬೆಳೆದವೇ ಹೊರತು. ಮಹತ್ವದ್ದೆಂದು ಹೇಳಿಕೊಳ್ಳುವ ಕಾವ್ಯ ಬಂದದ್ದು ವಿರಳವೆಂದೇ ಹೇಳಬೇಕಾಗುತ್ತದೆ. ಇಂದು ತಾಲೂಕಾ ಮಟ್ಟದಲ್ಲಿ ಕವಿಗೋಷ್ಠಿ ನಡೆದರೂ ಅನೇಕ ಯುವಕವಿಗಳು ಕವನ ವಾಚನ ಮಾಡಲು ಸಿದ್ಧರಿರುತ್ತಾರೆ. ಆದರೆ ಅವರು ಓದುವಂತಹ ಕವನಗಳು ಹೇಗಿರುತ್ತವೆ ? ಬಹಳಷ್ಟು ಕವನಗಳು ಬೀದಿ ಭಾಷಣಗಳಂತೆ ಕೇಳಿಸುವುದಿಲ್ಲವೆ ? ಹಿಂದೆ ಕನ್ನಡ ಸಾಹಿತ್ಯದಲ್ಲಿ ಬೂಸಾ ತುಂಬಿದೆಯೆಂದು ಬಸವಲಿಂಗಪ್ಪನವರು ಹೇಳಿದ ಹಾಗೆ. ಇಂದು ಬಂಡಾಯ ಸಾಹಿತ್ಯದಲ್ಲಿ ಬೋರುಹೊಡಿಸುವ ಒಣಭಾಷಣಗಳೇ ತುಂಬಿವೆಯೆಂದು ಓದುಗರು. ಕೇಳುಗರು ಆಡಿಕೊಳ್ಳುತ್ತಿರುವುದು ನಮಗೆ ಕೇಳುತ್ತಿಲ್ಲವೆ ? ನವೋದಯ-ನವ್ಯದವರನ್ನು ಟೀಕಿಸಿ ಮುಂದೆ ಬಂದ ನಾವು ಇಪ್ಪತ್ತೂರು ವರ್ಷ ಕಳೆದರೂ ಸಾಹಿತ್ಯದಲ್ಲಿ ಏನು ಸಾಧಿಸಿದ್ದೇವೆ ? ಅದೇ ಕಪ್ಪು-ಬಿಳಿಪಿನ ಚಿತ್ರಣಗಳು, ಅದೇ ಗೌಡ-ಕುಲಕರ್ಣಿಯರನ್ನು ಕತೆ-ಕಾದಂಬರಿಗಳಲ್ಲಿ ಬಯ್ಯುವ ಪ್ರಸಂಗಗಳು : ಈ ಕೆಲಸವನ್ನು ಇನ್ನೂ ಎಷ್ಟು ದಿವಸ ನಾವು ಮಾಡಲು ಸಾಧ್ಯ ? ನಮ್ಮ ಕಾವ್ಯ ಖಡ್ಗವಾಯಿತೇ ಹೊರತು ಜನರ ನೋವಿಗೆ ಮಿಡಿವ ಪ್ರಾಣಮಿತ್ರವಾಗಲಿಲ್ಲವೇಕೆ ? ನಾವು ರಚಿಸಿರುವ ಕೆಲವು ಹಾಡುಗಳು ಜಾತಾಗಳಲ್ಲಿ ಹಾಡಲು ಉಪಯೋಗವಾದವೇ ಹೊರತು. ಕುವೆಂಪು-ಬೇಂದ್ರೆಯವರ ಕವಿತೆಗಳಂತೆ ಜನಮನದಲ್ಲೇಕೆ ಉಳಿಯಲಿಲ್ಲ ? ವಚನಕಾರರನ್ನು. ಅನುಭಾವಿ ಕವಿಗಳನ್ನು ನಮ್ಮ ಪರಂಪರೆಯ ಭಾಗವೆಂದು ತಿಳಿದ ನಾವು ಅವರ ಕಾವ್ಯಸತ್ವಗಳನ್ನು. ಕಲಾತ್ಮಕತೆಯ ಸೂಕ್ಷ್ಮತೆಗಳನ್ನು ಏಕೆ ಪಡೆಯಲಿಲ್ಲ ?

ಬಂಡಾಯ ಚಳುವಳಿಯಲ್ಲಿ ನೇರವಾಗಿ ತೊಡಗಿಸಿಕೊಂಡ ಅನೇಕ ಕವಿಗಳು –ಲೇಖಕರು ಇಂದು ಸಾಹಿತ್ಯಕವಾಗಿ ತುಂಬಾ ನಿರಾಶೆಯನ್ನುಂಟುಮಾಡಿದ್ದಾರೆ.

ಬಂಡಾಯದಿಂದ ಒಂದಿಷ್ಟು ಅಂತರವನ್ನು ಕಾಯ್ದುಕೊಂಡ ತೇಜಸ್ವಿ, ದೇವನೂರ ಮಹಾದೇವ, ಶಿವಪ್ರಕಾಶರಂತಹ ಬೆರಳೆಣಿಕೆಯ ಲೇಖಕರು ಮಾತ್ರ ಇಂದು ಗಮನಸೆಳೆಯುತ್ತಿದ್ದಾರೆ. ಅಂದರೆ ಚಳುವಳಿಯಲ್ಲಿದ್ದುಕೊಂಡು ಒಳ್ಳೆಯ ಕೃತಿಗಳನ್ನು ಕೊಡಲು ಸಾಧ್ಯವಿಲ್ಲವೆ ? ನಿರಂಜನರಂತಹ ಲೇಖಕರು ತಾವು ನಂಬಿಕೊಂಡಿದ್ದ ರಾಜಕೀಯ ಪಕ್ಷದಿಂದ ಹೊರಬಂದ ನಂತರವೇ ಒಳ್ಳೆಯ ಕೃತಿಗಳನ್ನು ಕೊಟ್ಟರೆಂದು ಕೆಲವು ವಿಮರ್ಶಕರು ಹೇಳುತ್ತಾರೆ. ಇದು ಚಳುವಳಿಯನ್ನು ಸ್ಥಗಿತಗೊಳಿಸುವ ಉದ್ದೇಶವಾಗಿದೆಯೆ ? ಹನ್ನೆರಡನೇ ಶತಮಾನದಲ್ಲಿ ವಚನದ ಉತ್ತಮ ಮಾದರಿಗಳನ್ನು ಕೊಟ್ಟ ಅಲ್ಲಮಪ್ರಭು ಮತ್ತು ಅಕ್ಕಮಹಾದೇವಿ, ವಚನಚಳುವಳಿಯಲ್ಲಿ ನೇರವಾಗಿ ಭಾಗವಹಿಸದೆ ಒಂದಿಷ್ಟು ಅಂತರವನ್ನು ಕಾಯ್ದುಕೊಂಡಿದ್ದರೆಂದು ಹೇಳುತ್ತಾರೆ. ಹಾಗನ್ನುವದಾದರೆ ಚಳುವಳಿಯಲ್ಲಿ, ಸಂಘಟನೆಗಳಲ್ಲಿ ಭಾಗವಹಿಸುವವರಿಗೆ ಸೃಜನಶೀಲತೆಯ ಅಭಾವವಿರುತ್ತದೆಯೆ ? ಹಾಗಾದರೆ ಪಾಬ್ಲೊ ನೆರೂದನಂಥವರಿಗೆ, ಮಹಾರಾಷ್ಟ್ರದ ದಲಿತ ಪ್ಯಾಂಥರ್ಸ್ ಕವಿಗಳಿಗೆ ಒಳ್ಳೆಯ ಕೃತಿ ಕೊಡಲು, ತೀವ್ರತರವಾದ ಹೋರಾಟಮಾಡಲು ಹೇಗೆ ಸಾಧ್ಯವಾಯಿತು ? ದಕ್ಷಿಣಾಫ್ರಿಕಾದ ಕಪ್ಪು ಲೇಖಕರು ಇಂದು ಕೋವಿ ಹಿಡಿದುಕೊಂಡೇ ಕವಿತೆ ಬರೆಯುತ್ತಿದ್ದಾರೆ. ಅಂತಹ ಕವಿತೆಗಳು ನಮ್ಮಲ್ಲೇಕೆ ಹುಟ್ಟಲಿಲ್ಲ ? ಅಥವಾ ಅವರು ತೀವ್ರವಾದ ಸಂಕಟದಲ್ಲಿದ್ದುದರಿಂದಲೇ ಆ ಅನುಭವ ಗಾಢವಾಗಿ ಉತ್ತಮ ಕೃತಿಯಾಗಿ ಬರಲು ಕಾರಣವಾಯಿತೆ ? ಬಂಡಾಯದ ಮುಂಚೂಣಿಯಲ್ಲಿದ್ದವರೆಂದು ಕರೆಯಿಸಿಕೊಳ್ಳುವ ನಾವೆಲ್ಲಾ ಉತ್ತಮ ಹುದ್ದೆಗಳಲ್ಲಿ, ವಿವಿಧ ಅಧಿಕಾರಗಳಲ್ಲಿ ಇರುವುದರಿಂದ ಈಗ ಸ್ವಲ್ಪ ಮಟ್ಟಿನ ಸುಖದಲ್ಲಿದ್ದು ನಮ್ಮ ಬಾಲ್ಯದ ಸಂಕಟಗಳನ್ನು ಮೆಲುಕು ಹಾಕುತ್ತಿದ್ದೇವೆಯೆ ? ಇಂತಹ ಅನೇಕ ಪ್ರಶ್ನೆಗಳನ್ನು ಕೇಳಿಕೊಳ್ಳುವುದು ಈಗ ಅನಿವಾರ್ಯವಾಗಿದೆಯೆಂದೆನಿಸುತ್ತದೆ.

ಇದೀಗ ಸಣ್ಣಕತೆ ಕ್ಷೇತ್ರದಲ್ಲಿ ಹೆಸರು ಮಾಡಿದ ನಮ್ಮ ಕೆಲವು ಯುವ ಬರಹಗಾರರು ಬಂಡಾಯದ ಮಾದರಿಗಳನ್ನು ತಿರಸ್ಕರಿಸುತ್ತಲೇ ಬರವಣಿಗೆ ಪ್ರಾರಂಭಿಸಿದ್ದಾರೆ. ಈ ಯುವ ಲೇಖಕರಿಗೆ ಬಂಡಾಯದ ಹಿರಿಯ ಲೇಖಕರು ಮಾಡೆಲ್ ಆಗುವುದಕ್ಕಿಂತ, ಚದುರಂಗ, ತೇಜಸ್ವಿಯಂತಹ ಲೇಖಕರು ಮುಖ್ಯರಾಗುತ್ತಾರೆ.

ಇಡೀ ಕನ್ನಡ ಸಾಹಿತ್ಯ ಸಂದರ್ಭದಲ್ಲಿ, ಬಂಡಾಯದ ಸಂದರ್ಭದಲ್ಲಿ ಬಂದಿರುವಷ್ಟು ಅಧಿಕ ಸಂಖ್ಯೆಯಲ್ಲಿಯ ಕವನ ಸಂಕಲನಗಳು ಉಳಿದಿನ್ನಾವ ಸಂದರ್ಭದಲ್ಲಿಯೂ ಬಂದಿರುವುದಿಲ್ಲ. ಅಂದರೆ ಸಂಖ್ಯೆಯ ದೃಷ್ಟಿಯಿಂದ ವಿಪುಲವಾಗಿರುವ ಈ ಕೃತಿಗಳು ಸತ್ವದ ದೃಷ್ಟಿಯಿಂದ ಏನಾಗಿವೆ ? "ಕಾವ್ಯಬಂತು ಬೀದಿಗೆ" ಎಂದು ನಾವು ಹೇಳಿಕೊಂಡಂತೆ ಇಂದು ಹೆಚ್ಚಿನ ಸಂಖ್ಯೆಯ ನಮ್ಮ ಪುಸ್ತಕಗಳು ಬೀದಿಬದಿಯ ರದ್ದಿಯಂಗಡಿಗಳಲ್ಲಿ ಬಿದ್ದಿರುತ್ತವೆ. ಬೆರಳೆಣಿಕೆಯಷ್ಟು ನಾಟಕ ಕೃತಿಗಳನ್ನು ಬಿಟ್ಟರೆ ನಮ್ಮಲ್ಲಿ ಮಹತ್ವದ ನಾಟಕಗಳೇ ಇದುವರೆಗೆ ಬಂದಿಲ್ಲ.

ಒಂದು ಉತ್ತಮ ನಾಟಕ ಬೇಕಾದರೆ ಮತ್ತೆ ನಾವು ಕಾರ್ನಾಡರ ಹತ್ತಿರವೋ, ಕಂಬಾರರ ಹತ್ತಿರವೋ ಹೋಗಬೇಕು ! ಸ್ಯಾಟ್‌ಲೈಟ್ ಚಾನೆಲ್‌ಗಳ ಹಾವಳಿಯಲ್ಲಿ ನಮ್ಮ ಬೀದಿ ನಾಟಕಗಳು ಬಯಲಿಗೆ ಬಾರದಂತಾಗಿವೆ.

ಓದಬಹುದೆಂದೆನಿಸುವ ಬೆರಳೆಣಿಕೆಯಷ್ಟು ಕಾದಂಬರಿಗಳನ್ನು ಬಿಟ್ಟರೆ, ಬಂಡಾಯದಲ್ಲಿ ಉತ್ತಮ ಕಾದಂಬರಿಗಳೆಲ್ಲಿವೆ ? ಪ್ರಗತಿಶೀಲ ಚಳುವಳಿಯಲ್ಲಿದ್ದು, ಅದಾದ ಎಷ್ಟೋ ವರ್ಷಗಳ ನಂತರ ಬರೆದ ಚದುರಂಗರ 'ವೈಶಾಖ' ಮತ್ತು ಬಲ್ಲಾಳರ 'ಬಂಡಾಯ' ನಮ್ಮ ಯುವ ಬರಹಗಾರರನ್ನು ಆಕರ್ಷಿಸಿದಂತೆ ಬಂಡಾಯದ ಮುಖ್ಯ ಕಾದಂಬರಿಕಾರರ ಕೃತಿಗಳು ಏಕೆ ಪ್ರಭಾವವನ್ನುಂಟುಮಾಡಿಲ್ಲ ? ಒಂದು ಕೃತಿ ಪ್ರಶಸ್ತಿ – ಪುರಸ್ಕಾರ ಪಡೆಯುವುದು, ಪಠ್ಯವಾಗುವುದು, ಚಲನಚಿತ್ರವಾಗುವುದು ಬೇರೆ ವಿಷಯ; ಜನಮನವನ್ನು ತಲುಪುವುದು, ಓದುಗರಲ್ಲಿ ತೀವ್ರತರವಾದ ಪರಿಣಾಮವನ್ನುಂಟುಮಾಡುವುದು ಬೇರೆ ವಿಷಯ. ಬಂಡಾಯದ ಅನೇಕ ಕೃತಿಗಳಿಗೆ ಪ್ರಶಸ್ತಿ - ಪುರಸ್ಕಾರಗಳು ಬಂದಿರಬಹುದು. ಆದರೆ ಅವು ಜನಮನವನ್ನು ತಲುಪಿವೆಯೆ ? ಹೊಸ ಪ್ರೇರಣೆಗಳನ್ನು ನೀಡಿವೆಯೆ ? ಮಹಾಕಾವ್ಯ, ಮಹಾಕೃತಿ, ಮಹಾಕವಿ ಪರಂಪರೆಯನ್ನು ನಾವು ಒಪ್ಪದಿದ್ದರೂ, ಅನುಭವ ಕೃತಿಯಾಗುವುದನ್ನು ಹಾಗೂ ಕಲೆಯಾಗುವುದನ್ನಾದರೂ ನಾವು ಒಪ್ಪಬೇಕಲ್ಲವೆ ?

೧೯೯೦ ರಲ್ಲಿ ಹುಬ್ಬಳ್ಳಿಯಲ್ಲಿ ೫೯ ನೇ ಅಖಿಲಭಾರತ ಸಾಹಿತ್ಯ ಸಮ್ಮೇಳನ ನಡೆದಾಗ, ಬಂಡಾಯದ ಪ್ರಮುಖರೆಲ್ಲಾ ಉತ್ಸಾಹದಿಂದ ಭಾಗವಹಿಸಿದ್ದು, ಅದೇ ಸಂದರ್ಭದಲ್ಲಿ ಬೆಂಗಳೂರಲ್ಲಿ ಪರ್ಯಾಯ ಸಾಹಿತ್ಯ ಸಮಾವೇಶವೊಂದು ನಡೆದದ್ದು ನೆನಪಿರಬಹುದು. ಬೆಂಗಳೂರು ಸಮಾವೇಶದಲ್ಲಿ, ಸಾಹಿತ್ಯದಲ್ಲಿ ಶ್ರೇಷ್ಠತೆಯ ವಿಷಯದ ಬಗೆಗೆ ಚರ್ಚೆನಡೆಯಿತು. ಆಗಲಾದರೂ ನಾವು ಗಮನ ಕೊಡಲಿಲ್ಲ. ಶ್ರೇಷ್ಠತೆಯು ವ್ಯಸನವೆಂದು ಗೇಲಿ ಮಾಡಿದೆವು; ಸಾಹಿತ್ಯದಲ್ಲಿ ಶ್ರೇಷ್ಠತೆಯನ್ನು ಕುರಿತು ಚರ್ಚಿಸುವವರನ್ನು ತಿರಸ್ಕಾರದಿಂದ ನೋಡಿದೆವು. ಶ್ರೇಷ್ಠತೆ, ಅನನ್ಯತೆಯೆಂಬುದು ಬೇರೆ ಬೇರೆ ಸಮುದಾಯದ ಬೇರೆ ಬೇರೆ ಟೇಸ್ಟ್‌ಗಳು ನಿಜ. ಹಾಗೆಂದು ನಾವು ಸಾಹಿತ್ಯಕೃತಿಗಳಲ್ಲಿ ವರದಿಗಳನ್ನು, ಭಾಷಣಗಳನ್ನು ನೀಡುತ್ತಾ ಹೋಗುವುದು ಸರಿಯೆ ? ಈ ಬಗೆಗೆ ನಮ್ಮ ಯುವಕರನ್ನು ಕೂಡಿಸಿಕೊಂಡು ನಾವು ಈ ಒಂದು ದಶಕದಿಂದೀಚೆಗೆ ಕಮ್ಮಟಗಳನ್ನು ನಡೆಸಿಲ್ಲ, ಸಮ್ಮೇಳನಗಳು ಸರಿಯಾಗಿ ನಡೆದಿಲ್ಲ. ನಾವೇ ಒಂದು ಕಡೆ ಕುಳಿತು ನಾವು ನಡೆದುಬಂದ ಹಿಂದಿನ ದಾರಿಯನ್ನು ನೋಡುವುದಾಗಿಲ್ಲ. ನಾವು ರಚಿಸಿರುವ ಕೃತಿಗಳಲ್ಲಿ ಸತ್ವವೆಷ್ಟು ? ಸಪ್ಪಳವೆಷ್ಟು ? ಎಂಬುದನ್ನು ತೆರೆದ ಮನದಿಂದ ಚರ್ಚಿಸಿಲ್ಲ.

### ಸಂಘಟನೆಯ ಸಾಧ್ಯತೆ ಮಿತಿಗಳು :

ಬಂಡಾಯ ಸಂಘಟನೆಯ ಪ್ರತಿಫಲಗಳೇನು ? ಸಾಹಿತ್ಯದ ಸಾಧ್ಯತೆಗಳೇನು ? ಎಂದು ಈಗಲೇ ಲೆಕ್ಕ ಹಾಕಲಿಕ್ಕಾಗುವುದಿಲ್ಲ. ಏಕೆಂದರೆ ಈ ಚಳುವಳಿ ಇನ್ನೂ

ನಿಂತಿಲ್ಲ. ಇಲ್ಲಿಯ ಲೇಖಕರು ಇನ್ನೂ ಬರೆಯುತ್ತಿದ್ದಾರೆ. ಆದರೆ ಸಂಘಟನೆಯ ಸಪ್ಪಳ ಕಡಿಮೆಯಾಗಿದೆ. ಹಾಗೆಂದರೆ ಸಾಹಿತ್ಯದಲ್ಲಿ ಸೂಕ್ಷ್ಮತೆ ಬರತೊಡಗಿದೆಯೆ ? ಹೀಗೆಂದಾಕ್ಷಣ ಸಂಘಟನೆ ಸೋತಂತೆಲ್ಲಾ, ಸಾಹಿತ್ಯ ಬೆಳೆಯುತ್ತದೆಂದು ಅರ್ಥವಲ್ಲ. ಆದರೆ ಪ್ರಗತಿಶೀಲ ಚಳುವಳಿ ಸ್ಥಗಿತಗೊಂಡ ಎಷ್ಟೋ ವರ್ಷಗಳ ನಂತರ ಆ ಸಂಘಟನೆಯಲ್ಲಿ ಬೆಳೆದುಬಂದ ಕೆಲವು ಲೇಖಕರು ಉತ್ತಮ ಕೃತಿಗಳನ್ನು ಕೊಟ್ಟರು.

ಬಂಡಾಯ ಸಂಘಟನೆಗೆ ಸಾಧ್ಯತೆ – ಮಿತಿಗಳಿರುವಂತೆ, ಬಂಡಾಯ ಸಾಹಿತ್ಯಕ್ಕೂ ಸಾಧ್ಯತೆ – ಮಿತಿಗಳಿವೆ. ಕೆಲವು ಸಾಧ್ಯತೆಗಳನ್ನಿಲ್ಲಿ ಗಮನಿಸಿದರೆ ಬಂಡಾಯದ ಬೆಳವಣಿಗೆ ಸ್ಪಷ್ಟವಾಗುತ್ತದೆ. ವಸ್ತು, ಆಶಯ, ಧೋರಣೆಯ ಹಂತದಲ್ಲಿ ಬಂಡಾಯ ಸಾಹಿತ್ಯ ತನ್ನ ಹಿಂದಿನ ನವ್ಯ ಸಾಹಿತ್ಯದಿಂದಾಗಲಿ, ಇಲ್ಲವೆ ವಿದೇಶೀ ಸಾಹಿತ್ಯದಿಂದಾಗಲಿ ನೇರವಾದ ಪ್ರೇರಣೆಯನ್ನು ಪಡೆಯಲಿಲ್ಲ. ಈ ಮಣ್ಣಿನ ಅನಿವಾರ್ಯತೆಯಾಗಿ ಬಂಡಾಯ ಚಳುವಳಿ ಹುಟ್ಟಿಬಂದದ್ದು ಬಹುಮುಖ್ಯವಾದ ಸಂಗತಿಯಾಗುತ್ತದೆ. ನವವಸಾಹತುಶಾಹಿಯ ಆಕ್ರಮಣದ ಈ ಸಂದರ್ಭದಲ್ಲಿ ದೇಶೀಯ ನೆಲೆಯಲ್ಲಿಯೇ ಬೆಳೆದುಬಂದ ಬಂಡಾಯ ಚಳುವಳಿ ಹೆಚ್ಚು ಗಮನ ಸೆಳೆಯುತ್ತದೆ. ಸಿದ್ಧಾಂತಗಳ ಆಯ್ಕೆಯ ಪ್ರಕ್ರಿಯೆಯಲ್ಲಿಯೂ ಬಂಡಾಯ ಚಳುವಳಿ ಮಹತ್ವದ ಮಾದರಿಯಾಗಿದೆ. ಈ ಮೊದಲೇ ಹೇಳಿದಂತೆ ಮಾರ್ಕ್ಸ್ ಮತ್ತು ಲೋಹಿಯಾ – ಅಂಬೇಡ್ಕರ್ ಅವರನ್ನು ಒಟ್ಟಾಗಿ ಸ್ವೀಕರಿಸಿದ ಹಿನ್ನಲೆಯಲ್ಲಿಯೇ ಇದರ ಆದರ್ಶವಿದೆ.

ಬಂಡಾಯ ಸಂಘಟನೆ ನಡೆಸಿದ ಅನೇಕ ಜನಪರ ಹೋರಾಟಗಳನ್ನು ಮರೆಯುವಂತಿಲ್ಲ. ದಲಿತರ ಮೇಲೆ, ದುಡಿವ ವರ್ಗದವರ ಮೇಲೆ ಹಲ್ಲೆ ಅತ್ಯಾಚಾರಗಳಾದಾಗ; ಮೌಢ್ಯತೆ-ಸಂಪ್ರದಾಯಗಳ ಹೆಸರಿನಲ್ಲಿ ಅನಾಚಾರಗಳು ನಡೆದಾಗ ಬಂಡಾಯ ಸಂಘಟನೆ ಜನಪರ ಸಂಘಟನೆಗಳೊಡಗೂಡಿ ಮಹತ್ವದ ನಿರ್ಣಯಗಳನ್ನು ತೆಗೆದುಕೊಂಡಿದೆ. ಈ ಚಳುವಳಿಯಲ್ಲಿ ತೊಡಗಿಸಿಕೊಂಡ ಲೇಖಕರು ತಾವು ಹುಟ್ಟಿಬಂದ ಜಾತಿ-ಜನಾಂಗದ ಮೌಢ್ಯತೆ, ಅಸಮಾನತೆಯ ಬಗೆಗೆ ಮೊದಲು ಬಂಡಾಯವೆದ್ದಿದ್ದಾರೆ. ತನ್ನ ಜನಾಂಗದ ದೋಷಗಳನ್ನು ತಿಳಿದುಕೊಂಡಾಗ, ತನ್ನ ವ್ಯವಸ್ಥೆಯ ಮಿತಿಗಳನ್ನರಿತುಕೊಂಡಾಗ ನಿಜವಾದ ಬಂಡಾಯ ಹುಟ್ಟಿಕೊಳ್ಳಲು ಸಾಧ್ಯವಾಗುತ್ತದೆ. ಈ ಹಿನ್ನೆಲೆಯಲ್ಲಿ ಈ ಸಂಘಟನೆಯ ಲೇಖಕರು ಗಮನ ಸೆಳೆದಿದ್ದಾರೆ.

ಕುದರಿಮೋತಿ ಪ್ರಕರಣದಲ್ಲಿ ಒಬ್ಬ ವೀರಶೈವ ಮಠಾಧೀಶ ಅನ್ಯಾಯ-ಅತ್ಯಾಚಾರ ಮಾಡಿದಾಗ ಈ ಪ್ರಕರಣವನ್ನು ಬಯಲಿಗೆಳೆದು ಹೋರಾಟ ಪ್ರಾರಂಭಿಸಿದವರು ಈ ಸಂಘಟನೆಯಲ್ಲಿರುವ ವೀರಶೈವ ಪರಂಪರೆಯ ಲೇಖಕರು ಎಂಬುದನ್ನು ಮರೆಯಬಾರದು. ಅಲ್ಲಮಪ್ರಭು ಬೆಟ್ಟದೂರು, ಎಸ್. ಜಿ. ಸ್ವಾಮಿ, ಚಂಪಾ, ರಾಜಶೇಖರ ನೀರಮಾನ್ವಿ, ಬಸವರಾಜ ಸಬರದರಂತಹ ಲೇಖಕರು ಕುದುರಿಮೋತಿ ಸ್ವಾಮಿಯ ಅನ್ಯಾಯವನ್ನು ಬಯಲಿಗೆಳೆದದ್ದು, ಪಟ್ಟಭದ್ರ

ಲಿಂಗಾಯತ ಜಗದ್ಗುರುಗಳನ್ನು ಇವರು ನೇರವಾಗಿ ವಿರೋಧಿಸಿದ್ದು ಬಹುಮುಖ್ಯ ಸಂಗತಿಯಾಗುತ್ತದೆ. ಇದೇ ರೀತಿ ಬ್ರಾಹ್ಮಣ ಜನಾಂಗದಿಂದ ಹುಟ್ಟಿಬಂದ ಸತೀಶ ಕುಲಕರ್ಣಿ, ಜಿ. ಎಚ್. ರಾಘವೇಂದ್ರ, ರವಿ ಬೆಳಗೆರೆಯಂತಹ ಬಂಡಾಯ ಲೇಖಕರು ವೈದಿಕರ ಕರ್ಮಠತನವನ್ನು ಗೇಲಿಮಾಡಿದ್ದು, ಚಾತುರ್ವರ್ಣ ವ್ಯವಸ್ಥೆಯ ಹುನ್ನಾರಗಳನ್ನು ಬಯಲಿಗೆಳೆದದ್ದು ಮುಖ್ಯವಾಗುತ್ತದೆ. ಸಾರಾ ಅಬೂಬಕರ್, ಬಾನು ಮುಸ್ತಾಕರಂತಹ ಮುಸ್ಲೀಂ ಲೇಖಕಿಯರು ಆ ಜನಾಂಗದ ಮುಲ್ಲಾಗಳ ಕ್ರೌರ್ಯದ ವಿರುದ್ಧ, ಮುಸ್ಲೀಂರ ಮೌಢ್ಯತೆಯ ವಿರುದ್ಧ ದನಿಯೆತ್ತಿದ್ದನ್ನು. ಆ ಜನಾಂಗದ ಪಟ್ಟಭದ್ರರಿಂದ ತೊಂದರೆಗೊಳಗಾದದ್ದನ್ನು ಮರೆಯುವಂತಿಲ್ಲ. ಇದೇ ರೀತಿ ದಲಿತ ಹಾಗೂ ಹಿಂದುಳಿದ ವರ್ಗಗಳಿಂದ ಬಂದ ಲೇಖಕರು ದೇವದಾಸಿ ವಿರುದ್ಧ, ಬೆತ್ತಲೆ ಪೂಜೆ ವಿರುದ್ಧ ಹೋರಾಟ ಹುಟ್ಟಹಾಕಿದ್ದನ್ನು, ದಲಿತರ ಶೋಷಣೆಗೆ ದಲಿತೇತರರು ಕಾರಣರಾಗಿರುವಂತೆ ದಲಿತರೂ ಕಾರಣರಾಗಿದ್ದಾರೆಂದು ತಿಳಿಸಿದ್ದನ್ನು ಅಲ್ಲಗಳೆಯುವಂತಿಲ್ಲ. ಹೀಗೆ, ಬಂಡಾಯ ಮೊದಲು ತನ್ನ ಹಾಗೂ ತಾನು ಹುಟ್ಟಿಬಂದ ಜನಾಂಗದ ಮಿತಿಗಳ ವಿರುದ್ಧ ಪ್ರಾರಂಭವಾಗಿ, ನಂತರ ಅಸಮಾನತೆಯ ವ್ಯವಸ್ಥೆಯ ವಿರುದ್ಧ ವ್ಯಾಪಿಸಿದ್ದು ಉಲ್ಲೇಖನೀಯವಾಗುತ್ತದೆ.

ಹೀಗೆ ಬಂಡಾಯ ಸಂಘಟನೆಯ ಮೂಲಕ ಅನೇಕ ಹೋರಾಟಗಳು ನಡೆದಿವೆ. ಬೆಂಡಿಗೇರಿ ಪ್ರಕರಣ, ಕುದರಿಮೋತಿ ಪ್ರಕರಣ, ಚಂದ್ರಗುತ್ತಿ ಪ್ರಕರಣದಂತಹ ಅನೇಕ ದೌರ್ಜನ್ಯಗಳ ವಿರುದ್ಧ ಸಂಘಟನೆ ಹೋರಾಡಿದೆ. ನಾಡು-ನುಡಿಗೆ ಸಂಬಂಧಿಸಿದಂತೆ ಬಂಡಾಯ ಲೇಖಕರು ಚಳುವಳಿ ನಡೆಸಿದ್ದಾರೆ. ಗೋಕಾಕ ವರದಿಯ ಸಂದರ್ಭವಾಗಿರಬಹುದು, ಕಾವೇರಿ ನೀರಿನ ಸಮಸ್ಯೆಯಾಗಿರಬಹುದು, ಹೀಗೆ ನೆಲ-ಜಲಗಳ ಸಮಸ್ಯೆ ಬಂದಾಗಲೆಲ್ಲ ಬಂಡಾಯ ಲೇಖಕರು ತೀವ್ರವಾದ ಹೋರಾಟಗಳನ್ನು ಹುಟ್ಟುಹಾಕಿದ್ದಾರೆ. ಗೋಕಾಕ ವರದಿ ಜಾರಿಗೆ ಸಂದರ್ಭದಲ್ಲಿ ಜೇಲಿಗೂ ಹೋಗಿಬಂದಿದ್ದಾರೆ. ಕರ್ನಾಟಕದಲ್ಲಿ ಅರ್ಥಪೂರ್ಣವಾದ ಸಾಂಸ್ಕೃತಿಕ ವಾತಾವರಣವನ್ನು ಹುಟ್ಟುಹಾಕುವಲ್ಲಿ ಪ್ರಯತ್ನಿಸಿದ್ದಾರೆ.

ಬಂಡಾಯ ಸಂಘಟನೆ ಸಾಹಿತ್ಯವಲಯದಲ್ಲಿ ಹೆಚ್ಚಿನ ಜಾಗೃತಿಯನ್ನು ಉಂಟುಮಾಡಿದೆ. ಇದುವರೆಗೆ ಸಾಹಿತ್ಯವಲಯದಲ್ಲಿದ್ದ ಹೀರೋ ವರ್ಷಿಪ್‌ನ್ನು ಕಿತ್ತೊಗೆದ ಸಂಘಟನೆ, ಲೇಖಕರಲ್ಲಿ ಮಹಾ, ಅತಿಮಹಾ ಎಂಬಂತಹ ಭೇದ ಸಲ್ಲದೆಂದು ಸ್ಪಷ್ಟಪಡಿಸಿದೆ. ಸಾಹಿತ್ಯ ಪರಿಷತ್ತಿನ ಸಮ್ಮೇಳನಗಳಲ್ಲಿ ಅಧ್ಯಕ್ಷರ ಮೆರವಣಿಗೆ ನಡೆದು ಆ ಅಧ್ಯಕ್ಷರು ಸರ್ವಾಧ್ಯಕ್ಷರ ರೀತಿಯಲ್ಲಿ ವರ್ತಿಸುತ್ತಿದ್ದ ಸಂದರ್ಭದಲ್ಲೇ. ಅನೇಕ ಬಂಡಾಯ ಸಮ್ಮೇಳನಗಳೂ ನಡೆದಿವೆ. ಇಲ್ಲಿ ಸಮ್ಮೇಳನಾಧ್ಯಕ್ಷರಿಲ್ಲ, ಅಧ್ಯಕ್ಷರ ಮೆರವಣಿಗೆಯಿಲ್ಲ. ನವೋದಯ – ನವ್ಯಪರಂಪರೆಯಲ್ಲಿ ಕಾಣುವ ಜಗದ್ಗುರುಗಳಂತೆ, ಬಂಡಾಯ ಪರಂಪರೆಯಲ್ಲಿ ಜಗದ್ಗುರುವಿಗೆ ಸ್ಥಾನವಿಲ್ಲ. ಇಲ್ಲಿ ಎಲ್ಲರೂ ಸಮಾನರು. ಇಂದು ನಡೆಯುತ್ತಿರುವ ಕವಿಗೋಷ್ಠಿಗಳಲ್ಲಿ ಅನೇಕ ಯುವಕ-ಯುವತಿಯರು ಧೈರ್ಯದಿಂದ ಭಾಗವಹಿಸಿ

ತಮ್ಮ ಕವನಗಳನ್ನು ಅಭಿವ್ಯಕ್ತಿಸುತ್ತಿದ್ದಾರೆ. ಇದಕ್ಕೆ ಸಂಘಟನೆ ಹುಟ್ಟುಹಾಕಿದ Awareness ಬಹುಮುಖ್ಯ ಕಾರಣವಾಗಿವೆ. ಸಾಹಿತ್ಯವನ್ನು ಸಮುದಾಯಕ್ಕೆ ಮುಟ್ಟಿಸಿ, ಸಮುದಾಯದಲ್ಲಿರುವ ಜನರೂ ಸಾಹಿತ್ಯ ರಚಿಸಬಲ್ಲರೆಂಬುದನ್ನು ಬಂಡಾಯ ಚಳುವಳಿ ತೋರಿಸಿಕೊಟ್ಟಿದೆ.

ಬಂಡಾಯ ಚಳುವಳಿ ಅನೇಕ ಬಂಡಾಯೇತರ ಸಾಹಿತಿಗಳ ಮೇಲೆಯೂ ದಟ್ಟ ಪ್ರಭಾವವನ್ನುಂಟುಮಾಡಿದೆ. ನವೋದಯ– ನವ್ಯಸಂದರ್ಭಗಳಲ್ಲಿ ಬರೆಯುತ್ತಿದ್ದ ಜಿ. ಎಸ್. ಶಿವರುದ್ರಪ್ಪ. ಗೋಪಾಲಕೃಷ್ಣ ಅಡಿಗರಂತಹ ಕವಿಗಳು, ಚದುರಂಗ, ಬಲ್ಲಾಳರಂತಹ ಕಾದಂಬರಿಕಾರರು ಬಂಡಾಯದಿಂದ ಪ್ರಭಾವಗೊಂಡಿದ್ದಾರೆ. "ಗುರುವಿನ ಗುಲಾಮನಾಗುವತನಕ ದೊರೆಯದಣ್ಣ ಮುಕುತಿ" ಎಂದು ಸಾರುತ್ತಿದ್ದ ನಾಡಿನಲ್ಲಿ ಬಂಡಾಯದ ಪ್ರಭಾವದಿಂದ ಎಚ್ಚೆತ್ತ ಅಡಿಗರು ತಮ್ಮ ಜೀವನದ ಕಡೆಯ ಗಳಿಗೆಯಲ್ಲಿ ಒಂದು ಮಹತ್ವದ ಪದ್ಯಬರೆದಿದ್ದಾರೆ. ಆ ಪದ್ಯದ ಎರಡು ಸಾಲು ಹೀಗಿವೆ– "ಗುರುವಿನ ಸಮಾನನಾಗುವ ತನಕ ದೊರೆಯದಣ್ಣ ಶಾಂತಿ." ಅನೇಕ ರಾಜ್ಯಮಟ್ಟದ, ಜಿಲ್ಲಾ ಮಟ್ಟದ ಬಂಡಾಯ ಸಾಹಿತ್ಯ ಸಮ್ಮೇಳನಗಳನ್ನು, ಸಮಾವೇಶಗಳನ್ನು ನಡೆಸುವುದರ ಮೂಲಕ ಬಂಡಾಯ ಸಂಘಟನೆ ಈ ಎರಡು ದಶಕಗಳ ಅವಧಿಯಲ್ಲಿ, ಸಾಹಿತ್ಯಿಕ ವಲಯದಲ್ಲಿ ಹೆಚ್ಚಿನ ಅವೇರನೆಸ್‌ನ್ನು ಉಂಟುಮಾಡಿದೆ. ಇಷ್ಟೆಲ್ಲಾ ಶಕ್ತಿ-ಸಾಧ್ಯತೆಗಳನ್ನೊಳಗೊಂಡ ಬಂಡಾಯ ಚಳುವಳಿ ಇಂದೇಕೆ ನಿಸ್ತೇಜವಾಗತೊಡಗಿದೆ ? ಎಂದು ಆತ್ಮಾವಲೋಕನ ಮಾಡಿಕೊಂಡಾಗ ಆ ಸಂಘಟನೆಯಲ್ಲಿದ್ದ ಬಿರುಕುಗಳು ಮತ್ತು ಆ ಸಾಹಿತ್ಯದ ಮಿತಿಗಳು ಸ್ಪಷ್ಟವಾಗುತ್ತವೆ.

ಪ್ರಾರಂಭದಲ್ಲಿ ಮಾರ್ಕ್ಸ್‌ವಾದಿ ಲೇಖಕರು, ಲೋಹಿಯಾ ಹಾಗೂ ಅಂಬೇಡಕರ್‌ವಾದಿ ಲೇಖಕರು ಪರಸ್ಪರ ತೋರಿದ ಸೌಹಾರ್ದತೆ ಹಾಗೂ ಸಮನ್ವಯ ಹೊಂದಾಣಿಕೆ ಮುಂದಿನ ವರ್ಷಗಳಲ್ಲಿ ಉಳಿಯಲಿಲ್ಲ. ಈ ಮೊದಲೇ ತಿಳಿಸಿದಂತೆ ಬಂಡಾಯದ ದಲಿತೇತರ ಲೇಖಕರನ್ನು ಗುಮಾನಿಯಿಂದ ನೋಡಿದ ದಲಿತ ಸಂಘಟಕರು ಪ್ರತ್ಯೇಕವಾಗಿ ಉಳಿಯಲೆತ್ನಿಸಿ 'ದಲಿತ ಲೇಖಕರ ಬಳಗ', 'ದಲಿತ ಸಾಹಿತ್ಯ ಪರಿಷತ್' ಗಳಂತಹ ಪ್ರತ್ಯೇಕ ಸಂಘಟನೆಗಳನ್ನು ಕಟ್ಟಿಕೊಂಡರು. ದಲಿತರಿಗಾಗಿ, ದಲಿತರಿಂದಲೇ ಹುಟ್ಟಿದ ದಲಿತ ಸಂಘಟನೆಯೇ ಎರಡು ಹೋಳಾಗಿ ಹೋದಮೇಲೆ, 'ಬಂಡಾಯ' ಸಂಘಟನೆಯಲ್ಲಿದ್ದ ದಲಿತರು ಪ್ರತ್ಯೇಕವಾದದ್ದು ಆಶ್ಚರ್ಯದ ಸಂಗತಿಯಲ್ಲ. ಹೀಗೆ ದಲಿತರು ಬಂಡಾಯ ಸಂಘಟನೆಯಿಂದ ದೂರವಾದಂತೆಲ್ಲಾ ಬಂಡಾಯದ ಹೋರಾಟದ ಕಾವು ಕಡಿಮೆಯಾಗತೊಡಗಿತು.

ಇದೇ ರೀತಿ ಸಂಘಟನೆಯಲ್ಲಾದ ಮತ್ತೊಂದು ಬಿರುಕೆಂದರೆ ಹಿಂದುಳಿದ ವರ್ಗಗಳಿಂದ ಬಂದ ಸಂಘಟಕರು ಹುಟ್ಟುಹಾಕಿದ ಸಮಸ್ಯೆ. ಜಾತ್ಯಾತೀತ ಹೋರಾಟದಲ್ಲಿ ನಂಬುಗೆಯಿಟ್ಟು ಬಂಡಾಯದ ಬೆನ್ನೆಲುಬಾಗಿದ್ದ ಹಿಂದುಳಿದವರ್ಗದ ಕೆಲವು ಪ್ರಮುಖ ಬಂಡಾಯಗಾರರು ಯಥೇಚ್ಛವಾಗಿ ತಮ್ಮ ತಮ್ಮ ಜಾತಿ

ಸಮ್ಮೇಳನಗಳನ್ನು ಸಂಘಟಿಸತೊಡಗಿದರು. ಕೆಲವರು ರಾಜಕೀಯ ಲಾಭಕ್ಕಾಗಿ ತಮ್ಮ ಜಾತಿ ಜನರನ್ನು ಎತ್ತಿಕಟ್ಟಿ ಅನೇಕ ಗೊಂದಲಗಳನ್ನು ಹುಟ್ಟಿಸಿದರು. ಕೆಲವರು ವೇದಿಕೆಯಲ್ಲಿ ಮಾರ್ಕ್ಸ್‌ವಾದ ಹೇಳುತ್ತಲೇ ಒಳಗೊಳಗೇ ತಮ್ಮ ತಮ್ಮ ಜಾತಿಸಂಘಟನೆಗಳ ಪದಾಧಿಕಾರಿಗಳಾಗಿ ಕೆಲಸ ಮಾಡಿದರು. ಬಂಡಾಯದಲ್ಲಿರುವ ಇಂತಹ ಜಾತಿವಾದಿಗಳನ್ನು ಸೂಕ್ಷ್ಮವಾಗಿ ಗಮನಿಸಿದ ಜನರು ಬಂಡಾಯದ ಬಗೆಗೆ ಜಿಗುಪ್ಸೆ ತಾಳಿದರು.

ಬಂಡಾಯ ಸಂಘಟನೆಯ ಮೂಲಕವೇ ಬೆಳೆದುಬಂದ ಮಹಿಳೆಯರು ಪ್ರಾರಂಭದಲ್ಲಿ ಬಂಡಾಯದ ಚಟುವಟಿಕೆಗಳಲ್ಲಿ ತೀವ್ರವಾಗಿ ತೊಡಗಿಸಿಕೊಂಡಿದ್ದರು. ನಂತರದ ವರ್ಷಗಳಲ್ಲಿ ಅವರೂ ಸ್ತ್ರೀವಾದಿ ಸಂಘಟನೆಗಳನ್ನು ಪ್ರತ್ಯೇಕವಾಗಿ ಕಟ್ಟಿಕೊಂಡು ಬಂಡಾಯದಿಂದ ದೂರಸರಿದರು. ಸಂಘಟನೆಯಲ್ಲಿದ್ದ ಪ್ರಮುಖ ಧಾರೆಗಳೇ ಹೀಗೆ ತಮ್ಮ ತಮ್ಮ ಹಿತಾಸಕ್ತಿಗಾಗಿ ಬೇರೆಯಾದಾಗ ಸಂಘಟನೆ ಹೇಗೆ ಕ್ರಿಯಾಶೀಲವಾಗುತ್ತದೆ ?

ಘಾನಾದ ಅಮಾ ಅತಾಐಡೂ ಎಂಬ ಕತೆಗಾರ್ತಿ, ದಕ್ಷಿಣ ಆಫ್ರಿಕಾದ ಅಬ್ರಾಹಂ ಎಂಬ ಕಾದಂಬರಿಕಾರ, ನೈಜೀರಿಯಾದ ಅಲೋಕೋ, ಸೆನೆಗಲ್‌ನ ಡೇವಿಡ್ ಯೋಪ್, ಕ್ಯೂಬಾದ ನಿಕೋಲಸ್ ಗ್ಯುಲೆನ್, ಚಿಲಿಯ ನೆರೂಡಾ, ಲ್ಯಾಟಿನ್ ಅಮೇರಿಕಾದ ಗೆರಿಲ್ಲಾ ಹೋರಾಟಗಾರರು, ಕೆನ್ಯಾದ ಮಾವೋ ಚಳುವಳಿಯ ಬರಹಗಾರರು, ಮೊಜಾಂಬಿಕ್‌ನ ರಾಷ್ಟ್ರೀಯ ವಿಮೋಚನಾ ಸಂಘಟಕರು ತಮ್ಮ ಬರಹ – ಹೋರಾಟದ ಮೂಲಕ ಬೆಂಕಿಯುಂಡೆಗಳಾಗಿ ಪ್ರಜ್ವಲಿಸುತ್ತಿರುವಾಗ, ಅಲ್ಲಿಯ ಅನೇಕ ಕ್ರಾಂತಿಕಾರಿ ಬರಹಗಾರರು ಇಂದು ಜೈಲಿನಲ್ಲಿ ಕೊಳೆಯುತ್ತಿರುವಾಗ ನಮ್ಮ ಬಂಡಾಯಗಾರರು ಏನು ಮಾಡುತ್ತಿದ್ದಾರೆ ? ವಿಧಾನ ಸೌಧದ ಮೆತ್ತನೆಯ ಸಿಂಹಾಸನಗಳ ಮೇಲೆ ಕುಳಿತ ಶಾಸಕರಾಗಿ, ಪ್ರಾಧಿಕಾರ-ಅಕಾಡೆಮಿಗಳ ಅಧ್ಯಕ್ಷರುಗಳಾಗಿ, ವಿಶ್ವವಿದ್ಯಾಲಯಗಳ ಮುಖ್ಯಸ್ಥರಾಗಿ ವಿಜೃಂಭಿಸುತ್ತಿದ್ದಾರೆಯೆ ? ಇವರೇ ಬಂಡಾಯ ಸಂಘಟನೆಯ ಗುತ್ತಿಗೆದಾರರಲ್ಲ, ಕೊನೆಯ ತನಕವೂ ಇವರೇ ಹೋರಾಟದ ಮುಂಚೂಣಿಯಲ್ಲಿರಬೇಕಾಗಿಲ್ಲವೆಂದು ತಿಳಿದುಕೊಂಡಮೇಲೆ ಎರಡನೇ ಘಟ್ಟದ ಯುವಬಂಡಾಯಗಾರರು ಏಕೆ ಸಂಘಟನೆಯಾಗುತ್ತಿಲ್ಲ ? ಉದಾರೀಕರಣ, ಜಾಗತೀಕರಣ ಹಾಗೂ ಖಾಸಗೀಕರಣವೆಂಬ ಮಲತ್ರಯಗಳ ಈ ತುರ್ತಿನಲ್ಲಿ ಬಂಡಾಯದ ಹಳೆಯ ಪ್ರಣಾಳಿಕೆ ಇಂದು ರೆಲೆವೆಂಟ್ ಆಗುತ್ತದೆಯೆ ? ಬಂಡಾಯ – ಹೋರಾಟವೆಂಬುದು ಕೇವಲ ಬಂಡಾಯ ಲೇಖಕರಿಗೆ ಮಾತ್ರ ಸೀಮಿತವಲ್ಲವೆಂದು ತಿಳಿದರೆ, ನಾವೂ ನೀವೆಲ್ಲಾ ಏನು ಮಾಡುತ್ತಿದ್ದೇವೆ ? ಕೇವಲ ಬಂಡಾಯಗಾರರ ಮೇಲೆ ಗೂಬೆ ಕೂಡಿಸಿ ನಾವೆಲ್ಲಾ ಪಾರಾಗುತ್ತಿದ್ದೇವೆಯೆ ? ಎಲ್ಲರೂ ಇಂದು ಆತ್ಮವಿಮರ್ಶೆ ಮಾಡಿಕೊಳ್ಳಬೇಕಾಗಿದೆ !

● ● ●

# ಬಂಡಾಯೋತ್ತರ ಕನ್ನಡ ಸಾಹಿತ್ಯ ಘಟ್ಟ
## (೧೯೯೧-೨೦೦೦)

---

ಡಾ. ಶ್ಯಾಮಸುಂದರ ಬಿದರಕುಂದಿ

# ಬಂಡಾಯೋತ್ತರ ಕನ್ನಡ ಸಾಹಿತ್ಯ ಘಟ್ಟ
## (೧೯೯೧-೨೦೦೦)

ಪ್ರಗತಿಯಿಂದ ಚಲಿಸುತ್ತಿರುವುದೇ 'ಪ್ರಚಲಿತ.' ಕಳೆದ ಒಂದು ದಶಕದುದ್ದಕ್ಕೂ ಪ್ರವಹಿಸುತ್ತಿರುವ (current) ಸಾಹಿತ್ಯದ ಪ್ರವೃತ್ತಿ, ೯೦ ವರ್ಷಗಳ ಹಿಂದಿನಿಂದ ಬಂದಿದ್ದ ಸಾಹಿತ್ಯಕ್ಕಿಂತ ಹೇಗೆ ಭಿನ್ನವಾಗಿದೆ; ಇವತ್ತಿಗೆ ಅದು ಎಷ್ಟು ಬೆಳೆದು ನಿಂತಿದೆ ಎನ್ನುವುದರ ಸ್ವರೂಪ ನಿರೀಕ್ಷಣೆಯೇ ಪ್ರಚಲಿತದ ಅವಲೋಕನ. ಪ್ರಚಲಿತವೆಂದರೆ, ಇನ್ನೂ ಆಗುತ್ತಿರುವಂತಹದು; ಹೀಗಾಗಿ ಇದನ್ನು ಐತಿಹಾಸಿಕ ನಿಟ್ಟಿನಿಂದ ನೋಡಲಾಗದು. ಈ ಮುಂಚಿನ ದಶಕಗಳಲ್ಲಿಯ ಸಾಹಿತ್ಯದ ಬೆಳವಣಿಗೆಯನ್ನು ಐತಿಹಾಸಿಕವಾಗಿ ನೋಡಬಹುದಾದಂತಹ ವಿಶಿಷ್ಟ ಪ್ರವೃತ್ತಿ ಒಂದೊಂದು ಕಾಲಘಟ್ಟದಲ್ಲಿ ನಿರ್ದಿಷ್ಟವಾಗಿ ಪ್ರಾಪ್ತವಾಗಿತ್ತು. ಉದಾಹರಣೆಗೆ, ೧೯೭೪ ರಲ್ಲಿ ಬಂಡಾಯ-ದಲಿತಗಳೆರಡೂ ಒಟ್ಟಿಗೇ ಪ್ರಚಲಿತಕ್ಕೆ ಬಂದಾಗ ಒಂದು ನಿರ್ದಿಷ್ಟ ಪ್ರಣಾಳಿಕೆಯ ಉದ್ಘೋಷದೊಂದಿಗೆ ಅವು ಬಂದವು : "ಖಡ್ಗವಾಗಲಿ ಕಾವ್ಯ; ಜನರ ನೋವಿಗೆ ಮಿಡಿವ ಪ್ರಾಣ ಮಿತ್ರ" ಎಂದು ಸಾಹಿತ್ಯದ ನೋಟ ಮತ್ತು ಅಭ್ಯಾಸಕ್ಕೆ ಒಂದು ಮಿತಿಯನ್ನು ಆ ಮೂಲಕ ಹಾಕಿತು. ಪ್ರಚಲಿತದ ಕೊನೆಯ ಈ ದಶಕ ಹಾಗಿಲ್ಲ. ವರ್ತಮಾನದ ಸ್ಥಿತಿಗತಿಗಳು ಕಣ್ಣಿಗೆ ಕಾಣುತ್ತಿವೆ; ಪ್ರಯತ್ನಿಸಿದರೆ ವ್ಯಾಖ್ಯಾನ ರೂಪದಲ್ಲಿ ಅದರ ಅರ್ಥವನ್ನು ವಿವರಿಸಬಹುದು.

ಆದರೆ ಇಡಿಯಾಗಿ ಅದರ ಸ್ವರೂಪ ಹೀಗೆಯೇ ಅಂತ ಈ ಘಟ್ಟದ ಸಾಹಿತ್ಯಕ್ಕೆ ಒಂದು ತಲೆಬರಹದಿಂದ ಕರೆಯಲಾಗದು; ಕರೆಯುವುದು ಅಪ್ರಸ್ತುತ ಕೂಡ. 'ನೆಲ ಮುಗಿಲು' ಕವನದಲ್ಲಿ ಚೆನ್ನವೀರ ಕಣವಿಯವರು ಇಂತಹ ಒಂದು ಪ್ರಚಲಿತದ ಬಗೆಗೇ ಹೇಳಿರುವ ಸಾಲುಗಳನ್ನು ಉಲ್ಲೇಖಿಸಬೇಕೆನಿಸುತ್ತದೆ :

'ಕಣಕಣದ ಗತಿಮತಿಯ ಗುರುತಿಸು
ಆದರೀಗಲೆ ಅದರ ಇತಿವೃತ್ತವನು
ಬರೆಯದಿರು.
ನೀನಾಗಿ ಕೊರೆಯದಿರುವ ದಾರಿಯನು
ಬಯಲ ಬಿಡುಗಡೆ ನುಂಗಿ, ನೀರು ಹಿಡಿಯಲಿ,
ವಿಶ್ವವೆಲ್ಲವೂ ತೆರೆದ ಬಾಗಿಲೇ..... '

ಹೀಗಿದ್ದರೂ ಪ್ರಸ್ತುತ 'ಪ್ರಚಲಿತ'ಕ್ಕೆ 'ಬಂಡಾಯೋತ್ತರ ಸಾಹಿತ್ಯ' ಎಂದೂ ಉಪಶೀರ್ಷಿಕೆಯನ್ನು ಸೂಚಿಸಲಾಗಿದೆ. ಅಂಥವರ ಗ್ರಹಿಕೆ ಹೀಗಿದೆ : ಬಂಡಾಯ ಘಟ್ಟವೂ ಮುಗಿದು ಯಾವುದೇ ನಿರ್ದಿಷ್ಟ, ಉದ್‌ಘೋಷಿತ ನೋಟ ಅಥವಾ ಪ್ರೇರಣೆ (ಚಳವಳಿ) ಈ ದಶಕಕ್ಕಿಲ್ಲ. ಬಂಡಾಯ, ದಲಿತ ಪ್ರವೃತ್ತಿಯನ್ನುಳಿಸಿಕೊಂಡೂ, ಬಂಡಾಯೇತರ ಅಂಶಗಳನ್ನು ಬೆಳೆಸಿಕೊಂಡು ಹೊರಟಿದ್ದು ಪ್ರಚಲಿತದ ವಿದ್ಯಮಾನ. ಚಳವಳಿಯ ಕಾರಣ-ಪರಿಣಾಮಗಳನ್ನು ವಿಮರ್ಶೆಗೆ ಒಳಪಡಿಸಿ. ಅಲ್ಲಿದ್ದ ವಾಚ್ಯಾರ್ಥದಿಂದ ಬಿಡಿಸಿಕೊಂಡು ಸೂಚ್ಯಾರ್ಥದ ಕಡೆಗೆ; ಅಲ್ಲಿ ಕೇಳಿಸಿದ್ದ ಹೊರದನಿಗೆ ಪರ್ಯಾಯವಾಗಿ ಒಳದನಿಗೆ; ಅಲ್ಲಿದ್ದ ಆಕ್ರೋಶದ ಬದಲು ಸಮಾಧಾನ ಚಿತ್ತಕ್ಕೆ ಪ್ರಚಲಿತ ಸಾಹಿತ್ಯ ಬದಲಾಗಿದೆ. ಘೋಷಿತ ವಾಕ್ಯದ (ಪ್ರಣಾಳಿಕೆಯ) ಹಿಂದಿರುವ ಪ್ರೇರಣೆ, ದೃಷ್ಟಿಕೋನಗಳನ್ನು ಪ್ರತಿಭೆ ಹಾಗೂ ಪರಿಶ್ರಮದ ಬರವಣಿಗೆಯಿಂದ ವಾಸ್ತವಿಕಗೊಳಿಸುವ ಕೃತಿಗಳು ಈ ದಶಕದಲ್ಲಿ ಬರುತ್ತಿವೆ. ಜೊತೆಗೆ. ಯಾವ ಉದ್‌ಘೋಷಣೆಯ ಹಂಗಿಲ್ಲದೆ, ಸ್ವತಂತ್ರ ಪ್ರವೃತ್ತಿಯಿಂದ ಪ್ರೇರಿತರಾಗಿ ಬಹಳಷ್ಟು ಲೇಖಕರು ಓದಬೇಕಾದ ಹಾಗೂ ಮನನ ಮಾಡಬೇಕಾದ ಕೃತಿಗಳನ್ನು ಕೊಡುತ್ತಿದ್ದಾರೆ. ಒಟ್ಟಾರೆ ನಮ್ಮ ಲೇಖಕರು ಸಾಹಿತ್ಯ ಕೃತಿಯ, ಅಂದರೆ ಬರೆಹ ಮಾಧ್ಯಮದ ಸಾರ್ವತ್ರಿಕ ಸ್ವಾತಂತ್ರ್ಯವನ್ನು ಯಥೇಚ್ಛ ಬಳಸಿಕೊಂಡು ಓದುಗ ವರ್ಗವನ್ನು; ಸಾಹಿತ್ಯಭ್ಯಾಸಿಗಳನ್ನು ಹೊಸ ಎಚ್ಚರದಲ್ಲಿರಿಸುತ್ತಿದ್ದಾರೆ. 'ಕನ್ನಡಿಯ ಮಾತು' ಎಂಬ ಒಂದು ಝೆನ್ ದೃಷ್ಟಾಂತ ಕತೆಯಲ್ಲಿ ಚು ಅಂಗ್ ತ್ಸು ಎಂಬ ಒಬ್ಬ ಗುರು ಹೇಳಿದ ಮಾತನ್ನು ಈ ಸಂದರ್ಭದಲ್ಲಿ ನೆನೆಯಬೇಕು ಎನಿಸುತ್ತದೆ. ಚು ಅಂಗ್ ತ್ಸು ಹೇಳಿದ್ದು ಹೀಗೆ :

ಕನ್ನಡಿಯನ್ನು ನೋಡಿರಿ. ಅದು ಏನನ್ನೂ ಸ್ವೀಕರಿಸೋದಿಲ್ಲ.
ಕನ್ನಡಿ ಏನನ್ನೂ ತಿರಸ್ಕರಿಸೋದಿಲ್ಲ.
ಕನ್ನಡಿ ಏನಿದ್ದರೂ ಗ್ರಹಿಸುತ್ತದೆ.

ಆದರೆ ಯಾವುದನ್ನೂ ಸಂಗ್ರಹಿಸಿಕೊಳ್ಳೋದಿಲ್ಲ.

ಮನುಷ್ಯ, ಮನಸ್ಸನ್ನು ಕನ್ನಡಿಯ ಹಾಗೆ ಇಟ್ಟುಕೋಬೇಕು.

ಈ ದೃಷ್ಟಾಂತವನ್ನು ಪ್ರಚಲಿತ ಸಾಹಿತ್ಯಕ್ಕೆ ಅನ್ವಯಿಸಿ ಹೇಳಬೇಕೆಂದರೆ –ಈ ಕಾಲದ ಜನಜೀವನದ ಕನ್ನಡಿಯಂತಿರುವ ಸಾಹಿತ್ಯವನ್ನು ಕನ್ನಡ ಲೇಖಕರು ಕನ್ನಡಿಯ ಹಾಗೆ ಇರಿಸಲು ಪ್ರಯತ್ನಿಸಿದ್ದಾರೆ. ಈ ಕನ್ನಡಿಯಲ್ಲಿ ನಮಗೆ ಗೋಚರಿಸುವ ಪ್ರತಿಬಿಂಬಗಳನ್ನು ಒಂದೊಂದಾಗಿ ಗಮನಿಸೋಣ.

## ಪ್ರತಿಬಿಂಬ ೧ : ಕಾವ್ಯ

ಕವನಗಳನ್ನು ಬರೆದು ಪ್ರಕಟಿಸುವವರ ಸಂಖ್ಯೆ ಈಗ ಸಾಕು ಎನಿಸುವಷ್ಟು ಏರಿದೆ. ವಾರಕ್ಕೆ ಸರಾಸರಿ ೪-೫ ಕವನ ಸಂಕಲನಗಳು ಪುಸ್ತಕವಾಗಿ ಹೊರಬರುತ್ತಿರುವುದನ್ನು ಗಮನಿಸಿದಾಗ, ಸಾಹಿತ್ಯದ ಈ ಸಂವೇದನಶೀಲ ಪ್ರಕಾರವನ್ನು ದುಡಿಸಿಕೊಳ್ಳುವಂತಹ ಸೂಕ್ಷ್ಮ-ಕಲಾತ್ಮಕ ಕೃತಿಗಳು ಸಮೃದ್ಧವಾಗಿ ಸೃಷ್ಟಿಯಾಗುತ್ತಿರಬೇಕು ಎಂಬ ಖುಷಿ ನಮಗಾಗಬೇಕು, ನಿಜ. ಆದರೆ ಕಾವ್ಯಾಭಿವ್ಯಕ್ತಿಯ ನಿಷ್ಠುರ ಶಿಸ್ತು, ಕಲಾತ್ಮಕ ವಿನ್ಯಾಸದ ಬಗ್ಗೆ ಸಾಮಾನ್ಯ ಕಾಳಜಿ ಇಲ್ಲದವರನೇಕರು ಕಾವ್ಯಲೋಕಕ್ಕೆ ನುಗ್ಗಿ ಭಾಷೆಯ ಬಗೆಗಿನ ಅವಜ್ಞೆ, ಹಾಗೂ ತಾಳುವಿಕೆಗಳಿಲ್ಲದೆ 'ಕಾವ್ಯ ಸಂಹಾರ'ಕ್ಕೆ ತೊಡಗಿರುವ ಶೋಚನೀಯ ಸ್ಥಿತಿ ಕಾಣುತ್ತಿದೆ. ಮುದ್ರಣ ಸೌಲಭ್ಯದ ಸಲಿಗೆಯಿಂದಾಗಿ ಈ ಸಂಕಲನಗಳ ಪ್ರಕಟನೆ ಅನಿಯಂತ್ರಿತವಾಗಿದೆ. ಕವಿತೆಯ ಸುಂದರ, ಸಹನೀಯ ವಲಯದೊಳಗೆ ಬರುವ ಕವಿಗಳು ಮಾತ್ರ ಸಂಖ್ಯೆಯಲ್ಲಿ ಕಡಿಮೆಯಿದ್ದರೂ ಸಾಧನೆಯಲ್ಲಿ ವೈವಿಧ್ಯ ತೋರಿಸಬಲ್ಲವರಾಗಿದ್ದಾರೆ. ಗೋಪಾಲಕೃಷ್ಣ ಅಡಿಗರಂತಹ ಧೀಮಂತ ಕವಿ ತೀರಿಕೊಂಡ (೧೯೯೨) ಮೇಲೆ, ಅವರ ಸಮಕಾಲೀನರಾಗಿಯೇ ೫೦ರ ದಶಕದಲ್ಲಿ ಕಾವ್ಯಲೋಕಕ್ಕೆ ಆಗಮಿಸಿ, ನವ್ಯ ಅಭಿವ್ಯಕ್ತಿಯಲ್ಲಿ ಅರ್ಥಪೂರ್ಣ ರಚನೆಗಳನ್ನು ಸೃಷ್ಟಿಸಿದ ಬಿ. ಸಿ. ರಾಮಚಂದ್ರಶರ್ಮ; ಗಂಭೀರ ಸತ್ವದ ಕವಿಗಳಾದ ಜಿ. ಎಸ್. ಶಿವರುದ್ರಪ್ಪ ಹಾಗೂ ಚೆನ್ನವೀರ ಕಣವಿ; ಜಾನಪದ ಸೊಗಡಿನ ಆಧುನಿಕ ಸಂವೇದನೆಯ ಚಂದ್ರಶೇಖರ ಕಂಬಾರ; ಜನಪರ ನಿಲುವಿನ ಸಹಜ ಕವಿ ಸು. ರಂ. ಎಕ್ಕುಂಡಿ; ಹಳಬರಾದರೂ ಹೊಸತನಕ್ಕೆ ತುಡಿಯುವ ಮುದೇನೂರ ಸಂಗಣ್ಣ; ನವ್ಯ ಶೈಲಿಯ ನಗರಪ್ರಜ್ಞೆಯ ಪ್ರಯೋಗಶೀಲ ಕವಿ ಅರವಿಂದ ನಾಡಕರ್ಣಿ; ಸುಮತೀಂದ್ರ ನಾಡಿಗ –ಈ ಮೊದಲಾದ ಹಿರಿಯ ಪರಿಪಕ್ವ ಕವಿಗಳು ಒಂದೋ–ಎರಡೋ ಸಂಕಲನಗಳನ್ನು ಈ ಅವಧಿಯಲ್ಲಿ ಹೊರತಂದು ಕಾವ್ಯದ ನಿರಂತರತೆಗೆ ಪೋಷಣೆ ಒದಗಿಸಿದ್ದಾರೆ. 'ಸಂಜೆ ಹಾಡು' (೨೦೦೦) ಸಂಕಲನ ಪ್ರಕಟಿಸಿದ ೮೭ರ ಹರಯದ ಕೆ. ಎಸ್. ನರಸಿಂಹಸ್ವಾಮಿಯವರು, ರಮ್ಯ, ಭಾವುಕ ಎನ್ನಬಹುದಾದ ಸರಸ ಕಾವ್ಯವನ್ನು ೬೦ ವರ್ಷದ ಹಿಂದೆ ಕೊಟ್ಟಿದ್ದರು. ಹೂವಿನಂತಹ

ಈ ಕವಿ ಈ ಬಾಳಸಂಜೆಯಲ್ಲೂ ನೋವು, ನಿರಾಸೆ, ವೈರಾಗ್ಯಕ್ಕೆ ಹೊರತಾದ ಹುರುಪಿನ ಸಂಜೆ ಹಾಡನ್ನು ಹಾಡಿದ್ದು ಹೀಗೆ :

ಎಲ್ಲ ದನಿಗಳ ನಡುವೆ ನನ್ನದು ಒಂಟಿ ದನಿ.
ಸಪ್ತಸಾಗರದಲ್ಲಿ ನಾನೊಂದು ಒಂಟಿ ಹನಿ.
ನನ್ನಿರವು ನನಗೀಗ ಅರ್ಥವಾಗಿದೆ ನೋಡಿ
ಎಂದೆಂದಿಗೂ ನಾನು ಚೆಲುವು ಸಂಧ್ಯಾರಾಗ.

ಹೆಮ್ಮರದ ನೆತ್ತಿಯಲಿ ಹಕ್ಕಿ ಹಾಡನು ಕೇಳಿ
ಸಂಜೆಯಾಯಿತು ನಾನು ಮನೆಗೆ ಬರಲು
ಅದರರ್ಥವೇನೆಂದು ಚಿಂತಿಸುತಲೇ ಬಂದೆ–
ಕಾಲುಹಾದಿಯ ಕಟ್ಟಕಡೆಯ ಮನೆಗೆ.

ನಮ್ಮ ಈ ದಶಕದ ಕಾವ್ಯಸಾಧನೆಗೆ ಭರತವಾಕ್ಯದಂತಿರುವ ನರಸಿಂಹಸ್ವಾಮಿಯವರ ಈ ಮಾತಿನ ಎಳೆಯನ್ನೇ ಹಿಡಿದು ಉಳಿದವರನ್ನು ಗಮನಿಸಬೇಕಾಗಿದೆ.

ಸು. ರಂ. ಎಕ್ಕುಂಡಿಯವರು ತೀರಿಕೊಳ್ಳುವ ಮುನ್ನ (೧೯೯೪) 'ಬಕುಲದ ಹೂಗಳು' ಎಂಬ ಸುಂದರ ಸಂಕಲವನ್ನು ಕೊಟ್ಟಿದ್ದಾರೆ. ಮಾರ್ಕ್ಸ್ ಮತ್ತು ಮಧ್ವಮುನಿಗಳ ನಡುವಿರುವ ತಾತ್ವಿಕತೆಯ ವೈರುಧ್ಯವನ್ನು ಸಾಂಸ್ಕೃತಿಕವಾಗಿ ಹೋಗಲಾಡಿಸುವ ಬುದ್ಧಿ, ಕಲ್ಪನಾವಿಲಾಸ ಎಕ್ಕುಂಡಿಯವರದು. ಮೂಲತಃ ವ್ಯಕ್ತಿಯೊಳಗಿರುವ ಮಾನವತೆಯನ್ನು ಶೋಧಿಸುವ ತತ್ವಜ್ಞಾನಿಗಳು : ಮಾರ್ಕ್ಸ್ ಮತ್ತು ಮಧ್ವಮುನಿಗಳು. ಇವರಿಬ್ಬರು ಬರೆದಿಟ್ಟ ಗ್ರಂಥಗಳು, ಸಾರ್ವಜನಿಕಗೊಂಡ (ಸಾಂಸ್ಥಿಕಗೊಂಡ) ಅವರ ಬೋಧನೆಗಳು; ಧರ್ಮ-ರಾಜಕೀಯ ಪರಿಸರದಲ್ಲಿ ಅವು ಪಡೆದ ಅರ್ಥ, ಅನರ್ಥಗಳ ಕುರಿತು ಎಕ್ಕುಂಡಿಯವರಿಗೆ ಚಿಂತೆ ಏನೂ ಇಲ್ಲ. ಜಗತ್ತಿನ ಚೈತನ್ಯವನ್ನು ಅರಿವು ಮತ್ತು ಅಂತಃಕರಣಗಳಿಂದ ಆತ್ಮೀಕರಿಸಿಕೊಳ್ಳುವ ಅವರ ಆದರ್ಶವೊಂದೇ ಈ ಕವಿಗೆ ಆಪ್ಯಾಯಮಾನ. ಅಂತಹ ಬೇರೆ ವ್ಯಕ್ತಿ, ಶಕ್ತಿ, ಸನ್ನಿವೇಶಗಳನ್ನು ನಿದರ್ಶನವಾಗಿಟ್ಟುಕೊಂಡು ಎಕ್ಕುಂಡಿಯವರು ಬರೆದ ಪದ್ಯಗಳು ಮನನೀಯವಾಗಿವೆ. ಸಾಕ್ರೆಟೀಸನ ಕೊನೆಯ ದಿನವನ್ನು 'ಋಣದ ಹುಂಜ' ಕವನದಲ್ಲಿ ಹೃದಯಂಗಮವಾಗಿ ಚಾರಿತ್ರಿಕಗೊಳಿಸುವ ಎಕ್ಕುಂಡಿಯವರು, 'ಕಥನಕವನ'ದ ಶಿಲ್ಪದಲ್ಲಿ ಚಿಂತನೆ ಹಾಗೂ ಸೌಂದರ್ಯಗಳೆರಡನ್ನೂ ಎರಕಹೊಯ್ದಿದ್ದಾರೆ. ಕಥನಕವನವೆಂದರೆ, ಪದ್ಯರೂಪದಲ್ಲಿ ಕತೆಯೊಂದನ್ನು ನಿರೂಪಿಸುವುದಲ್ಲ; ಘಟನಾವಳಿಯನ್ನು ಶಬ್ದ ಚಮತ್ಕಾರದಿಂದ ಹೇಳುವುದೂ ಅಲ್ಲ. "ಯಾವುದೊಂದು ಸಂಗತಿಯ ಗತಿಶೀಲ ನಿರೂಪಣೆ"ಯೇ ಕಥನ ಕಾವ್ಯ, ಎಂದು ಪರಿಷ್ಕೃತ ವ್ಯಾಖ್ಯೆ ನೀಡಿ, ಈ ಪ್ರಕಾರದ ಕವಿತೆಯ ಧ್ವನಿ ರಮ್ಯತೆ ಮತ್ತು ಅರ್ಥವಂತಿಕೆಯನ್ನು ಹೆಚ್ಚಿಸಿದವರು ಕವಿ ಎಕ್ಕುಂಡಿ. ಅವರ ಅಕಾಲಿಕ ಕಣ್ಮರೆ ಚೈತನ್ಯಶೀಲ ಕವಿತೆಯ ಕಣ್ಮರೆಯೂ ಹೌದು.

ಬಿ. ಸಿ. ರಾಮಚಂದ್ರಶರ್ಮರ ೯ನೆಯ ಸಂಕಲನ : 'ಸಪ್ತಪದಿ'. ಶರ್ಮರ ಕಾವ್ಯಜೀವನದ ಮೂರನೆಯ ಘಟ್ಟವನ್ನು ತೋರಿಸುವ ಕಾವ್ಯವಿದು. ಬೇಂದ್ರೆಯವರ 'ಸಖೀಗೀತ'ವನ್ನು ಹೋಲುವ ಹಾಗೆ. ಶರ್ಮರು ದಾಂಪತ್ಯ ಜೀವನವನ್ನು ರೂಪಕಗಳಲ್ಲಿ ಚಿತ್ರಿಸುತ್ತ, ಗಂಡು-ಹೆಣ್ಣಿನ ಸಂಬಂಧದಲ್ಲಿಯ ಮಾಗುವಿಕೆಯನ್ನು ತೋರಿಸುತ್ತಾರೆ. ಶರ್ಮರ ಶೈಲಿ ಕ್ಲಿಷ್ಟತೆಯದು. 'ಸಪ್ತಪದಿ'ಯ ಕಾವ್ಯಾನುಭವಕ್ಕೆ ಓದುಗನು ಸಾಕಷ್ಟು ಸಿದ್ಧತೆ ಮಾಡಿಕೊಂಡು ಓದಬೇಕಾಗುತ್ತದೆ. ಅಪರೂಪಕ್ಕೆ ಕವಿತೆ ಬರೆಯುವ ರಂಗಭೂಮಿ ನಿರ್ದೇಶಕ ಪ್ರಸನ್ನ ಅವರು ಕೂಡ ದಾಂಪತ್ಯದ ವಿಚಾರವನ್ನು ಕಾವ್ಯವಾಗಿಸಿ 'ದೇವದಾರು' ಕವನ ಸಂಕಲನ ಪ್ರಕಟಿಸಿದ್ದಾರೆ. ಆತ್ಮಗತ ಶೈಲಿ; ಬೌದ್ಧಿಕ ಸಮರ್ಥನೆಗಳಿಂದಾಗಿ. 'ದೇವದಾರು' ಕವನಗಳು ಓದುಗನ ಜೊತೆ ಮಾತನಾಡುವುದನ್ನು ತಪ್ಪಿಸಿಕೊಳ್ಳುತ್ತವೆ. ನವ್ಯ ಧಾಟಿಯಲ್ಲಿಯೇ ವಿವಿಧ ಅಭಿವ್ಯಕ್ತಿ ಕ್ರಮಗಳನ್ನು ಪ್ರಯೋಗ ಮಾಡುತ್ತ ಕಾವ್ಯದೊಂದಿಗಿನ ತಮ್ಮ ನಂಟನ್ನು ಎಡೆಬಿಡದೆ ಉಳಿಸಿಕೊಂಡವರಲ್ಲಿ ಎಚ್. ಎಸ್. ವೆಂಕಟೇಶಮೂರ್ತಿ ಹಾಗೂ ನಾ. ಮೊಗಸಾಲೆ ಪ್ರಮುಖರು. ವೆಂಕಟೇಶಮೂರ್ತಿಯವರ 'ಅಮೇರಿಕದಲ್ಲಿ ಬಿಲ್ಲು ಹಬ್ಬ'. (೧೯೯೮) ಆಧುನಿಕ ಸಂದರ್ಭದಲ್ಲೂ ಸಂಪ್ರದಾಯ ಮತ್ತು ಹಳೆಯ ರಾಜಕೀಯ ನೀತಿಗಳಿಗೆ ಬೆಲೆ ಇರುವುದನ್ನು ಪ್ರತಿಪಾದಿಸುವ ಕಾವ್ಯ. ಸಂಸ್ಕೃತದ 'ರಘುವಂಶ'ವನ್ನು ಕನ್ನಡೀಕರಿಸುತ್ತ ವೆಂಕಟೇಶಮೂರ್ತಿಯವರು, ಪರಂಪರೆಯ ಶಕ್ತಿಯು ಕಾವ್ಯಜೀವನಕ್ಕೆ ಅವಶ್ಯ ಎನ್ನುತ್ತಾರೆ. ವೆಂಕಟೇಶಮೂರ್ತಿಯವರ ೪೬ ಕವನಗಳನ್ನೊಳಗೊಂಡ 'ಭೂಮಿಯೂ ಒಂದು ಆಕಾಶ' (೨೦೦೦) ಸಂಕಲನ ತೀರ ಇತ್ತೀಚೆಗೆ ಬಂದಿದ್ದು. ಅವರ ಕಾವ್ಯ ಕಸುಬಿನ ನಿರಂತರತೆಯನ್ನು. ಜೀವಂತಿಕೆಯನ್ನು ತೋರಿಸುವ ರಚನೆಗಳಿಂದ ಒಡಗೂಡಿದೆ. ನಾ. ಮೊಗಸಾಲೆಯವರು ಕವಿತೆಯ ನುಡಿಗಟ್ಟನ್ನು ಮತ್ತೆ ಮತ್ತೆ ತಾಜಾ ಆಗಿಸುವ ರೀತಿಯಲ್ಲಿ ಬರೆಯುವ ಕವಿ. ಅವರ 'ನೆಲದ ನೆರಳು' ಸಂಕಲನದ ತುಂಬ ಕ್ಲಿಷ್ಟವಲ್ಲದ. ಸಂಕೀರ್ಣವೆನಿಸುವ ಚಿಂತನೆಗಳ ಮಂಡನೆ ಇದೆ. ಪ್ರಕೃತಿ ಹಾಗೂ ಪರಿಸರದ ಬಗೆಗೆ ಈ ಇಬ್ಬರೂ ಕವಿಗಳು ಹೊಂದಿರುವ ಕಾವ್ಯಾತ್ಮಕ ಸಂಬಂಧ ವಿಶಿಷ್ಟ ರಚನೆಗಳನ್ನು ಕೊಡುವಂತೆ ಪ್ರೇರಿಸಿದೆ. ಇವರಷ್ಟೇ ಕಾವ್ಯಾನುಭವವಿರುವ ಬಿ. ಆರ್. ಲಕ್ಷ್ಮಣರಾವ ಪ್ರಯೋಗಶೀಲ ಗುಣವನ್ನು ಉತ್ಸಾಹದಿಂದಲೇ ಮುಂದುವರಿಸಿದ್ದಾರೆ. ಭಾಷೆಯ ಬೆಡಗಿನಲ್ಲಿ ದಿನ ನಿತ್ಯದ ಅನಿಸಿಕೆಗಳನ್ನು ಹಿಡಿದಿಡುವ ಲಕ್ಷ್ಮಣರಾಯರ ಕೌಶಲ. ಹೊಸ ಕವಿಗಳಿಗೆ ಮಾದರಿಯಾಗಬಹುದಾಗಿದೆ. 'ಮಾತು. ಮಾಟವಾಗಬೇಕೆಂದು ಹಂಬಲಿಸುವ ರಾಮಚಂದ್ರ ಶರ್ಮರು: ಮಾತನ್ನು 'ಆಟ'ವಾಗಿಸುವ ಲಕ್ಷ್ಮಣರಾವ —ನವ್ಯ ಕಾವ್ಯಾಭಿವ್ಯಕ್ತಿಯ ಎರಡು ಧ್ರುವಗಳಾಗಿ ಕಾಣುತ್ತಾರೆ. ಲಯ. ಪ್ರಾಸ. ಉಪಮೆ. ದೃಷ್ಟಾಂತಗಳ ನವನವೀನ ಸೃಷ್ಟಿಯಲ್ಲಿ ಲಕ್ಷ್ಮಣರಾವ ಹೇಳುವ ಸತ್ಯಗಳು ಜೀವನದ ಆಳಕ್ಕೇನೂ ಒಯ್ಯುವುದಿಲ್ಲ: ಆದರೆ ಕವಿ ನೋಡುವ ಕೋನಗಳಿಗೆ ಎಷ್ಟೊಂದು ಬಗೆಯಲ್ಲಿ ಬಣ್ಣ ಭಾವಗಳನ್ನು ಜೋಡಿಸಬಹುದೆಂಬುದಕ್ಕೆ ಲಕ್ಷ್ಮಣರಾಯರ ರಚನೆಗಳು ಉದಾಹರಣೆಯಾಗಿವೆ.

ನವ್ಯ ಕವಿಯಾಗಿಯೇ ಮೂರುವರೆ ದಶಕದ ಕಾಲ ಕಾವ್ಯ ರಚನೆಯಲ್ಲಿ ತೊಡಗಿರುವ ಸಮತೀಂದ್ರ ನಾಡಿಗರು ಇತ್ತೀಚೆಗೆ ಹೊರತಂದ 'ಪಂಚಭೂತಗಳು' ಕಾವ್ಯ ವಿಶಿಷ್ಟ ಕೃತಿ. ವೇದೋಪನಿಷತ್ತುಗಳ ಜ್ಞಾನ ಹಾಗೂ ಪಾಶ್ಚಾತ್ಯ ಪ್ರಕೃತಿ ವಿಜ್ಞಾನದ ಹಿನ್ನೆಲೆಯಲ್ಲಿ ನಾಡಿಗರು ಮಾನವ ಪ್ರಕೃತಿಯನ್ನು ವಿವೇಚಿಸಲು ಈ ಕಾವ್ಯಪ್ರಯೋಗವನ್ನು ಮಾಡಿದ್ದಾರೆ. ನೆಲ, ನೀರು, ಗಾಳಿ, ಬೆಂಕಿ, ಆಕಾಶ- ಪಂಚತತ್ವಗಳು – ಮನುಷ್ಯ ಜೀವನದ ದೇಹ, ಭಾವಗಳ ಮೇಲೆ ಬೀರುವ ಪರಿಣಾಮ, ಮನುಕುಲದ ಸೃಷ್ಟಿ ಪ್ರಕ್ರಿಯೆ; ಈ ಪ್ರಕ್ರಿಯೆಯಲ್ಲಿರುವ ತಾತ್ವಿಕ, ತಾಂತ್ರಿಕ ಸಂಯೋಜನೆ; ಗಂಡು-ಹೆಣ್ಣಿನ ವೈಶಿಷ್ಟ್ಯ; ಪ್ರೀತಿ, ಆಕರ್ಷಣೆ, ಸೃಜನಶೀಲತೆಗಿರುವ ಸಹಜ ಒತ್ತಾಸೆಗಳು; ಸಮಾಜ, ನಾಗರಿಕತೆಯ ನಡುವೆ; ನೀತಿ-ನಿಯಮಗಳ ಸುಂದರ ಹೊಂದಾಣಿಕೆಯಾದ ದಾಂಪತ್ಯ ಮತ್ತು ಸಂತಾನ ಸೃಷ್ಟಿಯ ಪರಿಣಾಮಗಳು; ಆಧುನಿಕ ಜೀವನದಲ್ಲಿ ಗಂಡು-ಹೆಣ್ಣು ಜತೆಗೂಡಿ ಅನುಸರಿಸಬೇಕಾದ ಜೀವನ ಪ್ರೀತಿಯ ಧೋರಣೆ – ಇವೆಲ್ಲವನ್ನೂ ನಾಡಿಗರು ಸರಳ ಸುಂದರವಾಗಿ ಗ್ರಹಿಸಿ, ಸಂಗ್ರಹಿಸಿ ಕಾವ್ಯವಾಗಿಸಿದ ರೀತಿ ಅಪೂರ್ವವಾಗಿದೆ. ಪ್ರಕೃತಿ, ಸಂಸ್ಕೃತಿಗಳ ಸಮನ್ವಯಕ್ಕೆ ಬೇಕಾದ ಜ್ಞಾನ, ವಿಜ್ಞಾನ, ವಿವೇಕಗಳ ಕೋಶ ಈ ಕಾವ್ಯ. ಶೈಕ್ಷಣಿಕ ಮೌಲ್ಯವನ್ನು ಹಾರ್ದಿಕವಾಗಿ ಬೆರೆಸಿದ ಕವಿ ನಾಡಿಗರ ಕೌಶಲ ಆರು ಮಂಡಲಗಳ ಕಾವ್ಯದುದ್ದಕ್ಕೂ ಆಕರ್ಷಿಸುತ್ತದೆ. ಕಾವ್ಯ ವಸ್ತುವಿನ ಹರವು, ಆಳಗಳೆರಡೂ ಹದವಾಗಿ ಗೋಚರಿಸುವ ಕೃತಿ : 'ಪಂಚಭೂತಗಳು.'

ಮಹಾಕಾವ್ಯದ ವಸ್ತುವನ್ನು ಗದ್ಯ-ಪದ್ಯಗಳೆರಡರಲ್ಲಿ ವಿನ್ಯಾಸಗೊಳಿಸುವ ಪ್ರಯೋಗವನ್ನು ಚಂದ್ರಶೇಖರ ಕಂಬಾರರು 'ಚಕೋರಿ' ಕೃತಿಯಲ್ಲಿ ಸಾಧಿಸಿದ್ದಾರೆ. ಸೂರ್ಯತತ್ತ್ವ, ಚಂದ್ರತತ್ತ್ವ ಮತ್ತು ಪ್ರಕೃತಿಯ ಸೌಂದರ್ಯಗಳ ನಡುವಿನ ಸಂಬಂಧವನ್ನು ಕತೆಮಾಡಿ ಹೇಳುವ ಕಂಬಾರರು ತಮ್ಮದೇ ಆದ ಪುರಾಣವಸ್ತುವನ್ನು ಸೃಷ್ಟಿಸಿಕೊಂಡದ್ದು ಈ ಕೃತಿಯ ಸ್ವೋಪಜ್ಞತೆಗೆ ಸಾಕ್ಷಿ. ಮಹಾಕಾವ್ಯಕ್ಕಿರಬೇಕಾದ ಗಹನತೆ, ಚಿಂತನೆ ಕವಿಯ ಕಲ್ಪನೆಯಲ್ಲಿ ಸೊಗಸಾಗಿ ಮಿಳಿತವಾಗಿದೆ. ಹೊರೆಯಾಲ ದೊರೆಸ್ವಾಮಿಯವರ 'ಇದಿಯಮ್ಮ' (೧೯೬೬) ಜನಪದ ನಂಬಿಕೆಯ ಕತೆಯೊಂದನ್ನು ಆಧುನಿಕ ನೆಲೆಯಲ್ಲಿ ಮರುನಿರೂಪಿಸುವ ಗಮನಾರ್ಹ ಕಾವ್ಯ. ಅನಕ್ಷರಸ್ಥರೂ ಬಡವರೂ ಅಸಹಾಯಕರೂ ಆದ ಜನವರ್ಗ ತಮ್ಮ ಜೀವನವನ್ನು ಕಟ್ಟುವ, ರೂಪಿಸುವ, ನಿರ್ಣಯಿಸುವ ವಿಧಿ('ಇದಿ')ಯನ್ನು ಭೆಟ್ಟಿಯಾಗಿ, ಅವಳಿಗೆ ಸವಾಲು ಹಾಕಲು ನಿರ್ಧರಿಸುತ್ತಾರೆ. 'ಇದಿಯಮ್ಮ'ನನ್ನು ಕಾಣಲು ಹೊರಟ ಅವರ ಸುದೀರ್ಘ ಪಯಣದುದ್ದಕ್ಕೆ ಅವರಿಗೆ ಸಿಗುವ ಅನುಭವಗಳಿಂದ ಅವರ ತಿಳಿವಳಿಕೆ ಮಾರ್ಪಡುವ ಪ್ರಕ್ರಿಯೆ ಕಾವ್ಯದ ತಿರುಳು. ವಿವೇಕ ಮತ್ತು ಸ್ವಂತ ಸಂಕಲ್ಪ ಶಕ್ತಿಯನ್ನು ಜನ ಗಳಿಸಿಕೊಳ್ಳುವ ಪರಿಯನ್ನು ಹೊರೆಯಾಲ ರೂಪಿಸುತ್ತಾರೆ. ಮನುಷ್ಯ ಪ್ರಯತ್ನದ ಅರಿವು; ಕ್ರಿಯಾಶೀಲತೆಯ ವಾಸ್ತವ ನೆಲೆಗೆ ಜನಗಳನ್ನು

ತರುವ ಕವಿ, ಅವರ ಆಡುಮಾತಿನಲ್ಲೇ ಕವಿತೆ ರಚಿಸಿದ್ದು, ಸಂವೇದನಾಪೂರ್ಣತೆಗೆ ಸಾಕ್ಷಿ. ಗದ್ಯ ಪದ್ಯಗಳನ್ನು ಲಯಪೂರ್ಣವಾಗಿ ಬಳಸಿ, ಹಳೆ ಕವಿತೆಗೆ (ನಂಬಿಕೆಗೆ) ಹೊಸರೂಪ–ಹೊಸ ದೃಷ್ಟಿಗಳೆರಡನ್ನು ಕೊಡುವ ಹೊರೆಯಾಲರ ಈ ಕಾವ್ಯಕೌಶಲ ವಿಶಿಷ್ಟವೆನಿಸುತ್ತದೆ.

೧೯೮೦-೯೦ ರ ಅವಧಿಯ ಬಂಡಾಯ ಸಾಹಿತ್ಯ ಚಳುವಳಿಯಲ್ಲಿ ಹುಟ್ಟಿದ ಕವಿಗಳಲ್ಲಿ ಹಲವರು, ಕಸಕು ಕಲ್ಪನೆಯನ್ನು ಪಕ್ವಗೊಳಿಸುವ ದಿಸೆಯಲ್ಲಿ ಧ್ಯಾನ, ಚಿಂತನೆ ಮಾಡಿ ಮುಂದುವರಿದುದರ ಉತ್ತಮ ಕುರುಹುಗಳು ಈ ದಶಕದುದ್ದಕ್ಕೂ ಕಾಣಿಸುತ್ತಿವೆ. ಅನುಭವದೊಂದಿಗೆ ಬೆಳೆಯುವ, ಮಾಗುವ, ಹೊಸ ಪ್ರಶ್ನೆ ಹಾಕಿಕೊಂಡು ಉತ್ತರಿಸುವ ಹವಣಿಕೆ ಈ ಕವಿಗಳದ್ದಾಗಿದೆ. ಪ್ರಶ್ನೆ, ಉತ್ತರ, ಪರಿಹಾರ ಇವೆಲ್ಲ ಕಾವ್ಯದ ಶರೀರದಲ್ಲಿ ಹಾಸುಹೊಕ್ಕಾಗಿರುವ ಬಗೆಯೇ ಈ ಕವಿಗಳ ರಚನೆಯ ಬಗ್ಗೆ ಭರವಸೆ ಮೂಡಿಸುವಂತಿದೆ. ನವ್ಯಕಾವ್ಯದ ಕಾಲದಲ್ಲಿ ಭಾಷಾ ಶಿಲ್ಪದ ಬಗ್ಗೆ; ಪ್ರತಿಮೆ–ಪ್ರತೀಕಗಳ ಕಲಾತ್ಮಕ ನುಡಿಗಟ್ಟಿನ ಬಳಕೆಯ ಬಗ್ಗೆ, ಅನನ್ಯ-ಅಪರೂಪದ ಅಭಿವ್ಯಕ್ತಿಯ ಸಾಧ್ಯತೆಯ ಬಗ್ಗೆ ಯಾವ ಕಾಳಜಿ ಕವಿಗಳಿಗಿದ್ದಿತೋ ಅದು, ಈ ದಶಕದಲ್ಲಿ ಕೆಲವರನ್ನು ಕಾಡಿದೆ; ಪೀಡಿಸಿದೆ ಮತ್ತು ತಮ್ಮೆಲ್ಲ ಸ್ವೋಪಜ್ಞತೆಯನ್ನು ಸಾಕಾರಗೊಳಿಸಲು ಅವರು ಕಾತರರಾಗಿರುವುದು ಮಹತ್ತರ ಅಭಿವೃದ್ಧಿ. ಆದರೆ ನವ್ಯರ ಹಾಗೆ 'ಆತ್ಮರತಿ' ಯಲ್ಲಿ ಮಗ್ನವಾಗಿ ವ್ಯಕ್ತಿನಿಷ್ಠೆಯೇ ಶ್ರೇಷ್ಠವೆಂದುಕೊಳ್ಳುವ ಭ್ರಮೆ ಈ ಕವಿಗಳಿಗಿಲ್ಲದಿರುವುದು ಅವರ ಬೆಳವಣಿಗೆಯ ಕುರುಹು. ಆತ್ಮಚಿಂತನೆಯು ಕವಿಯ ಸಾಮಾಜಿಕ ಹೊಣೆ ಎಂಬ ಎಚ್ಚರ ಹಾಗೂ ನಿರ್ವಹಣೆ ಈ ಕವಿಗಳ ಸಾಧನೆ. ವ್ಯವಸ್ಥೆ, ಸಂಪ್ರದಾಯ, ಜಡತೆ, ಹೊಸ ಆರ್ಥಿಕ ವಾತಾವರಣದಲ್ಲಿಯ ಬಡವರ ಶೋಷಣೆ; ಸಂಸ್ಕೃತಿ ವಿಹೀನತೆಗಳ ವಿರುದ್ಧದ ಬಂಡಾಯ ದನಿಯನ್ನು ಈ ಕವಿಗಳು ಕಾವ್ಯ ಧ್ವನಿಯಾಗಿ ರೂಪಿಸುವತ್ತ ತೋರುವ ಕಾಳಜಿ ಕಾವ್ಯ ಬೆಳವಣಿಗೆಯ ಹೊಸ ಮಜಲುಗಳ ನಿರ್ಮಾಣಕ್ಕೆ ಪ್ರೇರಕವಾಗಿದೆ. ಈ ದಶಕದಲ್ಲಿ ಅತ್ಯುತ್ತಮ ಕವಿತೆಯನ್ನು ಸೃಷ್ಟಿಸಿದ ಕವಿಗಳ ಗ್ರಹಿಕೆಗಳನ್ನು ಈ ರೀತಿ ಪಟ್ಟಿ ಮಾಡಬಹುದು :

* ಕವಿತೆಯು ಆಪ್ತ ಸಂವೇದನೆಯ ಅಭಿವ್ಯಕ್ತಿ ಮಾರ್ಗ.
* ಕವಿಯೊಳಗಿನ ಅನಿಸಿಕೆಗಳ ಶಾಬ್ದಿಕ ಕವಚ ಕಾವ್ಯ.
* ಪ್ರಭಾವಗಳೇನೇ ಇರಲಿ, ಒಲವು ಯಾವುದೇನೇ ಇರಲಿ, ಅದು ಕವಿಗೆ ಸ್ವಾಯತ್ತವಾಗಿರಬೇಕು. ಈ ಸ್ವಾಯತ್ತತೆ ಸಾಧಿಸಲು ಕವಿ ಅನುಸರಿಸಬೇಕಾದ ಬೇಕು, ಬೇಡಗಳು ಇವು : ೧) ಕಾಮ್ರೇಡರಿಗೆ ಪ್ರಿಯವಾಗುವಂತಹ ಕವಿತೆ ಬರೆಯಬೇಕಾಗಿಲ್ಲ. ಉದ್ವಿಗ್ನತೆ, ಭಾವಾವೇಶವನ್ನು ಹುಟ್ಟಿಸುವ ಕಾಲ ಇದಲ್ಲ. ೨) ವೇದಿಕೆಯ ಮೇಲೆ ಚಪ್ಪಾಳೆ ಗಿಟ್ಟಿಸುವಂತಹ ಕವಿತೆ

ಹೊಸೆಯಬೇಕಾಗಿಲ್ಲ. ಯಾವುದೇ ಚಾಲ್ತಿಯಲ್ಲಿರುವ ಸಾಹಿತ್ಯ ತತ್ತ್ವ. ಚಳವಳಿಯ ಪ್ರಭಾವದಿಂದ ಕವಿತೆ ರಚಿಸಬೇಕಾಗಿಲ್ಲ. ೩) ಚರಿತ್ರೆ, ಪುರಾಣ. ಜನಪದ ಕತೆ, ಲೌಕಿಕ ದೃಷ್ಟಾಂತ; ಸಂತ, ಶರಣ. ದಾಸ, ಸಾಧಕರ ಸಮಷ್ಟಿ ಪ್ರಜ್ಞೆಯನ್ನು ಅಂಗೀಕರಿಸಿ, ಕಾವ್ಯರೂಪದಲ್ಲಿ ಮರುಸೃಷ್ಟಿಸುವುದು. ಕಾವ್ಯವು ಒಂದು ರೂಪಕವಾಗಿ ಮೈದಳೆಯಲು ವಸ್ತುನಿಷ್ಠ ಕಲ್ಪನೆಗಳನ್ನು ಬಳಸುವುದು. ೪) ಸಮಕಾಲೀನತೆಗೆ ಪ್ರತಿಕ್ರಿಯೆ ಕೊಟ್ಟು ಇತ್ಯಾತ್ಮಕ ಅಂಶಗಳಿಗೆ ಬೆಂಬಲಕೊಡುವುದು; ಸಮಾಜದ ಹಾಗೂ ರಾಷ್ಟ್ರದ ಜಾತ್ಯತೀತ ಧೋರಣೆಯನ್ನು ಜೀವಂತವಾಗಿಡುವುದು. ಒಟ್ಟಿನಲ್ಲಿ ಹೃದಯ ಸಮ್ಮತ ಅನಿಸಿಕೆ; ಅನುಭವ; ಅನುಭಾವದ ಸ್ವೀಕಾರ.

'ಮಹೂವಾ' (೧೯೯೨) ಹಾಗೂ 'ನಾಳೆಗಾದರೂ ಸಿಗದೆ ನಿನ್ನ ತಾವಿನ ಗುರುತು' (೧೯೯೮) ಸಂಕಲನಗಳಿಂದ ಕಾವ್ಯಲೋಕದಲ್ಲಿ ಗಮನ ಸೆಳೆಯುವ ಕವಿ ಬಂಜಗೆರೆ ಜಯಪ್ರಕಾಶ. ಎಡಪಂಥೀಯ ವಿಚಾರ, ಚಳವಳಿ ಮತ್ತು ಕ್ರಿಯಾರಂಗದಲ್ಲಿರುವ ಬಂಜಗೆರೆಯವರ ಕವಿತೆ. ವ್ಯಕ್ತಿ : ಸಮಾಜಗಳೆರಡರ ಒಳ-ಹೊರಗುಗಳನ್ನು ಗ್ರಹಿಸುವ ಸಂಯಮದ ರಚನೆ. ಋತುಸಂಹಾರ, ಯುದ್ಧರಂಗದಿಂದ ಗೆಳತಿಗೆ ಎಂಬ ಕವನಗಳು ('ಮಹೂವಾ' ದಲ್ಲಿ) ವ್ಯಕ್ತಿಯು ಸಮೂಹ ಬದುಕಿನೆಡೆಗೆ ಮುಖ ಚಾಚುವ ಸಹಜತೆಯನ್ನು ಸಮರ್ಥಿಸುತ್ತವೆ. ಇದೇ ಚೇತನವಿರಬೇಕು; ನಾಳೆಗಾದರೂ ಸಿಗದೆ ನಿನ್ನ ತಾವಿನ ಗುರುತು –ಕವನಗಳು ಹೊರಬದುಕಿಗೆ ಕವಿಗಿರುವ ಬದ್ಧತೆ ಮತ್ತು ಸ್ವಂತ ಇರವಿನ ಆಪ್ತತೆಯ ಒಲವು-ಚೆಲುವನ್ನು ವ್ಯಾಖ್ಯಾನಿಸುತ್ತವೆ.

ಕಾವ್ಯವೆಂದರೆ, "ತಾಯೆದೆಗೆ ಬಾಯಿಟ್ಟ ಕಂದನ ಹೂ ತುಟಿಯಂಚಿನಲಿ ತುಳುಕಿದಂತೆ ಹಾಲ ಹನಿ" ಎಂದೆನ್ನುವ ಆರ್. ಮೋಹನ ನಾಗಮ್ಮನವರ 'ಅಗ್ರಹಾರದ ಒಂದು ಸಂಜೆ' ಎಂಬ ಸಂಕಲನ ಕೊಡುವ ಮೂಲಕ ತಮ್ಮ ಪ್ರತಿಭೆಯನ್ನು ಮೆರೆದಿದ್ದಾರೆ. ಚಮತ್ಕಾರವಿಲ್ಲದೆ. ಬಡಿವಾರದ ವರ್ಣನೆಗಳಿಲ್ಲದೆ, ಕಾವ್ಯಾತ್ಮಕ ಚಿಂತನೆಯನ್ನು ಬಿಡಿಸಿ ಇಡುವ ನಾಗಮ್ಮನವರ, ಮನೋವೇದಕ ಶಬ್ದಚಿತ್ರಗಳನ್ನು ಮೂಡಿಸುವ ಕವಿ. ವಿಷಾದದ ಮರ್ಮರ ಮೊರೆತವನ್ನು ಹೊರಡಿಸುವ ಕವಿ. ಕಳೆದುಕೊಂಡದ್ದರ ಬಗ್ಗೆ ನೋವು ಪಡುವವರಲ್ಲ; ತಪ್ಪಿದುದರ ಬಗ್ಗೆ, ಅದು ಗುರುತು ಸಿಗದಂತಾದುದರ ಬಗ್ಗೆ, ಆದರ್ಶವು ಸಾಕಾರವಾಗದ್ದರ ಬಗ್ಗೆ ವಿಷಾದ ಹೊರಡಿಸುವ ಕವಿ. 'ಸುಡುವ ಭೂಮಿ' (೧೯೯೪) ಸಂಕಲನ ಹೊರತಂದ ಕವಿ ಚಂದ್ರಶೇಖರ ತಾಳ್ಯ :

ಒಡಕು ದನಿಗಳು ಮಡಿದು
ರಾಗ ಮೂಡಲಿ ತಾಯಿ
ಕಳವಳದ ಕ್ಷಣವಳಿದು
ಹಾಡು ತೇಲಲಿ ಹಾಯಿ

ಎಂದು ಹಾರೈಸುತ್ತ ಸಾಮುದಾಯಿಕ ಆಶಯಗಳೆಲ್ಲ ವೈಯಕ್ತಿಕ ನೆಲೆಯಲ್ಲಿ ಹಾಡಾಗಬೇಕೆಂದು ಆಶಿಸಿದವರು.

'ಸಿಕಾಡ' (೧೯೯೪) ಮತ್ತು 'ಪ್ಯಾಂಜಿಯಾ' (೧೯೯೬) ಸಂಕಲನಗಳ ಜಿ. ಕೆ. ರವೀಂದ್ರಕುಮಾರರದು ಒಳದನಿಯ ಮಿಡಿತವಿರುವ ಸುಂದರ ಕಾವ್ಯ. ೧೭ ವರ್ಷದ ಕಾಲ, ನೆಲದೊಳಗಡೆಗೆ ಪೊರೆಯೊಳಗೆ ಇರುವ ಹುಳ ಸಿಕಾಡ. ಪೊರೆಯೊಡೆದು ಭೂಮಿಯ ಮೇಲೆ ಬಂದು ಒಂದೇ ಒಂದು ತಿಂಗಳು ಬದುಕುಳಿದು ಮತ್ತೆ ಸಾಯುವ ಈ ಕೀಟವನ್ನು ಸಂಕೇತವಾಗಿಸುತ್ತ ಮನುಷ್ಯನ ಸಾಮಾಜಿಕ ಬದುಕಿನ ಪರಿಯನ್ನು ವಿವೇಚಿಸುತ್ತಾರೆ ರವೀಂದ್ರಕುಮಾರ. ಜನಸಾಮಾನ್ಯನ ಬದುಕಿನ ಮೌಲ್ಯವನ್ನು ಸೂಕ್ಷ್ಮವಾಗಿ ಕಾಣುತ್ತ, ಪೋಷಿಸುವ ಈ ಕವಿ,

ನಮ್ಮೆದೆಯೊಳಗಿನ ಸಿಕಾಡಕ್ಕೆ ಸದಾ ಅವರಿವರ
ಕೈವಾಡ; ಸಂಯಮದ ಧ್ಯಾನಕ್ಕೆ ಗೊಂದಲದ ಕಡಿವಾಣ
ಕ್ಷಣ ಬದುಕ ಹಸಿವಿಗೆ ಸಿಗದ ಹರಿವಾಣ
ಧ್ಯಾನ ಕಾಣದ ಜ್ಞಾನ
ತವಕ ಕಾಣದ ಜತನ
ಕಾಯಲಾಗದ ಕಾಮ
ಮಾಯಲಾಗದ ಮಾಯ
ನಮ್ಮ ಅಧ್ಯಾಯ.

ಎಂದು ಚಿಂತಿಸುತ್ತಾರೆ. "ನಿನ್ನ ಧ್ಯಾನದ ಅರಿವು ನಮಗಿಹುದೆ ಸಿಕಾಡ ? ನಮ್ಮ ದಾರಿಯ ತಿಳಿವು ನಮಗಿಹುದೆ ಸಿಕಾಡ ?" ಎಂದು ಪರಿತಪಿಸುತ್ತಾರೆ. ರವೀಂದ್ರ ಕುಮಾರರ ಭಾಷಾಶಿಲ್ಪವೇ ಅಪೂರ್ವ, ಅನನುಕರಣೀಯ. ದಲಿತ ಜೀವದ ನೋವು-ನಗೆಗಳನ್ನು ನವಿರಾಗಿ, ಸಂಯಮದಿಂದ ದಾಖಲಿಸುವ ಇವರ ಕವಿತೆ ಹಲವು ಮನ್ನಣೆಗಳಿಗೆ ಪಾತ್ರವಾದದ್ದು ಸಹಜ. 'ಪ್ಯಾಂಜಿಯಾ'ದಲ್ಲಿ ಮಾನವಕುಲದ ಏಕತೆ, ಸಾಮರಸ್ಯದ ಬಗ್ಗೆ ಕಾಳಜಿ ಇದೆ. ಮನುಷ್ಯರು ಮನುಷ್ಯತ್ವದಿಂದ ಬೇರ್ಪಟ್ಟ ದುರಂತದ ಬಗ್ಗೆ ಕವಿ ತೋರುವ ಕಳಕಳಿ, ಅಂತಃಕರಣ ಕರಗುವ ನುಡಿಗಟ್ಟಿನಲ್ಲಿ ಬಂಧಿತವಾಗಿದೆ. ರವೀಂದ್ರಕುಮಾರರದು ಜಿಜ್ಞಾಸೆಯ ಸಂವೇದನೆ. ಮನುಷ್ಯ ಚರಿತ್ರೆಯನ್ನು ರೂಪಿಸಿದ ಧರ್ಮದ ಬಗ್ಗೆ ಮತ್ತು ಪ್ರೀತಿಯ ಬಗ್ಗೆ ಈ ಕವಿಗಿರುವ ಅನುಮಾನಗಳು, ಆತಂಕಗಳು, ಪ್ರಶ್ನೆಗಳು ಅವರ ವ್ಯಕ್ತಿತ್ವದ ತುಡಿತಗಳಾಗಿವೆ.

ದೇಶ ಕುಲಕರ್ಣಿಯವರ 'ಕೂಡಿಕೊಂಡ ಸಾಲು' ಪ್ರೌಢ ಕಾವ್ಯಾನುಭವ ಕೊಡುವ ಮಹತ್ವದ ಸಂಕಲನ (೧೯೯೯). ನವ್ಯ ಮನೋಧರ್ಮವೇ ಇಲ್ಲಿ ಇನ್ನಷ್ಟು ನವ್ಯವಾಗಿ ಮುಂದುವರಿದಿದ್ದು, ಚಿಂತನಪರತೆಯು ಹಲವು ವಿವಿಧ

ಸಂಕೇತ. ಪ್ರತಿಮೆಗಳಲ್ಲಿ ಗಟ್ಟಿಗೊಂಡಿದೆ. ಸಾಮಾಜಿಕತೆಯ ಒಳಗಿನಿಂದಲೇ ವ್ಯಕ್ತಿಯ ಪಾಡನ್ನು ಅರಿಯುವ. ಅಳೆಯುವ ವಿಶಿಷ್ಟ ನೋಟ ದೇಶ ಕುಲಕರ್ಣಿಯವರದು. ತನ್ನತನವನ್ನು ಉಳಿಸಿಕೊಂಡೂ ಉಳಿದೆಲ್ಲರಿಗೆ ಅರ್ಥಪೂರ್ಣವಾಗಿ ಬದುಕಬೇಕೆಂಬ ಕವಿಯ ಸಂಕಲ್ಪ ಬಹಳ ಕಡೆಯಲ್ಲಿ ಯಶಸ್ವಿಯಾಗಿದೆ.

ಕಾವ್ಯವನ್ನು 'ಶಬ್ದಪ್ರಸಂಗ'ವಾಗಿ ಪರಿಭಾವಿಸುವ ಆನಂದ ಝುಂಜರವಾಡ, ಮನುಷ್ಯನ ಸಾಮಾಜಿಕ ಅಸ್ತಿತ್ವದ ಒಳಗೆ ಅಗೋಚರ ಬೆಳೆದು ನಿಲ್ಲುವ ಅಸಹಾಯಕತೆ, ತರ್ಕಕ್ಕೆ ಸಿಗದ ತಬ್ಬಲಿತನದ ಅನುಭವವನ್ನು ಆಳವಾದ ನೋವಿನಿಂದ ಪ್ರಕಟಿಸುತ್ತಾರೆ. ಸಾತ್ವಿಕ ಕೋಪದುರಿಯಲ್ಲಿ ಈ ಕವಿ ಬೆಂದರೂ ಬದುಕಿನ ಶ್ರದ್ಧೆಯಲ್ಲಿ ಜೀವ ಪೋಷಿಸುವ ನೆಲೆಗಟ್ಟೊಂದನ್ನು ರೂಪಿಸಿಕೊಂಡು ಗಟ್ಟಿಯಾಗುತ್ತಾರೆ. ಆನಂದರದು ಬೆಳೆಯುವ ಹಾಗೂ ಬದುಕುವ ಕಾವ್ಯಮಾರ್ಗ.

"ಕಾವ್ಯ, ನನ್ನ ಕನಸುಗಳ ನೀಲಿನಕ್ಷೆ ಇದ್ದಂತೆ" ಎಂದುಕೊಂಡ ಕವಿ ಲಕ್ಷ್ಮೀಪತಿ ಕೋಲಾರ 'ನವಿಲು ಕಿನ್ನರಿ'ಯ ನಂತರ ತಮ್ಮ ಎರಡನೆಯ ಸಂಕಲನ 'ನೀಲಿ ತತ್ತಿ' ಹೊರತಂದಿದ್ದಾರೆ (೨೦೦೦). ತಾನು ಹೆಚ್ಚು ತೀವ್ರವಾಗಿ ಬದುಕುತ್ತಿದ್ದೇನೆಂದು; ತನ್ನ ಅಸ್ತಿತ್ವದ ಹರ್ಷೋತ್ಕಟ ಲಹರಿಯೊಂದು ಕಾವ್ಯದೆಳೆಯಾಗಿ ಒಳಗೆ ಹರಿಯುತ್ತಿರುವಂತೆಲ್ಲಾ ವಿಭ್ರಮ–ಅನುಭವಗಳು ಅಲ್ಲಿ ಮೈದಳೆಯುತ್ತವೆ ಎಂಬುದು ಲಕ್ಷ್ಮೀಪತಿಯವರ ಕಾವ್ಯಾನುಭವ. ಗಾಜು. ಆದಿಮಾಯೆಗೆ ಶರಣು; ಮುಂಗಾರು ಮಾಯೆ ಮುಂತಾದ ಕವನಗಳ ಅಭಿವ್ಯಕ್ತಿ ಕ್ರಮ; ಚಿಂತನೆಗಳ ಗಾಢ ಅನುರಕ್ತಿ ವಿಶಿಷ್ಟವಾಗಿವೆ. ಜೀವನ ಶ್ರದ್ಧೆಯ ಸೊಗಸಾದ ಮಾತುಗಳ ಈ 'ನೀಲಿ ತತ್ತಿ'ಯು ಕಾವಿಗೆ ಒಡೆದು ಹೊಸ ಜೀವವೊಂದು ಭೂಮಿಗೆ ಅವತರಿಸುವುದರ ಸುಂದರ ಸೂಚನೆಯೂ ಆಗಿದೆ.

ಮಾನವಕೇಂದ್ರಿತ ಕಾಳಜಿಯೊಂದನ್ನು ಸ್ಥಾಯಿಯಾಗಿಟ್ಟುಕೊಂಡು. ನಿಸರ್ಗ, ಸಮಾಜ, ಸಂಪ್ರದಾಯ. ಇತಿಹಾಸಗಳಿಗೆ ಸ್ಪಂದಿಸುತ್ತ ಕವಿತೆ ರಚಿಸುವುದು ಬಿದರಹಳ್ಳಿ ನರಸಿಂಹಮೂರ್ತಿಯವರ ಜೀವನ ಧೋರಣೆ. ಅವರ 'ಸೂರ್ಯದಂಡೆ' (೧೯೯೬) ಆತ್ಮನಿಷ್ಠ ಕವಿತೆಗಳ ಹಾರ್ದಿಕ ಸಂಕಲನ. "ಆತ್ಮಕ್ಕೆ ಕಾವ್ಯದ ಆಕೃತಿಯನ್ನು ಒಗ್ಗಿಸುವುದು ಒಳ್ಳೆಯ ಕಾವ್ಯ" ಎಂಬ ಅರಿವಿನಿಂದ ಬರೆಯುವ ನರಸಿಂಹಮೂರ್ತಿಯವರು, "ಅತ್ಯಂತ ತಿಳಿಯಾದ ಅನುಭಾವ ಮತ್ತು ಅತ್ಯಂತ ಪ್ರಾಮಾಣಿಕವಾದ ಸಮತಾವಾದ. ಒಂದೇ ದೃಷ್ಟಿಯ ಎರಡು ಕಣ್ಣುಗಳು" ಎಂಬ ಒಳಗುಟ್ಟನ್ನು ಕಾವ್ಯಾತ್ಮಕವಾಗಿ ಬಯಲಿಗಿಡುತ್ತ ಬಂದಿದ್ದಾರೆ. 'ನೆಲದ ಬೊಗಸೆ' ನೀರಿನ (ಜೀವಜಲ) ಬಗೆಗಿನ ಸುಂದರ ವ್ಯಾಖ್ಯಾನ. ಕೆರೆ ಕುಂಟೆಗಳನ್ನು ಉಳಿಸಿಕೊಳ್ಳದೆ ಹೋದರೆ, ಅಂತರಂಗದ ಸಂಸ್ಕೃತಿಗೂ ನಾವು ಎರವಾಗುವೆವು; ಬಹಿರಂಗದ ಬಾಯಾರಿಕೆಗೂ ಬೀಳುವೆವು. ಈಗಾಗಲೇ–

ಆವಿಯಾಗಿದೆ ನೀರು ಮಾಯವಾಗಿದೆ ಹಸಿರು
ತೇವ ಆರಿದ ಜೀವ ನಗರಾಕೃತಿ

ಎಂದಾಗಿದೆ. " ಕೆರೆಯ ಒಡಲಲಿ ಕಂಡು. ಇಡಿಯ ನೀಲಾಕಾಶ ನಗರ-ರಾಜ್ಯಗಳಲ್ಲಿ ಕಣ್ಣೆರೆಯಲಿ " ಎಂದು ವಾಚ್ಯವಾಗಿ ಹಾರೈಸಿದರೂ ಈ ಕವಿತ್ತೆ, ಆಳದನಿಯಿಂದ ತೋಡಿಕೊಳ್ಳುವ ಕಳಕಳಿ ಮಹತ್ವದ್ದಾಗಿದೆ. ಸೂರ್ಯದಂಡೆ, ಹೊನ್ನಾವರಿಕೆ, ಹೇಮಕುಂಡ ಮೊದಲಾದ ಕವಿತೆಗಳ ಆಕೃತಿಯೂ ಸೊಗಸಾಗಿದೆ; ವಸ್ತುನಿಷ್ಠೆ ಇಲ್ಲಿ ಪೋಷಿತವಾಗಿದೆ. ಛಂದೋಲಯಗಳ ಮೇಲಿನ ನರಸಿಂಹಮೂರ್ತಿಯವರ ಹಿಡಿತವು ಪ್ರೌಢ ವಿಚಾರಗಳ ಅಭಿವ್ಯಕ್ತಿಗೆ ನೆರವಾಗಿದೆ. ' ಸಾಮರಸ್ಯ ' ಕಥನ ಕವನ(ಅಖಂಡ ಕಾವ್ಯ)ವನ್ನು ನರಸಿಂಹಮೂರ್ತಿ ಭಾಮಿನೀ ಷಟ್ಪದಿಯಲ್ಲಿ ಬರೆದಿರುವುದು ಆಶಯ – ಅಭಿವ್ಯಕ್ತಿಗಳ ಸುಂದರ ಸಮನ್ವಯಕ್ಕೆ ಉತ್ತಮ ಉದಾಹರಣೆಯಾಗಿದೆ. ನಮ್ಮ ಹಳೆಯ ಸಂಸ್ಕೃತಿ, ಮಾನವ ಸಂಬಂಧಗಳ ಬಗ್ಗೆ ಕೆಲವು ಸಲ ಕುತ್ಸಿತ ಬುದ್ಧಿಯ, ಸಂಕುಚಿತ ಮತಿಗಳ ಹಸ್ತಕ್ಷೇಪದಿಂದಾಗಿ ಅಪಾರ್ಥ ಕಲ್ಪನೆಗಳು ಹುಟ್ಟಿವೆ. ದೊಡ್ಡವರನ್ನೂ ಸಣ್ಣವರನ್ನಾಗಿ ಮಾಡಿವೆ. ಅಂಥ ಒಂದು ಕಗ್ಗವು ಕವಿಕುಮಾರವ್ಯಾಸ ಮತ್ತು ಚಾಮರಸರ ಮಧ್ಯದ ಸ್ನೇಹ-ಬಾಂಧವ್ಯವನ್ನು ಮತೀಯ ಸಂಕುಚಿತತೆಯಲ್ಲಿ ಕಡಿದು ಹಾಕುವಂತೆ ಪ್ರಚಾರ ಪಡೆದಿದೆ. ಆ ಹಳೇ ದಂತಕತೆಗೆ ಚಿಕಿತ್ಸೆ ಕೊಟ್ಟು, ನಿಜವಾದ - ಸಂಭಾವ್ಯ ಸತ್ಯದ ಕತೆಯನ್ನು ಕಟ್ಟಿ ಹೇಳಬೇಕೆಂದು ನರಸಿಂಹಮೂರ್ತಿ ' ಸಾಮರಸ್ಯ ' ದ ಈ ಅಖಂಡ ಕಾವ್ಯ ರಚಿಸಿದ್ದಾರೆ. ಕೆಡಹುವುದಕ್ಕೆ ವ್ಯತಿರಿಕ್ತವಾಗಿ ಕಟ್ಟುವ ಸಂಸ್ಕೃತಿಯ ಕಾವ್ಯ ಇದಾಗಿದೆ. " ಗೆಲವು ಸಿಕ್ಕಲಿ ಸರ್ವರಿಗು ಸಮತೋಲ ತತ್ವದಲಿ " ಎಂಬ ಈ ಕಾವ್ಯದ ಆಶಯ ೫ ಸ್ಪಂದಗಳ ೫೫ ಷಟ್ಪದಿಗಳಲ್ಲಿ ನಿರೂಪಿತವಾಗಿದೆ. " ಕ್ರಾಂತಿಯರ್ಥವೆ ಸರ್ವಜಯವು ಸರ್ವಜನ ಸುಖವೂ, ಭ್ರಾಂತಿಯಳಿದಿರೆ ಸೌಹಾರ್ದವು " ಎಂಬುದು ಕವಿಯ ಖಚಿತ ತಿಳಿವಳಿಕೆ. ಗದ್ಯದ ಜಾಡಿಗಿಳಿದ ನವ್ಯದ ಸ್ವಚ್ಛಂದದಲ್ಲಿ ತನ್ನ ಚೆಂದಗಾರಿಕೆಯನ್ನೇ ಕವಿತೆ ಕಳೆದುಕೊಂಡಿತೆಂದು ಕೊರಗುವ ನಮ್ಮ ಈ ಸಂದರ್ಭದಲ್ಲಿ ಬಿದರಹಳ್ಳಿ ನರಸಿಂಹಮೂರ್ತಿಯವರ ಈ ಷಟ್ಪದಿಯ ಸುಂದರ ಕಾವ್ಯ, ಹೊಸ ಭರವಸೆಯನ್ನು ಹುಟ್ಟಿಸಿದೆ.

' ಗೋಧೂಳಿ ' (೧೯೯೩) ಹಾಗೂ ' ನಾನೊಂದು ಮರವಾಗಿದ್ದರೆ ' (೧೯೯೮) ಸಂಕಲನಗಳಿಂದ ಈ ದಶಕದ ಕಾವ್ಯಲೋಕದಲ್ಲಿ ಗಮನ ಸೆಳೆವ ಕವಿ ಮೂಡ್ನಾಕೂಡು ಚಿನ್ನಸ್ವಾಮಿ. ವರ್ತಮಾನವನ್ನು ಬಗೆಯುವ ಇವರ ಕ್ರಮ ಮನೋವೇದಕವಾಗಿದೆ. ಮಂದಿರ – ಮಸೀದೆಯ ವಿವಾದ ಇಡೀ ರಾಷ್ಟ್ರದ ಸಾಮರಸ್ಯವನ್ನು ಹಾಳುಗೆಡವಿ. ಆಧುನಿಕ ಜೀವನವನ್ನು ತಲ್ಲಣಗಳಿಗೆ ಈಡುಮಾಡಿದ ಪ್ರಸಂಗ; ರಾಜಕೀಯ ತತ್ವ – ಆದರ್ಶಗಳಿಗೆ ಹಿಡಿಸಿದ ಗ್ರಹಣ. ಸಾಮಾನ್ಯನಿಗೂ ಯೋಚನೆ, ಮರುಯೋಚನೆಗೆ ಹಚ್ಚಿದ ವಿದ್ಯಮಾನ.

ನಮ್ಮ ಎಲುಬಿನ ಹಂದರದೊಳಗೊಂದು
ಮಂದಿರವಿದೆ.
ಉಚ್ಛ್ವಾಸ - ನಿಶ್ವಾಸಗಳ ಓಂಕಾರವಿದೆ.
ಅಲ್ಲಿ ರಾಮನಿದ್ದಾನೆ

ನಮ್ಮ ಎಲುಬಿನ ಹಂದರದೊಳಗೊಂದು
ಮಸೀದಿ ಇದೆ. ಅಗೋ ಮೇಲೆ—
ನೋಟ ನಕ್ಷತ್ರ, ಕಣ್ಣಲಗೆ ಚಂದಿರ
ಅಲ್ಲಿದ್ದಾನೆ. ಅಲ್ಲಾ.

ನಮ್ಮ ಎಲುಬಿನ ಹಂದರದೊಳಗೊಂದು
ಇಗರ್ಜಿ ಇದೆ— ಅಲ್ಲಿದೆ
ಕಶೇರು ಹೆಗಲ ಮೂಳೆಗಳಿಂದಾದ
ಶಿಲುಬೆ. ಅಲ್ಲಿದ್ದಾನೆ. ನನಗಾಗಿ ಮೊಳೆ
ಜಡಿಸಿಕೊಂಡು ನಿತ್ಯ ಮರುಗುವ
ಯೇಸುಕ್ರಿಸ್ತ.

ಇಂತಹ ವಿವೇಕಪೂರ್ಣ ಸಂವೇದನೆಗೆ — ನಂಬಿಕೆಗೆ ಆಘಾತ ಆಗುವಂತೆ.... ಒಮ್ಮೆ

ರಕ್ತಮಾಂಸದ ದೇಹಗಳುರುಳಿದವು
ದೇಗುಲಗಳುಳಿದವು.
ಎಲುಬಿನ ಹಂದರದೊಳಗೆ
ಬೆಚ್ಚನೆಯ ಭಕ್ತಿ ಪಂಜರದೊಳಗೆ.

ಸ್ವತಂತ್ರ ಮತ್ತು ಜನತಾಂತ್ರಿಕ ಆಡಳಿತದ ಆದರ್ಶಗಳು ಸಾರ್ವಜನಿಕವಾದಾಗ. ವ್ಯಕ್ತಿಯ ನೀತಿ, ಶಿಸ್ತು, ಸಂಯಮಗಳು ನೇರ ಹಾಗೂ ಪಾರದರ್ಶಕವಾಗಿರಬೇಕಾದ್ದು ಅಪೇಕ್ಷಣೀಯ. ಅದನ್ನು ಹಾಗೆ ರೂಪಿಸುವ, ರೂಢಿಸುವ ಹೊಣೆ ಶಿಕ್ಷಣದ್ದು. ಶಿಕ್ಷಣದಲ್ಲಿ ಸಾಂಸ್ಕೃತಿಕ, ನೈತಿಕ ಮೌಲ್ಯಗಳು ಇನ್ನೂ ಖಚಿತವಾಗಿ ಒಡಮೂಡಿಲ್ಲ. ಭಾಷೆ, ಸಾಹಿತ್ಯಗಳಿಂದ ಶಿಕ್ಷಣಕ್ಕೆ ಪೂರೈಕೆಯಾಗಬೇಕಾದ ಈ ಕೆಲಸ. ಪರಿಣಾಮಕಾರಿಯಾಗಿ ನೆರವೇರಿಲ್ಲ. ನೈತಿಕ ಪ್ರಜ್ಞೆ ಮತ್ತು ವ್ಯವಹಾರ; ಸೂಕ್ಷ್ಮ ಸಂವೇದನೆ ಮತ್ತು ಕ್ರಿಯಾಶೀಲತೆ —ಇವುಗಳ ನಡುವೆ ಸ್ಪಷ್ಟವಾಗಿ ಬಿರುಕು ಬಿದ್ದಿದೆ. ಇದು ಭಯಾನಕ ಬಿರುಕು. ಕವಿಗಳನ್ನು ಕಾಡಿದ, ಚಿಂತಿಸಲು ಹಚ್ಚಿದ ಈ ಭಗ್ನತೆ ದಶಕದ ಬಹುಪಾಲು ಕವಿತೆಗಳಲ್ಲಿ ಸಂವಾದಕ್ಕೆ ಒಳಗಾಗಿದೆ.

ಕವಿತೆ. ಒಬ್ಬಾನೊಬ್ಬ ಕವಿಯ ರಚನೆ, ಅಥವಾ ಆತ ಪ್ರಕಟಿಸಿದ ಭಾಷಿಕ ಪ್ರತಿಮೆ ಮಾತ್ರ ಅಲ್ಲ; ಅದು ಜನರಾಡುವ ಜೀವಂತ ನುಡಿಗಟ್ಟಿನಲ್ಲಿ ಒಡಮೂಡುವುದರಿಂದ,

ನಿಮಿತ್ತಕ್ಕೆ ಒಬ್ಬ ಕವಿಯ ಪ್ರಾತಿಭ ಶಕ್ತಿಯ ಒಡಲಿನಿಂದ ಒಸರಿದ ಜೀವದ್ರವವಾಗಿರುತ್ತದೆ. ಆ ದ್ರವ ಒಳಗೊಂಡ ಅಂಶ, ಮೂಕರಾಗಿರುವ ಇನ್ನೆಷ್ಟೋ ಜನರ ಸಂವೇದನೆಯೇ. ಅವ್ಯಕ್ತ, ಅಪರಿಪೂರ್ಣ, ಅಸಹಾಯಕ ಸ್ಥಿತಿಯ ಸಾಮಾನ್ಯರ ಈ ಸಂವೇದನೆಯನ್ನು ಪ್ರತಿನಿಧಿಸುವ ದನಿ, ಕವಿಯೊಬ್ಬನಿಂದ ಸುಸಂಗತ ರೂಪದಲ್ಲಿ ಹೊರಹೊಮ್ಮುತ್ತದೆ. ಸುಸಂಗತಿಯು ಕವಿತೆಯ ಶಿಲ್ಪದ ಶಿಸ್ತು. ಸೌಂದರ್ಯದಿಂದ ನಿಶ್ಚಿತವಾಗುತ್ತದೆ. ರಾಜಕೀಯ ಕಾರಣಗಳಿಂದ ಅಸ್ವಸ್ಥಗೊಳ್ಳುವ, ಅರಾಜಕತೆಯಿಂದ ಭರವಸೆ ಕಳೆದುಕೊಳ್ಳುವ ಸಾಮಾನ್ಯರ ಮನಸ್ಥಿತಿಯ ಒಳಗಡೆ ಸಂಸ್ಕೃತಿಯ ಆದರ್ಶವೊಂದು ಸಮತೋಲನಕ್ಕಾಗಿ ಹವಣಿಸುತ್ತಿರುತ್ತದೆ. ಕವಿ, ಈ ಆದರ್ಶದ ಪ್ರರೂಪಗಳನ್ನು ಬೇರೆ ಬೇರೆ ಉಕ್ತಿ ಚಾತುರ್ಯಗಳಿಂದ; ಮಾರ್ಮಿಕ ನುಡಿಗಟ್ಟಿನಿಂದ ಸೃಷ್ಟಿಸಿ ಕವಿತೆ ಹೆಣೆಯುತ್ತಾನೆ. ಸ್ವೋಪಜ್ಞತೆಯ ನವನವೀನ ಪ್ರತಿಮೆ, ಪ್ರತೀಕಗಳನ್ನು ಶೋಧಿಸಿ ಸಮರ್ಥ ಅಭಿವ್ಯಕ್ತಿಯನ್ನು ರೂಢಿಸಿಕೊಂಡ ಕವಿಗಳು ಈ ದಶಕದ ತುಂಬ ಇದ್ದಾರೆ : 'ಅವಳೆದೆಯ ಜಂಗಮ'ದ ಎಸ್. ಜಿ. ಸಿದ್ಧರಾಮಯ್ಯ: 'ನೆಲದ ಜೋಗುಳ' ಹಾಡುವ ಮುಳ್ಳೂರು ನಾಗರಾಜ; 'ಅವ್ವ' ಬರೆದ ಎಲ್. ಹನುಮಂತಯ್ಯ: 'ಸಂತೆ ಮುಗಿವ ಸಮಯ'ದ ಪ್ರಹ್ಲಾದ ಅಗಸನಕಟ್ಟೆ; 'ಉರಿಯ ಚಪ್ಪರದೊಳಗೆ' ರಚಿಸಿದ ಜಗದೀಶ ಮಂಗಳೂರಮಠ; 'ಫೀನಿಕ್ಸ್ ಹಾರಿದ ಹಾದಿ'ಯ ದೇಶಪಾಂಡೆ ಸುಬ್ಬರಾಯ; 'ಮನೆಯಂಗಳದ ಮರ' ನೆಟ್ಟ ಲೋಕೇಶ ಅಗಸನಕಟ್ಟೆ; 'ಒಂದು ಗಿಳಿ' ಸಾಕಿದ ಮಹಾಬಲಮೂರ್ತಿ ಕೊಡ್ಲೆಕೆರೆ; 'ಭೂಮಧ್ಯ ರೇಖೆ' ಹಾಗೂ 'ನೋವಿನ ಹೆಜ್ಜೆ'ಗಳನ್ನು ನಡೆಯುವ ಚಿಂತಾಮಣಿ ಕೊಡ್ಲೆಕೆರೆ; 'ಕರಿಯ ಕಟ್ಟಿದ ಕನಸು' ಕಂಡ ಸತ್ಯಾನಂದ ಪಾತ್ರೋಟ; 'ದಾರಿ ಮತ್ತು ಆಕಾಶ'ದ ಸ. ರಘುನಾಥ: 'ಸೂರ್ಯಜಲ' ರಚಿಸಿದ ಎಚ್. ಎಸ್. ಶಿವಪ್ರಕಾಶ; 'ಅಭಿನಯದ ಬಯಲು' ಕಂಡ ಕವಿ ವೀಚಿ; 'ಆತ್ಮ ಚರಿತ್ರೆಯ ಕೊನೆಯ ಪುಟ'ದ ಎಸ್. ದಿವಾಕರ; 'ಮೌನದ ಮಣೆ'ಯ ಎಸ್. ಮಂಜುನಾಥ; 'ದಕ್ಲರ ಕಾವ್ಯ' ರಚಿಸಿದ ಕೆ. ಬಿ. ಸಿದ್ಧಯ್ಯ; 'ಆ ಅಜ್ಜ – ಈ ಮೊಮ್ಮಗ'ದ ಕವಿ ಮುದೇನೂರು ಸಂಗಣ್ಣ; ಮುಂತಾದವರ ಕಾವ್ಯ ಸಾಧನೆಯು ಅಭ್ಯಾಸಕ್ಕೆ ಮತ್ತು ಚರ್ಚೆಗೆ ಅರ್ಹವಾಗಿದೆ. ಮೇಲ್ಕಂಡ ಕವಿಗಳೆಲ್ಲಾ ೪೦ ರ ಗಡಿ ದಾಟಿದವರೇ. ಬದುಕಿನಲ್ಲಿ ಚಳವಳಿಯ ಕಾವು ಕಳೆದುಕೊಂಡು, ವ್ಯವಸ್ಥೆಯ ಜೊತೆಗೆ ಒಂದು ಬಗೆಯ ಅನಿವಾರ್ಯ ಸಂಧಾನ ಮಾಡಿಕೊಂಡು ಸಮಾಧಾನದ ಜೀವನ ಗತಿಗೆ ಒಗ್ಗಿಸಿಕೊಂಡವರು. ೪೦ ರ ಪ್ರಾಯದ ಕೆಳಗಿನವರಲ್ಲಿ ಭರವಸೆಯ ದಾಟಿ-ದನಿ ಉಳ್ಳವರು. ಇಲ್ಲ ಎನ್ನುವಷ್ಟು ಕಡಿಮೆ. ಪ್ರತಿಭಾವಂತರು, ಸಂವೇದನಶೀಲರು ಕಾವ್ಯ ಲೋಕದಿಂದೆಲ್ಲೋ ದೂರ ಉಳಿದಿದ್ದಾರೆನಿಸುತ್ತದೆ. ಹಾಗೆ ನೋಡಿದರೆ ಮುಂದಿನ ದಶಕದ ಕಾವ್ಯಲೋಕ ಸಾಕಷ್ಟು ಮಟ್ಟಿಗೆ ಬರಿದೇ ಉಳಿಯುವ ಸನ್ನಿವೇಶವಿದೆ. ಮೂವತ್ತರ ಗಡಿ ದಾಟಿದ ಕವಿಗಳೇನೋ ಇದ್ದಾರೆ: ಅವರು ಸಿದ್ಧ ಆಕೃತಿಯನ್ನು ಬಳಸಿ

ಬರೆಯುತ್ತಿರುವ ಪದ್ಯಗಳಲ್ಲಿ ಜೀವಂತಿಕೆ. ಲವಲವಿಕೆ ಕಾಣದು. ಇಂತಹ ಬರಡು, ಭರವಸೆರಹಿತ ಪರಿಸ್ಥಿತಿಯಲ್ಲಿ ಒಂದೇ ಒಂದು ಉಜ್ವಲ ಕಾವ್ಯದನಿ ಕೇಳಿ ಬರುತ್ತಿರುವುದು ವಿಕ್ರಮ ವಿಸಾಜಿ(ಜ. ೧೯೭೬ ಭಾಲ್ಕಿ)ಯಿಂದ.

ಹನ್ನೆರಡನೆಯ ವಯಸ್ಸಿನಲ್ಲಿ ಶಿಶು ಕವನಗಳನ್ನು ಪ್ರಕಟಿಸಿ ಕಾವ್ಯಲೋಕಕ್ಕೆ ದಟ್ಟಡಿ ಇಡುತ್ತ ಬಂದ ವಿಕ್ರಮ ವಿಸಾಜಿ, ೧೯೯೪ ರಲ್ಲಿ ' ನೀವೇಕೆ ಕತ್ತಲೆ ಕಡೆ ? ' ಪ್ರೌಢ ಕವಿತೆಗಳನ್ನು ಪ್ರಕಟಿಸಿದ. ಈತನ " ತಮಾಷಾ " (೨೦೦೦) ಕವನ ಸಂಕಲನ ಶತಮಾನದ ಕೊನೆಯ ವರ್ಷದಲ್ಲಿ ಪ್ರಕಟಗೊಂಡು ಹೊಸ ಆಶೋತ್ತರ ಹುಟ್ಟಿಸಿದೆ. ಸಂಕಲನದ ಶೀರ್ಷಿಕೆ ಕವನ. ಹಸಿಹರೆಯದ ಮನಸ್ಸಿನ ಮೇಲೆ ತಮಾಶಾ ನರ್ತಕಿ ಬೀರಿದ ತೀವ್ರ ಪರಿಣಾಮವನ್ನು ಬಿಂಬಿಸುವ ಗಟ್ಟಿ ಕೃತಿಯಾಗಿದೆ. ಸ್ವಭಾವೋಕ್ತಿಯ ಕ್ರಮದಲ್ಲಿ, ಆಡುಮಾತಿನ ಶೈಲಿಯಲ್ಲಿ ಮನಸ್ಸಿನ ಪದರುಗಳನ್ನು ಪ್ರಾಮಾಣಿಕವಾಗಿ ಬಿಚ್ಚುತ್ತ ಹೋಗುವ ಕವಿ ಒಂದು ಅನುಭವವನ್ನು ಕಣ್ಣಿಗೆ ಕಟ್ಟುತ್ತಾನೆ. ' ನೀಸಿರದಿದ್ದರೆ ' ಕವನದ ತರ್ಕಸೌಂದರ್ಯ ವಿಕ್ಷಿಪ್ತತೆಯಿಂದಾಗಿಯೇ ಮನ ಸೆಳೆಯುತ್ತದೆ. ' ಮೊಗಲ ಅಂತಃಪುರದ ಆರ್ತ ನಾದಗಳು ' ಕವನ ಹೆಣ್ಣುದನಿಗಳ ಹತಾಶೆ ಹಾಗೂ ಆಸರೆಯ ಕೋರಿಕೆಯನ್ನು ಮೊರೆಯಿಡುವ ದಾಟಿಯಲ್ಲಿ ನಿರೂಪಿಸುತ್ತದೆ. ಮೊರೆ ಮನಸ್ಸನ್ನು ಬಗಿಯುವಷ್ಟು ಚೂಪಾಗಿದೆ. ಪ್ರತಿ ಎರಡು ಸಾಲಿನ ಕೊನೆಗೆ ಬರುವ ತೋರಿರೆ, ಬೀಸಿರೆ, ಮಲಗಿಸಿರೆ, ನಿಲಿಸಿರೆ, ಒಯ್ಯಿರೆ, ಹೇಳಿರೆ ಮುಂತಾದ ಪದಗಳು ಒಂದು ಬಗೆಯ ಶಿಥಿಲತೆಯಿಂದಾಗಿ, ಬಂಧದ ಬಿಗಿ ತಪ್ಪಿಕೊಂಡಂತಾಗಿದೆ ಎಂದು ಮುನ್ನುಡಿಕಾರ ಡಾ. ಜಿ. ಎಸ್. ಶಿವರುದ್ರಪ್ಪನವರು ಲೋಪ ಎತ್ತಿ ತೋರಿಸುತ್ತಾರೆ. ಈ ಕವನವನ್ನು ಓದಿ ಕೇಳಿಸಿಕೊಳ್ಳಬೇಕು. ಆಗ. ಈ ಬಂಧದ ಶಿಥಿಲತೆಯಲ್ಲೇ ಅಭಿವ್ಯಕ್ತಿಯ ಸಹಜತೆ-ಸೊಗಸು ಅಡಕವಾಗಿರುವುದು ನಮ್ಮ ಅನುಭವಕ್ಕೆ ಬರಬಲ್ಲದು. ಈ ಮುಕ್ತಾಯಗಳು ರೋದಿಸುವ ರಾಣಿಯರ ಮೊರೆತದ ತೀವ್ರತೆಯನ್ನು ಧ್ವನಿಸುತ್ತಿವೆ. ಇತಿಹಾಸ, ಪುರಾಣದ ವ್ಯಕ್ತಿಗಳನ್ನು ಹಾಗೂ ಸಂದರ್ಭಗಳನ್ನು ವಸ್ತುವಾಗಿಸಿಕೊಳ್ಳುವ ವಿಕ್ರಮ ವಿಸಾಜಿ. ಅವುಗಳಿಗೆ ಕೊಡುವ ಅರ್ಥ– ಇಂದಿನ ಸಂವೇದನೆಯ ಫಲವಾಗಿರುವುದು ಗಮನಾರ್ಹ. ಉರ್ದು ಭಾವಗೀತೆಯ ಪ್ರಭಾವದಿಂದಾಗಿ ಮುಕ್ತ ಛಂದಸ್ಸಿನಲ್ಲಿಯೇ ಭಾವಗಳನ್ನು ಸೆರೆಹಿಡಿಯುವಲ್ಲಿ ವಿಕ್ರಮ ಪ್ರಯೋಗಶೀಲನೂ ಆಗುತ್ತಾನೆ. ಕನ್ನಡ ಭಾವಗೀತೆಯ ಛಂದಸ್ಸನ್ನು ಅಳವಡಿಸಿಕೊಳ್ಳಲು ಹೋದರೆ, ಕೃತಕ ಪ್ರಯತ್ನವೂ ಆದೀತು; ಏಕತಾನತೆಯ ದೋಷದಿಂದಲೂ ಕಾವ್ಯ ನರಳಬಹುದು. ಈಗಿರುವಂತೆ, ವಿಸಾಜಿಯ ಕಾವ್ಯಬಂಧ ಸ್ವತಂತ್ರ ಹಾಗೂ ವಸ್ತುಪರ ಆಶಯಕ್ಕೆ ಅನುಸಾರಿಯಾಗಿದ್ದು, ಕಾವ್ಯಕ್ಕೆ ಅನನ್ಯತೆ ತಂದುಕೊಟ್ಟಿದೆ.

ಕಪ್ಪು ಮೋಡದಲಿ ಸಿಕ್ಕಿ
ಕಪ್ಪಾಗಿ ಬಿಡುವ ಸೂರ್ಯನಾಗದೆ
ಅದನು ಸೀಳಿ ಹೊರಬರುವಂತಾಗಲಿ
ನನ್ನ ಕವನ.

ಎಂದು ಆಶಿಸುವ ಈ ಕವಿಯೆದುರು ಕಲ್ಪನೆಯ ಸುಂದರ ಭಾಷಾಪ್ರಪಂಚವೇ ಬಾಯ್ತೆರೆದು ಬಿದ್ದಿದೆ. ಬಾಚಿ, ಕೈಬಾಚಿ ಸುರಿದುಕೊಳ್ಳುವ ಶಕ್ತಿ, ಯುಕ್ತಿ ಕೂಡ ವಿಕ್ರಮ ವಿಸಾಜಿಯಲ್ಲಿ ನಿಹಿತವಾಗಿದೆ. ಇಂತಹ ಅಪೂರ್ವ ಸ್ವೀಕಾರ ಶಕ್ತಿಗೆ ಹಂಬಲಿಸುವ ಕವಿಗಳಾಗಿ ಎಂ. ಆರ್. ಭಗವತಿ, ಮೀನಾ ಸದಾಶಿವ, 'ಸಿಸಿಫಸ್‌ರ ಸುತ್ತು' ಸಂಕಲನದ ಬಸವರಾಜ ಸಾದರ, 'ನಿನ್ನದೊಂದು ರುಜು ಬೇಕು' ಸಂಕಲನದ ತುರವಿಹಾಳ ಚಂದ್ರು– ಒಳ್ಳೇ ಭರವಸೆ ಹುಟ್ಟಿಸುತ್ತಿದ್ದಾರೆ.

ಸಾಂದರ್ಭಿಕವಾಗಿ ಪ್ರತಿಕ್ರಿಯಾತ್ಮಕವಾಗಿ ಹೊರಬಿದ್ದ ಕವಿತೆಗಳು ಈ ಅವಧಿಯಲ್ಲಿ ಸಾಕಷ್ಟಿವೆ. ದೇಶದ ಭಾವೈಕ್ಯವನ್ನು ಅಲುಗಾಡಿಸಿದ ೧೯೯೨ ರ ಡಿಶಂಬರ ೬ ರ ಘಟನೆಗೆ ಪ್ರತಿಕ್ರಿಯೆಯಾಗಿ ಬಂದ ಬಹುಪಾಲು ಕವಿತೆಗಳಲ್ಲಿ ವಾಚ್ಯವೇ ವಿಜೃಂಭಿಸಿದುದು, ಅವಸರದ ಕಾರಣಕ್ಕಾಗಿ. ಈ ವಿದ್ಯಮಾನವನ್ನು ಅದರ ರಾಜಕೀಯ, ಚಾರಿತ್ರಿಕ ಹಿನ್ನೆಲೆಯಿಂದ ಗ್ರಹಿಸಿ, ತಣ್ಣಗೆ ಯೋಚಿಸಿ, ಧ್ವನಿಪೂರ್ಣವಾಗಿ ಕವನ ರಚಿಸಿದವರು ತೀರ ಕಡಿಮೆ. ಆರ್ ವಿ. ಭಂಡಾರಿಯವರು ಬರೆದ 'ಕಟ್ಟುವ ಕೆಲಸ' ಕವನ ವೈಚಾರಿಕವಾಗಿ ಗಂಭೀರವಾಗಿದ್ದು, ಮಾರ್ಮಿಕವಾಗಿದೆ.

ಕಡಿದಿರಿ ನೀವು ಕಾನೂನಿನ ಕತ್ತಿ ಹಿಡಿದು
ಕತ್ತಲೆ ಕವಿದ ಕಾಡನ್ನು
ಬಯಲು ಮಾಡಿದಿರಿ ನೀವು
    ಕುಟ್ಟಿ ತಟ್ಟಿ ತೆಗ್ಗು-ದಿನ್ನೆಗಳನ್ನು.
    ......................................
    ............

"ಕೆಡುಹಿ" ಎಂದಿರಿ, ನೀವು ವಿವಿಧ ಜಾತಿ-
    ಲೋಹಗಳಿಂದ ಕಟ್ಟಿದ ಕೋಟೆಯನ್ನು...
ಅಸ್ಪೃಶ್ಯತೆಯ ಉಕ್ಕಿನ ಪಾಗಾರವನ್ನು.
    ಆದರಯ್ಯೋ ಕೆಡಹಿದರವರು
    ಮಸೀದಿ ಗೋಪುರಗಳನ್ನು.
ಹೃದಯ ಹೃದಯದ ಮಧ್ಯೆ ಬೆಸೆವ
    ಸೇತುವೆಯನ್ನು...

ಇದೆಲ್ಲವನ್ನು ಕವಿ, ಗಾಂಧೀಜಿಯನ್ನು ಸಂಬೋಧಿಸಿ ಹೇಳುತ್ತಿದ್ದಾರೆ. ಆ ಗಾಂಧಿಯನ್ನು ಹುಡುಕುತ್ತ ಕವಿ ಮುಂದೆ ಹೋಗುತ್ತಾರೆ. ಮತೀಯ ರಾಜಕೀಯದ ದುರಂತವನ್ನು ವಿಡಂಬಿಸುತ್ತಲೇ, ವಾಸ್ತವದಲ್ಲಿ ಗಾಂಧೀ ಮೌಲ್ಯಗಳಿಗೆ ಮೊರೆ ಹೋಗಬೇಕಾದ ಆದರ್ಶದ ಕಡೆಗೇ ಕವಿ ಹೊರಳುವುದು ಸಹಜವಾಗಿದೆ. ಇಂತಹದೇ ಸಂದರ್ಭಕ್ಕೆ ದೃಷ್ಟಾಂತದೊಂದಿಗೆ ಪ್ರತಿಕ್ರಿಯಿಸುವ ಡುಂಡೀರಾಜರು ಒಂದು ಮಾರ್ಮಿಕ ಚಿತ್ರವನ್ನು ಕಣ್ಣಮುಂದೆ ನಿಲ್ಲಿಸುತ್ತಾರೆ.

## ಗಿಳಿ ಮತ್ತು ಎತ್ತು

ಒಂದು ಚೆಂದದ ಗಿಳಿ ಒಂದು ಕುಳಿತಿತು
ಮಾವಿನ ಮರದ ಮೇಲೆ.
ಮಧ್ಯಾಹ್ನದ ವೇಳೆ.
ಅಲ್ಲಿ ಇಲ್ಲಿ ಹಾರಾಡಿ, ಯಾರೋ ಬೆಳೆದ
ಕಾಳು ಕಡಿ ತಿಂದು ಚೆಲ್ಲಿ
ತುಂಬಿತ್ತು ಅದರ ಉದರ.

ನೆರಳು, ತಂಗಾಳಿ ತೂಕಡಿಸುತ್ತ ಗಿಳಿ
ಶುರು ಮಾಡಿತು ಪಾಠ :
" ರಾಂ ರಾಂ ರಾಂ. ಜೈ ಸಿಯಾ ರಾಂ ".

ಆ ಮರದ ಕೆಳಗೆ ಮುದಿ ಎತ್ತು
ಉತ್ತು ಉತ್ತು ಸುಸ್ತು.
ಗೊತ್ತೇ ಇಲ್ಲ ಅದಕ್ಕೆ. ಮೈ ತುಂಬ ಗಿಳಿಹಿಕ್ಕೆ.
ಸತ್ತಂತೆ ಮಲಗಿತ್ತು.

ಕೇಳಿತು ಗಿಳಿ : ' ಎತ್ತೆ ಎತ್ತೇ ಹೇಗಿದೆ
ಶ್ರೀರಾಮ ಚರಿತೆ ? '
ಎತ್ತು ಏಳಲಿಲ್ಲ, ಏನೂ ಹೇಳಲಿಲ್ಲ.
ಬಿಡದೆ ಕೇಳಿತು ಮತ್ತೆ ಮತ್ತೆ ಗಿಳಿ
' ಹೇಗಿತ್ತು, ರಾಮಚರಿತೆ ? '

ಎತ್ತು ಸುಮ್ಮನಿತ್ತು.
' ಹೋಗಲಿ ಬಿಡು, ಎತ್ತೇ ರಾಮ ಯಾರು ಗೊತ್ತೇ ? '
ಗಿಳಿ ಕೇಳುತ್ತಲೇ ಇತ್ತು
ಹಿಕ್ಕೆ ಬೀಳುತ್ತಲೆ ಇತ್ತು.
........................

ಇದ್ದಕ್ಕಿದ್ದಂತೆ ಎದ್ದು ನಿಂತು
ಮೈ ಕೊಡವಿ ಹೇಳಿತು :
' ಏಯ್ ಗಿಳಿ. ಮೊದಲು ಕೆಳಗಿಳಿ
ನನ್ನ ಹಾಗೆಯೇ ಉತ್ತು ಬಿತ್ತು
ಬೆಳೆಯೋದನ್ನ ಕಲಿ ".

ಸಾವಿಗೆ ತುಸು ಮೊದಲು. ಸು. ರಂ. ಎಕ್ಕುಂಡಿಯವರು ಬರೆದಿದ್ದ, ' ಒಂಟಿ ಮರದ ಕತೆ ' ಯ ಕೊನೆಯ ಸಾಲುಗಳು ಹೀಗಿವೆ :

ಬದುಕು ನಡೆವ ಹಾದಿ ದೂರ
ಧೂಳಿ ಕಣಗಳೋ ಅಪಾರ
ಹಕ್ಕಿಗೆರಡು ರೆಕ್ಕೆ ಸಾಕು
ಜೀವಕೊಂದು ಜೀವ ಬೇಕು :
ಸುಖದ ಊರು ಸೇರಲು.

ಇದು. ಜೀವನ ಮತ್ತು ಕಾವ್ಯಕ್ಕೆ ಅಂಟಿದ ನಂಟನ್ನು ಕವಿಯಾದವನೇ ಮತ್ತೆ ಮತ್ತೆ ಬಿಗಿಗೊಳಿಸಬೇಕಾದ ಅಗತ್ಯವನ್ನು ಸೂಚಿಸುತ್ತದೆ ! ಬದುಕಿನಲ್ಲಿಯ ಏರಿಳಿತಗಳನ್ನು ಸ್ಥಿತಪ್ರಜ್ಞೆಯಿಂದ ಎದುರಿಸಿ, ಬೀಳುಗಳ ನಡುವೆಯೂ ಏಳುವ, ಎದ್ದು ಓಡಾಡುವ ಉತ್ಸಾಹವು ಅಂತರಂಗದ ಸತ್ವದಿಂದಲೇ ಮತ್ತೆ ಮತ್ತೆ ಹುಟ್ಟಿಸಿಕೊಳ್ಳಬೇಕೆನ್ನುವ ' ಫೀನಿಕ್ಸ್ ಹಾರಿದ ಹಾದಿ '' (೨೦೦೦) ಕಾವ್ಯದ ಆಶಯವಾಗಿದೆ. ತಳಮಳ, ತಳ್ಳಂಕದಿಂದ ಕನಲಿಹೋದ ಕವಿ. ಒಟ್ಟಾರೆ, ಅಂತಿಮವಾಗಿ ಸಿನಿಕನಾಗದೆ ಜೀವನ ಪ್ರೀತಿಯನ್ನು ರೂಢಿಸಿಕೊಂಡು. ಹೊಸ ಆಶೋತ್ತರಗಳಿಗಾಗಿ ತುಡಿಯುತ್ತಿರುವುದು ಇಂದಿನ ಕನ್ನಡ ಕಾವ್ಯದ ಲಕ್ಷಣವಾಗಿದೆ.

## ಮಹಿಳಾ ಕಾವ್ಯ

ಅಂತಾರಾಷ್ಟ್ರೀಯ ಮಹಿಳಾ ವರ್ಷದ ಆಚರಣೆಗೆ (೧೯೭೫) ಇದೀಗ ರಜತ ವರ್ಷದ ಉತ್ಸವ. ಈ ಕಾಲು ಶತಮಾನದ ಅವಧಿಯಲ್ಲಿ ಸಂಖ್ಯೆ ಮತ್ತು ಸತ್ವದ ದೃಷ್ಟಿಯಿಂದ ಮಹಿಳೆಯರು ರಚಿಸಿ ಪ್ರಕಟಿಸಿದ ಕಾವ್ಯ ಗಮನಾರ್ಹವಾಗಿದೆ. ಪುರುಷ ಕವಿಗಳು ಸಾಧಿಸಿದ ಸೂಕ್ಷ್ಮತೆ. ಪ್ರಯೋಗಶೀಲತೆ. ವೈಚಾರಿಕ ಅನನ್ಯತೆಗೆ ಸರಿದೊರೆಯಾದ ಸಾಧನೆ ಸ್ತ್ರೀ ಕವಿಗಳಿಂದ ಆಗಿರಲಿಕ್ಕಿಲ್ಲ. ಅವರ ಕಾವ್ಯ ಚರಿತ್ರೆಗೆ ಇರುವ ಹಿನ್ನೆಲೆ ತೀರ ಅಲ್ಪಕಾಲದ್ದು ಮತ್ತು ಅವರಿಗಿರುವ ಅಭಿವ್ಯಕ್ತಿ ಸ್ವಾತಂತ್ರ್ಯ ಮತ್ತು ವೈಚಾರಿಕ ಅವಕಾಶಗಳ ವ್ಯಾಪ್ತಿ ಕೂಡ ಸೀಮಿತವಾದದ್ದು. ಇಂತಹ ಪರಿಮಿತಿಗಳ ನಡುವೆಯೂ ಸ್ತ್ರೀ ಕವಿಗಳು ಕಾವ್ಯರಂಗದಲ್ಲಿ ಸಾಧಿಸಿರುವ ಮುನ್ನಡೆ. ಪ್ರತ್ಯೇಕ ಗಮನಕ್ಕೆ ಅರ್ಹವಾಗಿದೆ.

ಆಚೆಯ ದಶಕದಲ್ಲಿ ಪ್ರಾದುರ್ಭವಗೊಂಡ ಬಂಡಾಯ ಸಾಹಿತ್ಯ ಚಳುವಳಿಯು ಬಹುಪಾಲು ಮಹಿಳೆಯರಿಗೆ ಅಭಿವ್ಯಕ್ತಿ ಸ್ವಾತಂತ್ರ್ಯದ ಪ್ರತ್ಯಕ್ಷ ಅನುಭವ ಕೊಟ್ಟಿತು. ಸ್ತ್ರೀ, ತನ್ನ ವಿರುದ್ಧದ ಶೋಷಣೆ. ದಬ್ಬಾಳಿಕೆ. ತಾತ್ಸಾರಗಳಿಗೆ ಕನಲಿ ವೈಯಕ್ತಿಕವಾಗಿ ಮಾನವ ಹಕ್ಕುಗಳಿಗಾಗಿ ಮತ್ತು ಸಾಮಾಜಿಕವಾಗಿ ತನ್ನ ಅಸ್ತಿತ್ವ ಗುರುತಿಸುವುದಕ್ಕಾಗಿ ದನಿ ಎತ್ತಿದಳು. ಸ್ವಾಭಾವಿಕವಾಗಿ ಆಗಿನ ಕಾವ್ಯ ವಾಚ್ಯಾರ್ಥದ ಮಟ್ಟದಲ್ಲಿ; ಸ್ಥೂಲವಾಗಿ ಪ್ರತಿಭಟನೆಯ ಏಕತಾನದ ಧಾಟಿಯಲ್ಲಿ ಹೊರಬಂದಿತು.

ಹಸಿಯಾರದ ಈ
ಮಸಿಯ ಅಕ್ಷರಗಳ
ನಡುವೆ ಬೆತ್ತಲಾಗುತ್ತ

ಉಟ್ಟ ಸೀರೆಯ ಸೆರಗು
ಜಾರದಂತೆ
ಕಳಶ ತುಂಬಿ ಗುಡಿಗೆ
ಹೊರಟಿದ್ದೇನೆ.

ಶಶಿಕಲಾ ವೀರಯ್ಯಸ್ವಾಮಿ ಅವರ ಈ ಸಾಲುಗಳು ' ಕವಿತೆ ಮತ್ತೆ ನಾನು ' ಪದ್ಯದ್ದು. ಪ್ರತಿಮಾತ್ಮಕ ಅಭಿವ್ಯಕ್ತಿಯಲ್ಲಿ ಸ್ವಸ್ವರೂಪದ ಬಗ್ಗೆ ಹೀಗೆ ಹೇಳಿಕೊಂಡವರೇ ಹೆಚ್ಚು. ಅದು ಅಸ್ಮಿತೆ(identification)ಯ ಅವಧಿ. ಸೀತೆ, ಸಾವಿತ್ರಿ, ದ್ರೌಪದಿ, ಅಹಲ್ಯೆ, ಚಿತ್ರಾಂಗದೆಯರಂತಹ ಪೌರಾಣಿಕ ಸ್ತ್ರೀ ವ್ಯಕ್ತಿಗಳ ಜತೆ ತಮ್ಮ ಪಾಡನ್ನು ಹೋಲಿಸಿಕೊಂಡು. ತಾವೀಗ ಅವರ ಹಾಗೆ, ಗಂಡಿನ ಶೋಷಣೆಗೆ ಒಳಗಾಗಲಾರೆವೆಂಬ ಹೊಸ ಎಚ್ಚರದ ಸಂಕಲ್ಪವನ್ನು ಕವಿತೆಗಳಲ್ಲಿ ಮೂಡಿಸಿದರು. ಎಂ. ಆರ್. ಕಮಲ ' ಶಕುಂತಳೋಪಾಖ್ಯಾನ ' ದಲ್ಲಿ " ನಾನು, ನನ್ನೆಲ್ಲ ಸಣ್ಣತನದ, ಸ್ವಾರ್ಥದ, ಮಾನವೀಯ ಭಾವನೆಗಳ ಒಂದು ಮೊತ್ತ " ಎಂದು ಹೇಳುತ್ತ, ಸಾಮಾನ್ಯ ಸ್ತ್ರೀಯಾಗಿಯೂ ಅಸಾಮಾನ್ಯ ವಿರೋಧದ ಎದುರು ಹೋರಾಡುವ ಕೆಚ್ಚನ್ನು ಮಹಿಳಾ ಕವಿಗಳು ತೋರಿಸಿದರು. ' ರಸ್ತೆಯಂಚಿನ ಗಾಡಿ ' ಯ ಪ್ರತಿಭಾ ನಂದಕುಮಾರ, ವ್ಯಕ್ತಿಯ ಸಾಮಾನ್ಯ ಸಂವೇದನೆಗಳಿಗೂ ಭಾಷಾರೂಪ ನೀಡುತ್ತಿದ್ದಾರೆ. ಹೆಣ್ಣು, ಗಂಡಿಗಿಂತ ಭಿನ್ನ, ವಿಶಿಷ್ಟ ಎನ್ನಿಸಿಕೊಂಡು ಬರೆಯುವ ಬಗೆಯನ್ನು ದಾಟಿ, ಒಬ್ಬ ಮನುಷ್ಯಳಾಗಿ ಸಾಮಾಜಿಕ, ವೈಯಕ್ತಿಕ ತುಡಿತಗಳಿಗೆ ಪ್ರತಿಸ್ಪಂದಿಸುವ ಪದ್ಯಗಳನ್ನು ಈ ದಶಕದಲ್ಲಿ ಬರೆದುದಕ್ಕೆ ಒಳ್ಳೆಯ ಉದಾಹರಣೆಗಳಿವೆ :

ಮಮತಾ ಜಿ. ಸಾಗರ ಬರೆದ ' ನದಿಯ ನೀರಿನ ತೇವ '; ಎಚ್. ಎಲ್. ಪುಷ್ಪರ ' ಅಮೃತಮತಿ ಸ್ವಗತ ' ಹಾಗೂ ' ಗಾಜುಗೋಳ ' (೧೯೯೯); ವಿಜಯಾ ದಬ್ಬೆಯವರ ' ಇತಿ ಗೀತಿಕೆ '(೧೯೯೩); ಯು. ಮಹೇಶ್ವರಿಯವರ ' ಮುಗಿಲ ಹಕ್ಕಿ '; ಸ. ಉಷಾರವರ ' ಈ ನೆಲದ ಹಾಡು '; ಮಲ್ಲಿಕಾ ಘಂಟಿಯವರ ' ರೊಟ್ಟಿ ಮತ್ತು ಹುಡುಗಿ ' (೨೦೦೦); ಎಚ್. ಎಸ್. ಮುಕ್ತಾಯಕ್ಕನವರ ' ನೀವು ಕೇಳಿರೆ, ನೀವು ಕೇಳಿರೆ ' (೧೯೯೬); ಹಾಗೂ ' ಕಭಿ ಕಭಿ ' (೨೦೦೦); ಜಯಶ್ರೀ ಹೆಗಡೆ(ಕಣ್ಣಿ)ಯವರ ' ಆಕಾಶ ಕಳೆದಿದೆ ' (೧೯೯೯); ಸುಕನ್ಯಾ ಮಾರುತಿಯವರ ' ತಾಜಮಹಲಿನ ಹಾಡು ' (೧೯೯೨); ಮಾಲತಿ ಪಟ್ಟಣಶೆಟ್ಟಿಯವರ ' ತೀರದ ದಾಹ ' (೧೯೯೫); ಎಂ. ಆರ್. ಕಮಲರ ' ಜಾಣೆ ' (೧೯೯೨); ಸುಧಾಶರ್ಮ ಚವತ್ತಿಯವರ ' ಒದ್ದೆ ಕಣ್ಣುಗಳ ಪ್ರೀತಿ ' (೧೯೯೩) ಗಮನಾರ್ಹವಾದ ರಚನೆಗಳಿಂದ ಕೂಡಿವೆ. ಕನಕ ಹಾ. ಮ., ಕೆ. ಶರೀಫಾ, ಭಗವತಿ, ಎಂ. ಎಸ್. ವೇದಾ, ಹೇಮಾ ಪಟ್ಟಣಶೆಟ್ಟಿ, ವೈದೇಹಿ ಮುಂತಾದ ಕವಯಿತ್ರಿಯರು ಜೀವನದ ಬಹುಮುಖಿ ಅನುಭವಗಳಿಗೆ ಸ್ಪಂದಿಸುತ್ತ; ಹೆಂಡತಿ, ತಾಯಿ; ಉದ್ಯೋಗಸ್ಥೆ; ಶಿಕ್ಷಕಿ; ಗೆಳತಿ ಮೊದಲಾಗಿ ವಾಸ್ತವಿಕ ಬದುಕಿನಲ್ಲಿ ವಹಿಸುತ್ತಿರುವ ತಮ್ಮ ಪಾತ್ರಗಳ ಬಗ್ಗೆ ಕವಿತೆ ಬರೆಯುತ್ತಿದ್ದಾರೆ. ಮಹಿಳಾ ಕಾವ್ಯ ಅಂತರ್ಮುಖಿಯಾಗಿ ಹೊರಹೊಮ್ಮಿಸುವ

ದನಿ ಪ್ರಬುದ್ಧವಾಗಿದೆ; ಉತ್ಕಟವಾಗಿದೆ; ಆಶಾದಾಯಕವಾಗಿದೆ. ಆದರೆ ದಲಿತ ಸ್ತ್ರೀಯರ ದನಿ ಇನ್ನೂ ಹುಟ್ಟದಿರುವುದು, ಮಹಿಳಾ ಕಾವ್ಯ ಎದುರಿಸಿರುವ ಒಂದು ಗಮನಾರ್ಹ ಕೊರತೆ.

ಈ ದಶಕದ ಕವಿಗಳು ಒಟ್ಟು ಬದುಕಿಗೆ ಸ್ಪಂದಿಸುವ ದಿಕ್ಕಿನಲ್ಲಿ ಸಾಗುತ್ತಿದ್ದಾರೆ. ಪ್ರತಿಯೊಬ್ಬ ಕವಿ, ತನ್ನ ಅನುಭವಗಳಿಗೆ ದಾರ್ಶನಿಕ ಸ್ವರೂಪ ಕೊಡುವುದೇ ಪ್ರೌಢಿಮೆಯ ಗುರುತೆಂದು ತಿಳಿದಿರುವುದು ಸಹಜ. ಅಂತೆಯೇ ಅಭಿವ್ಯಕ್ತಿಯ ವಿಷಯದಲ್ಲಿ ಪ್ರಾಮಾಣಿಕ ಕವಿಗಳ ಹಂಬಲ ಒಟ್ಟಾರೆಯಾಗಿ ಹೀಗಿದೆ :

ಮಾತು, ಮಂತ್ರ, ಕವಿತೆ
    ಎಂಬೆಲ್ಲ ಕರಣಗಳಿಂದ
ನಿನ್ನಾಕೃತಿಯ ತಡವಲು
    ಹವಣಿಸುತ್ತಿರುವ
ಮೂಕ ಮಕ್ಕಳು ನಾವು.
ನುಡಿಯೇ ನಿನ್ನ ಸುಳಿವೆಂತು
    ದೊರಕೀತು ನಮಗೆ ?

(' ಮೌನದ ಮಣಿ ' ಕವಿ ಎಸ್. ಮಂಜುನಾಥ)

## ಪ್ರತಿಬಿಂಬ ೨ : ಕಾದಂಬರಿ

೧೮೯೨ರಲ್ಲಿ ಹುಟ್ಟಿದ ಕನ್ನಡ ಕಾದಂಬರಿ ಆ ನಂತರದ ಒಂದು ಶತಮಾನದುದ್ದಕ್ಕೂ ಪ್ರಭಾವಶಾಲೀ ಪ್ರಕಾರವಾಗಿ ಬೆಳೆದಿದೆ. ಅನ್ಯ ಪ್ರಭಾವದಿಂದ ನಮ್ಮ ಸಾಹಿತ್ಯನೆಲದಲ್ಲಿ ಬೇರೂರಿದ ಕಾದಂಬರಿ, ಒಂದು ಪರಂಪರೆಯನ್ನು ಸ್ಥಾಪಿಸುವಲ್ಲಿ ಹಿಂಜರಿದಿರುವುದಕ್ಕೆ ಮತ್ತೊಂದು ಕಾರಣ : ಅದಕ್ಕಾಗುವ ಬಹುಮುಖೀ ಅಭಿವ್ಯಕ್ತಿಯ ಸಾಧ್ಯತೆ ಹಾಗೂ ನಮ್ಯ (flexible) ಗುಣವಂತಿಕೆ. ಕಾದಂಬರಿಯ ವಸ್ತು ಏನೇ ಆಗಿರಬಹುದು; ಅದರ ವಿನ್ಯಾಸ, ನಾಟಕ, ಕತೆ, ಪುರಾಣ, ಚರ್ಚೆ, ಜೀವನ ಚರಿತ್ರೆ – ಹೀಗೆ ಯಾವುದೇ ರೂಪದಲ್ಲಿ ಅದು ಗ್ರಂಥನಗೊಳ್ಳಬಹುದು. ಈ ಸಾಧ್ಯತೆಗಳು ಇರುವುದರಿಂದಲೇ ಬೇರೆ ಬೇರೆ ಕಥನ ಪ್ರಯೋಗಗಳು ಕಾದಂಬರಿಯಿಂದ ಆಗಿವೆ. ಕೊನೆಯ ದಶಕದ ಕಾದಂಬರಿಗಳ ಸಂಖ್ಯೆ ಒಟ್ಟು ಒಂದು ಸಾವಿರ ಮೀರಬಹುದು. ಬಹುಪಾಲು ಪುಸ್ತಕಗಳು ಜನಪ್ರಿಯ ಕಥಾನಕಗಳು. ಒಂದು ಸಿದ್ಧಮಾದರಿಯಲ್ಲಿ ವಸ್ತು, ಪಾತ್ರ, ಶೈಲಿ, ಧೋರಣೆಗಳನ್ನು ಹಿಡಿದಿಟ್ಟು ಓದುಗ ವರ್ಗದ ಅಪೇಕ್ಷಿತ ಆಸೆಗಳನ್ನು ಪೂರೈಸುವ ಜನಪ್ರಿಯ ಕಾದಂಬರಿಗಳು ಸಾಹಿತ್ಯಕ ಮೌಲ್ಯವನ್ನೇನೂ ಸಾಧಿಸುವಂಥವಲ್ಲ. ಪತ್ತೇದಾರಿ ಕಾದಂಬರಿಗಳು ಕೂಡ ಕನಿಷ್ಠಪಕ್ಷದ ಜಾಣ್ಮೆ ತೋರಿಸುತ್ತ ಚಮತ್ಕಾರಿಕ ರೋಮಾಂಚನಗೊಳಿಸುವ ರೀತಿಯಲ್ಲಿ ಬರುತ್ತಿಲ್ಲ. ಕಾರಂತ, ಕುವೆಂಪು, ಮಾಸ್ತಿಯವರ

ನಂತರದ ಪೀಳಿಗೆಯಲ್ಲಿ ಬಂದವರ ಪೈಕಿ. ಈಗ ಬದುಕಿ ಉಳಿದಿರುವ ಅಪ್ಪಟ ಕಾದಂಬರಿಕಾರರು ಕೂಡ ಕ್ವಚಿತ್ ಸಂಖ್ಯೆಯವರು. ಎಸ್. ಎಲ್. ಭೈರಪ್ಪ, ಪೂರ್ಣಚಂದ್ರ ತೇಜಸ್ವಿ, ಅನಂತಮೂರ್ತಿ, ಲಂಕೇಶ, ಚದುರಂಗ, ಕುಂ. ವೀ., ಶಾಂತಿನಾಥ ದೇಸಾಯಿ. ಯಶವಂತ ಚಿತ್ತಾಲ, ಎನ್ಕೆ ಒಂದೊಂದು ಕಾದಂಬರಿ ಪ್ರಕಟಿಸಿ ಈ ಜಗತ್ತನ್ನು ಬೆಳಕಿನಲ್ಲಿರಿಸಿದ್ದಾರೆ. ಕಾ. ತ. ಚಿಕ್ಕಣ್ಣ, ಎಚ್. ನಾಗವೇಣಿ. ಕೆ. ಟಿ. ಗಟ್ಟಿ, ಚೆನ್ನಣ್ಣ ವಾಲೀಕಾರ, ಕೆ. ಸತ್ಯನಾರಾಯಣ, ಕಮಲಾ ಹೆಮ್ಮಿಗೆ, ಗೀತಾ ನಾಗಭೂಷಣ. ಉಮಾರಾವ್, ಎಸ್. ವಿ. ಪ್ರಭಾವತಿ, ವೈದೇಹಿ, ಸವಿತಾ ನಾಗಭೂಷಣ. ರೇಖಾ ಕಾಖಂಡಿಕಿ, ದು. ನಿಂ. ಬೆಳಗಲಿಯವರು ಕಾದಂಬರಿಕಾರರೆನಿಸಿಕೊಂಡು ಸಾಧನೆಯ ಹೆಜ್ಜೆಗಳನ್ನು ಇರಿಸಿದ್ದಾರೆ.

'ಜುಗಾರಿ ಕ್ರಾಸ್' (೧೯೯೨) ಕೆ. ಪಿ. ಪೂರ್ಣಚಂದ್ರ ತೇಜಸ್ವಿಯವರ ನಾಲ್ಕನೆಯ ಕಾದಂಬರಿ. 'ಚಿದಂಬರ ರಹಸ್ಯ'ದ ಹಾಗೆ ಇಲ್ಲಿಯೂ ಸಾರ್ವಜನಿಕ ಜೀವನದ ನಿಗೂಢ ವಿದ್ಯಮಾನಗಳನ್ನು ಅರ್ಥೈಸುವ ಒಂದು ಕತೆ ಇದೆ. ಇಂದು ನಾಗರಿಕತೆ ಹಾಗೂ ಕಾಡು ಬೇರೆ-ಬೇರೆ ಅಲ್ಲ. ಆಧುನಿಕ ರಾಜ್ಯ ವ್ಯವಸ್ಥೆ, ಅತ್ಯಾಧುನಿಕ ಯಂತ್ರ-ತಂತ್ರದ ಜೀವನದ ನಡುವೆಯೂ ಕಾಡು ಪ್ರವೃತ್ತಿಯನ್ನುಳಿಸಿಕೊಂಡಿರುವ ಮನುಷ್ಯ, ನಾಗರಿಕ ಸೋಗಿನಲ್ಲಿದ್ದಾನೆ. ಕನ್ನಡ ಸಾಹಿತ್ಯದ ವಿದ್ಯಾರ್ಥಿ ಹಾಗೂ ಯಾಲಕ್ಕಿ ವ್ಯಾಪಾರಿಯಾದ ಸುರೇಶ ಮತ್ತು ಅವನ ಹೆಂಡತಿ ಗೌರಿ ಕಾಡಿನಲ್ಲಿ ಕೆಂಪುರತ್ನದ ಹರಳನ್ನು ಶೋಧಿಸುವ ಅಪರಾಧಿಗಳ ಜಾಲಕ್ಕೆ ಸಿಕ್ಕು ತಮಗರಿಯದಂತೆಯೆ ಅಪಾಯಕ್ಕೆ ಒಳಗಾಗುವುದು; ಅಪಾಯದಿಂದ ಪಾರಾಗಲು ಸಾಹಸ ಮಾಡುವುದು – ಕೊನೆಗೂ ಕೆಂಪು ಹರಳಿನ ತಾಣ ಯಾವುದೆಂದು ತಿಳಿಯದೆ, ಅಪರಾಧಿಗಳ ಶೋಧನೆ ಮುಂದುವರಿಯುವುದು; ಅದಕ್ಕಾಗಿ, ಅನೇಕ ಮುಗ್ಧರ, ಜಾಣರ ಬಲಿ. ಇಲ್ಲಿಯ ಘಟನೆಗಳೆಲ್ಲ ಸಾಂಕೇತಿಕ ಅರ್ಥವನ್ನು ಒಳಗೊಂಡಿವೆ. ಗುರುರಾಜ ಪಂಡಿತ ಎಂಬ ಹಳಗನ್ನಡದ ಕವಿ ಬರೆದಿಟ್ಟ 'ದ್ವಿಸಂಧಾನ ಕಾವ್ಯ'ದ ಹಸ್ತಪ್ರತಿಯು ಕನ್ನಡ ಎಂ.ಎ. ಮಾಡಿದ ಸುರೇಶನಿಗೆ ತಲುಪಿ, ಅವನು ಅದರ ಅನ್ವಯಾರ್ಥ ಹೇಳಬೇಕಾದ ಒತ್ತಡವಿದೆ. ನಿಗೂಢ ಅರ್ಥ ವಿವರಿಸಿದರೆ, ಕೆಂಪು ರತ್ನದ ತಾಣ ಪತ್ತೆ ಹತ್ತುತ್ತದೆ. ಆ ಪರ್ವತದ (ಗಿರಿ) ಯಾವುದೋ ಒಂದು ಎಡೆಯಲ್ಲಿ ಆ ತಾಣ ಅಡಕವಾಗಿದೆ. ರಹಸ್ಯ ತಿಳಿದು ಸಂಪತ್ತು ಲೂಟಿ ಮಾಡುವವರ ಜಾಲಕ್ಕೆ ಸುರೇಶ ಬೀಳುವುದೇ ಆಕಸ್ಮಿಕ ಮತ್ತು ವ್ಯವಸ್ಥಿತವಾಗಿ. ರಾಜಕಾರಣ, ವ್ಯಾಪಾರ, ಕೃಷಿ, ಅಪರಾಧೀಕರಣ, ಅಜ್ಞಾನ-ಕೆಲಸಕ್ಕೆ ಬಾರದ ಬೌದ್ಧಿಕತೆ ಎಲ್ಲವು ಏಕಕಾಲಕ್ಕೆ, ಒಟ್ಟೊಟ್ಟಿಗೇ ಜೊತೆಗೂಡಿ ಸಾಗುತ್ತಿರುವುದರ ವ್ಯಂಗ್ಯ ಈ ಕಾದಂಬರಿಯ ಆಶಯ. ಕಾಡುಗಳ್ಳ ವೀರಪ್ಪನ್‌ನ ಅಟ್ಟಹಾಸ; ಮುಗ್ಧರ ಅಪಹರಣ; ಅಪಹರಣದಿಂದ ಬಿಡಿಸುವ ಸಂದರ್ಭದಲ್ಲಿ

ನಡೆಯುವ ರಾಜಕೀಯ, ಆರ್ಥಿಕ ಚಟುವಟಿಕೆಗಳು – ಇವತ್ತಿನ ವಾಸ್ತವಿಕ ವಿದ್ಯಮಾನ. ಈ ವಾಸ್ತವ ಪ್ರಸಂಗಕ್ಕೆ ತೇಜಸ್ವಿಯವರ 'ಜುಗಾರಿ ಕ್ರಾಸ್' ವ್ಯಂಗ್ಯ ಕನ್ನಡಿ ಹಿಡಿದಿದೆ. ಒಟ್ಟು ಜೀವನ ಜೂಜಾಟದ ಕವಲು ಹಾದಿಯಲ್ಲಿದೆ. ನಿರೂಪಣೆ, ವರ್ಣನೆಗಳ ಭಾಷೆ; ತಂತ್ರ ಎಲ್ಲವೂ ಅತ್ಯಂತ ಪ್ರಬುದ್ಧವಾಗಿವೆ. ಸಮಾಜವಾದೀ ರಾಜಕೀಯದ ಆದರ್ಶವನ್ನು ವಾಸ್ತವಕ್ಕೆ ತರುವ ತೇಜಸ್ವಿಯವರ ಹಂಬಲ, 'ಜುಗಾರಿ ಕ್ರಾಸ್'ನ ರಾಜಕೀಯ ಪರಿಸ್ಥಿತಿಯಲ್ಲಿ ನೆರವೇರುವುದು ಅಸಾಧ್ಯ. ಈ ವಿಫಲತೆಯನ್ನು ತೇಜಸ್ವಿ ವ್ಯಂಗ್ಯ, ಹಾಸ್ಯ ಬೆರೆತ ವಿಷಾದದ ದನಿಯಲ್ಲಿ ಒಪ್ಪಿಕೊಳ್ಳಬೇಕಾಗಿದೆ.

'ಓಂ ಣಮೋ' ನವ್ಯಮಾರ್ಗದ ಪರಿಣತ ಗದ್ಯಕಾರ ಶಾಂತಿನಾಥ ದೇಸಾಯಿಯವರು ತಮ್ಮ ಜೀವನದ ಕೊನೆಯಲ್ಲಿ ಬರೆದ ಕಾದಂಬರಿ (೧೯೯೮). ಆಧುನಿಕ ಸಂದರ್ಭದಲ್ಲಿ ಪ್ರಾಚೀನ ಧರ್ಮವೊಂದರ ಮೌಲ್ಯ, ಆಚರಣೆಗಳ ಪ್ರಸ್ತುತತೆ ಹೇಗಿರಬಲ್ಲದು, ಎಂಬುದನ್ನು ದೇಸಾಯಿಯವರು ಜಿಜ್ಞಾಸೆಗೆ ಒಳಪಡಿಸುವ ಸುಂದರ ಕತೆ ಕಾದಂಬರಿಯಲ್ಲಿದೆ.

ಜೈನ ಧರ್ಮ ಅನುಸರಿಸುವ ಶ್ರೀಮಂತ ಕುಟುಂಬದ ಒಂದು ಕುಡಿ ಆ್ಯಡಂ. (ಇವನ ತಾಯಿ ಎಮಿರಿಯಾ ಕ್ರೈಸ್ತಳು) ಮತ್ತು ಇವನಲ್ಲಿ ಅನುರಕ್ತಳಾಗಿರುವ ಇಂಗ್ಲಂಡಿನ ಯುವತಿ ಆ್ಯನ್. ಇವರಿಬ್ಬರನ್ನು ಕೇಂದ್ರವಾಗಿಟ್ಟುಕೊಂಡು ದೇಸಾಯಿಯವರು ಧರ್ಮ, ಧಾರ್ಮಿಕ ವ್ಯವಸ್ಥೆ, ಕುಟುಂಬ ವ್ಯವಸ್ಥೆ, ಆರ್ಥಿಕ ವ್ಯವಹಾರ, ಮಾನವೀಯ ಸಂದರ್ಭಗಳಲ್ಲಿಯ ತೊಡಕುಗಳು, ಹೇಗೆ ಬದುಕನ್ನು ರೂಪಿಸುತ್ತವೆ ಎಂಬುದನ್ನು ಶೋಧಿಸುತ್ತಾರೆ. ಯಾವುದೇ ಸಾಂಪ್ರದಾಯಿಕ ಧರ್ಮ, ಅದರ ತತ್ತ್ವ ಆಚರಣೆಗಳ ಅಗತ್ಯ ಒಬ್ಬ ಪ್ರಾಮಾಣಿಕ, ಆತ್ಮವಿಶ್ವಾಸವುಳ್ಳ ಮನುಷ್ಯನಿಗೆ ಇರಲಾರದು. ಇಂದಿನ ಬದುಕಿನ ಸಹಜ - ಸುಂದರ ತಾರ್ಕಿಕತೆಯನ್ನು ಒಪ್ಪಿ, ಒಳ್ಳೆಯ ದುಡಿಮೆ; ಬುದ್ಧಿವಂತಿಕೆಯ ವರ್ತನೆ ಮತ್ತು ಉದಾರ ಮನೋಧರ್ಮ ಬೆಳೆಸಿಕೊಂಡರೆ – ಅದೇ ಕಾಪಾಡುವ ಧರ್ಮ ಆದೀತು. ನೈತಿಕ ಆರೋಗ್ಯದ ರಕ್ಷಣೆ ದೇಸಾಯಿಯವರ ಆಶಯ. ವ್ಯಕ್ತಿ ವಿಶಿಷ್ಟ ನೆಲೆಯೇ ಮಾನವೀಯ ಸಂಬಂಧಗಳನ್ನು ಉಳಿಸುವ ಉಪಾಯ. ಶಾಂತಿನಾಥ ದೇಸಾಯಿಯವರ ಮತ-ಧರ್ಮ ವಿಮರ್ಶೆಯ ಈ ಕಥಾನಕವು ತನ್ನ ವಿಚಾರ ವಿಲಾಸಗಳಿಂದಾಗಿ ಮನ ಸೆಳೆಯುತ್ತದೆ.

'ಆಕಾಶಕ್ಕೊಂದು ಕಂದೀಲು' (೧೯೯೫) ವ್ಯಾಸರಾಯ ಬಲ್ಲಾಳರ ಈ ಆರನೆಯ ಕಾದಂಬರಿ, ಒಂದು ಪ್ರಯೋಗಶೀಲ ಕಥಾನಕ. ನಿರ್ದಿಷ್ಟ ಕಥನಕ್ರಮ, ಪಾತ್ರದ ಬೆಳವಣಿಗೆ ಇಲ್ಲಿಲ್ಲ. ವ್ಯಕ್ತಿಯ ಅಸ್ತಿತ್ವದ ಕಾಳಜಿ ಮತ್ತು ಬದುಕಿನಲ್ಲಿ ವ್ಯಕ್ತಿ ತನ್ನನ್ನು ಗುರುತಿಸಿಕೊಳ್ಳಲು ಮಾಡುವ ಪ್ರಯತ್ನಗಳು ಕಾದಂಬರಿಯ ವಸ್ತು. ಅಸ್ತಿತ್ವವಾದೀ ದಾರ್ಶನಿಕ ನೋಟವನ್ನು ಸ್ಪಷ್ಟಗೊಳಿಸುವುದಕ್ಕಾಗಿ ವಿವಿಧ ಬಗೆಯ

ಸನ್ನಿವೇಶ. ಹಾಗೂ ವ್ಯಕ್ತಿಗಳನ್ನು ಸೃಷ್ಟಿಸಿದ್ದಾರೆ. ಒಡವ, ಭಿಕಾರಿ, ಅನಾಥ, ಶ್ರೀಮಂತ ಹೀಗೆ ಎಲ್ಲ ಜಾತಿ, ವರ್ಗ, ವೃತ್ತಿಯ ವ್ಯಕ್ತಿಗಳು ಎದುರಿಸುವ ಮಾನಸಿಕ, ಮಾನವೀಯ ಸಮಸ್ಯೆಗಳ ಚಿತ್ರವನ್ನು ಬಲ್ಲಾಳರು ಕತೆ ಮಾಡಿ ಹೇಳುತ್ತಾರೆ. ಮುಂಬೈ ನಗರ ಕಥಾನಕದ ಕೇಂದ್ರ. 'ನಾನು' ಬದುಕಿನ ವಿವಿಧ ಅವಸ್ಥೆಗಳನ್ನು ಹಾದುಹೋಗುವಾಗ ದೊರಕುವ ಅನುಭವಗಳಿಗೆ ಸೃಜನಾತ್ಮಕ ರೂಪ ಕೊಡುವ ಪ್ರಯತ್ನ ಈ ಕಾದಂಬರಿ. ಇಲ್ಲಿಯ ಅನುಭವಗಳು ಚಿಂತನೆಗೆ ಹಚ್ಚುತ್ತವೆ. ಕಾದಂಬರಿ ಪ್ರಕಾರಕ್ಕೆ ಬಲ್ಲಾಳರು ನೀಡಿದ ವಿಶಿಷ್ಟ ಕೃತಿ ಇದು.

ವ್ಯಾಸರಾಯ ಬಲ್ಲಾಳರ ಏಳನೆಯ ಕಾದಂಬರಿ 'ಹೆಜ್ಜೆ' (೨೦೦೦) ಸ್ವಾತಂತ್ರ್ಯ ಹೋರಾಟ (ಚಳವಳಿ) ಕಾಲದ ಅಪರೂಪದ ವಸ್ತುವನ್ನು ಒಳಗೊಂಡಿದೆ. ಗಾಂಧೀ ಪ್ರೇರಿತ ಚಳವಳಿಯು ಅನೇಕ ಮುಖಗಳ ಆದರ್ಶವನ್ನು ಜಾರಿಗೆ ತರುವ ನೈತಿಕ ಚಳವಳಿ ಕೂಡ ಆಗಿತ್ತು. ಇದರಲ್ಲಿ ಮಹಿಳೆಯರೂ ಭಾಗವಹಿಸಿದ್ದರು. ಆದರೆ ಮಹಿಳಾ ಹೋರಾಟಗಾರ್ತಿಯರು ನಿರ್ವಹಿಸಿದ ಪಾತ್ರದ ಬಗ್ಗೆ ಮಾಹಿತಿಗಳಾಗಲಿ, ಕತೆಗಳಾಗಲಿ ಇಲ್ಲ. ಬಲ್ಲಾಳರು 'ಗಾಂಧಿ ಹುಡುಗಿ' ಸಾವಿತ್ರಿಯನ್ನು ಸೃಷ್ಟಿಸಿ, ಅವಳಿಟ್ಟ ಹೆಜ್ಜೆಗಳನ್ನು ದಾಖಲಿಸಲು ಈ ಕಾದಂಬರಿ ಬರೆದಿದ್ದಾರೆ. ಸಂಪ್ರದಾಯಸ್ಥ ಕುಟುಂಬದಲ್ಲಿ ಹುಟ್ಟಿ, ಸಂಪ್ರದಾಯಸ್ಥ ಕುಟುಂಬಕ್ಕೆ ಸೊಸೆಯಾಗಿ ಸೇರುವ ಸಾವಿತ್ರಿ, ಗಾಂಧೀ ಚಳವಳಿಯ ಪ್ರಭಾವವನ್ನು ಬದುಕಿನಲ್ಲಿ ಅಳವಡಿಸಿಕೊಳ್ಳುತ್ತಾಳೆ. ಅದಕ್ಕೆ ಬಂದ ಪ್ರತಿರೋಧಗಳನ್ನು ಎದುರಿಸುವ ಜಾಣ್ಮೆ, ನಿವಾರಿಸುವ ಉಪಾಯಗಳನ್ನು ಬಲ್ಲ ಸಾವಿತ್ರಿ, ವಿಧವಾ ವಿವಾಹ; ಅಸ್ಪೃಶ್ಯತಾ ನಿವಾರಣೆ ಕಾರ್ಯಕ್ರಮಗಳನ್ನು ಯಶಸ್ವಿಯಾಗಿ ನಿರ್ವಹಿಸುತ್ತಾಳೆ. ಗಂಡ ವಿದ್ಯಾಧರನನ್ನು ಕ್ರಾಂತಿಪುರುಷನನ್ನಾಗಿ ಮಾರ್ಪಡಿಸುತ್ತಾಳೆ. ಸಾಮಾನ್ಯರ ಬದುಕಿನ ಮೇಲೆ ಗಾಂಧೀ ಚಳುವಳಿ ಮಾಡಿದ ಪರಿಣಾಮಗಳಿಗೆ ಸಾಮಾನ್ಯರು ನಿರ್ವಹಿಸಿದ ಕಠಿಣ ಪಾತ್ರಗಳೇ ಕಾರಣ. ಈ ಒಳಚರಿತ್ರೆಯನ್ನು ಬಲ್ಲಾಳರು ನಿರೂಪಿಸುವ ರೀತಿ ಸೊಗಸಾಗಿದೆ.

'ಎನ್ಕೆ'ಯವರು ಅನೇಕ ವರ್ಷಗಳ ಅಂತರದಲ್ಲಿ ಬರೆದ ಕಾದಂಬರಿ– 'ಧಾರವಾಡದ ದತ್ತೂ ಮಾಸ್ತರ' (೧೯೯೯). ಕವಿ ಬೇಂದ್ರೆಯವರ ಬದುಕು, ಬರೆಹಗಳನ್ನು ೪೫ ವರ್ಷಗಳ ಪರ್ಯಂತ ತೀರ ನಿಕಟವಾಗಿ ಬಲ್ಲ 'ಎನ್ಕೆ'ಯವರು ಈ ವೃತ್ತಾಂತ ಕಾದಂಬರಿ ಬರೆದಿದ್ದಾರೆ. ದತ್ತು ಮಾಸ್ತರರ ಬಾಲ್ಯ, ಯೌವನ, ಪ್ರೌಢ, ಮುಪ್ಪುಗಳ ಜೀವನವನ್ನು ಯಥಾರ್ಥ ಮಾಹಿತಿಗಳಿಂದ ವರ್ಣಿಸುವ ಎನ್ಕೆ, ಕವಿಯಾಗಿ ಆತ ವಿಕಸನಗೊಂಡ ಪರಿಗಳನ್ನು ಚಿತ್ರಿಸುತ್ತಾರೆ. ಬೇಂದ್ರೆ ಜೀವನವನ್ನು ರೂಪಿಸಿದ ಹಿರಿಯರು, ಗೆಳೆಯರು; ಬೇಂದ್ರೆ ಕಾವ್ಯಾಭಿವ್ಯಕ್ತಿಗೆ ಕಾರಣ - ಪ್ರೇರಣೆ ನೀಡಿದ ಸಂದರ್ಭ, ಸನ್ನಿವೇಶಗಳು ಇಲ್ಲಿ ಯಥಾರ್ಥವಾಗಿ ದಾಖಲಾಗಿವೆ. ಚರಿತ್ರೆಯ ಬಹುತೇಕ ಅಂಶಗಳು ತಪ್ಪಿಲ್ಲದಂತೆ ನಮೂದಾಗಿವೆ. ಬೇಂದ್ರೆಯವರೊಬ್ಬ 'ವರಕವಿ', 'ಶಬ್ದಗಾರುಡಿಗ', 'ಮಾತಿನ ಮೋಡಿಗಾರ' ಎಂಬಂತೆ ಚಿತ್ರಿಸುವ

ಒಲವು ' ಎನ್ಕೆ ' ಯವರದು. ' ಬೆಂದರೆ ಬೇಂದ್ರೆ ಆದಾನು ' ಎಂಬುದು ಕವಿ ಬೇಂದ್ರೆಯವರ ಮಾತು. ಅವರಿಗಿದ್ದ ಆಧ್ಯಾತ್ಮಿಕ ಒಲವು; ಸ್ನೇಹದ ಚೆಲುವು; ಸೌಂದರ್ಯೋಪಾಸನೆಯ ನಿಲುವು ಕಾದಂಬರಿಯ ತುಂಬ ಘಟನಾ ರೂಪದಲ್ಲಿ ಬಂದಿವೆ. ಎನ್ಕೆಯವರ ಕರುಣಾರಸ ಪ್ರಧಾನ ಶೈಲಿಯಿಂದಾಗಿ ಕೃತಿ ಹೃದಯಸ್ಪರ್ಶೀ ಅನುಭವ ಕೊಡುತ್ತದೆ. ಇಷ್ಟಾದರೂ ಬಹುಮುಖ ಪ್ರತಿಭೆಯ ಬೇಂದ್ರೆಯವರ ಪಾರ್ಶ್ವ ವ್ಯಕ್ತಿತ್ವದ ದರ್ಶನ ಮಾತ್ರ ' ಎನ್ಕೆ ' ಯವರಿಗೆ ಲಭಿಸಿದೆ ಎನಿಸುತ್ತದೆ. ಅದು ಸ್ವಾಭಾವಿಕ ಕೂಡ. ಕಾದಂಬರಿ ರೂಪದಲ್ಲಿ ವೃತ್ತಾಂತ ನಿರೂಪಿಸ ಹೊರಟಾಗ ದರ್ಶನಕ್ಕೊಂದು ಮಿತಿ, ಎಲ್ಲೆ ದಕ್ಕುವುದು ಅನಿವಾರ್ಯ. ಸಮಕಾಲೀನ ಅದ್ಭುತ ವ್ಯಕ್ತಿತ್ವವನ್ನು ಕಾದಂಬರಿಯಲ್ಲಿ ಹಿಡಿಯ ಹೊರಟ ' ಎನ್ಕೆ ' ಯವರ ಈ ಸೃಜನಶೀಲ ಹವಣಿಕೆಯು ಪ್ರಾಮಾಣಿಕವಂತೂ ಹೌದು. ಏಕೆಂದರೆ ಎನ್ಕೆಯವರ ಅಂತಃಕರಣದ ಅಭಿವ್ಯಕ್ತಿಯಾಗಿದೆ ಈ ಕೃತಿ.

ಶಿವರಾಮ ಕಾರಂತರ ನಂತರ ಅನುಭವನಿಷ್ಠ ಕಾದಂಬರಿಗಳನ್ನು ನಿರಂತರ ಬರೆಯುತ್ತಿರುವವರು ಭೈರಪ್ಪ. ಅವರ ಹದಿನೇಳು ಮತ್ತು ಹದಿನೆಂಟನೆಯ ಕಾದಂಬರಿಗಳು : ' ತಂತು ' (೧೯೯೩) ಹಾಗೂ ' ಸಾರ್ಥ ' (೧೯೯೮) ಈ ದಶಕದಲ್ಲಿ ಪ್ರಕಟವಾಗಿ ಬಹುಚರ್ಚೆಗೆ ಒಳಗಾಗಿವೆ. ' ತಂತು ' ಸ್ವತಂತ್ರಭಾರತದ ಮೊದಲ ೨೫ ವರ್ಷಗಳ ರಾಜನೀತಿಯ ವಿಮರ್ಶೆಯಂತಿವೆ. ಗಾಂಧೀ ಯುಗದ ನಂತರ, ಸ್ವತಂತ್ರ ಭಾರತದಲ್ಲಿ ವ್ಯಕ್ತಿ ಸ್ವಾತಂತ್ರ್ಯ, ಆದರ್ಶಪೂರ್ಣ ಬದುಕಿನ ಆಕಾಂಕ್ಷೆ ಮತ್ತು ಮೌಲ್ಯಾಧಾರಿತ ರಾಜಕಾರಣಗಳು ಹೇಗೆ ಮತ್ತು ಏಕೆ ಅವನತಿಯತ್ತ ಸಾಗುತ್ತಿದ್ದವು ಎಂಬುದನ್ನು ಒಂದು ಕುಟುಂಬದ ಗಂಡ-ಹೆಂಡತಿ; ಪಾಲಕರು-ಮಕ್ಕಳು; ಉದ್ಯೋಗಸ್ಥ ದಂಪತಿಗಳ ಸಂಬಂಧದಲ್ಲಿಯ ತೊಡಕುಗಳ ಕತೆಯಲ್ಲಿ ಭೈರಪ್ಪ ವಿವೇಚಿಸುತ್ತಾರೆ. ಆದರ್ಶ ಪತ್ರಕರ್ತ ಗಂಡ, ಪ್ರೀತಿ ವಿವಾಹದಲ್ಲಿ ಸಫಲನಾಗಿದ್ದರೂ ದಾಂಪತ್ಯ ಜೀವನದಲ್ಲಿ ಹೆಂಡತಿಯ ' ಅಹಂ ' ನಿಂದಾಗಿ ವಿಫಲತೆ ಕಾಣುತ್ತಾನೆ. ಈ ದಂಪತಿಗಳ ಮಗ, ತಾಯಿಯ ಅಚ್ಚೆಯಲ್ಲಿ ಬೆಳೆದು ವಿದ್ಯಾರ್ಥಿಯಾಗಿದ್ದಾಗಲೇ ಸ್ವೇಚ್ಛಾಚಾರದಿಂದ ಕೆಡುತ್ತಾನೆ. ಮಗನನ್ನು ಗಾಂಧೀ ಗುರುಕುಲದಲ್ಲಿ ಓದಿಸಿ, ಆದರ್ಶ ಯುವಕನನ್ನಾಗಿ ಬೆಳೆಸಬೇಕೆಂಬ ತಂದೆಯ ಕಾಳಜಿಗೆ ತಾಯಿ ಅಡ್ಡಿಬರುತ್ತಾಳೆ; ಕೊನೆಗೆ ಈ ಗಂಡನ ತತ್ತ್ವಾದರ್ಶಕ್ಕೆ ಬೇಸತ್ತು ಆಕೆ ದೆಹಲಿಯ ಅಪ್ಪನ ಮನೆಗೆ ಸೇರುತ್ತಾಳೆ. ಅಲ್ಲಿ ತನ್ನ ಹಿರಿತನದಲ್ಲಿ ರಫ್ತು ವ್ಯಾಪಾರದ ಕಂಪನಿ ಸ್ಥಾಪಿಸಿ, ಆರ್ಥಿಕವಾಗಿ ಸಿರಿವಂತಿಕೆಯನ್ನು, ವೈಯಕ್ತಿಕವಾಗಿ ಸ್ವಾತಂತ್ರ್ಯವನ್ನು ಯಥೇಚ್ಛ ಅನುಭವಿಸುತ್ತಾಳೆ. ಅವಳ ಈ ಪರಿವರ್ತಿತ ಬಾಳು, ಕೌಟುಂಬಿಕ ಮೌಲ್ಯಗಳ ಅಧೋಗತಿಗೆ ಕಾರಣವೆಂಬುದು ಭೈರಪ್ಪನವರ ಪ್ರತಿಪಾದನೆ. ಹೆಣ್ಣು, ಗಂಡಿನ ಅಧೀನದಲ್ಲಿ ಅಥವಾ ಕಣ್ಣರಕೆಯಲ್ಲಿ ಪಡೆಯಬಹುದಾದ ಜೀವನದ ರೂಪ ನೈತಿಕವಾಗಿ, ವ್ಯಾವಹಾರಿಕವಾಗಿ ಹೊಣೆಗಾರಿಕೆಯದು; ಸೌಶೀಲಯುಕ್ತವಾದುದು.

ಗಂಡಿನ ಬೌದ್ಧಿಕತೆ. ಆದರ್ಶದ ಫಲ ಹೆಣ್ಣಿಗೆ ಅಶಕ್ಯ ಎಂಬುದೂ ಧ್ವನಿತವಾಗುವ ತೀರ್ಮಾನ. ಕುಟುಂಬವನ್ನು ತನ್ನ ಅಹಮಿಕೆಗಾಗಿ. ಸ್ವಚ್ಛಂದಕ್ಕಾಗಿ ಒಡೆಯುವ ಹೆಣ್ಣು. ನೈತಿಕವಾಗಿ ಸ್ಥೈರ್ಯ ಉಳಿಸಿಕೊಳ್ಳಲಾರಳು; ಅಂತೆಯೇ ಅವಳು ದುರಂತದೆಡೆ ಜಾರುವುದು ತಪ್ಪಿದ್ದಲ್ಲ. ಇದನ್ನು ಮನವರಿಕೆ ಮಾಡಿಕೊಡಲು ಬೈರಪ್ಪನವರು 'ತಂತು' ಕತೆ ಹೆಣೆದಿದ್ದಾರೆ. ಸ್ವಾತಂತ್ರ್ಯ ಬಂದು. ೨೮ ವರ್ಷ ಕಳೆದಿರಲಿಲ್ಲ. ಭಾರತದಲ್ಲಿ ಅಭಿವ್ಯಕ್ತಿ ಸ್ವಾತಂತ್ರ್ಯದ . ಅಪಹರಣವಾಯಿತು (೧೯೭೫). ರಾಜಕೀಯದಲ್ಲಿ ಸರ್ವಾಧಿಕಾರೀ ಪ್ರವೃತ್ತಿ ತಲೆಯೆತ್ತಿ. ಗಾಂಧೀ ರಾಜನೀತಿಗೆ ತೀವ್ರ ಹಿನ್ನಡೆಯುಂಟಾದ ವಾಸ್ತವತೆಗೂ. ಅತ್ತ ಒಂದು ಕುಟುಂಬ ತನ್ನ ಆದರ್ಶಕ್ಕೆ ವ್ಯತಿರಿಕ್ತವಾದುದಕ್ಕೂ ತಳುಕು ಹಾಕುವ ಸೂಚನೆ ಕಾದಂಬರಿಯಲ್ಲಿದೆ. ರಾಜನೀತಿಯಲ್ಲಿ ಅಪಮೌಲ್ಯಗಳು ಪ್ರಚುರಗೊಳ್ಳುವುದಕ್ಕೆ ವ್ಯಕ್ತಿಗತ ಸ್ವಾರ್ಥ. ಅದೂರದೃಷ್ಟಿ. ತತ್‌ಕ್ಷಣದ ಯಶಸ್ಸಿನ ದುರಾಸೆ. ಹಣ, ಅಧಿಕಾರಗಳಿಗಾಗಿ ವ್ಯಕ್ತಿತ್ವವನ್ನೇ ಹರಣ ಮಾಡಿಕೊಳ್ಳುವ ಕ್ಷುದ್ರತೆ ಕಾರಣವಾಗಿರುವುದನ್ನು ಭೈರಪ್ಪ ಧ್ವನಿಸುತ್ತಾರೆ.

'ಸಾರ್ಥ' (೧೯೯೮) ನಾಗಭಟ್ಟನ ಜೀವನ ವೃತ್ತಾಂತದ ಮೂಲಕ, ಭೈರಪ್ಪನವರು ಎಂಟನೆಯ ಶತಮಾನದಲ್ಲಿ ನಡೆದ ವೈದಿಕ ಹಾಗೂ ಅವೈದಿಕ (ಬೌದ್ಧ) ದರ್ಶನಗಳ ನಡುವಿನ ಸಂಘರ್ಷವನ್ನು ಬಯಲಿಗಿಡುತ್ತಾರೆ. 'ಸಾರ್ಥ'ದ (ನೂರಾರು ಗಾಡಿಗಳ ಮೇಲೆ ಸ್ವದೇಶದ ವಾಣಿಜ್ಯ ಪದಾರ್ಥಗಳನ್ನು ಹೇರಿಕೊಂಡು, ಉತ್ತರ ಭಾರತದೆಡೆಗೆ ಸಾಗುವ ಸಂಚಾರೀ ವ್ಯಾಪಾರಿಗಳ ಒಂದು ತಂತ್ರ) ಜತೆ, ಪರದೇಶದ ವ್ಯಾಪಾರ, ವ್ಯವಹಾರಗಳ ವಿದ್ಯಮಾನ ಅರಿಯಲು ಊರು, ಹೆಂಡತಿ, ಮನೆಯನ್ನು ತೊರೆದು ಹೋದ ವೇದಪಂಡಿತ ನಾಗಭಟ್ಟ. ಮತ್ತೆಂದೂ ಮರಳಿ ಮನೆಗೆ ಬರದಂತಹ ಪರಿಸ್ಥಿತಿಗೆ ಒಳಗಾಗುತ್ತಾನೆ. ಉತ್ತರ ಭಾರತದಲ್ಲಿ ಆತ ಪಂಡಿತನಾಗಿ, ನಾಟಕದ ನಟನಾಗಿ, ತಂತ್ರ ವಿದ್ಯೆಯ ಸಾಧಕನಾಗಿ, ಬೌದ್ಧ ಧರ್ಮದ ವಿದ್ಯಾರ್ಥಿಯಾಗಿ ನಾನಾ ರೀತಿಯಲ್ಲಿ ಬದುಕುವ ಪ್ರಸಂಗ ಬರುತ್ತದೆ. ನಾಗಭಟ್ಟನನ್ನು ಕೇಂದ್ರವಾಗಿಟ್ಟುಕೊಂಡು ಭೈರಪ್ಪನವರು ಆ ಕಾಲದ ಸಾಮಾಜಿಕ, ಆರ್ಥಿಕ. ಧಾರ್ಮಿಕ ಬದುಕಿನ ಒಳಗುಗಳನ್ನು ಶೋಧಿಸುತ್ತ ವ್ಯಕ್ತಿ ಮತ್ತು ಸ್ಥಾಪಿತ ಶಕ್ತಿಗಳಾದ ಮತ-ಧರ್ಮ ವ್ಯವಸ್ಥೆ; ರಾಜ್ಯಾಧಿಕಾರಿಗಳ ನಡುವಿನ ಸಂಘರ್ಷವನ್ನು ತೋರಿಸುತ್ತಾರೆ. ಯಾವದಾದರೊಂದು ಧರ್ಮದ ಮಾರ್ಗ ಮನುಷ್ಯನಿಗೆ ನೆಮ್ಮದಿ, ಜ್ಞಾನ, ಮೋಕ್ಷ ಕೊಡಬಹುದೆಂಬ ಹುಡುಕಾಟದಲ್ಲಿದ್ದ ನಾಗಭಟ್ಟನಿಗೆ ಸಿಗುವುದು, ವಾಸ್ತವ ಬದುಕಿನ ವ್ಯಾವಹಾರಿಕ ಸಮಸ್ಯೆಗಳು; ಬಿಡಿಸಲಾಗದ ಪೇಚುಗಳು. ಆದರೂ ಆತ. ಮನುಷ್ಯ ಸಂಬಂಧಗಳ ಅಯಾಚಿತ ಪ್ರೀತಿ, ತ್ಯಾಗಗಳಲ್ಲಿ ಬದುಕಿನ ನಿಜವಾದ ಧರ್ಮ ಇರುವುದನ್ನು ಕಂಡುಕೊಳ್ಳುತ್ತಾನೆ. ಚಂದ್ರಿಕೆ ಎಂಬ ರಂಗನಟಿ ಅವನಿಗೆ ಜೀವನ ಸೌಂದರ್ಯ ಮತ್ತು (ಕ್ರೌರ್ಯ) ವಿಕೃತಿಯ ತದ್ವಿರುದ್ಧವಾದ ಅನುಭವಗಳು

ಒದಗುವಂತೆ ಮಾಡಿ, ಕೊನೆಗೆ ಆಯ್ದುಕೊಳ್ಳಬೇಕಾದುದು ಪ್ರೀತಿ, ಮನುಷ್ಯತ್ವವನ್ನು ಎಂಬುದನ್ನು ತೋರಿಸಿಕೊಡುತ್ತಾಳೆ. ಅನುಭವಗಳ ಗಾಢ ಹಾಗೂ ಗೂಢ ನಿರೂಪಣೆ, ವೈಚಾರಿಕ ವಿವೇಚನೆ; ಇತಿಹಾಸದ ಶೋಧನೆ – ಕಾದಂಬರಿಯ ವಸ್ತುವನ್ನು ಗಂಭೀರಗೊಳಿಸಿವೆ. 'ಸಾರ್ಥ' ಓದುಗನಿಗೆ ಗಾಢ ಅನುಭವ ಕೊಡುವುದರ ಜೊತೆಗೆ ಚರ್ಚಾಸ್ಪದ ಯೋಚನೆಗಳನ್ನು ಕೆರಳಿಸುವ ಕಾದಂಬರಿ.

ಹೆಜ್ಜಾಲ (೧೯೯೬), ಭವ (೧೯೯೪); ಅಕ್ಕ (೧೯೯೧); ಒಂದು ಕೇಂದ್ರ ವೃತ್ತಾಂತ (೧೯೯೨); ಉಲ್ಲಂಘನೆ (೧೯೯೪); ನೂರು ಸ್ವರ (೧೯೯೯); ಬದುಕೆಂಬ ದಿವ್ಯ (೧೯೯೯); ದ್ರೌಪದಿ ಹಾಗೂ ಅಹಲ್ಯೆ; ಧುಮ್ಮಸು (೧೯೯೫); ಗಾಂಧೀ ಬಂದ (೧೯೯೯); ಅಸ್ಪೃಶ್ಯರು (೧೯೯೬); ದಂಡೆ (೧೯೯೯); ಶಾಮಣ್ಣ (೧೯೯೮); ಶಿವಗಂಗಾ (೧೯೯೬) – ಇವು ಈ ದಶಕದ ಗಮನಾರ್ಹ ಕಾದಂಬರಿಗಳು.

ಚದುರಂಗರು ಬರೆದ ಕೊನೆಯ ಕಾದಂಬರಿ 'ಹೆಜ್ಜಾಲ'. ಕಾಲೂರನೆಂಬ ದಲಿತ, ಜೀತದಾಳಿನ ಪ್ರಜ್ಞೆಯಲ್ಲಿ ಮೂಡುವ ಒಟ್ಟು ಜೀವನಾವಸ್ಥೆಯ ಸೂಕ್ಷ್ಮ-ಸಂವೇದನೆಯ ಚಿತ್ರ ಇಲ್ಲಿದೆ. ಹುಣಸೂರು ಭಾಗದ ಆಡುಮಾತಿನ ಸಹಜ ನಿರೂಪಣೆ; ಕಾಲೂರನ ಹೃದಯಸ್ಪರ್ಶೀ ಜೀವನ ವಿವರಗಳು ಮನಕರಗಿಸುತ್ತವೆ. ಯು. ಆರ್. ಅನಂತಮೂರ್ತಿಯವರು ಸಾಕಷ್ಟು ಕಾಲಾವಧಿಯ ನಂತರ ತಮ್ಮ ನಾಲ್ಕನೆಯ ಕಾದಂಬರಿ 'ಭವ'ವನ್ನು ಕೊಟ್ಟಿದ್ದಾರೆ. ವ್ಯಕ್ತಿಯ ಆಗುವಿಕೆ, ಮಾಗುವಿಕೆಯ ನವಿರಾದ ಚಿತ್ರಣ; ಅನಂತಮೂರ್ತಿಯವರ ಕಾವ್ಯಾತ್ಮಕ ನಿರೂಪಣೆ– 'ಭವ'ವನ್ನು ಓದಿಸಿಕೊಂಡೊಯ್ಯುತ್ತವೆ. ಪಿ. ಲಂಕೇಶರು ಬೆಂಗಳೂರಿನ ಕೊಳೆಗೇರಿಯ ದೇವೀರಿ - ಕ್ಯಾತರ ಕತೆಯನ್ನು 'ಅಕ್ಕ'ದಲ್ಲಿ ನಿರೂಪಿಸುವ ರೀತಿ ವಿಶಿಷ್ಟವಾಗಿದೆ. ಭ್ರಷ್ಟ ವ್ಯವಸ್ಥೆಯ ಕುರೂಪ ಪಳೆಯುಳಿಕೆಯಾಗಿರುವ ೨೦ರ ದೇವೀರಿ ಅನಾಥೆ; ಚೆಲುವೆ. ಮೈಮಾರಿಕೊಂಡೇ ಉಣ್ಣಬೇಕಾದ ದೇವೀರಿಗೆ ತಮ್ಮನಾದ ಕ್ಯಾತನನ್ನು ಸಾಕುವ ಜವಾಬ್ದಾರಿ. ತಮ್ಮನ ಅರಿವಿಗೆ ಬಾರದಂತೆ ನಟಿಸಬೇಕಾದ ದೇವೀರಿಯ ಹಲ್ಕಾತನ ಹುಡುಗ ಕ್ಯಾತನಿಗೆ ಸಿಟ್ಟು ತರಿಸುತ್ತದೆ. ತಮ್ಮನ ಮೇಲೆ ಪ್ರೀತಿ, ಹಣ ಕೊಡುವ ಗಂಡುಗಳ ಜತೆ ಒಡನಾಟ ಎರಡನ್ನೂ ನಿಭಾಯಿಸುವ ದೇವೀರಿಯನ್ನು ಕ್ಯಾತ ಕಳೆದುಕೊಳ್ಳುವ ದುರಂತ ಇಲ್ಲಿದೆ. ಲಂಕೇಶರ ಧ್ವನಿಪೂರ್ಣ ಭಾಷೆ, ಚಿತ್ರಕ ಶಕ್ತಿಯಿಂದಾಗಿ ಕಾದಂಬರಿ ಜಗತ್ತು ಆಪ್ತವಾಗಿದೆ; ಸಂವೇದನಶೀಲವಾಗಿದೆ. ಯಶವಂತ ಚಿತ್ತಾಲರ 'ಒಂದು ಕೇಂದ್ರ ವೃತ್ತಾಂತ' ಸ್ನೇಹ, ಪ್ರೇಮ ಸಂಬಂಧಗಳ ತಲ್ಲಣ - ತಳ್ಳಂಕಗಳ ಕತೆ ಎನಿಸುತ್ತದೆ.

ಕುಂದರನಾಡ ಪಾಟೀಲರು ಬೆಳಗಾವಿ ನಗರದ ಗಡಿಸಮಸ್ಯೆಯ ವಸ್ತುವನ್ನಾಗಿಸಿಕೊಂಡು ಬರೆದ 'ಉಲ್ಲಂಘನೆ' ಭಾಷೆ - ಭಾವನೆಗಳ ಸುತ್ತ ಮನುಷ್ಯ ಕಲ್ಪಿಸಿಕೊಂಡ ವಿಚಾರ, ವ್ಯವಹಾರ, ಮಾನವೀಯ ಸಂಬಂಧಗಳ ತೊಡಕು, ಸ್ವಾರಸ್ಯಗಳನ್ನು ವರ್ಣಿಸುತ್ತದೆ. ಕುಂ. ವೀರಭದ್ರಪ್ಪನವರು ತಮ್ಮ ಬರೆಹ

ಜೀವನದ ಚರಿತ್ರೆಯನ್ನು ಪುರಾಣ ಶೈಲಿಯಲ್ಲಿ ಹಿಡಿದಿಡುವ ಮಹತ್ವಾಕಾಂಕ್ಷೆಯಿಂದ 'ಶಾಮಣ್ಣ' ಬರೆದಂತಿದೆ. ಜಾತಿ ಸಂಪ್ರದಾಯದ ಜಡತೆಯಿಂದ ಹೊರಬಿದ್ದಾಗಲೇ ವ್ಯಕ್ತಿಯ ಬದುಕಿಗೆ ಚಲನಶೀಲತೆಯ ಸ್ವಾತಂತ್ರ್ಯ. ಈ ಸ್ವಾತಂತ್ರ್ಯ ಸಾಧಿಸುವವರೆ ಸಾಮಾಜಿಕ ಜೀವನವನ್ನು ಅರ್ಥಪೂರ್ಣಗೊಳಿಸಬಲ್ಲರು. ಶಾಮಣ್ಣ ಜಾತಿಭ್ರಷ್ಟನಾಗುವುದರಲ್ಲಿ ತನ್ನತನ ಕಂಡುಕೊಳ್ಳುತ್ತಾನೆ. ಸಂಪ್ರದಾಯದ ಜೊಳ್ಳು, ಭ್ರಮಾಧೀನ ಮೌಲ್ಯಗಳನ್ನು ನಾಶ ಮಾಡುವ ಶಾಮಣ್ಣ ತನ್ನ ಬದುಕನ್ನೇ ಬಲಿ ಕೊಡುತ್ತಾನಾದರೂ ತಾನು ದುರಂತ ಜೀವಿ ಎಂದುಕೊಳ್ಳುವುದಿಲ್ಲ. ಅನಂತ ಮೂರ್ತಿಯವರ 'ಸಂಸ್ಕಾರ'ದ ನಾರಣಪ್ಪ ಮತ್ತು ಪ್ರಾಣೇಶಾಚಾರ್ಯರು ಬ್ರಾಹ್ಮಣ್ಯ ತೊರೆದರೂ ಬ್ರಾಹ್ಮಣ್ಯ ಅವರನ್ನು ತೊರೆಯುವುದಿಲ್ಲ. ಚಲನಶೀಲತೆಗೆ ಸ್ಥಗಿತತೆ ಅನಿವಾರ್ಯವೇನೋ ಎಂಬ ಅನುಮಾನ 'ಸಂಸ್ಕಾರ'ದಲ್ಲಿದ್ದರೆ, ವೀರಭದ್ರಪ್ಪನವರ ಕಾದಂಬರಿ ಅದನ್ನು ನಿರಾಕರಿಸಿ, ಚಲನಶೀಲತೆಯು ಯಾರೊಬ್ಬರ ಪ್ರಜ್ಞೆಗೆ, ವೈಯಕ್ತಿಕ ದಿಟ್ಟತನದ ಮೇಲೆ ಅವಲಂಬನ ಹೊಂದದೆ, ಕಾಲದ, ಪರಿಸರದ, ಸ್ವತಃ ವ್ಯಕ್ತಿಯ ಅಂತರ್ಯದ ಒತ್ತಾಸೆಗಳಿಂದ ವಾಸ್ತವಗೊಳ್ಳಬಲ್ಲದು ಎಂದು ಸಾಬೀತುಪಡಿಸುತ್ತದೆ. ಕತೆ, ಹರಟೆ, ನಾಟಕ, ಚರ್ಚೆ, ಪ್ರಜ್ಞಾಪ್ರವಾಹ ನಿರೂಪಣಾ ತಂತ್ರಗಳ ಬಹುಮುಖ ಅಭಿವ್ಯಕ್ತಿಯ ಉಪಕರಣಗಳನ್ನು ಕುಂ. ವೀ. ಬಳಸಿಕೊಂಡಿದ್ದಾರೆ. ಕಾದಂಬರಿಯ ಮಾಮೂಲ ಚೌಕಟ್ಟನ್ನು ಮುರಿದು, ವಸ್ತುವಿನ ಆಶಯವನ್ನು ಹೋಲುವಂತೆ ಕೃತಿಯ ಸ್ವರೂಪವನ್ನೂ ಕ್ರಾಂತಿಕಾರಕವಾಗಿ ಮಾರ್ಪಡಿಸಿದ್ದಾರೆ. ಸಮಾಜ-ಸಂಸ್ಕೃತಿಯ ಆಂತರಿಕ ಬದಲಾವಣೆಯ ಸುಪ್ತ ಚರಿತ್ರೆಯ ಸ್ವಾರಸ್ಯಕರ ಅಭಿವ್ಯಕ್ತಿ 'ಶಾಮಣ್ಣ'. ಹೀಗಿದ್ದರೂ ಈ ಕೃತಿ ಓದುಗ ವರ್ಗಕ್ಕೆ ಹತ್ತಿರವಾಗದೆ ಉಳಿಯುವ ಆತಂಕವಿದೆ. ಇದರ ಬೃಹತ್‌ತೆಯೇ ಓದುಗನನ್ನು ದೂರವಿರಿಸುವ ಆತಂಕವಿದು. ಇದೇ ಬಗೆಯ ಆತಂಕವನ್ನು ಸಂವಹನದ ಕಾರಣಕ್ಕಾಗಿ ದೇವನೂರರ 'ಕುಸುಮ ಬಾಲೆ'ಯ ಬಗೆಗೂ ಒಡ್ಡಬಹುದು. ಕನ್ನಡದ ಪ್ರಗತಿಪರ ಆಶಯದ ಬರೆಹ ಅಭಿವ್ಯಕ್ತಿ ಸಮಸ್ಯೆಯನ್ನು ತೀವ್ರವಾಗಿ ಎದುರಿಸುತ್ತಿದೆ.

ಕತೆಗಾರ ಕಾ. ತ. ಚಿಕ್ಕಣ್ಣನವರು ತಮ್ಮ ಎರಡನೆಯ ಕಾದಂಬರಿ 'ದಂಡೆ'ಯನ್ನು ಪ್ರಕಟಿಸಿ, ಈ ದಶಕದಲ್ಲಿ ಕಾದಂಬರಿಯ ಆಶಯ ಹಾಗೂ ಸ್ವರೂಪ, ಕ್ರಾಂತಿಕಾರಕವಾಗಿ ಮಾರ್ಪಡುವ ಪ್ರಕ್ರಿಯೆಗೆ ಒತ್ತು ನೀಡಿದ್ದಾರೆ. 'ಮುಂಜಾವು' ಕಾದಂಬರಿಯ ನಿರೂಪಣಾ ಶೈಲಿಯನ್ನು, ಅಂದರೆ ಪಾತ್ರ, ಸನ್ನಿವೇಶಗಳ ಸಂವೇದನೆಯನ್ನು ಅನುಸರಿಸುವ ಹಳ್ಳಿಯ ಆಡುಮಾತನ್ನೇ ನಿರೂಪಣೆ ಬಳಸಿಕೊಂಡದ್ದು ಕೃತಿಯ ಒಳಮಿಡಿತಗಳಿಗೆ ಪ್ರಾಮಾಣಿಕ ಅಭಿವ್ಯಕ್ತಿ ಕೊಟ್ಟಂತಾಗಿದೆ.

ಅವ್ವಯ್ಯ ಎಂಬ ಹಳ್ಳಿ ಹೆಂಗಸಿನ ಪ್ರಜ್ಞೆಯಲ್ಲಿ ಒಡಮೂಡುವ ಕತೆ, ಅವಳ ಸ್ವಂತ ಬಾಳಿನ ಚಿತ್ರಗಳನ್ನು ನೆನಪಿನ ಮಾಲಿಕೆಯಾಗಿಸುತ್ತದೆ. ಅನಕ್ಷರಸ್ಥೆ, ಮುಗ್ಧೆ ಅವ್ವಯ್ಯನ ದಾಂಪತ್ಯವೇ ಅರೆಕೊರೆಯಾದದ್ದು; ಆದರೂ ಆಕೆ ಮಗನಿಗೋಸ್ಕರ

ಜೀವ ಗಟ್ಟಿ ಹಿಡಿದು ಅವನನ್ನು ಬೆಳೆಸಿದ್ದು; ಸ್ವಾತಂತ್ರ್ಯೋತ್ತರದ ಭ್ರಷ್ಟ ರಾಜಕೀಯ ಸನ್ನಿವೇಶದಲ್ಲಿ ಆ ಮಗನು ಸಾಮಾಜಿಕ ಜೀವನಕ್ಕೊಂದು ಮಾನವೀಯ ಸ್ಪರ್ಶ ಕೊಡುವ ಹಂತದಲ್ಲಿದ್ದಾಗ ಹತ್ಯೆಗೀಡಾಗುವುದು; ಅವನ ಸಂಗಾತಿ ಸೀತೆಯನ್ನು ಅವ್ವಯ್ಯ 'ಸೊಸೆ' ಎಂದು ಸ್ವೀಕರಿಸಿ ಸಂತೈಸುವುದು ಸ್ಥೂಲವಾಗಿ ಗೋಚರವಾಗುವ ಕತೆ. ಚಿಕ್ಕಣ್ಣನವರದು ಅಂತಃಕರಣದಿಂದ ಜೀವ-ಸಮುದಾಯವನ್ನು ಹೊಗುವ ತೀಕ್ಷ್ಣ ಭಾಷಾಭಿವ್ಯಕ್ತಿ. ಅಧಿಕಾರ, ಅವಕಾಶ, ಅದೃಷ್ಟಗಳೇನೇನೂ ಇಲ್ಲದೇ ಹೋಗುವ ಜೀವಿಗಳಲ್ಲಿ ಬದುಕನ್ನು ಸತ್ಯ, ನ್ಯಾಯ, ಸೌಂದರ್ಯಗಳ ಆಕಾಂಕ್ಷೆಯೊಂದಿಗೆ ಕಟ್ಟಿಕೊಳ್ಳುವ ತುಡಿತ ಎಷ್ಟಿರುತ್ತದೆಂಬುದನ್ನು ಚಿಕ್ಕಣ್ಣ ನವುರಾಗಿ, ಕಾವ್ಯಮಯವಾಗಿ ಬಿಚ್ಚುತ್ತಾರೆ. ಅಗೋಚರವಾಗಿರುವ ಜೀವಚೈತನ್ಯಗಳ ಕ್ರಿಯಾಶೀಲತೆಯಿಂದಲೇ ಬದುಕು ಉಳಿಯುತ್ತದೆ; ಉಜ್ವಲವಾಗುತ್ತದೆ. ಆದರ್ಶವನ್ನು, ವಾಸ್ತವದ ಕ್ರೂರ, ಹಿಂಸಾತ್ಮಕ ಸ್ಥಿತಿಯಿಂದಲೇ ಮೇಲೆದ್ದು ಸಾಧಿಸಬೇಕಾಗುವ ಗಟ್ಟಿತನ ಲೇಖಕರ ಆಶಯ, ಅಭಿವ್ಯಕ್ತಿಗಳೆರಡರಲ್ಲೂ ಸಾಧ್ಯವಾಗುವುದು ಈ ಕಾದಂಬರಿಯಲ್ಲಿ.

## ಮಹಿಳೆಯರ ಕಾದಂಬರಿಗಳು

ವಿಚಾರ ಮತ್ತು ಅನುಭವಗಳಿಗೆ ಪ್ರೌಢ ವಿನ್ಯಾಸ ಕೊಡುವಲ್ಲಿ ಲೇಖಕಿಯರು ಯಶಸ್ಸು ಪಡೆದಿರುವುದು ಈ ದಶಕದ ಕೆಲವು ಕಾದಂಬರಿಗಳ ಸಾಧನೆ. ಕತೆಗಾರ್ತಿ ಉಮಾ ರಾವ ಅವರ ಮೊದಲ ಕಾದಂಬರಿ : 'ನೂರುಸ್ವರ', ಹೆಣ್ತನದ ವಿಶಿಷ್ಟತೆ, ಸಾಮಾಜಿಕ ಅಸ್ತಿತ್ವಗಳನ್ನು ಖಚಿತಪಡಿಸುವ ಕತೆ. ವಿವಾಹವೆಂಬುದು ಸಾಮಾಜಿಕ ಒಪ್ಪಂದ ನಿಜ; ಆದ್ದರಿಂದಲೇ ಅದು ಮನಸ್ಥಿತಿಗೆ ಬಂಧನಕಾರಿ. ಮನೋ-ವೈಚಾರಿಕ ಸ್ವಾತಂತ್ರ್ಯಕ್ಕೆ ಅಥವಾ ಸೃಜನಶೀಲ ಬೆಳವಣಿಗೆಗೆ ವಿವಾಹ, ಒಂದು ಕಟ್ಟುಪಾಡು ಹಾಕಬಹುದು. ಆದ್ದರಿಂದ ಗಂಡು-ಹೆಣ್ಣಿನ ನಡುವಿನ ಪ್ರೀತಿ, ನೈಸರ್ಗಿಕವಾಗಿ ಹುಟ್ಟಿ, ಬಾಂಧವ್ಯವಾಗಿ ಉಳಿಯುವುದಾದರೆ, ಕೇಡಲ್ಲ. 'ನೂರುಸ್ವರ'ದ ಗೌರಿ, ವಿವಾಹಿತ ಸತೀಶನೊಂದಿಗೆ ಬೆಳೆಸಿದ್ದು ಬಾಂಧವ್ಯ. ಅದರ ಫಲವಾಗಿದ್ದ ಗರ್ಭಸ್ಥ ಶಿಶುವನ್ನು ಹೆತ್ತು, ಬೆಳೆಸುವ ನೈತಿಕ ಹೊಣೆಯನ್ನು ಹೊರಲು ಸಿದ್ಧಳಾಗುತ್ತಾಳೆ. ಸ್ತ್ರೀತ್ವವನ್ನು ಭಾವುಕ, ವೈಚಾರಿಕ ಹಾಗೂ ವ್ಯಾವಹಾರಿಕ ಮಟ್ಟದಲ್ಲಿ ಬಿಂಬಿಸುವ 'ನೂರುಸ್ವರ' ಸ್ವಾರಸ್ಯಪೂರ್ಣವಾಗಿ ನಿರೂಪಿತವಾಗಿದ್ದು 'ಸ್ತ್ರೀವಾದ'ದ ಪ್ರಾಮಾಣಿಕ ತಿರುಳನ್ನು ಮನವರಿಕೆ ಮಾಡಿಕೊಡುತ್ತದೆ. ವಿವಾಹಿತ ಹೆಣ್ಣಿನ ಅಂತರಂಗವನ್ನು ಬಿಚ್ಚಿಡುವ ಮತ್ತೊಂದು ಕಾದಂಬರಿ— ಎಚ್. ಎಸ್. ಚಂಪಾವತಿಯವರ 'ಶಿವಗಂಗಾ'. ಸ್ತ್ರೀ ಜಾಗೃತಿಯ ಪ್ರಜ್ಞಾಪೂರ್ವಕ ಅಂಶಗಳನ್ನು ಅನ್ವಯಿಸುವ ಕೃತಕತೆಯಿಂದಾಗಿ 'ಶಿವಗಂಗಾ'. ಕಾದಂಬರಿಯ ಅನುಭವ ಕೊಡುವಲ್ಲಿ ಹಿಂಜರಿದಿದೆ. ಆದರೆ ಲೇಖಕಿಯ ದಿಟ್ಟತನ, ಪ್ರಾಮಾಣಿಕ ಆತ್ಮ ವಿಶ್ಲೇಷಣೆ 'ಶಿವಗಂಗಾ' ಕೃತಿಯ ವಿಶೇಷತೆ. ಕತೆಗಾರ್ತಿಯಾಗಿ ಯಶಸ್ಸುಗಳಿಸಿದ ಎಚ್. ನಾಗವೇಣಿಯವರು ತಮ್ಮ ಮೊದಲನೆಯ ಕಾದಂಬರಿ 'ಗಾಂಧಿ ಬಂದ'

ಹೊರತಂದಿದ್ದಾರೆ. ಮಹಿಳೆಯರ ಕೃತಿಗಳು ಕುಟುಂಬ, ದಾಂಪತ್ಯ, ಪ್ರೀತಿ, ಪ್ರೇಮಗಳ ಸುತ್ತಲೇ ತಿರುಗುತ್ತಿರುವ ಮಾಮೂಲಿ ಹಾದಿಗೆ ಹೊರತಾಗಿ ರಾಜಕೀಯ-ಸಾಮಾಜಿಕ ಜೀವನಾವಲೋಕನಕ್ಕೆ ನಾಗವೇಣಿಯವರು ಹೊರಟಿರುವುದು ಗಮನೀಯ ಬೆಳವಣಿಗೆ. "ಈ ಕಾದಂಬರಿ ತುಳುನಾಡಿನ ಸಾಂಸ್ಕೃತಿಕ ಆತ್ಮಕಥನ" ಎಂದು ಲೇಖಕಿ ಹೇಳಿಕೊಂಡಿದ್ದಾರೆ. ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಗಾಂಧೀ ಚಳವಳಿ ಉಂಟುಮಾಡಿದ ಪ್ರತಿಕ್ರಿಯೆಗಳನ್ನು ದಾಖಲಿಸುವ ಕತೆಗಳು ಇಲ್ಲಿವೆ. ದೇಶದ ಸ್ವಾತಂತ್ರ್ಯ ಗಳಿಕೆಯ ಜೊತೆಗೇ ಗಳಿಸಬೇಕಾಗಿದ್ದ ಸ್ವಾತಂತ್ರ್ಯ ಸಾಮಾಜಿಕ ಅನಿಷ್ಟತೆಗಳಿಂದ; ಆರ್ಥಿಕ ದಾಸ್ಯದಿಂದ. ಮಹಿಳೆಯ ಸ್ವಾತಂತ್ರ್ಯದ ಹಂಬಲವೂ ಈ ಕೃತಿಯಲ್ಲಿ ಆಶಯವಾಗಿದೆ. ದಲಿತರ, ಜೀತದಾಳುಗಳ ಪ್ರತಿಭಟನೆಯ ಘಟನೆಗಳೂ ಇಲ್ಲಿವೆ. ಗಾಂಧಿ ಬಂದುದರಿಂದ, ಸ್ಥಗಿತಗೊಂಡಂತಿದ್ದ ತುಳು ನಾಡಿನ ತುಂಬ ಸಾಮಾಜಿಕ ಚಲನಶೀಲತೆ ಉಂಟಾಗಿ, ಹಳೆಯ ಅನಿಷ್ಟಗಳು ತೊಲಗುವ ಲಕ್ಷಣಗಳು ಕಾಣುವುದನ್ನು ಲೇಖಕಿ ತೋರಿಸುತ್ತಾರೆ. ಇದೆಲ್ಲವನ್ನೂ ಜನರ ಸಂಸ್ಕೃತಿ, ಮಾತುಗಳ ಹಿನ್ನೆಲೆಯಲ್ಲಿ ಚಿತ್ರಿಸಿರುವುದರಿಂದ ಕಾದಂಬರಿಗೊಂದು ಅಥೆಂಟಿಸಿಟಿ ಒದಗಿದೆ.

'ದ್ರೌಪದಿ' ಮತ್ತು 'ಅಹಲ್ಯೆ'ಯರನ್ನು ಪೌರಾಣಿಕ ಬಂಧನದಿಂದ ಕಳಚಿ, ಆಧುನಿಕ ಸ್ತ್ರೀವಾದೀ ನೆಲೆಗೆ ಕರೆತಂದು ಅವರ ಅಂತರಂಗವನ್ನು ಬಿಚ್ಚಿಡುವ ಕುಶಲ ಕೆಲಸವನ್ನು ಎಸ್. ವ್ಹಿ. ಪ್ರಭಾವತಿಯವರು ತಮ್ಮೆರಡೂ ಕಾದಂಬರಿಗಳಲ್ಲಿ ಮಾಡಿದ್ದಾರೆ. ಅದೇ ರೀತಿ, ಕಮಲಾ ಹೆಮ್ಮಿಗೆಯವರು ಅಂಬೆ=ಶಿಖಂಡಿ ಪಾತ್ರವನ್ನು ಸಂಶೋಧಿಸಿ ಬರೆದ "ಬದುಕೆಂಬ ದಿವ್ಯ" ಕಾದಂಬರಿ. ಪುರುಷ ಪ್ರಾಬಲ್ಯದ ಮೌಲ್ಯಗಳನ್ನು ಪ್ರಶ್ನಿಸುತ್ತ, ಸ್ತ್ರೀಯ ಮಾನವೀಯ - ನೈಸರ್ಗಿಕ ಶಕ್ತಿಯ ಪ್ರಭಾವವನ್ನು ಬಿಂಬಿಸುತ್ತದೆ. ಇವರಿಬ್ಬರೂ ಲೇಖಕಿಯರಲ್ಲಿ ವಿಚಾರಗಳು ಮತ್ತು ಕಲಾತ್ಮಕ ಪ್ರತಿಪಾದನೆ ಬೆರೆಯದಿರುವುದೇ ಕೃತಿಗಳ ಪ್ರಭಾವಕ್ಕೆ ಅಡ್ಡಿಯಾಗುತ್ತದೆ. ಆದರೆ ಇತಿಹಾಸ, ಪುರಾಣಗಳ ಸ್ತ್ರೀಯ ಪಾಡನ್ನು ಆಧುನಿಕ ಮಾನವತಾವಾದೀ ನಿಲುವಿನಿಂದ ಪುನರ್ಮೌಲ್ಯೀಕರಣಗೊಳಿಸುವ ಕಳಕಳಿಯಿಂದಾಗಿ ಈ ಕಾದಂಬರಿಗಳು ವಿಶಿಷ್ಟವಾಗಿ ನಿಲ್ಲುತ್ತವೆ. 'ವೈದೇಹಿ'ಯವರ 'ಅಸ್ಪೃಶ್ಯರು' ಸ್ತ್ರೀ ಮತ್ತು ಕೆಳವರ್ಗದ ಜನರ ಸಾಮಾಜಿಕ ಬದುಕಿನ ಒಳದನಿಗಳನ್ನು ಅತಿ ಮಂದ್ರ ಸ್ವರದಲ್ಲಿ ನುಡಿಸುವ ಕಾದಂಬರಿ.

## ಪ್ರತಿಬಿಂಬ ೩ : ಸಣ್ಣಕತೆ

ಕಾವ್ಯ ಮತ್ತು ಕಾದಂಬರಿ ಪ್ರಕಾರಗಳಿಗೆ ಹೋಲಿಸಿದರೆ ಈ ದಶಕದ ಸಣ್ಣಕತೆ, ಹೊಸ ದಿಕ್ಕುಗಳತ್ತ ಸಾಗುತ್ತ, ಸತ್ವ, ಅಭಿವ್ಯಕ್ತಿ ಮಾಧ್ಯಮದಲ್ಲಿ ಹೊಸ ರೂಪ - ಆಕಾರಗಳನ್ನು ಸಾಧಿಸಿದ್ದು ಎದ್ದು ಕಾಣುವ ಅಂಶ. ಸಣ್ಣ ಕತೆಗಾರಿಕೆ ಅಪೇಕ್ಷಿಸುವ ಸಂಯಮದ ಕೌಶಲ ಮತ್ತು ಅಭಿವ್ಯಕ್ತಿಯಲ್ಲಿಯ ಅನನ್ಯತೆ ಕಾಪಾಡಿಕೊಳ್ಳುವ ಎಚ್ಚರ ಕೆಲವು ಕತೆಗಾರರಲ್ಲಿ ಪ್ರಜ್ಞಾಪೂರ್ವಕವಾಗಿ ಹೊಮ್ಮಿದರೆ, ಕೆಲವರಲ್ಲಿ ಸಹಜವಾಗಿಯೇ ಒಳ ಒತ್ತಡದ ಫಲವಾಗಿ ಹೊಮ್ಮಿದೆ.

ಬದಲಾಗುತ್ತಿರುವ ಪರಿಸರ, ಪರಿಸ್ಥಿತಿಗಳನ್ನು ಗಮನಿಸುವಾಗ ಕತೆಗಾರನಿಗೆ ಕಾಡುವ ಮೊದಲ ಪ್ರಶ್ನೆ : ಮೌಲ್ಯಗಳಲ್ಲಿ ಆಗುವ ಪಲ್ಲಟಕ್ಕೆ ಕಾರಣವೇನು, ಯಾರು ? ಇದರ ಶೋಧನೆಗೆ ಹೊರಟಾಗ. ಹಾಗೆ ಹೋಗುವ ಕ್ರಮವೇ ಬರೆಹದ ದಾಟಿಯನ್ನು ಸೂಚಿಸುತ್ತದೆ. ಸಂವೇದನಾಶೀಲನಾದ ಕತೆಗಾರನಿಗೆ ಕಾರಣಗಳ ತೊಡಕು ಕೂಡ ರಚನೆಗೆ ಸೃಜನಶೀಲ ಸವಾಲಾಗುತ್ತದೆ. ಹಾಗಾಗಿ, ಕತೆ ಕಟ್ಟುವ ಕ್ರಮದಲ್ಲಿ ಸಂಕೀರ್ಣತೆ ಸಹಜವಾಗುತ್ತದೆ. ಆದರೆ ಈ ಸಂಕೀರ್ಣತೆಯು ನವ್ಯದವರ ಹಾಗೆ ವ್ಯಕ್ತಿಕೇಂದ್ರಿತವಾಗಿರದೆ, ಬಹಿರ್‌ಮುಖಿಯಾಗಿರುವುದು. ಸಮಾಜ ವ್ಯವಸ್ಥೆ, ಸಂಪ್ರದಾಯ, ರಾಜಕೀಯ ಒತ್ತಡಗಳಿಂದ ವ್ಯಕ್ತಿಯ ಸಾಮಾಜಿಕ ಅಸ್ತಿತ್ವಕ್ಕೆ ಆಗಿರುವ ಆತಂಕ, ಅಡೆತಡೆಗಳು ಕತೆಗಾರನ ಹೊಸ ಕಾಳಜಿಯಾಗಿವೆ.

ಈ ದಶಕದಲ್ಲಿ ನವವಸಾಹತುಶಾಹಿಯಂತಿರುವ ಗ್ಯಾಟ್ ಒಪ್ಪಂದದ ಪರಿಣಾಮವಾಗಿ ವಿಶ್ವದ ಮುಕ್ತ ಮಾರುಕಟ್ಟೆಗೆ ನುಗ್ಗಿದ ಭಾರತದ ವ್ಯಾಪಾರ-ಉದ್ದಿಮೆ–; ಉಪಭೋಗತಾವಾದ; ಬಹುರಾಷ್ಟ್ರೀಯ ಕಂಪನಿಗಳು ಸೃಷ್ಟಿಸಿದ ಗೊಂದಲದ ಅರ್ಥಕ್ರಾಂತಿ, ದೂರದರ್ಶನದ ಪ್ರಭಾವಗಳು ಜನಜೀವನವನ್ನು ಹಲವು ಒತ್ತಡಗಳಿಗೆ ಸಿಕ್ಕಿಸಿದೆ. ಆರ್ಥಿಕ ಪ್ರಾಬಲ್ಯದ ವಾತಾವರಣ ಎಂಬುದೊಂದು ಹುಲಿ. ಈ ಹುಲಿಯ ಮೇಲೆ ಈಗಾಗಲೇ ಸ್ವಯಂಬುದ್ಧಿಯಿಂದ ಕೆಲವರು; ಉತ್ಸಾಹದಿಂದ ಹಲವರು; ಇದಾವುದೂ ಇಲ್ಲದೆ ಸುಮ್ಮನೆ ಮತ್ತೆ ಹಲವರು-ಸವಾರಿ ಮಾಡಿದ್ದಾಗಿದೆ. ಅರಿವಿದ್ದೂ ಅರಿವಿಲ್ಲದಂತೆ ಹುಲಿ ಸವಾರಿ ಮಾಡಿ ಒಂದಷ್ಟು ದೂರ ಸಾಗಿದಂತಾಗಿದೆ. ಇನ್ನೆಷ್ಟು ದೂರ ಹುಲಿ ಒಯ್ಯುವುದೋ ಸ್ಪಷ್ಟವಿಲ್ಲ. ಎಷ್ಟೇ ದೂರ ಸಾಗಿದರೂ ಹುಲಿಯು ಒಂದೆಡೆ ನಿಲ್ಲುವುದು ಅನಿವಾರ್ಯ, ಸಹಜ. ಅದು ನಿಂತಾಗ ಏನು ಮಾಡಬೇಕು ? ಇಳಿಯುತ್ತೇವೆ, ಹುಲಿ ನುಂಗುವುದು; ಅಲ್ಲೇ ಕೂತೆವೋ, ಏನೂ ಮಾಡದೆ ಹುಲಿಗೆ ಅಧೀನವಾಗಿ ಹೆದರುತ್ತ ಕೂಡಬೇಕು. ಈ ರೂಪಕ, ನಮ್ಮ ಇಂದಿನ, ನಾವೇ ಕಟ್ಟಿಕೊಂಡ ಆರ್ಥಿಕ ವ್ಯವಸ್ಥೆಯ ಕ್ರೂರ ವ್ಯಂಗ್ಯ. ಈ ಹೊತ್ತಿಗಾಗಲೇ ಹುಲಿಸವಾರಿಯ ಅಪಾಯದ ಅನುಭವ ಅನೇಕರಿಗೆ– ಸಂವೇದನಶೀಲರಿಗೆ ಆಗುತ್ತಿದೆ. ಹುಲಿ ಕರೆದೊಯ್ಯುವತ್ತ ಹೊರಟಂತಿದೆ ನಮ್ಮ ಸವಾರಿ. ಹುಲಿಯ ಮರ್ಜಿ ಕಾಯ್ದು ನಮ್ಮ ಶಕ್ತಿ, ಯುಕ್ತಿ, ಉಕ್ತಿ ಖರ್ಚು ಮಾಡಿದಂತಾಗಿದೆ. ಈ ರೂಪಕವನ್ನೇ ಒಂದು ಪ್ರತಿಮೆಯನ್ನಾಗಿ ಇಟ್ಟುಕೊಂಡು ಬರೆಯಲಾದ ಒಂದು ಸಣ್ಣಕತೆ : ವಿವೇಕ ಶಾನಭಾಗರ ' ಹುಲಿ ಸವಾರಿ .'

ಹುಲಿ ಸವಾರಿಯ ಕಥಾವಸ್ತು ಹೀಗಿದೆ : ಅದೊಂದು ಬಹುರಾಷ್ಟ್ರೀಯ ಕಂಪನಿ. ಅಲ್ಲಿ ವ್ಯಾಪಾರ, ವ್ಯವಹಾರದ ತರಬೇತಿ ವ್ಯವಸ್ಥೆ ಇದೆ. ನಿರ್ಭಾವುಕ ವಾತಾವರಣದ ಕಚೇರಿ ಅದು. ಉದ್ಯೋಗಿಗಳ ಪಡೆಯನ್ನು ನಿರ್ಮಿಸಿ, ಲಾಭಾಂಶ(profit, dividend)ಕ್ಕೆ ಅವರನ್ನು ಯಂತ್ರವಾಗಿಸಿ ದುಡಿಯುವಂತೆ ನೋಡುವ

ಕಂಪನಿಯ ಅದೃಶ್ಯ ಯಜಮಾನ ಇಲ್ಲಿದ್ದಾನೆ. ಭಾರತೀಯರಾದ ಮೂವರ ಪೈಕಿ ಇಬ್ಬರು. ಅಮಾನವೀಕರಣದ ವಿರೋಧಿಗಳು. ಕತೆಯ ನಿರೂಪಕರಲ್ಲಿ ಒಬ್ಬ ಅಂಥವ. ಮೂರನೆಯ ವ್ಯಕ್ತಿ ಜೆಫ್ ಎಂಬವ. ಜೀವನವನ್ನು ಹಣದ ಲೆಕ್ಕಾಚಾರದ ಮೇಲೆ ಅಳೆಯುವವ. ಕಂಪನಿಗೆ ಲಾಭ ತರುವ ಸಾಹಸದಲ್ಲಿ ಉತ್ಸಾಹಿ ಆತ. ಆದರೆ ಈ ಬಹುರಾಷ್ಟ್ರೀಯ ಕಂಪನಿಯ ವ್ಯವಹಾರಗಳಲ್ಲಿ ಮತ್ತು ದುಡಿಮೆಯಲ್ಲಿ ನಿರೂಪಕನಿಗೆ ಆಗುತ್ತಿರುವುದು ದಬ್ಬಾಳಿಕೆಗೆ ಒಳಗಾದ ಅನುಭವ. ಆದ್ದರಿಂದ ತನ್ನ ದೇಶದಲ್ಲಿ ಬ. ರಾ. ಕಂ. (MNC)ಯ 'ಶಾಖೆ' ಬೇಡ ಎನ್ನುತ್ತಾನೆ. ಜೆಫ್ ಅವನಿಗೆ 'ಭಾವುಕನಾಗಬಾರದು' ಎಂದು ಬುದ್ಧಿ ಹೇಳುತ್ತಾನೆ. ಭಾರತದಂತಹ ಮೂರನೆಯ ಜಗತ್ತಿನಲ್ಲಿ ಮಾನವ. ತನ್ನ ಆಯ್ಕೆಯ ಸ್ವಾತಂತ್ರ್ಯವಿಲ್ಲದೆ, ತನ್ನ ಮೇಲೆಯೆ ತನಗೆ ನಿಯಂತ್ರಣವಿಲ್ಲದೆ ಹೋಗಿದ್ದಾನೆ. ಅವನದು ಹುಲಿಯ ಸವಾರಿ ಮಾಡಿದವನ ಅವಸ್ಥೆ. ಶಾನಭಾಗರ ಈ ರೂಪಕ ಕತೆಯ ಚಿಂತನೆ, ಹೊಸಕತೆಗಾರರನ್ನು ಕಾಡಿಸಿದೆ; ಕಾಳಜಿಗೆ ಹಚ್ಚಿದೆ. ಹಳ್ಳಿಗಳ ಕೌಟುಂಬಿಕ, ಸಾಂಸ್ಕೃತಿಕ ಬದುಕಿನ ಮೇಲೆ ಹೊಸ ಅರ್ಥವ್ಯವಸ್ಥೆ ಬೀರಿದ ಪರಿಣಾಮಗಳೂ ಕತೆಗೆ ವಸ್ತುವಾಗಿವೆ ಮತ್ತು ಕತೆಗಾರರ ಅನುಭವ ಲೋಕಗಳ ವೈವಿಧ್ಯಕ್ಕೆ ಕಾರಣವಾಗಿವೆ.

'ದೇಸಗತಿ' (೧೯೮೫) ಮತ್ತು 'ಮಾಯಿಯ ಮೂರು ಮುಖಗಳು' (೧೯೯೮) ರಾಘವೇಂದ್ರ ಪಾಟೀಲರ ಕಥಾಸಂಕಲನಗಳು. ಕಾಲದ ವಿಚಿತ್ರ ಮಹಿಮೆಗೆ ಒಳಗಾಗಿ ಅವನತಿ ಹೊಂದಿದ ಕಲ್ಪನಾಥ ದೇಸಾಯರ ಪ್ರಜ್ಞೆಯ ಮುಖಾಮುಖಿಯಲ್ಲಿ ಆಗುವ ಕತೆ-ದೇಸಗತಿ. ದೈವ, ಅರಾಜಕತೆಯ ದಾಳಿಯಿಂದ ತತ್ತರಿಸಿದ ದೇಸಾಯರ ಸಂವೇದನೆಯನ್ನು ಹಿಡಿದಿಡುವ ಕ್ರಮ, ಅನುಭವನಿಷ್ಠವಾದುದು. 'ಕಥಿ ಹುಚ್ಚಿನ ಕರಿ ಟೊಪಿಗಿ ರಾಯ' ಕತೆಯಲ್ಲಿ ಕುಲಕರ್ಣಿ ಶಾಮರಾಯನ ಹಂಬಲ. ಹಳವಂಡಗಳನ್ನು ನಿರೂಪಿಸುತ್ತ ಸ್ವತಂತ್ರ ಭಾರತದಲ್ಲಿ ಹೊಲ-ಮನಿ ಕಳೆದುಕೊಂಡು ದಿಕ್ಕೆಟ್ಟವನ ದಾರುಣ ಚಿತ್ರ ಕೊಡುತ್ತಾರೆ. 'ಲಯ' ಕತೆಯ ಸೊಗಸು ವಸ್ತುವನ್ನು ಭಾವಗೀತಾತ್ಮಕ ದಾಟಿಯಲ್ಲಿ ನಿರೂಪಿಸುವದರಲ್ಲಿದೆ. ಮಳೆ ಬಾರದ ಹಳೇ ಊರಿನ ಜನ ಮಳೆಗಾಗಿ ಹರಕೆ ಹೊತ್ತು, ಸಿದ್ಧರು-ಸ್ವಾಮಿಗಳಿಂದ ಭವಿಷ್ಯದ ಮಾತಿಗೆ ಯಾಚನೆ ಮಾಡಿ, ಬದುಕಿನ ಹೊಸ ಲಯ ಹುಡುಕಿಕೊಂಡು ಬೇರೆ ಕಡೆ ಹೋಗುವುದೇ ಲೇಸೆಂಬ ಅವರ ಉಪದೇಶ ಅಂಗೀಕರಿಸಿ, ಗುಳೇ ಹೊರಡುವ ಕತೆ. ಪ್ರಕೃತಿಯಲ್ಲಿಲ್ಲದ ಜೀವಸೆಲೆ, ಮನುಷ್ಯನ ಎದೆಯೊಳಗಾದರೂ ಇದೆ. ಹೊಸ ನಡಿಗೆಯನ್ನು ಹೊಸ ಲಯದಿಂದ ಕಲಿತು ಮುಂದೆ ಸಾಗುವ ಅನುಭವದ ಪರಿಯನ್ನು ಪಾಟೀಲರು ನಾಟಕೀಯವಾಗಿ ನಿರೂಪಿಸುತ್ತಾರೆ. ಅನುಭವ, ಅನಿಸಿಕೆಗಳ ಆಳಕ್ಕೆ ಪಾತ್ರಗಳನ್ನು ಒಯ್ದು, ಸತ್ಯದ, ವಾಸ್ತವದ ದರ್ಶನ ಮಾಡಿಸುವಲ್ಲಿ ಪಾಟೀಲರ ಭಾಷೆ ಹೆಚ್ಚುಮಟ್ಟಿಗೆ ಸಫಲವಾಗುತ್ತದೆ. ಮಾಂತ್ರಿಕ ವಾಸ್ತವತೆಯನ್ನು ನಿರ್ಮಿಸುವ ಮೂಲಕ ಪಾಟೀಲರು

ಕತೆಗಳಿಗೆ ಪುಷ್ಟತೆ ತರುತ್ತಾರಲ್ಲದೆ; ವ್ಯಂಜಕತೆಯನ್ನೂ ಹಬ್ಬಿಸುತ್ತಾರೆ. ಗೋಕಾಕ ಕಡೆಯ ನುಡಿಗಟ್ಟನ್ನು ಸಹಜವಾಗಿ, ಭಾವ ಸಂದರ್ಭಕ್ಕೆ ತಕ್ಕಂತೆ ಬಳಸುತ್ತ ಅದರ ಸತ್ವಕ್ಕೆ ಹೊಸ ಬೆಳಕು ಕೊಡುತ್ತಾರೆ. 'ಮಾಯಿಯ ಮೂರು ಮುಖಗಳಲ್ಲಿ' ಮೂವರು ಹುಡುಗಿಯರ ಜೀವನಗತಿಯ ದಿಕ್ಕುಗಳು ತಾಯಿ-ತಂದೆಯರ ಆಸೆ, ನಿರೀಕ್ಷಣೆ ಮೀರಿ ಹೇಗೆ ಬದಲಾಗುತ್ತವೆ; ಬದಲಾಗುವಿಕೆಯ ಕಾರಣಗಳ ಹಿಂದಿರುವ ದೈವದ ಹೊಂಚು ಎಷ್ಟು ವಿಚಿತ್ರ ಎಂಬುದನ್ನು ಪರಿಣಾಮಕಾರಿಯಾಗಿ ಮೂಡಿಸುತ್ತಾರೆ. ವಾಸ್ತವವನ್ನು ನೇರವಾಗಿ ನೋಡಿದರೂ ಅದರೊಳಗೆ ಅಡಕವಾದ ಸತ್ಯಾಂಶಗಳನ್ನು ಬೆಳಕಿನ ವಕ್ರೀಭವನ ಕ್ರಿಯೆಯಿಂದ ನೋಡುತ್ತ ಸತ್ಯದ ಬೇರೆ ಬೇರೆ ಹೊಳಹುಗಳತ್ತ ಓದುಗರನ್ನು ಗಮನ ಸೆಳೆಯುವ ಕತೆಗಾರಿಕೆ ರಾಘವೇಂದ್ರ ಪಾಟೀಲರದು. ಕಾಲಾಂತರದ ಅನುಭವಗಳನ್ನು ಪ್ರಜ್ಞೆಯಲ್ಲಿ ಏಕೀಭವಿಸುವುದಕ್ಕೆ ಪಾಟೀಲರು ಕಲ್ಪಿಸುವ ನಾಟ್ಯಕ್ರಿಯೆ ಅವರ ಕತೆಗಳಿಗೆ ಹೊಸತನವನ್ನೂ ವಿಶಿಷ್ಟತೆಯನ್ನೂ ತಂದಿದೆ.

ಅಮರೇಶ ನುಗಡೋಣಿ ಆಶಾದಾಯಕ ಭರವಸೆ ಹುಟ್ಟಿಸಿ, ಸಾರ್ಥಕ ಕತೆಗಳನ್ನು ಕೊಡುತ್ತಿರುವ ಇನ್ನೊಬ್ಬ ಮಹತ್ವದ ಕತೆಗಾರ. ಹೈದ್ರಾಬಾದ್ ಕರ್ನಾಟಕದ (ರಾಯಚೂರು ಜಿಲ್ಲೆ) ಹಳ್ಳಿಗಾಡಿನ ಬದುಕನ್ನು ವ್ಯಾಖ್ಯಾನಿಸುವ ಕತೆಗಾರಿಕೆ ಅಮರೇಶರದು. ರಾಜಕೀಯವಾಗಿ ಅರಾಜಕವೇ ಆಗಿದ್ದ; ಸಾಂಸ್ಕೃತಿಕವಾಗಿ ಭಾವೈಕ್ಯದಿಂದ ವಂಚಿತವಾದ ಹಾಗೂ ಶಿಕ್ಷಣ-ಆರ್ಥಿಕತೆಯಲ್ಲೂ ಹಿಂದುಳಿದ ಈ ಪ್ರದೇಶದಲ್ಲಿ ಬದಲಾವಣೆ ನಿಧಾನಗತಿಯಲ್ಲಿ ಆಗುತ್ತಿದೆ. ಸ್ವಾತಂತ್ರ್ಯ ಬಂದರೂ ಹಳ್ಳಿಗಳ ಬದುಕಿನ ವಿಧಾನದಲ್ಲಿ ಶೋಷಣೆ, ದಬ್ಬಾಳಿಕೆ ಅದೃಶ್ಯವಾಗಿ ಮುಂದುವರಿದಿದೆ. ಪ್ರಜಾತಾಂತ್ರಿಕ ರಾಜಕೀಯ ಕೂಡ 'ಉಳಿಗಮಾನ್ಯ'ದ ರೂಪಾಂತರವಾಗಿದ್ದು ಸದ್ದಿಲ್ಲದೆ ಅಮಾಯಕ ಜನತೆಯನ್ನು ಸುಲಿಯುತ್ತಿವೆ. ಅಮರೇಶ ನುಗಡೋಣಿ ಇಂತಹ ಬದುಕಿನತ್ತ ಹರಿಸುವ ಕಣ್ನೋಟ ಕರುಣೆ, ಪ್ರೀತಿಯಿಂದ ತುಂಬಿದ್ದು. 'ಮಣ್ಣು ಸೇರಿತು ಬೀಜ' (೧೯೯೧) ಹಾಗೂ 'ತಮಂಧದ ಕೇಡು' (೧೯೯೭) ಸಂಕಲನಗಳಲ್ಲಿರುವ ೧೮ ಕತೆಗಳ ಜೊತೆಗೆ, ಮತ್ತೆ ಕೆಲವನ್ನು ಪ್ರಕಟಿಸಿ ಬಹುಮಾನಗಳಿಗೂ, ವಿಮರ್ಶಕರ ಮೆಚ್ಚುಗೆಗೂ ಪಾತ್ರರಾಗಿದ್ದಾರೆ ಅಮರೇಶ.

ದಾರಿ ಮೂಡಿಸುವ ಹೆಜ್ಜೆಗಳು; ಮೂಡಲು ಹರಿಯಿತು; ಹೊತ್ತು ಮೂಡುವ ಸಮಯ; ತಮಂಧದ ಕೇಡು; ಮಹಾನದಿಯು ಜೀವನದಿಯು – ಮುಂತಾದ ನುಗಡೋಣಿಯವರ ಕತೆಗಳು ಹಳ್ಳಿಗಾಡಿನ ಬದುಕಿನ ಹಲವು ಆಯಾಮಗಳನ್ನು ಪರಿಶೀಲಿಸುತ್ತ, ಮಾನವೀಯತೆಗೆ ಎದುರಾದ ಹಿಂಸೆ, ದಬ್ಬಾಳಿಕೆಗಳನ್ನು ಹೊರಗೆಳೆಯುವುವು; ಮತ್ತು ಹಿಂಸ್ರವಾತಾವರಣದ ನಡುವೆಯೂ ಮನುಷ್ಯತ್ವವನ್ನು ಉಳಿಸಿಕೊಂಡು ತೇಜಸ್ಸಿನಿಂದ ಮೆರೆಯುವ ವ್ಯಕ್ತಿಗಳನ್ನು ತೋರಿಸುವುವು. ದಲಿತರ

ಬದುಕನ್ನು ಕಾಣುವ, ತಿಳಿಯುವ ಅಮರೇಶರ ಕಣ್ಣು ಒಳಸತ್ಯಗಳನ್ನು ಹುಡುಕಿ ತೋರಿಸುವಲ್ಲಿ ಯಶಸ್ವಿಯಾಗಿದೆ. ರಾಯಚೂರು ನುಡಿಗಟ್ಟಿನಲ್ಲಿ ವಾಸ್ತವವನ್ನು ಸರ ಹಿಡಿದು, ಸಾಂಕೇತಿಕತೆಯ ಅರ್ಥವನ್ನು ವಿಸ್ತರಿಸುತ್ತಾರೆ. ಅಮರೇಶರಿಗೆ ಹೊಸ ಸಮಾಜ ಹುಟ್ಟುವುದರತ್ತ ಆಸೆಗಳಿವೆ; ವಿಷಾದದ ನಡುವೆಯೂ ನಗಬೇಕೆಂಬ ಬೌದ್ಧಿಕ ಭರವಸೆ ಇದೆ.

ಹೊಸ ಕತೆಗಾರರಾದ ರಾಜಶೇಖರ ಹತಗುಂದಿ (ಕಾಳ ಬೆಳದಿಂಗಳ ಸಿರಿ (೧೯೯೯)) ಶ್ರೀಕಾಂತ ಪಾಟೀಲ; ಶಿವಕುಮಾರ ನಾಗವಾರ (" ಹಣದಿ " ಸಂಕಲನ); ಕಲಿಗಣನಾಥ ಗುಡದೂರು – ಈ ದಶಕದ ಉತ್ತರಾರ್ಧದಲ್ಲಿ ಪ್ರಕಟಿಸಿರುವ ಸಣ್ಣ ಕತೆಗಳು ಆಶಾದಾಯಕವಾಗಿವೆ. ಇವರೆಲ್ಲರೂ, ಸಾಂಸ್ಕೃತಿಕವಾಗಿ ಮೂಕವಾಗಿರುವಂತೆ ಕಾಣುವ ಹೈದ್ರಾಬಾದ ಕರ್ನಾಟಕದ ಲೇಖಕರು. ಹಳ್ಳಿಯ ಮುಗ್ಧರು, ದಲಿತರು, ಯುವಕರು ಇವರ ಕತೆಗಳಲ್ಲಿ ಚಿತ್ರಿತರಾಗುವ ಬಗೆಗಳಲ್ಲಿ ಹೊಸ ಹೊಸ ಆಶಯಗಳಿವೆ. ತರ್ಕಕ್ಕೆ, ವ್ಯವಸ್ಥೆಯ ಸುಸಂಬದ್ಧತೆಗಳಿಗೆ ಒಗ್ಗದ, ಅಥವಾ ಸಿಗದ ಮನುಷ್ಯ ಸಂಬಂಧಗಳನ್ನವರು ತಮ್ಮದೇ ಆದ ನುಡಿಗಟ್ಟಿನಲ್ಲಿ ತೋರಿಸಬಲ್ಲವರಾಗಿದ್ದಾರೆ. ಇವರೆಲ್ಲರೂ ಗ್ರಾಮೀಣ ಬದುಕಿನ ಬಿಕ್ಕಟ್ಟುಗಳನ್ನು ಬಗಿದು, ಜೀವನದ ಸಂಕೀರ್ಣವನ್ನು ಧ್ವನಿಪೂರ್ಣವಾಗಿ ಚಿತ್ರಿಸುವವರು. ಹೀಗಾಗಿ ಕತೆಗಳ ರೂಪ, ಆಶಯ ಒಬ್ಬರಕ್ಕಿಂತ ಮತ್ತೊಬ್ಬರದು ಬೇರೆ ಬೇರೆಯೇ ಆಗಿದೆ. ಬಸವರಾಜು ಕುಕ್ಕರಹಳ್ಳಿಯವರು ಪ್ರಕಟಿಸಿದ 'ಮೊಕಾರ' (೧೯೯೬) ಕಥಾಸಂಕಲನ ಬೆಂಗಳೂರು ಕಡೆಯ ಹಳ್ಳಿಯ, ದಲಿತರ ಬದುಕಿನ ಒಳನೋಟಗಳನ್ನುಳ್ಳ ವಿಶಿಷ್ಟ ಕೃತಿಯಾಗಿದೆ. ದೇವನೂರರ ಕಥನ ಶೈಲಿಯನ್ನು ಅನುಸರಿಸಿಯೂ ನವೀನ ಅನುಭವಗಳನ್ನು; ವಿಲಕ್ಷಣ ಸಂವೇದನೆಗಳನ್ನು ಬಸವರಾಜು ಮಂಡಿಸುತ್ತಾರೆ. ಹೃದಯವಂತಿಕೆ, ಜೀವನ ಪ್ರೀತಿಗಳನ್ನಿಟ್ಟುಕೊಂಡೇ ಅಜ್ಞಾತ, ಅಲಕ್ಷಿತ ಬದುಕನ್ನು ಈ ಕತೆಗಾರರು ಚಿತ್ರಿಸುತ್ತಿರುವುದು ಕಥಾ ಸಾಹಿತ್ಯಕ್ಕೆ ನವನವೀನ ವಸ್ತುಗಳ ಆಮದು ಸಾಧ್ಯವಾಗಿದೆ. ಮೂಡ್ನಾಕೂಡು ಚಿನ್ನಸ್ವಾಮಿಯವರ " ಮೋಹದ ದೀಪ " (೧೯೯೯)ದ ಕೆಲವು ಕತೆಗಳು ಸಂಪೂರ್ಣವಾಗಿ ಹೊಸ ನಿಟ್ಟಿನಲ್ಲಿವೆ. ದಲಿತನ ಸಂವೇದನೆಯನ್ನು ಅಬ್ಬರ, ಆಕರ್ಷಣೆಯಿಲ್ಲದೆ ನಿರ್ಲಿಪ್ತವಾಗಿ ಆದರೆ ನಂಬಲರ್ಹ ರೀತಿಯಲ್ಲಿ ಮಂಡಿಸುವ ಚಿನ್ನಸ್ವಾಮಿಯವರು, ಜೀವದ ನೋವನ್ನು ಹೃದ್ಯವಾಗಿ ತಲುಪಿಸುತ್ತಾರೆ. 'ನಾನು-ಅಪ್ಪ-ಕಾಗೆ' ಕತೆಯಲ್ಲಿ ದಲಿತಪ್ರಜ್ಞೆಯ ಆತ್ಮೀಯ ವಿವರಗಳಿವೆ. ಮೂಗನ ಪಾಡು ಹಾಗೂ ಅಜ್ಜನಿಗೆ ಬಿದ್ದ ಮೋಡದ ಕನಸು ಚಿನ್ನಸ್ವಾಮಿಯವರ ಕತೆಗಾರಿಕೆಯ ಕುಶಲ ಕೃತಿಗಳು.

ಬಾಳಾಸಾಹೇಬ ಲೋಕಾಪುರರ 'ಕವಣೆಗಲ್ಲು' (೧೯೯೪) ಮತ್ತು 'ತನು ಕರಗದವರಲ್ಲಿ' (೧೯೯೯) ಕಥಾಸಂಕಲನಗಳು ಉತ್ತರ ಕರ್ನಾಟಕದ, ಅದರಲ್ಲೂ ಅಥಣಿ ಕಡೆಯ ಗ್ರಾಮೀಣ ಬದುಕಿನ ಪಾಡುಗಳನ್ನು ದಟ್ಟವಾದ ವಿವರ;

ಸಂಕೇತಪೂರ್ಣ ನಿರೂಪಣೆಯಿಂದ ಬಿಚ್ಚಿಡುವ ಕೃತಿಗಳಾಗಿವೆ. ಪ್ರೀತಿ, ಪ್ರಣಯ, ಒಡತನ, ತಾರುಣ್ಯದ ಹುಚ್ಚು: ಬಾಳಾಸಾಹೇಬರ ಕಲ್ಪನೆಯ ಮೂಸೆಯಲ್ಲಿ ಪಡೆಯುವ ಕಥಾಸ್ವರೂಪ ಅಪೂರ್ವವಾದುದು. ಜೀವನ ದೃಷ್ಟಿಕೋನ ಅಥವಾ ಧೋರಣಾತ್ಮಕ ನಿಲುವುಗಳಿಲ್ಲದೆ, ಬರಿ ವಾಸ್ತವದ ನಿಜವನ್ನು ವರ್ಣಿಸುವ ಇವರ ಕತೆಗಳು ಅನುಭವದ ನಾವೀನ್ಯದಿಂದ, ಭಾಷೆಯ ಸೊಗಡಿನಿಂದ ಆಪ್ಯಾಯಮಾನವೆನಿಸುತ್ತವೆ.

ಕೆ. ಸತ್ಯನಾರಾಯಣ, ಜಯಂತ ಕಾಯ್ಕಿಣಿ, ಮಹಾಬಲಮೂರ್ತಿ ಕೊಡ್ಲೆಕೆರೆ, ವೀರಭದ್ರ, ಚಿಂತಾಮಣಿ ಕೊಡ್ಲೆಕೆರೆ, ಕುಂ. ವೀರಭದ್ರಪ್ಪ, ಕೆ. ವಿ. ತಿರುಮಲೇಶ, ಪಿ. ಲಂಕೇಶ, ಪೂರ್ಣಚಂದ್ರ ತೇಜಸ್ವಿ, ಶ್ರೀಧರ ಬಳಗಾರ, ಪ್ರಹ್ಲಾದ ಅಗಸನಕಟ್ಟೆ, ಬೋಳುವಾರ ಮೊಹಮ್ಮದ್ ಕುಂಞ, ಕಾ. ತ. ಚಿಕ್ಕಣ್ಣ, ಮೊಗಳ್ಳಿ ಗಣೇಶ, ಮಾಧವ ಕುಲಕರ್ಣಿ ಈ ಕತೆಗಾರರು ಒಂದೊಂದು ಕಥಾಸಂಕಲನವನ್ನು ಹೊರತಂದು 'ಸಣ್ಣಕತೆ'ಯ ಕಣಜಕ್ಕೆ ಹೊಸ ಸುಗ್ಗಿಯ ಸಂಭ್ರಮ ನೀಡಿದ್ದಾರೆ. ಹಳಬರಾದರೂ ಚದುರಂಗರು ಪ್ರಕಟಿಸಿದ ಸಂಕಲನಗಳು ಎರಡು: 'ಕ್ವಾಟೆ' (೧೯೯೨) ಹಾಗೂ 'ಮೃಗಯಾ' (೧೯೯೪).

ತೇಜಸ್ವಿಯವರ 'ಕಿರಗೂರಿನ ಗಯ್ಯಾಳಿಗಳು' (೧೯೯೧) ನಾಲ್ಕು ಹೊಸ ಬಗೆಯ ಕತೆಗಳ ಒಂದು ಸಂಕಲನ. ಹಳ್ಳಿಯ ಹೆಂಗಸರು ತಮ್ಮ ಗಂಡಸ್ತನವನ್ನು ಸಾಬೀತು ಮಾಡುವ 'ಕಿರಗೂರಿನ ಗಯ್ಯಾಳಿಗಳು' ಸಾಂಕೇತಿಕತೆಯನ್ನು ಮೆರೆಯುವ ಕತೆ. 'ಕೃಷ್ಣೇಗೌಡನ ಆನೆ' ಕೂಡ, ವಿಡಂಬನೆಯ ಧಾಟಿಯಲ್ಲಿ ಅನೇಕ ಅರ್ಥಗಳನ್ನು ಹೊಳೆಯಿಸುವ ಕತೆ. ಜೀವನದ ಸೂಕ್ಷ್ಮಾತಿಸೂಕ್ಷ್ಮ ಸಂವೇದನೆಯನ್ನು ಗಮನಕ್ಕೆ ತರುವ ತೇಜಸ್ವಿಯವರು, ಸತ್ಯವನ್ನು ಶೋಧಿಸುವ ಕ್ರಮದಲ್ಲಿ ಭಾಷೆಯನ್ನು ಸಮರ್ಥವಾಗಿ ಬಳಸುತ್ತಾರೆ. 'ಪರಿಸರದ ಕಥೆ' (೧೯೯೧) ತೇಜಸ್ವಿಯವರ ಇನ್ನೊಂದು ಕತೆಗಳ ಸಂಕಲನ. ಮನುಷ್ಯ - ಪ್ರಕೃತಿ - ಪರಿಸರದ ನಡುವಿನ ಸಂಬಂಧಗಳನ್ನು ಸ್ವಾನುಭವಗಳಿಂದ ಖಚಿತಪಡಿಸುವ ಘಟನೆಗಳು ಇಲ್ಲಿವೆ. ಆಕಸ್ಮಿಕತೆ, ಪ್ರಯೋಗಶೀಲತೆ, ಮಾನವೀಯ ಸ್ಪಂದನೆಗಳು ಇಲ್ಲಿ ತಾಳುವ ರೂಪಗಳು ಸಹಜವಿದ್ದಷ್ಟೇ ಅಪೂರ್ವವಾಗಿವೆ. ವಿಜ್ಞಾನ ಮತ್ತು ಕಲೆ ಎರಡೂ ದೃಷ್ಟಿಕೋನಗಳನ್ನು ಸುಂದರವಾಗಿ ಮೇಳವಿಸಿದಾಗ ಬದುಕು, ಬೌದ್ಧಿಕವಾಗಿ - ಭಾವನಾತ್ಮಕವಾಗಿ ಅರ್ಥಪೂರ್ಣವಾಗುವುದು. ಈ ಆಶಯವನ್ನು ಮತ್ತೆ ಮತ್ತೆ ಖಚಿತಪಡಿಸುವ ಕತೆಗಳು ಇಲ್ಲಿವೆ.

ಪಿ. ಲಂಕೇಶರ 'ಉಲ್ಲಂಘನೆ' (೧೯೯೫) ಅವರ ಕೊನೆಯ ಕಥಾಸಂಕಲನವಾಗಿದ್ದು, ವಸ್ತು-ದೃಷ್ಟಿಕೋನಗಳಲ್ಲಿ ಪ್ರಯೋಗಶೀಲತೆಯನ್ನವರು ಮುಂದುವರಿಸಿದ್ದಾರೆ. 'ಉಲ್ಲಂಘನೆ' ಕತೆಯಲ್ಲಿ ಮುಖಾಮುಖಿಯಾಗುವ ದಲಿತ ಹುಡುಗ ನಾಗ ಮತ್ತು ಜಮೀಂದಾರ್ ಕೃಷ್ಣಸ್ವಾಮಿ ಅಯ್ಯಂಗಾರ್, ಪರಸ್ಪರರನ್ನು

ಅರಿತುಕೊಳ್ಳುವ ಮೂಲಕ, ವರ್ಗ, ಜಾತಿ ಸಂಘರ್ಷದ ಅನಿವಾರ್ಯವನ್ನು ನಿರಾಕರಿಸುತ್ತಾರೆ. ಸಮಾನತೆ, ಸಹನಶೀಲತೆ ಒಟ್ಟೊಟ್ಟಿಗೆ ಹೋಗಬಲ್ಲ ಮಾನವೀಯಾಂತಃಕರಣದ ಗುಣ ಹಾಗೂ ಪರಸ್ಪರರ ಪ್ರತಿಕ್ರಿಯೆಯಾಗಿವೆ ಎನ್ನುವುದನ್ನು ಲಂಕೇಶರು ತೋರಿಸುವ ಬಗೆಯಲ್ಲಿ ಮಾಸ್ತಿಯವರ ಕಥನದ ಮಾದರಿ ಇದೆ.

ಪ್ರಗತಿಶೀಲ ಚಳುವಳಿಯ ಕತೆಗಾರರಲ್ಲಿ ಈ ದಶಕದವರೆಗೂ ಬದುಕಿ, ಬಾಳಿ ಬರೆದವರು ಒಬ್ಬರೇ– 'ಚದುರಂಗ' ಕಾವ್ಯನಾಮದ ಸುಬ್ರಹ್ಮಣ್ಯರಾಜೇ ಅರಸು ಅವರು. ಅವರ ಹದಿಮೂರು ಕತೆಗಳ 'ಕ್ವಾಟೆ' ಸಂಕಲನ, ನವ್ಯ ಹಾಗೂ ಬಂಡಾಯ ಚಳುವಳಿಯ ಕಲಾತ್ಮಕ ಗುಣಗಳನ್ನೊಳಗೊಂಡ ಕೆಲವು ಗಮನಾರ್ಹ ಕೃತಿಗಳಿಗೆ ನಿದರ್ಶನವಾಗಿದೆ. 'ಪರೀಕ್ಷಿತ', 'ಅಂಕ', 'ಚಿಟ್ಟೆ ಮತ್ತು ಕಿಟಕಿಯ ಗಾಜು'– ಕತೆಗಳು ಪ್ರತಿಮಾ ವಿಧಾನ(imagery)ವನ್ನು ಅನುಸರಿಸಿ ಬರೆಯಲಾದ ಸಂಕೀರ್ಣ ಭಾವ, ಸನ್ನಿವೇಶಗಳ ರಚನೆಯಾಗಿವೆ. 'ಕ್ವಾಟೆ' ಹುಣಸೂರು ಕಡೆಯ ಪ್ರಾದೇಶಿಕ ನುಡಿಗಟ್ಟಿನಲ್ಲಿ ರಚಿತವಾದ ಸಂವೇದನಶೀಲ ಕತೆ. ಪ್ರಾಯ ಮೀರಿದ ಅವಿವಾಹಿತ ಹಳ್ಳಿಯ ಕನ್ಯೆಯ ಪ್ರಜ್ಞೆಯಲ್ಲಿ ಅರಳುವ ಈ ಕತೆ, ಅವಳ ವಿವಾಹ ಬಾಹಿರ ಲೈಂಗಿಕ ಅನುಭವವು ಮಾನವೀಯ ಮಿಡಿತಕ್ಕೆ ಪಕ್ಕಾಗಿಸುವ ಮೂಲಕ ಸಹಾನುಭೂತಿಯಿಂದ ಗೆಲ್ಲುತ್ತದೆ. ಗರ್ಭದಲ್ಲಿಯ ಶಿಶುವನ್ನು ಸಂಪ್ರದಾಯಕ್ಕೆ ಹೆದರದೆ ಪುರಸ್ಕರಿಸುವ ಆಕೆ ಹೆಣ್ತನದ ಹಕ್ಕು-ಕರ್ತವ್ಯಗಳೆರಡನ್ನೂ ಸಾಧಿಸುತ್ತಾಳೆ. 'ದಬಕ್ ದಬಕ್ ಗುಲ್ಹೋರಿಯೋ' ಬದುಕಿನಿಂದ ದುಃಖ-ಕಷ್ಟಗಳನ್ನು ಪಡೆದ ಮೇಲೂ ಕಹಿ ಭಾವನೆ ತಾಳದೆ ಜೀವನಕ್ಕೆ ವಿಮುಖನೂ ಆಗದೆ, ವ್ಯತಿರಿಕ್ತವಾಗಿ ಜೀವಪರ ಆಸಕ್ತಿ ಬೆಳೆಸಿಕೊಳ್ಳುವವನ ಕತೆ. ಜೀವನವನ್ನು ಪ್ರಜ್ಞಾಪೂರ್ವಕ ಸ್ವೀಕರಿಸುವ ಅವನ ಕ್ರೀಡಾಮನೋಭಾವ. 'ಚದುರಂಗರು' ಪ್ರತಿಪಾದಿಸುವ ಒಟ್ಟು ಜೀವನದೃಷ್ಟಿಯ ಒಂದು ಮಾದರಿ.

ಜಯಂತ ಕಾಯ್ಕಿಣಿಯವರ 'ಅಮೃತಬಳ್ಳಿ ಮತ್ತು ಕಷಾಯ'; ಕೆ. ಸತ್ಯನಾರಾಯಣರ 'ಸನ್ನಿಧಾನ' (೧೯೯೬) ಮತ್ತು 'ವಿಕ್ಟೋರಿಯಾ ಮಗ ದೇವಲಿಂಗು' (೧೯೯೮) ಸಂಕಲನಗಳು ತಮ್ಮ ಪ್ರಯೋಗಶೀಲತೆಯಿಂದ ಓದಿಸಿಕೊಳ್ಳುವ ಕತೆಗಳಿಂದ ತುಂಬಿವೆ. ಕಾಯ್ಕಿಣಿಯವರು ಸಾಮಾನ್ಯ ಮನುಷ್ಯರ ಆಳದಲ್ಲಿ ಅಸಾಮಾನ್ಯವಾದ ಜೀವನ ಪ್ರೀತಿ; ತನ್ನದೇ ಆದ ನಂಬಿಕೆ, ಮೌಲ್ಯಗಳನ್ನು ಗಟ್ಟಿಯಾಗಿ ಹಿಡಿದು ಬದುಕುವ ಛಲಗಾರಿಕೆಯನ್ನು ಆತ್ಮೀಯವಾಗಿ ಚಿತ್ರಿಸುತ್ತಾರೆ. ಸತ್ಯನಾರಾಯಣರು ಮಧ್ಯಮವರ್ಗದ ವ್ಯಕ್ತಿಗಳ ಕೌಟುಂಬಿಕ, ಸಾಮಾಜಿಕ ಪ್ರಸ್ತುತತೆಯನ್ನು; ಕನಸು, ಹಂಬಲಗಳನ್ನು ಸಂಕೀರ್ಣ ಸ್ಥಿತಿ - ಸನ್ನಿವೇಶಗಳಲ್ಲಿಟ್ಟು ಪರೀಕ್ಷಿಸುತ್ತಾರೆ. ಜೀವನದ ಅರ್ಥಪೂರ್ಣತೆ ಎಲ್ಲಿದೆ ಎಂದು ಶೋಧಿಸುವ ಪಾತ್ರಗಳಿವು. ಮಂಡ್ಯ - ಮೈಸೂರು ಕಡೆಯ ನುಡಿಗಟ್ಟು ಸತ್ಯನಾರಾಯಣರ

ಕತೆಗಳಿಗೆ ಪ್ರಾದೇಶಿಕ ಸೊಗಡನ್ನು ಕೊಡುವುದಷ್ಟೇ ಅಲ್ಲ, ಆರಿಸಿಕೊಂಡ ಬದುಕಿನ ಕ್ರಮಗಳನ್ನು ಪಡಿನುಡಿಯುತ್ತದೆ. ರಾಜಕೀಯ, ಸಾಮಾಜಿಕ, ಸಾಂಸ್ಕೃತಿಕ ಆಯಾಮಗಳನ್ನು ಒಟ್ಟಿಗೇ ಅನ್ವಯಿಸಿ ತೀವ್ರ ಬದಲಾಗುತ್ತಿರುವ ಸ್ಥಿತಿ - ಗತಿಗಳಲ್ಲಿಯ ವ್ಯಕ್ತಿಯ ಅಸ್ತಿತ್ವವನ್ನು ಗೊತ್ತುಹಚ್ಚುವುದಕ್ಕೆ ಸತ್ಯನಾರಾಯಣರರು ತುಡಿಯುತ್ತಾರೆ. ಕತೆಗಾರನ (ನಿರೂಪಕನ) ಇರುವಿಕೆಯನ್ನು ಮತ್ತೆ ಮತ್ತೆ ಗಮನಿಸುವ ಅತಿರೇಕದಿಂದಾಗಿ ಕತೆಗಳ ಬಂಧ ಸಡಿಲಾಗಿ, ಲಲಿತ ಪ್ರಬಂಧದ ಆಭಾಸ ಹಲವು ಸಲ ಉಂಟಾಗುತ್ತದೆ. ಹಾಗೆ ನೋಡಿದರೆ, ಸತ್ಯನಾರಾಯಣರ ಪ್ರತಿಭೆಗೆ ಲಲಿತಪ್ರಬಂಧ ಬರವಣಿಗೆಯೇ ಸಮರ್ಥ ಎಂದೆನಿಸುವುದು. ಅವರ ಎರಡನೆಯ ಲಲಿತಪ್ರಬಂಧಗಳ ಸಂಕಲನ : 'ದಾಂಪತ್ಯಕ್ಕೊಂದು ಶೀಲ' (೧೯೯೫) ಈ ದಶಕದಲ್ಲಿ ಅಪರೂಪವಾಗಿರುವ ಸಾಹಿತ್ಯ ಪ್ರಕಾರಕ್ಕೆ ಅಪೂರ್ವವಾದ ಸೇರ್ಪಡೆ ಎಂದೆನ್ನಬಹುದು : ಕೈ ತುತ್ತು; ತಂದೆಗೊಂದು ಲೈಂಗಿಕ ಪತ್ರ; ಹೆಂಡತಿಯನ್ನು ಪ್ರೀತಿಸುವುದು: ದಾಂಪತ್ಯಕ್ಕೊಂದು ಶೀಲ —ಮೊದಲಾದ ಪ್ರಬಂಧಗಳು ಹರಟೆಯ ರೂಪದಲ್ಲಿ ಪ್ರಸ್ತುತಪಡಿಸುವ ನೆನಪುಗಳು, ವಾಸ್ತವದ ವಿಶ್ಲೇಷಣೆಗಳು ಆತ್ಮೀಯವಾಗಿವೆ: ಹಾರ್ದಿಕವಾಗಿವೆ. ಒತ್ತಡ, ಅವಸರಗಳಿಗೆ ಈಡಾದ ನಮ್ಮ — ಅದರಲ್ಲೂ ಸುಶಿಕ್ಷಿತ, ನಗರದ ಮಧ್ಯಮವರ್ಗದ ಕುಟುಂಬಗಳ ಸಾಂಸ್ಕೃತಿಕ ಜೀವನದಲ್ಲಿ ಕಳೆದು ಹೋಗುತ್ತಿರುವ ಭಾವನೆ, ಪರಿಭಾವನೆ, ನೈತಿಕ ಕಲ್ಪನೆಗಳನ್ನು ದಿಟ್ಟತನದಿಂದ ಕೆದಕಿ, ವ್ಯಾಖ್ಯಾನಿಸಿ, ನೈಜ ಮೌಲ್ಯಗಳತ್ತ ನಮ್ಮನ್ನು ತಿರುಗಿಸಿ ನೋಡುವಂತೆ ಮಾಡುತ್ತಾರೆ ಈ ಪ್ರಬಂಧಕಾರರು. 'ದಾಂಪತ್ಯಕ್ಕೊಂದು ಶೀಲ'ದ ತಿಳಿವಳಿಕೆ ಅಸಾಮಾನ್ಯವಾದುದು. ವೈಚಾರಿಕತೆಯ ಭಾರ: ಪಾರಿಭಾಷಿಕತೆಯ ಕಠಿಣ ಶಿಸ್ತುಗಳನ್ನು ಅರಗಿಸಿಕೊಂಡೂ ಸತ್ಯನಾರಾಯಣರು ಹೇಳಿಕೊಳ್ಳುವ ಸ್ವಾನುಭವದ ಪರಿಗಳು ಆತ್ಮೀಯತೆಯಿಂದ ಬುದ್ಧಿಗೂ ಹೃದಯಕ್ಕೂ ತಲುಪುತ್ತವೆ.

'ಒಂದು ತುಂಡು ಗೋಡೆ' (೨೦೦೦). ಬೋಳುವಾರು ಮೊಹಮ್ಮದ್ ಕುಂಞ ಯವರ ೫ ಕತೆಗಳ ಸಂಕಲನ. ಮುಸ್ಲಿಂ ಸಮಾಜದ ಒಡಲಾಳವನ್ನು ಬಯಲಿಗಿಡುವ ಬೋಳುವಾರರು, ಧರ್ಮ, ಸಂಪ್ರದಾಯಗಳ ಅಡಿಯಲ್ಲಿ ಮಾನವೀಯತೆ ಉಸಿರುಗಟ್ಟಿರುವುದನ್ನು ವಿಮರ್ಶಿಸುತ್ತಾರೆ. ಮುಸ್ಲಿಂ ಮಹಿಳೆ, ದುಡಿಯುವ ಯುವಕ, ಕಲಿಯುವ ಮಗು ಎದುರಿಸುವ ಸಮಸ್ಯೆಗಳ ಹಿಂದಿನ ಕೈವಾಡವನ್ನು ಧ್ವನಿಪೂರ್ಣವಾಗಿ ತೆರೆದಿಡುತ್ತಾರೆ. ರೊಟ್ಟಿ ಪಾತುಮ್ಮಳ ಚರಿತ್ರೆಯುಳ್ಳ 'ಒಂದು ತುಂಡು ಗೋಡೆ' ಕತೆಯು ಇಂದಿನ ಮುಸ್ಲಿಂರನ್ನು ಕಾಡುವ ಕೋಮುವಾದ, ನಿರುದ್ಯೋಗ, ಪುರುಷ ದಬ್ಬಾಳಿಕೆ, ರಾಜಕೀಯ ಗತ್ತುಗಾರಿಕೆಗಳ ಮುಖಗಳನ್ನು ಬಯಲಿಗಿಡುತ್ತದೆ. ಪಾತುಮ್ಮಳ ವ್ಯಕ್ತಿತ್ವವು ಈ ಎಲ್ಲ ಒತ್ತಡಗಳ ನಡುವೆಯೂ ನವೆಯದೆ, ಸೊರಗದೆ ತನ್ನ ಚಲನಶೀಲತೆಯಿಂದಾಗಿ ಬದುಕುತ್ತದೆ: ಉಳಿಯುತ್ತದೆ: ಬೆಳೆಯುತ್ತದೆ. ಬುಗುರಿ (೧೯೯೧) ಕಥಾಸಂಕಲನ ಕೊಟ್ಟಿರುವ ಮೊಗಳ್ಳಿ ಗಣೇಶ

ದಲಿತ ಬದುಕನ್ನು ಒಳನೋಟಗಳಿಂದ ತುಂಬಿದ ಹಾಗೂ ಸಾಮಾಜಿಕ ಅರಿವಿನಿಂದ ಚಿತ್ರಿಸುವ ಉತ್ತಮ ಕತೆಗಾರರು. ಇವರ ಭಾಷಾಭಿವ್ಯಕ್ತಿಯು ವಾಸ್ತವವನ್ನು ವ್ಯಂಜಕಗೊಳಿಸುವಷ್ಟು ಸೂಕ್ಷ್ಮವೂ ಸಹಜವೂ ಆಗಿದೆ. 'ಬುಗುರಿ' ಕತೆಯಲ್ಲಿಯ ಕಕ್ಕಸಗುಂಡಿಯ ಸುತ್ತ ಹಬ್ಬುವ ಕತೆ. ದಲಿತರ ಸಾಮಾಜಿಕ ಜೀವನದ ಸಂಕೀರ್ಣ ಸ್ಥಿತಿಯನ್ನು ಸಂಕೇತಗಳ ಮೂಲಕ ವಿವರಿಸುತ್ತದೆ. ಬಡತನ, ಶೋಷಣೆಗಳ ಕತೆಯೇ ಆಗಿದ್ದರೂ ದೃಷ್ಟಿವಿನ್ಯಾಸದ ವಿಶಿಷ್ಟತೆಯಿಂದಾಗಿ ಗಮನ ಸೆಳೆವ 'ಕಾಳ ಬೆಳದಿಂಗಳ ಸಿರಿ' (೧೯೯೯) ರಾಜಶೇಖರ ಹತಗುಂದಿಯವರ ಮೊದಲ ಕೃತಿ. ಅನಿಸಿಕೆ, ಅನುಭವಗಳಿಗೆ ಹತ್ತಿರವಾದ ಆಡುಮಾತಿನಲ್ಲಿ ರಾಜಶೇಖರರು ಬರೆಯುತ್ತ ವಸ್ತುವಿಗೆ ಪ್ರಾಮಾಣಿಕತೆಯ ಗುಣ ಕೊಡುತ್ತಾರೆ. 'ರೌದ್ರ' ಇವರ ಇನ್ನೊಂದು ಯಶಸ್ವೀ ಕತೆ. 'ಕ್ರಾಂತಿಗೆ ಒಂದು ಪತ್ರ'ವು ಕಲೆಗಾರಿಕೆಯಿಂದ ದೂರ ಉಳಿಯುವ; ಆದರೆ ವಿಶಿಷ್ಟವೆನ್ನಿಸುವ ಕಥಾವಸ್ತು.

## ಮಹಿಳೆಯರ ಕತೆಗಳು

ಲೇಖಕಿಯರ ಕಥಾಸಾಹಿತ್ಯವನ್ನು ಪ್ರತ್ಯೇಕವಾಗಿಯೇ ಗಮನಿಸುವ ಅಗತ್ಯ ಇನ್ನೂ ಇದೆ. ಪುರುಷರಿಗಿಂತ ಭಿನ್ನವಾದ ಅನುಭವ ಲೋಕವನ್ನು ಶೋಧಿಸುವ ಲೇಖಕಿಯರು, ಸಾಮಾಜಿಕವಾಗಿ ಎತ್ತುವ ದನಿ ಕೂಡ ಭಿನ್ನವಾಗಿ, ವಿಶಿಷ್ಟವಾಗಿ ಇರುವ ಸಾಧ್ಯತೆ ಇದೆ. ಪುರುಷ ಲೇಖಕರಿಗಿರುವ ಪರಂಪರೆಯ ಬೆನ್ನೆಲುಬು, ಪುರುಷ ಪ್ರಧಾನ ವೈಚಾರಿಕತೆಯ ತಳಹದಿ; ಕಲ್ಪನೆಯ ವ್ಯಾಪಕ ಸ್ವಾತಂತ್ರ್ಯ ಮತ್ತು ಅಭಿವ್ಯಕ್ತಿಯ ಮುಕ್ತ ಅವಕಾಶ ಅಥವಾ ಧೈರ್ಯ ಮಹಿಳೆಯರಿಗೆ ಇನ್ನೂ ಲಭಿಸಿಲ್ಲ. ಎಪ್ಪತ್ತೈದರ ಜಾಗತಿಕ ಮಹಿಳಾ ಜಾಗೃತಿ ವರ್ಷದ ನಂತರ, ಶಿಕ್ಷಣ, ನೌಕರಿ, ಸಂಶೋಧನೆ ಕ್ಷೇತ್ರಗಳಲ್ಲಿ ಮಹಿಳೆಗೆ ಅವಕಾಶಗಳು ಲಭ್ಯವಾಗುತ್ತಿದ್ದು, ಸಮಾನತೆಯ ಕಲ್ಪನೆಯೂ ಸಮಾಜದಲ್ಲಿ ಒಡಮೂಡುತ್ತಿದೆ. ಆದರೆ ಸ್ತ್ರೀ-ಪುರುಷರ ನಡುವಿನ ವೈಯಕ್ತಿಕ, ಕೌಟುಂಬಿಕ, ಔದ್ಯೋಗಿಕ ಸಂಬಂಧಗಳಲ್ಲಿ ವ್ಯಕ್ತವಾಗುವ ಮನೋಭಾವನೆ ಸಾಂಪ್ರದಾಯಿಕವಾಗಿಯೆ ಉಳಿದಿದೆ. ಮನೋವೃತ್ತಿಯಲ್ಲಿ ತಾತ್ವಿಕ ಪರಿವರ್ತನೆ ಆಗದ ಹೊರತು ವೈಚಾರಿಕ ಸಮಾನತೆ ಏರ್ಪಡುವುದು ಅನುಮಾನಾಸ್ಪದ. ಈ ಅನುಮಾನವೇ ಸ್ತ್ರೀವಾದ ಚಳವಳಿಗೆ ಒತ್ತು ಕೊಡುವ ಪ್ರೇರಣೆ. ೧೯೭೫ - ೧೯೯೫ ರ ಕಥಾಸಾಹಿತ್ಯದಲ್ಲಿ ಸ್ತ್ರೀವಾದ ಚಳುವಳಿಯ ಕಥಾನಕಗಳೇ ಹೆಚ್ಚಾಗಿವೆ. ೧೯೯೫ ರ ನಂತರದಲ್ಲಿ ಸ್ತ್ರೀ ಸಂವೇದನೆಯ ಜೊತೆಗೆ, ಸಾಮಾಜಿಕ ಸಂವೇದನೆಯೂ ಬೆರೆಯುತ್ತಿದೆ. ಈ ದಶಕದ ಕತೆಗಾರ್ತಿಯರಲ್ಲಿ ಅನೇಕರು ಹೊಸಬರು; ಮೊದಲ ಕಥಾ ಸಂಕಲನದ ಮೂಲಕ ಅವರು, ಹಿಂದಿನ ದಶಕಗಳ ಕತೆಗಾರ್ತಿಯರಿಗಿಂತ ಭಿನ್ನವಾದ ವಿಚಾರ, ಅನುಭವಗಳನ್ನು ಪ್ರತಿಪಾದಿಸುತ್ತಿರುವುದು ಎದ್ದು ಕಾಣುವ ಅಂಶ. ಕಲೆಗಾರಿಕೆಗಾಗಿ ಈ ಕತೆಗಾರ್ತಿಯರು

ತಡಕಾಡುತ್ತಿಲ್ಲ; ಅವರ ಕಥಾವಸ್ತುಗಳೇ ತಮ್ಮ ದಾಟಿ. ದನಿಯನ್ನು ಸಹಜಗತಿಯಲ್ಲಿ ನಿರ್ಮಿಸಿಕೊಳ್ಳುತ್ತಿವೆ.

'ಅಮ್ಮಚ್ಚಿಯೆಂಬ ನೆನಪು' (೨೦೦೦). ವೈದೇಹಿಯವರ ೨೧ ಕತೆಗಳ ಸಂಕಲನ. ಕುಟುಂಬ ಮತ್ತು ಸಂಸ್ಕೃತಿಯ ಲೋಕದಲ್ಲಿಯ ಹೆಣ್ಣಿನ ಬಹುರೂಪಗಳನ್ನು 'ವ್ಯಕ್ತಿಚಿತ್ರ' ಗಳಂತೆ ಬಿಡಿಸಿ ತೋರಿಸುವುದು ವೈದೇಹಿಯವರ ಕತೆಗಾರಿಕೆ. ಸಾಂಪ್ರದಾಯಿಕ ಸ್ತ್ರೀಯರ ಜೊತೆಗೆ, ಆಧುನಿಕ ಸ್ತ್ರೀಯರನ್ನು ಒಳಗೊಂಡ ವೈವಿಧ್ಯಮಯ ಸ್ತ್ರೀಲೋಕ ವೈದೇಹಿಯವರದು. ಗೃಹಿಣಿ. ವೃದ್ಧೆ. ವಿಧವೆ. ಯುವತಿಯರನ್ನು: ಕುಟುಂಬದ ಒಳಸಂಬಂಧಿಗಳನ್ನು ಕುರಿತ ಘಟನೆಗಳನ್ನು ಕತೆ ಮಾಡುವ ವೈದೇಹಿಯವರು ಸ್ತ್ರೀವಾದದ ಸೀಮಿತ ಚೌಕಟ್ಟಿಲ್ಲದೆ ಸಹಜ ಮಾನವೀಯ ಸ್ಪಂದನೆಗಳಿಂದ ಬರೆಯುವುದು ಗಮನಾರ್ಹ. ತುಳು ಸಂಸ್ಕೃತಿ. ನಗರ ಜೀವನದ ಸನ್ನಿವೇಶಗಳನ್ನು ಅಕೃತಕವಾಗಿ ಚಿತ್ರಿಸುತ್ತ ಜೀವನದ ಒಳಮಿಡಿತಗಳನ್ನು ದಾಖಲಿಸುತ್ತಾರೆ. ಹಾಸ್ಯ. ವಿಡಂಬನೆಯ ಶೈಲಿ ಇವರ ಮುಕ್ತ ನೋಟಕ್ಕೆ ಉದಾಹರಣೆಯಾಗುತ್ತದೆ.

ಶಾಂತಾದೇವಿ ಕಣವಿಯವರ 'ನೀಲಿಮಾ ತೀರ' (೧೯೯೨) ಹಾಗೂ 'ಗಾಂಧೀ ಟೊಪ್ಪಿಗೆ' (೧೯೯೭) ಸಂಕಲನಗಳು ಘಟನಾಪ್ರಧಾನ ಕತೆಯನ್ನು ಒಳಗೊಂಡಿವೆ. ಶಾಂತಾದೇವಿಯವರದು ವಿವೇಕಪ್ರಧಾನ ಕತೆಗಾರಿಕೆ. 'ಹಕ್ಕಿ ಮತ್ತು ಅವಳು' (೧೯೯೭) ಎಂಬ ಮೊದಲ ಸಂಕಲನದ ಮೂಲಕ ಕಥಾ ಪ್ರಪಂಚಕ್ಕೆ ಕಾಲಿಟ್ಟ ಮಿತ್ರಾ ವೆಂಕಟರಾಜ. ತುಳು ಮಾತಿನ ಕುಟುಂಬಗಳ ಕತೆಯನ್ನು ಆಳವಾದ ಸಂವೇದನೆಯಿಂದ ರಚಿಸಬಲ್ಲವರಾಗಿದ್ದಾರೆ. ಸಂಕೇತ ಪ್ರಧಾನ ನಿರೂಪಣೆಯಲ್ಲಿ ಹಲವಾರು ಆಶಯಗಳನ್ನು ಪ್ರಕಟಿಸುವಲ್ಲಿ ಇವರ ಕತೆಗಾರಿಕೆಗೆ ಪ್ರೌಢಿಮೆ ಲಭಿಸಿದೆ. ಎಚ್. ನಾಗವೇಣಿಯವರ 'ನಾಕನೇ ನೀರು' (೧೯೯೭) ಸಂಕಲನದ ಕತೆಗಳು ಆಶಾದಾಯಕವಾಗಿವೆ. 'ಪ್ರೀತಿ ಮತ್ತು ಸಾವು' (೧೯೯೫) ಸಂಕಲನದ ಎಂ. ಎಸ್. ವೇದಾ: 'ಹನ್ನೊಂದು ಕತೆಗಳು' (೧೯೯೩) ಪ್ರಕಟಿಸಿದ ಕಮಲಾ ಹೆಮ್ಮಿಗೆ; 'ಕಡಲ ಹಾದಿ' (೧೯೯೫)ಯ ಉಮಾ ರಾವ: 'ಸೂರ್ಯ ಮುಳುಗುವುದಿಲ್ಲ' (೧೯೯೮) ಕತೆಗಳ ಮಾಲತಿ ಪಟ್ಟಣಶೆಟ್ಟಿ: 'ಮತ್ತೆ ಬರೆದ ಕತೆಗಳು' (೧೯೯೨) ಹಾಗೂ 'ಒಂದು ಶ್ಯಾಮಲ ಸಂಜೆ' (೨೦೦೦) ಸಂಕಲನಗಳ ನೇಮಿಚಂದ್ರ ಕನ್ನಡ ಕಥಾ ಪ್ರಪಂಚಕ್ಕೆ ವಿಭಿನ್ನ ಅನುಭವಗಳ; ಸ್ವತಂತ್ರ ದೃಷ್ಟಿಕೋನದ: ಹೆಣ್ಣಿನ ಮಾನವೀಯ ವ್ಯಕ್ತಿತ್ವ ಪ್ರತಿಪಾದಿಸುವ ಕತೆಗಳನ್ನು ಕೊಟ್ಟಿದ್ದಾರೆ. ಬಾನು ಮುಷ್ತಾಕ್‌ರ 'ಹೆಜ್ಜೆ ಮೂಡಿದ ಹಾದಿ' (೧೯೯೦) ಹಾಗೂ 'ಬೆಂಕಿಯ ಮಳೆ' (೧೯೯೯)– ಮುಸ್ಲಿಂ ಮಹಿಳೆಯ ಕೌಟುಂಬಿಕ. ಸಾಮಾಜಿಕ ವ್ಯಕ್ತಿತ್ವವನ್ನು ಶೋಧಿಸುವ ಕಥಾಸಂಕಲನಗಳಾಗಿವೆ.

'ಗೌರ್ಮೆಂಟ್ ಬ್ರಾಹ್ಮಣ' (೧೯೯೨) ಮತ್ತು 'ಊರು ಕೇರಿ' (೧೯೯೬) ದಲಿತ ಲೇಖಕರ ಆತ್ಮವೃತ್ತಾಂತಗಳಾಗಿದ್ದು, ಮೊದಲ ಸಲ ಕನ್ನಡದಲ್ಲಿ, ಕಲಿತ ದಲಿತನ ನೈಜ ಕತೆಗಳನ್ನು ಹೇಳುತ್ತಿವೆ. ಅರವಿಂದ ಮಾಲಗತ್ತಿಯವರು ಸ್ವಂತ ಪ್ರತಿಭೆ, ಪ್ರಜ್ಞಾಪೂರ್ವಕ ಪ್ರಯತ್ನಗಳಿಂದ ಜೀವನದಲ್ಲಿ ಮೇಲ್ವರ್ಗಕ್ಕೆ ಬಂದಿದ್ದರೂ ಬಾಲ್ಯ ಹಾಗೂ ತಾರುಣ್ಯದಲ್ಲಿ ಜಾತಿ ವ್ಯವಸ್ಥೆಯಿಂದಾಗಿ ಪಟ್ಟ ಮಾನಸಿಕ ಯಾತನೆಗಳನ್ನು ನೋವಿನಿಂದ ದಾಖಲಿಸಿದ್ದಾರೆ. ವಿದ್ಯೆ, ಪ್ರೀತಿ, ಉದ್ಯೋಗಗಳನ್ನು ದೊರಕಿಸಿಕೊಳ್ಳುವಲ್ಲಿ ಒಬ್ಬ ದಲಿತ ಎದುರಿಸುವ ಅಪಮಾನಗಳು, ವಂಚನೆಗಳು, ದ್ರೋಹಕಾರಿ ವಿಪತ್ತುಗಳನ್ನು ಉದಾಹರಿಸುತ್ತಾರೆ. ಸಿದ್ಧಲಿಂಗಯ್ಯನವರ 'ಊರು – ಕೇರಿ' ಆತ್ಮವೃತ್ತಾಂತವೆನ್ನಿಸುವುದಿಲ್ಲ; ದಲಿತನೊಬ್ಬನು ಸಮಾಜದೊಂದಿಗೆ ಪ್ರಾಕೃತಿಕವಾಗಿ ಗುರುತಿಸಿಕೊಳ್ಳಲು ಹೊರಟಾಗ ಉಂಟಾಗುವ ಅಸಂಬದ್ಧತೆಗಳ, ವಿಕೃತಿಗಳ ವಿಡಂಬನೆ ಎನಿಸುತ್ತದೆ. ವಿನೋದಪೂರ್ಣ ಶೈಲಿಯಿಂದಾಗಿ ಈ ದಲಿತಕತೆ, ಭಾರತೀಯ ಸಮಾಜದ ಜಾತಿ, ವರ್ಗ ಪದ್ಧತಿಯನ್ನು ಅಣಕಿಸುವ ಪ್ರಬಂಧವಾಗುತ್ತದೆ. ಇಬ್ಬರೂ ಲೇಖಕರ ಆತ್ಮಾಭಿಮಾನ, ಆತ್ಮಗೌರವಗಳು ಅವರ ಕತೆಗೆ ಘನತೆ ತುಂಬಿವೆ.

## ಪ್ರತಿಬಿಂಬ ೪ : ನಾಟಕ

ನಾಟಕ, ರಂಗಮಾಧ್ಯಮವಾಗಿ ಬೆಳೆಯುತ್ತಿಲ್ಲ. ಸಾಹಿತ್ಯ ರೂಪದಲ್ಲೂ ಇದರ ಫಲ ಕಡಿಮೆ. ಬದುಕಿನಲ್ಲಿ ತಾರ-ತಮ್ಯ, ತಳಮಳಗಳು ಬೇಡವೆನ್ನಿಸುವಷ್ಟು ಅಸಂಖ್ಯವಾಗಿರುವಾಗ, ನಾಟಕ ರೂಪದಲ್ಲಿ ಅವು ಸಾಹಿತ್ಯವಾಗುವ ಅವಕಾಶ ಬೇಕಾದಷ್ಟಿದೆ. ಬದುಕಿಗೆ ಮುಖಾಮುಖಿಯಾಗಿ ನಿಲ್ಲುವ; ಸಂವೇದನೆಯನ್ನು ತೀವ್ರವಾಗಿ ಪ್ರಕಟಪಡಿಸುವ ಪ್ರತಿಭಾವಂತರದೇ ಕೊರತೆ ಕಾಣುತ್ತಿದೆ. ಸತ್ವಪೂರ್ಣ ಕೃತಿಗಳನ್ನು ಕೊಡುತ್ತ ಬಂದ ಚಂದ್ರಶೇಖರ ಕಂಬಾರ ಮತ್ತು ಗಿರೀಶ ಕಾರ್ನಾಡರು ಮಾತ್ರ ಈ ದಶಕದ ಪ್ರಮುಖ ನಾಟಕಕಾರರಾಗಿ ಮುಂದುವರಿದಿದ್ದಾರೆ. ಬಿಜ್ಜಳ - ಬಸವಣ್ಣನವರ ವ್ಯಕ್ತಿತ್ವಗಳನ್ನು ಕಟ್ಟಿಕೊಡುವ 'ತಲೆದಂಡ' (೧೯೯೦)ದ ನಂತರ, ಕಾರ್ನಾಡರು 'ಅಗ್ನಿ ಮತ್ತು ಮಳೆ' (೧೯೯೪) ಹಾಗೂ 'ಟಿಪ್ಪು ಸುಲ್ತಾನ್ ಕಂಡ ಕನಸು' (೨೦೦೦) ನಾಟಕಗಳನ್ನು ಕೊಟ್ಟಿದ್ದಾರೆ.

ಎಂದಿನಂತೆ ಕಾರ್ನಾಡರು 'ಅಗ್ನಿ ಮತ್ತು ಮಳೆ' ನಾಟಕದ ಸಮಕಾಲೀನ ಆಶಯಕ್ಕಾಗಿ ಪುರಾಣದ ಘಟನೆಗಳನ್ನು ಕತೆಯಾಗಿಸಿಕೊಂಡಿದ್ದಾರೆ. ಮಹಾಭಾರತದ 'ವನಪರ್ವ' ದಲ್ಲಿಯ ಯವಕ್ರೀತನ ಕುರಿತ ಉಪಾಖ್ಯಾನ ಈ ನಾಟಕಕ್ಕೆ ವಸ್ತು. ರೈಭ್ಯ ಋಷಿಯ ಮಕ್ಕಳು ಪರಾವಸು ಮತ್ತು ಅರವಸು ತಂದೆಯ ಹಾಗೆ ವಿದ್ಯೆಯ ಗರ್ವವನ್ನು ತಲೆಗೇರಿಸಿಕೊಂಡ ರಾಜಸ ಪ್ರವೃತ್ತಿಯವರು. ರೈಭ್ಯನ ಗೆಳೆಯ ಋಷಿ ಭರದ್ವಾಜರು ಜ್ಞಾನಿ. ಭರದ್ವಾಜರ ಮಗ ಯವಕ್ರೀತನು ವೇದಾಧ್ಯಯನದ ಶ್ರಮವಿಲ್ಲದೆ ಇಂದ್ರನನ್ನು ತಪಸ್ಸಿನಿಂದ ಒಲಿಸಿ, ಬ್ರಹ್ಮಜ್ಞಾನ ಪಡೆದವನು.

ಯವಕ್ರೀತನು ತಪಸ್ಸು ಮುಗಿಸಿ ಹಿಂದಿರುಗಿದಾಗ. ಅವನ ಪ್ರಿಯತಮೆಯು ಪರಾವಸುವನ್ನು ವಿವಾಹ ಮಾಡಿಕೊಂಡು ಗೃಹಿಣಿಯಾಗಿದ್ದಾಳೆ. ಈ ವಿವಾಹಿತೆಯನ್ನು ಮೋಹಿಸುವ ಯವಕ್ರೀತ. ರೈಭ್ಯನ ದುರಾಗ್ರಹಕ್ಕೆ ಒಳಗಾಗಿ ಬ್ರಹ್ಮರಾಕ್ಷಸನಿಂದ ಹತನಾಗುತ್ತಾನೆ. ಅತ್ತ. ಏಳು ವರ್ಷಗಳ ಕಾಲದ ಪರ್ಜನ್ಯ ಯಜ್ಞದಲ್ಲಿ ಮಗ್ನನಾಗಿದ್ದ ಪರಾವಸು, ಯಜ್ಞಕಾರ್ಯಕ್ಕೆ ಭಂಗ ತರುವಂತೆ. ಅಲ್ಲಿಂದ ಕದ್ದು ಆಶ್ರಮಕ್ಕೆ ಬರುತ್ತಾನೆ. ತನ್ನ ಹೆಂಡತಿಯನ್ನು ಬಲಾತ್ಕರಿಸಿದ ಯವಕ್ರೀತನ ಮೇಲೆ ಸೇಡು ತೀರಿಸಿಕೊಳ್ಳುತ್ತಾನೆ. ಪರಾವಸು ಎಸಗಿದ ಅಕೃತ್ಯದ ಅಪವಾದ ಅರವಸುವಿನ ಮೇಲೆ ಬಂದು. ಆತ ಅತಂತ್ರನಾಗುತ್ತಾನೆ. ಅರವಸು. ಬ್ರಾಹ್ಮಣ್ಯ ತೊರೆದು ಪ್ರಕೃತಿ ಸಹಜ ಶೂದ್ರ ಬದುಕನ್ನು ಸ್ವೀಕರಿಸಿ ನಿತ್ತಿಲೆ ಎಂಬ ಬೇಡರ ಹುಡುಗಿಯನ್ನು ಪ್ರೀತಿಸಿ. ಅವಳನ್ನು ಮದುವೆಯಾಗಬೇಕೆಂದಾಗ. ಬೇಡರ ಕುಲದ ಯಜಮಾನ ವಿಧಿಸಿದ್ದ ನೇಮ(ನಿರ್ಬಂಧ)ವನ್ನು ಸಮಯಮಿತಿಯಲ್ಲಿ ನಿರ್ವಹಿಸಲಾಗದೆ ನಿತ್ತಿಲೆಯಿಂದ ವಂಚಿತನಾಗುತ್ತಾನೆ. ನಿತ್ತಿಲೆ. ಅರವಸುವಿಗಾಗಿ ಶಾಪಗ್ರಸ್ತಳಾಗಿ ಸಾಯುವಂತಾಗುವುದು ದುರ್ದೈವದ ಫಲವೋ. ಮನುಷ್ಯತ್ವದ ದೌರ್ಬಲ್ಯವೋ ಅಥವಾ ಜಾತಿ. ವರ್ಣ ವ್ಯವಸ್ಥೆಯಲ್ಲಿದ್ದ ಅಮಾನುಷ ಒಳಸಂಚೋ ಎಂಬುದು ನಾಟಕದಲ್ಲಿ ಸ್ಪಷ್ಟವಿಲ್ಲ; ಆದರೆ ಅರವಸು - ನಿತ್ತಿಲೆಯರ ಪ್ರಕೃತಿ ಸಹಜ. ಮುಗ್ಧ-ಸ್ನಿಗ್ಧ ಸಂಬಂಧವು ವಿಷಮಗೊಳ್ಳಲು ದೈವದ ತರ್ಕಾತೀತ ಪ್ರಾಬಲ್ಯ; ಹಾಗೂ ಬುದ್ಧಿವಂತ ಮನುಷ್ಯರ ಜಾತಿ ನಿಯಮಾವಳಿಗಳೆರಡೂ ಕಾರಣವಾಗುತ್ತವೆ. ಪರಾವಸು ಯಜ್ಞ ಕಾರ್ಯದಲ್ಲಿ ಎಸಗಿದ ಅಕ್ರಮ. ಅಶುದ್ಧಿ ಲೆಕ್ಕಕ್ಕೆ ಸಿಗುವುದಿಲ್ಲ. ಅರವಸು ಮಾತ್ರ ನಿತ್ತಿಲೆಯ ಪ್ರೇಮಕ್ಕಾಗಿ ಹಾಗೂ ನಿತ್ತಿಲೆ ಅರವಸುವಿನ ಅಸ್ತಿತ್ವಕ್ಕಾಗಿ ಕೊನೆಗೆ ಅರವಸು ನೀರಡಿಸಿದ ನೆಲದ ದಾಹ ತಣಿಸುವುದಕ್ಕಾಗಿ ಬಲಿದಾನಗೊಳ್ಳುವುದು ನಾಟ್ಯಮಯವಾಗಿ ದೃಶ್ಯೀಕರಣಗೊಂಡಿದೆ.

'ಅಗ್ನಿ ಮತ್ತು ಮಳೆ'ಯ ರೂಪಕವನ್ನು ಸಾರ್ಥಕವಾಗಿ ದೃಶ್ಯೀಕರಿಸಲು ಕಾರ್ನಾಡರು ನಾಟಕದಲ್ಲೊಂದು ನಾಟಕ ಕಲ್ಪಿಸಿದ್ದು. ವಸ್ತುವಿಗೆ ಅದ್ಭುತ ಅಭಿವ್ಯಕ್ತಿ ಸಾಮರ್ಥ್ಯ ಕೊಟ್ಟಂತಾಗಿದೆ. ಚರಿತ್ರೆಯಲ್ಲಿ ಶೂದ್ರರಿಗೆ. ದಲಿತರಿಗೆ ದುಡಿದು ಸಣ್ಣಾಗುವಂತೆ. ಸೋತು ಸಾಯುವಂತೆ ಮಾಡಿದ ದೈವ ನಿಯಮ; ಆ ದೈವ ನಿಯಮವನ್ನು ತರ್ಕಬದ್ಧವಾಗಿ ಕ್ರಮಕ್ಕೆ ತಂದ ವೈದಿಕ ಆಚರಣೆಯ ಹಿಂದಿನ ಸ್ವಾರ್ಥ. ಸಂಕುಚಿತತೆಗಳನ್ನು ಕಾರ್ನಾಡರು ಧ್ವನಿಪೂರ್ಣವಾಗಿ ತೋರಿಸುತ್ತಾರೆ. ಬಲಿಷ್ಠರ ಜ್ಞಾನ. ಯಜ್ಞಕರ್ಮಗಳಿಂದ ಬಾರದ ಮಳೆಯು ಪ್ರೀತಿ. ಸಹಜತೆಗಳಿಗೆ ಒಲಿದು ಬರುವ ರೀತಿ ನಾಟಕಕಾರನ ಮಾನವೀಯ ದೃಷ್ಟಿಯ ಫಲಿತಾಂಶವಾಗಿದೆ. ವನಪರ್ವದ ಕತೆಯಲ್ಲಿಯ ಘಟನೆಗಳನ್ನು ತಮ್ಮ ಆಶಯಗಳಿಗೆ ತಕ್ಕಂತೆ ಕಾರ್ನಾಡರು ಬದಲಿಸಿದ್ದಾರೆ: ಬೆಳೆಸಿದ್ದಾರೆ. ಪೌರಾಣಿಕ ಪ್ರತಿಮೆಗಳು ಸೂಸುವ ಅರ್ಥ ಲೋಕೋತ್ತರ ಸತ್ಯವನ್ನು ಪಡಿನುಡಿಯುತ್ತದೆ. ಕಾರ್ನಾಡರ ನಾಟ್ಯಪ್ರಜ್ಞೆಯು ಅಗಾಧವಾಗಿ ಅಭಿವ್ಯಕ್ತಗೊಂಡಿದೆ.

ಗಿರೀಶ ಕಾರ್ನಾಡರ 'ಟಿಪ್ಪು ಸುಲ್ತಾನ್ ಕಂಡ ಕನಸು'. ಟಿಪ್ಪುವಿನ ಚರಿತ್ರೆಯನ್ನು ಇಂಗ್ಲೀಷ ಇತಿಹಾಸಕಾರರ ಕಣ್ಣಿಗೆ ಹೊರತುಪಡಿಸಿದಂತೆ ನೋಡುವ ಒಂದು ಪ್ರಾಮಾಣಿಕ ಪ್ರಯತ್ನದ ಕೃತಿಯಾಗಿದೆ. ಬ್ರಿಟೀಶರನ್ನು ಸದೆಬಡಿಯಲು ಟಿಪ್ಪು ತೋಳ್ಬಲವನ್ನು, ಯುದ್ಧ ತಂತ್ರಗಳನ್ನೇನೋ ಬಳಸಿದ. ಪ್ರತಿಯಾಗಿ ಬ್ರಿಟೀಶರು ಭಾರತೀಯ ಸಂಸ್ಥಾನಿಕರ ನಡುವೆ ಭಾವನಾತ್ಮಕ ಒಡಕು ಉಂಟಾಗುವಂತೆ ಕುತಂತ್ರಗಳನ್ನು ಏರ್ಪಡಿಸಿದರು. ಟಿಪ್ಪುವಿನದು, ಜಾತ್ಯತೀತ ರಾಜನೀತಿಯಾಗಿತ್ತು: ಭಾರತೀಯತೆಯ ಅಂತಃಸತ್ವವನ್ನು ಸಂಸ್ಥಾನಿಕರ ಅರಿವಿಗೆ ತಂದು, ಭಾರತೀಯರೆಲ್ಲ ಒಗ್ಗೂಡಿ ಬ್ರಿಟೀಶ ಸತ್ತೆಯನ್ನು ನಾಶಪಡಿಸುವುದಾಗಿತ್ತು. ಆದರೆ ಭಾರತೀಯ ಸಂಸ್ಥಾನಿಕರ ಸ್ವಾರ್ಥಲಾಲಸೆ, ಹೇಡಿತನ, ಸಂಕುಚಿತತೆ ಟಿಪ್ಪುವಿನ ರಾಜಕೀಯ ಮಹತ್ವಾಕಾಂಕ್ಷೆಯನ್ನು ಕುಗ್ಗಿಸಿದವಷ್ಟೇ ಅಲ್ಲ, ಆತ ತನ್ನ ಬಹುದೂರದ ಸೈನ್ಯ ಕಾರ್ಯಾಚರಣೆಗಾಗಿ ಬ್ರಿಟೀಶರ ಜತೆ ತಾತ್ಕಾಲಿಕವಾಗಿ ಒಪ್ಪಂದ ಮಾಡಿಕೊಂಡೇ ಬದುಕುವಂತಾಯಿತು. ಮೀರ್‌ಸಾದಿಕ್‌ನಂಥ ಆಂತರಿಕ ದ್ರೋಹಿಯಿಂದಾಗಿ ಟಿಪ್ಪು ಯುದ್ಧದಲ್ಲಿ ಸಾವನ್ನಪ್ಪಿದ. ಕಾರ್ನಾಡರು ಟಿಪ್ಪುವಿನ ಬಗೆಗೆ ದಾಖಲಾದ ಅಪಕಲ್ಪನೆಗಳನ್ನು ನಿವಾರಿಸಿ, ಅವನ ವಿಶಾಲ, ಬಹುದೂರದ ಮಹತ್ವಾಕಾಂಕ್ಷೀ ರಾಜನೀತಿಯ ಪ್ರಾಮಾಣಿಕ ಅಂಶಗಳನ್ನು ನಾಟಕೀಕರಿಸುತ್ತಾರೆ.

ಚಂದ್ರಶೇಖರ ಕಂಬಾರರ 'ಮಹಾಮಾಯಿ' (೧೯೯೯) ಈ ದಶಕದ ಇನ್ನೊಂದು ಮಹತ್ವಪೂರ್ಣ ನಾಟ್ಯರಚನೆ. ಕಾರ್ನಾಡರು ಮಾರ್ಗಶೈಲಿಯ ಕತೆ, ವಸ್ತು, ಘಟನೆಗಳನ್ನು ತಮ್ಮ ಸಮಕಾಲೀನ ಸಂವೇದನೆಯ ಬೇರುಗಳನ್ನಾಗಿ ಬಳಸಿಕೊಂಡರೆ, ಕಂಬಾರರು ದೇಸೀ ಪರಂಪರೆಯ ಕತೆ, ಪಾತ್ರ, ನಂಬಿಕೆಗಳನ್ನು ಬಳಸಿಕೊಳ್ಳುತ್ತಾರೆ. ಇವರಿಬ್ಬರೂ ಕಟ್ಟಿಕೊಡುವ ಸಾಂಸ್ಕೃತಿಕ ರೂಪಕಗಳು ಈ ಕಾಲದ ಬೌದ್ಧಿಕ ಸಂವೇದನೆಯನ್ನು ವಿಶಿಷ್ಟವಾಗಿ ಪ್ರತಿನಿಧಿಸುತ್ತವೆ. 'ಮಹಾಮಾಯಿ' ಜಾನಪದ ಪುರಾಣದ ಕತೆಯ ಮೂಲಕ ತಿಳಿಸುವ ವಿಚಾರ ಹೀಗಿದೆ: ಮನುಷ್ಯನ ಸ್ವಾತಂತ್ರ್ಯ ಎಲ್ಲಿದೆ? ಅವನ್ನು ಹುಟ್ಟಿಸಿದ, ಪೋಷಿಸಿದ ಶಕ್ತಿಯಿಂದ ಬಿಡುಗಡೆಗೊಂಡು, ತನ್ನ ಜೀವಿತದಲ್ಲಿ ತಾನು ಮೆಚ್ಚಿಕೊಂಡ, ತನಗೆ ಬದುಕಿನ ಬೆಲೆಯನ್ನು ಅರಿಯಲು ಪ್ರೇರಿಸಿದ ಪ್ರಕೃತಿ ಶಕ್ತಿಯನ್ನು ನೆಚ್ಚಿ ಬದುಕುವುದರಲ್ಲಿದೆಯೋ? ಮನುಷ್ಯನು ಸೃಷ್ಟಿಯ ಅಧೀನನೋ ಅಥವಾ ಸೃಷ್ಟಿಯನ್ನು ಪ್ರೀತಿಸಿ ತನ್ನಂತೆ ಮಾಡಿಕೊಳ್ಳುವ ಸ್ವತಂತ್ರ ಶಕ್ತಿಯೋ ಎಂಬ ಜಿಜ್ಞಾಸೆ ನಾಟಕದ ವಸ್ತು.

ಶೆಟವಿ ತಾಯಿ ಜಾನಪದ ನಂಬಿಕೆಯ ಪ್ರಕಾರ ಸೃಷ್ಟಿ ಶಕ್ತಿಯ ಮೂಲ. ಮನುಷ್ಯನ ಹಣೆ ಬರಹ ಬರೆಯುವ ಈಕೆ, ಮನುಷ್ಯನ ಭಾವ-ಬುದ್ಧಿ; ಒಲವು-ನಿಲುವು, ಆಯುಷ್ಯದುದ್ದಕ್ಕೂ ತನ್ನ ಕಣ್ಣರಿಕೆಯಲ್ಲೇ ಅಂದರೆ ತನ್ನ ಸ್ವಾಧೀನದಲ್ಲೇ

ಇರಬೇಕು. ಎನ್ನುವವಳು. ಮನುಷ್ಯನಿಗೆ ಸೃಷ್ಟಿಸುವ; ನಿರ್ಮಿಸುವ, ತನ್ನ ಬದುಕನ್ನು ತನ್ನ ಪ್ರೀತಿ. ಕಲ್ಪನೆಗೆ ತಕ್ಕಂತೆ ರೂಪಿಸುವ. ಬೆಳೆಸುವ ಸ್ವಾತಂತ್ರ್ಯ ಇರಬೇಕಾಗಿಲ್ಲ ಎನ್ನುವವಳು. ತನ್ನ ಪ್ರೀತಿಯ ಮಗ. ತನ್ನ ಪ್ರೀತಿ ಹಾಗೂ ತನ್ನ ಶಕ್ತಿಯ ಮಿತಿಯಲ್ಲೇ ಬದುಕಿ ಬೆಳೆಯಬೇಕೆನ್ನುವವಳು.

ಶಿಟವಿಯ ಸಾಕುಮಗ ಸಂಜೀವಶಿವ. ಮಹಾಮಾಯಿಯ ಆಣತಿಯಂತೆ. ವೈದ್ಯವಿದ್ಯೆಯಲ್ಲಿ ಪಾರಂಗತನಾದ ಈ ಮಗ. ತಾರುಣ್ಯದಲ್ಲಿ ಇರುವಂತಿಗೆ ಎಂಬ ರಾಜಕುವರಿಯ ಪ್ರೀತಿಯ ಬಲೆಯಲ್ಲಿ ಸಿಲುಕುವನು. ಇರುವಂತಿಗೆಯ ಅಕಾಲಿಕ ಮರಣವನ್ನು ತಪ್ಪಿಸಲು ವೈದ್ಯಕೀಯ ಉಪಾಯ ಮಾಡುವನು. ಶಿಟವಿಯು ಮಗನ ಈ ಪ್ರಕೃತಿಸಹಜಪ್ರೇಮ ಮತ್ತು ಸ್ವಾತಂತ್ರ್ಯಕ್ಕೆ ಅಡ್ಡಿ ಬರುತ್ತಾಳೆ. ತಾಯಿ ಮತ್ತು ಪ್ರೇಯಸಿಯ ನಡುವೆ ಸಂಜೀವಶಿವ ತೊಳಲಾಡುತ್ತಾನೆ. ವಿಧಿ ಮತ್ತು ಮನುಷ್ಯಪ್ರಯತ್ನದ ನಡುವಿನ ಸಂಘರ್ಷಕ್ಕಿದು ಜ್ವಲಂತ ಸಂಕೇತವಾಗಿದೆ. ಶಿಟವಿಯು ಆದಿಶಕ್ತಿ, ಪರಾಶಕ್ತಿ ಅಂದರೆ ಮಹಾಮಾಯಿಯಾಗಿ ಪಡೆಯುವ ಪ್ರಾಬಲ್ಯದ ಎದುರು ಮನುಷ್ಯ ಮಾತ್ರನಾದ ಸಂಜೀವ ಶಿವ ತಲೆಬಾಗುವುದು; ಸಾವಿಗೆ ಒಳಗಾಗುವುದು– ಜನನ-ಮರಣಗಳ ನಡುವಿನ ವೈರುಧ್ಯದ ಅಂತಿಮ ನಿರ್ಣಾಯವೆನಿಸುತ್ತದೆ. ಮನುಷ್ಯನ ಸ್ವಾತಂತ್ರ್ಯದ ಹಂಬಲ; ಪ್ರೀತಿಸುವ ಕಾತರ, ಸ್ವಾತಂತ್ರ್ಯ; ಸೃಜನಶೀಲತೆಯ ಹಂಬಲ. ಸಂಜಯು ಶಿವನಲ್ಲಿ ಕೊನೆಯ ತನಕ ಉಳಿಯುತ್ತದೆ. ಪುರಾಣದ 'ಮಹಾಮಾಯಿ'ಯನ್ನು ಗೆದ್ದು ಹೊರಬರುವ ಶಕ್ತಿ ಆಧುನಿಕತೆಯ ಪ್ರತೀಕವಾದ ಸಂಜೀವಶಿವನಿಗೆ ಇಲ್ಲದಿರುವುದು. ನಾಟಕಕಾರರ ಸೀಮಿತ ಕಲ್ಪನೆಯ ಮಿತಿ. ವಿಚಾರಕ್ಕೆ ಹಚ್ಚುವ. ವಿಚಾರವನ್ನು ಚರ್ಚಿಸುವ ನಾಟಕವಾಗಿ 'ಮಹಾಮಾಯಿ' ಗಮನ ಸೆಳೆಯುವ ಕೃತಿ. ವಿಚಾರವನ್ನು ನಾಟ್ಯಮಯಗೊಳಿಸುವ ನುಡಿಗಟ್ಟು, ಜಾನಪದದ ದಟ್ಟ ವಾತಾವರಣ. ಈ ಕೃತಿಯನ್ನು ಗಾಢಗೊಳಿಸಿವೆ.

## ಪ್ರತಿಬಿಂಬ ೫ : ವಿಮರ್ಶೆ ಹಾಗೂ ಇತರ ಸಾಹಿತ್ಯ

ಈ ದಶಕದಲ್ಲಿ ವಿಮರ್ಶಾ ಸಾಹಿತ್ಯದ ಬೆಳೆಯೊಂದೇ ಸಮೃದ್ಧ ಮತ್ತು ಬಹುಮುಖಿಯಾಗಿದೆ. ಬಂಡಾಯ, ದಲಿತ ಸಾಹಿತ್ಯದ ಸೌಂದರ್ಯ ಮೀಮಾಂಸೆಯು ಬಹುವಾಗಿ ಚರ್ಚೆಗೆ ಒಳಗಾಗಿದೆ. ಸಾಹಿತ್ಯದ ಗತಿಶೀಲತೆಯನ್ನು ಪುನರ್ ಮೌಲ್ಯಮಾಪನ ಮಾಡುವ ಹಾಗೂ ಹೊಸ ಓದಿಗೆ ಪ್ರೇರಿಸುವ ವಿಮರ್ಶೆ ಬಂದಿದೆ. ಕೆ. ವಿ. ನಾರಾಯಣರ 'ಬೇರು. ಕಾಂಡ. ಚಿಗುರು' (೧೯೯೬); ಮಲ್ಲೇಪುರಂ ವೆಂಕಟೇಶ ಅವರ 'ತಿಳಿವ ತೇಜದ ಮುಂದೆ' (೧೯೯೬); ರಹಮತ್ ತರೀಕೆರೆಯವರ 'ಮರದೊಳಗಣ ಕಿಚ್ಚು' (೧೯೯೬); ಜಿ. ದಾಮೋದರರಾವ ಅವರ 'ಆಯಾಮಗಳು' (೧೯೯೭); ಡಿ. ಆರ್. ನಾಗರಾಜರ 'ಅಲ್ಲಮಪ್ರಭು ಮತ್ತು ಶೈವ ಪ್ರತಿಭೆ' (೧೯೯೯) ಹಾಗೂ 'ಸಾಹಿತ್ಯ ಕಥನ' (೧೯೯೫); ಕೆ. ಕೇಶವ ಶರ್ಮಾರ

'ಕ್ರಿಯೆ, ಪ್ರತಿಕ್ರಿಯೆ' (೧೯೯೭); ಓ. ಎಲ್. ನಾಗಭೂಷಣ ಸ್ವಾಮಿಯವರ 'ಇಂದಿನ ಹೆಜ್ಜೆ' (೧೯೯೮); ಜಿ. ರಾಮಕೃಷ್ಣರ 'ಆಯತನ' (೧೯೯೪); ಸಿ. ಎನ್. ರಾಮಚಂದ್ರನ್‌ರ 'ವಸಾಹತೋತ್ತರ ಚಿಂತನೆ' (೧೯೯೯); ಹಾಗೂ 'ತೌಲನಿಕ ಸಾಹಿತ್ಯ' (೧೯೯೮); ಗಿರಡ್ಡಿ ಗೋವಿಂದರಾಜರ 'ವಚನ ವಿನ್ಯಾಸ' (೧೯೯೭): ವಿಮರ್ಶಾ ಸಾಹಿತ್ಯದ ಉತ್ತಮ ಕೊಡುಗೆಗಳಾಗಿವೆ. ಹಿರಿಯ ವಿಮರ್ಶಕರಾದ ಕೀರ್ತಿನಾಥ ಕುರ್ತಕೋಟಿಯವರು 'ಸಾಹಿತ್ಯ ಸಂಗಾತಿ' (೧೯೯೫); 'ನೂರು ಮರ, ನೂರು ಸ್ವರ' (೧೯೯೬) ಕೃತಿಗಳ ಮೂಲಕ ಸಾಹಿತ್ಯದ ಸಂವಾದ ಮುಂದುವರಿಸಿದ್ದಾರೆ. ಡಾ. ಜಿ. ಎಸ್. ಆಮೂರರು ಬೇಂದ್ರೆ ಹಾಗೂ ಶ್ರೀರಂಗರ ಸಾಹಿತ್ಯವನ್ನು ಸಮಗ್ರವಾಗಿ ವಿಶ್ಲೇಷಿಸುತ್ತ ಬರೆದ 'ಭುವನದ ಭಾಗ್ಯ' (೧೯೯೧) ಹಾಗೂ 'ಸಾಹಿತ್ಯದ ವಿರಾಟ್ ಪುರುಷ ಶ್ರೀರಂಗ' (೧೯೯೮) ಗ್ರಂಥಗಳು ವಿಮರ್ಶೆಯ ವಿಶಿಷ್ಟ ದಿಕ್ಕನ್ನು ತೆರೆದಿವೆ. 'ವ್ಯವಸಾಯ' (೧೯೯೩); 'ಸಾತ್ವಿಕ ಪಥ' (೧೯೯೫) ಹಾಗೂ 'ಅಮೃತ ವಾಹಿನಿ' (೨೦೦೦) ಗ್ರಂಥಗಳ ಮೂಲಕ ಡಾ. ಆಮೂರರು ತಮ್ಮ ವಿಮರ್ಶಾ ಪ್ರಜ್ಞೆಯ ಲವಲವಿಕೆಯನ್ನು ತೋರಿಸಿದ್ದಾರೆ. ಶೈಕ್ಷಣಿಕ ಶಿಸ್ತಿನಿಂದ ಕೃತಿಗಳನ್ನು, ಲೇಖಕರನ್ನು ವಿಶ್ಲೇಷಿಸುವ ಆಮೂರರು, ಸಾಹಿತ್ಯದ ಗತಿಯನ್ನು ಸಾಂಸ್ಕೃತಿಕ ನೆಲೆಯಿಂದ ಅಳೆಯುತ್ತಾರೆ. ಕರ್ನಾಟಕ ಸಾಹಿತ್ಯ ಅಕಾಡೆಮಿಯು ಆಧುನಿಕ ಸಾಹಿತ್ಯವನ್ನು ಪುನರ್ ಮೌಲ್ಯಮಾಪನ ಮಾಡುವ ಒಂದು ಉಪಯುಕ್ತ ಕಾರ್ಯಕ್ರಮ ಹಾಕಿಕೊಂಡು, ಹಲವು ಲೇಖಕರ ಸಾಧನೆಗಳನ್ನು ನೆನಪಿಸುವ ಪ್ರಯತ್ನ ಮಾಡಿದೆ. ಅಲಕ್ಷಿತ ಹಾಗೂ ಅಜ್ಞಾತ ಲೇಖಕರ ಕೃತಿಗಳನ್ನು ಬೆಳಕಿಗೆ ತಂದು, ಕಳಚಿದ ಕೊಂಡಿಗಳನ್ನು ಕಟ್ಟಿಕೊಟ್ಟಿದೆ.

ದಲಿತ, ಬಂಡಾಯ ಸಾಹಿತ್ಯ ಚಳುವಳಿಯಿಂದ ಸೃಜನಶೀಲ ಕೃತಿಗಳಲ್ಲಿ ಸಾಮಾಜಿಕ ನೋಟ ಆವಿಷ್ಕಾರವಾದಂತೆ, ವಿಮರ್ಶೆಯಲ್ಲಿ ಪರ್ಯಾಯ ಸಂಸ್ಕೃತಿ ಅಥವಾ ಪ್ರತಿ ಸಂಸ್ಕೃತಿಯ ದೃಷ್ಟಿಕೋನವೊಂದು ಪ್ರಖರವಾಗಿ ಕೆಲಸ ಮಾಡುತ್ತಿದೆ. ರಹಮತ್ ತರೀಕೆರೆಯವರ 'ಮರಣದೊಳಗಣ ಕಿಚ್ಚು' ಪ್ರತಿಸಂಸ್ಕೃತಿಯ ಸಾಹಿತ್ಯಕ ಅಧ್ಯಯನವಾಗಿದ್ದು, ಶಿಷ್ಟವಿಮರ್ಶೆ, ವಸಾಹತುವಾದೀ ವಿಮರ್ಶೆಗೆ ಒಳಗಾಗಿ, ಸಾಹಿತ್ಯಕ ಮನ್ನಣೆ ಗಳಿಸದೆ ಹೋದ ಕೃತಿಗಳನ್ನು, ದೇಸೀ ಕಲ್ಪನೆಯಿಂದ; ಪರ್ಯಾಯ ಸಾಂಸ್ಕೃತಿಕ ನಿಲುವಿನಿಂದ ನೋಡುವ ಪ್ರಾಮಾಣಿಕ ಪ್ರಯತ್ನವಾಗಿದೆ. ಬ್ರಾಹ್ಮಣೇತರ ಬರಹಗಾರರ ಹಲವು ಕೃತಿಗಳ ಅಂತಃಸತ್ವವನ್ನು, ರಹಮತ್ ಬಗೆದು ತೋರಿಸುವ ಕ್ರಮ, ಓದಿಗೆ ಹೊಸ ಕಣ್ಣನ್ನು ಕೊಟ್ಟಂತಾಗಿದೆ. ಡಿ. ಆರ್. ನಾಗರಾಜರು ಅಕ್ಷರ ಚಿಂತನ ಮಾಲೆಯೊಂದನ್ನು ಆರಂಭಿಸಿ, ವಿಸ್ಮೃತಿಗೆ ಈಡಾದ ಹಳೆಯ ಚಿಂತನೆಗಳ, ಕೃತಿಗಳ ಪುನರಧ್ಯಯನವನ್ನು ಕೈಗೆತ್ತಿಕೊಂಡದ್ದು ವಿಮರ್ಶೆಗೆ ತೋರಿಸಿದ ಹೊಸ ದಿಕ್ಕು. ಸ್ವತಃ ಡಿ. ಆರ್. ನಾಗರಾಜ, ತಮ್ಮ ಜೀವಿತದ ಕೊನೆಗೆ ಬರೆದ 'ಅಲ್ಲಮ

ಪ್ರಭು ಮತ್ತು ಶೈವ ಪ್ರತಿಭೆ' ಕೃತಿಯು ಅಲ್ಲಮನ ವಚನ ಸಾಹಿತ್ಯದ ಪ್ರೇರಣೆ. ವಸ್ತುದೃಷ್ಟಿ ಮತ್ತು ಆಕೃತಿಗಳ ವಿಮರ್ಶೆಯಾಗಿದೆ. ವೈದಿಕೇತರ ಚಿಂತನಕ್ರಮ. ಬದುಕಿನ ಕ್ರಮಗಳನ್ನು ನಿರ್ವಹಿಸುವ ಅಲ್ಲಮನನ್ನು ಅರ್ಥಮಾಡಿಕೊಳ್ಳುವುದಕ್ಕೆ ಬೇಕಾದ ಸಾಂಸ್ಕೃತಿಕ. ವೈಚಾರಿಕ ಹಿನ್ನೆಲೆಗಳನ್ನು ನಾಗರಾಜರು ಶೋಧಿಸಿದ್ದಾರೆ. ನಮ್ಮ ಸಾಹಿತ್ಯವನ್ನು ಬಹುಶಿಸ್ತೀಯ ಅಧ್ಯಯನಕ್ಕೆ ಒಡ್ಡುವ ಮೂಲಕ ಅದರ ಒಳನೋಟಗಳನ್ನು ಬಯಲಿಗಿಡುವ ಕೆಲಸ ನಮ್ಮ ವಿಮರ್ಶಕರಿಂದ ವಿಪುಲವಾಗಿ ಜರುಗುತ್ತಿದೆ. ವಚನಸಾಹಿತ್ಯದ ರಚನಾಕ್ರಮ. ತಾತ್ವಿಕ ನೋಟಗಳನ್ನು ಒಟ್ಟಿಗೇ ಗ್ರಹಿಸುವ ಅಧ್ಯಯನಗಳೂ ಪ್ರಕಟವಾಗಿವೆ. ಕನ್ನಡ ಸಾಹಿತ್ಯದ ಆಳ-ಅಗಲಗಳನ್ನು ಓದುಗರ. ಅಭ್ಯಾಸಿಗಳ ಗಮನಕ್ಕೆ ತಂದು ಸಾಹಿತ್ಯವು ಸಾಂಸ್ಕೃತಿಕವಾಗಿ ಸಾಧಿಸಿರುವ ಮೌಲ್ಯಗಳನ್ನು ಸ್ಥಾಪಿಸುವ ಬೌದ್ಧಿಕ ಕಾರ್ಯವನ್ನು ವಿಮರ್ಶಕರು ಸಾಕಷ್ಟು ದಕ್ಷತೆಯಿಂದ ಮತ್ತು ಕಲಾತ್ಮಕತೆಯಿಂದ ನಡೆಸಿದ್ದು ಈ ದಶಕದ ಸಾಧನೆ.

• • •

## ಲೇಖಕರ ವಿಳಾಸಗಳು

೧. ಪ್ರೊ. ಎಲ್. ಎಸ್. ಶೇಷಗಿರಿರಾವ್
೨೬೭. "ಜ್ಯೋತಿ". ಮೂರನೆಯ ಬ್ಲಾಕ್
ಜಯನಗರ. ಬೆಂಗಳೂರು - ೫೬೦ ೦೧೧

೨. ಡಾ. ಗುರುಲಿಂಗ ಕಾಪಸೆ
ದುರ್ಗಾದೇವಿ ಕಾಲನಿ
ಸಪ್ತಾಪುರ ಕೊನೆಯ ಕ್ರಾಸ್
ಧಾರವಾಡ - ೫೮೦ ೦೦೧

೩. ಡಾ. ಎಚ್. ಎಸ್. ರಾಘವೇಂದ್ರರಾವ್
ನಂ.-೭. "ಶ್ರೀಮಾತಾ"
೧೫ ನೇ ಕ್ರಾಸ್. ೫ ನೇ ಹಂತ
ಜೆ. ಪಿ. ನಗರ. ಬೆಂಗಳೂರು - ೫೬೦ ೦೭೮

೪. ಡಾ. ಎಚ್. ಎಸ್. ವೆಂಕಟೇಶಮೂರ್ತಿ
೩೦. "ಸಂಕಲ್ಪ"
ಪುಷ್ಪಗಿರಿ ನಗರ. ಬನಶಂಕರಿ ೩ ನೇ ಹಂತ
ಬೆಂಗಳೂರು - ೫೬೦ ೦೮೫

೫. ಡಾ. ಜಿ. ಆರ್. ತಿಪ್ಪೇಸ್ವಾಮಿ
ಕನ್ನಡ ವಿಭಾಗ
ಮೈಸೂರು ವಿಶ್ವವಿದ್ಯಾಲಯ
ಮಾನಸಗಂಗೋತ್ರಿ. ಮೈಸೂರು - ೫೭೦ ೦೦೬

೬. ಡಾ. ಬಸವರಾಜ ಸಬರದ
ಸರಸ್ವತಿಪುರ
ವಿಶ್ವವಿದ್ಯಾಲಯ ಅಂಚೆ
ಗುಲ್ಬರ್ಗ - ೫೮೫ ೧೦೬

೭. ಡಾ. ಶ್ಯಾಮಸುಂದರ ಬಿದರಕುಂದಿ
೪. ರಾಯಭಾಗಕರ ಕಂಪೌಂಡ್
ಗದಗ - ೫೮೨ ೧೦೧

# ಕರ್ನಾಟಕ ವಿದ್ಯಾವರ್ಧಕ ಸಂಘದ ಪ್ರಕಟಣೆಗಳು

| ಅ. ಸಂ. | ಪುಸ್ತಕದ ಹೆಸರು | ಲೇಖಕರು | ಬೆಲೆ | ಪ್ರಕಟಣ ವರ್ಷ |
|---|---|---|---|---|
| *೧. | ಉತ್ತರರಾಮ ಚರಿತ್ರ | ಧೋಂಡೋ ನರಸಿಂಹ ಮುಳಬಾಗಲ | ೯ ಆಣೆ | ೧೮೯೨ |
| ೨. | ವೇಣೀ ಸಂಹಾರ | .. .. .. | | ೧೮೯೨ |
| ೩. | ಆರ್ಯ ಕುಲಾಂಗನಾ | ಎಚ್. ತಿಮ್ಮ ಕೃಷ್ಣರಾವ್ | | ೧೮೯೬ |
| ೪. | ಕಂತ. ತಗಾಯಿ. ಇಳಿವತ್ತಿ | ಆರ್. ಎಸ್. ಕುಲಕರ್ಣಿ | ೧ಆ ೬ಪೈ | ೧೮೯೬ |
| ೫. | ಮಾಳವಿಕಾಗ್ನಿಮಿತ್ರ | ಧೋಂಡೋ ನರಸಿಂಹ ಮುಳಬಾಗಲ | ೪೫ಪೈ | ೧೮೯೭ |
| ೬. | ಕನ್ನಡ ಸುಶೀಲಾ ಪರಿಣಯಂ (ನಾಟಕ) | ಎಚ್. ಚಿದಂಬರಯ್ಯ | ೪ ಆಣೆ | ೧೮೯೯ |
| ೭. | ಕನ್ನಡಿಗರ ಜನ್ಮ ಸಾರ್ಥಕತೆ | ವಲ್ಲಭ ಮಹಾಲಿಂಗ ತಟ್ಟಿ | ೩ ಆಣೆ | ೧೮೯೯ |
| ೮. | ಹಿತೋಪದೇಶ ಭಾಗ - ೩ | ಶಿವರುದ್ರಪ್ಪ ಸೋಮಪ್ಪಾ ಕುಲಕರ್ಣಿ | ೫ ಆಣೆ | ೧೯೦೦ |
| ೯. | ಹಿತೋಪದೇಶ ಭಾಗ - ೪ | .. .. .. | ೫ ಆಣೆ | ೧೯೦೦ |
| ೧೦. | ಬಾಲವಿವಾಹಶಾಸ್ತ್ರ ನಿಷೇಧ | ತಿಮ್ಮಾಜಿ ಅನಂತ ಕಾಳೆ | ೫ ಆಣೆ | ೧೯೦೦ |
| ೧೧. | ನಿದ್ರೆಯಲ್ಲಿ ಬ್ಬಿಸಲ್ಪಟ್ಟ ಚಂದನದಾಸನು (ನಾಟಕ) | ಗಂಗಾಧರರಾವ ಹುಯಿಲಗೋಳ | ೪ ಆಣೆ | ೧೯೦೧ |
| ೧೨. | ಕರ್ಣಾಟಕ ನರಕಾಸುರ ವಿಜಯ ವ್ಯಾಯೋಗಂ | ಸಿದ್ಧಾಂತಿ ಶಿವಶಂಕರ ಶಾಸ್ತ್ರಿ | ೩ ಆಣೆ | ೧೯೦೧ |
| ೧೩. | ವೀರಮಣಿ | ತೋಂಟೇಶ ಅನ್ನದಾನಿ ಮಂಗಳೂರು | ೨ ಆಣೆ | ೧೯೦೨ |
| ೧೪. | ಸತ್ಯರಾಜಾಪೂರ್ವದೇಶ ಯಾತ್ರೆಗಳು | ಅನು : ರಾಮರಾವ್ ಬೆನಗಲ್ | ೮ ಆಣೆ | ೧೯೦೩ |
| ೧೫. | ಸುಭದ್ರಾ ಹರಣಂ | | ೨ ಆಣೆ | ೧೯೦೩ |
| ೧೬. | ಅಭಿನವ ಕಾದಂಬರಿ | ಸಿದ್ಧಾಂತಿ ಶಿವಶಂಕರಶಾಸ್ತ್ರಿ | ೫ ಆಣೆ | ೧೯೦೩ |
| ೧೭. | ಆರ್ಥರ್ ಡ್ಯೂಕ್ ಆಫ್ ವೆಲಿಂಗ್ಟನ್ ಚರಿತ್ರೆಯು | ಗುರುಬಸಪ್ಪಾ ಫಕೀರಪ್ಪಾ ಹಳಕಟ್ಟಿ | ೧ ರೂ. | ೧೯೦೪ |
| ೧೮. | ಆರ್ಯವಿದ್ಯಾದರ್ಶನವು | ಗುರುನಾಥ ವೆಂಕಟೇಶ ಕಿತ್ತೂರ | ೮ ಆಣೆ | ೧೯೦೪ |
| ೧೯. | ಚಿತ್ತೂರಿನ ಮುತ್ತಿಗೆ | ಕೃಷ್ಣಾಜಿ ಹ. ಮುದವೇಡಕರ | ೬ ಆಣೆ | ೧೯೦೫ |
| ೨೦. | ಸುಭದ್ರಾವಿಜಯ ನಾಟಕಂ | ಬಿ. ರಾಮರಾವ್ | ೧೨ ಆಣೆ | ೧೯೦೬ |
| ೨೧. | ಕರ್ನಾಟಕ ಕಥಾಸರಿತ್ಸಾಗರ | ಸೋಮದೇವ ಮಹಾಕವಿ | ೬ ಆಣೆ | ೧೯೦೬ |
| ೨೨. | ಕೃಷಿಕರ್ಮ ಶಾಸ್ತ್ರವು | ರಾಮಚಂದ್ರ ಮದ್ದು ಮಹಿಷಿ | ೧೨ ಆಣೆ | ೧೯೦೬ |
| ೨೩. | ದಕ್ಷಿಣ ಮುಸಲ್ಮಾನ ರಾಜ್ಯಗಳ ಇತಿಹಾಸವು | ರಾಘವೇಂದ್ರ ಕೃ. ಇನಾಮತಿ | ೬ ಆಣೆ | ೧೯೦೭ |
| ೨೪. | ವಿಜಯನಗರದ ಸಾಮ್ರಾಜ್ಯವು | ವೀರಭದ್ರ ಬಸಪ್ಪಾ | ೧ ರೂ. | ೧೯೦೮ |

| | | | |
|---|---|---|---|
| ೨೫. ಮಾನವಶಾಸ್ತ್ರವು | ಗುಡ್ಡೋ ಮುಕುಂದ ಉದಕಟ್ಟಿ | ೮ ಆಣೆ | ೧೯೦೮ |
| ೨೬. ಎಂಟು ಸ್ತ್ರೀ ರತ್ನಗಳು | ಗದಿಗೆವ್ವ ಕುರಹಟ್ಟಿ | ೬ ಆಣೆ | ೧೯೦೯ |
| ೨೭. ನಾಮದಾರ ವಿಲಿಯಮ್ ಎವರ್ಟ್ ಗ್ಲಾಡಸ್ಟನ್ ದೊರೆಗಳ ಚರಿತ್ರೆಯು | ಗುರುಬಸಪ್ಪ ಫಕ್ಕೀರಪ್ಪ ಹಳಕಟ್ಟಿ | ೧ ರೂ. | ೧೯೦೯ |
| ೨೮. ವಿಶ್ವ | ಜೀವಾಜಿ ವಿಷ್ಣು ಗೋಠೆ | ೪ ಆಣೆ | ೧೯೧೦ |
| ೨೯. ಮೋಹಿನಿ ಅಥವಾ ಸಿಂದಕರ ನಡವಳಿ | ಗದಿಗೆಯ್ಯಾ ಹು. ಹೊನ್ನಾಪುರಮಠ | ೮ ಆಣೆ | ೧೯೧೧ |
| ೩೦. ಕನ್ನಡ ಮಾತು ತಲೆ ಎತ್ತುವ ಬಗೆ | ಬಿ. ಎಂ. ಶ್ರೀಕಂಠಯ್ಯ | - - | ೧೯೧೧ |
| ೩೧. ಶಿಕ್ಷಣ ಮೀಮಾಂಸೆ ವೆಂಕಟೇಶ ನ. ಮುಗದಾಳ | ವೆಂಕಟೇಶ ಬಿ. ಆಲೂರ | ೨ರೂ.೪ ಆಣೆ | ೧೯೧೧ |
| ೩೨. ಕೌಸಲ್ಯಾಪರಿಣಯಂ | ಕೆ. ರಾಮಸ್ವಾಮಯ್ಯಂಗಾರ | ೩ ಆಣೆ | ೧೯೧೨ |
| ೩೩. ಕಾಲಿದಾಸ ಚರಿತ್ರ | ಗುರುನಾಥ ವೆಂಕಟೇಶ ಕಿತ್ತೂರ | ೬ ಆಣೆ | ೧೯೧೨ |
| ೩೪. ಕರ್ನಾಟಕ ಯಯಾತಿ ನಾಟಕಂ | ಶಾ. ವೆಂಕಟರಮಣಯ್ಯ | ೪ ಆಣೆ | ೧೯೧೩ |
| ೩೫. ಕವಿಕಾರ್ಯ ಪ್ರಶಂಸೆ | ಮ. ಅ. ರಾಮಾನುಜಯ್ಯಂಗಾರ | ೩ ಆಣೆ | ೧೯೧೩ |
| ೩೬. ಸರಸ್ವತೀ | ಅನು: ಲಿಂಗೋ ರಾಮಚಂದ್ರ ಅಕ್ಕೂರ | ೧೨ ಆಣೆ | ೧೯೧೩ |
| ೩೭. ಭಾರತೀಯ ವಿದುಷಿಯರು | ಮ. ಪ್ರ. ಪೂಜಾರ | ೫ ಆಣೆ | ೧೯೧೪ |
| ೩೮. ಪ್ರಾಚೀನ ಹಿಂದೂಸ್ಥಾನ | ವೆಂಕಟೇಶ ಮುಗದಾಳ | ೧ ರೂ. | ೧೯೧೪ |
| ೩೯. ಪಂ. ಈಶ್ವರಚಂದ್ರ ವಿದ್ಯಾಸಾಗರ ಇವರ ಚರಿತ್ರವು | ಕೆ. ರಾಮಾಸ್ವಾಮಯ್ಯಂಗಾರ | ೧ ರೂ. | ೧೯೧೭ |
| ೪೦. ಅಶೋಕ ಅಥವಾ ಪ್ರಿಯದರ್ಶಿನಿ | ಎಂ. ಪಿ. ಪೂಜಾರ | ೧ರೂ.೬ಆ. | ೧೯೧೯ |
| ೪೧. ಬೇಗಮ ಸಮದ್ | ಎಸ್. ಎ. ಕುಲಕರ್ಣಿ | ೬ ಆಣೆ | ೧೯೨೦ |
| ೪೨. ಹಜರತ ಮಹಮ್ಮದ ಪೈಗಂಬರರು | ಎಮ್. ಪಿ. ಪೂಜಾರ | ೬ ಆಣೆ | ೧೯೨೦ |
| ೪೩. ಅಮೇರಿಕೆಯೊಳಗಿನ ಬಡ ವಿದ್ಯಾರ್ಥಿಗಳು | ಶ್ರೀನಿವಾಸ ಪಾಂಡುರಂಗ ಕೋಟಿ | ೫ ಆಣೆ | ೧೯೨೦ |
| *೪೪. ಮದುವೆ | ಮ. ಪ್ರ. ಪೂಜಾರ | ೨ ಆಣೆ | ೧೯೨೦ |
| *೪೫. ಹರಿಶನ ಪ್ರೇಮ | | ೪ ಆಣೆ | ೧೯೨೦ |
| ೪೬. ಇಸೋಪನ ಚರಿತ್ರ | ತ. ನಾ. ಅಮ್ಮಿನಭಾವಿ | ೩ ಆಣೆ | ೧೯೨೦ |
| ೪೭. ಪಂಡಿತರಾಜ | ಕೇಶವ ರಂಗಭಟ್ಟ ಜೋಶಿ | ೪ ಆಣೆ | ೧೯೨೦ |
| ೪೮. ವಿದ್ಯಾರಣ್ಯ ಸ್ವಾಮಿಗಳು | ಘೀ. ಜೀ. ಹುಲಿಕವಿ | ೧ ರೂ. | ೧೯೨೨ |
| ೪೯. ಅಭಿಷೇಕ ನಾಟಕ | ಪಾನ್ಯಂ ಸುಂದರಶಾಸ್ತ್ರಿ | ೬ ಆಣೆ | ೧೯೨೪ |
| ೫೦. ಕರ್ನಾಟಕ ಸ್ವಪ್ನವಾಸವದತ್ತಂ | ಅನು: ಘೀ. ಜೀ. ಹುಲಿಕವಿ | ೬ ಆಣೆ | ೧೯೨೫ |
| ೫೧. ಸತ್ಕಥಾ ಕುಸುಮಮಂಜರಿ | ನಾರಾಯಣ ವೆಂಕಟೇಶ ಕುರಡಿ | ೧೦ ಆಣೆ | ೧೯೨೫ |
| ೫೨. ದಿವಾಣ ಬಹಾದ್ದೂರ ರೊದ್ದ ಶ್ರೀನಿವಾಸರಾಯರ ಚರಿತ್ರೆಯು | | - - | ೧೯೨೫ |
| ೫೩. ಭಾಸಕವಿ ಅಭಿಷೇಕ ನಾಟಕ | ಅನು: ಪಾನ್ಯ ಸುಂದರಶಾಸ್ತ್ರಿ | ೬ ಆಣೆ | ೧೯೨೬ |
| ೫೪. ರಘುವಂಶ (ಕಾಳಿದಾಸ ವಿರಚಿತ) | ಅನು: ಕಲಮಡಿ ನರಹರಿರಾಯರು | ೨ ರೂ. | ೧೯೨೮ |
| ೫೫. ಆರ್ಯರ ಶಿಕ್ಷಣ ಪದ್ಧತಿ | ಎಸ್. ಎನ್. ನರಹರಯ್ಯ | ೪ ಆಣೆ | ೧೯೨೮ |
| ೫೬. ಭೀಷ್ಮಾಚಾರ್ಯ | ಮ. ಪ್ರ. ಪೂಜಾರ | ೫ ಆಣೆ | ೧೯೨೮ |
| ೫೭. ಜೈನಧರ್ಮ ಪರಿಭಾಷೆ | ಮಹಾದೇವ ಪ್ರಭಾಕರ ಪೂಜಾರ | ೧ರೂ.೪ಆ. | ೧೯೩೦ |
| ೫೮. ನರಗುಂದ ಬಂಡಾಯ | ಪಂ. ಘೀ. ಜೀ. ಹುಲಿಕವಿ | ೧ ರೂ. | ೧೯೩೦ |
| ೫೯. ವೇಣೀಬಂಧನ | ತಮ್ಮಾಜಿ ನಾ. ಅಮ್ಮಿನಭಾವಿ | ೪ ಆಣೆ | ೧೯೩೭ |

೬೦. ಕರ್ನಾಟಕ ಜನಜೀವನ — ಬೆಟಗೇರಿ ಕೃಷ್ಣಶರ್ಮ — ೨ ರೂ. — ೧೯೫೯
೬೧. ಕರ್ನಾಟಕ ಸಾಹಿತ್ಯ ಸಂಸ್ಕೃತಿ ದರ್ಶನ — ಪ್ರೊ. ಸ. ಸ. ಮಾಳವಾಡ — ೨ ರೂ. — ೧೯೫೯
೬೨. ಕಾವ್ಯಾವಲೋಕನ — ಪ್ರೊ. ಎಸ್. ಎಸ್. ಬಸವನಾಳ — ೧೯೫೯
೬೩. ಶಬ್ದಾನುಶಾಸನ ಭಾಗ - ೧ — ಕುಂಡಲಗಿರಿ ಆಚಾರ್ಯ — ೧೯೬೧
" ಭಾಗ - ೨ — ಕುಂಡಲಗಿರಿ ಆಚಾರ್ಯ — ೧೯೬೧
೬೪. ಕರ್ನಾಟಕ ಶಬ್ದಾನುಶಾಸನ ಪ್ರಕಾಶಿಕೆ ಭಾಗ - ೨ — ಶಿ. ಶಿ. ಬಸವನಾಳ — ೨ ರೂ. — ೧೯೬೧
೬೫. ಕರ್ನಾಟಕ ವಿದ್ಯಾವರ್ಧಕಸಂಘ – ಐವತ್ತು ವರ್ಷ — ೧೯೬೧
೬೬. ಗಳಗನಾಥ — ಜೀವನ ವಾಙ್ಮಯ ವಿಮರ್ಶೆ — ೧ರೂ.೮೫. — ೧೯೬೧
*೬೭. A CULTURAL HISTORY OF KARNATAK — ಕರಮರಕರ ಎ. ಪಿ. ಹಾಗೂ ಕಲಮದಾನಿ — ೫ ರೂ. — ೧೯೬೬
*೬೮. ನಾವು ಓದುವುದೇನು ? — ವಿವಿಧ ಲೇಖಕರು — ೧ ರೂ. — ೧೯೬೮
೬೯. ಕಾರ್ಯಾಲಯ ದೀಪಿಕೆ — ೨೦ರೂ. — ೧೯೭೬
೭೦. ಅಸಂಗತ ನಾಟಕಗಳು — ಕೀರ್ತಿನಾಥ ಕುರ್ತಕೋಟಿ — ೧ರೂ. — ೧೯೭೬
೭೧. ಲಾವಣಿ ಸಾಹಿತ್ಯ — ಶಿಂಪಿ ಲಿಂಗಣ್ಣ — ೧ ರೂ. — ೧೯೭೬
೭೨. ಚೆನ್ನವೀರ ಕಣವಿ ಕಾವ್ಯದೃಷ್ಟಿ — ಗೌರೀಶ ಕಾಯ್ಕಿಣಿ — ೪ ರೂ. — ೧೯೭೭
*೭೩. ಆಲ್ಬರ್ಟ್ ಐನ್‌ಸ್ಟೀನ್ — ಡಾ. ಎಂ. ಆಯ್. ಸವದತ್ತಿ, ಡಾ. ವಿ. ಎಂ. ಪೂಜಾರ — ೩ ರೂ. — ೧೯೮೧
೭೪. ರುಚಿ — ಡಾ. ಕೆ. ಕೃಷ್ಣಮೂರ್ತಿ — ೧-೮೦ — ೧೯೮೧
೭೫. ಜಾನಪದ — ಡಾ. ಜಿ. ಶಂ. ಪರಮಶಿವಯ್ಯ — ೧-೮೦ — ೧೯೮೧
*೭೬. ಬಾಣ ಕಾದಂಬರಿ — ಗಂಗಾಧರ ಮಡಿವಾಳೇಶ್ವರ ತುರಮರಿ — ೪೫ ರೂ. — ೧೯೯೫ (೧೧ನೇ ಮುದ್ರಣ)
*೭೭. ಕನ್ನಡ ಕರ್ನಾಟಕ ಏನು ಮಾಡಬೇಕು ? — ಡಾ. ಪಾಟೀಲ ಪುಟ್ಟಪ್ಪ — - - — ೧೯೯೫
*೭೮. ಕಾವ್ಯಯಾನ — ಡಾ. ಬಸವರಾಜ ಸಾದರ — ೨೦೦೦
*೭೯. ಸ್ವಾತಂತ್ರ್ಯ ಚಿಂತನ — ಮೋಹನ ನಾಗಮ್ಮನವರ — ೨೦೦೦
೮೦. ಕನ್ನಡ ಸಾಹಿತ್ಯ ಘಟ್ಟಗಳು — ಡಾ. ಬಸವರಾಜ ಸಾದರ — ೨೦೦೨

## ಕರ್ನಾಟಕ ವಿದ್ಯಾವರ್ಧಕ ಸಂಘದ ಪದಾಧಿಕಾರಿಗಳು

| | |
|---|---|
| *ಅಧ್ಯಕ್ಷರು* : | ಡಾ. ಪಾಟೀಲ ಪುಟ್ಟಪ್ಪ |
| *ಉಪಾಧ್ಯಕ್ಷರು* : | ಶ್ರೀ ಎಂ. ಆರ್. ಟೆಂಗಿನಕಾಯಿ |
| *ಗೌರವ ಉಪಾಧ್ಯಕ್ಷರು* : | ಶ್ರೀ ಕೈಯಾರ ಕಿಞ್ಞಣ್ಣ ರೈ (ಕಾಸರಗೋಡು) |
| | ಶ್ರೀ ಜಿ. ಜಿ. ಮೊಡವಾಡ |
| | ಶ್ರೀ ಧ. ಸುರೇಂದ್ರಕುಮಾರ (ಧರ್ಮಸ್ಥಳ) |
| | ಶ್ರೀಮತಿ ಸುಧಾ ನಾರಾಯಣಮೂರ್ತಿ (ಬೆಂಗಳೂರು) |
| | ಶ್ರೀ ಲೋಹಿತ ಡಿ. ನಾಯ್ಕರ |
| *ಕಾರ್ಯಾಧ್ಯಕ್ಷರು* : | ಶ್ರೀ ಎಚ್. ಸಿ. ಮೊಗಲಿ |
| *ಕೋಶಾಧ್ಯಕ್ಷರು* : | ಶ್ರೀ ಎಸ್. ಎಂ. ಹೊಳೆಯಣ್ಣವರ |
| *ಪ್ರಧಾನ ಕಾರ್ಯದರ್ಶಿ* : | ಪ್ರೊ. ಬಿ. ವ್ಹಿ. ಗುಂಜೆಟ್ಟಿ |
| *ಸಹ ಕಾರ್ಯದರ್ಶಿ* : | ಶ್ರೀ ಸದಾನಂದ ಶಿವಳ್ಳಿ |

*ಕಾರ್ಯಕಾರಿ ಸಮಿತಿ ಸದಸ್ಯರು* :

ಶ್ರೀ ಕೃಷ್ಣ ಜೋಶಿ
ಶ್ರೀ ಸಿದ್ಧಲಿಂಗ ದೇಸಾಯಿ
ಶ್ರೀ ಶಿವಾನಂದ ಭಾವಿಕಟ್ಟಿ
ಶ್ರೀ ಮೋಹನ ನಾಗಮ್ಮನವರ
ಶ್ರೀ ಶಂಕರ ಹಲಗತ್ತಿ
ಶ್ರೀಮತಿ ವಿಜಯಾ ಸಂ. ಲಿಂಬಣ್ಣದೇವರಮಠ
ಪ್ರೊ. ಎಸ್. ಸಿ. ಹಿರೇಮಠ
ಶ್ರೀಮತಿ ಜಯಶ್ರೀ ಗುತ್ತಲ
*ಹಾಗೂ* ನಿರ್ದೇಶಕರು.
ಕನ್ನಡ ಮತ್ತು ಸಂಸ್ಕೃತಿ ನಿರ್ದೇಶನಾಲಯ
ಬೆಂಗಳೂರು (ಸರ್ಕಾರದ ಪ್ರತಿನಿಧಿ)

# ಇಪ್ಪತ್ತನೆಯ ಶತಮಾನದ ಕನ್ನಡ ಸಾಹಿತ್ಯ ಘಟ್ಟಗಳು

ಇಪ್ಪತ್ತನೆಯ ಶತಮಾನ, ಕನ್ನಡ ಸಾಹಿತ್ಯ ಚಟುವಟಿಕೆಗಳ ಸಮೃದ್ಧಿಯ ಕಾಲ. ಪ್ರಯೋಗಶೀಲವಾದ ಈ ಕಾಲದಲ್ಲಿ, ಸೃಜಿತ ಸಾಹಿತ್ಯದ ಬೆನ್ನಹಿಂದೆಯೇ ವಿಮರ್ಶನ ಕ್ರಿಯೆ ನಡೆದು ಬಂದದ್ದು ಹಾಗೂ ಸೃಜನಶೀಲ ಲೇಖಕರೇ ವಿಮರ್ಶಕರಾಗಿಯೂ ಹೊರಹೊಮ್ಮಿದ್ದು ಒಂದು ವಿಶೇಷ. ಸೃಜನ ಮತ್ತು ವಿಮರ್ಶನ ಕ್ರಿಯೆ ಹೀಗೆ ಒಂದರ ಹಿಂದೊಂದರಂತೆ ನಡೆದುದರ ಕಾರಣವಾಗಿ ಹಳೆಯದರಲ್ಲಿರುವ ಕೊರತೆಗಳನ್ನು ಎತ್ತಿ ತೋರಿಸಿ, ಹೊಸದನ್ನು ಕಾಣುವ - ಕಟ್ಟುವ ಕೆಲಸವೂ ನಿರಂತರ ನಡೆಯುತ್ತ ಬಂತು. ಇದರ ಫಲವಾಗಿಯೇ ಇಪ್ಪತ್ತನೆಯ ಶತಮಾನದಲ್ಲಿ ನವೋದಯ, ಪ್ರಗತಿಶೀಲ, ನವ್ಯ, ದಲಿತ ಮತ್ತು ಬಂಡಾಯ ಎಂಬ ಐದು ಸಾಹಿತ್ಯ ಘಟ್ಟಗಳು ಸ್ಪಷ್ಟಗೋಚರವಾದವು. ವಸ್ತು, ಅಭಿವ್ಯಕ್ತಿ ತಂತ್ರ, ರೂಪ, ಧೋರಣೆ ಇತ್ಯಾದಿಗಳಲ್ಲಿ ಗುರುತಿಸಬಹುದಾದಷ್ಟು ಭಿನ್ನವೇ ಆಗಿರುವ ಈ ಘಟ್ಟಗಳು ಹುಟ್ಟಿದ್ದು ಒಂದಕ್ಕೆ ಮತ್ತೊಂದು ತೋರಿದ ಪ್ರಬಲ ಪ್ರತಿಕ್ರಿಯೆಯಿಂದಾಗಿಯೇ. ನೂರು ವರ್ಷದಲ್ಲಾದ ಈ ಅರ್ಥಪೂರ್ಣ ಬೆಳವಣಿಗೆಯನ್ನು ಇಪ್ಪತ್ತೊಂದನೆಯ ಶತಮಾನದ ಆರಂಭದ ಹಂತದಲ್ಲಿ ವಿಮರ್ಶಾತ್ಮಕವಾಗಿ ಪೂರ್ವಾವಲೋಕನ ಮಾಡುವ ಉದ್ದೇಶದಿಂದ ಆಕಾಶವಾಣಿ ಗುಲ್ಬರ್ಗ ಕೇಂದ್ರ 'ಇಪ್ಪತ್ತನೆಯ ಶತಮಾನದ ಕನ್ನಡ ಸಾಹಿತ್ಯ ಘಟ್ಟಗಳು' ಎಂಬ ಏಳು ದಿನಗಳ ವಿಚಾರ ಸಂಕಿರಣವನ್ನು ೨೦೦೦ದ ಆಗಸ್ಟ - ಸಪ್ಟೆಂಬರ ತಿಂಗಳಲ್ಲಿ ನೇರ ಪ್ರಸಾರ ಮಾಡಿತು. ಆ ವಿಚಾರ ಸಂಕಿರಣದಲ್ಲಿ ಮಂಡಿತವಾದ ವಿದ್ವಾಂಸರ ಉಪನ್ಯಾಸಗಳೇ ವಿಸ್ತೃತರೂಪ ಪಡೆದು ಈ ಗ್ರಂಥರೂಪದಲ್ಲಿ ಪ್ರಕಟವಾಗಿವೆ. ಧಾರವಾಡದ ಕರ್ನಾಟಕ ವಿದ್ಯಾವರ್ಧಕ ಸಂಘದ ಸಹಯೋಗದಲ್ಲಿ ಆಕಾಶವಾಣಿ ಗುಲ್ಬರ್ಗ ಕೇಂದ್ರ ಹೊರತಂದಿರುವ ಈ ಕೃತಿ ಹೊಸಗನ್ನಡ ಸಾಹಿತ್ಯಾಭ್ಯಾಸಿಗಳಿಗೆ ಒಂದು ಉಪಯುಕ್ತ ಸಂದರ್ಭ ಗ್ರಂಥ.